"ಕೋಲಾರ ಜಿಲ್ಲೆಯ ಕನ್ನಡ ಶಾಸನಗಳ ಅಧ್ಯಯನ"

(೧೩ನೆಯ ಶತಮಾನದವರೆಗೆ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು
ಕುಸುಮ.ಎನ್.

ಮಾರ್ಗದರ್ಶಕರು
ಡಾ.ದೇವರ ಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬
೨೦೧೨

"ಕೋಲಾರ ಜಿಲ್ಲೆಯ ಕನ್ನಡ ಶಾಸನಗಳ ಅಧ್ಯಯನ"

(೧೩ನೆಯ ಶತಮಾನದವರೆಗೆ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು
ಕುಸುಮ.ಎನ್.

ಮಾರ್ಗದರ್ಶಕರು
ಡಾ.ದೇವರ ಕೊಂಡಾರೆಡ್ಡಿ

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬
೨೦೧೨

<u>ಸಂಶೋಧಕರ ಪ್ರಮಾಣಪತ್ರ</u>

'ಕೋಲಾರ ಜಿಲ್ಲೆಯ ಕನ್ನಡ ಶಾಸನಗಳ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಡಾ॥ದೇವರಕೊಂಡಾರೆಡ್ಡಿಯವರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನ ಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :
ಸ್ಥಳ :

ಕುಸುಮ. ಎನ್.

(ಕುಸುಮ ಎನ್.)
ಸಂಶೋಧಕಿ
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ

<u>**ಮಾರ್ಗದರ್ಶಕರ ಪ್ರಮಾಣಪತ್ರ**</u>

ಕುಸುಮ ಎನ್. ಅವರು **'ಕೋಲಾರ ಜಿಲ್ಲೆಯ ಕನ್ನಡ ಶಾಸನಗಳ ಅಧ್ಯಯನ'** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ :

(ಡಾ.ದೇವರಕೊಂಡಾರೆಡ್ಡಿ)
ಪ್ರಾಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ

ಪರಿವಿಡಿ	ಪುಟಸಂಖ್ಯೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರಸ್ತಾವನೆ

೧.೨ ಕೋಲಾರ ಜಿಲ್ಲೆಯ ಪ್ರಾಕೃತಿಕ ಪರಿಚಯ

೧.೩ ಅಧ್ಯಯನದ ಉದ್ದೇಶ

೧.೪ ಅಧ್ಯಯನದ ವ್ಯಾಪ್ತಿ

೧.೫ ಈವರೆಗಿನ ಅಧ್ಯಯನಗಳು

೧.೬ ಅಧ್ಯಯನದ ಆಕರಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧ ಪ್ರಸ್ತಾವನೆ

ಮಾನವನು ಭೂಮಿಯಲ್ಲಿ ಬದುಕಲು ಪ್ರಾರಂಭಿಸಿದ ದಿನದಿಂದ ಆತನ ಭವ್ಯ ಇತಿಹಾಸವು ಪ್ರಾರಂಭವಾಯಿತು. ಆತನು ಹೇಗೆ ಜೀವಿಸಿದ್ದನೋ ಅದುವೇ ಆತನ ಇತಿಹಾಸವಾಯಿತು. ಹಾಗಾಗಿ ಮಾನವನ ಇತಿಹಾಸವನ್ನು ಅರಿಯಲು ಪ್ರಾರಂಭಿಸುವಾಗ ಶಿಲಾಯುಗದ ಇತಿಹಾಸ, ಮಧ್ಯಕಾಲೀನ ಮಾನವನ ಇತಿಹಾಸ, ಆದಿಕಾಲದ ಇತಿಹಾಸವೆಂದು ವಿಭಾಗಿಸುತ್ತಾ ಶಿಲಾಯುಗದಲ್ಲಿ ಆತನು ಹೇಗೆ ಜೀವಿಸಿದ್ದನು ಎಂದಷ್ಟೇ ತಿಳಿಯುತ್ತೇವೆ, ಆತನು ಯಾವ ವಸ್ತುಗಳನ್ನು ಬಳಸಿದ್ದನು, ಯಾವ ಆಯುಧಗಳನ್ನು, ಪಾತ್ರೆಗಳನ್ನು, ವಸ್ತ್ರಗಳನ್ನು ಬಳಸುತ್ತಿದ್ದನೆಂದು ತಿಳಿಯುತ್ತದೆ. ನಾಗರೀಕತೆ ಬೆಳೆದಂತೆ ಮಾನವನ ಸಮಾಜವು ಬೆಳೆಯಿತು. ಇಂದು ಮಾನವನು ಸಮಾಜಜೀವಿಯಾಗಿದ್ದಾನೆ. ಇಂತಹ ಸಮಾಜ ಜೀವಿಯ ಜೀವನ ಚರಿತ್ರೆಯೇ ಇತಿಹಾಸವಾಗಿದೆ.

ಇತಿಹಾಸವು ಹಲವಾರು ಮಜಲುಗಳನ್ನು ಹೊಂದಿದೆ. ಮೊದಲು ಮನುಷ್ಯನ ಜೀವನದ ಇತಿಹಾಸವನ್ನು ನಾವು ಅರಿತರೆ ನಂತರ ಆತನ ನಾಗರೀಕತೆ, ಸಾಮಾಜಿಕ ಜೀವನದ ಇತಿಹಾಸವನ್ನು ಅರಿತಿದ್ದೇವೆ. ಸಾಮಾಜಿಕ ಜೀವನವು ಬೆಳೆದಂತೆ ಆತನ ಹಲವಾರು ವಿಭಾಗಗಳ ಇತಿಹಾಸಗಳು ಬೆಳೆದವು. ಸಾಮಾಜಿಕ ಇತಿಹಾಸವು ಬೆಳೆದಂತೆ ರಾಜಕೀಯ ಇತಿಹಾಸವು ಬೆಳೆಯಿತು. ರಾಜಕೀಯ ಇತಿಹಾಸದಿಂದಾಗಿ ಒಂದು ನಾಡಿನ ಇತಿಹಾಸವೂ ಕೂಡ ಬಲವಾಯಿತು. ಇದರೊಂದಿಗೆ ಸ್ಥಳಪುರಾಣ, ಐತಿಹ್ಯಗಳು ಸೇರಿ ಒಂದು ಸ್ಥಳದ ಇತಿಹಾಸವು ಇನ್ನಷ್ಟು ಪ್ರಬಲವಾಯಿತು. ಇದೇ ದೃಷ್ಟಿಯಿಂದಲೇ ಬೇರೆ ಬೇರೆ ಇತಿಹಾಸದಂತೆ ಒಂದು ಪ್ರದೇಶದ ಇತಿಹಾಸವು ಬೆಳೆಯಿತು. "ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಅಭಿಪ್ರಾಯವೂ ಇದೆ"[೧] ಅಂತಹ ಒಂದು ನಾಡಿನ ಅಧ್ಯಯನವನ್ನು ತಿಳಿಯುವಂತಹ ಉದ್ದೇಶವು ಇಲ್ಲಿ ಇದೆ. ಪ್ರಸ್ತುತ ನಮ್ಮ ಈ ಅಧ್ಯಯನಕ್ಕೆ ಕರ್ನಾಟಕದ ಚಿನ್ನದನಾಡು ಎಂದು ಪ್ರಸಿದ್ಧ ಪಡೆದ ಕೋಲಾರ ಜಿಲ್ಲೆಯನ್ನು ಆರಿಸಲಾಗಿದೆ.

೧.೨ ಜಿಲ್ಲೆಯ ಪ್ರಾಕೃತಿಕ ಪರಿಚಯ

ಕರ್ನಾಟಕದ ಮೂಡಣದ ಅಂಚಿನಲ್ಲಿರುವ ಕೋಲಾರ ಜಿಲ್ಲೆಯು ಇಂದು ರಾಜ್ಯದಲ್ಲಿ ಪ್ರಮುಖ ಜಿಲ್ಲೆಯಾಗಿದೆ. ೧೩° ೦೮° ಉತ್ತರ ಅಕ್ಷಾಂಶ ಮತ್ತು ೭೮° –೦೮° ಪೂರ್ವ ರೇಖಾಂಶವನ್ನು ಹೊಂದಿರುವಂತಹ ಈ ಜಿಲ್ಲೆಯು ೩,೯೬೯ ಚ.ಕೀ.ಮೀ ವಿಸ್ತೀರ್ಣವನ್ನು ಹೊಂದಿದೆ. ಈ ಜಿಲ್ಲೆಯು ಪೂರ್ವದಲ್ಲಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಿಂದಲೂ, ದಕ್ಷಿಣದಲ್ಲಿ ತಮಿಳುನಾಡಿನ ಕೃಷ್ಣಗಿರಿ ಮತ್ತು ವೆಲ್ಲೂರು ಜಿಲ್ಲೆಗಳಿಂದಲೂ, ಪಶ್ಚಿಮದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದಲೂ ಮತ್ತು ಉತ್ತರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಿಂದಲೂ ಸುತ್ತುವರಿಯಲ್ಪಟ್ಟಿದೆ. ಕೋಲಾರ ಪಟ್ಟಣವು ಕೋಲಾರ ಜಿಲ್ಲೆಯ ಜಿಲ್ಲಾಕೇಂದ್ರವಾಗಿದ್ದು ೨೦೦೭ ಸೆಪ್ಟೆಂಬರ್

೧೦ರಂದು ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಬೇರ್ಪಟ್ಟು ಹೊಸ ಜಿಲ್ಲೆಯಾಗಿ ರಚನೆಯಾಯಿತು. ಪ್ರಸ್ತುತ ಕೋಲಾರ ಜಿಲ್ಲೆಯು ೫ ತಾಲ್ಲೂಕುಗಳನ್ನು ೨೭ ಪಟ್ಟಣಗಳನ್ನು ಮತ್ತು ೩,೩೨೧ ಗ್ರಾಮಗಳನ್ನು ಹೊಂದಿದೆ.

ಪ್ರಧಾನವಾಗಿ ಕನ್ನಡ ಮತ್ತು ತೆಲುಗು ಭಾಷೆಯನ್ನು ಮಾತಾಡುವ ಜನರಿದ್ದು ತೆಲುಗುಭಾಷೆಯ ಪ್ರಭಾವವು ಜಿಲ್ಲೆಯ ಮೇಲೆ ಕಂಡುಬರುತ್ತಿದೆ. ಕೋಲಾರಮ್ಮ ದೇವಾಲಯ ಮತ್ತು ಸೋಮೇಶ್ವರ ದೇವಾಲಯವು ಕೋಲಾರ ತಾಲ್ಲೂಕಿನಲ್ಲಿದ್ದು, ಆವನಿ, ಕುರುಡುಮಲೆ, ಮುಳಬಾಗಿಲು, ಸೀತಿಬೆಟ್ಟ, ಬಂಗಾರು ತಿರುಪತಿ ಮೊದಲಾದ ಪುಣ್ಯಕ್ಷೇತ್ರಗಳು ಉಳಿದ ತಾಲ್ಲೂಕುಗಳಲ್ಲಿದ್ದು ಜಿಲ್ಲೆಯ ಪವಿತ್ರತೆಯನ್ನು ಹೆಚ್ಚಿಸಿದೆ. ಪಾಲಾರ್, ಉತ್ತರ ಪಿನಾಕಿನಿ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಜಿಲ್ಲೆಯ ಪ್ರಮುಖ ನದಿಗಳಾಗಿವೆ. ಕೋಲಾರದ ಶತಶೃಂಗ ಪರ್ವತಗಳು, ಟೇಕಲ್ ಬೆಟ್ಟಗಳು, ಆವನಿ, ಮುಳಬಾಗಿಲು, ಕುರುಡುಮಲೆ ಮೊದಲಾದ ಪ್ರದೇಶಗಳಲ್ಲಿರುವ ಬೆಟ್ಟಗುಡ್ಡಗಳು ಜಿಲ್ಲೆಯ ಪ್ರಕೃತಿ ಸೌಂದರ್ಯವನ್ನು ಬಿಂಬಿಸುತ್ತದೆ. ಮಾಲೂರು ತಾಲ್ಲೂಕಿನ ಬನಹಳ್ಳಿಯು ದಕ್ಷಿಣ ಭಾರತದಲ್ಲಿ ಅತಿ ಪ್ರಮುಖ ಪುರಾತತ್ವ ನೆಲೆ ದೊರಕಿರುವಂತಹ ಸ್ಥಳವೆಂದು ಪ್ರಸಿದ್ಧಿಯಾಗಿದೆ. ಬಂಗಾರಪೇಟೆಯು 'ಚಿನ್ನದಗಣಿ' ಎಂದು ಪ್ರಸಿದ್ಧಿಯಾಗಿದೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರರ ಜನ್ಮಭೂಮಿ (ಮಾಸ್ತಿ)ಯು ಕೋಲಾರ ಜಿಲ್ಲೆಯಾಗಿದೆ.

ಈ ರೀತಿಯಾಗಿ ಹಲವಾರು ವೈವಿಧ್ಯತೆಗಳಿಂದ ಕೂಡಿರುವಂತಹ ಈ ಜಿಲ್ಲೆಯು ಅಧ್ಯಯನಾರ್ಹವಾಗಿದೆ. ಇಲ್ಲಿ ದೊರಕುವಂತಹ ಶಾಸನಗಳು, ನೆಲೆನಿಂತಿರುವ ದೇವಾಲಯಗಳು ಇತಿಹಾಸದ ಮಹಾಪೂರವನ್ನೇ ಹರಿಸಿದೆ. ಅಂತಹ ಈ ಜಿಲ್ಲೆಯ ಸಾಂಸ್ಕೃತಿಕ ಮತ್ತು ಐತಿಹಾಸಿಕ ಅಧ್ಯಯನವನ್ನು ಶಾಸನಗಳ ಮೂಲಕ ಮಾಡುವಂತಹ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧.೩. ಅಧ್ಯಯನದ ಉದ್ದೇಶ

ಬೆಂಗಳೂರು ಮಹಾನಗರಕ್ಕೆ ಹೊಂದಿಕೊಂಡಿರುವಂತಹ ಕೋಲಾರ ಜಿಲ್ಲೆಯನ್ನು ಅಧ್ಯಯನಕ್ಕೆ ಇಲ್ಲಿ ಅಳವಡಿಸಲಾಗಿದೆ. ಕೋಲಾರ ಜಿಲ್ಲೆಯು ಕರ್ನಾಟಕದ ಇತರೆ ಜಿಲ್ಲೆಗಳಿಗಿಂತ ಹೆಚ್ಚು ಶಾಸನಗಳನ್ನು ಮತ್ತು ದೇವಾಲಯಗಳನ್ನು ಹೊಂದಿರುವಂತಹ ಜಿಲ್ಲೆಯಾಗಿದೆ. ಚಿನ್ನದ ನಾಡು, ಚಿನ್ನದಗಣಿ ಎಂದು ಪ್ರಸಿದ್ಧಿ ಪಡೆದಂತಹ ಈ ಜಿಲ್ಲೆಯು ಸುಮಾರು ೫೦೦೦ ವರ್ಷಗಳಿಂದಲೂ ನವ ಶಿಲಾಯುಗದ ಸಂಸ್ಕೃತಿಯನ್ನು ಹೊಂದಿದೆ. ಈ ಜಿಲ್ಲೆಯ ಇತಿಹಾಸವು ಕ್ರಿ.ಶ.೫ ಅಥವಾ ೬ನೆಯ ಶತಮಾನದ ಬಾಣರಸರ ಇತಿಹಾಸದೊಂದಿಗೆ ಪ್ರಾರಂಭವಾಗಿ ವಿಜಯನಗರದ ಅರಸರು, ನಂತರ ನಾಯಕರು, ಪಾಳೆಯಗಾರರು ಮೊದಲಾದವರ ಆಳ್ವಿಕೆಯವರೆಗೆ ಹಲವಾರು ಸ್ಥಿತ್ಯಂತರಗಳನ್ನು ಹೊಂದಿದೆ. ಇದಕ್ಕನುಗುಣವಾಗಿ ಈ ಪ್ರದೇಶದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ ಹಲವಾರು ಕ್ಷೇತ್ರಗಳಲ್ಲುಂಟಾದ ಬದಲಾವಣೆಗಳು ಒಂದಕ್ಕೊಂದು ಪೂರಕವಾಗಿ ಬೆಳೆದುನಿಂತಿದೆ. ಕೋಲಾರ ಜಿಲ್ಲೆಯ ವಿಶೇಷವೆಂದರೆ ಇಲ್ಲಿ ಎಲ್ಲಾ ತಾಲ್ಲೂಕು, ಗ್ರಾಮಗಳಲ್ಲೂ ಶಾಸನಗಳು ದೊರೆತಿದ್ದು, ಶಾಸನಗಳ ದೃಷ್ಟಿಯಿಂದ ಪರಿಪೂರ್ಣವಾಗಿದೆ. ದಾನಶಾಸನಗಳು, ಸ್ಮಾರಕ ಶಾಸನಗಳಲ್ಲೂ ಹಲವಾರು ವೈಶಿಷ್ಟ್ಯತೆಗಳು ಕಂಡುಬರುತ್ತದೆ. ಸ್ಮಾರಕ ಶಾಸನಗಳ ವಿವಿಧ ಪ್ರಕಾರಗಳು ಕಂಡುಬರುತ್ತವೆ. ಈ ಎಲ್ಲಾ ಮಾಹಿತಿಗಳು ಕೋಲಾರ ಪರಿಸರದ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗಿದೆ. ಕೋಲಾರ ಜಿಲ್ಲೆಯ ಶಾಸನಗಳು ಸಂಖ್ಯೆಯ ದೃಷ್ಟಿಯಿಂದ

ಸಂಪದ್ಭರಿತವಾಗಿದೆ. ಸುಮಾರು ೭೦೦ಕ್ಕೂ ಅಧಿಕ ಶಾಸನಗಳು ಇಲ್ಲಿ ದೊರೆಯುವುದರಿಂದ ಈ ಪ್ರದೇಶವನ್ನು ಸಂಶೋಧನೆಗೆ ತೆಗೆದುಗೊಂಡಿರುವುದು ಒಂದು ಕಾರಣವಾಗಿದೆ.

ಕೋಲಾರ ಜಿಲ್ಲೆಯ ರಾಜಕೀಯ ಚರಿತ್ರೆಯು ಬಾಣರ ಆಳ್ವಿಕೆಯಿಂದ ಆರಂಭಿಸಿ ಹೊಯ್ಸಳರ ಸಾಮ್ರಾಜ್ಯದ ಆಳ್ವಿಕೆಯವರೆಗೂ ತನ್ನದೇ ಆದಂತಹ ವೈಶಿಷ್ಟ್ಯವನ್ನು ಹೊಂದಿತ್ತು. ಈ ಪ್ರದೇಶವು ೧೪ನೆಯ ಶತಮಾನದ ನಂತರ ವಿಜಯನಗರ ಸಾಮ್ರಾಜ್ಯದ ವಶವಾಯಿತು. ಕ್ರಿ.ಶ. ೩-೪ ಶತಮಾನದಿಂದ ಪ್ರಾರಂಭವಾಗಿ ೧೪ನೆಯ ಶತಮಾನದವರೆಗೂ ಗಂಗರು, ಬಾಣರು, ವೈದುಂಬರು, ನೊಳಂಬರು, ಚೋಳರು, ರಾಷ್ಟ್ರಕೂಟರು, ಹೊಯ್ಸಳರು ಈ ಪ್ರದೇಶದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಹಲವಾರು ಬದಲಾವಣೆಗಳನ್ನು ತಂದರು. ಹಿಂದೆ ತಿಳಿಸಿದಂತಹ ಕಾಲ ಪರಿಮಿತಿ ಮತ್ತು ಪ್ರದೇಶದ ಪರಿಮಿತಿಯನ್ನು ಆಧಾರವಾಗಿಟ್ಟುಕೊಂಡು ಮತ್ತು ಮಾರ್ಗದರ್ಶಕರ ಅಭಿಪ್ರಾಯದಂತೆ ಪ್ರಸ್ತುತಃ ನಮ್ಮ ಅಧ್ಯಯನವನ್ನು ಆರು ಅಧ್ಯಾಯಗಳನ್ನಾಗಿ ವಿಭಾಗಿಸಲಾಗಿದೆ.

೧.೪ ಅಧ್ಯಯನದ ವ್ಯಾಪ್ತಿ

ಅಧ್ಯಯನದ ಸಂಕ್ಷಿಪ್ತ ಪರಿಚಯವನ್ನು ತಿಳಿಸುವಂತಹ ಮೊದಲನೆಯ ಅಧ್ಯಾಯವು ಪ್ರಮುಖವಾಗಿದ್ದು, ಅಧ್ಯಯನದ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರ್ವಾಧ್ಯಯನಗಳ ಪರಿಚಯ, ಅಧ್ಯಯನಕ್ಕೆ ಬಳಸಿಕೊಂಡ ಆಕರಗಳು ಮತ್ತು ಕೋಲಾರ ಜಿಲ್ಲೆಯ ಸಂಕ್ಷಿಪ್ತ ಪರಿಚಯನ್ನೊಳಗೊಂಡಿದೆ.

ಅಧ್ಯಾಯ ಎರಡರಲ್ಲಿ ಶಾಸನಗಳ ಮೂಲಕ ಕೋಲಾರ ಜಿಲ್ಲೆಯ ರಾಜಕೀಯ ಇತಿಹಾಸದ ಪರಿಚಯವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಕರ್ನಾಟಕದ ಪ್ರಮುಖ ರಾಜಮನೆತನಗಳೊಂದಿಗೆ ಇತರ ಸಾಮಂತ ರಾಜರುಗಳ ಮಾಹಿತಿಯನ್ನು ಕೋಲಾರ ಜಿಲ್ಲೆಗೆ ಪೂರಕವಾಗಿ ನೀಡಲಾಗಿದೆ. ರಾಜಮನೆತನದವರ ಮೂಲ, ಪೌರಾಣಿಕ ಹಿನ್ನೆಲೆ, ವಂಶಾವಳಿಯೊಂದಿಗೆ ಪ್ರಮುಖ ರಾಜರುಗಳ ಜೀವನಚಿತ್ರಣವನ್ನು ಪೂರಕ ಮಾಹಿತಿಯೊಂದಿಗೆ ನೀಡಲು ಪ್ರಯತ್ನಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಪುರಾತತ್ವ ನೆಲೆಗಳೊಂದಿಗೆ ಪ್ರಾಕ್ತನ ಇತಿಹಾಸವು ಗಾಢವಾಗಿ ನೆಲೆಯೂರಿದೆ. ಹಾಗಾಗಿ ಕೋಲಾರ ಜಿಲ್ಲೆಯ ರಾಜಕೀಯ ಇತಿಹಾಸವನ್ನು ಪರಿಚಯಿಸುವ ಮೊದಲು ಪುರಾತತ್ವದ ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಕರ್ನಾಟಕದ ಮೊದಲ ದೊರೆಗಳಾದ ಕದಂಬರ ಶಾಸನಗಳು ದೊರಕುತ್ತಿಲ್ಲ. ಅದೇ ರೀತಿಯಾಗಿ ಬಾದಾಮಿಯ ಚಾಲುಕ್ಯರ ಮತ್ತು ಮಾನ್ಯಖೇಟದ ರಾಷ್ಟ್ರಕೂಟದ ಶಾಸನಗಳು ಅಷ್ಟೇನು ದೊರಕುತ್ತಿಲ್ಲ. ಈ ವಿಷಯವಾಗಿ ಮಾರ್ಗದರ್ಶಕರೊಂದಿಗೆ ಚರ್ಚಿಸಿ ಸಕಾರಣ ಸಹಿತವಾಗಿ ಉತ್ತರಿಸಲು ಪ್ರಯತ್ನಿಸಲಾಗಿದೆ.

ಉಳಿದಂತೆ ಕೋಲಾರ ಜಿಲ್ಲೆಯ ರಾಜಕೀಯ ಇತಿಹಾಸವು ಸ್ಪಷ್ಟವಾಗಿ ಪ್ರಾರಂಭವಾಗುವುದು ಗಂಗರ ಶಾಸನಗಳಿಂದ. ಕಾಲಾನುಕ್ರಮವಾಗಿ ಮುಂದಿನ ಭಾಗದಲ್ಲಿ ಬಾಣರ, ನೊಳಂಬರ, ಚೋಳರ ಮತ್ತು ಹೊಯ್ಸಳರಸರ ಶಾಸನೋಕ್ತ ರಾಜಕೀಯ ಇತಿಹಾಸವನ್ನು ನೀಡಲಾಗಿದೆ. ಅಗತ್ಯವಾದಲ್ಲಿ ಈ ರಾಜಮನೆತನದವರೊಳಗಿನ ಪರಸ್ಪರ ಸಂಬಂಧದ ಸ್ವರೂಪ, ವೈಷಮ್ಯಗಳಿದ್ದರೆ ಅದಕ್ಕೆ ಕಾರಣಗಳನ್ನು ಕೋಲಾರ ಜಿಲ್ಲೆಗೆ ಅನುಗುಣವಾಗಿ ನೀಡಲಾಗಿದೆ. ರಾಜಮನೆತನಗಳ ಆಡಳಿತ ವಿಭಾಗಗಳನ್ನು ಯಥೋಚಿತವಾಗಿ ನೀಡಲಾಗಿದೆ.

ಅಧ್ಯಾಯ ಮೂರು ದಾನ ಶಾಸನಗಳಿಗೆ ಮೀಸಲಾಗಿದೆ. ಆದರೆ ಎರಡನೆಯ ಅಧ್ಯಾಯಕ್ಕಿಂತ ಭಿನ್ನವಾಗಿ ಶಾಸನಗಳ ಮೂಲಕ ಸಾಮಾಜಿಕ ಸ್ವರೂಪವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಆ ದೃಷ್ಟಿಯಿಂದ ಈ ಅಧ್ಯಾಯದಲ್ಲಿ 'ದಾನಶಾಸನಗಳು' ಎಂದು ಪ್ರಮುಖ ವಿಷಯವನ್ನು ತೆಗೆದುಕೊಳ್ಳಲಾಗಿದೆ. ಹೆಚ್ಚಾಗಿ ದಾನಕ್ಕೆ ಸಂಬಂಧಿಸಿದಂತಹ ವಿಷಯಗಳು ತಾಮ್ರಶಾಸನಗಳಲ್ಲಿ ದೊರಕುತ್ತವೆ, ದಾನ ನೀಡಿದಂತಹ ರಾಜನ ಮಾಹಿತಿ, ಕಾಲ, ದಾನ ಸ್ವೀಕರಿಸಿದವರ ಮಾಹಿತಿಯೊಂದಿಗೆ ದಾನ ನೀಡಿರುವಂತಹ ಸ್ಥಳಗಳ ಮಾಹಿತಿಯನ್ನು ಸಂಗ್ರಹಿಸಿ ಬರೆಯಲಾಗಿದೆ. ದಾನ ಶಾಸನಗಳನ್ನು ಅಧ್ಯಯನ ಮಾಡಿದಂತೆ ಕೋಲಾರ ಜಿಲ್ಲೆಯ ಸಾಮಾಜಿಕ ಚರಿತ್ರೆಯು ವಿಶೇಷವಾಗಿ ನೆಲೆಗೊಳ್ಳುತ್ತಾ ಹೋಗುತ್ತದೆ. ದಾನಗಳಲ್ಲಿ ಪ್ರಯೋಗವಾಗಿರುವಂತಹ ಕಲ್ನಾಡು, ಮೊಂಗೊಟ್ಟು, ಕಳನಿ ಮೊದಲಾದ ವಿಶೇಷಾಂಶಗಳನ್ನು ಉದಾಹರಣೆ ಸಹಿತವಾಗಿ ಚರ್ಚಿಸಲಾಗಿದೆ.

ಅಧ್ಯಾಯ–ನಾಲ್ಕರಲ್ಲಿ ಸಂಪೂರ್ಣವಾಗಿ ಸ್ಮಾರಕ ಶಾಸನಗಳ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕೋಲಾರ ಜಿಲ್ಲೆಯ ವೀರಪರಂಪರೆಯನ್ನು ಸ್ಪಷ್ಟವಾದ ಚಿತ್ರಣದೊಂದಿಗೆ ಇಲ್ಲಿ ಕಾಣಬಹುದಾಗಿದೆ. ಸ್ಮಾರಕ ಶಾಸನಗಳ ಪ್ರಕಾರಗಳಾದ ವೀರಗಲ್ಲುಗಳು, ಪೆಣ್ಬುಯಲ್, ಬಾಳ್ಗಚ್ಚು, ಊರಳಿವು ಮೊದಲಾದವುಗಳನ್ನು ಸಂದರ್ಭೋಚಿತವಾಗಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಕೋಲಾರ ಜಿಲ್ಲೆಯು ಹೆಚ್ಚಿನ ವೀರಗಲ್ಲು ಶಾಸನಗಳನ್ನು ಹೊಂದಿದೆ. ಈ ಜಿಲ್ಲೆಯು ವೀರಭೂಮಿಯಾಗಿತ್ತು ಮತ್ತು ಅನೇಕ ಯುದ್ಧಗಳಿಗೆ ಯುದ್ಧಭೂಮಿಯಾಗಿತ್ತೆಂಬುದಾಗಿ ತಿಳಿಯಬಹುದು.

ಅಧ್ಯಯನದ ದೃಷ್ಠಿಯಿಂದ ಐದನೆಯ ಅಧ್ಯಾಯವು ಪ್ರಮುಖವಾಗಿದೆ. ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಂಪೂರ್ಣ ಮಾಹಿತಿಯನ್ನು ನೀಡುತ್ತಿರುವಂತಹ ಈ ಅಧ್ಯಾಯವು ಕೋಲಾರ ಜಿಲ್ಲೆಯಲ್ಲಿ ಶಾಸನೋಕ್ತ ಸ್ಥಳಗಳ ಇತಿಹಾಸವನ್ನು ತಿಳಿಯಪಡಿಸುತ್ತದೆ. ಸ್ಥಳಪುರಾಣಗಳು, ಐತಿಹ್ಯಗಳು ಈ ಸ್ಥಳಗಳ ಇತಿಹಾಸವನ್ನು ತಿಳಿಯಲು ಪ್ರಮುಖ ಆಧಾರವಾಗಿವೆ. ಸ್ಥಳಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. (ವಿಶೇಷವಾದ ಐತಿಹ್ಯವನ್ನು ಹೊಂದಿದ್ದು, ಶಾಸನೋಕ್ತವಾಗಿದ್ದು, ಪ್ರಚಲಿತದಲ್ಲಿರುವಂತಹ ಸ್ಥಳಗಳು, ರಾಜಕೀಯವಾಗಿ ಪ್ರಸಿದ್ಧವಾಗಿ ಪ್ರಚಲಿತದಲ್ಲಿರುವಂತಹ ಸ್ಥಳಗಳು, ಯಾವುದೇ ರೀತಿಯಾಗಿ ಐತಿಹ್ಯವನ್ನು ಹೊಂದಿರದೇ ರಾಜಕೀಯ ಉಲ್ಲೇಖಗಳು ಇರದೇ ಪ್ರಚಲಿತದಲ್ಲಿರುವಂತಹ ಸ್ಥಳಗಳೆಂದು ವಿಂಗಡಿಸಿ ಅಧ್ಯಯನ ನಡೆಸಲಾಗಿದೆ.

ಸಾಂದರ್ಭಿಕವಾಗಿ ಕೋಲಾರದಲ್ಲಿ ಪ್ರಸಿದ್ಧವಾಗಿದ್ದಂತಹ ಅಗ್ರಹಾರ, ಕೆರೆ, ದೇವಾಲಯಗಳು ಮೊದಲಾದವುಗಳ ಮಾಹಿತಿಯನ್ನು ನೀಡಲಾಗಿದೆ. ಅಧ್ಯಾಯ ಆರರಲ್ಲಿ ಈ ಅಧ್ಯಯನದ ಫಲಶ್ರುತಿಯನ್ನು ನೀಡಲಾಗಿದೆ. ಅಧ್ಯಯನದಿಂದ ದೊರಕಿದಂತಹ ಪ್ರಮುಖ ಅಂಶಗಳನ್ನು ಈವರೆಗೆ ನಡೆಸಿದಂತಹ ಅಧ್ಯಯನಗಳೊಂದಿಗೆ ತುಲನಾತ್ಮಕವಾಗಿ ವಿವೇಚಿಸಿ ವಿಮರ್ಶಿಸಲಾಗಿದೆ. ಅಧ್ಯಯನದ ಸಮಾರೋಪವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಕೋಲಾರ ಜಿಲ್ಲೆಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಈ ಜಿಲ್ಲೆಯ ಇತಿಹಾಸದ ಅಗಾಧತೆ ಮತ್ತು ವಿಸ್ತಾರವು ಮನವರಿಕೆಯಾಯಿತು. ಕಾಲದ ದೃಷ್ಟಿಯಿಂದಲೂ ಸ್ಥಳದ (ಪ್ರದೇಶದ) ದೃಷ್ಟಿಯಿಂದಲೂ ಕೋಲಾರ ಜಿಲ್ಲೆಯ ಅಧ್ಯಯನಕ್ಕೆ ಒಂದು ಚೌಕಟ್ಟನ್ನು ಹಾಕಲಾಯಿತು. ಈ ವಿಷಯವಾಗಿ ಮಾರ್ಗದರ್ಶಕರೊಡನೆ ಚರ್ಚಿಸಿದಾಗ ಮತ್ತು ಪ್ರಕಟಿತವಾದಂತಹ ಶಾಸನಗಳ ಆಧಾರದಿಂದ ಅಧ್ಯಯನಕ್ಕೆ ಮಿತಿಯನ್ನು

ಹಾಕಿಕೊಳ್ಳಬೇಕಾಯಿತು. ಮೊದಲನೆಯದಾಗಿ ಶಾಸನಗಳ ಆಧಾರವನ್ನೇ ಬಳಸಿಕೊಂಡು ಕೋಲಾರ ಜಿಲ್ಲೆಯ ಅಧ್ಯಯನವನ್ನು ಮಾಡುವ ಉದ್ದೇಶವನ್ನು ಕೈಗೊಳ್ಳಲಾಯಿತು.

ಕೋಲಾರ ಜಿಲ್ಲೆಯಲ್ಲಿ ಪ್ರಕಟಿತವಾಗಿರುವಂತಹ ಶಾಸನಗಳ ಸಂಖ್ಯೆಯನ್ನು ಗಮನಿಸಿದಾಗ ಅನಿವಾರ್ಯವಾಗಿ ಕಾಲಮಿತಿಯೊಂದಿಗೆ ವ್ಯಾಪ್ತಿಯನ್ನು ನನ್ನ ಅಧ್ಯಯನಕ್ಕೆ ನೀಡಬೇಕಾಯಿತು. ಸುಮಾರು ೬೯೦ಕ್ಕಿಂತಲೂ ಅಧಿಕ ಪ್ರಕಟಿತ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿದ್ದು, ಇನ್ನೂ ಹಲವಾರು ಅಪ್ರಕಟಿತ ಶಾಸನಗಳು ಜಿಲ್ಲೆಯಲ್ಲಿವೆ. ಕರ್ನಾಟಕದ ಇತಿಹಾಸದಲ್ಲಿ ಅದರಲ್ಲೂ ಕರ್ನಾಟಕದ ಇತಿಹಾಸದ ಪೂರ್ವಕಾಲದ ರಾಜಮನೆತನಗಳನ್ನೊಳಗೊಂಡಂತೆ ೧೩ನೆಯ ಶತಮಾನವನ್ನು ಗಡಿಯನ್ನಾಗಿ ಉಳಿಸಿಕೊಳ್ಳಲಾಯಿತು. ೧೩ನೆಯ ಶತಮಾನವು ಕರ್ನಾಟಕದ ಇತಿಹಾಸದಲ್ಲಿ ಪರಿವರ್ತನೆಯ ಯುಗವಾಗಿತ್ತು. ಕರ್ನಾಟಕದ ಇತಿಹಾಸಕ್ಕೆ ಭದ್ರಬುನಾದಿಯನ್ನು ಹಾಕಿ ಗತವೈಭವವನ್ನು ಮೆರೆದಂತಹ ರಾಜಮನೆತನಗಳು ಅಸ್ತಮಾನವಾಗಿ ವಿಜಯನಗರವೆಂಬ ಸಾಮ್ರಾಜ್ಯವು ಉದಯವಾದಂತಹ ಕಾಲವಾಗಿತ್ತು.

ಈ ಕಾಲವನ್ನು ಮಿತಿಯನ್ನಾಗಿಟ್ಟುಕೊಂಡು ೧೩ನೆಯ ಶತಮಾನದವರೆಗೆ ಕರ್ನಾಟಕದಲ್ಲಿ ಆಳಿದಂತಹ ರಾಜಮನೆತನಗಳ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನವನ್ನು ಮಾಡುವ ಉದ್ದೇಶ ಕೈಗೊಳ್ಳಲಾಯಿತು. ಇತಿಹಾಸದ ಪ್ರಾರಂಭ ಕಾಲದಿಂದ ಆರಂಭಿಸಿ ೧೩ನೆಯ ಶತಮಾನದವರೆಗೆ ದೊರಕುವಂತಹ ಗಂಗ, ಹೊಯ್ಸಳ, ಬಾಣ, ನೊಳಂಬರ ಶಾಸನಗಳನ್ನು ಆಧಾರವಾಗಿಟ್ಟು ಕೊಳ್ಳಲಾಗಿದೆ. ನೆರೆಯ ತಮಿಳುನಾಡಿನ ಪ್ರಮುಖ ರಾಜಮನೆತನದವರಾದ ಚೋಳರ ಶಾಸನಗಳು ಕೋಲಾರದಲ್ಲಿ ದೊರೆಯುವುದರಿಂದ ಚೋಳರ ಶಾಸನಗಳೂ ಪ್ರಮುಖವಾದಂತಹ ಅಧ್ಯಯನದ ಆಕರವಾಯಿತು. ಈ ಪ್ರಮುಖ ರಾಜಮನೆತನದವರ ಅಧ್ಯಯನ ನಡೆಸಿದಾಗ ಬೆಳಕಿಗೆ ಬಂದಂತಹ ವೈದುಂಬರರು, ಬ್ರಹ್ಮಾದಿರಾಯರು, ಇಳವಂಜಿರಾಯರ ಅಧ್ಯಯನವನ್ನು ಬಳಸಿಕೊಳ್ಳಲಾಯಿತು. ೧೩ನೆಯ ಶತಮಾನದ ನಂತರ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನೊಳಗೊಂಡ ಅಧ್ಯಯನವೂ ಪ್ರಮುಖವಾಗಿದ್ದರೂ ಸಮಯಾಭಾವ ಮತ್ತು ವಿಷಯ ವಿಸ್ತಾರವಾಗುವ ಭಯದಿಂದ ೧೩ನೆಯ ಶತಮಾನವನ್ನು ಮಿತಿಯನ್ನಾಗಿರಿಸಿ ಕೊಂಡು ಅಧ್ಯಯನ ಕೈಗೊಳ್ಳಲಾಯಿತು.

ಕೋಲಾರ ಜಿಲ್ಲೆಯು ವಿಸ್ತಾರವಾದ ಜಿಲ್ಲೆಯಾಗಿದೆ. ವಿಭಜನೆಯಾಗುವುದಕ್ಕಿಂತ ಮೊದಲು ಇದ್ದಂತಹ ಕೋಲಾರ ಜಿಲ್ಲೆಗಿಂತ ಈಗಿರುವಂತಹ ಕೋಲಾರ ಜಿಲ್ಲೆಯನ್ನು ವ್ಯಾಪ್ತಿಯನ್ನಾಗಿರಿಸಿ ಕೊಳ್ಳಲಾಗಿದೆ. ಕೋಲಾರ ಜಿಲ್ಲೆಯು ಶ್ರೀನಿವಾಸಪುರ, ಮಾಲೂರು, ಬಂಗಾರಪೇಟೆ ಮುಳಬಾಗಿಲು ಮತ್ತು ಕೋಲಾರ ತಾಲ್ಲೂಕುಗಳನ್ನೊಳಗೊಂಡಿದೆ. ಹತ್ತು ತಾಲ್ಲೂಕುಗಳನ್ನೊಳಗೊಂಡಿದ್ದಂತಹ ಈ ಜಿಲ್ಲೆಯು ವಿಭಜನೆಯಾಗಿ ಐದು ತಾಲ್ಲೂಕುಗಳಾಗಿ ಮಾರ್ಪಾಡಾದ ನಂತರ ಕೋಲಾರದ ವಿಸ್ತಾರವು ಕಡಿಮೆಯಾಯಿತು. ಪ್ರಸ್ತುತ ನಮ್ಮ ಅಧ್ಯಯನಕ್ಕೆ ವಿಭಜಿತ ಕೋಲಾರ ಜಿಲ್ಲೆಯನ್ನು ಬಳಸಿಕೊಳ್ಳಲಾಗಿದೆ.

೧.೫ ಈವರೆಗಿನ ಅಧ್ಯಯನಗಳು

ಕೋಲಾರ ಜಿಲ್ಲೆಯ (ಸಮಗ್ರ ಜಿಲ್ಲೆಯ) ಶಾಸನಗಳು ಬ್ರಿಟಿಷರ ಕಾಲದಲ್ಲಿಯೇ ಬೆಳಕಿಗೆ ಬಂದವುಗಳಾಗಿವೆ. ಕರ್ನಾಟಕ ಶಾಸನ ಪಿತಾಮಹ 'ಬೆಂಜಮಿನ್ ಲೂಯಿ ರೈಸ್'ರವರು ಕರ್ನಾಟಕ ಶಾಸನಗಳ ಸಂಪುಟವನ್ನು ಸಿದ್ಧಪಡಿಸಿದಂತಹ ಸಂದರ್ಭದಲ್ಲಿ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ದೊರಕಿದಂತಹ ಎಲ್ಲಾ

ಶಾಸನಗಳನ್ನು ಪ್ರಕಟಿಸಿದ್ದಾರೆ. ಶಾಸನಗಳ ಪ್ರಕಟಣೆಯ ಜೊತೆಗೆ ಶಾಸನ ಪಾಠಗಳ ಇಂಗ್ಲಿಷ್ ಭಾಷಾಂತರವನ್ನೂ ನೀಡಿದ್ದಾರೆ. Epigraphia Carnatica ಪುಸ್ತಕ ಮಾಲಿಕೆಗಳ ೧೦ನೆಯ ಸಂಪುಟದಲ್ಲಿ ಬಿ.ಎಲ್.ರೈಸ್‌ರವರು ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಶಾಸನಗಳನ್ನು ಪ್ರಕಟಿಸಿದ್ದಾರೆ.

ತಿದ್ದುಪಾಠದ ಶಾಸನಗಳನ್ನು ಮತ್ತು ಹೊಸತಾಗಿ ಕೋಲಾರ ಜಿಲ್ಲೆಯಲ್ಲಿ ದೊರೆತಂತಹ ಶಾಸನಗಳನ್ನು ೧೦ನೆಯ ಸಂಪುಟದ ಅನುಬಂಧದ ಆವೃತ್ತಿಯಲ್ಲಿ ಪ್ರಕಟಿಸಿದ್ದಾರೆ. ೧೯೬೫ರಲ್ಲಿ ಪ್ರಕಟವಾದ Supplement to Volume X Inscriptions in the Kolar District ಪುಸ್ತಕದಲ್ಲಿ ಶಾಸನಗಳನ್ನು ಮತ್ತು ಅದರ ಇಂಗ್ಲೀಷ್ ಭಾಷಾಂತರವನ್ನು ಪ್ರಕಟಿಸಲಾಗಿದೆ. ಮುಂದೆ ಶಾಸನಗಳ ಕುರಿತಾಗಿ ಯಾವುದೇ ಮಹತ್ತರವಾದ ಪ್ರಕಟಣೆಗಳು ಕಂಡುಬರುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಪುರಾತತ್ವಕ್ಕೆ ಸಂಬಂಧಿಸಿದಂತೆ ಹಲವಾರು ಸರ್ವೇಕ್ಷಣೆಗಳು, ಸಂಶೋಧನೆಗಳು ಮತ್ತು ಲೇಖನಗಳು ಪ್ರಕಟವಾಗಿವೆ. ಕ್ರಿ.ಶ.೧೮೭೩ರಲ್ಲಿ ಆರ್.ವಿ.ಕೋಲ್‌ರವರು ಶ್ರೀನಿವಾಸಪುರ, ಬಂಗಾರಪೇಟೆ, ಗುಡಿಬಂಡೆ, ಕೋಲಾರ ಮೊದಲಾದ ತಾಲ್ಲೂಕುಗಳ ಹರಳಕೋಟೆ, ಗರುಡನಪಾಳ್ಯ, ಹೊನಗುಂದ ಮೊದಲಾದ ಪುರಾತತ್ವ ಸ್ಥಳಗಳಲ್ಲಿ ದೊರೆಯುವಂತಹ ಸ್ಮಾರಕಗಳ ಬಗ್ಗೆ, ಪುರಾತತ್ವ ನೆಲೆಗಳ ಬಗ್ಗೆ ಸಂಶೋಧಿಸಿ Indian Antiquary ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಇದಾದ ನಂತರ ಇಲ್ಲಿ ದೊರೆಯುಂತಹ ಹಲವಾರು ಪುರಾತತ್ವ ನೆಲೆಗಳ ಕುರಿತಾಗಿ ಹಲವಾರು ಲೇಖನಗಳು ಪ್ರಕಟಗೊಂಡಿವೆ. ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಕ್ರಿ.ಶ.೧೯೬೦ರಿಂದ ಆರಂಭಿಸಿ ಕೋಲಾರ ಜಿಲ್ಲೆಯ ಪ್ರತಿಯೊಂದು ಹಳ್ಳಿಯ ಸರ್ವೇಕ್ಷಣೆಯನ್ನು ನಡೆಸಿತ್ತು.

ಒಂದು ಪ್ರದೇಶದ ಅಧ್ಯಯನವನ್ನು ನಡೆಸುವಲ್ಲಿ ಗ್ಯಾಸೆಟಿಯರ್‌ಗಳು ಪ್ರಮುಖ ಸ್ಥಾನವನ್ನು ಪಡೆಯುತ್ತವೆ. ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ವಿಸ್ತೃತವಾದ ವಿವರಗಳನ್ನೊಳಗೊಂಡ ಗ್ಯಾಸೆಟಿಯರ್ ಅನ್ನು ಕೋಲಾರ ಜಿಲ್ಲೆಯ ಶ್ರೀ.ಬಿ.ಕೃಷ್ಣಯ್ಯಂಗಾರ್‌ರವರು ಕ್ರಿ.ಶ.೧೮೬೯ರಲ್ಲಿ ಪ್ರಕಟಿಸಿದ್ದಾರೆ. ಆದರೆ ಪುಸ್ತಕವು ಈಗ ಉಪಲಬ್ಧವಿಲ್ಲ. ನಂತರ ಕ್ರಿ.ಶ.೧೮೭೬ರಲ್ಲಿ ಬಿ.ಎಲ್. ರೈಸ್‌ರವರು ಗ್ಯಾಸೆಟಿಯರ್ ಆಫ್ ಇಂಡಿಯಾದಲ್ಲಿ ಮೈಸೂರು (ಪ್ರಾಚೀನ) ಜಿಲ್ಲೆಯ ಸಂಪೂರ್ಣ ವಿವರವನ್ನು ನೀಡಿದ್ದಾರೆ. ಈ ಲೇಖನದಲ್ಲಿ ಕೋಲಾರ ಜಿಲ್ಲೆಯ ಕುರಿತಾಗಿ ಲೇಖನಗಳನ್ನು ಪ್ರಕಟಿಸಿದ್ದಾರೆ.

ಕರ್ನಾಟಕದ ರಾಜ್ಯ ಗ್ಯಾಸೆಟಿಯರ್ ಇಲಾಖೆಯ ವತಿಯಿಂದ ಮೊದಲು ಕೋಲಾರ ಜಿಲ್ಲೆಯ ಸಂಪೂರ್ಣ ಮಾಹಿತಿಯನ್ನು ಕೆ.ಅಭಿಶಂಕರ್ ರವರು ಕ್ರಿ.ಶ.೧೯೬೯ರಲ್ಲಿ 'ಮೈಸೂರು ಸ್ಟೇಟ್ ಕೋಲಾರ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್'ನಲ್ಲಿ ಪ್ರಕಟಿಸಿದ್ದಾರೆ. ಈ ಪುಸ್ತಕವನ್ನು ಆಧಾರವಾಗಿಟ್ಟುಕೊಂಡು ಹೆಚ್.ಚಿತ್ತರಂಜನ್‌ರವರ ಸಂಪಾದಕತ್ವದಲ್ಲಿ ಕೋಲಾರ ಜಿಲ್ಲೆಯ ಪರಿಷ್ಕೃತ ಆವೃತ್ತಿಯನ್ನೊಳಗೊಂಡ ಗ್ಯಾಸೆಟಿಯರ್ ಕ್ರಿ.ಶ.೨೦೦೫ರಲ್ಲಿ ಪ್ರಕಟಗೊಂಡಿದೆ. ಈ ಪುಸ್ತಕವು ನಮ್ಮ ಅಧ್ಯಯನಕ್ಕೆ ಪ್ರಧಾನ ಮಾರ್ಗದರ್ಶಕವಾಗಿದೆ.

ಕ್ರಿ.ಶ.೨೦೦೩ರ ಡಿಸೆಂಬರ್ ೧೩ ಮತ್ತು ೧೪ರಂದು ಕೈವಾರದಲ್ಲಿ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಪ್ರಕಟಿಸಿತ್ತು. ೨೦೦೪ಲ್ಲಿ ಡಾ.ಆರ್.ಗೋಪಾಲರವರ ಸಂಪಾದಕತ್ವದಲ್ಲಿ ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ

ಸುಮಾರು ೪೦ ಪ್ರಬಂಧಗಳನ್ನು ಪ್ರಕಟಿಸಿದೆ. ಕೋಲಾರ ಜಿಲ್ಲೆಯ ಇತಿಹಾಸವನ್ನು ತಿಳಿಯಲು ಈ ಪುಸ್ತಕವು ಅತಿ ಸಹಕಾರಿಯಾಗಿದೆ.

ಕೋಲಾರ ಜಿಲ್ಲೆಯ ರಾಜಕೀಯ ಇತಿಹಾಸವನ್ನು ತಿಳಿಯಬೇಕಾದರೆ ಬೇರೆ ಬೇರೆ ಇತಿಹಾಸಜ್ಞರು, ವಿದ್ವಾಂಸರು ಪ್ರಕಟಿಸಿದಂತಹ ಸಂಶೋಧನಾ ಕೃತಿಗಳೇ ಆಧಾರವಾಗಿದೆ. ಕ್ರಿ.ಶ.೧೯೪೬ರಲ್ಲಿ ನೆಲಮಂಗಲ ಲಕ್ಷ್ಮೀನಾರಾಯಣರಾವ್ ಮತ್ತು ರಾ.ಸ್ವಾ ಪಂಚಮುಖಿಯವರು ಪ್ರಕಟಿಸಿದ 'ಕರ್ನಾಟಕದ ಅರಸು ಮನೆತನಗಳು' ಕೃತಿಯು ಕರ್ನಾಟಕದ ರಾಜಕೀಯ ಇತಿಹಾಸವನ್ನು ತಿಳಿಯಲು ಬಹಳ ಪ್ರಮುಖವಾಗಿದೆ. ಇವರು ಮೂಲಭೂತ ಶಾಸನಗಳ ಆಧಾರಗಳಿಂದ ಕರ್ನಾಟಕದ ರಾಜಕೀಯ ಇತಿಹಾಸವನ್ನು ಚಿತ್ರಿಸಿದ್ದಾರೆ. ಕದಂಬ, ಚಾಲುಕ್ಯ, ಗಂಗ, ನೊಳಂಬ ಮತ್ತು ಬಾಣರಸರ ಕುರಿತಾದ ಇತಿಹಾಸವು ಕೋಲಾರ ಜಿಲ್ಲೆಗೆ ಹೊಂದಿಕೊಂಡಂತೆ ದೊರೆಯುತ್ತದೆ.

ಗಂಗ ಅರಸರ ಕುರಿತಾದ ಸಂಪೂರ್ಣ ಮಾಹಿತಿಯನ್ನು ಡಾ.ದೇವರಕೊಂಡಾ ರೆಡ್ಡಿಯವರು ನೀಡಿದ್ದಾರೆ. ಗಂಗರಸ ಕುರಿತಾದ ವಿವಿಧ ಲೇಖನಗಳಲ್ಲೂ ಮತ್ತು ಗಂಗ ಅರಸರ ದೇವಾಲಯಗಳ ಕುರಿತಾದ ಪ್ರೌಢ ಪ್ರಬಂಧದಲ್ಲಿ ಗಂಗರ ಇತಿಹಾಸವನ್ನು ಇವರು ನೀಡಿದ್ದಾರೆ. ೧೯೯೪ರಲ್ಲಿ 'ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ' ಎಂಬ ಶೀರ್ಷಿಕೆಯಡಿ 'ಕನ್ನಡ ಸಾಹಿತ್ಯ ಪರಿಷತ್ತು' ಇವರ ಪ್ರೌಢ ಪ್ರಬಂಧವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಈ ಪುಸ್ತಕವು ಗಂಗರಿಗೆ ಸಂಬಂಧಿಸಿದಂತಹ ಸ್ಥಳನಾಮಗಳ ಪರಿಚಯವನ್ನು ನೀಡುತ್ತದೆ.

Inscriptions of Western Gangas ಕೃತಿಯಲ್ಲಿ ಕೆ.ವಿ.ರಮೇಶ್‌ರವರು ಗಂಗರಸರಿಗೆ ಸಂಬಂಧಿಸಿದಂತಹ ಹಲವಾರು ಶಾಸನಗಳನ್ನು ಇಂಗ್ಲೀಷ್ ಅನುವಾದದೊಂದಿಗೆ ಪ್ರಕಟಿಸಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ದೊರೆಯುವಂತಹ ಶಾಸನಗಳನ್ನು ಈ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

ಬಾಣರಸರ ಕುರಿತಾದ ವಿಸ್ತೃತ ಮಾಹಿತಿಯನ್ನು ಡಾ.ಪಿ.ವಿ.ಕೃಷ್ಣಮೂರ್ತಿಯವರು ನೀಡಿದ್ದಾರೆ. ಅವರು ಡಿ.ಲಿಟ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಿದ 'ಬಾಣರಸರ ಶಾಸನಗಳು ಒಂದು ಅಧ್ಯಯನ' ಕೃತಿಯು ಕೋಲಾರ ಜಿಲ್ಲೆಗೆ ಬಾಣರಸರ ಕೊಡುಗೆಯನ್ನು ತಿಳಿಯಲು ಬಹಳ ಉಪಕಾರಿಯಾಗಿದೆ.

ನೊಳಂಬರ ಇತಿಹಾಸವನ್ನು ಸಂಶೋಧಕಿ ಡಾ.ಜಯಮ್ಮ ಕರಿಯಣ್ಣ ಅವರು ನೀಡಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ 'ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯು ನೊಳಂಬರ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ. ನೊಳಂಬರಸರು ಕೋಲಾರ ಜಿಲ್ಲೆಗೆ ನೀಡಿರುವ ಕೊಡುಗೆಯನ್ನು ತಿಳಿಯಲು ಈ ಪುಸ್ತಕವು ಸಹಾಯವಾಗಿದೆ. ಇದಲ್ಲದೆಯೇ 'ಇತಿಹಾಸ ದರ್ಶನ' ಮೊದಲಾದ ನಿಯತ ಕಾಲಿಕೆಗಳಲ್ಲೂ 'ಕನ್ನಡ ವಿಷಯ ವಿಶ್ವಕೋಶ', 'ಕರ್ನಾಟಕ ಇತಿಹಾಸ ಮತ್ತು ಪುರಾತತ್ವ' ಮೊದಲಾದ ಕೃತಿಗಳಲ್ಲಿ ಕೋಲಾರ ಜಿಲ್ಲೆಗೆ ಸಂಬಂಧಿಸಿರುವಂತಹ ಹಲವಾರು ಲೇಖನಗಳು ಪ್ರಕಟಗೊಂಡಿವೆ.

ರಾಷ್ಟ್ರಕೂಟರ ಕುರಿತಾದ ಸಂಶೋಧನೆಯನ್ನು ಡಾ.ಭಾರತಿ.ಬಿ.ಆರ್.ರವರು ಡಾ.ದೇವರ ಕೊಂಡಾ ರೆಡ್ಡಿಯವರ ಮಾರ್ಗದರ್ಶನದಲ್ಲಿ ಮಂಡಿಸಿದ್ದಾರೆ. ಕೋಲಾರಕ್ಕೂ ರಾಷ್ಟ್ರಕೂಟರಿಗೂ ಇರುವಂತಹ ಸಂಬಂಧವನ್ನು ತಿಳಿಯಲು ಈ ಪ್ರೌಢಪ್ರಬಂಧವು ಸಹಕಾರಿಯಾಗಿದೆ.

ಕೋಲಾರ ಜಿಲ್ಲೆಯ ವೀರಗಲ್ಲುಗಳ ಕುರಿತಾಗಿ ಡಾ.ಆರ್.ಶೇಷಶಾಸ್ತ್ರೀಯವರು ಮಾಹಿತಿಯನ್ನು ಒದಗಿಸಿದ್ದಾರೆ. 'ಕರ್ನಾಟಕದ ವೀರಗಲ್ಲುಗಳು' ಪುಸ್ತಕದಲ್ಲಿ ಇವರು ಸಾಂದರ್ಭಿಕವಾಗಿ ಕೋಲಾರ ಜಿಲ್ಲೆಯ ವೈಶಿಷ್ಟ್ಯವನ್ನು

ಸೂಚಿಸಿದ್ದಾರೆ. ಈ ಎಲ್ಲಾ ಕೃತಿಗಳು ಕೋಲಾರಕ್ಕೆ ಸಂಬಂಧಿಸಿದಂತವು ನೇರವಾದಂತಹ ಮಾಹಿತಿಯನ್ನು ನೀಡುವುದಿಲ್ಲವಾದರೂ ಸಾಂದರ್ಭಿಕವಾಗಿ ಹೆಚ್ಚಿನ ವಿಚಾರಗಳು ನಮ್ಮ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಕೋಲಾರ ಜಿಲ್ಲೆಯ ಐತಿಹ್ಯಗಳ ಕುರಿತಾಗಿ ಡಾ.ಲಕ್ಷ್ಮೀದೇವಿ.ಎಲ್. ಅವರು ಪ್ರೌಢಪ್ರಬಂಧವನ್ನು ಪ್ರಕಟಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿರುವ ಈ ಪ್ರೌಢಪ್ರಬಂಧವು ಕೋಲಾರದ ಸ್ಥಳನಾಮಗಳ ಕುರಿತಾಗಿ ಮಾಹಿತಿಯನ್ನು ನೀಡುತ್ತದೆ. ಇದೇ ರೀತಿಯಾಗಿ ಸ್ಥಳನಾಮಗಳ ಕುರಿತಾಗಿ ವಿ.ಗೋಪಾಲಕೃಷ್ಣರವರು 'ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಮಾಜೋ ಭಾಷಿಕ ಅಧ್ಯಯನ" ಎಂಬ ಪಿಎಚ್.ಡಿ. ಪ್ರೌಢಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಸ್ಥಳನಾಮಗಳ ಕುರಿತಾದ ಇನ್ನೊಂದು ಪ್ರೌಢ ಕೃತಿ ಎಂದರೆ ಕೆ.ಆರ್.ನರಸಿಂಹನ್ ಅವರ ಬರೆದಿರುವಂತಹ 'ಕುವಳಾಲ – ಕೋಲಾರ ಜಿಲ್ಲೆಯ ಚಾರಿತ್ರಿಕ ಚಿತ್ರಗಳು' ೨೦೧೦ರಲ್ಲಿ ನಡೆದ ೧೦ನೇ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈ ಕೃತಿಯನ್ನು ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರ ಪ್ರಕಟಿಸಲಾಗಿದೆ. ಈ ಎಲ್ಲಾ ಪುಸ್ತಕಗಳನ್ನು ಗಮನಿಸಿದರೆ ಶಾಸನಗಳನ್ನೇ ಪ್ರಧಾನವಾಗಿಟ್ಟುಕೊಂಡು ಅಧ್ಯಯನಗಳು ನಡೆದ ಹಾಗೆ ಕಂಡುಬರುವುದಿಲ್ಲ. ಆ ನಿಟ್ಟಿನಲ್ಲಿ ಈ ಅಧ್ಯಯನವು ಪ್ರಥಮವಾಗಿದೆಯೆಂದು ನಮ್ಮ ಅನಿಸಿಕೆ.

೧.೬ ಅಧ್ಯಯನದ ಆಕರಗಳು

ನನ್ನ ಅಧ್ಯಯನದ ಶಿರೋನಾಮೆಯಂತೆ ಶಾಸನಗಳನ್ನು ಪ್ರಧಾನ ಆಕರವನ್ನಾಗಿರಿಸಿ ಕೊಳ್ಳಲಾಗಿದೆ. ಯಾವುದೇ ಪ್ರದೇಶದ ಇತಿಹಾಸವನ್ನು ಅರಿಯಬೇಕಾದರೆ ಶಾಸನಗಳೇ ಪ್ರಮುಖ ಆಧಾರಗಳು. ಪ್ರಮುಖವಾಗಿ ಕನ್ನಡ ಶಾಸನಗಳನ್ನೇ ಆಧಾರವಾಗಿರಿಸಿ ಕೊಂಡಿದ್ದರೂ, ಸಮಕಾಲೀನವಾದ ಸಂಸ್ಕೃತ–ತಮಿಳು ಶಾಸನಗಳನ್ನು ಬಳಸಿಕೊಳ್ಳಲಾಗಿದ್ದು, ಆಯಾ ಪ್ರದೇಶದಲ್ಲಿ ದೊರಕುವಂತಹ ಕನ್ನಡ–ತಮಿಳು–ಸಂಸ್ಕೃತ ಶಾಸನಗಳನ್ನು ಪ್ರಧಾನವಾಗಿ ಬಳಸಿಕೊಳ್ಳಲಾಗಿದೆ. ತಮಿಳು ಮತ್ತು ಸಂಸ್ಕೃತ ಶಾಸನಗಳ ಅಧ್ಯಯನವನ್ನು ಮಾಡುವಂತಹ ಸಂದರ್ಭದಲ್ಲಿ ಆಂಗ್ಲ ಭಾಷೆಯ ಭಾಷಾಂತರಗಳನ್ನಲ್ಲದೆಯೇ ಭಾಷಾ ವಿದ್ವಾಂಸರ ಸಲಹೆಯನ್ನು ಪಡೆಯಲಾಗಿದೆ.

ಶಾಸನಗಳನ್ನು ದಾನ ಶಾಸನಗಳು, ಪ್ರಶಸ್ತಿ ಶಾಸನಗಳು ಮತ್ತು ಸ್ಮಾರಕ ಶಾಸನಗಳನ್ನಾಗಿ ವಿಭಾಗಿಸಿಕೊಂಡು ಕೂಲಂಕುಷವಾಗಿ ಅಧ್ಯಯನ ನಡೆಸಲಾಗಿದೆ. ಇದರೊಂದಿಗೆ ಶಾಸನಗಳನ್ನು ರಾಜಮನೆತನಗಳ ಮತ್ತು ಕಾಲಗಳ ಆಧಾರದೊಂದಿಗೆ ವಿಂಗಡಿಸಲಾಗಿದೆ. ದಾನಶಾಸನಗಳಲ್ಲಿ ತಾಮ್ರ ಶಾಸನಗಳ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಸ್ಮಾರಕಗಳಲ್ಲಿ ಹಲವಾರು ವಿಭಾಗಗಳಿದ್ದು, ಕೋಲಾರ ಜಿಲ್ಲೆಯಲ್ಲಿ ಪ್ರಮುಖವಾಗಿ ದೊರಕುವಂತಹ ವೀರಗಲ್ಲು, ಊರಳಿವು, ಪೆಣ್ಬುಯಲ್ ಮೊದಲಾದ ಶಾಸನಗಳನ್ನು ಬಳಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಕೋಲಾರ ತಾಲ್ಲೂಕಿನಲ್ಲಿ ೨೦೩, ಮುಳಬಾಗಿಲು ತಾಲ್ಲೂಕಿನಲ್ಲಿ ೨೧೬, ಬಂಗಾರಪೇಟೆ ತಾಲ್ಲೂಕಿನಲ್ಲಿ ೬೫, ಮಾಲೂರು ತಾಲ್ಲೂಕಿನಲ್ಲಿ ೧೨೭, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ೧೨೦ ಶಾಸನಗಳು ದೊರಕಿದ್ದು ಇವುಗಳು ಎಪಿಗ್ರಾಫಿಯಾ ಕರ್ನಾಟಕದಲ್ಲಿ ಪ್ರಕಟಗೊಂಡಿದೆ. ಇವುಗಳನ್ನು ಮೂಲ ಆಕರನ್ನಾಗಿರಿಸಿಕೊಂಡು ಕೋಲಾರ ಜಿಲ್ಲೆಯ ರಾಜಕೀಯ, ಸಾಮಾಜಿಕ ಚಿತ್ರಣವನ್ನು ಕಟ್ಟಲು ಪ್ರಯತ್ನಿಸಲಾಗಿದೆ.

ಕರ್ನಾಟಕದ ಶಾಸನ ಪಿತಾಮಹ ಬಿ.ಎಲ್.ರೈಸ್‌ರವರು ಪ್ರಕಟಿಸಿದಂತಹ ಎಪಿಗ್ರಾಫಿಯಾ ಕರ್ನಾಟಕದ ೧೦ನೆಯ ಸಂಪುಟವು ಕೋಲಾರ ಜಿಲ್ಲೆಯ ಶಾಸನಗಳ ಸಂಪೂರ್ಣ ಸಂಗ್ರಹವನ್ನೊಳ ಗೊಂಡಿದೆ. ಇದರ

ಸಪ್ಲಿಮೆಂಟರಿ ಸಂಪುಟವೂ ಕೋಲಾರ ಜಿಲ್ಲೆಯ ಶಾಸನಗಳನ್ನೊಳ ಗೊಂಡಿದೆ. ಇತಿಹಾಸ ದರ್ಶನ ಸಂಪುಟದಲ್ಲಿ ಪ್ರಕಟವಾದಂತಹ ಕೋಲಾರ ಜಿಲ್ಲಾ ಸಂಬಂಧಿ ಹಲವಾರು ಲೇಖನಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಅದಲ್ಲದೆಯೇ ಹಲವಾರು ವಿದ್ವಾಂಸರುಗಳ ಪುಸ್ತಕಗಳಲ್ಲಿ ಪ್ರಕಟವಾದಂತಹ ಲೇಖನಗಳನ್ನು ಯಥೋಚಿತವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ಸರಕಾರವು ಪ್ರಕಟಿಸಿರುವಂತಹ ಕೋಲಾರ ಜಿಲ್ಲಾ ಗ್ಯಾಸೆಟಿಯರ್‌ನ್ನು ತಪ್ಪದೇ ಅಧ್ಯಯನಕ್ಕೆ ಬಳಸಲಾಗಿದೆ.

ಅಧ್ಯಯನವು ಕ್ಷೇತ್ರಕಾರ್ಯವಿಲ್ಲದೇ ಸಂಪೂರ್ಣವಾಗುವುದಿಲ್ಲ. ಆ ದೃಷ್ಟಿಯಿಂದ ಕೋಲಾರ ಜಿಲ್ಲೆಯ ಕೆಲವು ಆಯ್ದ ಸ್ಥಳಗಳ ಕ್ಷೇತ್ರಕಾರ್ಯವನ್ನು ಮಾಡುವ ಮೂಲಕ ಪ್ರತ್ಯಕ್ಷವಾಗಿ ಅಧ್ಯಯನದ ಅನುಭವವನ್ನು ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಅಡಿ ಟಿಪ್ಪಣಿ

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೧

ಅಧ್ಯಾಯ – ೨

ಶಾಸನಗಳಲ್ಲಿ ಇತಿಹಾಸ

೨.೧ ಕೋಲಾರ ಜಿಲ್ಲೆಯ ಇತಿಹಾಸ ಪರಿಚಯ

೨.೨ ಕೋಲಾರ ಜಿಲ್ಲೆಯ ರಾಜಕೀಯ ಇತಿಹಾಸ

೨.೩ ಪ್ರಾಚೀನ ಆಡಳಿತ ವಿಭಾಗಗಳು

೨.೪ ಶಾಸನೋಕ್ತ ಸ್ತ್ರೀಯರು

ಅಧ್ಯಾಯ – ೨

ಶಾಸನಗಳಲ್ಲಿ ಇತಿಹಾಸ

೨.೧ ಕೋಲಾರ ಜಿಲ್ಲೆಯ ಇತಿಹಾಸ ಪರಿಚಯ :

ಕೋಲಾರ ಜಿಲ್ಲೆಯು ಕಾಲದಿಂದ ಕಾಲಕ್ಕೆ ಗಂಗ-೬೦೦೦ (೯೬೦೦೦), ಕುವಳಾಲ ನಾಡು, ನೊಳಂಬವಾಡಿ-೨೦೦, ಮುಳುವಾಯಿರಾಜ್ಯ, ನಿಕಿರಿಲಿ ಚೋಳಮಂಡಲ ಮೊದಲಾದ ಹೆಸರುಗಳ ಆಡಳಿತ ವಿಭಾಗಗಳಾಗಿ ವಿಭಾಗವಾಗಿತ್ತು. ಇತಿಹಾಸ ಪೂರ್ವ ಕಾಲದಲ್ಲೂ ಮತ್ತು ಇತಿಹಾಸೋತ್ತರ ಕಾಲದಲ್ಲೂ ಕೋಲಾರ ಜಿಲ್ಲೆಯ ಹಲವಾರು ಪ್ರದೇಶಗಳು ಅತಿ ಪ್ರಸಿದ್ಧಿಯನ್ನು ಪಡೆದಂತಹ ಪ್ರದೇಶಗಳಾಗಿದ್ದವು. ಬಹುಪ್ರಾಚೀನ ಮತ್ತು ಶ್ರೀಮಂತ ಇತಿಹಾಸವನ್ನು ಹೊಂದಿದ್ದಂತಹ ಈ ಜಿಲ್ಲೆಯು ಪುರಾತನ ಕಾಲದಿಂದಲೂ ಮಾನವನ ನೆಲೆಯನ್ನು ಹೊಂದಿದ್ದಂತಹ ಪ್ರದೇಶವಾಗಿತ್ತು. ಈ ಜಿಲ್ಲೆಯ ಹೆಚ್ಚಿನ ಸ್ಥಳಗಳು, ಸ್ಥಳೈತಿಹ್ಯಗಳನ್ನು ಹೊಂದಿದ್ದು, ರಾಮಾಯಣ ಮತ್ತು ಮಹಾಭಾರತ ಕಾಲದಲ್ಲಿ ನಡೆದಂತಹ ಹಲವಾರು ಘಟನೆಗಳಿಗೆ ಆಶ್ರಯ ತಾಣವಾಗಿದೆ.

ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ, ಮಾಲೂರು ಮತ್ತು ಕೋಲಾರ ತಾಲ್ಲೂಕುಗಳನ್ನೊಳಗೊಂಡ ಕೋಲಾರ ಜಿಲ್ಲೆಯು ೨೦೦೭ ಇಸವಿ ಸೆಪ್ಟೆಂಬರ್ ತಿಂಗಳ ೧೦ರಂದು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳೆಂದು ವಿಭಾಗಗಳಾಗಿ ವಿಭಜಿತವಾಯಿತು. ಅನೇಕ ಕೆರೆಗಳು, ಬೆಟ್ಟಗುಡ್ಡಗಳು, ಸುಂದರವಾದ ಬಯಲು ಪ್ರದೇಶ, ಅರಣ್ಯ ಮತ್ತು ಗಣಿ ಪ್ರದೇಶಗಳನ್ನು ಹೊಂದಿರುವಂತಹ ಈ ಕೋಲಾರ ಜಿಲ್ಲೆಯು 'ಕರ್ನಾಟಕದ ಉದಯನಾಡು' ಎಂದು ಪ್ರಸಿದ್ಧವಾಗಿದೆ. ಚಿಕ್ಕತಿರುಪತಿ, ಆವನಿ, ಕೋಲಾರ, ಮುಳಬಾಗಿಲು ಮೊದಲಾದ ಪುಣ್ಯಕ್ಷೇತ್ರಗಳನ್ನು ಹೊಂದಿರುವಂತಹ ಈ ಜಿಲ್ಲೆಯು 'ಬಂಗಾರದ ಭೂಮಿ' ಎಂದು ಜಗತ್ಪ್ರಸಿದ್ಧವಾಗಿದೆ.

ಒಂದು ಪ್ರದೇಶದ ಇತಿಹಾಸವನ್ನು ಅರಿಯುವ ಸಂದರ್ಭದಲ್ಲಿ ಆ ಪ್ರದೇಶದ ಪೌರಾಣಿಕ ಹಿನ್ನೆಲೆಯ ನಂತರ ಇತಿಹಾಸವು ಪ್ರಧಾನವಾದ ಸ್ಥಾನವನ್ನು ಪಡೆಯುತ್ತದೆ. ಈ ಇತಿಹಾಸಕ್ಕಿಂತಲೂ ಮೊದಲು ನಾಗರೀಕತೆಯ ಹಲವಾರು ಕುರುಹುಗಳನ್ನು ನೀಡುವಂತಹ ಯುಗವೊಂದಿತ್ತು. ಶಿಲೆಗಳನ್ನೇ ಆಯುಧ ಹಾಗೂ ಆಧಾರವಾಗಿಟ್ಟುಕೊಂಡು ಆ ಕಾಲದಲ್ಲಿ ಜನರು ಜೀವನ ನಿರ್ವಹಿಸಿದ್ದರು. ಇತಿಹಾಸಕ್ಕಿಂತ ಪ್ರಾಚೀನವಾದ ಕಾಲವನ್ನು ನೂತನ ಶಿಲಾಯುಗ, ತಾಮ್ರಯುಗ ಮತ್ತು ಬೃಹತ್ ಶಿಲಾಯುಗವೆಂದು ವಿಂಗಡಿಸಲಾಗಿದೆ"[೧] ಈ ಎಲ್ಲ ಕಾಲಗಳನ್ನು ಕ್ರೂಢೀಕರಿಸಿ ಪುರಾತತ್ವ ಅಥವಾ ಪ್ರಾಕ್ತನ ಕಾಲವೆಂದು ಕರೆಯುತ್ತಾರೆ. ಈ ಕಾಲಕ್ಕೆ ಸಂಬಂಧಿಸಿದಂತಹ ಪ್ರದೇಶಗಳಿಗೆ ಪುರಾತತ್ವ ನೆಲೆಗಳೆಂದೂ ಇಲ್ಲಿ ದೊರಕುವಂತಹ ಜನರ ಜನಜೀವನಕ್ಕೆ ಸಂಬಂಧಿಸಿದಂತಹ ಕುರುಹುಗಳನ್ನು ಪುರಾತತ್ವ ಕುರುಹುಗಳೆಂದು ಕರೆಯುತ್ತಾರೆ.

೨.೧.೧. ಪುರಾತತ್ವ ನೆಲೆಗಳು :

ಕೋಲಾರ ಜಿಲ್ಲೆಯು ಭವ್ಯವಾದ ಐತಿಹ್ಯವನ್ನು ಹೊಂದಿರುವಂತೆಯೇ ಪುರಾತತ್ವ ವಿಷಯದಲ್ಲೂ ವಿಸ್ತಾರತೆಯನ್ನು ಹೊಂದಿದೆ. ಪುರಾತತ್ವ ವಿದ್ವಾಂಸರು ಕೋಲಾರ ಜಿಲ್ಲೆಯ ಕೂಲಂಕುಷ ಅಧ್ಯಯನವನ್ನು ನಡೆಸಿ

ಅತ್ಯಧಿಕ ಪುರಾತತ್ವ ನೆಲೆಗಳನ್ನು ಸಂಶೋಧಿಸಿದ್ದಾರೆ. ದಕ್ಷಿಣ ಭಾರತದಲ್ಲಿ ಅತ್ಯಧಿಕ ಪುರಾತತ್ವ ನೆಲೆಗಳನ್ನು ಹೊಂದಿರುವಂತಹ ಪ್ರದೇಶವೆಂದು ಪ್ರಸಿದ್ಧಿಯನ್ನು ಪಡೆದಿರುವಂತಹ ಕೋಲಾರ ಜಿಲ್ಲೆಯು ತನ್ನ ಪ್ರಾಚೀನತೆಯನ್ನು ದೃಢಪಡಿಸಿದೆ. ನೂತನ ಶಿಲಾಯುಗ, ತಾಮ್ರಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತೆ ಎಲ್ಲ ಕಾಲಕ್ಕೂ ಒಳಪಡುವಂತಹ ಪುರಾತತ್ವ ನೆಲೆಗಳು ಮತ್ತು ಕುರುಹುಗಳು ಪತ್ತೆಯಾಗಿವೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತಹ ಮೊದಲ ಕುರುಹನ್ನು ವಿದೇಶಿಯ ವಿದ್ವಾಂಸರು ಪತ್ತೆ ಹಚ್ಚಿದ್ದರೆ, ಅಲ್ಲಿಂದೀಚೆಗೆ ಇತರ ತಾಲ್ಲೂಕುಗಳಲ್ಲೂ ಪುರಾತತ್ವ ನೆಲೆಗಳ ಸೂಕ್ಷ್ಮ ಅಧ್ಯಯನ ನಡೆಸಿ ಈ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಜನರು ವಾಸಿಸುತ್ತಿದ್ದರೆಂದು ತೀರ್ಮಾನಿಸಿದ್ದಾರೆ. ಕೋಲಾರ ಮತ್ತು ಬಂಗಾರಪೇಟೆಯ ತಾಲ್ಲೂಕುಗಳಲ್ಲೂ ಇಂತಹ ಕುರುಹುಗಳು ಪತ್ತೆಯಾಗಿವೆ.

ಶಿಲಾಯುಗದಲ್ಲಿ ಮಾನವರ ಅವಿಭಾಜ್ಯ ಅಂಗವಾಗಿದ್ದಂತಹ ಶಿಲೆಗಳೊಂದಿಗೆ ಲೋಹಗಳು ಪ್ರವೇಶವಾದವು. ಹಾಗಾಗಿ ಪುರಾತತ್ವ ಶಾಸ್ತ್ರಜ್ಞರು ಮುಂದಿನ ಘಟ್ಟಕ್ಕೆ 'ಶಿಲಾ ತಾಮ್ರಯುಗ'ವೆಂದು ಹೆಸರು ನೀಡಿದ್ದಾರೆ. ಶಿಲೆಗಳು ಮತ್ತು ಅವುಗಳ ಉಪಕರಣಗಳೊಂದಿಗೆ ಲೋಹದ ಉಪಕರಣಗಳು ಮಾನವನ ಅವಿಭಾಜ್ಯ ಅಂಗವಾಗಿ ಮಾರ್ಪಾಡಾದವು. ಈ ಯುಗಕ್ಕೆ ಸಂಬಂಧಿಸಿದಂತೆ ನಿಖರವಾದ ಮಾಹಿತಿಗಳು ಕೋಲಾರ ಜಿಲ್ಲೆಯಲ್ಲಿ ದೊರೆಯುತ್ತಿಲ್ಲ. ಆದರೆ ಈ ಯುಗಕ್ಕೆ ಪೂರಕವಾಗಿರುವಂತಹ ಒಂದು ಮಾಹಿತಿಯನ್ನು ಪುರಾತತ್ವ ವಿದ್ವಾಂಸರಾದ ಜಾನ್‌ಮಾರ್ಷಲ್ ಅವರು ಕ್ರಿಶ. ೧೯೨೮ರಲ್ಲಿ ಇಂಡಿಯನ್ ಆರ್ಕಿಯಾಲಜಿ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಸಿಂಧೂ ನಾಗರಿಕತೆಯು ಕ್ರಿಸ್ತಪೂರ್ವ ೨೮೦೦ರಿಂದ ಕ್ರಿ.ಪೂ.೧೫೦೦ರವರೆಗೆ ಭಾರತ ದೇಶದ ವಾಯುವ್ಯ ಪ್ರಾಂತ್ಯದಲ್ಲಿ ಅಂದರೆ ಈಗಿನ ಪಾಕಿಸ್ತಾನ ಮತ್ತು ಭಾರತ ದೇಶದ ಗಡಿ ಪ್ರದೇಶಗಳಲ್ಲಿ ನೆಲೆಸಿತ್ತು. ಹರಪ್ಪ ಮತ್ತು ಮಹೆಂಜೋದಾರೋ ಎಂಬುವುದು ಆ ನಾಗರಿಕತೆಯ ಎರಡು ಪ್ರಮುಖ ಪಟ್ಟಣಗಳಾಗಿದ್ದವು. ಆ ಪ್ರದೇಶಗಳಲ್ಲಿ ಪುರಾತತ್ವ ಶಾಸ್ತ್ರಜ್ಞರು ಉತ್ಖನನ ಮಾಡುವಂತಹ ಸಂದರ್ಭದಲ್ಲಿ ಚಿನ್ನ ಮತ್ತು ಬೆಳ್ಳಿ ಆಭರಣಗಳು ದೊರೆದಿದ್ದವು. ಇಂತಹ ಆಭರಣಗಳನ್ನು ತಯಾರಿಸಲು ಕೋಲಾರದ ಚಿನ್ನದ ಗಣಿಯನ್ನು ಅವಲಂಭಿಸಿದ್ದರು ಮತ್ತು ಇಲ್ಲಿಂದಲೇ ಬಂಗಾರವನ್ನು ಸಂಸ್ಕರಿಸಿ ಈ ಪಟ್ಟಣಗಳಿಗೆ ಸರಬರಾಜು ಮಾಡುತ್ತಿದ್ದರು. ಕೋಲಾರ ಪ್ರದೇಶದಿಂದ ಚಿನ್ನವನ್ನು ಆಮದು ಮಾಡಿಕೊಳ್ಳುತ್ತಿದ್ದರು. ಇದರೊಂದಿಗೆ ಆ ನಾಗರಿಕತೆಯ ಜನರು ಕೋಲಾರದ ಪ್ರದೇಶದೊಂದಿಗೆ ವಾಣಿಜ್ಯದ ಅಥವಾ ವ್ಯಾವಹಾರಿಕ ಸಂಪರ್ಕ ಹೊಂದಿದ್ದರೆಂದು ಅಭಿಪ್ರಾಯವಿದೆ.[೨]

ಪುರಾತತ್ವ ಶಾಸ್ತ್ರದಲ್ಲಿ ಬೃಹತ್ ಶಿಲಾಯುಗವು ಪ್ರಧಾನವಾದ ಕಾಲವಾಗಿದೆ. ಈ ಕಾಲದಲ್ಲಿ ಮನುಷ್ಯರು ಲೋಹದ ಬಳಕೆಯನ್ನು ಚೆನ್ನಾಗಿ ಬಲ್ಲವರಾದುದರಿಂದ ಅದರಲ್ಲೂ ಕಬ್ಬಿಣವನ್ನು ಹೆಚ್ಚಾಗಿ ಬಳಸುತ್ತಿದ್ದುದರಿಂದ ಈ ಯುಗವನ್ನು ಕಬ್ಬಿಣದ ಯುಗವೆಂತಲೂ ಕರೆಯುತ್ತಾರೆ. ಶಿಲೆ ಮತ್ತು ಲೋಹದ ಜೊತೆಗೆ ಬೃಹತ್ ಶಿಲೆಗಳನ್ನು ಬಳಸಲು ಪ್ರಾರಂಭಿಸಿದಂತಹ ಮನುಷ್ಯರು ತಮ್ಮ ಮನೆಗಳ ರಚನೆ, ಸಮಾಧಿಗಳ ರಚನೆಯಲ್ಲಿ ದೊಡ್ಡ ದೊಡ್ಡ ಚಪ್ಪಡಿಕಲ್ಲುಗಳನ್ನು ಬಳಸತೊಡಗಿದ್ದರು.

ಕೋಲಾರ ಜಿಲ್ಲೆಯಲ್ಲಿ ಬಂಗಾರಪೇಟೆ, ಮಾಲೂರು ಮತ್ತು ಮುಳಬಾಗಿಲು ತಾಲ್ಲೂಕುಗಳಲ್ಲಿ ಈ ಯುಗಕ್ಕೆ ಸಂಬಂಧಿಸಿದಂತಹ ಅನೇಕ ಕುರುಹುಗಳನ್ನು ಪುರಾತತ್ವ ವಿದ್ವಾಂಸರು ಪತ್ತೆ ಹಚ್ಚಿದ್ದಾರೆ. ಹಿಂದೆ ತಿಳಿಸಿರುವಂತೆ ಈ ಯುಗದಲ್ಲಿ ಸಮಾಧಿ ನೆಲೆಗಳು ಪ್ರಧಾನವಾಗಿದ್ದವು. ಕೋಲಾರ ಜಿಲ್ಲೆಯಲ್ಲಿ ಇಂತಹ ಸಮಾಧಿ ಸ್ಥಳಗಳು ಅಲ್ಲಲ್ಲಿ ಕಂಡುಬರುತ್ತವೆ. ಕೋಲಾರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಬೃಹತ್

ಶಿಲಾಯುಗಕ್ಕೆ ಸಂಬಂಧಿಸಿದಂತಹ ಕುರುಹುಗಳು ಪತ್ತೆಯಾಗಿವೆ. ಸಮಾಧಿ ನೆಲೆಗಳು, ಕಲ್ಗೋರಿಗಳು, ಮಣ್ಣಿನ ಪಾತ್ರೆಗಳು, ಶಿಲಾ ಉಪಕರಣಗಳು, ವಸತಿ ಗುಂಡಿಗಳು, ಶಿಲಾ ಕೊಡಲಿಗಳು, ಬರಿಗೈಯಿಂದ ತಯಾರಿಸಿದ ಮಡಕೆಗಳು ಈ ಪ್ರದೇಶದಲ್ಲಿ ದೊರಕಿವೆ.[೩]

ಬನಹಳ್ಳಿ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಬನಹಳ್ಳಿ ಗ್ರಾಮವು ಪುರಾತತ್ವ ಶಾಸ್ತ್ರಜ್ಞರಿಗೆ ಸಂಶೋಧನಾ ನೆಲೆಯಾಗಿದೆ. ದಕ್ಷಿಣ ಭಾರತದ ಪುರಾತತ್ವ ನೆಲೆಗಳಲ್ಲಿ ಪ್ರಧಾನವಾದ ನೆಲೆಯಾಗಿದೆ ಮತ್ತು ಅತ್ಯಂತ ವಿಶಾಲವಾದ ಪುರಾತತ್ವ ನೆಲೆಯುಳ್ಳ ಸ್ಥಳವೆಂಬ ಹೆಗ್ಗಳಿಕೆಯನ್ನು ಹೊಂದಿದೆ. ಬೃಹತ್ ಶಿಲಾಯುಗ ಸಂಸ್ಕೃತಿಯ ಕಪ್ಪು, ಕೆಂಪು ಬಣ್ಣದ ಮಡಕೆಯ ಚೂರುಗಳು, ಕಬ್ಬಿಣದ ಉಪಕರಣದ ಅವಶೇಷಗಳು ಈ ಸ್ಥಳದಲ್ಲಿ ಪತ್ತೆಯಾಗಿದೆ. ಈ ಪ್ರದೇಶದ ಸಮೀಪದಲ್ಲಿರುವ ಬೆಳ್ಳಿಗುಡ್ಡವು ವಿಸ್ತಾರವಾಗಿದ್ದು ಪುರಾತತ್ವ ಅಂಶಗಳನ್ನು ಹೊಂದಿವೆ. ಪುರಾತತ್ವ ಶಾಸ್ತ್ರಜ್ಞರು ಇಲ್ಲಿ ದೊರೆಯುವಂತಹ ಅವಶೇಷಗಳನ್ನು ನೂತನ ಶಿಲಾಯುಗ, ಶಿಲಾತಾಮ್ರಯುಗ ಮತ್ತು ಆದಿ ಕಬ್ಬಿಣದ ಯುಗಕ್ಕೆ ಸಂಬಂಧಿಸಿದ ಅವಶೇಷಗಳೆಂದು ವಿಂಗಡಿಸಿದ್ದಾರೆ. ಕಲಾತ್ಮಕವಾದ ಸರಗಳು, ವೈವಿಧ್ಯಮಯ ಮಣ್ಣಿನ ಪಾತ್ರೆಗಳು ದೊರಕಿವೆ. ಸತ್ತ ವ್ಯಕ್ತಿಯ ಶವಸಂಸ್ಕಾರ ಮಾಡುತ್ತಿದ್ದಂತಹ ಸ್ಥಳಗಳು ಮತ್ತು ಅವಕ್ಕೆ ಸಂಬಂಧಿಸಿದಂತಹ ಅವಶೇಷಗಳು ಪತ್ತೆಯಾಗಿವೆ. ಪುರಾತತ್ವ ಶಾಸ್ತ್ರಜ್ಞರಾದ ಬಿ.ನರಸಿಂಹಯ್ಯನವರು ಈ ಪುರಾತತ್ವ ನೆಲೆಯ ಸಂಪೂರ್ಣ ಅಧ್ಯಯನವನ್ನು ನಡೆಸಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳಿರುವುದನ್ನು ದೃಢಪಡಿಸಿದ್ದಾರೆ.[೪]

೨.೧.೨. ಇತಿಹಾಸ ಪೂರ್ವಕಾಲ:

ಮನುಷ್ಯನ ನಾಗರೀಕತೆಯ ಮಜಲುಗಳನ್ನು ಮುಖ್ಯವಾಗಿ ಮೂರು ವಿಭಾಗಗಳನ್ನಾಗಿ ನಿರೂಪಿಸಬಹುದಾಗಿದೆ. ಅದರಲ್ಲೂ ಇತಿಹಾಸವನ್ನು ಪ್ರಧಾನವಾಗಿಟ್ಟುಕೊಂಡು ಈ ಕಾಲವನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದಾಗಿದೆ.[೫] ಅವುಗಳೆಂದರೆ

೧. ಇತಿಹಾಸ ಪೂರ್ವ ಕಾಲ (ಪುರಾತತ್ವ)

೨. ಇತಿಹಾಸ ಆರಂಭಕಾಲ (ಮಧ್ಯಕಾಲ)

೩. ಇತಿಹಾಸ ಕಾಲ (ರಾಜಮನೆತನಗಳ ಕಾಲ)

ಇತಿಹಾಸದ ಪೂರ್ವಕಾಲದ ವಿಚಾರವಾಗಿ ಪುರಾತತ್ವ ನೆಲೆಗಳಲ್ಲಿ ಚರ್ಚಿಸಲಾಯಿತು. ಇತಿಹಾಸದ ಆರಂಭದ ಈ ಕಾಲವನ್ನು ಮಧ್ಯಕಾಲವೆಂದೂ ತಿಳಿಯಬಹುದು. ಇತಿಹಾಸಕಾರರು ಮತ್ತು ಪುರಾತತ್ವ ವಿದ್ವಾಂಸರುಗಳು ಈ ಕಾಲವನ್ನು ಕ್ರಿ.ಪೂ.೪ನೇ ಶತಮಾನದಿಂದ ಕ್ರಿ.ಶ.೩ನೇ ಶತಮಾನದವರೆಗೆ ಎಂದು ಪರಿಗಣಿಸಿದ್ದಾರೆ. ಈ ಕಾಲವನ್ನು ಸಂಕ್ರಮಣಕಾಲವೆಂದು ಕರೆಯಬಹುದಾಗಿದ್ದು, ಮಾನವನು ಒಂದೇ ಸ್ಥಳದಲ್ಲಿ ನೆಲೆನಿಂತು ಗ್ರಾಮೀಣ ಬದುಕನ್ನು ಆರಂಭಿಸಿ ತನ್ನ ಇತಿಹಾಸವನ್ನು ಬರವಣಿಗೆಯ ರೂಪದಲ್ಲಿ ಬರೆಯಲು

ಆರಂಭಿಸಿದ್ದ ಕಾಲವಿದಾಗಿತ್ತು. ಶಿಲಾಯುಗದ ಸಂಸ್ಕೃತಿ ಅಥವಾ ಇತಿಹಾಸ ಪೂರ್ವ ಕಾಲದ ಅಂತ್ಯಭಾಗದಲ್ಲಿ ಕಂಡುಬಂದಿದ್ದ ಅವಶೇಷಗಳು ಪ್ರಧಾನ ಭೂಮಿಕೆಯಾಗಿ ಈ ಕಾಲದಲ್ಲಿ ಗುರುತಿಸಲ್ಪಡುತ್ತವೆ.

ಈ ಮಧ್ಯಂತರ ಕಾಲವು ಕೋಲಾರ ಜಿಲ್ಲೆಯ ಮೇಲೆ ಅಷ್ಟೊಂದು ಪ್ರಭಾವವನ್ನು ನೀಡಿಲ್ಲವೆಂದು ತೋರುತ್ತದೆ. ಕೋಲಾರ ಮತ್ತು ಮುಳಬಾಗಿಲು ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಈ ಕಾಲಕ್ಕೆ ಸಂಬಂಧಿಸಿದಂತಹ ಪುರಾವೆಗಳು ದೊರೆಯುತ್ತವೆ. ಇಂತಹ ಪ್ರದೇಶಗಳು ಒಂದು ಕಾಲದಲ್ಲಿ ಜನವಸತಿಯ ಕೇಂದ್ರವಾಗಿತ್ತೆಂದು ತಿಳಿಯಬಹುದಾಗಿದೆ.

ಮಾಲೂರು ತಾಲ್ಲೂಕಿನ ನೊಸಗೆರೆ ಎಂಬಲ್ಲಿ ಪುರಾತನ ಅವಶೇಷಗಳಿರುವ ಒಂದು ಮಡಕೆ ಪತ್ತೆಯಾಗಿತ್ತು. ಈ ಮಡಕೆಯಲ್ಲಿ ಚಿನ್ನದ ಆಭರಣಗಳು ಮತ್ತು ೩ ರೋಮನ್ ನಾಣ್ಯಗಳು ಕಂಡುಬಂದಿದ್ದವು. ಆದರೆ ಪುರಾತತ್ವ ವಿದ್ವಾಂಸರು ಈ ನಾಣ್ಯಗಳು ರೋಮನ್ ಚಕ್ರವರ್ತಿ ಸಿವೆರಸ್ (ಕ್ರಿ.ಶ.೧೯೨-೨೧೧)ನ ನಾಣ್ಯಗಳ ಅನುಕರಣೆಗಳಾಗಿದ್ದವು ಎಂದು ತೀರ್ಮಾನಿಸಿದ್ದಾರೆ. ಇದೇ ಮಾಲೂರು ತಾಲ್ಲೂಕಿನ ದನಮತ್ತನಹಳ್ಳಿಯಲ್ಲಿ ನೂತನ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳು ಪತ್ತೆಯಾಗಿವೆ.

೨.೧.೩. ಇತಿಹಾಸ ಕಾಲ :

ಲಿಖಿತ ಆಧಾರಗಳನ್ನು ಪ್ರಧಾನವಾಗಿ ಹೊಂದಿರುವ ಕಾಲಘಟ್ಟವೇ ಇತಿಹಾಸ ಕಾಲ. ಶಾಸನಗಳು, ತಾಳೆಗರಿಗಳು, ಐತಿಹಾಸಿಕ ಮಹಾಕಾವ್ಯ ಮೊದಲಾದವುಗಳು ಈ ಕಾಲಘಟ್ಟದ ಪ್ರಧಾನ ಆಧಾರವಾಗಿದ್ದು, ಮನುಷ್ಯನ ಇತಿಹಾಸದ ಸ್ಪಷ್ಟ ಚಿತ್ರಣವನ್ನು ನೀಡುತ್ತಿವೆ. ಶಾಸನಗಳು ಈ ಎಲ್ಲ ಆಕರಗಳಲ್ಲಿ ಪ್ರಧಾನವಾಗಿದ್ದು ಒಂದು ಪ್ರದೇಶದ ಇತಿಹಾಸವನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ.

ಶಾಸನಗಳ ವಿಚಾರವಾಗಿ ವಿದ್ವಾಂಸರಲ್ಲಿ ಹಲವಾರು ಚರ್ಚೆಗಳು ನಡೆದಿವೆ. ಬಹುಕಾಲ ಉಳಿಯಬಲ್ಲ ಶಾಶ್ವತವಾದ ವಸ್ತುವಿನ ಮೇಲೆ ಕೊರೆಯಲ್ಪಟ್ಟ ಬರಹ ಎಂದು ಶಾಸನಕ್ಕೆ ಅರ್ಥವಿದೆ. ಕಲ್ಲು, ತಾಮ್ರ, ಬೆಳ್ಳಿ ಮುಂತಾದ ಲೋಹಗಳ ಮೇಲೆ ಕೊರೆಯಲ್ಪಟ್ಟ ಬರಹಗಳು ಸಹ ಶಾಸನಗಳಾಗಿವೆ.[೬] ಆಜ್ಞೆ ಮಾಡು, ವಿಧಿಸುವುದು ಎಂಬರ್ಥದಲ್ಲಿ ಶಾಸನ ಶಬ್ದವನ್ನು ಬಳಸಿರುವುದು ಕಂಡುಬರುತ್ತದೆ. ರಾಜನ ಆಸ್ಥಾನದಿಂದ ಹೊರಟಂತಹ ಆಜ್ಞೆಗಳನ್ನು ಜನಸಾಮಾನ್ಯರು ತಿಳಿಯಬೇಕೆಂದು ಜನರು ಓಡಾಡುವ ಸ್ಥಳಗಳಲ್ಲಿ ಹಾಕಿಸುತ್ತಿದ್ದರು. ಇಂತಹ ರಾಜಾಜ್ಞೆಗಳನ್ನು ಕಲ್ಲಿನ ಮೇಲೆ ಕೊರೆದು ತಿಳಿಸಲಾಗುತ್ತಿತ್ತು. ಮುಂದಿನ ತಲೆಮಾರಿನವರೆಗೂ ಇದು ತಿಳಿಯಲೆಂದು ಈ ರೀತಿಯಾಗಿ ನಿರ್ಮಿಸಿರಬಹುದು.[೭]

ನಂತರದ ಕಾಲದಲ್ಲಿ ಶಾಸನಗಳ ಸ್ವರೂಪವು ಬದಲಾವಣೆಯಾಯಿತು. ಪ್ರಸಿದ್ಧರಾಜನು ನೀಡುತ್ತಿದ್ದಂತಹ ದತ್ತಿ, ದಾನಗಳು, ಪ್ರಶಸ್ತಿಗಳು ಶಾಸನಗಳಲ್ಲಿ ಸ್ಥಾನವನ್ನು ಪಡೆಯಿತು. ಮುಂದೆ ಒಂದು ಪ್ರದೇಶದ ವೀರರ ನೆನಪಿಗಾಗಿ ಸ್ಮಾರಕಗಳ ರೂಪದಲ್ಲಿ ಕಲ್ಲನ್ನು ನಿರ್ಮಿಸಿ ಆ ವೀರರ ಗುಣಗಾನವನ್ನು ಮಾಡುತ್ತಿದ್ದರು. ಇಂತಹವುಗಳನ್ನು 'ಸ್ಮಾರಕ ಶಾಸನ'ಗಳೆಂದು ಕರೆದಿದ್ದಾರೆ. ಈ ರೀತಿಯಾಗಿ ಕಾಲದಿಂದ ಕಾಲಕ್ಕೆ ಶಾಸನಗಳ ರೂಪಾಂತರವಾಗುತ್ತ ಬಂದಿದೆ. ಕೋಲಾರ ಜಿಲ್ಲೆಯಲ್ಲಿ ಎಲ್ಲ ಪ್ರಕಾರದ ಶಾಸನಗಳು ದೊರೆಕಿವೆ.

ಭಾರತದ ಇತಿಹಾಸವು ಮೌರ್ಯರಿಂದ ಪ್ರಾರಂಭವಾಗಿದೆ. ಮೌರ್ಯರ ದೊರೆ ಅಶೋಕನು ಪ್ರಬಲ ರಾಜನಾಗಿದ್ದು, ದಕ್ಷಿಣ ಭಾರತದ ಕೆಲವು ಭಾಗಗಳನ್ನು ಆಳಿದ್ದನೆಂದು ಆತನಿಗೆ ಸಂಬಂಧಿಸಿದಂತಹ ಶಾಸನಗಳಿಂದ

(ಧರ್ಮಲಿಪಿ) ತಿಳಿದುಬರುತ್ತದೆ. ಕರ್ನಾಟಕ ರಾಜ್ಯದಲ್ಲಿ ಚಿತ್ರದುರ್ಗದ ವರೆಗೆ ಅಶೋಕನ ಸಾಮ್ರಾಜ್ಯವು ಇತ್ತು. ಚಿತ್ರದುರ್ಗದ ಬ್ರಹ್ಮಗಿರಿ ಶಾಸನವು ಅಶೋಕನ ಸಾಮ್ರಾಜ್ಯ ವಿಸ್ತಾರವನ್ನು ನಿರ್ಧರಿಸುತ್ತದೆ. ಅಶೋಕನ ಬಂಡೆಕಲ್ಲು ಶಾಸನಗಳು ಕರ್ನಾಟಕದ ಬಳ್ಳಾರಿ, ಕೊಪ್ಪಳ, ರಾಯಚೂರು, ಚಿತ್ರದುರ್ಗ ಮೊದಲಾದ ಜಿಲ್ಲೆಗಳಲ್ಲಿ ದೊರೆದಿದ್ದು, ಈ ಜಿಲ್ಲೆಗಳು ಕೋಲಾರ ಜಿಲ್ಲೆಯ ಸಮೀಪವಿರುವುದರಿಂದ ಒಂದು ಕಾಲದಲ್ಲಿ ಕೋಲಾರ ಜಿಲ್ಲೆಯೂ ಕೂಡ ಅಶೋಕನ ಆಡಳಿತಕ್ಕೆ ಒಳಪಟ್ಟಿರಬಹುದು. ಆದರೆ ಇದನ್ನು ನಿರ್ಧರಿಸಲು ಯಾವುದೇ ಆಧಾರಗಳು ಈ ಜಿಲ್ಲೆಯಲ್ಲಿ ದೊರಕಿರುವುದಿಲ್ಲ.

ಕರ್ನಾಟಕದ ಇತಿಹಾಸವನ್ನು ಶಾತವಾಹನರಿಂದ ಮೈಸೂರು ಒಡೆಯರ ತನಕವೆಂದು ನಿರ್ಧರಿಸಲಾಗಿದೆ. ಶಾತವಾಹನರು, ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದರಸರು ಮತ್ತು ಮೈಸೂರಿನ ಒಡೆಯರು ಕರ್ನಾಟಕದ ಪ್ರಮುಖ ರಾಜಮನೆತನಗಳಾಗಿವೆ. ಇಂತಹ ರಾಜಮನೆತನದವರಿಗೆ ಹಲವಾರು ಸಾಮಂತರಾಜರು, ಮಾಂಡಳೀಕರು, ಸಣ್ಣ ರಾಜಮನೆತನದವರು ಬೆನ್ನುಲುಬಾಗಿ ನಿಂತಿದ್ದರು. ಕರ್ನಾಟಕದಲ್ಲಿ ಮಹಾಮಂಡಳೇಶ್ವರರ, ಸಾಮಂತರಾಜರ ಭವ್ಯ ಇತಿಹಾಸವು ದೊರೆಯುತ್ತದೆ.

ಪ್ರಸ್ತುತ ಕೋಲಾರ ಜಿಲ್ಲೆಯಲ್ಲಿ ಗಂಗ, ಹೊಯ್ಸಳ, ಚಾಲುಕ್ಯ ಮತ್ತು ವಿಜಯನಗರದರಸರ ಶಾಸನಗಳು ವಿಫುಲವಾಗಿ ದೊರೆತಿವೆ. ಈ ಅರಸು ಮನೆತನದವರಿಗೆ ಸಹಾಯಕರಾಗಿಯೂ ಕೆಲವೊಮ್ಮೆ ವಿರೋಧಿಗಳಾಗಿಯೂ ಇದ್ದುಕೊಂಡು ಆಳ್ವಿಕೆ ನಡೆಸಿದಂತಹ ಬಾಣರಸರ, ನೊಳಂಬರ, ವೈದುಂಬರರ, ಇಳವಂಜಿರಾಯರ ಶಾಸನಗಳೂ ದೊರೆತಿವೆ. ಅದಲ್ಲದೆಯೇ ಕರ್ನಾಟಕದ ಅರಸು ಮನೆತನದವರಿಗೆ ವೈರಿಗಳಾಗಿದ್ದಂತಹ ತಂಜಾವೂರಿನ ಚೋಳರ ಶಾಸನಗಳು ಅಲ್ಲಲ್ಲಿ ಕಂಡುಬರುತ್ತವೆ.

ಪ್ರಸ್ತುತ ನಮ್ಮ ಅಧ್ಯಯನಕ್ಕೆ ಕೋಲಾರ ಪ್ರದೇಶದ ಮತ್ತು ಕಾಲದ ಮಿತಿ ಇರುವುದರಿಂದ ಇತಿಹಾಸದ ಪ್ರಾರಂಭದಿಂದ ೧೩ನೆಯ ಶತಮಾನದವರೆಗೆ ದೊರಕುವಂತಹ ಶಾಸನಗಳನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಹಾಗಾಗಿ ಇತಿಹಾಸದ ಪ್ರಾರಂಭದಿಂದ ಹೊಯ್ಸಳರವರೆಗಿನ ಶಾಸನಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಶಾಸನಗಳ ದೃಷ್ಟಿಯಿಂದ ಗಮನಿಸಿದರೆ ಬಾಣ ವಂಶದ ರಾಜರುಗಳಿಗೆ ಸಂಬಂಧಿಸಿದ ಶಾಸನಗಳು ಮೊದಲು ದೊರಕುತ್ತಿದ್ದು, ಇದರೊಂದಿಗೆ ಸಮಕಾಲೀನರಾದ ಗಂಗ ಅರಸರ ಶಾಸನಗಳು ದೊರೆಯುತ್ತಿವೆ. ಕದಂಬ ಅರಸರಿಗೆ ಮತ್ತು ರಾಷ್ಟ್ರಕೂಟರನ್ನು ಉಲ್ಲೇಖಿಸಿರುವಂತಹ ನೇರವಾದ ಶಾಸನಗಳು ದೊರಕುತ್ತಿಲ್ಲವಾದರೂ ಕದಂಬ ಮತ್ತು ರಾಷ್ಟ್ರಕೂಟರ ಆಡಳಿತವು ಕೋಲಾರ ಜಿಲ್ಲೆಯ ಮೇಲೆ ಪ್ರಭಾವ ಬೀರಿತ್ತು.

೨.೨ ರಾಜಕೀಯ ಇತಿಹಾಸ

೨.೨.೧ ಕದಂಬರು :

ವೈಜಯಂತಿ ಎಂಬ ನಾಮಾಂತರ ಉಳ್ಳಂತಹ ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು ಕದಂಬರೆಂಬ ಕರ್ನಾಟಕದ ಮೊದಲ ಕನ್ನಡ ರಾಜಮನೆತನವು ಸುಮಾರು ಕ್ರಿ.ಶ.೩೪೫ಕ್ಕೆ ಉದಯವಾಯಿತು. ಈ ವಂಶದ ಮಯೂರ(ಶರ್ಮ)ವರ್ಮನು ಕರ್ನಾಟಕದ ಮೊದಲ ದೊರೆಯೆಂಬ ಹೆಗ್ಗಳಿಕೆಯನ್ನು ಪಡೆದಿದ್ದನು. ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು ಮಧ್ಯ ಕರ್ನಾಟಕದ ಪ್ರದೇಶಗಳ ಹಲವಾರು ಭಾಗಗಳನ್ನು ಆಳಿದಂತಹ ಕದಂಬರು ಕರ್ನಾಟಕದ ಭವ್ಯ ಇತಿಹಾಸಕ್ಕೆ ಅಡಿಪಾಯವನ್ನು ಹಾಕಿದವರಾಗಿದ್ದರು. ಕನ್ನಡದ ಮೊದಲ ಶಿಲಾಶಾಸನ ಹಲ್ಮಿಡಿ ಶಾಸನವು ಕದಂಬ ದೊರೆ ಕಾಕುಸ್ಥವರ್ಮನ ಕಾಲದ್ದಾಗಿದ್ದು, ಭಾಷಾ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ. ಈ ರೀತಿಯಾಗಿ ಹಲವಾರು ಪ್ರಥಮಗಳಿಗೆ ಸಾಕ್ಷಿಯಾದಂತಹ ಈ ರಾಜವಂಶವು ಮಯೂರವರ್ಮ (ಕ್ರಿ.ಶ.೩೪೫–೩೬೫), ಕಂಗವರ್ಮ (ಕ್ರಿ.ಶ.೩೬೫ರಿಂದ ೪೨೬), ಕಾಕುಸ್ಥವರ್ಮ (ಕ್ರಿ.ಶ.೪೨೫ರಿಂದ ೪೫೦) ಮೃಗೇಶವರ್ಮ (ಕ್ರಿ.ಶ.೪೭೫–೪೯೦), ರವಿವರ್ಮ (ಕ್ರಿ.ಶ.೪೯೦ರಿಂದ ೫೨೦) ಮೊದಲಾದಂತಹ ಪ್ರಸಿದ್ಧ ರಾಜರುಗಳನ್ನು ಪೋಷಿಸಿ ಕೀರ್ತಿ ತರುವಂತೆ ಮಾಡಿದೆ.[೮]

ಕರ್ನಾಟಕದ ಉತ್ತರಭಾಗದಲ್ಲಿ ಬನವಾಸಿಯನ್ನು ರಾಜಧಾನಿಯನ್ನಾಗಿರಿಸಿಕೊಂಡು ಸ್ಥಾಪಿತವಾದಂತಹ ಕದಂಬ ರಾಜಮನೆತನವು ಪ್ರಭುತ್ವವನ್ನು ಸ್ಥಾಪಿಸಿದಂತಹ ಸಂದರ್ಭದಲ್ಲಿಯೇ ಕರ್ನಾಟಕದ ದಕ್ಷಿಣದ ಭಾಗದಲ್ಲಿ ಗಂಗ ವಂಶವು ಉದಯವಾಯಿತು. ಹಾಗಾಗಿ ಕದಂಬರೂ ಮತ್ತು ಗಂಗ ಮನೆತನದವರೂ ಸಮಕಾಲೀನರಾಗಿದ್ದರು. ಆದರೆ ಇವರಿಬ್ಬರ ನಡುವೆ ರಾಜಕೀಯವಾಗಿ ಯಾವುದೇ ರೀತಿಯಾದಂತಹ ದ್ವೇಷಗಳು ಇರಲಿಲ್ಲ. ಕ್ರಿ.ಶ.೩೪೫ರಿಂದ ಸುಮಾರು ಕ್ರಿ.ಶ.೫೪೦ರ ತನಕ ಆಳಿದಂತಹ ಕದಂಬರು ಬಾದಾಮಿ ಚಾಲುಕ್ಯರ ಏಳ್ಗೆ ನಂತರ ಪತನವನ್ನು ಹೊಂದಿದ್ದರು.

ಕದಂಬರು ಮತ್ತು ಗಂಗರು ಸಮಕಾಲೀನರಾದುದರಿಂದ ಕೋಲಾರ ಪ್ರದೇಶವೂ ಸಂಪೂರ್ಣವಾಗಿ ಗಂಗರ ಆಡಳಿತಕ್ಕೆ ಒಳಪಟ್ಟಿತ್ತು. ಕದಂಬರು ಗಂಗರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದವರಾಗಿದ್ದು, ಪರಸ್ಪರ ಸಂಬಂಧಿಗಳಾಗಿ ರಾಜ್ಯಭಾರವನ್ನು ಮಾಡಿದಂತೆ ಗೋಚರವಾಗುತ್ತದೆ. ಕದಂಬರ ಆಡಳಿತವು ೬ನೇಯ ಶತಮಾನದ ಮಧ್ಯಭಾಗದಲ್ಲಿ ಪತನವಾದರೆ ಗಂಗ ಮನೆತನವು ೧೧ನೆಯ ಶತಮಾನದ ಪೂರ್ವಾರ್ಧದವರೆಗೆ ಮುಂದುವರೆಯಿತು.

ಕೋಲಾರ ಜಿಲ್ಲೆಯಲ್ಲಿ ಕದಂಬರಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ದೊರಕುತ್ತಿಲ್ಲ. ಈ ಪ್ರದೇಶದಲ್ಲಿ ಗಂಗರೇ ಪ್ರಧಾನವಾಗಿದ್ದುದು ಇದಕ್ಕೆ ಕಾರಣವಾಗಿರಬಹುದು. ಕದಂಬರಿಗೆ ಸಂಬಂಧಿಸಿದಂತಹ ನೇರವಾದಂತಹ ಶಾಸನಗಳು ದೊರಕುತ್ತಿಲ್ಲ. ಮುಳಬಾಗಿಲು ತಾಲ್ಲೂಕಿನ ಆವನಿ ಗ್ರಾಮದ ಭರತೇಶ್ವರ ದೇವಾಲಯದಲ್ಲಿ ದೊರಕಿರುವಂತಹ ನೊಳಂಬ ನಾರಾಯಣೇಶ್ವರ ಕಾಲದ ಶಾಸನವೊಂದು **"ಕದಂಬ ಮಹಾನ್ವಯೇ ಸಮಭವನ್ ದೇವೀಹ ದೇವಾಂಬಿಕಾ"** ಎಂದು ಉಲ್ಲೇಖಿಸಿದೆ. ಕದಂಬ ಮಹಾವಂಶದಲ್ಲಿ ಜನಿಸಿದಂತಹ ದೇವಾಂಬಿಕೆಯೆಂದು ಹೇಳಿರುವಂತಹ ಈ ಶಾಸನವು ಕದಂಬರ ಮಾಹಿತಿಯನ್ನು ಒದಗಿಸುತ್ತದೆ. ನೊಳಂಬರ ದೊರೆ ವೀರಮಹೇಂದ್ರನನ್ನು ದೇವಾಂಬಿಕೆ ಮದುವೆಯಾಗಿದ್ದಳು. ಕದಂಬ ಕನ್ಯೆ ದೇವಲಬ್ಬರಸಿ

ಬೇತಮಂಗಲದಲ್ಲಿ ವಿಷ್ಣು ದೇವಾಲಯವನ್ನು ಕಟ್ಟಿದಂತೆ ಹೇಳಲಾಗಿದೆ. ಇದು ಕ್ರಿ.ಶ.೧೦ನೆಯ ಶತಮಾನಕ್ಕೆ ಸಂಬಂಧಿಸಿದುದಾಗಿದೆ.

ಕದಂಬ ದೊರೆ ಕಾಕುಸ್ಥವರ್ಮನಿಗೆ (ಕ್ರಿ.ಶ.೪೨೫-೪೫೦), ಶಾಂತಿವರ್ಮ (ಕ್ರಿ.ಶ.೪೪೭-೪೭೨) ಮತ್ತು ಒಂದನೆಯ ಕೃಷ್ಣವರ್ಮರೆಂಬ ಇಬ್ಬರು ಪುತ್ರರಿದ್ದರು. ೧ನೆಯ ಕೃಷ್ಣವರ್ಮನು ಕ್ರಿ.ಶ.೪೭೦ರಿಂದ ೪೯೫ರವರೆಗೆ ರಾಜ್ಯಭಾರವನ್ನು ಮಾಡಿದ್ದನು. ಈತನ ತಂಗಿಯನ್ನು ಗಂಗ ದೊರೆ ಮೂರನೆಯ ಮಾಧವನಿಗೆ ವಿವಾಹ ಮಾಡಿಕೊಡಲಾಗಿತ್ತು. ಮೂರನೆಯ ಮಾಧವನು ಕ್ರಿ.ಶ.೪೪೦ರಿಂದ ೪೯೫ರವರೆಗೆ ಆಳ್ವಿಕೆ ನಡೆಸಿದ್ದನು. ಹಾಗಾಗಿ ಗಂಗರಿಗೂ ಕದಂಬರಿಗೂ ವೈವಾಹಿಕ ಸಂಬಂಧವಿತ್ತೆಂದು ನಿರ್ಧರಿಸಬಹುದಾಗಿದೆ. ಕಾಕುಸ್ಥವರ್ಮನ ಹಿರಿಯ ಮಗನಾದ ಶಾಂತಿವರ್ಮನ ಹಿರಿಯ ಪುತ್ರನಾದ ಮೃಗೇಶವರ್ಮನಿಗೆ 'ತುಂಗ ಗಂಗ ಕುಲೋತ್ಸಾದಿ' ಎಂಬ ಬಿರುದಿದ್ದಂತೆ ಶಾಸನಗಳು ತಿಳಿಸುತ್ತದೆ. ಅಂದರೆ ಉತ್ತುಂಗವಾದಂತಹ ಗಂಗ ಕುಲವನ್ನು ನಾಶ ಮಾಡಿದನೆಂದು ಅರ್ಥ ಕೊಡುವಂತಹ ಈ ಶಬ್ದವು ಕದಂಬರಿಗೂ ಗಂಗರಿಗೂ ವೈಷಮ್ಯವಿದ್ದಂತೆ ತಿಳಿಸುತ್ತದೆ. ಕದಂಬ ವಂಶವನ್ನು ಅಥವಾ ಕದಂಬ ರಾಜರ ಹೆಸರನ್ನು ತಿಳಿಸುವಂತಹ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುತ್ತಿಲ್ಲ. ಕದಂಬರ ರಾಜ್ಯವು ಮಧ್ಯ ಕರ್ನಾಟಕದವರೆಗೆ ಮಾತ್ರ ಸೀಮಿತವಾಗಿತ್ತು. ಹಾಗಾಗಿ ಕೋಲಾರ ಜಿಲ್ಲೆಯಲ್ಲಿ ವಿಶೇಷವಾಗಿ ಕದಂಬರ ಶಾಸನಗಳು ದೊರಕುತ್ತಿಲ್ಲ.

೨.೨.೨. ಗಂಗರು :

ಗಂಗ ಅರಸರು ಕರ್ನಾಟಕದ ಇತಿಹಾಸಕ್ಕೆ ಭದ್ರಬುನಾದಿಯನ್ನು ಹಾಕಿ ಭವ್ಯ ಪರಂಪರೆಯನ್ನು ಹೊಂದಿದವರಾಗಿದ್ದರು. ಈ ವಂಶದ ರಾಜರುಗಳು ಕೇವಲ ಪರಾಕ್ರಮಿಗಳಾಗಿರದೆ ಸಾಹಿತ್ಯ ಕಲಾಭಿಮಾನಗಳು ಆಗಿದ್ದರು. ಕರ್ನಾಟಕದ ಕೋಲಾರ, ತುಮಕೂರು, ಬೆಂಗಳೂರು, ಮೈಸೂರು ಮತ್ತು ಮಂಡ್ಯ ಪ್ರದೇಶಗಳನ್ನು ಆಳಿದ್ದರು. ಕ್ರಿ.ಶ.೩೫೦ರಿಂದ ಆರಂಭಿಸಿ ಕ್ರಿ.ಶ.೫೫೦ರವರೆಗೆ ಕೋಲಾರವನ್ನು ಪ್ರಧಾನವನ್ನಾಗಿರಿಸಿಕೊಂಡು ಆಡಳಿತ ನಡೆಸಿದ್ದರು. ಗಂಗ ದೊರೆ ಅವನೀತನ ಕಾಲದಲ್ಲಿ ಗಂಗರಾಜ್ಯದ ರಾಜಧಾನಿಯು ಕೋಲಾರದಿಂದ ತಲಕಾಡಿಗೆ ವರ್ಗಾವಣೆಯಾದ ನಂತರ ಕೋಲಾರ ಪ್ರದೇಶದಲ್ಲಿ ಇವರ ಹಿಡಿತ ಕಡಿಮೆಯಾಯಿತು. ಹತ್ತನೆಯ ಶತಮಾನದವರೆಗೆ ಆಳಿದಂತಹ ಈ ಮನೆತನದಲ್ಲಿ ಹಲವಾರು ರಾಜರುಗಳು ಪ್ರಭಾವವನ್ನು ಬೀರಿದ್ದರು.

ಕೋಲಾರ ಜಿಲ್ಲೆಯನ್ನು ಪ್ರಧಾನವಾಗಿರಿಸಿಕೊಂಡು ಆಳಿದಂತಹ ಈ ಮನೆತನದವರು ಸ್ವಲ್ಪ ಕಾಲದವರೆಗೆ ಬೆಂಗಳೂರು ಜಿಲ್ಲೆಯಲ್ಲಿರುವ ಮಾನ್ಯಪುರ ಅಥವಾ ಮಣ್ಣೆಯನ್ನು ಕೇಂದ್ರವಾಗಿರಿಸಿಕೊಂಡು ಆಡಳಿತ ನಡೆಸಿದ್ದರು. ಈ ವಂಶದ ರಾಜರುಗಳು ತಮ್ಮ ಹೆಸರಿನಲ್ಲಿ ಕೊಂಗುಣಿ ಶಬ್ದವನ್ನು ಬಳಸುತ್ತಿದ್ದರು.

"ಶ್ರೀಜಾಹ್ನವೇಯ ಕುಲಾಮಲ ವ್ಯೋಮಾವ ಭಾಸನ ಭಾಸ್ಕರ ಕಾಣ್ವಾಯನಸ ಗೋತ್ರಸ್ಯ"[೧೦] ಎಂದು ಗಂಗ ಶಾಸನಗಳು ತಿಳಿಸುತ್ತಿರುವುದರಿಂದ ಗಂಗ ವಂಶದವರು ಜಾಹ್ನವೇಯ ಕುಲದವರೂ ಮತ್ತು ಕಾಣ್ವಾಯನಸ ಗೋತ್ರದವರು ಆಗಿದ್ದರು. ಇಕ್ವಾಕ್ಷು ವಂಶ ಇವರ ಮೂಲ ವಂಶವಾಗಿತ್ತು. ಮೂರನೆಯ ಶತಮಾನದಲ್ಲಿ ಪ್ರಭಾವಶಾಲಿಯಾಗಳಾಗಿದ್ದಂತಹ ಶಾತವಾಹನರ ನಂತರದ ಕಾಲದಲ್ಲಿ ಗಂಗ ವಂಶ ಉದಯವಾಯಿತು.

ಕರ್ನಾಟಕದ ಇತಿಹಾಸದಲ್ಲಿ ೪ನೆಯ ಶತಮಾನವು ಪ್ರಮುಖ ಘಟ್ಟವಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಎರಡು ಪ್ರಮುಖ ರಾಜಮನೆತನಗಳು ಉಗಮವಾದವು. ಬನವಾಸಿಯನ್ನು ಕೇಂದ್ರವಾಗಿಟ್ಟುಕೊಂಡು

ರಾಜ್ಯಾಡಳಿತವನ್ನು ಆರಂಭಿಸಿದಂತಹ ಕದಂಬರು ಒಂದು ಕಡೆಯಾದರೆ, ಕೋಲಾರವನ್ನು ಪ್ರಧಾನ ಕೇಂದ್ರವಾಗಿಟ್ಟುಕೊಂಡು ಉದಯಿಸಿದಂತಹ ಗಂಗ ಮನೆತನ ಇನ್ನೊಂದು ಕಡೆ. ವಿಶೇಷವೆಂದರೆ ಮೊದಲ ಮನೆತನದವರು ಉತ್ತರ ಕರ್ನಾಟಕದಲ್ಲಿ ಪ್ರಾಬಲ್ಯತೆಯನ್ನು ಮೆರೆದರೆ, ಎರಡನೆಯವರು ದಕ್ಷಿಣ ಭಾಗದಲ್ಲಿ ಪ್ರಾಬಲ್ಯವನ್ನು ತೋರಿದ್ದರು. ಈ ಎರಡೂ ವಂಶಗಳ ಉದಯವು ಕರ್ನಾಟಕದ ಸಂಸ್ಕೃತಿಯ ಉದಯವಾಗಲು ಭದ್ರಬುನಾದಿಯಾಗಿತ್ತು. ಕ್ರಿ.ಶ.೩೫೦ರಿಂದ ಸುಮಾರು ಕ್ರಿ.ಶ.೧೦೦೦ರದ ತನಕ ಆಳ್ವಿಕೆ ನಡೆಸಿದಂತಹ ಗಂಗ ವಂಶವು ಭಾರತದಲ್ಲಿ ಅತಿ ದೀರ್ಘಕಾಲ ಆಡಳಿತವನ್ನು ನಡೆಸಿದಂತಹ ರಾಜವಂಶವೆಂಬ ಕೀರ್ತಿಯನ್ನು ಪಡೆದಿದೆ. ೮ನೇಯ ಶತಮಾನಕ್ಕೆ ಸಂಬಂಧಿಸಿದ ಶ್ರೀಪುರುಷನ ಶಾಸನಗಳಲ್ಲಿ ಈ ಸಾಮ್ರಾಜ್ಯವನ್ನು 'ಶ್ರೀರಾಜ್ಯ'ವೆಂದು ಕರೆದಿವೆ.

ತಮಿಳುಭಾಷೆಯಲ್ಲಿ ರಚಿತವಾಗಿರುವಂತಹ 'ಕೊಂಗುದೇಶ ರಾಜಾಕ್ಕಳ್'[೧೧]ಎಂಬ ಗ್ರಂಥವು ಕೊಂಗು ದೇಶದಲ್ಲಿ ಆಳಿದಂತಹ ಹಲವಾರು ರಾಜರುಗಳು ಸಂಪೂರ್ಣ ಮಾಹಿತಿಯನ್ನೊದಗಿಸುತ್ತಾ, ಗಂಗ ದೊರೆಗಳ ಪ್ರಸ್ತಾಪವನ್ನು ಮಾಡಿದೆ. ಈ ಗ್ರಂಥದಲ್ಲಿ ಗಂಗ ವಂಶದ ಸ್ಥಾಪಕ ದೊರೆ ಕೊಂಗುಣಿವರ್ಮನಿಂದ ಮೊದಲ್ಗೊಂಡು ಇಮ್ಮಡಿ ರಾಚಮಲ್ಲನ ತನಕ ಸಂಪೂರ್ಣ ವಿವರವನ್ನು ನೀಡುತ್ತಿದೆ. ಈ ಕೃತಿಯು ಗಂಗ ವಂಶದ ದೊರೆಗಳ ಹೆಸರುಗಳನ್ನಷ್ಟೇ ಸೂಚಿಸಿದೆ. ಅವರ ಕಾಲಾದಿಗಳ ವಿಚಾರವಾಗಿ ನಾವು ಶಾಸನಗಳ ಮೊರೆಯನ್ನು ಹೋಗಬೇಕು. ಆದರೆ ಶಾಸನಗಳನ್ನು ಗಮನಿಸಿದಾಗ ಹಲವಾರು ಗೊಂದಲಮಯವಾದಂತಹ ವಿಚಾರಗಳು ಕಂಡುಬರುತ್ತದೆ. ಗಂಗವಂಶವನ್ನು ಕೂಲಂಕುಷ ಅಧ್ಯಯನವನ್ನು ನಡೆಸಿ ಹಲವಾರು ಶಾಸನಗಳು ಕೃತಕವಾದುದೆಂಬುದಾಗಿ ಸಂಶೋಧಕರು ನಿರ್ಧರಿಸಿದ್ದರು. ಆದರೆ ನಂತರ ಕಾಲದಲ್ಲಿ ಅಧ್ಯಯನದ ನಂತರ ಹಲವಾರು ತಾಮ್ರಶಾಸನಗಳು ಮತ್ತು ಶಿಲಾಶಾಸನಗಳು ನೈಜಶಾಸನಗಳೆಂದು ನಿರ್ಧರಿಸಲಾಯಿತು.

ಕರ್ನಾಟಕ ಶಾಸನ ಪಿತಾಮಹ ಬಿ.ಎಲ್. ರೈಸ್ ಮತ್ತು ಫ್ಲೀಟ್‌ರವರ ನಡುವೆ ಗಂಗ ಅರಸರ ತಾಮ್ರಶಾಸನಗಳ ವಿಷಯವಾಗಿ ಹಲವಾರು ಭಿನ್ನಾಭಿಪ್ರಾಯಗಳಿದ್ದವು. ಬಿ.ಎಲ್.ರೈಸ್‌ರವರು ಗಂಗರ ಶಾಸನಗಳು ನೈಜವೆಂದು ಮತ್ತು ಗಂಗವೆಂಬ ವಂಶವು ಪ್ರಸಿದ್ಧವಾಗಿತ್ತು ಎಂದು ವಾದಿಸಿದರೆ, ಫ್ಲೀಟರು ಗಂಗ ಅರಸರ ತಾಮ್ರ ಶಾಸನಗಳು ಕೃತಕವೆಂದೂ ಗಂಗ ಅರಸವೆಂಬ ಮನೆತನವು ಕಪೋಲ ಕಲ್ಪಿತವೆಂಬ ವಾದವನ್ನು ಮಾಡಿದ್ದರು. ಆದರೆ ಒಂದನೆಯ ರಾಚಮಲ್ಲನ ಶಾಸನವು ದೊರಕಿದ ನಂತರ ಗಂಗ ಅರಸರ ಮನೆತನ ಮತ್ತು ಮನೆತನಗಳ ಕುರಿತಾದ ಊಹಾಪೋಹಗಳು ದೂರವಾದವು.[೧೨]

ಗಂಗವಂಶದ ಮೂಲ :

ಗಂಗ ವಂಶದ ಶಾಸನಗಳನ್ನು ಗಮನಿಸಿದರೆ ಈ ಮನೆತನದ ಆದಿಯ ಅಥವಾ ಉಗಮದ ಬಗ್ಗೆ ಯಾವುದೇ ಮಾಹಿತಿಗಳು ದೊರೆಯುವುದಿಲ್ಲ. ಹಾಗಾಗಿ ಗಂಗ ವಂಶದ ಮೂಲವನ್ನು ನಿರ್ಧರಿಸಲು ಐತಿಹಾಸಿಕ ಮತ್ತು ಪೌರಾಣಿಕ ಅಂಶಗಳ ಮೊರೆ ಹೋಗಬೇಕಾಗುತ್ತದೆ. ಭಾರತದಲ್ಲಿ ಹೆಚ್ಚಿನ ರಾಜವಂಶಗಳು ತಮ್ಮ ಮೂಲವನ್ನು ಪೌರಾಣಿಕ ವ್ಯಕ್ತಿಗಳ ಜೊತೆಗೂ ಅಥವಾ ಯಾವುದಾದರೂ ಧರ್ಮಗಳ ಪ್ರಸಿದ್ಧ ಮುನಿಗಳ ಜೊತೆಗೋ ಕಲ್ಪಿಸುತ್ತಾರೆ. ಗಂಗ ವಂಶದ ಸ್ಥಾಪನೆಗೆ ಜೈನಮುನಿಯ ಪ್ರಭಾವವೇ ಅಥವಾ ಅನುಗ್ರಹವೇ ಪ್ರಧಾನವಾಗಿದೆ.

ಗಂಗ ವಂಶದ ಮೂಲವನ್ನು ಹುಡುಕಲು ಹೊರಟರೇ ಐತಿಹ್ಯಗಳು, ಪುರಾಣ ಪ್ರಸಿದ್ಧ ಕಥೆಗಳು ಆಧಾರವಾಗಿ ನಿಲ್ಲುತ್ತದೆ. ಹಿಂದೆ ತಿಳಿಸಿದಂತೆ ಗಂಗ ವಂಶದವರು ತಮ್ಮನ್ನು ಇಕ್ಷ್ವಾಕು ವಂಶದವರು ಎಂದು ಹೇಳಿರುವುದು ಕೆಲವು ಶಾಸನಗಳಲ್ಲಿ ಉಕ್ತವಾಗಿದೆ. ರಾಮಾಯಣದ ರಾಮ ಈ ಇಕ್ಷ್ವಾಕು ವಂಶಕ್ಕೆ ಸೇರಿದವನು. ಕಾಳಿದಾಸನು ತನ್ನ ಪ್ರಸಿದ್ಧ ಮಹಾಕಾವ್ಯ 'ರಘುವಂಶ'ದಲ್ಲಿ ರಾಮನ ವಂಶವನ್ನು ವರ್ಣಿಸಿದ್ದಾನೆ. ಎಲ್ಲರಿಗೂ ತಿಳಿದಿರುವಂತೆ ರಾಮನ ವಂಶವು ಉತ್ತರಭಾರತದಲ್ಲಿ ಪ್ರಸಿದ್ಧಿಗೆ ಬಂದುದರಿಂದ ಗಂಗ ವಂಶದವರು ಔತ್ತರೇಯರು ಎಂದು ಇತಿಹಾಸಕಾರರು ಊಹಿಸಿದ್ದಾರೆ. ಆದರೆ ಇದಕ್ಕೆ ಯಾವುದೇ ಆಧಾರಗಳು ದೊರಕುವುದಿಲ್ಲ. ಈ ಇಕ್ವಾಕ್ಷು ವಂಶದಲ್ಲಿ ಧನಂಜಯನೆಂಬ ಪ್ರಸಿದ್ಧ ರಾಜನಿದ್ದನು. ಈತನ ಪುತ್ರನು ಹರಿಶ್ಚಂದ್ರನು, ಈ ಹರಿಶ್ಚಂದ್ರನ ವಂಶಸ್ಥರೇ ದಡಿಗ ಮತ್ತು ಮಾಧವರು ಎಂದೂ ಪೌರಾಣಿಕವೂ, ಐತಿಹಾಸಿಕವೂ ಆದಂತಹ ಕಲ್ಪನೆಯಿದೆ. ಈ ದಡಿಗ ಮತ್ತು ಮಾಧವರೇ ಗಂಗ ವಂಶದ ಸ್ಥಾಪಕರು ಎಂದು ಶಾಸನಗಳೇ ತಿಳಿಸಿವೆ. ಇನ್ನೊಂದು ಮಾಹಿತಿಯ ಪ್ರಕಾರವಾಗಿ ಹರಿಶ್ಚಂದ್ರನ ಮಗ ಭರತ. ಈತನ ಮಹಾರಾಣಿ ವಿಜಯ ಮಹಾದೇವಿ. ಇವಳು ಒಂದು ದಿನ ಗಂಗಾ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಮಗುವು ಜನಿಸಿತು. ಈ ಮಗುವಿಗೆ ಗಂಗದತ್ತ ಎಂದು ನಾಮಕರಣ ಮಾಡಿದ್ದರು. ಈ ಗಂಗದತ್ತನ ವಂಶದವರೇ ಗಂಗರು ಎಂದು ಊಹಿಸುತ್ತಾರೆ. ಈ ವಿಷಯವನ್ನು ಪುಷ್ಟೀಕರಿಸುವಂತಹ ವಿಷಯವು ಶಿವಮೊಗ್ಗ ಜಿಲ್ಲೆಯ ಕಲ್ಲೂರು ಶಾಸನದಲ್ಲಿ ದೊರಕಿದೆ.[೧೩]

ಸೊಗೆಯಿಸುವ ಕಾಲದೊಳ್ಕೀ
ರ್ತಿಗೆ ಮೂಲಸ್ಥಂಭ ಮೆನಿಪಯೋಧ್ಯಾಪುರದೊಳು
ಜಗದಧಿನಾಥ ಪುಟ್ಟಿದ
ನಗಣ್ಯ ನಿಕ್ಷ್ವಾಕು ವಂಶ ಚೂಡಾರತ್ನ ॥
ಧರೆಗೆ ಹರಿಶ್ಚಂದ್ರ ನೃಪೇ
ಶ್ವರ ನೊರ್ವನೆ ಕಾನ್ತನಾಗಿ ದೋರ್ವ್ವಲದಿಂದಂ
ಬಿರುದರನದಿರ್ಪ್ಪ ವಿದ್ಯಾ
ಪರಿಣತೆಯಾ ನೆರೆದು ಸುಖದಿನಿರೆ ಪಲಕಾಲಂ ॥
ಅಜಕೇಳಯುಕ್ತನೆನಿಸಿದ
ವಿಜಯ ಮಹಾದೇವಿ ತನಗೆ ಸತಿಯೆನೆ ವಿಬುಧೆ
ವ್ರಜ ಪೂಜ್ಯಂ ಭರತಂ ಭಾ
ವಜ ಸದೃಶಂ ತಾನೆ ಸಕಳ ಧಾತ್ರೀತಳದೊಳು
ತರಳ ತರಂಗ ಭಂಗುರ ಸಮನ್ವಿತೆಯಾ ಚಕ್ರವಾಕ ಬಾ
ಸುಂ ಕಳ ಹಂಸ ಪೂರಿತೆಯನು ದಲ ತಾಂಕಿತಗಾತ್ರೆಯಂ
ಮನೋಹರ ನವಶೈತ್ಯ ಮಾಂದ್ಯ ಶಂಭಗಂಧ ಸಮೀರ ನಿವಾಸೆಯಂ ತಳೋ
ದರಿ ನೆರೆಗಂಗೆಯಾ ನಲಿದು ಮೀವಭಿವಾಂಚ್ಛೆಯನೆಯ್ದೆ ತಾಳ್ದಿದಳ್ ॥

[ಜಗತ್ತಿಗೆ ಮೂಲಸ್ತಂಭದಂತಿರುವಂತಹ ಅಯೋಧ್ಯಪುರದಲ್ಲಿ ಇಕ್ವಾಕ್ಷು ವಂಶಕ್ಕೆ ಚೂಡಾರತ್ನದಂತಿರುವ ಹರಿಶ್ಚಂದ್ರನ ಸುಪುತ್ರ ಭರತನ ಸತಿ ವಿಜಯಮಹಾದೇವಿ. ಇವಳು ಗಂಗಾನದಿಯಲ್ಲಿ ಮೀಯಲು ಬಯಸಿ ಗಂಗಾನದಿಯಲ್ಲಿ

ಸ್ನಾನ ಮಾಡಿದಾಗ ಪುತ್ರರತ್ನನನ್ನು ಪಡೆದಳು. ಇವನೇ ಮುಂದೆ ಗಂಗದತ್ತನೆಂಬ ಹೆಸರನ್ನು ಪಡೆದನು. ಇವನ ವಂಶದಲ್ಲಿ ಜನಿಸಿದವರೇ ಗಂಗರು ಎಂದು ಪ್ರಸಿದ್ಧರಾದರು]

ಇದೇ ಶಾಸನದಲ್ಲಿ ಮುಂದೆ ವಂಶಾವಳಿಯನ್ನು ಮುಂದುವರಿಸುತ್ತಾ ಪದ್ಮನಾಭನೆಂಬ ರಾಜನು ತಮ್ಮ ಪುತ್ರರಾದ ರಾಮಲಕ್ಷ್ಮಣರಿಗೆ ದಡಿಗ-ಮಾಧವರೆಂದು ನಾಮಕರಣ ಮಾಡಿ ಅವರನ್ನು ೪೯ ಬ್ರಾಹ್ಮಣರೊಂದಿಗೆ ದಕ್ಷಿಣದ ಕಡೆಗೆ ಕಳುಹಿಸಿದನು. ಅವರೆಲ್ಲರೂ 'ಪೆರೂರು' ಎಂಬ ಸ್ಥಳಕ್ಕೆ ಬಂದು ಜೈನಮುನಿ ಸಿಂಹನಂದಿಯನ್ನು ಭೇಟಿ ಮಾಡಿದಾಗ ಆತನು ಅಭಯವಾಕ್ಯವನ್ನು ನೀಡಿ ಅವನಿಗೆ ರಾಜ್ಯಾಧಿಕಾರವನ್ನು ನೀಡಿ ಗಂಗವಂಶವನ್ನು ಸ್ಥಾಪಿಸಿದನೆಂಬ ಉಲ್ಲೇಖ ಬರುತ್ತದೆ.

ಹಿಂದೆ ಹೇಳಿದಂತಹ ಕಥೆಯ ಆಧಾರದಂತೆ ಹಲವಾರು ವಿಷಯಗಳು ಸುದೀರ್ಘವಾಗಿ ಚರ್ಚಿತವಾಗಿದ್ದರೂ ಈ ಕಥೆಗಳ ವಿಚಾರವಾಗಿ ಸಂಶಯಗಳಿವೆ. ಈ ಇಕ್ವಾಕು ವಂಶದಲ್ಲಿ ಬಂದಂತಹ ರಾಜರುಗಳಲ್ಲಿ ದಡಿಗ ಮತ್ತು ಮಾಧವರೆಂಬುವವರು ದಕ್ಷಿಣ ದೇಶದ ಕಡೆಗೆ ಬಂದು ಗಂಗಪೆರೂರ ಎಂಬಲ್ಲಿ ನೆಲೆಯೂರಿ ಮುಂದೆ ಗಂಗವಾಡಿ ಪ್ರದೇಶದ ಅರಸನಾಗಿರಬಹುದು. ಕುವಳಾಲ ಮತ್ತು ನಂದಿಗಿರಿ (ನಂದಿಬೆಟ್ಟ) ಇವುಗಳನ್ನು ಕೇಂದ್ರವಾಗಿಟ್ಟು ರಾಜ್ಯಾಡಳಿತವನ್ನು ಮಾಡಿದ್ದರು. ನಂತರದ ಕಾಲದಲ್ಲಿ ತಲಕಾಡನ್ನು ಪ್ರಧಾನ ಕೇಂದ್ರವನ್ನಾಗಿರಿಸಿಕೊಂಡು ಆಳಿದ್ದರಿಂದ ಅವರು ಮೂಲತಃ ಕರ್ನಾಟಕದವರೇ ಎಂದು ಡಾ.ಶ್ರೀನಿವಾಸರಿತ್ತಿಯವರು ಅಭಿಪ್ರಾಯ ಪಡುತ್ತಾರೆ.[೧೪]

"ಶ್ರೀಮಜ್ಜಾಹ್ನವೇಯ ಕುಲಾಮಲವ್ಯೋಮಾವ ಭಾಸನ

ಭಾಸ್ಕರಸ್ಯ ಕಾಣ್ವಾಯನ ಸಗೋತ್ರ ಸ್ಯ . . . . . .

ಎಂದು ಹೆಚ್ಚಿನ ಶಾಸನಗಳು ಪ್ರಾರಂಭದಲ್ಲಿ ಗಂಗರ ಗೋತ್ರವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದು ಅವರು ಕಣ್ವ ಋಷಿಯ ಗೋತ್ರಕ್ಕೆ ಸೇರಿದವರಾಗಿದ್ದರು ಎಂದು ತಿಳಿಯುತ್ತದೆ. ಉತ್ತರ ಭಾರತದಲ್ಲಿ ಪ್ರಸಿದ್ಧವಾಗಿದ್ದಂತಹ ಮಗಧದ ಕಣ್ವವಂಶದವರೆಂದು ಊಹಿಸಬಹುದು. ಈ ರೀತಿಯಾಗಿ ಗಂಗವಂಶದ ಉಗಮ ಮತ್ತು ವಿಕಾಸಗಳ ಬಗ್ಗೆ ಹಲವಾರು ಊಹಾಪೋಹಗಳಿವೆ.

ಇನ್ನೊಂದು ಮಾಹಿತಿಯ ಪ್ರಕಾರ ಗಂಗರು ತಮಿಳುನಾಡಿನ ಕೊಂಗು ದೇಶದವರೆಂದು ಊಹಿಸಲಾಗಿದೆ. ಗಂಗ ವಂಶದ ಸಂಸ್ಥಾಪಕ ದೊರೆಯ ಹೆಸರಿನಲ್ಲೂ ಕೊಂಗುಣಿ ಶಬ್ದದ ಪ್ರಯೋಗವಿದ್ದು ಈತನು ಮೂಲತಃ ಆ ಪ್ರದೇಶದವನಾಗಿರಬೇಕೆಂದು ಕೆಲವರ ಕಲ್ಪನೆಯಾಗಿದೆ. ಗಂಗ ವಂಶದ ಮೂಲ ಲಾಂಛನವು ಮದಗಜವಾಗಿದೆ ಬಹುಶಃ ಕೊಂಗು ದೇಶದ ಜನರು ಆನೆ ಬೇಟೆಯಲ್ಲಿ ಪರಿಣಿತರಾಗಿದ್ದರು. ಆದುದರಿಂದ ಅದನ್ನೇ ರಾಜಮನೆತನದ ಗುರುತನ್ನಾಗಿ ಅನ್ವಯಿಸಿರಬಹುದು.

ಗಂಗ ರಾಜಮನೆತನಗಳ ಉಗಮಕ್ಕೆ ಕಾರಣವಾಗಿರಬಹುದು ಎಂದು ಉಲ್ಲೇಖಿಸಿದ 'ಗಂಗದತ್ತ' ನೆಂಬುವವನ ಜನ್ಮ ವೃತ್ತಾಂತದ ಬಗ್ಗೆ ಹಿಂದೆ ತಿಳಿದಿದ್ದೆವು. ಆತನ ವಂಶದಲ್ಲಿ ವಿಷ್ಣುಗುಪ್ತನೆಂಬ ರಾಜನು ಜನ್ಮತಾಳಿದನು. ಈತನು ಪರಾಕ್ರಮಿಯು, ಧರ್ಮನಿರತನೂ ಆಗಿದ್ದು, ಹಲವಾರು ಯಜ್ಞ ಯಾಗಾದಿಗಳಿಂದ ದೇವತೆಗಳನ್ನು ಮೆಚ್ಚಿಸಿ ದೇವತೆಗಳಿಂದ ಹಲವಾರು ವರಗಳನ್ನು ಪಡೆದಿದ್ದನು. ಇಂದ್ರನನ್ನು ಕುರಿತು ಯಜ್ಞವನ್ನಾಚರಿಸಿ ದೇವತೆಗಳಿಂದ ಆನೆಯನ್ನು ಉಡುಗೊರೆಯಾಗಿ ಪಡೆದನು. ಈ ವಿಷ್ಣುಗುಪ್ತನಿಗೆ ಭಗದತ್ತ ಮತ್ತು ಶ್ರೀದತ್ತ ಎಂದು ಇಬ್ಬರು ಮಕ್ಕಳಿದ್ದರು. ವಿಷ್ಣುಗುಪ್ತನಿಗೆ ಕಳಿಂಗ ದೇಶದವರೆಗೆ ರಾಜ್ಯ ವಿಸ್ತಾರವಿತ್ತು. ಹಾಗಾಗಿ

ಕಳಿಂಗದೇಶದ ಪ್ರಾಂತ್ಯವನ್ನು ವಿಷ್ಣುಗುಪ್ತನು ಭಗದತ್ತನಿಗೆ ನೀಡಿದನು. ಕಾಲಾನುಕ್ರಮದಲ್ಲಿ ಈ ವಂಶದವರು ಕಳಿಂಗ ಗಂಗರೆಂದು ಹೆಸರುವಾಸಿಯಾದರು. ಹಾಗಾಗಿ ಪೂರ್ವ ಭಾರತದಲ್ಲಿ ಗಂಗ ವಂಶವು ಇತ್ತೆಂದು ಆ ವಂಶದವರೇ ದಕ್ಷಿಣಕ್ಕೆ ಬಂದಿರಬಹುದು ಎಂದು ಇತಿಹಾಸಕಾರರು ಊಹಿಸುತ್ತಾರೆ.[೧೫] ಅದಲ್ಲದೆಯೇ ಒರಿಸ್ಸಾದ ಇತಿಹಾಸಕಾರರು ಗಂಗರ ರಾಜಧಾನಿಯು ಕೋಲಾಹಲಪುರ ಅಥವಾ ಕೋಲಾರವಾಗಿರದೇ ಒರಿಸ್ಸಾದ ರಾಜ್ಯದಲ್ಲಿರುವಂತಹ 'ಕುರಾಲ' ಎಂದು ವಾದಿಸುತ್ತಾರೆ. ವಿದ್ವಾಂಸರುಗಳ ಗಮನಕ್ಕೆ ಬಂದ ಹಾಗೆ ಒರಿಸ್ಸಾದ ಗಂಗ ಅರಸರ ಶಾಸನಗಳಲ್ಲಿ ಮತ್ತು ಕರ್ನಾಟಕದ ಗಂಗ ಅರಸರ ಶಾಸನಗಳಲ್ಲಿ ಕುರಾಲ ಅಥವಾ ಕೋಲಾಹಲ ಪಟ್ಟಣದ ಪ್ರಯೋಗ ಕುರಿತಾಗಿ ಹಲವಾರು ಸಾಮ್ಯತೆಗಳಿವೆ. ಶಾಸನಗಳ ಆಧಾರವಾಗಿಟ್ಟುಕೊಂಡು ಒರಿಸ್ಸಾದ ಇತಿಹಾಸಕಾರರು, ಗಂಗರು ದಕ್ಷಿಣದಿಂದ ಬಂದವರಾಗಲಿ ಅಥವಾ ಇಲ್ಲಿಂದ ಹೋದವರಾಗಲಿ ಆಗಿರದೆ, ಒರಿಸ್ಸಾದ ರಾಜ್ಯದಲ್ಲಿಯೇ ಇರುವ 'ಕುರಾಲ' ಎಂಬುವುದು ಅವರ ರಾಜಧಾನಿಯಾಗಿದ್ದಿರಬಹುದೆಂದು ಅಭಿಪ್ರಾಯ ಪಡುತ್ತಾರೆ.

ಆದರೆ ಈ ವಾದವನ್ನು ಅಲ್ಲಗಳೆಯುತ್ತಾ ಡಾ.ದೇವರ ಕೊಂಡಾರೆಡ್ಡಿಯವರು ಒರಿಸ್ಸಾದ ವಿದ್ವಾಂಸರುಗಳ ಅಭಿಪ್ರಾಯವನ್ನು ಈ ರೀತಿಯಾಗಿ ವಿರೋಧಿಸುತ್ತಾರೆ. ಕೋಲಾಹಲಪುರವು ಕೋಲಾರವೇ ಆಗಿದ್ದು, ಒರಿಸ್ಸಾದ ಕುರಾಲವಾಗಿರಲು ಸಾಧ್ಯವಿಲ್ಲ. ಅದಲ್ಲದೆಯೇ ಗಂಗರಿಗೆ ಸಂಬಂಧಿಸಿದಂತಹ ಹಲವಾರು ಶಾಸನಗಳು, ಐತಿಹ್ಯಗಳು ಗಂಗರು ಕರ್ನಾಟಕದವರೆಂಬುದನ್ನು ಸಮರ್ಥಿಸುತ್ತಿವೆ. ಹಾಗಾಗಿ ಪೂರ್ವದಲ್ಲಿ ಇದ್ದಂತಹ ಗಂಗರ ಶಾಖೆಯು ಬೇರೆಯಾಗಿದ್ದು, ಮತ್ತು ಕರ್ನಾಟಕದ ಅಥವಾ ತಲಕಾಡಿನ ಗಂಗರು ಬೇರೆಯಾಗಿದ್ದು ಅವರ ಮೂಲವು ಒಂದೇ ಆಗಿದ್ದಿರಬಹುದು. ಹಾಗಾಗಿ ಭಗದತ್ತನಿಂದ ಆರಂಭಿತವಾದ ಕಳಿಂಗ ಗಂಗ ಮನೆತನವನ್ನು ಪೂರ್ವದ ಗಂಗ ವಂಶದವರೆಂದು, ತಲಕಾಡನ್ನು ಪ್ರಧಾನವಾಗಿಟ್ಟುಕೊಂಡು ದಡಿಗ ಮತ್ತು ಮಾಧವರೇ ಮೂಲ ಪುರುಷರಾಗಿರುವಂತಹ ಗಂಗವಂಶವನ್ನು ಪಶ್ಚಿಮದ ಗಂಗ ಅರಸರೆಂದು ಹೇಳಬಹುದು.

ಭಾರತದಲ್ಲಿ ಅದರಲ್ಲೂ ಆಂಧ್ರಪ್ರದೇಶದಲ್ಲಿ ಇಕ್ಷ್ವಾಕು ಎಂಬ ವಂಶದವರು ಆಳ್ವಿಕೆ ನಡೆಸಿದ್ದರು. ಇವರು ಕ್ರಿ.ಶ.೨೨೫ರಿಂದ ೨೫೦ರ ಅವಧಿಯಲ್ಲಿ ನಾಗಾರ್ಜುನ ಕೊಂಡವನ್ನು ರಾಜಧಾನಿಯನ್ನಾಗಿಸಿ ಕೊಂಡು ಶಾತವಾಹನರ ನಂತರ ಆಳ್ವಿಕೆ ನಡೆಸಿದ್ದರು. ಇವರು ಒಂದು ಕಾಲದಲ್ಲಿ ಪ್ರಬಲ ರಾಜರುಗಳಾಗಿದ್ದು, ನಂತರದ ಕಾಲದಲ್ಲಿ ಶಕ್ತಿಗುಂದುತ್ತಾ ಬಂದ ಹಾಗೆ ಆಂಧ್ರಪ್ರದೇಶದ ಪೆರೂರನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಕಾಲಾನಂತರದಲ್ಲಿ ಪೆರೂರನ್ನು ಬಿಟ್ಟು ಕೋಲಾರಕ್ಕೆ ಬಂದು ನೆಲೆಸಿದರು. ನಂತರ ಅಲ್ಲಿಯೇ ಪ್ರಧಾನವಾಗಿ ಗಂಗ ವಂಶವನ್ನು ಕಟ್ಟಿ ಬೆಳೆಸಿದರೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೧೬]

ಆದರೆ ಈ ವಿಷಯದಲ್ಲೂ ಹಲವಾರು ಭಿನ್ನಾಭಿಪ್ರಾಯಗಳಿವೆ. ಆಂಧ್ರಪ್ರದೇಶದಲ್ಲಿದ್ದಂತಹ ಇಕ್ಷ್ವಾಕು ವಂಶದವರು ಬೌದ್ಧರಾಗಿದ್ದು, ತಲಕಾಡು ಅಥವಾ ಕೋಲಾರದ ಗಂಗ ಅರಸರು ವೈಷ್ಣವ ಮತಾವಲಂಬಿಗಳಾಗಿರುತ್ತಾರೆ. ಅದಲ್ಲದೆಯೇ ಅವರಿಬ್ಬರ ಗೋತ್ರಗಳೂ ಬೇರೆಯಾಗಿರುತ್ತವೆ. ಹಾಗಾಗಿ ತಲಕಾಡಿನ ಗಂಗರನ್ನು ಆಂಧ್ರಪ್ರದೇಶದ ಇಕ್ಷ್ವಾಕು ವಂಶದವರೊಂದಿಗೆ ಹೋಲಿಸುವುದು ಸಮಂಜಸವಲ್ಲವೆಂದು ಡಾ.ದೇವರಕೊಂಡಾರೆಡ್ಡಿಯವರ ಅಭಿಪ್ರಾಯವಾಗಿದೆ. ಹಿಂದೆ ಹೇಳಿದಂತಹ ವಿಷಯಕ್ಕೆ ಪುಷ್ಟೀಕರಿಸುವಂತೆ ಇನ್ನೊಂದು ಅಭಿಪ್ರಾಯವು ವಿದ್ವಾಂಸರಲ್ಲಿದೆ.

ಹಿಂದೆ ಹೇಳಿದಂತಹ ಪುರಾಣ ಕಥೆಯ ಅಭಿಪ್ರಾಯದಂತೆ ವಿಷ್ಣುಗುಪ್ತನ ವಂಶದಲ್ಲಿ ಆತನ ಮೊಮ್ಮಗನಾದ ಪದ್ಮನಾಭನೆಂಬುವವನು ಪ್ರಸಿದ್ಧವಾಗಿದ್ದನು. ಈತನಿಗೆ ರಾಮ-ಲಕ್ಷ್ಮಣರೆಂಬ ಇಬ್ಬರು ಪುತ್ರರು

ತಪಸ್ಸಿನ ಪ್ರಭಾವದಿಂದ ಜನಿಸಿದರು. ಒಮ್ಮೆ ಈ ಪದ್ಮನಾಭನ ಮೇಲೆ ಉಜ್ಜಯಿನಿಯ ದೊರೆಯು ಆಕ್ರಮಣಮಾಡಲು ತನ್ನ ಪುತ್ರರನ್ನು ದಕ್ಷಿಣ ದಿಕ್ಕಿನ ಕಡೆಗೆ ಅನೇಕ ಬ್ರಾಹ್ಮಣರ ಜೊತೆಗೆ ಕಳುಹಿಸಿದನು. ಅವರೆಲ್ಲರೂ ಬಹಳ ದೂರದ ತನಕ ಪ್ರಯಾಣ ಮಾಡಿ ಆಂಧ್ರಪ್ರದೇಶದ ಪೆರೂರು ಎಂಬ ಸ್ಥಳಕ್ಕೆ ಬಂದರು. ಅಲ್ಲಿಂದಲೇ ತಮ್ಮ ರಾಜ್ಯಭಾರವನ್ನು ಪ್ರಾರಂಭಿಸಿದರೆಂದು ಅಭಿಪ್ರಾಯವಾಗಿದೆ. ಇದು ಆಂಧ್ರಪ್ರದೇಶದ ಕಡಪಾ ಜಿಲ್ಲೆಯಲ್ಲಿರುವ 'ಗಂಗಪೆರೂರು' ಎಂದು ಬಿ.ಎಲ್. ರೈಸ್‌ರ ಅಭಿಪ್ರಾಯವಾಗಿದೆ.[೧೭]

ಗಂಗ ಅರಸರಿಗೆ ಸೇರಿರುವಂತಹ ಹೆಚ್ಚಿನ ಶಾಸನಗಳು ಗಂಗ ವಂಶಾವಳಿಯನ್ನು ಸಂಪೂರ್ಣವಾಗಿ ಚಿತ್ರಿಸಿವೆ. ಆದರೆ ಪಾಶ್ಚಾತ್ಯ ವಿದ್ವಾಂಸರುಗಳು ಗಂಗ ಅರಸರ ತಾಮ್ರಶಾಸನಗಳು ಕೃತಕವೆಂದು ನಿರ್ಧರಿಸಿದ್ದಾರೆ. ಗಂಗ ಅರಸರ ಕಾಲದ ನಂತರ ದೊರಕಿದಂತಹ ಹಲವಾರು ಶಾಸನಗಳು ಗಂಗರ ವಂಶವೃಕ್ಷವನ್ನು ಪುನಃ ವರ್ಣಿಸಿರುವುದರಿಂದ ಆ ಶಾಸನಗಳು ನೈಜವೆಂದು ನಿರ್ಧರಿಸಲಾಯಿತು. ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದೊರಕಿರುವಂತಹ ಸತ್ಯವಾಕ್ಯ ಪೆರ್ಮಾನಡಿ ರಾಜಮಲ್ಲನಿಗೆ ಸಂಬಂಧಿಸಿದಂತಹ ಶಾಸನವು ಗಂಗವಂಶಾವಳಿಯನ್ನು ತಿಳಿಸುತ್ತದೆ.

ಇದಲ್ಲದೆ ಮುಂದಿನ ಕಾಲದಲ್ಲಿ ದೊರಕಿದಂತಹ ರಾಜರುಗಳ ಶಾಸನಗಳನ್ನು ಗಮನಿಸಿ ಗಂಗ ವಂಶವೃಕ್ಷವನ್ನು ಈ ರೀತಿಯಾಗಿ ಗುರುತಿಸಬಹುದಾಗಿದೆ.[೧೮] ಗಂಗರ ವಂಶಾವಳಿಯನ್ನು ಗಮನಿಸಿದರೆ ವಿಭಿನ್ನ ಅಭಿಪ್ರಾಯಗಳು ದೊರೆಯುತ್ತವೆ. ಗಂಗ ವಂಶಾವಳಿಯ ಹಲವಾರು ತಾಮ್ರಶಾಸನಗಳು ಕೂಟಶಾಸನಗಳಾಗಿದ್ದು ವಂಶಾವಳಿಯನ್ನು ನಿರ್ಧಾರ ಮಾಡುವುದರಲ್ಲಿ ಗೊಂದಲಗಳಿವೆ. ಬೇರೆ ಬೇರೆ ಶಾಸನಗಳು ವಿಭಿನ್ನ ವಂಶಾವಳಿಯನ್ನು ನೀಡುತ್ತಿವೆಯಾದರೂ ಭಿನ್ನ ವಂಶಾವಳಿಯ ಅರಸರ ಹೆಸರನ್ನು ಮುಂದಿನ ಶಾಸನಗಳು ಕೈ ಬಿಟ್ಟಿರುವುದು ಗಮನಾರ್ಹವಾಗಿದೆ. ವಂಶಾವಳಿಯು ಶಾಸನಗಳ ನೈಜತೆಯನ್ನು ಪ್ರಶ್ನಿಸುವಂತಿದೆ.

ಇಮ್ಮಡಿ ಮಾಧವನ ಪೆನುಗೊಂಡೆ ಶಾಸನ (E.I. XIV ಪೆನುಗೊಂಡೆ ಶಾಸನ), ಚೂಕುತ್ತೂರು ಶಾಸನ, (M.A.R – 1924, PP-79-81), ಕೃಷ್ಣವರ್ಮನ ಬೆಂಡಿಗಾನಹಳ್ಳಿ ಶಾಸನ (M.A.R – 1914-15 P.40), ಕುಡಿಳಿಯಂ ಶಾಸನ(M.A.R. – 1932, PP.124-30), ಹರಿವರ್ಮನ ಕೂಡಲೂರು ಶಾಸನಗಳು(M.A.R. 1921,PP.259-65) ನೈಜಶಾಸನಗಳೆಂದು ನಿರ್ಧಾರವಾಗಿದ್ದರೂ, ವಿಭಿನ್ನವಾದಂತಹ ವಂಶಾವಳಿಯನ್ನು ನೀಡುತ್ತಿವೆ.

ಕೊಂಗುಣಿ ಧರ್ಮ ಮಹಾರಾಜಾಧಿರಾಜ ಅಥವಾ ಕೊಂಗುಣಿ ವರ್ಮನು ಗಂಗ ವಂಶದ ಮೂಲಪುರುಷನೆಂಬುವುದು ಸರ್ವವಿದಿತವಾಗಿದೆ. ಆದರೆ ನಂತರ ಅವನೀತವರೆಗೆ ಸುಮಾರು ಐದು ತಲಮಾರುಗಳ ತನಕ ವಂಶಾವಳಿಯಲ್ಲಿ ಹಲವಾರು ಎಡರು ತೊಡರುಗಳಿವೆ. ಈ ವಿಚಾರವಾಗಿ ಮಾರ್ಗದರ್ಶಕರೊಂದಿಗೆ ಚರ್ಚಿಸಿದಾಗ ಅವರು ನೀಡಿರುವಂತಹ ವಂಶಾವಳಿಯು ಈ ರೀತಿಯಾಗಿದೆ.

ಗಂಗರ ವಂಶಾವಳಿ

- ಕೊಂಗುಣಿವರ್ಮಧರ್ಮ ಮಹಾಧಿರಾಜ
  - ಮಾಧವ ಮಹಾಧಿರಾಜ –೧
    - ಹರಿವರ್ಮ್ಮ ಮಹಾಧಿರಾಜ (ಕೃಷ್ಣವರ್ಮ)
      - ಮಾಧವವರ್ಮ –II
      - ವೀರವರ್ಮ
      - ವಿಷ್ಣುಗೋಪ
        - ಮಾಧವ III
          - ಅವನೀತ
            - ದುರ್ವಿನೀತ
              - ಮುಷ್ಕರ
                - ಶ್ರೀವಿಕ್ರಮ
                  - ಶಿವಮಾರ –I
                    - ಶ್ರೀಪುರುಷ
                      - ದುಗ್ಗಮಾರ
                      - ಶಿವಮಾರ – II
                        - ಮಾರಸಿಂಹ
                        - ಪೃಥ್ವೀಪತಿ– I
                          - ನನ್ನಿಯಗಂಗ
                            - ಪೃಥ್ವೀಪತಿ– II
                      - ವಿಜಯಾದಿತ್ಯ
                        - ರಾಚಮಲ್ಲ– I
                          - ಎರೆಗಂಗ
                            - ರಾಚಮಲ್ಲ – II
                            - ಬೂತುಗ – I
                  - ಭೂವಿಕ್ರಮ
              - ಪೊಲವೀರ

ಎರೆಗಂಗ – II

ನರಸಿಂಹದೇವ | ರಾಚಮಲ್ಲ III | ಬೂತುಗ II

(ಬೂತುಗ II →) ಮಣಸೆಯಗಂಗ (ಮರುಳ) | ನರಸಿಂಹ II

(ಮಣಸೆಯಗಂಗ →) ರಚ್ಚಗಂಗ

(ರಚ್ಚಗಂಗ →) ರಾಚಮಲ್ಲ(ಸತ್ಯವಾಕ್ಯ) | ರಕ್ಕಸಗಂಗ | ಅರುಮುಳಿದೇವ

ಒಂದನೆಯ ಕೊಂಗಣಿ ವರ್ಮ

ಗಂಗ ಅರಸರ ಶಾಸನಗಳಲ್ಲಿ ಪ್ರತಿಪಾದಿತವಾಗಿರುವಂತೆ ಕೊಂಗುಣಿವರ್ಮ ಮಹಾರಾಜಾಧಿರಾಜನು ಗಂಗ ವಂಶದ ಸ್ಥಾಪಕನು. ಈತನನ್ನೇ ಮಾಧವನೆಂದೂ ಕೆಲವು ಶಾಸನಗಳು ಉಲ್ಲೇಖಿಸಿವೆ. ಈತನಿಗೆ ನೇರವಾಗಿ ಸಂಬಂಧಿಸಿರುವಂತಹ ಯಾವುದೇ ಶಾಸನಗಳು ದೊರೆಯುವುದಿಲ್ಲ. ಆದರೆ ಗಂಗ ಅರಸರಿಗೆ ಸಂಬಂಧಿಸಿದಂತಹ ಮತ್ತು ನಂತರದ ಕಾಲದ ಕೆಲವು ಶಾಸನಗಳು ದಡಿಗ ಮತ್ತು ಮಾಧವರೆಂಬ ಇಬ್ಬರು ರಾಜರುಗಳು ಜೈನ ಗುರುವಾದ ಸಿಂಹನಂದಿಯನ್ನು ಭೇಟಿಯಾದರು. ಆ ಸಂದರ್ಭದಲ್ಲಿ ರಾಜರುಗಳ ಪರಾಕ್ರಮವನ್ನು ಅರಿತಂಥಹ ಜೈನಗುರುವು ಅವರಿಗೆ ವರವನ್ನಿತ್ತು ಪದ್ಮಾವತಿ ದೇವಿಯ ವರ ಪ್ರಸಾದದಿಂದ ಖಡ್ಗವನ್ನು ನೀಡಿದರು. ಈ ಖಡ್ಗವನ್ನು ಸ್ವೀಕರಿಸಿದಂತಹ ಮಾಧವನು ತನ್ನ ಪರಾಕ್ರಮದ ಒಂದೇ ಹೊಡೆತದಿಂದ ಶಿಲಾಸ್ತಂಭವನ್ನು ತುಂಡರಿಸಿದನು. ಅದೇ ಸಂದರ್ಭದಲ್ಲಿ ಜೈನಗುರುವು ಆತನಿಗೆ ರಾಜ ಪದವಿಯನ್ನಿತ್ತು ಅನುಗ್ರಹಿಸಿದನು. ಕನ್ನಡ ಶಾಸನಗಳಲ್ಲಿ ಅಲ್ಲದೆಯೇ ಹಲವಾರು ತಮಿಳು ಶಾಸನಗಳಲ್ಲಿ ಕೂಡ ಈತನನ್ನು 'ಕೊಂಗುಣಿವರ್ಮ'ನೆಂದು ಹೆಸರಿಸಿವೆ.[೧೯] ಈತನು ಕ್ರಿ.ಶ.೩೫೦ರ ಸುಮಾರಿಗೆ ಗಂಗವಂಶವನ್ನು ಸ್ಥಾಪಿಸಿ ಪಟ್ಟಕ್ಕೆ ಬಂದಿರುವನು. ಗಂಗರ ಶಾಸನಗಳು, ಜಾಹ್ನವೇಯ ಕುಲಾಮವ್ಯೋಮ ಭಾಸನ ಭಾಸ್ಕರ (ಜಾಹ್ನವೇಯ ಕುಲವೆಂಬ ನಿರ್ಮಲ ಆಕಾಶದಲ್ಲಿ ಕಂಗೊಳಿಸುವಂತಹ ಭಾಸ್ಕರನು) ವ್ರಣಭೂಷಣನೂ (ಯುದ್ಧಗಳಲ್ಲಿ ಧಾರುಣವಾಗಿ ಶತ್ರುಗಳ ಮೇಲೆ ಪ್ರಹಾರವನ್ನು ಮಾಡುವುದರ ಮೂಲಕ ಗಾಯಗಳೆಂಬ ಭೂಷಣ ಉಳ್ಳವನೂ) ಎಂದು ಹೊಗಳಿದೆ. ಈತನು ಜಯಭೂಷಣನೆಂಬ ಬಿರುದು ಉಳ್ಳವನಾಗಿದ್ದನು.

ಗಂಗ ಅರಸರ ಹೆಚ್ಚಿನ ಶಾಸನಗಳ ವಂಶಾವಳಿಗಳಲ್ಲಿ ಬರುವಂತಹ ಕೊಂಗಣಿವರ್ಮ ಧರ್ಮಮಹಾರಾಜನನ್ನು ಮೊದಲಿಗನನ್ನಾಗಿ ಚಿತ್ರಿಸಲಾಗಿದೆ. ಹೀಗಾಗಿ ಈತನನ್ನೇ ಗಂಗ ವಂಶದ ಪ್ರಧಾನ ಪುರುಷ ಅಥವಾ ಮೂಲ ಪುರುಷನೆಂದು ಇತಿಹಾಸಕಾರರು ನಿರ್ಧರಿಸಿದ್ದಾರೆ. ಈತನನ್ನು ಶಾಸನಗಳು 'ಕೊಂಗುಣಿ ವರ್ಮ ಧರ್ಮ ಮಹಾಧಿರಾಜ'ನೆಂದು ಉಲ್ಲೇಖಿಸಿದೆ.. ಈ ಪದವು ಕೇವಲ ಮೊದಲ ಅರಸನಿಗೆ ಮಾತ್ರ ಪ್ರಯೋಗವಾಗಿರದೆ ಮುಂದಿನ ಕೆಲವು ರಾಜರಿಗೂ ಪ್ರಯೋಗಿಸಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಉದಾ: ಅವನೀತ ಕೊಂಗುಣಿಮಹಾಧಿರಾಜ, ಶಿವಮಾರ–ಕೊಂಗುಣಿಮಹಾರಾಜ ಇತ್ಯಾದಿ. ಕೊಂಗು ಎಂಬಂತಹ ರಾಜ್ಯವನ್ನು ಆಳಿದುದರಿಂದ ಕೊಂಗುಣಿ ಮಹಾರಾಜವೆಂಬ ಉಪನಾಮ ಬಂದಿರಬಹುದು. ತಮಿಳುನಾಡು ರಾಜ್ಯದಲ್ಲಿ ಕೊಂಗು ಎಂಬಂತಹ ದೇಶ ವಿಭಾಗವಿತ್ತು. ಕೊಂಗು ದೇಶವನ್ನಾಳಿದ ರಾಜವಂಶಗಳಲ್ಲಿ ಕೊಂಗುಣಿವರ್ಮನ ವಂಶದವರೂ ಇದ್ದಿರಬಹುದು. ಈ ಹೆಸರನ್ನು ಹಾಗೆಯೇ ತಮ್ಮ ವಂಶದವರೂ ಬಳಸಿಕೊಳ್ಳಬೇಕೆಂಬ ದೃಷ್ಟಿಯಿಂದ ಕೊಂಗುಣಿ ಶಬ್ದವನ್ನು ಬಳಸಿರಬಹುದು.

ಅದಲ್ಲದೆಯೇ ಕೊಂಗು ಶಬ್ದಕ್ಕೆ ಬೆಟ್ಟ ಮತ್ತು ಬಯಲುಗಳ ಮಧ್ಯದ ಭಾಗವೆಂಬ ಅರ್ಥವೂ ಇದೆ. ಹಾಗಾಗಿ ಬೆಟ್ಟ ಗುಡ್ಡಗಳಿಂದ ಆವೃತ್ತವಾದಂತಹ ಪ್ರದೇಶವನ್ನು ಆಳಿದಂತಹ ಪರಾಕ್ರಮೀ ರಾಜನಿಗೆ 'ಕೊಂಗುಣಿವರ್ಮ' ಎಂಬ ಬಿರುದು ಬಂದಿರಬಹುದು. ಈತನು ಧರ್ಮ, ರಾಜನೀತಿ, ರಾಜ್ಯಪರಿಪಾಲನೆ ಮೊದಲಾದ ವಿಷಯಗಳಲ್ಲಿ ಎಲ್ಲೂ ತಪ್ಪದವನಾಗಿದ್ದುದರಿಂದ 'ಧರ್ಮ ಮಹಾಧಿರಾಜ'ನೆಂಬ ಹೆಸರು ಬಂದಿರಬಹುದು. ಆದರೆ ವಿಪರ್ಯಾಸವೆಂದರೆ ನೇರವಾಗಿ ಕೊಂಗುಣಿವರ್ಮ ಧರ್ಮ ಮಹಾರಾಜನನ್ನೇ ಅಥವಾ ಅವನ ಕಾಲವನ್ನೇ ಉಲ್ಲೇಖಿಸುವ ಶಾಸನಗಳು ಯಾವುದೇ ದೊರೆಯುವುದಿಲ್ಲ. ಆದರೆ ಈತನು ಪರಾಕ್ರಮಿಯೆಂದು ಹೇಳಲು ಯಾವುದೇ ಸಂದೇಹವಿಲ್ಲ. ಈತನ ಆಳ್ವಿಕೆಯ ಕಾಲ ಅಥವಾ ಜೀವಿತಾವಧಿಯ ಕುರಿತಾಗಿ ಯಾವುದೇ ನಿಖರವಾದ ಮಾಹಿತಿಗಳು ಲಭ್ಯವಾಗುವುದಿಲ್ಲ. ಆದರೆ ಈತನ ಪುತ್ರನಾದ ಒಂದನೆಯ ಮಾಧವನ ಕಾಲವನ್ನು ಕ್ರಿ.ಶ.೪೧೫ರಿಂದ ೪೪೦ ಎಂದು ಇತಿಹಾಸಕಾರರು ನಿರ್ಧರಿಸಿರುವುದರಿಂದ ಕೊಂಗಣಿ ವರ್ಮ ಕಾಲವನ್ನು ಅದಕ್ಕಿಂತ ಹಿಂದೆ ಎಂದು ನಿರ್ಧರಿಸಬಹುದು.

ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದೊರತಿರುವಂತಹ ತಾಮ್ರಶಾಸನವು[೨೦] ಕೊಂಗುಣಿವರ್ಮ ಧರ್ಮಮಹಾರಾಜನನ್ನು ಉಲ್ಲೇಖಿಸಿದೆ. ಇದು ಸತ್ಯವಾಕ್ಯ ಪೆರ್ಮಾನಡಿ ರಾಜನಿಗೆ ಸಂಬಂಧಿಸಿದ ಶಾಸನವಾಗಿದ್ದು, ವಂಶಾವಳಿಯ ಪ್ರಾರಂಭದಲ್ಲಿ ಕೊಂಗುಣಿ ವರ್ಮ ಧರ್ಮಮಹಾಧಿರಾಜನನ್ನು ಹೊಗಳಿದೆ. ಸತ್ಯವಾಕ್ಯ ಪೆರ್ಮಾನಡಿ ರಾಜನು ಗಂಗ ವಂಶದಲ್ಲಿ ಹಲವಾರು ತಲೆಮಾರುಗಳ ನಂತರ ಬರುವ ರಾಜನಾಗಿದ್ದಾನೆ. ಶಾಸನವು ಕೊಂಗುಣಿವರ್ಮ ಧರ್ಮ ಮಹಾಧಿರಾಜನನ್ನು ಜಾಹ್ನವೇಯ ಕುಲವೆಂಬ ಆಕಾಶವನ್ನು ಬೆಳಗಿಸಿದಂತಹ ಸೂರ್ಯನೂ, ತನ್ನ ಖಡ್ಗದ ಒಂದೇ ಹೊಡೆತದಿಂದ ಶಿಲಾಸ್ತಂಭವನ್ನು ತುಂಡಿರಿಸಿದುದರಿಂದ ಪಡೆದಂತಹ ಬಲ ಮತ್ತು ಪರಾಕ್ರಮ ಉಳ್ಳವನೂ, ಯುದ್ಧಗಳಲ್ಲಿ ಧಾರುಣವಾಗಿ ಶತ್ರುಗಳನ್ನು ಹೊಡಿದುದರಿಂದ ಉಂಟಾದಂತಹ ಗಾಯ, ರಕ್ತ ಮೊದಲಾದುವುಗಳನ್ನೇ ಭೂಷಣವಾಗಿ ಉಳ್ಳವನು ಮತ್ತು ಕಾಣ್ವಾಯನಸ ಗೋತ್ರದವನು ಎಂದು ವರ್ಣಿಸಿದೆ. ಹಿಂದೆ ಹೇಳಿದಂತೆಯೇ ಈತನನ್ನು ವಂಶದ ಮೂಲದವನೆಂದು ಹೇಳಿದರೂ ಆತನು ಎಷ್ಟು ಕಾಲದ ತನಕ ಆಳ್ವಿಕೆ ನಡೆಸಿದ್ದನೆಂದು ಚರ್ಚಾಸ್ಪದವಾಗಿದೆ.

ಮಾಧವ – I

ಈತನ ತರುವಾಯ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ, ಮಾಧವ ವರ್ಮ-೧ (ಒಂದನೆಯ ಮಾಧವ)ನು ಆಳ್ವಿಕೆಗೆ ಬರುತ್ತಾನೆ. ಈತನು ಕೊಂಗುಣಿವರ್ಮನ ಪುತ್ರನಾಗಿದ್ದಾನೆ. ಈತನ ಕಾಲವನ್ನು ಇತಿಹಾಸಕಾರರು ಕ್ರಿ.ಶ.೪೧೫ರಿಂದ ಕ್ರಿ.ಶ.೪೪೦ ಎಂದು ನಿರ್ಧರಿಸಿದ್ದಾರೆ. ಈತನಿಗೆ ಸಂಬಂಧಿಸಿದ ಒಂದು ತಾಮ್ರ ಶಾಸನವು ದೊರೆತಿದ್ದು ದಾನದ ವಿಷಯವನ್ನು ಹೇಳಿದೆ.[೨೧] ಗಂಗರ ಹೆಚ್ಚಿನ ಶಾಸನಗಳಲ್ಲಿ ಹೇಳಿರುವಂತೆ ಈತನು ಪರಾಕ್ರಮಿಯೂ ಮತ್ತು ವಿದ್ವಾಂಸನೂ ಆಗಿದ್ದನು. ಮೂರನೆಯ ಮಾಧವನ ಕಾಲದ ನೊಣಮಂಗಲ ಶಾಸನವು[೨೨] ಈತನು ತನ್ನ ತಂದೆಯಂತೆಯೇ ಗುಣಸಂಪನ್ನನೂ, ವಿದ್ಯೆ ಮತ್ತು ವಿನಯಗಳಿಂದ ಕೂಡಿದಂತಹ ಪ್ರವೃತ್ತಿ ಉಳ್ಳವನೂ, ಚೆನ್ನಾಗಿ ರಾಜ್ಯ ಪರಿಪಾಲನೆ ಮಾಡುವುದಕ್ಕಾಗಿಯೇ ಪಡೆದಂತಹ ರಾಜ್ಯ ಉಳ್ಳವನೂ, ವಿದ್ವಾಂಸರಿಗೂ ಮತ್ತು ಕವಿಗಳಿಗೂ ಬಂಗಾರದ ಸಲಾಕೆಯಂತಿರುವವನೂ (ಅಂದರೆ ವಿದ್ವಾಂಸರು ಮತ್ತು ಕವಿಗಳಿಗೂ ಮೀರಿದ ವಿದ್ವತ್ತು ಉಳ್ಳವನು) ನೀತಿಶಾಸ್ತ್ರವನ್ನು ಚೆನ್ನಾಗಿ ಬಲ್ಲವನೂ ಮತ್ತು ಅದನ್ನು ಪ್ರಯೋಗಿಸಲು ಸಮರ್ಥನೂ 'ದತ್ತಕ ಸೂತ್ರ'ವೆಂಬ ಗ್ರಂಥಕ್ಕೆ ವೃತ್ತಿ (ವ್ಯಾಖ್ಯೆ)ಯನ್ನು ಬರೆದವನೂ ಆಗಿದ್ದನು.

ಒಂದನೆಯ ಮಾಧವನು ಪ್ರಸಿದ್ಧ ರಾಜನಾಗಿದ್ದರೂ ಇವನ ಕಾಲಕ್ಕೆ ಸಂಬಂಧಿಸಿದ ಶಾಸನಗಳ ಸಂಖ್ಯೆ ಕಡಿಮೆಯಿದೆ. ಕೋಲಾರ ಜಿಲ್ಲೆಯಲ್ಲಿ ಇವನನ್ನು ಉಲ್ಲೇಖಿಸುವಂತಹ ಶಾಸನಗಳು ದೊರೆಯುವುದಿಲ್ಲ. ಒಂದನೆಯ ಮಾಧವನಿಗೆ ಹರಿವರ್ಮನೆಂಬ ಪುತ್ರನಿದ್ದನು ಈತನಿಗೆ ಆರ್ಯ್ಯವರ್ಮ ಎಂಬ ಹೆಸರಿತ್ತು. ಅಲ್ಲದೆ ಕೃಷ್ಣವರ್ಮನೆಂಬ ಮಗನೂ ಇದ್ದನು. ಬೆಂಡಿಗಾನಹಳ್ಳಿ ಶಾಸನವು[೨೩] ಈತನನ್ನು ವಿಜಯಕೃಷ್ಣವರ್ಮನೆಂದು ಉಲ್ಲೇಖಿಸಿದೆ.

ಹರಿವರ್ಮ

ಮುಂದೆ ಈ ವಂಶದಲ್ಲಿ ಈತನ ಮಗನಾದ ಹರಿವರ್ಮನು ಗಂಗರಾಜ್ಯಕ್ಕೆ ಅಧಿಪತಿಯಾದನು. ಕಂಚಿಯ ದೊರೆ ಪಲ್ಲವ ಒಂದನೆಯ ಸಿಂಹವರ್ಮನು ಈ ಹರಿವರ್ಮನ ಪಟ್ಟಾಭಿಷೇಕಕ್ಕೆ ಬಂದು ಆತನೇ ರಾಜನಿಗೆ ಪಟ್ಟಾಭಿಷೇಕ ಮಾಡಿದನೆಂಬ ಅಪೂರ್ವವಾದ ಮಾಹಿತಿಯು ದೊರೆಯುತ್ತದೆ. ಈ ಹರಿವರ್ಮನನ್ನು ತಿಳಿಸುವ ಶಾಸನಗಳು ಕಡಿಮೆ ಇದ್ದು ಕೋಲಾರ ಜಿಲ್ಲೆಯಲ್ಲೂ ಈತನಿಗೆ ಸಂಬಂಧಿಸಿದ ಯಾವುದೇ ಶಾಸನಗಳೂ ದೊರೆಯುವುದಿಲ್ಲ. ಈತನಿಗೆ ಮಾಧವ ಮತ್ತು ವಿಷ್ಣುಗೋಪ ಎಂಬ ಪುತ್ರರಿದ್ದರು. ಇವನ ಸಮಕಾಲೀನನಾದ ಕೃಷ್ಣವರ್ಮನಿಗೆ ಸಿಂಹವರ್ಮನೆಂಬ ಮಗನಿದ್ದ.

ಸಿಂಹವರ್ಮ

ಕೋಲಾರ ತಾಲ್ಲೂಕಿನ ಚೆಲುವನಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ತಾಮ್ರಶಾಸನವು ಗಂಗದೊರೆ ಸಿಂಹವರ್ಮನ ಕಾಲದ್ದಾಗಿದೆ. ಕೋಲಾರ ಜಿಲ್ಲೆಯಲ್ಲಿ ಸಿಂಹವರ್ಮನಿಗೆ ಸಂಬಂಧಿಸಿದ ಶಾಸನ ಇದೊಂದೆ ಆಗಿದೆ. ಇದನ್ನು ಡಾ.ದೇವರಕೊಂಡಾರೆಡ್ಡಿಯವರು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.[೨೪]

ಈ ತಾಮ್ರಶಾಸನವು ಗಂಗ ವಂಶದ ದೊರೆಗಳಲ್ಲಿ ಕೆಲವು ರಾಜರುಗಳ ಮಾಹಿತಿಯನ್ನು ನೀಡಿದೆ. ಕೊಂಗುಣಿವರ್ಮ ಧರ್ಮರಾಜನಿಂದ ಸಿಂಹವರ್ಮನ ತನಕ ವಿವರವಿದೆ. ಆದರೆ ಮಾಹಿತಿಯನ್ನು ಸಂಕ್ಷಿಪ್ತವಾಗಿ ಹೇಳಿದಂತಿದೆ. ಕೊಂಗುಣಿವರ್ಮ ಧರ್ಮ ಮಹಾರಾಜನ ಮೊಮ್ಮಗ ಮಾಧವವರ್ಮ, ಆತನ ಪುತ್ರ ಕೃಷ್ಣವರ್ಮ

ಮತ್ತು ಆತನ ಪುತ್ರ ಸಿಂಹವರ್ಮನ ಮಾಹಿತಿಯಿದೆ. ಈ ಸಿಂಹವರ್ಮನನ್ನು ಶಾಸನವು ಬಹಳವಾಗಿ ಹೊಗಳಿದೆ. ಈ ರಾಜನನ್ನು ಗಂಗರ ಮಹಾರಾಜಾಧಿರಾಜನೆಂದು ಕರೆದಿದೆ. ಈತನು ಕುವಳಾಲ ವಿಷಯದಲ್ಲಿ ಕುವಲಾಲ ಎಂಬ ನಗರದಲ್ಲಿರುವಂತಹ ಕೆರೆಯ ಕೆಳಗೆ ಇರುವ ಭೂಮಿಯನ್ನು ಬ್ರಹ್ಮದೇಯ ಕ್ರಮದಲ್ಲಿ ನೀಡಿರುವಂತೆ ಉಲ್ಲೇಖವಿದೆ. ರಾಜನು ತನ್ನ ಆಯುಷ್ಯ, ಬಲ, ವಿಜಯ ಮತ್ತು ಐಶ್ವರ್ಯದ ಅಭಿವೃದ್ಧಿಗಾಗಿ ಕಾಶ್ಯಪಗೋತ್ರ ಮತ್ತು ವಾಜಸನೇಯ ಶಾಖೆಯ 'ಮಾತೃಶರ್ಮ' ಎಂಬುವವನಿಗೆ ಈ ದಾನವನ್ನು ನೀಡಿದಂತಿದೆ.

ಶಾಸನವು ಕೋಲಾರ ಜಿಲ್ಲೆಯನ್ನು 'ಕುವಲಾಲ ವಿಷಯ'ವೆಂದು ಹೇಳಿದ್ದು ಗಂಗ ಅರಸರ ಕಾಲದಲ್ಲಿಯೇ ಇದು ವಿಷಯವಾಗಿತ್ತು (ಜಿಲ್ಲೆಯಾಗಿತ್ತು). ಅದಲ್ಲದೆಯೇ 'ಕುಪಲಾಲ' ಎಂದು ಹೇಳಿದ್ದು ಇದು ಕುವಲಾಲ ನಗರವಾಗಿರಬಹುದು. ಈ ಶಾಸನದಲ್ಲಿರುವಂತಹ ಸಿಂಹವರ್ಮನ ಕುರಿತಾದಂತಹ ವರ್ಣನೆಯು ವಿಶೇಷವಾಗಿದ್ದು ಗಂಗ ಅರಸರ ಇತರ ಶಾಸನಗಳಲ್ಲಿ ಈ ರೀತಿಯಾದ ವಿವರ ದೊರಕುವುದಿಲ್ಲ. ಸಿಂಹವರ್ಮನನ್ನು ಸೂಚಿಸುವಂತಹ ಶಾಸನಗಳು ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ[೧೫] ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪೆನುಗೊಂಡ ತಾಲ್ಲೂಕಿನಲ್ಲಿ ದೊರೆತಿದ್ದು ಇದರಲ್ಲಿ ಪೆನುಗೊಂಡ ಶಾಸನವು ಮಹತ್ವಪೂರ್ಣ ವಿಷಯವನ್ನು ತಿಳಿಸುತ್ತದೆ. ಗಂಗ ಅರಸರ ಹೆಚ್ಚಿನ ಶಾಸನಗಳು ಕೊಂಗುಣಿವರ್ಮ ಧರ್ಮ ಮಹಾರಾಜಾಧಿರಾಜನನ್ನು ವಂಶದ ಮೊದಲ ದೊರೆಯೆಂದು ಸೂಚಿಸಿದ್ದು ಇವನ ನಂತರ ಮೊದಲನೆಯ ಮಾಧವ ಮಹಾರಾಜಾಧಿರಾಜನು ಪ್ರಸಿದ್ಧರಾಜನೆಂದು ಮತ್ತು ಈತನ ಪುತ್ರನನ್ನು ಹರಿವರ್ಮ ಅಥವಾ ಆರ್ಯವರ್ಮನೆಂದು ಶಾಸನಗಳು ಪ್ರತಿಪಾದಿಸಿವೆ.

ಇವರಲ್ಲಿ ಮಾಧವ(ಇಮ್ಮಡಿ)ನು ಗಂಗವಂಶ ತಲೆಮಾರುಗಳಲ್ಲಿ ನಾಲ್ಕನೆಯವನಾಗುತ್ತಾನೆ. ಈತನು ಕ್ರಿ.ಶ.೪೬೦ರಲ್ಲಿ ಗಂಗ ಸಿಂಹಾಸನವನ್ನು ಏರಿದ್ದನು. ಗಂಗ ವಂಶದವರ ಹೆಸರಿನಲ್ಲಿ ವರ್ಮ ಎಂಬ ಉಪನಾಮವು ಕಡಿಮೆ ಪ್ರಯೋಗವಿದ್ದು ಇದು ಗಂಗರ ಸಮಕಾಲೀನರಾದ ಪಲ್ಲವರಾಜರುಗಳ ಹೆಸರುಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿದೆ. ಪೆನುಗೊಂಡ ಶಾಸನವು ಆರ್ಯವರ್ಮ (ಹರಿವರ್ಮ) ನನ್ನು ಪಲ್ಲವ ದೊರೆ ಸಿಂಹವರ್ಮನು ಪಟ್ಟಾಭಿಷಕ್ತಗೊಳಿಸಿದನು ಮತ್ತು ಇಮ್ಮಡಿ ಮಾಧವ ಮಹಾಧಿರಾಜನನ್ನು ಪಲ್ಲವ ದೊರೆ ಸ್ಕಂಧವರ್ಮನು ಪಟ್ಟಾಭಿಷೇಕ ಮಾಡಿದನೆಂದು ಸ್ಪಷ್ಟಪಡಿಸಿದೆ. ಹರಿವರ್ಮನು ತನ್ನ ಪ್ರಭುವಾದ ಪಲ್ಲವ ಸಿಂಹವರ್ಮನ ಹೆಸರನ್ನೇ ತನ್ನ ಮಗನಾದ ಮಾಧವನಿಗೆ ನೀಡಿರಬಹುದು.[೧೬] ತುಮಕೂರು ಜಿಲ್ಲೆಯ ಮೆಳಕೋಟೆಯಲ್ಲಿ ದೊರಕಿರುವಂತಹ ಸಿಂಹವರ್ಮನ ಕಾಲದ ತಾಮ್ರಶಾಸನವು ಅವನಿ ಶಬ್ದವನ್ನು ಉಲ್ಲೇಖಿಸಿದೆ. ಇದು ಕೋಲಾರ ಜಿಲ್ಲೆಯ ಅವನಿಯಾಗಿರಬಹುದು.[೧೭]

ಚೆಲುವನಹಳ್ಳಿ ಶಾಸನವು[೧೮] ಸಂಸ್ಕೃತ ಶಾಸನವಾಗಿದ್ದು ಸಿಂಹವರ್ಮನ ಗುಣಗಾನವನ್ನು ಈ ರೀತಿಯಾಗಿ ಮಾಡಿದೆ.

"ಸದ್ದರ್ಮೋದ್ಧರಣ ಪ್ರಲಂಬ: (ನಿತ್ಯ ಸನ್ನದ್ಧರಾಗಿರುವಂತಹ ವಿಶಾಲವಾದ ಎರಡು ಬಾಹುಗಳುಳ್ಳವನೂ),**ಪಯಶ್ಚಂದ್ರ ಚಂದನ ಮಂದಿರ ಪೃಥ್ವಿಸಾಗರ ಭಾಸ್ಕರ ತುಲ್ಯ ಮಾಧುರ್ಯ ಕಾಂತಿತ್ವ ಶೃತ್ರು ಗೌರವ ಕ್ಷಾಂತಿ ಧೈರ್ಯ ಪ್ರತಾಪಃ** (ಹಾಲು, ಚಂದ್ರ, ಚಂದನ, ಮಂದಿರ, ಪರ್ವತ, ಭೂಮಿ, ಸಾಗರ ಮತ್ತು ಸೂರ್ಯನಿಗೆ ಸಮಾನವಾದ ಮಧುರತೆ, ಪ್ರಕಾಶತೆ, ಮೃದುತ್ವ, ಗೌರವ, ಸೊಬಗು, ಧೈರ್ಯ ಮತ್ತು ಪ್ರತಾಪವುಳ್ಳವನು.) ದಾಕ್ಷಿಣಾರ್ಜಿತ ಶೌಚ, ಶೌರ್ಯ, ತ್ಯಾಗ, ವಿಕ್ರಮೋತ್ಸಹ, ಮಹಾತ್ಮ ತನ್ನ ದಾಕ್ಷಿಣ್ಯದ ಗುಣದಿಂದಲೇ

ಸಂಪಾದಿಸಿದಂತಹ ಶುಚಿತ್ವ ಶೌರ್ಯ, ತ್ಯಾಗ, ವಿಕ್ರಮ, ಉತ್ಸಾಹಗಳುಳ್ಳವನೂ, **'ಅಪ್ರತಿಮ ಪರಾಕ್ರಮ ಯಶಸಾ ನೀತಿ ವಿಧಿ ನಿಯತ ನೈಪುಣ್ಯಃ'** (ಅಪ್ರತಿಮವಾದ ಪರಾಕ್ರಮಿ ಮತ್ತು ಯಶಸ್ಸಿನಿಂದಾಗಿ ನೀತಿ ಮತ್ತು ವಿಧಿ ಪ್ರಕಾರವಾಗಿ ನಡೆಯುವುದರಲ್ಲಿ ನಿಪುಣನೂ) **ಶುಕ್ರ ಬೃಹಸ್ಪತಿಭ್ಯಾಮಪ್ಯಾಸನ್ನಮಾನ ಮತಿ ವಿಸ್ತಾರಃ** (ಶುಕ್ರಾಚಾರ್ಯರು ಮತ್ತು ಬೃಹಸ್ಪತಿ ಆಚಾರ್ಯರನ್ನು ಮೀರಿಸುವಂತಹ ಬುದ್ಧಿವಂತಿಕೆ ಉಳ್ಳವನು) **ಅನೇಕ ಶಾಸ್ತ್ರೋಹದಿಪಾರಗಮನವಿಪೂತಾತ್ಮ** (ಅನೇಕ ಶಾಸ್ತ್ರಗಳೆಂಬ ಸಮುದ್ರವನ್ನು ದಾಟಿ ಶುದ್ಧಗೊಳಿಸಿದಂತಹ ಮನಸ್ಸುಳ್ಳವನು) **ಅನೇಕ ಗೋ, ಹಿರಣ್ಯ, ಭೂಮ್ಯಾದಿದಾನೈಃ ಪ್ರವೃದ್ಧ ಧರ್ಮ ಸಂಚಯಃ** (ಅನೇಕ ಗೋವುಗಳು, ಬಂಗಾರ ಮತ್ತು ಭೂದಾನ ಮೊದಲಾದ ದಾನಗಳಿಂದಾಗಿ ಪುಣ್ಯ ಸಂಪಾದನೆಯನ್ನು ಮಾಡಿರುವನು) ಕ್ರಮಾಧಿಗತರಾಜ್ಯ (ಕ್ರಮದಂತೆ ಒದಗಿ ಬಂದಂತಹ ರಾಜ್ಯಭಾರ ಉಳ್ಳವನು) ಎಂದು ಮೊದಲಾಗಿ ವರ್ಣಿಸಿದೆ.

ಮುಮ್ಮಡಿ ಮಾಧವವರ್ಮ

ಗಂಗವಂಶದ ದೊರೆಗಳಲ್ಲಿ ಮಾಧವ ವರ್ಮ ಅಥವಾ ಮುಮ್ಮಡಿ ಮಾಧವ ವರ್ಮನು ಪ್ರಸಿದ್ಧನು. ಈತನಿಗೆ ತಡಂಗಾಲ ಎಂಬ ಇನ್ನೊಂದು ಹೆಸರಿತ್ತು. ಈತನು ಗಂಗವಂಶದ ದೊರೆಗಳಲ್ಲಿ ಪ್ರಮುಖರಾದಂತಹ ಐದನೆಯ ದೊರೆಯಾದ ವಿಷ್ಣುಗೋಪ ಮಹಾರಾಜನ ಪುತ್ರನು. ಈತನ ಕಾಲವನ್ನು ಮತ್ತು ಆಳ್ವಿಕೆ ನಡೆಸಿದಂತಹ ಸಮಯವನ್ನು ಸರಿಯಾಗಿ ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಆದರೆ ಮಾಧವವರ್ಮನ ನಂತರ ದೊರಕುವಂತಹ ಶಾಸನಗಳಿಂದ ಈತನ ಕಾಲವನ್ನು ಈ ರೀತಿಯಾಗಿ ನಿರ್ಧರಿಸಬಹುದಾಗಿದೆ. ಈ ಮಾಧವವರ್ಮನ ಪುತ್ರ ಅವನೀತ. ಇತಿಹಾಸಕಾರರು ಈ ಅವನೀತನ ಕಾಲವನ್ನು ಆತನ ಪಟ್ಟಾಭಿಷೇಕವಾದಂತಹ ಕಾಲವನ್ನು ಸರಿಯಾಗಿ ನಿರ್ಧರಿಸಿ ಕ್ರಿ.ಶ.೪೯೫ ಎಂದು ತೀರ್ಮಾನಿಸಿದ್ದಾರೆ. ಅದಲ್ಲದೆಯೇ ಈ ಅವನೀತನ ಜೀವಿತಾವಧಿಯನ್ನು ಕ್ರಿ.ಶ.೪೬೯ರಿಂದ ಕ್ರಿ.ಶ.೫೨೯ ಎಂದು ನಿರ್ಧರಿಸಿರುವುದರಿಂದ ಮಾಧವವರ್ಮನ ಕಾಲವನ್ನು ಕ್ರಿ.ಶ.೫ನೆಯ ಶತಮಾನದ ಪೂರ್ವಾರ್ಧವೆಂದು ಊಹಿಸಬಹುದು. ಅದಲ್ಲದೆಯೇ ಅವನೀತನು ತನ್ನ ಬಾಲ್ಯ ಕಾಲದಲ್ಲಿಯೇ ಪಟ್ಟಾಭಿಷೇಕವನ್ನು ಹೊಂದಿದುದರಿಂದ ಮಾಧವನು ತನ್ನ ಇಳಿವಯಸ್ಸಿನಲ್ಲಿ ರಾಜನಾಗಿರಬಹುದು.

ಗಂಗ ದೊರೆಗಳಲ್ಲಿ ಮೂರನೆಯ ಪ್ರಬಲ ದೊರೆಯಾದ ಹರಿವರ್ಮನಿಗೆ ಇಮ್ಮಡಿ ಮಾಧವ, ವೀರವರ್ಮ ಮತ್ತು ವಿಷ್ಣುಗೋಪ ಮಹಾರಾಜರೆಂದು ಮೂರು ಜನ ಪುತ್ರರು. ಇಮ್ಮಡಿ ಮಾಧವನೂ ಪ್ರಸಿದ್ಧ ರಾಜನಾಗಿದ್ದನು. ಈತನು ಕ್ರಿ.ಶ.೪೬೦ರಲ್ಲಿ ಸಿಂಹಾಸನವನ್ನೇರಿದ್ದನು. ಈತನು ಕ್ರಿ.ಶ.೪೨೫ರತನಕ ರಾಜ್ಯಭಾರವನ್ನು ಮಾಡಿದ್ದನು. ಇಮ್ಮಡಿ ಮಾಧವನ ಶಾಸನಗಳು ಕ್ರಿ.ಶ.೪೨೫ರ ತನಕ ಸಿಗುವುದು ಇದಕ್ಕೆ ಸಾಕ್ಷಿಯಾಗಿದೆ. ಈ ಇಮ್ಮಡಿ ಮಾಧವನ ಆಳ್ವಿಕೆಯ ಸಮಯದಲ್ಲಿಯೇ ಈತನ ತಮ್ಮನಾದ ವೀರವರ್ಮನು ಮರಣ ಹೊಂದಿದುದರಿಂದ ವೀರವರ್ಮನ ತಮ್ಮನಾದ ವಿಷ್ಣುಗೋಪನಿಗೆ ರಾಜ್ಯಭಾರದ ಹೊಣೆಯು ಬಂದಿತ್ತು. ಆದರೆ ಈ ವಿಷ್ಣುಗೋಪನು ಬಹಳ ಕಾಲದ ತನಕ ಆಳ್ವಿಕೆ ನಡೆಸಿರಲಿಲ್ಲವೆಂದು ತೋರುತ್ತದೆ. ಈತನಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ದೊರಕುವುದಿಲ್ಲ. ಇತಿಹಾಸಕಾರರು ವಿಷ್ಣುಗೋಪನು ಐದು ವರ್ಷಗಳಷ್ಟು ಕಾಲ ರಾಜ್ಯವನ್ನಾಳಿರಬಹುದು ಎಂದು ಊಹಿಸಿದ್ದಾರೆ. ಹಾಗಾಗಿ ವಿಷ್ಣುಗೋಪನ ಕಾಲವು ಕ್ರಿ.ಶ.೪೮೦ರಲ್ಲಿ ಕೊನೆಗೊಂಡಿದ್ದು ಈತನ ಪುತ್ರನಾದ ಮುಮ್ಮಡಿಮಾಧವನು ಕ್ರಿ.ಶ.೪೮೦ರಲ್ಲಿಯೇ ಪಟ್ಟಾಭಿಷಿಕ್ತನಾಗಿದ್ದನು.

ಮಾಲೂರು ತಾಲ್ಲೂಕಿನ ನೊಣಮಂಗಲ ಗ್ರಾಮದಲ್ಲಿರುವ ಹಳೆಯ ಪಾಳುಬಿದ್ದಂತಹ ಜೈನಬಸದಿಯಲ್ಲಿ ದೊರಕಿದಂತಹ ತಾಮ್ರಶಾಸನವು[೨೬] ಮಾಧವವರ್ಮನಿಗೆ ಸಂಬಂಧಿಸಿದುದಾಗಿದೆ. ಈ ಶಾಸನವು ಗಂಗ ವಂಶದ ದೊರೆಗಳ ವಂಶವೃಕ್ಷವನ್ನು ತೋರಿಸಿದೆ. ಗಂಗ ವಂಶದ ಮೊದಲ ದೊರೆ ಕೊಂಗಣಿ ವರ್ಮ ಧರ್ಮ ಮಹಾರಾಜನಿಂದ ಮುಮ್ಮಡಿಮಾಧವವರ್ಮ ಮಹಾರಾಜನವರೆಗೆ ವಂಶಾವಳಿಯ ಉಲ್ಲೇಖವಿದೆ. ಶಾಸನದ ಪ್ರಾರಂಭದಲ್ಲಿ 'ನಮಃ ಸರ್ವಜ್ಞಾಯ' ಎಂದು ಉಲ್ಲೇಖಿತವಾಗಿರುವುದು ಗಮನಾರ್ಹವಾಗಿದೆ.

ಮಾಧವ ಮಹಾಧಿರಾಜನು ರಾಜ್ಯವನ್ನಾಳುತ್ತಿರಲು ಹದಿಮೂರನೆಯ ಸಂವತ್ಸರ ಫಾಲ್ಗುಣ ಮಾಸದ ಶುಕ್ಲಪಕ್ಷದ ಪಂಚಮಿತಿಥಿಯಂದು ಆಚಾರ್ಯ ವೀರದೇವನ ಉಪದೇಶದ ಮೇರೆಗೆ ಮುದುಕುತ್ತೂರು ವಿಷಯದಲ್ಲಿರುವ ಪೆರ್ಬೊಳಲ್ ಎಂಬ ಗ್ರಾಮದಲ್ಲಿರುವ 'ಅರ್ಹತ್' ಆಯತನಕ್ಕೆ (ದೇವಾಲಯ) ಕುಮಾರಪುರ ಗ್ರಾಮವನ್ನು ದಾನವನ್ನಾಗಿ ನೀಡಿರುವಂತಹ ವಿಚಾರ ಶಾಸನದಲ್ಲಿದೆ. ಈ ಗ್ರಾಮದೊಂದಿಗೆ ಮಹಾತಟಾಕದ ಕೆಳಗೆ ೧೨ ಖಂಡುಗಗಳಷ್ಟು ಧಾನ್ಯವನ್ನು ಬೆಳೆಯುವಂತಹ ಭೂಮಿಯನ್ನು ಉಪವನಕ್ಕೆ ಬೇಕಾದಂತಹ ಭೂಮಿಯನ್ನು ದಾನ ಮಾಡಿದಂತಹ ಉಲ್ಲೇಖವಿರುವುದು. ಈ ಶಾಸನದಲ್ಲಿ ತಿಳಿಸಿರುವ ಪೆರ್ಬ್ಬೊಳಲ್ ಗ್ರಾಮವನ್ನು ಗುರುತಿಸುವುದು ಕಷ್ಟಕರವಾಗಿದೆ. ಮಾಧವವರ್ಮನು ಕ್ರಿ.ಶ.೪೮೦ರಲ್ಲಿ ಪಟ್ಟಾಭಿಷಕ್ತನಾಗಿದ್ದರೆ ಆತನ ಪಟ್ಟಾಭಿಷಕ್ತನಾಗಿ ೧೩ನೇ ವರ್ಷವೆಂದು ಶಾಸನವು ಉಲ್ಲೇಖಿಸಿರುವುದರಿಂದ ಈ ಶಾಸನವು ಕ್ರಿ.ಶ.೪೯೩ನೇಯ ಇಸವಿಗೆ ಸಂಬಂಧಿಸಿರಬಹುದು.

ನೊಣಮಂಗಲ ಶಾಸನವು ಮಾಧವ ವರ್ಮನನ್ನು ಬಹಳವಾಗಿ ಕೊಂಡಾಡಿದೆ. ರಾಜನ ಹೊಗಳುವಿಕೆಯನ್ನುಳ್ಳಂತಹ ಸಾಲುಗಳು ಶಾಸನದಲ್ಲಿ ಈ ರೀತಿಯಾಗಿದೆ. **'ಪಿತುರನ್ವಾಯತ ಗುಣಯುಕ್ತೇನ'** (ತನ್ನ ತಂದೆಯ ಎಲ್ಲಾ ಗುಣಗಳನ್ನು ಹೊಂದಿರುವವನು) **'ತ್ರ್ಯಂಬಕ ಚರಣಾಂಬೋರುಹ ರಜಃ ಪವಿತ್ರೀ ಕೃತೋತ್ತಮಾಂಗೇನ'** (ಶಿವನ ಚರಣ ಕಮಲಗಳಲ್ಲಿರುವ ಧೂಳೆಂಬ ಮಕರಂದಗಳಿಂದ ಪವಿತ್ರಗೊಳಿಸಲ್ಪಟ್ಟಂತಹ ಶಿರಸ್ಸುಳ್ಳವನು), **'ವ್ಯಾಯಾಮೀಧೃತ ಪೀನ ಕಠಿಣ ಭುಜದ್ವಯೇನ'** ವ್ಯಾಯಾಮಾಭ್ಯಾಸವನ್ನು ಮಾಡಿಕೊಂಡು ತನ್ನ ಶರೀರವನ್ನು ಸಮಸ್ಥಿತಿಯಲ್ಲಿರಿಸಿಕೊಂಡವನು) **'ಸ್ವಭುಜ ಬಲ ಪರಾಕ್ರಮ ಕ್ರಯಕ್ರೀತರಾಜ್ಯೇನ'**(ತನ್ನ ಭುಜಬಲ ಪರಾಕ್ರಮದಿಂದಲೇ ರಾಜ್ಯವನ್ನು ಗಳಿಸಿಕೊಂಡವನು) **ಕ್ಷುತ್ ಕ್ಷಾಮೋಪ್ಪ ಪಿಶಿತಾಶನ ಪ್ರೀತಿಕರ ನಿಶಿತ ಧಾರಾಸಿನಾ** (ತನ್ನ ಖಡ್ಗದಿಂದ ಯಾವಾಗಲೂ ಯಮರಾಜನ ದಾಹವನ್ನು ನೀಗಿಸುವವನು)ಇತ್ಯಾದಿ. ಶಾಸನದಲ್ಲಿರುವಂತಹ ಈ ಹೊಗಳುವಿಕೆಯು ಈತನ ಪರಾಕ್ರಮವನ್ನು ಶೌರ್ಯವನ್ನು ಮತ್ತು ಪ್ರಸಿದ್ಧಿಯನ್ನು ಸೂಚಿಸುತ್ತದೆ. ಸ್ವಭುಜ ಬಲ ಪರಾಕ್ರಮಕ್ರಯ ಕ್ರೀತರಾಜ್ಯ ಎಂಬ ವಿಷಯವಾಗಿ ವಿದ್ವಾಂಸರಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿವೆ. ಬಹುಶಃ ಈತನು ಪಟ್ಟಾಭಿಷಕ್ತನಾಗುವ ಮೊದಲು ತನ್ನ ಹಲವಾರು ಸಾಮಂತ ರಾಜ್ಯಗಳು ತಪ್ಪಿರಬೇಕು. ಆ ಎಲ್ಲಾ ರಾಜ್ಯಗಳನ್ನು ತನ್ನ ಭುಜಬಲ ಪರಾಕ್ರಮದಿಂದಲೇ ಗೆದ್ದನೆಂದು ತಿಳಿಯಬಹುದಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ಮುದುಕೊಟ್ಟೂರು ಎಂಬ ಗ್ರಾಮವು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮುದುಕುತ್ತೂರು ಗ್ರಾಮವಾಗಿದೆ.

ಅವನೀತ

ಮುಮ್ಮಡಿ ಮಾಧವನ ನಿಧನದ ನಂತರ ಆತನ ಪುತ್ರನಾದ ಅವನೀತನು ಪಟ್ಟಾಭಿಷಕ್ತನಾಗಿದ್ದನು. ಈತನನ್ನೇ ಶಾಸನಗಳು ಕೊಂಗುಣಿವರ್ಮ ಧರ್ಮ ಮಹಾರಾಜ ಎಂದು ಹೆಸರಿಸಿವೆ. ಶಿಡ್ಲಘಟ್ಟ ತಾಲ್ಲೂಕಿನ ಹೊಸಕೋಟೆ ಶಾಸನವು "ಕೊಂಗುಣಿ ಮಹಾಧಿರಾಜನಿಗೆ ಅವನೀತ ಎಂಬ ಇನ್ನೊಂದು ಹೆಸರು ಇತ್ತೆಂದು ದೃಢಪಡಿಸುತ್ತದೆ.[೩೦] ಈತನು ತನ್ನ ತಂದೆಯ ನಂತರ ಪಟ್ಟಾಭಿಷಕ್ತನಾದನು. ಗಂಗರ ಶಾಸನಗಳಲ್ಲಿ ಕಾಲಗಣನೆಯ ವಿಚಾರವಾಗಿ ಬಹಳ ಗೊಂದಲಗಳಿವೆ. ಗಂಗ ಅರಸರ ಹೆಚ್ಚಿನ ಶಾಸನಗಳಲ್ಲಿ ರಾಜನು ಪಟ್ಟಾಭಿಷಿಕ್ತನಾದ ವರ್ಷವನ್ನು ಸೂಚಿಸಿರುತ್ತವೆ. ಆದರೆ ಸಂವತ್ಸರವನ್ನಾಗಲಿ ಶಕ ವರ್ಷವನ್ನಾಗಲಿ ಸೂಚಿಸಿರುವುದಿಲ್ಲ. ಮಾಸ, ಪಕ್ಷ ಮತ್ತು ತಿಥಿಗಳ ಉಲ್ಲೇಖವಿದ್ದರೂ ಶಾಸನ ಸ್ಪಷ್ಟ ಕಾಲವನ್ನು ನಿರ್ದೇಶಿಸುವುದಿಲ್ಲ. ಅದೇ ರೀತಿಯಾಗಿ ಅವನೀತನಿಗೆ ಸಂಬಂಧಿಸಿದ ಎರಡು ಶಾಸನಗಳು ದೊರಕಿದ್ದು ಇದು ಕ್ರಮವಾಗಿ ರಾಜನ ಪಟ್ಟಾಭಿಷೇಕವಾದ ಒಂದನೆಯ ಮತ್ತು ಎರಡನೇಯ ವರ್ಷಕ್ಕೆ ಸಂಬಂಧಿಸಿದುದಾಗಿದೆ. ಅವನೀತನು ಯಾವಾಗ ಪಟ್ಟಾಭಿಷಕ್ತನಾದನೆಂದು ಊಹಿಸುವುದು ಕಷ್ಟಕರವಾಗಿದೆ.

ಅವನೀತನು ಗಂಗ ಅರಸರುಗಳಲ್ಲಿ ಪರಾಕ್ರಮಿಯಾಗಿದ್ದನು. ಅವನೀತನ ತಂದೆ ಮುಮ್ಮಡಿ ಮಾಧವನು ಕ್ರಿ.ಶ.೪೪೦ರಲ್ಲಿ ಪಟ್ಟಾಭಿಷಕ್ತನಾಗಿದ್ದು, ಸುಮಾರು ೧೫ ವರ್ಷಗಳ ತನಕ ಆಳ್ವಿಕೆ ಮಾಡಿದ್ದುದರಿಂದ ಕ್ರಿ.ಶ.೪೫೫ರಲ್ಲಿ ಅವನೀತನು ಪಟ್ಟಕ್ಕೆ .ಬಂದಿರಬಹುದು. ಕರ್ನಾಟಕದಲ್ಲಿ ಅವನೀತನಿಗೆ ಸಂಬಂಧಿಸಿದ ಪ್ರಮುಖವಾದ ಆರು ಶಾಸನಗಳು ದೊರೆಯುತ್ತವೆ. ಇದರಲ್ಲಿ ಎರಡು ಶಾಸನಗಳು ಕೂಟಶಾಸನಗಳೆಂದು ವಿಮರ್ಶಕರ ಅಭಿಪ್ರಾಯವಿದೆ.[೩೦ಎ] ಈತನು ಗಂಗ ವಂಶದ ರಾಜಧಾನಿಯನ್ನು ತಲಕಾಡಿಗೆ ಸ್ಥಳಾಂತರಿಸಿದನು. ಪುನ್ನಾಡ ರಾಜ್ಯದ ರಾಜಕುಮಾರಿಯು ಈತನ ಮಡದಿಯಾಗಿದ್ದಳು. ಈ ಪುನ್ನಾಡು ಕಪಿಲಾನದಿ ಬಳಿಯ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಸೇರಿದ ಪ್ರದೇಶವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಅವಿನೀತನಿಗೆ ಸಂಬಂಧಿಸಿದ ಒಂದು ಶಾಸನವು ಮಾಲೂರು ತಾಲ್ಲೂಕಿನ ನೊಣಮಂಗಲ ಪ್ರದೇಶದಲ್ಲಿ ದೊರಕಿದೆ. ಈ ಶಾಸನವು ಅವನೀತನ ಪಟ್ಟಾಭಿಷೇಕವಾದ ಒಂದನೇಯ ವರ್ಷದಲ್ಲಿ ಪ್ರಕಟವಾದ ಶಾಸನವಾಗಿದೆ.[೩೧] ಶಾಸನವು ಗಂಗ ಅರಸರಾದ ಕೊಂಗಣಿ ಧರ್ಮ ಮಹಾಧಿರಾಜ, ಮಾಧವವರ್ಮ, ಹರಿವರ್ಮ, ವಿಷ್ಣುಗೋಪ ಮತ್ತು ಮಾಧವ ವರ್ಮ ಧರ್ಮಮಹಾಧಿರಾಜರ ಮಾಹಿತಿಯನ್ನು ಒದಗಿಸಿದೆ. ಆದರೆ ಶಾಸನವು ಈತನ ಇನ್ನೊಂದು ಹೆಸರಾದ 'ಅವನೀತ' ಶಬ್ದವನ್ನು ಬಳಸಿಲ್ಲ.

ನೊಣಮಂಗಲ ಶಾಸನವು ಅವನೀತ ರಾಜನ ವಿಪುಲೈಶ್ವರ್ಯವು ಅಭಿವೃದ್ಧಿ ಹೊಂದುತ್ತಿರಲು ಮೊದಲನೆಯ ವರ್ಷದ ಫಾಲ್ಗುಣ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಂದು ತನ್ನ ನೆಚ್ಚಿನ ಗುರುವಾದ ವಿಜಯಕೀರ್ತಿಯ ಉಪದೇಶದ ಮೇರೆಗೆ 'ಉರನೂರ' ಎಂಬಲ್ಲಿರುವಂತಹ ಅರ್ಹಂತನ ಆಯುತನ (ದೇವಾಲಯ)ಕ್ಕೆ 'ಕೊರಿಕುಂದ' ವಿಷಯದಲ್ಲಿರುವ ಒಂದು ಗ್ರಾಮವನ್ನು ಮತ್ತು ಪೆರೂರ ಗ್ರಾಮದಲ್ಲಿರುವ ಅರ್ಹದಾಯತನಕ್ಕಾಗಿ ಕರ್ಷಾಪಣ ಕ್ಷೇತ್ರದಲ್ಲಿ ಕಾಲು ಭಾಗವನ್ನು ದೇವಭೋಗ ಕ್ರಮದಲ್ಲಿ ನೀಡಿದನು ಎಂಬ ಮಾಹಿತಿಯು ಶಾಸನದಲ್ಲಿದೆ. ಉರನೂರಿನ ಅರ್ಹಂತರ ಆಲಯವು ಚಂದ್ರ ನಂದಿ ಆಚಾರ್ಯ ಮೊದಲಾದ ಪ್ರಮುಖರಿಂದ ಕೂಡಿರುವ ಮೂಲ ಸಂಘದವರಿಂದ ನಿರ್ಮಿಸಲ್ಪಟ್ಟಿದೆಯೆಂಬ ವಿಚಾರವು ಶಾಸನದಲ್ಲಿದೆ.

ಗಂಗ ಅರಸರು ಮೂಲತಃ ಜೈನಮತಾವಲಂಬಿಗಳಾಗಿದ್ದರು. ಅವರು ಜಿನ ದೇವಾಲಯಗಳಿಗೆ ಹಲವಾರು ದಾನಗಳನ್ನು ನೀಡಿದ್ದಾರೆ. ಅವನೀತನೂ ಕೂಡ ಅದೇ ದಾರಿಯನ್ನು ಅನುಸರಿಸಿದವನಾಗಿದ್ದಾನೆ. ಈ ಶಾಸನವನ್ನು ಬರೆದವನು 'ತಟ್ಟಕಾರನಾದ ಮಾರಿಷ'ನಾಗಿದ್ದಾನೆ. ನೊಣಮಂಗಲ ಶಾಸನವು ಬಹಳವಾಗಿ ಈತನನ್ನು ಹೊಗಳಿದೆ. **'ಜನನೀ ದೇವತಾಂಕ ಪರ್ಯಂಕ ತಲ ಸಮಧಿಗತ ರಾಜ್ಯವಿಭವ ವಿಲಾಸೇನ'** (ತನ್ನ ತಾಯಿಯ ತೊಡೆಯ ಮೇಲೆ ಕುಳಿತುಕೊಂಡಿರುವಾಗಲೇ ರಾಜ್ಯಾಧಿಕಾರವನ್ನು ಸಂಪಾದಿಸಿರುವವನು) **'ನಿಜ ಪ್ರಭಾವಾಂಶುಕ ಚಕ್ರವಾಳಾ ಖಂಡಿತ ಶತ್ರು ನೃಪತಿ ಮಂಡಲೇನ'** (ತನ್ನ ಪ್ರಭಾವ ಪರಾಕ್ರಮವೆಂಬ ಖಡ್ಗದಿಂದ ನಾಶಗೊಳಿಸಿದಂತಹ ಶತ್ರುಗಳ ಸಮೂಹ ಉಳ್ಳವನು) **ಅಖಂಡಲಿ ವಿಡಂಬಿ ಶೌರ್ಯ್ಯವೀರ್ಯ ಧೈರ್ಯ ಯಶೋಧಾಮ ಭೂತೇನ** (ನಿರಂತರವಾದ ಶೌರ್ಯ, ಪರಾಕ್ರಮ ಮತ್ತು ಧೈರ್ಯಗಳನ್ನೇ ಆಶ್ರಯವನ್ನಾಗಿ ಉಳ್ಳವನು) **ಗಜಧುರಿಹಯ ಪೃಷ್ಠೇ ಕಾಮಕೀಚ ಅದ್ವೀತಿಯೇನ** (ಆನೆಯ ಮೇಲೆ, ಕುದುರೆಗಳ ಬೆನ್ನಿನ ಮೇಲೆ ಮತ್ತು ಬಿಲ್ಲು ವಿದ್ಯೆಯಲ್ಲಿ ಅದ್ವಿತೀಯನೂ) **ಲಳನಾನಿಯ ಭ್ರಮರಾವನೀ ನಿತ್ಯ ಕೃತಾನು ಯಾತ್ರೇಣ** (ಭ್ರಮರಗಳಂತೆ ಯಾವಾಗಲೂ ವಿಜಯ ಯಾತ್ರೆಗೆ ಹೊರಡುವವನೂ) **ಪ್ರಜಾಪರಿಪಾಲನ ಕೃತ ಪರಿಕರ** (ಪ್ರಜಾಪರಿಪಾಲನೆಯಲ್ಲಿಯೇ ಯಾವಾಗಲೂ ಸನ್ನದ್ಧನೂ) **ಕಿಂ ಬಹುನಾ ಇದಂ ಕಲಿ ಯುದಿಷ್ಠರೇಣ** (ಹೆಚ್ಚು ಹೇಳಿ ಏನು ಪ್ರಯೋಜನ ಈತನು ಕಲಿಯುಗದ ಯುಧಿಷ್ಠರನು) ಎಂದಿವೆ. ಧರ್ಮ ಸಹಿಷ್ಣುವಾಗಿದ್ದ ಈತನು ಎಲ್ಲ ಧರ್ಮದ ಧಾರ್ಮಿಕ ಕೇಂದ್ರಗಳಿಗೆ ದಾನ-ದತ್ತಿಗಳನ್ನು ನೀಡಿದ್ದನು. ಕೋಲಾರ ಜಿಲ್ಲೆಗೆ ಈತನ ಕೊಡುಗೆಯು ಹೆಚ್ಚು ಕಂಡು ಬರದಿದ್ದರೂ ರಾಜಕೀಯ ಸ್ಥಿರತೆಯನ್ನು ತಂದು ಕೊಟ್ಟಿದ್ದನು.

ದುರ್ವಿನೀತ

ದುರ್ವಿನೀತನು ಗಂಗ ರಾಜಮನೆತನಗಳಲ್ಲಿ ಪ್ರಸಿದ್ಧರಾಜನಾಗಿದ್ದನು. ಈತನು ಪುನ್ನಾಟ ಮತ್ತು ಪಾನ್ನಾಡು ರಾಜ್ಯಗಳನ್ನು ತನ್ನ ಅಧೀನಕ್ಕೆ ಒಳಪಡಿಸಿದ್ದನು. ಈತನಿಗೆ ಸಂಬಂಧಿಸಿದಂತಹ ಹಲವಾರು ಐತಿಹಾಸಿಕ ಮಾಹಿತಿಗಳು ಶಾಸನಗಳಿಂದ ವೇದ್ಯವಾಗುತ್ತಿದ್ದು, ಈತನು ಕ್ರಿ.ಶ.೫೪೦ರ ಅವಧಿಯಲ್ಲಿ ಗಂಗ ಸಿಂಹಾಸನವನ್ನು ಅಲಂಕರಿಸಿದ್ದನು. ಅವನೀತನ ಹಿರಿಯ ಮಗನಾದ ಈ ದುರ್ವಿತನ ತಾಯಿಯು ಪುನ್ನಾಟ ರಾಜ್ಯದ ಸ್ಕಂದವರ್ಮನ ಮಗಳಾಗಿದ್ದಳು. ಸಿಂಹಾಸನವನ್ನು ಏರುವಂತಹ ಸಂದರ್ಭದಲ್ಲಿ ಹಲವಾರು ವಿರೋಧಗಳನ್ನು ಎದುರಿಸಿದಂತಹ ಈತನು ಪ್ರಾರಂಭದಲ್ಲಿ ಕಂಚಿಯ ಪಲ್ಲವರ ಮತ್ತು ಬನವಾಸಿಯ ಕದಂಬರ ವಿರೋಧವನ್ನು ಎದುರಿಸಬೇಕಾಗಿ ಬಂದಾಗ ಅವರನ್ನು ಸಮರ್ಥವಾಗಿ ಎದುರಿಸಿ ಜಯಗಳಿಸಿದನೆಂಬ ವಿಚಾರವು ಶಿಡ್ಲಘಟ್ಟ ತಾಲ್ಲೂಕಿನ ಹೊಸಪೇಟೆ ಗ್ರಾಮದ ಶಾಸನದಲ್ಲಿ ದೊರಕಿದೆ.[೨]

ಈತನು ಚಾಲುಕ್ಯರೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಂಡು ಚಾಲುಕ್ಯರು ಪಲ್ಲವರೊಂದಿಗೆ ಹೋರಾಡುವ ಸಂದರ್ಭದಲ್ಲಿ ಸಹಾಯವನ್ನು ಮಾಡಿದ್ದನು. ಪಲ್ಲವರೊಂದಿಗೆ ಹೋರಾಡಿ ತನ್ನ ಸಾಮ್ರಾಜ್ಯವನ್ನು ತೊಂಡೈಮಂಡಲದವರೆಗೆ ವಿಸ್ತರಿಸಿದನು. ಹೆಸರೇ ಸೂಚಿಸುವಂತೆ ಈತನು ದುರ್ವಿನೀತ ಅಂದರೆ ಯಾರಿಗೂ ತಲೆಬಾಗದವನು ಎಂದು ಅರ್ಥವಾಗುತ್ತದೆ. ದುರ್ವಿನೀತನು ಕ್ರಿ.ಶ.೫೪೦ರಿಂದ ೬೩೦ರವರೆಗೆ ರಾಜ್ಯಭಾರ ಮಾಡಿದ್ದನು.

ಕೋಲಾರ ಜಿಲ್ಲೆಯಲ್ಲಿ ದೊರಕಿದ ಎರಡು ತಾಮ್ರದ ಶಾಸನಗಳು ಈತನ ಆಳ್ವಿಕೆಯನ್ನು ಸೂಚಿಸುವಂತಾಗಿದ್ದು, ಐತಿಹಾಸಿಕವಾಗಿ ಮಹತ್ವವನ್ನು ಪಡೆದಿವೆ. ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಉತ್ತನೂರು ಗ್ರಾಮದಲ್ಲಿ ದೊರಕಿರುವಂತಹ ತಾಮ್ರಶಾಸನವು ಈತನ ಆಳ್ವಿಕೆಯ ೨೦ನೇ ವರ್ಷಕ್ಕೆ ಸಂಬಂಧಿಸಿದ್ದಾಗಿದೆ.[೩೩]

ಈ ಶಾಸನವು ಗಂಗ ವಂಶದ ಸಂಪೂರ್ಣ ಮಾಹಿತಿಯನ್ನು ನೀಡಿದ್ದು. ದುರ್ವಿನೀತನ ಪಟ್ಟಾಭಿಷೇಕದ ೨೦ನೇಯ ವರ್ಷದಲ್ಲಿ ಹುಟ್ಟಿದಂತಹ ಶಾಸನವಾಗಿದೆ. ರಾಜನು ಆಳುತ್ತಿರಲು ಕಾರ್ತಿಕ ಮಾಸದ ಹುಣ್ಣಿಮೆ, ಕೃತಿಕಾ ನಕ್ಷತ್ರ ಮತ್ತು ಅಭಿಜಿತ್ ಮುಹೂರ್ತದಲ್ಲಿ ಭಾರದ್ವಾಜ ವಾತ್ಸ್ಯ ಮತ್ತು ಕೌಶಿಕ ಗೋತ್ರದ ೪೮ ಬ್ರಾಹ್ಮಣರಿಗೆ ಪುದಲ್ನಾಡ ರಾಷ್ಟ್ರದ 'ಕೋಳಿರ್ತೂರು' ಎಂಬ ಗ್ರಾಮವನ್ನು ದಾನ ನೀಡಿದ್ದನು. ಅದಲ್ಲದೆಯೇ 'ರೆಡಿಯೂರು' ಗ್ರಾಮದಲ್ಲಿರುವ ಕೆರೆಯ ಸಹಾಯದಿಂದ ಅಥವಾ ಆ ಕೆರೆಯ ನೀರಿನಿಂದ ಎಷ್ಟು ಪ್ರದೇಶಗಳವರೆಗೆ ಕೃಷಿಯನ್ನು ಮಾಡಬಹುದೋ ಅಷ್ಟರವರೆಗೆ ಭೂಮಿಯನ್ನು ದಾನವಾಗಿ ನೀಡಿದನು. ಈ ಪ್ರದೇಶವನ್ನು ಗುರುತಿಸುವುದು ಕಷ್ಟಕರವಾಗಿದೆ. ದುರ್ವಿನೀತನು ಕ್ರಿ.ಶ.೪೯೫ರಲ್ಲಿ ಪಟ್ಟಾಭಿಷಕ್ತನಾಗಿದ್ದನು ಎಂದು ನಿರ್ಧರಿಸಿದರೆ ಕ್ರಿ.ಶ.೫೧೫ನೇ ವರ್ಷಕ್ಕೆ ಸಂಬಂಧಿಸಿದ ಶಾಸನ ಇದಾಗಿದೆ. ಈತನ ಆಳ್ವಿಕೆಗೆ ಸಂಬಂಧಿಸಿದ ಇತರ ಶಾಸನಗಳಲ್ಲಿ ಈತನನ್ನು ಕೊಂಗಣಿ ಮಹಾರಾಜ ಎಂದು ಉಲ್ಲೇಖಿಸಿದರೆ ಈ ಶಾಸನವು ಈತನನ್ನು ದುರ್ವಿನೀತ ಎಂದು ಹೆಸರಿಸಿದೆ. ರಾಜಕೀಯವಾಗಿ ಮಹತ್ವವನ್ನು ಪಡೆಯದಿದ್ದರೂ ಈ ಶಾಸನವನ್ನು ದಾನಶಾಸನವೆಂದು ತೀರ್ಮಾನಿಸಬಹುದು. ಈ ಶಾಸನದಲ್ಲಿ ಪುದಲ್ನಾಡು ರಾಷ್ಟ್ರದಲ್ಲಿ ಇರುವ ಕೊಳಿರ್ತೂರು (ಕೋಳಿಂತೂರು) ಎಂದು ಸ್ಥಳನಾಮವನ್ನು ಸೂಚಿಸಿದ್ದು ಇದನ್ನು ಗುರುತಿಸುವುದು ಕಷ್ಟ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ಗುಮ್ಮರೆಡ್ಡಿಪುರದ ತಾಮ್ರಶಾಸನವು ದುರ್ವಿನೀತನಿಗೆ ಸಂಬಂಧಿಸಿದ್ದು ಉತ್ತನೂರು ಶಾಸನದಂತೆ ಹಲವಾರು ವಿಷಯಗಳಲ್ಲಿ ಸಾಮ್ಯತೆಯನ್ನು ಹೊಂದಿದೆ. ಶಾಸನದ ಲಿಪಿಯು ಹಳಗನ್ನಡವಾಗಿದ್ದು ಸಂಸ್ಕೃತ ಭಾಷೆಯಲ್ಲಿದೆ. ಈ ಶಾಸನದಲ್ಲಿ ಗಂಗಕುಲದ ಆದಿಯಿಂದ ಅಂದರೆ ಮೊದಲನೆಯ ರಾಜನಾದ ಕೊಂಗಣಿವರ್ಮ ಧರ್ಮ ಮಹಾರಾಜನಿಂದ ದುರ್ವಿನೀತನವರೆಗೆ ವಂಶಾವಳಿಯಿದ್ದು, ದುರ್ವಿನೀತನು ಪಟ್ಟಾಭಿಷಕ್ತನಾಗಿ ನಲ್ವತ್ತನೆಯ ವರ್ಷದಲ್ಲಿ ಬಂದಂತಹ ಶಾಸನವಾಗಿದೆ.

ದುರ್ವಿನೀತನು ಕಲಾಪ್ರೌಢಿಮೆಯುಳ್ಳಂತಹ ರಾಜನಾಗಿದ್ದನು. ತಾನು ದಿಗ್ವಿಜಯ, ಯುದ್ಧ ಮೊದಲಾದವುಗಳಿಗೆ ಮಾತ್ರ ತನ್ನ ಜೀವನವನ್ನು ಮೀಸಲಾಗಿರಿಸದೆ ಸಾಹಿತ್ಯಕ್ಕೂ ತನ್ನ ಒಲವನ್ನು ತೋರಿಸಿದ್ದನು. ಸಂಸ್ಕೃತ ಕವಿ ಭಾರವಿಯ ಮಹಾಕಾವ್ಯ ಕಿರಾತಾರ್ಜುನೀಯ ಗ್ರಂಥದ ೧೫ನೇಯ ಸರ್ಗಕ್ಕೆ ಟೀಕೆಯನ್ನು ಬರೆದಿರುವನು. ಗುಣಾಢ್ಯನು ಬರೆದಿರುವಂತಹ 'ಬೃಹತ್ಕಥಾ' ಎಂಬ ಗ್ರಂಥವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದ್ದನು.

ದುರ್ವಿನೀತನಿಗೆ ಮುಷ್ಕರ ಮತ್ತು ಪೊಲವೀರರೆಂಬ ಇಬ್ಬರು ಮಕ್ಕಳಿದ್ದರು. ಇವರಲ್ಲಿ ಮುಷ್ಕರನು ಹಿರಿಯವನು. ಕೊಂಗಣಿ ವೃದ್ಧರಾಜನೆಂದು ಕರೆಯಲ್ಪಟ್ಟಿರುವ ಈತನು ದುರ್ವಿನೀತನ ನಂತರ ಪಟ್ಟಕ್ಕೆ ಬಂದಿದ್ದನು. ಆದರೆ ಮುಷ್ಕರನು ರಾಜಕೀಯವಾಗಿ ಪ್ರಬಲನಾಗಿರಲಿಲ್ಲವೆಂದು ಅನಿಸುತ್ತದೆ. ಕೋಲಾರ ಜಿಲ್ಲೆಯನ್ನೊಳಗೊಂಡಂತೆ ಬೇರೆ ಯಾವುದೇ ಸ್ಥಳಗಳಲ್ಲಿ ಈತನಿಗೆ ಸಂಬಂಧಿಸಿದಂತಹ ಶಾಸನಗಳು ದೊರೆಯುತ್ತಿಲ್ಲ.

ದುರ್ವಿನೀತನಿಗೆ ಪೊಲವೀರನೆಂಬ ಸಹೋದರನಿದ್ದನು. ಈತನೂ ಪರಾಕ್ರಮಿಯಾಗಿದ್ದನು. ಈತನು ಅಧಿಕಾರ ಪಡೆಯಲು ಕಾಡುವೆಟ್ಟಿ ಮತ್ತು ವಲ್ಲರಸರೆಂಬುವವರು ನೆರವಾಗಿದ್ದರು. ಕಾಡುವೆಟ್ಟಿ ಎಂದರೆ

ಪಲ್ಲವರಸರೆಂದೂ ಮತ್ತು ವಲ್ಲರಸರೆಂದರೆ ವಲ್ಲಭರಸ (ಚಾಲುಕ್ಯ)ರೆಂದು ಅರ್ಥೈಸಬಹುದಾಗಿದೆ. ಆದರೆ ಗಂಗ ಅರಸರಿಗೆ ಎರಡೂ ಪಾರ್ಶ್ವಗಳಿದ್ದಂತಹ ಚಾಳುಕ್ಯರು ಮತ್ತು ಪಲ್ಲವರಸರು ಪರಸ್ಪರ ವೈರಿಗಳಾಗಿದ್ದರು. ಇವರಿಬ್ಬರೂ ಸೇರಿ ಗಂಗರಿಗೆ ಸಹಾಯವಾಗಿದ್ದರೆಂಬ ವಿಷಯದಲ್ಲಿ ದ್ವಂದ್ವವು ಕಂಡುಬರುತ್ತಿದೆ. ಇವನಿಗೆ ಸಂಬಂಧಿಸಿದಂತಹ ತಗರೆ ಶಾಸನವು ಈ ವಿಷಯವನ್ನು ಸ್ಪಷ್ಟಪಡಿಸುತ್ತಿದ್ದು ಇತಿಹಾಸಕಾರರಲ್ಲಿ ವಿಮರ್ಶೆಗೆ ಕಾರಣವಾಗಿದೆ.[೩೪]

ಶ್ರೀವಿಕ್ರಮ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರಿನಲ್ಲಿ ದೊರೆತಿರುವ ಶಾಸನವು ಶ್ರೀವಿಕ್ರಮ ರಾಜನನ್ನು ಹೆಸರಿಸಿದೆ.[೩೫] ಈ ಶಾಸನವು ಯಾವುದೇ ಕಾಲವನ್ನು ತಿಳಿಸುತ್ತಿಲ್ಲ. ಶ್ರೀವಿಕ್ರಮನನ್ನು 'ಮಹಾರಾಜ'ನೆಂದು ವರ್ಣಿಸಿದ್ದು, ಆತನ ಕಾಲದಲ್ಲಿ ಯಾವುದೋ ರಾಜ್ಯದವರೊಂದಿಗೆ ಯುದ್ಧ ನಡೆದಂತಹ ವಿಷಯವಿದ್ದಂತಿದೆ. ಈ ಯುದ್ಧವು ರಕ್ಕಸನೂರು ಎಂಬಂತಹ ಪ್ರದೇಶವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದಂತಿದೆ. ಈ ಯುದ್ಧದಲ್ಲಿ ಪಬ್ಬು (ಪ್ರಭು) ಎಂಬಂತಹ ಒಬ್ಬ ಸೈನಿಕನು ಹೋರಾಡಿ ವೀರಮರಣವನ್ನು ಹೊಂದಿರುವಂತಹ ವಿಷಯವು ಶಾಸನದಲ್ಲಿದೆ. ರಾಜನು ಈ ವೀರನ ಪರಾಕ್ರಮವನ್ನು ಮೆಚ್ಚಿ ಅವನಿಗೆ ಒಂದು ಖಂಡುಗದಷ್ಟು ಬೆಳೆ ಬೆಳೆಯುವ ಭೂಮಿಯನ್ನು ನೀಡಿರುವನು. ರಾಜನು ಈತನಿಗೆ ನೆತ್ತರ ಪಟ್ಟಿ ಅಂದರೆ ನೆತ್ತರಿನ ಕೊಡುಗೆಯನ್ನು ನೀಡಿರುವಂತಹ ವಿಚಾರವು ಇದೆ.

ಇಲ್ಲಿ ಪ್ರತಿಪಾದಿತವಾಗಿರುವ ಶ್ರೀವಿಕ್ರಮನು ಮುಷ್ಕರನ ಪುತ್ರನಾಗಿದ್ದು ಕ್ರಿ.ಶ.೫೮೫ರಲ್ಲಿ ಸಿಂಹಾಸನವನ್ನು ಏರಿದವನಾಗಿ ಸುಮಾರು ೫೦ ವರ್ಷಗಳ ಕಾಲ ಗಂಗ ವಂಶವನ್ನು ಆಳಿದನು. ವಿಶೇಷವೆಂದರೆ ಇವನನ್ನು ಉಲ್ಲೇಖಿಸಿರುವ ಶಾಸನವು ಕಲ್ಲೂರು ಶಾಸನವೊಂದೇ ಆಗಿದೆ. ಕುಲಗಾಣ ಶಾಸನವು[೩೬] ಈತನನ್ನು ಪೃಥ್ವಿ ಕೊಂಗಣಿ, ಪೃಥ್ವಿರಾಜ ಎಂದು ಉಲ್ಲೇಖಿಸಿದ್ದು ಈತನು ಎಲ್ಲಾ ವಿದ್ಯೆಗಳಿಗೂ ಓರೆಗಲ್ಲಿನಂತಿರುವನು, ಪ್ರಯೋಗ ನಿಪುಣನು, ತನ್ನ ಪರಾಕ್ರಮದಿಂದ ಅಖಿಲ ಜನಪದವನ್ನು ಪಡೆದವನು, ತನ್ನ ಪ್ರತಾಪದಿಂದ ಎಲ್ಲಾ ಸಾಮಂತರಾಜರನ್ನು ನಮಸ್ಕರಿಸುವಂತೆ ಮಾಡಿದವನು ಎಂದು ಬಹುವಾಗಿ ಕೊಂಡಾಡಿದೆ. ಇವನಿಗೆ 'ಘನ ವಿನೀತ' ಎಂಬ ಇನ್ನೊಂದು ಹೆಸರು ಇದ್ದಹಾಗೆ ಕುಲಗಾಣಿ ಶಾಸನವು ತಿಳಿಸಿದೆ. ಆದರೆ ಈತನು ಸಂಪಾದಿಸಿದ ಆ ಎಲ್ಲಾ ದೇಶಗಳು ಅಥವಾ ಸೋಲಿಸಿದ ಸಾಮಂತ ರಾಜರುಗಳು ಯಾರೆಂಬುದು ಸ್ಪಷ್ಟವಾಗುವುದಿಲ್ಲ.

ಗಂಗ ದೊರೆ ಶ್ರೀವಿಕ್ರಮನಿಗೆ ಭೂವಿಕ್ರಮ ಮತ್ತು ಶಿವಮಾರನೆಂಬ ಇಬ್ಬರು ಪುತ್ರರಿದ್ದರು. ಭೂವಿಕ್ರಮನು ಕ್ರಿ.ಶ.೬೦೯ರಲ್ಲಿ ಪಟ್ಟವೇರಿದನು. ನೊಳಂಬರ ಪ್ರಾಂತ್ಯವಾಗಿದ್ದಂತಹ ನೊಳಂಬವಾಡಿಗೆ ಈತನು ಪ್ರಾಂತಾಧಿಕಾರಿಯಾಗಿದ್ದನು. ಈತನು ಪರಾಕ್ರಮಿಯಾಗಿದ್ದು ಪಲ್ಲವರನ್ನು ಸದೆ ಬಡಿಯುವಲ್ಲಿ ಸಮರ್ಥನಾಗಿದ್ದನು. ಈತನ ಸಮಯದಲ್ಲಿ ಪ್ರಬಲರಾಗಿ ಮುನ್ನುಗ್ಗುತ್ತಿದ್ದಂತಹ ಪಲ್ಲವರನ್ನು ನಿಯಂತ್ರಿಸುವಲ್ಲಿ ಸಮರ್ಥನಾಗಿದ್ದು ಈತನು ಚಾಳುಕ್ಯರ ಸಖ್ಯವನ್ನು ಬೆಳೆಸಿಕೊಂಡು ಪಲ್ಲವರನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದನು. ಚಾಳುಕ್ಯ ದೊರೆ ಪುಲಕೇಶಿಯು ಪಲ್ಲವರ ಮೇಲೆ ಆಕ್ರಮಣ ಮಾಡಿದಂತಹ ಸಂದರ್ಭದಲ್ಲಿ ಚಾಳುಕ್ಯರಿಗೆ ಸಹಾಯ ಮಾಡುವ ಮೂಲಕ ತನ್ನ ಪರಾಕ್ರಮವನ್ನು ಎತ್ತಿ ತೋರಿಸಿದ್ದನು. 'ವಿಲಂದೆ' ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಪಲ್ಲವೇಂದ್ರ ನರಪತಿಯನ್ನು ಸೋಲಿಸಿದ್ದನು.[೩೭]

ಆದರೆ ಪಲ್ಲವ ದೊರೆ ನರಸಿಂಹವರ್ಮನಿಂದ ಪುಲಕೇಶಿಯು ಪರಾಜಿತನಾದ ಮೇಲೆ ಬಾದಾಮಿಯು ಪಲ್ಲವರ ವಶವಾಯಿತು. ಆದರೆ ಮೊದಲಿನಿಂದಲೂ ಚಾಳುಕ್ಯರ ಒಡನಾಡಿಯಾಗಿದ್ದಂತಹ ಗಂಗ ದೊರೆ ಭೂವಿಕ್ರಮನು ಪಲ್ಲವರ ವಿರುದ್ಧ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದನು. ಹಾಗಾಗಿ ಗಂಗ ದೊರೆ ಭೂವಿಕ್ರಮನು ಪಲ್ಲವರೊಂದಿಗೆ ಯುದ್ಧವನ್ನು ಎದುರಿಸಿದುದರಿಂದ ಕೋಲಾರ ಪ್ರದೇಶದಲ್ಲಿ ರಾಜಕೀಯ ಅಸ್ಥಿರತೆಯು ಉಂಟಾಗಿತ್ತು. ಆದರೂ ಶತ್ರುಗಳನ್ನು ಸಮರ್ಥವಾಗಿ ಎದುರಿಸಿ ಕೋಲಾರ ಜಿಲ್ಲೆಯನ್ನು ರಕ್ಷಿಸುವಲ್ಲಿ ಸಮರ್ಥನಾಗಿದ್ದನು. ಭೂವಿಕ್ರಮನ ಆಳ್ವಿಕೆಯು ಕೋಲಾರದಲ್ಲಿ ಇತ್ತೆಂಬ ಮಾಹಿತಿಯನ್ನು ಬಿದಿರೂರು ಶಾಸನವು[೩೮] ನೀಡುತ್ತಿದೆ. ಈ ಶಾಸನದಲ್ಲಿ ಭೂವಿಕ್ರಮನು ಕರಿಕಾಲ ಕುಲದ ಚೋಳರಾಜಪುತ್ರಿಯ ಮಗನೆಂದು ಉಲ್ಲೇಖವಾಗಿದೆ. ಈತನ ಆಳ್ವಿಕೆಯ ೨೫ನೆಯ ವರ್ಷದ ಚೈತ್ರ ಶುದ್ಧ ದಶಮಿ ಗುರುವಾರದಂದು ಕೊವಲಾಳಪುರದಲ್ಲಿ ನೆಲೆಸಿರುವಾಗ ಸತ್ಶೂದ್ರ (ಶೂದ್ರ)ನಾದ ವಿಕ್ರಮಾದಿತ್ಯ ಗಾವುಂಡನಿಗೆ ಹೋದಲಿ ವಿಷಯದಲ್ಲಿ ಬೆದಿರೂರು ಗ್ರಾಮವನ್ನು ದಾನ ಮಾಡಿದನೆಂಬ ಉಲ್ಲೇಖವಿದೆ. ಈ ಶಾಸನದ ಕಾಲವು ಶಕವರ್ಷ ೫೫೬ವಾಗಿದ್ದು (ಕ್ರಿ.ಶ.೬೩೪) ಭೂವಿಕ್ರಮನು ಕ್ರಿ.ಶ.೬೦೯ರಲ್ಲಿ ಪಟ್ಟಕ್ಕೆ ಬಂದಿರಬಹುದು.

ಶಿವಮಾರ

. ಈತನ ನಂತರ ಈತನ ಸಹೋದರನಾದ ಒಂದನೆಯ ಶಿವಮಾರನು ಗಂಗರ ಗದ್ದುಗೆಗೆ ಏರಿದನು. ಈತನ ಆಳ್ವಿಕೆಯೂ ಅಣ್ಣನ ಆಳ್ವಿಕೆಯಂತೆಯೇ ಕಲ್ಲುಮುಳ್ಳಿನ ಹಾದಿಯಾಗಿತ್ತು. ನವಕಾಮನೆಂಬ ಇನ್ನೊಂದು ಹೆಸರಿದ್ದಂತಹ ಈತನಿಗೆ ಶಿಷ್ಟಪ್ರಿಯ, ಅವನೀ ಮಹೇಂದ್ರ, ಶಿಷ್ಟವಿನೀತ, ಸ್ಥಿರವಿನೀತ, ದೇವರಾಜ ಮೊದಲಾದಂತಹ ಬಿರುದುಗಳಿದ್ದವು. ಪಲ್ಲವರ ಧಾಳಿಯ ಸಂದರ್ಭದಲ್ಲಿ ಪಲ್ಲವ ಯುವರಾಜನ ಇಬ್ಬರು ಪುತ್ರರಾದ ಜಯ ಮತ್ತು ವೃದ್ಧ ಎಂಬುವವರನ್ನು ತನ್ನ ವಶಕ್ಕೊಳಪಡಿಸಿದ್ದನು. ಇದೇ ಸಂದರ್ಭದಲ್ಲಿ ಮಿತ್ರರಾಗಿದ್ದಂತಹ ಚಾಲುಕ್ಯರು ಗಂಗವಾಡಿಯ ಮೇಲೆ ಆಕ್ರಮಣವನ್ನು ಮಾಡಿದ್ದರು. ಕೋಲಾರದ ದಕ್ಷಿಣಪ್ರಾಂತ್ಯದಲ್ಲಿದ್ದಂತಹ ಬಾಣರನ್ನು ಎದುರಿಸಬೇಕಾಯಿತು. ಈ ರೀತಿಯಾಗಿ ಅನೇಕ ರಾಜಕೀಯ ತೊಳಲಾಟಗಳನ್ನು ಎದುರಿಸಬೇಕಾದರೂ ತನ್ನ ಆಡಳಿತವನ್ನು ತನ್ನ ಮಗ ಮತ್ತು ಮೊಮ್ಮಗನಿಗೆ ಒಪ್ಪಿಸುವುದರ ಮೂಲಕ ಕೋಲಾರ ಜಿಲ್ಲೆಯನ್ನು ಗಂಗರಿಂದ ತಪ್ಪಿಹೋಗದಂತೆ ಎಚ್ಚರ ವಹಿಸಿದನು. ತನ್ನ ಪುತ್ರ ಎರೆಗಂಗ ಮತ್ತು ಮೊಮ್ಮಗ ಶ್ರೀಪುರುಷರನ್ನು ಗಂಗವಾಡಿಯ ಬೇರೆ ಬೇರೆ ಪ್ರಾಂತ್ಯಗಳ ಅಧಿಕಾರಿಯಾಗಿ ನಿಯೋಜಿಸಿದನು.

ಹಳ್ಳಿಗೇರಿ, ಹೆಬ್ಬೂರು, ಕುಳಗಾಣ ಮೊದಲಾದ ಪ್ರದೇಶಗಳಲ್ಲಿ ಈತನ ಆಳ್ವಿಕೆಯ ವಿವಿಧ ಶಾಸನಗಳು ದೊರೆತಿದ್ದು, ಒಂದನೆಯ ಶಿವಮಾರನ ಉಲ್ಲೇಖ ಉಳ್ಳಂತಹ ಶಾಸನಗಳಾವುವು ಕೋಲಾರ ಜಿಲ್ಲೆಯಲ್ಲಿ ದೊರಕಿಲ್ಲ.

ಶ್ರೀಪುರುಷ

ಗಂಗರ ಅರಸರ ಆಳ್ವಿಕೆಯಲ್ಲಿ ಶ್ರೀಪುರುಷನ ಕಾಲವು ಮಹತ್ವವಾದುದು. ಈತನು ಅತ್ಯಂತ ಬಲಿಷ್ಠನು ಪರಾಕ್ರಮಿಯು ಸಾಹಿತ್ಯ ಕಲಾಭಿಮಾನಿಯೂ ಆಗಿದ್ದನು. ಈತನು ಕ್ರಿ.ಶ.೭೨೫ರಿಂದ ೭೮೮ರವರೆಗೆ ಆಳ್ವಿಕೆ ನಡೆಸಿದ್ದನು. ಗಂಗ ಅರಸರ ದೊರೆಯಾದ ಒಂದನೇಯ ಶಿವಮಾರನ ಪುತ್ರನಾದ ಎರೆಗಂಗನು ಅನಿರೀಕ್ಷಿತವಾಗಿ ಮರಣ ಹೊಂದಿದ್ದರಿಂದ ಆತನ ಪುತ್ರನಾದ ಶ್ರೀಪುರುಷನು ಗಂಗ ಸಿಂಹಾಸನವನ್ನು ಏರಿದನು. ಈತನಿಗೆ

ಮುತ್ತರಸ, ಪೃಥ್ವಿಕೊಂಗಣಿ, ಪೆರ್ಮಾನಡಿ, ಶ್ರೀವಲ್ಲಭ, ಕೊಂಗುಣಿರಾಜಾಧಿರಾಜ, ಪರಮೇಶ್ವರ ಮುಂತಾದ ಬಿರುದುಗಳಿದ್ದವು. ಈತನ ಆಳ್ವಿಕೆಯ ಕಾಲದ ಹಲವಾರು ತಾಮ್ರ–ಶಿಲಾಶಾಸನಗಳು ದೊರೆತಿವೆ. ಇದೇ ರೀತಿಯಾಗಿ ಕೋಲಾರ ಜಿಲ್ಲೆಯಲ್ಲೂ ತಾಮ್ರ ಹಾಗೂ ಶಿಲಾಶಾಸನಗಳು ದೊರೆತಿದ್ದು ರಾಜನ ಆಳ್ವಿಕೆಯು ಕೋಲಾರ ಜಿಲ್ಲೆಯಲ್ಲೂ ಪ್ರಭಾವವನ್ನು ಪಡೆದಿತ್ತು ಎಂದು ಇದರಿಂದ ಸಮರ್ಥಿಸಬಹುದು. ಈತನ ಅಧಿಕಾರಾವಧಿಯೂ ತೀವ್ರ ರಾಜಕೀಯ ಪ್ರಕ್ಷುಬ್ದತೆಯನ್ನು ಅನುಭವಿಸಿತ್ತು. ಈತನು ತನ್ನ ಸುದೀರ್ಘ ಆಡಳಿತದಲ್ಲಿ ಪಲ್ಲವ, ರಾಷ್ಟ್ರಕೂಟ ಮತ್ತು ಬಾಣ ಅರಸರ ತೀವ್ರ ಧಾಳಿಗಳನ್ನು ಎದುರಿಸಿದ್ದನು. ಇಂತಹ ರಾಜಕೀಯ ಅನಿಶ್ಚಿತತೆಯ ನಡುವೆಯೂ ಸಮರ್ಥವಾಗಿ ಗಂಗವಂಶವನ್ನು ಉಳಿಸಿ ಬೆಳೆಸಿ ಮತ್ತೆ ತನ್ನ ಘನತೆಯನ್ನು ಮೆರೆಸಿದನು. ತನ್ನ ಆಳ್ವಿಕೆಯ ಪ್ರಾರಂಭದಲ್ಲಿ ಚಾಲುಕ್ಯರೊಂದಿಗೆ ಬೆರೆತು ಚಾಲ್ಯುಕರ ವಿರೋಧಿಗಳಾಗಿದ್ದ ಪಲ್ಲವರನ್ನು ಸೋಲಿಸಿ 'ವಿಳಂದೆ'ಯೆಂಬ ಪ್ರದೇಶದಲ್ಲಿ ನಡೆದ ಘೋರ ಯುದ್ಧದಲ್ಲಿ ಪಲ್ಲವರನ್ನು ಸಂಪೂರ್ಣವಾಗಿ ಸೋಲಿಸಿ ಅವರಿಂದ ಪೆರ್ಮಾನಡಿ ಎಂಬ ಬಿರುದನ್ನು ತನ್ನದಾಗಿಸಿಕೊಂಡನು.

ಶ್ರೀಪುರುಷನು ತನ್ನ ಆಳ್ವಿಕೆಯ ಪ್ರಾರಂಭದ ಕಾಲದಲ್ಲಿ ಮಾನ್ಯಪುರವನ್ನು ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದನು ಎಂದು ಶಾಸನಗಳು ತಿಳಿಸಿವೆ. ೮ನೆಯ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯ ಸಾಮ್ರಾಜ್ಯವು ಪತನಗೊಂಡ ನಂತರ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ಬಾದಾಮಿ ಚಾಲುಕ್ಯರ ಪ್ರಮುಖ ಸಾಮಂತ ಹಾಗೂ ಸಂಬಂಧಿಯಾಗಿದ್ದ ಶ್ರೀಪುರುಷನು ರಾಷ್ಟ್ರಕೂಟರ ಶತ್ರುತ್ವವನ್ನು ಸ್ವೀಕರಿಸಿ ಇವರನ್ನು ಎದುರಿಸಬೇಕಾಯಿತು. ಈ ಸಂದರ್ಭದಲ್ಲಿ ಶ್ರೀಪುರುಷನು ಸೋಲು ಗೆಲುವುಗಳ ಮೂಲಕ ಕಹಿ ಮತ್ತು ಸಿಹಿ ಎರಡರ ಅನುಭವವನ್ನು ಅನುಭವಿಸಿದ್ದನು.

ರಾಷ್ಟ್ರಕೂಟರ ಧಾಳಿಯ ಸಂದರ್ಭದಲ್ಲಿ ಗಂಗ ವಂಶರ ರಾಜಧಾನಿಯನ್ನು ತಲಕಾಡಿನಿಂದ ಮಾನ್ಯಪುರಕ್ಕೆ ವರ್ಗಾಯಿಸಿದನು. ಶ್ರೀಪುರುಷನು ಅನೇಕ ಯುದ್ಧಗಳಲ್ಲಿ ಶತ್ರುಗಳ ಗಜ ಘಟೆಗಳಿಗೆ ಸಿಂಹನಂತೆ ಇದ್ದುದರಿಂದ ಇವನಿಗೆ 'ರಾಜಕೇಸರಿ' ಎಂಬ ಅನ್ವರ್ಥನಾಮವಿತ್ತು. ಇವನಿಗೆ ಸಂಬಂಧಿಸಿದ ಅನೇಕ ಶಾಸನಗಳು ಈತನ ಗುಣಗಾನವನ್ನು ಮಾಡಿವೆ. ಆಡಳಿತದಲ್ಲಿ ಉತ್ತಮ ನೈಪುಣ್ಯತೆಯನ್ನು ಹೊಂದಿದ್ದ ಇವನು ಬಾದಾಮಿ ಚಾಲುಕ್ಯ ರಾಜಕುಮಾರಿ ವಿಜಯಮಹಾದೇವಿಯನ್ನು ವಿವಾಹವಾಗಿದ್ದನು. ಇವನ ಅಧಿಕಾರಾವಧಿಯಲ್ಲಿ ಗಂಗ ರಾಜ್ಯಕ್ಕೆ 'ಶ್ರೀರಾಜ್ಯ' ಎಂಬ ವಿಶೇಷಣವು ಲಭಿಸಿತ್ತು. ಈತನಿಗೆ ಸಂಬಂಧಿಸಿದ ಶಾಸನಗಳು ಮತ್ತು ಇತರ ಶಾಸನಗಳನ್ನು ಗಮನಿಸಿದಾಗ ಈತನಿಗೆ ದುಗ್ಗಮಾರ ಎರೆಯಪ್ಪ, ಇಮ್ಮಡಿ ಶಿವಮಾರ ಮತ್ತು ವಿಜಯಾದಿತ್ಯ ಎಂಬ ಮೂರು ಜನ ಪುತ್ರರಿದ್ದರು. ಶ್ರೀಪುರುಷನು ಇವರನ್ನು ತನ್ನ ಪ್ರಾಂತ್ಯದ ಅಧಿಕಾರಿಗಳನ್ನಾಗಿ ನೇಮಿಸಿದ್ದನು. ಇವರಲ್ಲಿ ಓರ್ವನಾದ ದುಗ್ಗಮಾರನು ಶ್ರೀಪುರುಷನ ಆಳ್ವಿಕೆಯ ಸಂದರ್ಭದಲ್ಲಿ ಕುವಳಾಲ – ೩೦೦ ಪ್ರಾಂತ್ಯದ ಅಧಿಕಾರಿಯಾಗಿದ್ದನು. ಶ್ರೀಪುರುಷನಿಗೆ ಸಂಬಂಧಿಸಿದ ತಲಕಾಡು ಶಾಸನ, ನಂದಿಶಾಸನ, ಅಗಳಿ ಶಾಸನ ಮುಂತಾದ ಶಾಸನಗಳು[೩೯] ಶ್ರೀಪುರುಷನನ್ನು ಬಹಳವಾಗಿ ಕೊಂಡಾಡಿವೆ.

ಈತನು ಸಮಸ್ತ ಸಾಮಂತ ರಾಜರುಗಳಿಂದ ನಮಸ್ಕರಿಸಲ್ಪಡುವ ಚರಣಾರವಿಂದ ಉಳ್ಳವನೂ, ನಾರಾಯಣನಲ್ಲಿ ಅಪಾರಭಕ್ತಿ ಉಳ್ಳವನೂ, ಸೈನಿಕರು, ಕುದುರೆಗಳು ಮತ್ತು ಆನೆಗಳ ಮಧ್ಯದಲ್ಲಿ ಭಯಂಕರನೂ, ಭೀಮಕೋಪನು, ಲೋಕದ ಜನರಿಗೆ ಪ್ರೀತಿಪಾತ್ರನೂ, ಅನೇಕ ಯುದ್ಧಗಳಿಂದ ಸಂಪಾದಿಸಿದ ವಿಜಯ ಸಂಪತ್ತು ಉಳ್ಳವನೂ, ಗಂಗ ವಂಶವೆಂಬ ನಿರ್ಮಲ ಆಕಾಶದಲ್ಲಿ ಪ್ರಜ್ವಲಿಸುವ ಸೂರ್ಯನೂ, ಅರಿಭಯಂಕರನೂ,

ಶುಭಕರನೂ, ಸನ್ಮಾರ್ಗ ರಕ್ಷಾಕಾರನೂ, ರಾಜರುಗಳಿಗೆ ಚೂಡಾಮಣಿಯೂ, ಸ್ತ್ರೀಯರಿಗೆ ಮನ್ಮಥನೂ, ಬಾಣ ಪ್ರಯೋಗದಲ್ಲಿ ದಶರಥತನಯನು (ರಾಮ) ಪರಾಕ್ರಮದಲ್ಲಿ ಪರಶುರಾಮನೂ, ಸಂಪತ್ತನ್ನು ಗಳಿಸುವುದರಲ್ಲಿ ಇಂದ್ರನು, ಪ್ರಸಿದ್ಧಿಯಲ್ಲಿ ಸೂರ್ಯನೂ, ಸಂಪತ್ತಿನಲ್ಲಿ ಕುಬೇರನೂ ಎಂದು ಮೊದಲಾಗಿ ವರ್ಣಿತನಾಗಿದ್ದಾನೆ.

ಗಂಗ ಅರಸ ಶ್ರೀಪುರುಷನ ಆಳ್ವಿಕೆಯನ್ನು ಸೂಚಿಸುವಂತಹ ಒಂದು ಕನ್ನಡ ಶಾಸನವು ಮುಳಬಾಗಿಲು ತಾಲ್ಲೂಕಿನ ಮೇಲಗಾಣಿ ಪ್ರದೇಶದಲ್ಲಿ ದೊರಕಿದ್ದು, ರಾಜನ ನಲವತ್ತೇರಡನೇಯ ವರ್ಷದ ಆಳ್ವಿಕೆಯನ್ನು ಸೂಚಿಸಿದೆ.[೪೦] ರಾಜನ ನಲವತ್ತೇರಡನೇಯ ವರ್ಷವೆಂದರೆ ಕ್ರಿ.ಶ.೭೬೭ ಎಂದು ಆಗುತ್ತದೆ. ಈ ಶಾಸನವು ದಾನಶಾಸನವಾಗಿದ್ದು, ಯಾವುದೇ ರೀತಿಯಾದಂತಹ ಪ್ರಾರ್ಥನಾ ಶ್ಲೋಕಗಳಾಗಲಿ, ವಂಶಾವಳಿಯ ಭಾಗವಿರದೆ, ನೇರವಾಗಿ ಶ್ರೀಪುರಷನ ವಿಷಯವಾಗಿ ಪ್ರತಿಪಾದಿಸುತ್ತಿದೆ. ಶ್ರೀಪುರಷನನ್ನು ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರರೆಂದು ಸ್ತುತಿಸಿದೆ. ಆದರೆ ಶ್ರೀಪುರುಷನು ಯಾವ ರಾಜ್ಯವನ್ನು ಆಳುತ್ತಿದ್ದನೆಂದು ಸ್ಪಷ್ಟಪಡಿಸಿಲ್ಲವಾದರೂ ರಾಜನೂ ಪಟ್ಟಾಭಿಷಕ್ತನಾಗಿ ೪೩ನೆಯ ವರ್ಷದಲ್ಲಿ ಬಂದಂತಹ ಶಾಸನವಾಗಿದೆ.

ರಾಜನು ಪೃಥ್ವಿಯನ್ನಾಳುತ್ತಿರಲು ಆತನ ಪುತ್ರನಾದ ದುಗ್ಗಮಾರ ಎರೆಯಪ್ಪನು ಕುವಲಾಲ ನಾಡು ೩೦೦ನ್ನು ಮತ್ತು ಗಂಗ೬೦೦೦ನ್ನು ಆಳುತ್ತಿರಲು ರಾಜನ ಮಹಾದೇವಿ 'ಕಾಂಚಿಅಬ್ಬೆ'ಯು ಅಗಳಿಯನ್ನಾಳುತ್ತಿರಲು ವೆಲ್ಲಶರ್ಮನಿಗೆ ಒಂದು ಖಂಡುಗದಷ್ಟು ಭತ್ತ ಬೆಳೆಯುವಂತಹ ಭೂಮಿಯನ್ನು ಮತ್ತು 'ಸಮಣಪಾಳ' ಎಂಬ ಗದ್ದೆಯ ಮೇಲ್ಭಾಗದಲ್ಲಿ ತೋಟವನ್ನು ದಾನವನ್ನಾಗಿ ಬಿಟ್ಟಂತಹ ಮಾಹಿತಿಯಿದೆ.

ಶಾಸನದಲ್ಲಿ ಕುವಳಾಲನಾಡು ೩೦೦ ಮತ್ತು ಗಂಗ ೬೦೦೦ನ್ನು ಸೂಚಿಸಿದ್ದು ಇದು ಗಂಗರ ಆಡಳಿತ ಭಾಗವನ್ನು ಸೂಚಿಸುತ್ತದೆ. ಕುವಳಾಲನಾಡು ಎಂಬುವುದು ಕೋಲಾರದ ಪ್ರಾಚೀನ ಹೆಸರಾಗಿದೆ. ಗಂಗ೬೦೦೦ಎನ್ನುವುದು ಗಂಗರ ಪಾರಂಪರಿಕ ಆಳ್ವಿಕೆಯ ಪ್ರದೇಶವಾಗಿದ್ದು ಆರು ಸಾವಿರ ಗ್ರಾಮಗಳನ್ನು ಹೊಂದಿದ್ದ ಪ್ರದೇಶವಾಗಿತ್ತು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಅರಳುಕೋಟೆ ಗ್ರಾಮದ ಪ್ರದೇಶದಲ್ಲಿ ದೊರಕಿರುವ ಕಾಲ ನಿರ್ದೇಶನವಿಲ್ಲದ ಶಾಸನದಲ್ಲಿ ಶ್ರೀಪುರುಷನು ರಾಜ್ಯವನ್ನಾಳುತ್ತಿರಲು ಆತನ ಪುತ್ರ ದುಗ್ಗಮಾರ ಎರೆಯಪ್ಪನು ಕುವಳಾಲನಾಡು ಎಂಬ ಪ್ರದೇಶವನ್ನು ಆಳುತ್ತಿರಲು 'ವಡ್ಡಿಪೆಣಿಮನೆ' ಎಂಬುವವನು ಬೇಡಿಕೊಂಡಾಗ ರಾಜನು ಹತ್ತು ಖಂಡುಗಳಷ್ಟು ಭೂಮಿಯನ್ನು ದಾನ ನೀಡಿದನು. 'ಕುವಳಾಲ ನಾಡು' ಎಂದು ಉಲ್ಲೇಖವಿದ್ದು ಇದು ಕೋಲಾರದ ಪ್ರಾಚೀನ ಹೆಸರಾಗಿದೆ.

ಮುಳಬಾಗಿಲು ತಾಲ್ಲೂಕು ಬಿಸ್ಸನಹಳ್ಳಿ (ದುಗ್ಗಸಂದ್ರ ಹೋಬಳಿ) ಗ್ರಾಮದಲ್ಲಿ ದೊರಕಿರುವಂತಹ ಒಂದು ವೀರಗಲ್ಲು ಶಾಸನವು ಶ್ರೀಪುರಷನ ಆಳ್ವಿಕೆಯ ಮಾಹಿತಿ ನೀಡಿದ್ದು ಐತಿಹಾಸಿಕವಾಗಿಯು ವಿಶೇಷತೆಯನ್ನು ಪಡೆದಿದೆ.[೪೧]

ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಶಾಸನವು ಶ್ರೀಪುರುಷ ಮಹಾರಾಜಾಧಿರಾಜನು ಭೂಮಿಯನ್ನು ಆಳುತ್ತಿರಲು ಹುಟ್ಟಿರುವ ಶಾಸನವಾಗಿದೆ. ರಾಜನು ಭೂಮಿಯನ್ನು ಆಳುತ್ತಿರಲು ಆತನ ಮಗನಾದ ದುಗ(ದುಗ್ಗ) ಮಾರ ಎರೆಯಪ್ಪನು ಕೊವಳಾಲನಾಡು ೩೦೦ನ್ನು ಮತ್ತು ಗಂಗ ೬೦೦೦ವನ್ನು ಆಳುತ್ತಿದ್ದಾಗ ಈತನ ಸೈನ್ಯವು ಕಂಪಿಲಿಯ ಮೇಲೆ ಆಕ್ರಮಣಮಾಡಿದ್ದ ರಾಷ್ಟ್ರಕೂಟರ ಸೈನ್ಯದ ಎದುರು ಹೋರಾಡುವಾಗ ಕೋಮಾಲರ ಮಗ ಪಾಂಡಪ್ಪನು ಕಾಳಗದಲ್ಲಿ ಹೋರಾಡಿ ಸತ್ತಿರುವಂತೆಯೂ, ಈತನ ವೀರಾವೇಶಕ್ಕೆ ಮೆಚ್ಚಿದಂತಹ ರಾಜ

ದುಗ್ಗಮಾರನು ಸಾಂತನೂರು ಎಂಬ ಗ್ರಾಮವನ್ನು ಎರೆಡಿಯೂರು ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಿರುವನು. ಈ ಶಾಸನವು ಹಲವಾರು ರಾಜಕೀಯ ವಿಚಾರಗಳನ್ನು ಸ್ಪಷ್ಟಪಡಿಸುತ್ತಿದೆ. ಶ್ರೀಪುರುಷನು ಪರಾಕ್ರಮಿಯಾದ ರಾಜನಾಗಿ ಮೆರೆಯುತ್ತಿದ್ದನು. ಆತನು ಮಹಾರಾಜಾಧಿರಾಜನೂ, ಪರಮೇಶ್ವರನೂ ಆಗಿದ್ದನು. ಈತನ ಸೈನ್ಯವು ಕಂಪಿಲಿಯವರೆಗೆ ಆಕ್ರಮಣವನ್ನು ಎದುರಿಸಲು ಹೋಗಿದ್ದಂತೆ ಸ್ಪಷ್ಟಪಡಿಸುತ್ತದೆ. ಇದು ಈಗಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಆಗಿರಬಹುದು.

ಕೋಲಾರ ತಾಲ್ಲೂಕಿನ ಶಿವಾರಪಟ್ಟಣದಲ್ಲಿ ದೊರಕಿರುವಂತಹ ಇನ್ನೊಂದು ಲಘು ಶಾಸನವೂ ಕೂಡ ಶ್ರೀಪುರಷನ ಆಳ್ವಿಕೆಯನ್ನು ಪ್ರತಿಪಾದಿಸುತ್ತಿದ್ದು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿರುವಂತಹ ಶಾಸನವಾಗಿದೆ.[೬೨] ಈ ಶಾಸನವು ಕಾಲದ ಉಲ್ಲೇಖವನ್ನು ತಿಳಿಸಿರುವುದಿಲ್ಲ. ಇದು ಸಾಮಾಜಿಕ ನ್ಯಾಯವನ್ನು ಹೇಳುವಂತಹ ಐತಿಹಾಸಿಕ ಶಾಸನವಾಗಿದೆ. ಸಮಾಜದಲ್ಲಿ ನಡೆದಂತಹ ಒಳಜಗಳ ಮತ್ತು ಸಾಲದ ಮರುಪಾವತಿಗೆ ಸಂಬಂಧಿಸಿದ ವಿಷಯವನ್ನು ಶಾಸನವು ಹೇಳುತ್ತಿದೆ. ಮಹಾರಾಜ ಶ್ರೀಪುರುಷನು ಭೂಮಿಯನ್ನಾಳುತ್ತಿರಲು ಕೂಡಲೂರರ್ಪಾಡಿಯ ಒಡೆಯನಾದ ನಂದಿಕಾಂಡ ಮತ್ತು ಇರನಾಗರ ನಡುವೆ ಯಾವುದೇ ವ್ಯವಹಾರದ ಅಂತರವಾಗಲೀ ಸಾಲವಾಗಲೀ ಇಲ್ಲವೆಂಬ ನ್ಯಾಯ ತೀರ್ಮಾನವನ್ನು ತಿಳಿಸಿದೆ. ಇದಕ್ಕೆ ಸಂಬಂಧಪಟ್ಟ ಸಾಕ್ಷಿಗಳನ್ನು ಶಾಸನ ತಿಳಿಸಿದೆ.

ಈ ವ್ಯವಹಾರವು ಸ್ಥಿರವಾಗಿ ಇರಲು ಸಾಕ್ಷಿಯಾಗಿ ಕಡಬೂರು ಮತ್ತು ಪಾಂಡವಪುರದ ೪೦ ಮಹಾಜನರು, ಇದತ್ತೂರಿನ ನಾವಿದನೂ ಇರುವರು. ಹಿಂದಿನ ಶಾಸನವನ್ನು ಮತ್ತು ಈ ಶಾಸನವನ್ನು ಗಮನಿಸಿದಾಗ ಕಡಬೂರು ಅಥವಾ ಕದಂಬೂರು ಎಂಬುವುದು ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಅಗ್ರಹಾರವಿರಬೇಕು. ಅದಲ್ಲದೆಯೇ ಆ ಊರಿನಲ್ಲಿ ಮಹಾಜನರಿದ್ದರೆಂದು ಎರಡು ಶಾಸನಗಳು ಸ್ಪಷ್ಟಪಡಿಸಿವೆ. ಕದಂಬೂರು ಸಾಮಾಜಿಕ ನ್ಯಾಯ ತೀರ್ಮಾನವನ್ನು ಮಾಡುತ್ತಿದ್ದಂತಹ ಸ್ಥಳವಾಗಿ ಪ್ರಸಿದ್ಧವಾಗಿತ್ತು.

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕು ದಿಂಬಾಲ ಗ್ರಾಮದ ಹೊಸೂರು ಕೆರೆಯ ಬಳಿಯ ಈಶ್ವರ ದೇವಸ್ಥಾನದಲ್ಲಿ ದೊರೆತಿರುವಂತಹ ದಾನಶಾಸನವು ಶ್ರೀಪುರುಷನ ಆಳ್ವಿಕೆಯನ್ನು ತಿಳಿಸಿದೆ.[೬೩] ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಶ್ರೀಪುರುಷ ಮಹಾರಾಜನು ಪೃಥ್ವಿ ರಾಜ್ಯವನ್ನಾಳುತ್ತಿರಲು ಆತನ ಮಗ ದುಗ್ಗಮಾರ ಎರೆಯಪ್ಪನು ಕೊವಳಾಲನಾಡನ್ನು ಆಳುತ್ತಿರಲು ವೆಚ್ಚೆಪೆರಸನು 'ರೋಣೂರ'ನ್ನು ಆಳುತ್ತಿರಲು ರಾಜನು 'ಸಗರ ಮಿಕ್ಕಾನೆ' ಎಂಬುವವನಿಗೆ 'ಮನೆ ಒಡೆಯರು' ಎಂದು ಪಟ್ಟವನ್ನು ಕಟ್ಟಿ ಸರ್ವ ಪರಿಹಾರಾರ್ಥವಾಗಿ ಒಂದು ಖಂಡುಗದಷ್ಟು ಧಾನ್ಯ ಬೆಳೆಯುವಂತಹ ಭೂಮಿಯನ್ನು ದಾನ ನೀಡಿರುವಂತಹ ವಿಷಯವಿದೆ. ಶಾಸನದಲ್ಲಿ ರೋಣರ ನಾಡಿನ ಉಲ್ಲೇಖವಿದೆ. ರೋಣರ ಎಂಬುವುದು ಶ್ರೀನಿವಾಸಪುರ ತಾಲೂಕಿನ ರೋಣೂರು ಆಗಿದೆ. ಶ್ರೀಪುರುಷನು ತನ್ನ ಮಗನಾದ ದುಗ್ಗಮಾರ ಎರೆಯಪ್ಪನ ಜೊತೆಗೆ ರಾಜ್ಯವನ್ನಾಳುತ್ತಿದ್ದ ವಿಷಯಗಳು ಈ ಹಿಂದೆ ತಿಳಿಸಿದ ಶಾಸನಗಳಲ್ಲಿ ಕಂಡುಬಂದರೆ ಮುಂದಿನ ಶಾಸನಗಳಲ್ಲಿ ಈ ರೀತಿಯಾದ ಉಲ್ಲೇಖ ದೊರೆಯುವುದಿಲ್ಲ. ಶ್ರೀಪುರುಷನಿಗೆ ೫ ಜನ ಮಕ್ಕಳು ಇದ್ದು ಅವರಲ್ಲಿ ಶಿವಮಾರನು ಹಿರಿಯವನಾಗಿದ್ದನು. ಈತನ ಸಹೋದರನಾದ ದುಗ್ಗಮಾರನು ಕುವಲಾಳನಾಡಿನ ಪ್ರಾಂತ್ಯಾಧಿಕಾರಿಯಾಗಿದ್ದ ವಿಷಯವನ್ನು ಶಾಸನಗಳಿಂದ ದೃಢಪಡುತ್ತದೆ. ಆದರೆ ಈತನು ತನ್ನ ಅಣ್ಣನನ್ನೇ ಕೆಳಗಿಳಿಸಿ ತಾನೇ ಸಿಂಹಾಸನವನ್ನೇರುವ ತವಕದಲ್ಲಿದ್ದನು. ಇದೇ ಸಂದರ್ಭದಲ್ಲಿ ಪ್ರಬಲನಾಗಿದ್ದ ನೊಳಂಬರು ಸಿಂಗಪೋತನ ಬೆಂಬಲವನ್ನು ಪಡೆದ ಶಿವಮಾರನು ದುಗ್ಗಮಾರನನ್ನು ಸೋಲಿಸಿ ತಾನೇ ಸಿಂಹಾಸನವನ್ನು ಏರಿದನು.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಹಳೇ ಕೊಪ್ಪಗ್ರಾಮದಲ್ಲಿ ದೊರೆತಿರುವ ಒಂದು ಸಣ್ಣ ಶಾಸನವು ಶ್ರೀಪುರುಷನ ಆಳ್ವಿಕೆಯನ್ನು ತಿಳಿಸುತ್ತಿದ್ದು, ದೇವಭೋಗವನ್ನು ಕುರಿತು ಮಾಹಿತಿಯನ್ನು ನೀಡುತ್ತದೆ.[೪೪] ಶಾಸನವು · ಕಾಲದ ಉಲ್ಲೇಖವನ್ನು ತಿಳಿಸದೇ ಕೇವಲ ರಾಜನ ಆಳ್ವಿಕೆಯನ್ನಷ್ಟೇ ಸೂಚಿಸಿದೆ. ರಾಜನು ರಾಜ್ಯವನ್ನಾಳುತ್ತಿರಲು ದೇವಭೋಗದ ರೂಪದಲ್ಲಿ ನೀಡಿದ ವಿಷಯವು ಶಾಸನದಲ್ಲಿ ಪ್ರತಿಪಾದಿತವಾಗಿದೆ.

ಕೋಲಾರ ತಾಲ್ಲೂಕಿನ ಹೊಳಲಿ ಗ್ರಾಮದ ಅಸ್ಪಷ್ಟ ಶಾಸನವು ಶ್ರೀಪುರುಷನ ಉಲ್ಲೇಖವನ್ನು ಮಾಡಿದೆ. ಶಾಸನವು ತ್ರುಟಿತವಾಗಿದ್ದು ಭೂದಾನವನ್ನು ನೀಡಿರುವಂತೆ ತಿಳಿಸುತ್ತದೆ.[೪೫]

ಶ್ರೀಪುರುಷ ಮಹಾರಾಜನು ಪೃಥ್ವಿಯನ್ನಾಳುತ್ತಿರಲು ಜನರಿಗೆ ಕೆರೆಯ ಕೆಳಗೆ ಒಂದು ಖಂಡುಗದಷ್ಟು ಭೂಮಿಯನ್ನು ನೀಡಿರುವಂತಹ ಮಾಹಿತಿಯಿದೆ.

ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರು ಪ್ರದೇಶದಲ್ಲಿ ದೊರೆತಿರುವಂತಹ ತುರುಗೋಳು ಶಾಸನವು ಶ್ರೀಪುರುಷನ ಆಳ್ವಿಕೆಯ ಕಾಲದ್ದಾಗಿದ್ದು ಸಂಕ್ಷಿಪ್ತವಾಗಿದೆ.[೪೬] ಶ್ರೀಪುರುಷ ಮಹಾರಾಜನು ರಾಜ್ಯವನ್ನಾಳುತ್ತಿರಲು ಮಂದವೂರು ಎಂಬ ಪ್ರದೇಶದಲ್ಲಿ ತುರುಗೋಳ್ ಕಾಳಗವು ನಡೆದ ಉಲ್ಲೇಖವಿದೆ. ಈ ಕಾಳಗದಲ್ಲಿ ಪೆರುಂಕೋರ ಎನ್ನುವವನು ಹೋರಾಡಿ ಮಡಿದನು. ಈತನ ಸಾಹಸಕ್ಕೆ ಮೆಚ್ಚಿದಂತಹ ರಾಜನು ಈತನಿಗೆ 'ನೆತ್ತರ್ಪಡಿ'ಯನ್ನು ಅರ್ಪಿಸಿದನು.

ಇದೇ ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿ ದೊರೆತಿರುವ ದಾನಶಾಸನವು ಶ್ರೀಪುರುಷನಲ್ಲದೆ ಅವನ ಮಗನಾದ ದುಗ್ಗಮಾರನನ್ನು ಉಲ್ಲೇಖಿಸಿದೆ.[೪೭] ಈ ಶಾಸನವು ಕೂಡ ಐತಿಹಾಸಿಕವಾಗಿ ಮಹತ್ವವನ್ನು ಪಡೆದಂತಹ ಶಾಸನವೆನ್ನಬಹುದಾಗಿದೆ. ಈ ಶಾಸನದಲ್ಲಿ ಗಂಗ, ಗಂಗ ಅರಸರ ಸಾಮ್ರಾಜ್ಯದ ವಿಸ್ತೀರ್ಣತೆಯನ್ನು ನೋಡಬಹುದಾಗಿದ್ದು, ರಾಜನ ಪರಾಕ್ರಮತೆಯನ್ನು ಊಹಿಸಬಹುದಾಗಿದೆ. ಇದು ದಾನಶಾಸನವಾಗಿದ್ದು, ಶ್ರೀಪುರುಷನ ಮಗನಾದ ದುಗ್ಗಮಾರ ಎರೆಯಪ್ಪನು ಶಿವದೇವಾಲಯಕ್ಕಾಗಿ ನೀಡಿದಂತಹ ಭೂದಾನದ ಉಲ್ಲೇಖವನ್ನು ನೀಡಿದೆ. ಈ ದುಗ್ಗಮಾರ ಎರೆಯಪ್ಪನೂ ಕುವಳಾಲನಾಡು ೩೦೦, ಗಂಗ೬೦೦೦, ಬೆಳತ್ತೂರುನಾಡು, ಪುಲವಾಕಿನಾಡು೧೦೦೦ ಮತ್ತು ಮುಬೆಪ್ಪೋಡು೧೦೦೦ವನ್ನು ಆಳುತ್ತಿದ್ದನೆಂದು ಹೇಳುತ್ತಿದೆ. ಇದು ಪ್ರಾಚೀನ ಗಂಗನಾಡಿನ ವಿಸ್ತೀರ್ಣತೆಯನ್ನು ಹೇಳುತ್ತಿದೆ. ಬೆಳತ್ತೂರು ಪುಲವಾಕಿನಾಡು ಮತ್ತು 'ಮುಬೆಪೋಡು' ಎಂಬ ಸ್ಥಳಗಳು ಈಗಿನ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಗಡಿನಾಡು ಆಗಿರಬಹುದು. ಈ ಶ್ರೀವಲ್ಲವನ ಆಣತಿಯ ಮೇರೆಗೆ ದುಗ್ಗಮಾರ ಎರೆಯಪ್ಪನು ಶಿವಾಲಯಕ್ಕೆ ಭೂದಾನವನ್ನು ಮಾಡಿದ ವಿಚಾರವಿದೆ. ದೇವಾಲಯದ ಹೆಸರು ಅಸ್ಪಷ್ಟವಾಗಿದ್ದು, ತೊಂಡೀಶ್ವರನೆಂದು ಅಪೂರ್ಣವಾಗಿ ಬರೆಯಲಾಗಿದೆ. ಈ ಮಹತ್ವ ಪೂರ್ಣಶಾಸನವು ಕೂಡ ಕಾಲವನ್ನು ತಿಳಿಸುವ ವಿಷಯದಲ್ಲಿ ಅಸಹಾಯಕವಾಗಿದೆ. ಈ ಶಾಸನಗಳನ್ನು ಗಮನಿಸುವಾಗ ಶ್ರೀಪುರುಷನು ತನ್ನ ಹೆಚ್ಚಿನ ಪ್ರದೇಶಗಳ ಉತ್ತರಾಧಿಕಾರಿಯನ್ನಾಗಿ ದುಗ್ಗಮಾರ ಎರೆಯಪ್ಪನನ್ನು ನಿಯೋಜಿಸಿದ್ದನು ಎಂದು ತಿಳಿಯಬಹುದಾಗಿದೆ.

ಕೋಲಾರ ತಾಲ್ಲೂಕಿನ ಮೇದುತಂಬಿಹಳ್ಳಿ ಶಾಸನವು ಇದೇ ರಾಜನ ಆಳ್ವಿಕೆಯ ಕುರಿತಾಗಿದ್ದು ದಾನದ ವಿಚಾರವನ್ನು ಪ್ರತಿಪಾದಿಸಿದೆ.[೪೮] ಶ್ರೀಪುರುಷನನ್ನು ಮಹಾರಾಜಾಧಿರಾಜ ಪರಮೇಶ್ವರನೆಂದು ಕರೆದಿದ್ದು, ಪುತ್ತೂರು ಎಂಬ ಗ್ರಾಮವನ್ನು 'ಆಜಿಟ್ಟ' ಎಂಬುವವನು ಆಳುತ್ತಿದ್ದನು. ಈತನು ಪುತ್ತೂರನ್ನು ಆಳುತ್ತಿರಲು ಈ ಗ್ರಾಮಕ್ಕೆ ಸಂಬಂಧಿಸಿದ ಅಟ್ಟಾಣಿಗೆ, ೫ ತೂಬುಗಳಷ್ಟು ಧಾನ್ಯ ಬೆಳೆಯುವಂತಹ ಭೂಮಿಯನ್ನು ಮತ್ತು ೫ ತೂಬುಗಳಷ್ಟು

ತೋಟವನ್ನು ನೀಡಿರುವ ವಿಚಾರವಿದೆ. ಪುತ್ತೂರು ಎಂಬ ಗ್ರಾಮವು ಆಂಧ್ರಪ್ರದೇಶದಲ್ಲಿದ್ದು, ಕರ್ನಾಟಕದ ಗಡಿಪ್ರದೇಶದಿಂದ ತುಂಬಾ ದೂರ ಇರುವುದರಿಂದ ಮತ್ತು ಗಂಗರ ರಾಜ್ಯವಿಸ್ತಾರವು ಅಷ್ಟು ವಿಸ್ತಾರವಾಗಿರದೇ ಇದ್ದುದರಿಂದ ಕೋಲಾರ ಜಿಲ್ಲೆಗೆ ಸಂಬಂಧಿಸಿದಂತಹ ಸ್ಥಳವಾಗಿರಬಹುದು. ಮುಳಬಾಗಿಲು ತಾಲ್ಲೂಕಿನಲ್ಲಿ ಹುತ್ತೂರು ಎಂಬ ಪ್ರದೇಶವಿದ್ದು ಪುತ್ತೂರು ಎನ್ನುವುದು ಕಾಲಾನುಕ್ರಮದಲ್ಲಿ ಹುತ್ತೂರು ಎಂದಾಗಿರಬಹುದು.

ಕೋಲಾರ ತಾಲ್ಲೂಕಿನ ರಾಮೇನಹಳ್ಳಿಯಲ್ಲಿ ದೊರೆತಿರುವ ಇನ್ನೊಂದು ಶಾಸನವು ವಿಶೇಷವಾಗಿದ್ದು ಭೂದಾನವನ್ನು ತಿಳಿಸಿದೆ.[೪೯] ಶ್ರೀಪುರುಷನನ್ನು ಕೊಂಗುಣಿ ಮಹಾರಾಜನೆಂದು ಕರೆದಿದೆ. ಲೋಕಾದಿತ್ಯ ಎಳೆ ಅರಸನು ಕದಂಬೂರು ಎಂಬ ಪ್ರದೇಶವನ್ನು ಆಳುತ್ತಿರಲು, ಕಾರ್ತಿಕ ಮಾಸದಲ್ಲಿ ಪುಲಿಕುರುಕ್ಕಿ ಭಟಾರನೆಂಬ ದೇವರಿಗೆ ಲೋಕಾದಿತ್ಯ ಎಳೆ ಅರಸನು ೧೦೦ ಗದ್ಯಾಣ ಬಂಗಾರವನ್ನು ನೀಡಿರುವನು. ಅದಲ್ಲದೆಯೇ ದೇವರ ಭೋಗಕ್ಕಾಗಿ ಕೆಲವೊಂದು ಭೂಭಾಗವನ್ನು ದಾನ ಮಾಡಿರುವಂತಹ ವಿಷಯವಿದೆ. ಈ ಶಾಸನದ ಮಧ್ಯಭಾಗದಲ್ಲಿ ಕೆಲವೊಂದು ಪ್ರದೇಶಗಳ ಹೆಸರು ಇದ್ದು ಅಸ್ಪಷ್ಟವಾಗಿದೆ. ಇಲ್ಲಿ ಹೇಳಿರುವಂತಹ ಕೆಲವು ಪ್ರದೇಶಗಳನ್ನು 'ನಾಗಮ್ಮ' ಎಂಬುವವಳಿಗೆ ಕೃಷಿಗಾಗಿ ನೀಡಲಾಗಿದೆ. ಈ ಶಾಸನಕ್ಕೆ ಸಾಕ್ಷಿಗಳು ಬೆಳತ್ತೂರಿನ ಮಹಾಜನರು, ಕದತ್ತೂರಿನ ಮಹಾರಾಜರು ಮತ್ತು ಕದಂಬೂರಿನ ೪೦ ಮಹಾಜನರು.

ಮಾಲೂರು ತಾಲ್ಲೂಕಿನ ಶಿವಾರ ಗ್ರಾಮದಲ್ಲಿ ದೊರಕಿರುವ ವೀರಗಲ್ಲು ಶಾಸನವು ಪೃಥ್ವಿ ಕೊಂಗಣಿ ಮುತ್ತರಸನು ದೇಶ ಆಳುತ್ತಿದ್ದ ಎಂದು ಪ್ರತಿಪಾದಿಸುತ್ತಿದ್ದು, ಇದು ಶ್ರೀಪುರುಷನಿಗೆ ಇದ್ದಂತಹ ಇನ್ನೊಂದು ಬಿರುದು ಆಗಿದೆ. ಇದೇ ರೀತಿಯಾಗಿ ಇವನಿಗೆ ಮುತ್ತರಸ, ಪೆರ್ಮಾನಡಿ, ಶ್ರೀವಲ್ಲಭ, ಕೊಂಗಣಿರಾಜಾಧಿರಾಜ, ಪರಮೇಶ್ವರ ಮೊದಲಾದ ಬಿರುದುಗಳು ಇದ್ದವೆಂದು ಶಾಸನಗಳಿಂದ ವೇದ್ಯವಾಗುತ್ತದೆ. ಪ್ರಸ್ತುತ ಈ ಶಾಸನವು ರಾಜನು ಆಳುತ್ತಿರಲು ನಡೆದ ಕಾಳಗವನ್ನು ಈ ರೀತಿಯಾಗಿ ಹೇಳುತ್ತಿದೆ. ಗಂಜನಾಡಿನ ಕಲಿದೊರೆಗಳು ಮತ್ತು ಗಂಬುಳಿಗೆ ಅರಸರ ನಡುವೆ ಯುದ್ಧ ನಡೆದಾಗ ನೆಲ್ಲಿವಾರ ಎಂಬುವವನ ಮಗ ಕಲಿಕಂಗರ್ ಎಂಬುವವನನ್ನು ಓಡಿಸಿದ ವಿಚಾರವಿದೆ. ಇದಕ್ಕೆ ಪ್ರತಿಯಾಗಿ ವಿಯವೂರು ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಲಾಗಿದೆ.[೫೦]

ಶ್ರೀನಿವಾಸಪುರ ತಾಲ್ಲೂಕಿನ ಹೆಬ್ಬಟ ಗ್ರಾಮದಲ್ಲಿರುವ ಶಾಸನವು ಶ್ರೀಪುರುಷನನ್ನು ಕೊಂಗಣಿ ಮುತ್ತರಸ ಎಂದು ಉಲ್ಲೇಖಿಸುತ್ತಿದ್ದು, ಹೆಚ್ಚಿನ ಮಾಹಿತಿಯನ್ನು ತಿಳಿಸುತ್ತಿಲ್ಲ.[೫೧] ಕೊಂಗಣಿ ಮುತ್ತರಸನು ಕೊಟ್ಟಂತಹ ಭೂಮಿಯ ಉಲ್ಲೇಖವಿದೆ. ರಾಜನು ಕೊಟ್ಟಂತಹ ಭೂಮಿಯ ಹೆಸರನ್ನು ಪೆರ್ಪಟ್ಟ ಪೊಲ (ಹೊಲ)ವೆಂದು ಉಲ್ಲೇಖಿಸಿದೆ. ಪೆರ್ಪಟ್ಟ ಎಂಬುವುದು ಈಗಿನ ಹೆಬ್ಬಟ ಎಂಬುವುದರ ಪ್ರಾಚೀನ ಹೆಸರಾಗಿರಬಹುದು. ಬಂಗಾರಪೇಟೆ ತಾಲ್ಲೂಕಿನ ಪೀಲ್ವಾರ ಗ್ರಾಮದಲ್ಲಿ ದೊರಕಿರುವ ಶಾಸನವು ಶ್ರೀಪುರುಷನನ್ನು ಮುತ್ತರಸನೆಂದು ಉಲ್ಲೇಖಿಸಿದೆ. [೫೨]

ಈ ಶಾಸನವು ಗಂಗ ಅರಸ ಮತ್ತು ಬಾಣ ಅರಸರ ಸಹ ಆಡಳಿತವನ್ನು ಸೂಚಿಸಿದೆ. ಮುತ್ತರಸರು ಅವನ್ಯನಾಡು ೩೦ ಮತ್ತು ಹನ್ನೆರಡನ್ನು ಆಳುತ್ತಿರಲು ಮಹಾಬಲಿ ಬಾಣರಸನ ಮಗನು ಮಣಯತ್ತೂರಿಗೆ ಬರಲಾಗಿ ಆಗ ನಡೆದಂತಹ ಕಾಳಗದಲ್ಲಿ ನಲ್ಮೆಯಾರ ಮಗನಾದ ಅಣ್ಣಗಾವುಂಡನು ಹೋರಾಡಿ ವೀರಮರಣವನ್ನು ಪಡೆದನು. ಈತನ ಸಾಹಸವನ್ನು ಮೆಚ್ಚಿದಂತಹ ರಾಜನು ಹತ್ತು ಕಳನಿಯಷ್ಟು ಭೂಮಿಯನ್ನು ಎಲ್ಲಾ ವಿಧದ ಪರಿಹಾರವನ್ನು ಮಾಡಿ ನೀಡಿದನು. ಈ ಶಾಸನವು ಮುತ್ತರಸನನ್ನು ಬಹಳವಾಗಿ ಕೊಂಡಾಡಿದೆ. ಬಹುಶಃ ಬಾಣರಸರು ಗಂಗ

ವಂಶದವರಿಗೆ ಸಾಮಂತ ರಾಜರಾಗಿದ್ದರೆಂದು ಊಹಿಸಬಹುದಾಗಿದೆ. ಈ ಶಾಸನದಲ್ಲಿ ಮಹಾಬಲಿ ಬಾಣರಸನ ಮಗನ ಹೆಸರನ್ನು ಸೂಚಿಸಿಲ್ಲವಾದರೂ ಆತನು ಪರಾಕ್ರಮಿಯಾಗಿದ್ದನೆಂದು ಊಹಿಸಬಹುದು.

ಇದೇ ಮುತ್ತರಸನನ್ನು ಉಲ್ಲೇಖಿಸಿರುವ ಇನ್ನೊಂದು ಶಾಸನವು ಬಂಗಾರಪೇಟೆ ತಾಲ್ಲೂಕಿನ ತಲ್ಲಪಲ್ಲಿ ಗ್ರಾಮದಲ್ಲಿ ದೊರಕಿದ್ದು ವಿಶೇಷವಾದ ಅಂಶವನ್ನು ತಿಳಿಸುತ್ತಿದೆ.[೫೩] ಈ ಶಾಸನವು ಕೂಡ ಐತಿಹಾಸಿಕವಾಗಿ ಮಹತ್ವವಾಗಿದೆ. ಗಂಗವಂಶದ ದೊರೆ ಮುತ್ತರಸನು ಎಳೆನಗರನಾಡು ೭೦, ಆವನ್ಯನಾಡು೩೦ ಮತ್ತು ಪೊಂಕುನ್ದು೧೨ನ್ನು ಆಳುತ್ತಿರಲು, ಮುತ್ತರಸನು ಮಹಾಬಲಿ ಬಾಣರಸನ ಮೇಲೆ ಆಕ್ರಮಣ ಮಾಡಿ, ಕೊಯತ್ತೂರಿನಲ್ಲಿ ನೆಲೆಸಿರಲು, ಕೋಗಳಿಯ ಹಿಡುವಳಿದಾರನಾದ ಎರ್ಮೆಯಾರರ ಮಗನಾದ ಬೋಳ್ವಗಂಗ ಗಾವುಂಡನೆಂಬುವವನು ಕಾಳಗದಲ್ಲಿ ಹೋರಾಡಿ ತನ್ನನ್ನು ತಾನೇ ಇರಿದು ವೀರಮರಣವನ್ನು ಹೊಂದಿದನು. ಈ ವೀರನು ತನ್ನನ್ನು ತಾನೇ 'ಇರಿದುಬೀಳ್ದನ್' ಎಂದು ಉಲ್ಲೇಖಿಸಿರುವುದು ವಿಶೇಷವಾಗಿದೆ. ಈ ಶಾಸನವು ವೀರಗಲ್ಲು ಸ್ಮಾರಕ ಶಾಸನಕ್ಕೆ ಉದಾಹರಣೆಯಾಗಿದ್ದು, ಆತ್ಮ ಬಲಿದಾನವನ್ನು ವರ್ಣಿಸಿದೆ. ಆದರೆ ಈ ವೀರನು ಯಾವ ಕಾರಣಕ್ಕಾಗಿ ಆತ್ಮಬಲಿದಾನವನ್ನು ಮಾಡಿರುವನೆಂಬುದಕ್ಕೆ ಕಾರಣವಿಲ್ಲದಾಗಿದೆ.

ಶಿವಮಾರ (ಇಮ್ಮಡಿ ಶಿವಮಾರ)

ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕಿನ ಶಿವಾರಪಟ್ಟಣ ಪ್ರಸಿದ್ಧವಾದಂತಹ ಊರಾಗಿದೆ. ಈ ಪಟ್ಟಣವನ್ನು ಗಂಗ ಅರಸರ ಪ್ರಸಿದ್ಧ ದೊರೆ ಶಿವಮಾರನು ನಿರ್ಮಿಸಿದ್ದನೆಂದು ಪ್ರತೀತಿಯಿದೆ. ಇವನು ತನ್ನ ಜೀವನದ ಬಹಳಷ್ಟು ಕಾಲವನ್ನು ರಾಷ್ಟ್ರಕೂಟರೊಂದಿಗಿನ ಯುದ್ಧಗಳಲ್ಲಿಯೇ ಕಳೆಯಬೇಕಾಯಿತು. ಈತನಿಗೆ 'ಸೈಗೊಟ್ಟ' ಎಂಬ ಇನ್ನೊಂದು ಹೆಸರು ಇದ್ದಿತೆಂದು ಗಂಗರ ಹೆಚ್ಚಿನ ಶಾಸನಗಳಿಂದ ತಿಳಿದುಬರುತ್ತದೆ. ಈತನು ಶ್ರೀಪುರುಷನ ಮಗನು. ಈ ಶ್ರೀಪುರುಷನಿಗೆ ದುಗ್ಗಮಾರ, ವಿಜಯಾದಿತ್ಯರೆಂಬ ಇನ್ನಿಬ್ಬರು ಪುತ್ರರಿದ್ದರು. ಶಿವಮಾರನು ಕ್ರಿ.ಶ.ಸುಮಾರು ೭೮೮ರಿಂದ ೮೧೨ರವರೆಗೆ ಗಂಗ ಸಾಮ್ರಜ್ಯವನ್ನು ಅಲಂಕರಿಸಿದ್ದನು.

ಶಿವಮಾರನು ಸಿಂಹಾಸನವನ್ನೇರುವಂತಹ ಸಂದರ್ಭದಲ್ಲೂ ಮತ್ತು ಅದಕ್ಕಿಂತ ಮೊದಲೂ ಗಂಗರ ನೆರೆಹೊರೆಯ ರಾಜ್ಯಗಳಲ್ಲಿ ಹಲವಾರು ಬದಲಾವಣೆಗಳು ಉಂಟಾಗಿದ್ದವು. ಶಿವಮಾರನ ತಂದೆಯಾದ ಶ್ರೀಪುರುಷನು ಪ್ರಬಲರಾಜನಾಗಿದ್ದ ಸಂದರ್ಭದಲ್ಲಿ ರಾಷ್ಟ್ರಕೂಟರು ರಾಜ್ಯವಿಸ್ತಾರವನ್ನು ಮಾಡುತ್ತಾ ಚಾಳುಕ್ಯರನ್ನು ಮೂಲೆಗೆ ತಳ್ಳಿ ಅವರ ಸಾಮಂತರಾಗಿದ್ದ ಗಂಗ ಅರಸರನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಪ್ರಯತ್ನ ಮಾಡಿದರು.

ರಾಷ್ಟ್ರಕೂಟ ದೊರೆ ೧ನೆಯ ಕೃಷ್ಣನು ಗಂಗರ ಪ್ರಧಾನ ಕೇಂದ್ರವಾದ 'ಮಣ್ಣೆನಗರ' (ಮಾನ್ಯಪುರ)ದಲ್ಲಿ ನೆಲೆಸಿದ್ದನೆಂದು ತಿಳಿದು ಬರುತ್ತದೆ.[೫೪] ಹಾಗಾಗಿ ರಾಷ್ಟ್ರಕೂಟ ದೊರೆ ೧ನೆಯ ಕೃಷ್ಣನು ಶ್ರೀಪುರುಷನ ಆಡಳಿತಾವಧಿಯಲ್ಲೇ ಗಂಗರನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದನೆಂದು ತಿಳಿಯಬಹುದು. ಆದರೆ ಗಂಗ ದೊರೆ ಶ್ರೀಪುರುಷನು ಪ್ರಬಲವಾಗಿ ರಾಷ್ಟ್ರಕೂಟರನ್ನು ಎದುರಿಸಿ ಅವರನ್ನು ಗಂಗ ರಾಜ್ಯದಿಂದ ಹೊರದೂಡಲು ಪ್ರಯತ್ನಿಸಿದ್ದನು. ಶ್ರೀಪುರುಷನು ಆಳ್ವಿಕೆ ಇರುವವರೆಗೂ ಗಂಗ ರಾಜ್ಯವು ರಾಷ್ಟ್ರಕೂಟರ ಸ್ವಾಧೀನವಾಗಲಿಲ್ಲ. ಶ್ರೀಪುರುಷನ ನಂತರ ಪಟ್ಟಕ್ಕೆ ಬಂದಂತಹ ಇಮ್ಮಡಿ ಶಿವಮಾರನು ತನ್ನ ತಂದೆಯ ಹಾದಿಯಲ್ಲೇ ರಾಷ್ಟ್ರಕೂಟರನ್ನು ಎದುರಿಸಿದನು.

ಕ್ರಿ.ಶ.೭೮೮ರ ಸುಮಾರಿಗೆ ಪಟ್ಟಾಭಿಷಿಕ್ತನಾಗಿದ್ದ ಇಮ್ಮಡಿ ಶಿವಮಾರನು ಪ್ರಾರಂಭದಲ್ಲಿಯೇ ರಾಷ್ಟ್ರಕೂಟ ದೊರೆ ಧ್ರುವನಿಂದ ಆಕ್ರಮಣವನ್ನೆದುರಿಸಬೇಕಾಯಿತು. ಈ ಸಂದರ್ಭದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯದಲ್ಲೂ ರಾಜಕೀಯ ಅಸ್ಥಿರತೆಯು ಉಂಟಾಗಿತ್ತು.[೫೫] ಕೃಷ್ಣ ಮತ್ತು ಧ್ರುವರಾಜರ ನಡುವೆ ಸಿಂಹಾಸನ ಯಾರಿಗೆ ಸೇರಬೇಕೆನ್ನುವ ವಿಷಯವಾಗಿ ಸಂಘರ್ಷವು ನಡೆದಿತ್ತು. ಒಂದನೆಯ ಕೃಷ್ಣನು ಆಕ್ರಮಣ ಮಾಡಿ ವಶಪಡಿಸಿಕೊಂಡಿದ್ದಂತಹ ಪ್ರದೇಶಗಳನ್ನು ಶ್ರೀಪುರುಷನು ಪುನಃ ವಶಪಡಿಸಿ ಕೊಂಡಿದ್ದರಿಂದಲೂ ಮತ್ತು ಶ್ರೀಪುರುಷನು ರಾಷ್ಟ್ರಕೂಟ ಸಿಂಹಾಸನದ ವಿಷಯವಾಗಿ ಇಮ್ಮಡಿ ಗೋವಿಂದನ ಪಕ್ಷವನ್ನು ವಹಿಸಿದುದರಿಂದಲೂ ಧ್ರುವನಿಗೆ ಸಹಜವಾಗಿಯೇ ಗಂಗ ರಾಜ್ಯದ ಮೇಲೆ ಸಿಟ್ಟು ಇತ್ತು.

ಶ್ರೀಪುರುಷನು ಕ್ರಿ.ಶ.೭೮೮ರ ಸುಮಾರಿಗೆ ಮರಣ ಹೊಂದಿರುವನು. ಈ ಸಂದರ್ಭದಲ್ಲಿ ಶಿವಮಾರನು ಗಂಗರ ಸಿಂಹಾಸವನ್ನೇರಿದ್ದನು. ಇದೇ ಸಮಯವನ್ನು ಕಾಯುತ್ತಿದ್ದಂತಹ ರಾಷ್ಟ್ರಕೂಟ ದೊರೆ ಧ್ರುವನು ಶಿವಮಾರನ ಮೇಲೆ ಯುದ್ಧಕ್ಕೆ ಬಂದನು. ಮುದುಕುತ್ತೂರು ಎಂಬಲ್ಲಿ ನಡೆದಂತಹ ಈ ಯುದ್ಧದಲ್ಲಿ ಶಿವಮಾರನು ರಾಷ್ಟ್ರಕೂಟ ದೊರೆ ಧ್ರುವನನ್ನು ಎದುರಿಸಿದನು. ಧ್ರುವನ ಸೈನ್ಯದಲ್ಲಿ ಹೈಹೇಯರು, ಚಾಳುಕ್ಯರು ಮತ್ತು ಪಲ್ಲವರು ಸೇರಿದ್ದರು. ಶಾಸನಗಳು ಈ ಯುದ್ಧದಲ್ಲಿ ಯಾರಿಗೆ ಜಯವಾಯಿತೆಂಬ ವಿಷಯವನ್ನು ತಿಳಿಸುವುದರಲ್ಲಿ ಗೊಂದಲವನ್ನುಂಟು ಮಾಡಿದೆ. ಪ್ರಬಲನಾದ ಧ್ರುವನ ಸೈನ್ಯವನ್ನು ಎದುರಿಸಿ ಇಮ್ಮಡಿ ಶಿವಮಾರನು ಜಯಶಾಲಿಯಾಗಿದ್ದನೆಂದು ಶಾಸನಗಳು ತಿಳಿಸಿದರೂ ಪೂರ್ಣ ಜಯಶಾಲಿಯಾಗದೇ ಹಿಂತಿರುಗಿ ಹೋಗಿರಬಹುದು.

ಶಿವಮಾರನಲ್ಲಿದ್ದಂತಹ ದೌರ್ಬಲ್ಯವನ್ನು ಅರಿತಂತಹ ಧ್ರುವನು ಆತನನ್ನು ಬಂಧಿಸಿದನು. ನಂತರ ಗಂಗ ಅರಸರ ಪ್ರದೇಶಗಳಿಗೆ ಧ್ರುವನು ತನ್ನ ಪುತ್ರನಾದ ಕಂಬಯ್ಯನನ್ನು ನಿಯೋಜಿಸಿದನು. ಆದರೆ ಈ ಕಂಬಯ್ಯನು ತಾನೇ ರಾಜನಾಗಬೇಕೆಂದು ಅತಿಯಾಸೆಯನ್ನು ಹೊಂದಿ ದಂಗೆ ಎದ್ದನು. ಈ ಸಂದರ್ಭದಲ್ಲಿ ಮುಮ್ಮಡಿ ಗೋವಿಂದನು ಕಂಬಯ್ಯನನ್ನು ತಡೆಯುವ ಸಲುವಾಗಿ ಶಿವಮಾರನನ್ನು ಬಂಧಮುಕ್ತಗೊಳಿಸಿ ಕಂಬಯ್ಯನನ್ನು ಎದುರಿಸಲು ನಿಯೋಜಿಸಿದನು. ಆದರೆ ಅನೇಕ ವರ್ಷಗಳ ಕಾಲ ಬಂಧನದಲ್ಲಿದ್ದಂತಹ ಶಿವಮಾರನು ಗೋವಿಂದನ ಸಹಾಯವನ್ನು ಮರೆತು ಕಂಬಯ್ಯನ ಪಕ್ಷವನ್ನು ವಹಿಸಿದನು. ಆದರೆ ಸ್ವಲ್ಪ ಸಮಯದಲ್ಲಿಯೇ ಗೋವಿಂದನು ಕಂಬಯ್ಯನನ್ನು ಸೋಲಿಸಿ ಶಿವಮಾರನನ್ನು ಪುನಃ ಬಂಧನದಲ್ಲಿಟ್ಟನು. ತನ್ನ ಜೀವಿತಾವಧಿಯ ಕೊನೆಯ ದಿನಗಳಲ್ಲಿ ಶಿವಮಾರನು ಕಾರಾಗೃಹದಲ್ಲಿದ್ದ ಗೋವಿಂದ ಅರಸನು ಈತನನ್ನು ಬಂಧಮುಕ್ತಗೊಳಿಸಿದನು.

ಶಿವಮಾರನ ಆಡಳಿತಾವಧಿಯಲ್ಲಿ ಕೋಲಾರ ಜಿಲ್ಲೆಯಲ್ಲೂ ರಾಜಕೀಯವಾಗಿ ಅನೇಕ ಏರಿಳಿತಗಳು ಕಂಡುಬಂದವು. ರಾಷ್ಟ್ರಕೂಟ ದೊರೆ ೧ನೆಯ ಕೃಷ್ಣನು ಗಂಗ ರಾಜ್ಯ ಮನೆತನದ ಧಾಳಿ ನಡೆಸಿದಾಗ ಕೋಲಾರ ಜಿಲ್ಲೆಯು ಗಂಗ ಆಡಳಿತಕ್ಕೆ ಒಳಪಟ್ಟಿತ್ತು. ಕೋಲಾರ ಜಿಲ್ಲೆಯಲ್ಲಿ ಶಿವಮಾರನಿಗೆ ಸಂಬಂಧಿಸಿದಂತಹ ಶಾಸನಗಳು ದೊರಕುತ್ತಿದ್ದು ಈ ಪ್ರದೇಶವನ್ನು ರಕ್ಷಿಸುವುದರಲ್ಲಿ ಪ್ರಯತ್ನಸಿದ್ದನೆಂದು ತಿಳಿಯಬಹುದಾಗಿದೆ.

ಇಮ್ಮಡಿ ಶಿವಮಾರನು ಜೈನಪಂಥವನ್ನು ಸ್ವೀಕರಿಸಿದವರಲ್ಲಿ ಗಂಗ ವಂಶದಲ್ಲಿ ಮೊದಲಿಗನಾಗಿದ್ದಾನೆ. ಜೈನಧರ್ಮಕ್ಕೆ ಪ್ರೋತ್ಸಾಹವನ್ನು ನೀಡಿದ್ದು ಅಲ್ಲದೆಯೇ ಅನೇಕ ಜೈನಬಸದಿಗಳನ್ನು ಈತನು ನಿರ್ಮಿಸಿದನು. ಶ್ರವಣಬೆಳಗೊಳ ಮತ್ತು ಇನ್ನಿತರ ಪ್ರದೇಶಗಳಲ್ಲೂ ಜೈನಬಸದಿಗಳನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ.

ಕೋಲಾರ ತಾಲ್ಲೂಕಿನ ಮೇದುತುಂಬಿಹಳ್ಳಿ ಗ್ರಾಮದಲ್ಲಿ ದೊರಕಿರುವ ದಾನಶಾಸನವು[೫೬] ಶಿವಮಾರನ ಉಲ್ಲೇಖವನ್ನು ಮಾಡುತ್ತದೆ. ಈ ಶಿವಮಾರನು ಶ್ರೀಪುರುಷನ ಐವರು ಪುತ್ರರಲ್ಲಿ ಒಬ್ಬನಾಗಿದ್ದನು. ಶಾಸನದಲ್ಲಿ ಕಾಲದ ಉಲ್ಲೇಖವಿರದಿದ್ದು ಲಿಪಿಯ ದೃಷ್ಟಿಯಿಂದಲೂ ಮತ್ತು ಶಿವಮಾರನ ಉಲ್ಲೇಖವಿರುವುದರಿಂದ ಇದರ ಕಾಲವನ್ನು ೯ನೇಯ ಶತಮಾನವೆಂದು ನಿರ್ಧರಿಸಬಹುದು. ಈತನನ್ನು ಶಾಸನವು ಕೊಂಗುಣಿ ಮಹಾರಾಜನೆಂದು ಹೆಸರಿಸಿದೆ. ರಾಜನು ರಾಜ್ಯವನ್ನಾಳುತ್ತಿರಲು 'ಪುತ್ತೂರು' ಎಂಬ ಪ್ರದೇಶದ ಒಡೆಯನಾದ ಶಿವಮಾರಯ್ಯನು ದಂಡಗೇರ್ ಮತ್ತು ನಲ್ಲತ್ತೂರ ಒಡೆಯರಿಗೆ ದಾನವನ್ನು ನೀಡಿರುವಂತಹ ಮಾಹಿತಿಯಿದೆ. ದಾನದ ವಿವರ ಹೀಗಿದೆ. ಒಂದು ಮನೆಯ ನಿವೇಶನ, ಐದು ತುಂಬುಗಳಷ್ಟು ಧಾನ್ಯವನ್ನು ಬೆಳೆಯುವಂತಹ ಭೂಮಿಯನ್ನು ಏಳು ತುಂಬಗಳಷ್ಟು ತೋಟವನ್ನು ಬ್ರಹ್ಮದೇಯ ಕ್ರಮದಲ್ಲಿ ನೀಡಿರುವಂತೆ ಉಲ್ಲೇಖಿಸಿದೆ. ಮುಳಬಾಗಿಲು ತಾಲ್ಲೂಕಿನಲ್ಲಿ ಹುತ್ತೂರು ಗ್ರಾಮವಿದ್ದು ಪುತ್ತೂರು ಶಬ್ದದ ರೂಪಾಂತರವು ಹುತ್ತೂರು ಆಗಿರಬಹುದು. ಇದೇ ಪುತ್ತೂರು ಗ್ರಾಮದ ಉಲ್ಲೇಖವು ಶ್ರೀಪುರುಷನ ಶಾಸನದಲ್ಲೂ (E.C.X ಕೋಲಾರ ೨೨೯) ಕಂಡು ಬರುತ್ತದೆ.

ಯುವರಾಜ ಮಾರಸಿಂಹನು ಶಿವಮಾರನ ನಂತರ ಸ್ವಲ್ಪಕಾಲ ರಾಜ್ಯಭಾರವನ್ನು ಆಳಿದ್ದಂತೆ ಕಂಡು ಬರುತ್ತದೆಯಾದರೂ ಅವನಿಗೆ ಸಂಬಂಧಿಸಿದಂತಹ ಶಾಸನಗಳು ದೊರೆಯುವುದಿಲ್ಲ.

ನೀತಿಮಾರ್ಗ ಪೆರ್ಮಾನಡಿ –I

ಇಮ್ಮಡಿ ಶಿವಮಾರನ ಕಾಲದಲ್ಲಿ ಗಂಗ ಅರಸರು ರಾಷ್ಟ್ರಕೂಟರ ಆಕ್ರಮಣವನ್ನು ಬಲವಾಗಿ ಎದುರಿಸಬೇಕಾಯಿತು. ಇಮ್ಮಡಿ ಶಿವಮಾರನ ತರುವಾಯ ಆತನ ಕಿರಿಯ ಸೋದರನಾದ ವಿಜಯಾದಿತ್ಯನ ಮಗನಾದ ಒಂದನೇಯ ಸತ್ಯವಾಕ್ಯ ರಾಚಮಲ್ಲನು ಗಂಗ ಸಿಂಹಾಸನವನ್ನು ಏರುತ್ತಾನೆ. ಆದರೆ ಕೋಲಾರ ಜಿಲ್ಲೆಯಲ್ಲಿ ಈ ರಾಜನಿಗೆ ಸಂಬಂಧಿಸಿದ ಯಾವುದೇ ಶಾಸನಗಳು ದೊರೆಯುವುದಿಲ್ಲ. ಈತನ ನಂತರ ಹಿರಿಯ ಪುತ್ರನಾದ ಎರೆಯಂಗ ನೀತಿಮಾರ್ಗನು –I ಪಟ್ಟಕ್ಕೆ ಬಂದನು.

ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿ ಮಡಿವಾಳ ಗ್ರಾಮದಲ್ಲಿರುವ ಮೂಲೇಶ್ವರ ದೇವಸ್ಥಾನದ ಬಳಿಯಲ್ಲಿರುವಂತಹ ವೀರಗಲ್ಲು ಶಾಸನವು ಐತಿಹಾಸಿಕವಾಗಿ ಮತ್ತು ರಾಜಕೀಯವಾಗಿ ಮಹತ್ವ ಪೂರ್ಣವಾಗಿದೆ.[೫೭] ಶಾಸನವು ಒಂದನೆಯ ನೀತಿಮಾರ್ಗ 'ಪೆರ್ಮಾನಡಿ' ರಾಜನಿಗೆ ಸಂಬಂಧಿಸಿದುದಾಗಿದೆ. ಈತನನ್ನು ಶಾಸನವು ಕೊಂಗಣಿವರ್ಮನ್ ಧರ್ಮಮಹಾರಾಜಾಧಿರಾಜ, ಪರಮೇಶ್ವರ ಮತ್ತು ನಂದಿಗಿರಿನಾಥ ಎಂದು ಹೊಗಳಿದೆ. ಅದಲ್ಲದೆಯೇ 'ಕುವಳಾಲಪುರವೇಶ್ವರ' ಎಂದು ಹೊಗಳಿದೆ. ಈತನು ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದನು. ಇದೇ ಸಮಯದಲ್ಲಿ ಪಲ್ಲವ ವಂಶದ ನೊಳಂಬಾಧಿರಾಜನು ಗಂಗ೬೦೦೦ವನ್ನು ಆಳುತ್ತಿರಲು 'ಮುರ್ಗ್ಗೆಪಾಡಿ'ಯ ಕಾಳಗದಲ್ಲಿ 'ಪೊಂಪಲ್ಲವೊಡೆಯ' ಎಂಬುವವನು ಬಾಣರಸರೊಂದಿಗೆ ಕಾದಾಡಿದನೆಂದು ತಿಳಿಯುತ್ತದೆ. ಇದಕ್ಕೆ ಮೆಚ್ಚಿ ನೀತಿಮಾರ್ಗ ಪೆರ್ಮಾನಡಿ ಮತ್ತು ನೊಳಂಬಾಧಿರಾಜರು ಸೂರೂರು ಎಂಬ ಗ್ರಾಮವನ್ನು ಬಾಳ್ಗಚ್ಚಾಗಿ ನೀಡಿರುವರು. ಅದಲ್ಲದೆಯೇ ಈ ಬಾಳ್ಗಚ್ಚನ್ನು ಗಂಗ ಮತ್ತು ನೊಳಂಬ ವಂಶದಲ್ಲಿ ಮುಂದೆ ಬರುವಂತಹ ರಾಜರುಗಳು ವೆಂಗಡದ ಪೊಂಪಲ್ಲರಿಗೆ ಒಕ್ಕಲಾಗಿ ಸಲ್ಲಿಸುತ್ತಿರಬೇಕೆಂಬ ವಿಚಾರವಿದೆ. ಈ ದತ್ತಿಯನ್ನು ನೊಳಂಬಾಧಿರಾಜನ ಕೋರಿಕೆಯ ಮೇರೆಗೆ ಪೆರ್ಮಾನಡಿರಾಜನು ನೀಡಿರುವನು.

ಇಲ್ಲಿ ವಿಶ್ಲೇಷಿಸಿರುವಂತಹ ವೀರನಾದ ಪೊಂಪಲ್ಲ ಒಡೆಯನು ಅನೇಕ ಗುಣಸಂಪನ್ನನೂ ಸತ್ಯ-ಶೌಚ-ಶೀಲಾಚಾರ ಸಂಪನ್ನನೂ ವೆಂಗಡದ ಒಡೆಯನೂ ಎಂದು ಶಾಸನ ತಿಳಿಸಿದೆ. ಬೆಂಗಡವೆನ್ನುವುದು ಸ್ಥಳನಾಮವಾಗಿದೆ.

ಸತ್ಯವಾಕ್ಯ ಪೆರ್ಮಾನಡಿ ರಾಚಮಲ್ಲ

ಗಂಗ ಮನೆತನವು ಅವಿಚ್ಛನವಾಗಿ ಮುಂದುವರೆದು ಹೋಗುವುದರಲ್ಲಿ ಹಲವಾರು ರಾಜರುಗಳ ಹಸ್ತಕ್ಷೇಪವಿದ್ದಂತೆ ಇಮ್ಮಡಿ ರಾಚಮಲ್ಲನ ಕೊಡುಗೆಯು ಇರುವುದು. ಈತನು ಕ್ರಿ.ಶ.೮೭೦ರಿಂದ ೯೦೭ರವರೆಗೆ ರಾಜ್ಯಾಡಳಿತವನ್ನು ಮಾಡಿದನು. ಎರೆಗಂಗ ನೀತಿಮಾರ್ಗನ ಹಿರಿಯ ಪುತ್ರನಾದ ಈ ಇಮ್ಮಡಿ ರಾಚಮಲ್ಲನು ಗಂಗ ರಾಜ್ಯಭಾರವನ್ನು ಸಾಕಷ್ಟು ಬಲಪಡಿಸಲು ಶ್ರಮಿಸಿದ್ದನು. ಈತನ ಆಳ್ವಿಕೆಯ ಕಾಲದಲ್ಲಿ ನೊಳಂಬರು ಮತ್ತು ಪಲ್ಲವರು ಸತತವಾಗಿ ಧಾಳಿಯನ್ನು ನಡೆಸಿದರೂ ಅದನ್ನು ಸಮರ್ಥವಾಗಿ ಎದುರಿಸಿದನು. ಈತನ ಸಹೋದರನಾದ ಯುವರಾಜ ಬೂತುಗನ ಸಹಾಯದಿಂದ ಶತ್ರುಗಳ ಮೇಲೆ ಯುದ್ಧವನ್ನು ಸಾರಿ ವಿಜಯವನ್ನು ಸಂಪಾದಿಸಿದ್ದನು. ಆದರೆ ಅನಿರೀಕ್ಷಿತವಾಗಿ ಬೂತುಗನು ವೆಂಗಿಯ ದೊರೆ ಇಮ್ಮಡಿ ವಿಜಯಾದಿತ್ಯನ ವಿರುದ್ಧ ಹೋರಾಟದಲ್ಲಿ ಮಡಿದಾಗ ತನ್ನ ಉತ್ತರಾಧಿಕಾರಿಯಾಗಿ ಇಮ್ಮಡಿ ನೀತಿಮಾರ್ಗನನ್ನು ಪಟ್ಟಾಭಿಷಕ್ತಗೊಳಿಸುತ್ತಾನೆ. ರಾಚಮಲ್ಲನು ರಾಜನಾಗಿದ್ದಾಗ ತನ್ನ ತಮ್ಮನಾದ ಬೂತುಗನನ್ನು ಕೊಜ್ಗಳ್ನಾಡು ಮತ್ತು ಪುಂನಾಡಿಗೆ ಯುವರಾಜನನ್ನಾಗಿ ನೇಮಿಸುತ್ತಾನೆ.

ಈತನಿಗೆ ಸಂಬಂಧಿಸಿದ ಶಾಸನವು ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದೊರಕಿದೆ.[೫೮] ಇದು ೮೨೪ ಶಕವರ್ಷ ಅಂದರೆ ಕ್ರಿ.ಶ.೯೦೨ಕ್ಕೆ ಸೇರಿದ ಶಾಸನವಾಗಿದ್ದು, ಗಂಗ ರಾಜಮನೆತನ ವಂಶಾವಳಿಯನ್ನು ತಿಳಿಸುತ್ತದೆ. ಗಂಗ ವಂಶದ ಸ್ಥಾಪಕನಾದ ಕೊಂಗಣಿವರ್ಮ ಧರ್ಮಮಹಾರಾಜನಿಂದ ಆರಂಭಿಸಿ ೧೬ ರಾಜರುಗಳ ಸಂಕ್ಷಿಪ್ತ ಪರಿಚಯವನ್ನು ನೀಡುತ್ತಿರುವ ಈ ಶಾಸನವು ಕನ್ನಮಂಗಳದಲ್ಲಿ ಇರುವಂತಹ ಜೈನಬಸದಿಗೆ ಭೂದಾನವನ್ನು ನೀಡಿರುವಂತಹ ವಿಷಯವಿದೆ. ಇದು ತಾಮ್ರ ಶಾಸನವಾಗಿದ್ದು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ರಾಜನಿಗೆ ಸತ್ಯವಾಕ್ಯ ಪೆರ್ಮಾನಡಿಗಳ್ ಎಂಬಂತಹ ಇನ್ನೊಂದು ಹೆಸರಿತ್ತೆಂಬ ಮಾಹಿತಿಯನ್ನು ಈ ಶಾಸನ ತಿಳಿಸುತ್ತದೆ. ಈ ರಾಜನು ಪೃಥ್ವಿಯನ್ನಾಳುತ್ತಿರಲು ೮೨೪ನೆಯ ಶಕವರ್ಷದ ಫಾಲ್ಗುಣ ಮಾಸದ ಶುಕ್ಲಪಕ್ಷದ ಪಂಚಮಿ, ಬುಧವಾರ ರೋಹಿಣಿನಕ್ಷತ್ರದಂದು ಉದಕಪೂರ್ವವಾಗಿ ಬಿಟ್ಟಂತಹ ದಾನದ ವಿವರವಿದೆ. ಕಮುಂಗೆರೆಯ ಕಂಠಿಯರಿಗೆ ಹಲವಾರು ದಾನಗಳನ್ನು ಬಿಟ್ಟಂತಹ ವಿಚಾರವಿದೆ. ಶಾಸನದಲ್ಲಿ ಕಣ್ಣಮಂಗಳದಲ್ಲಿ ನಿರ್ಮಿಸಿದ ಬಸದಿಗೆ ದಾನ ನೀಡಿದ ವಿಚಾರವಿದೆ. ಅದೇ ಕಣ್ಣಮಂಗಳದಲ್ಲಿ ಶ್ರೀವರ್ಮಯ್ಯನು ಕಟ್ಟಿಸಿದ ಬಸದಿಗೂ ದಾನ ನೀಡಿದ ಉಲ್ಲೇಖವಿದೆ. ಇದಲ್ಲದೆಯೇ ಇನ್ನೂ ಹಲವಾರು ದಾನಗಳನ್ನು ನೀಡಿರುವಂತಹ ಮಾಹಿತಿಯಿದೆ.

ಈ ಶಾಸನವನ್ನು ಗಮನಿಸಿದಾಗ ಸತ್ಯವಾಕ್ಯ ಪೆರ್ಮಾನಡಿ ರಾಚಮಲ್ಲನ ಆಳ್ವಿಕೆಯ ಕಾಲದಲ್ಲಿ ಜೈನಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿತ್ತೆಂದು ಊಹಿಸಬಹುದು. ಕೋಲಾರ ಜಿಲ್ಲೆಯ ಗಂಗ ಅರಸರ ಚರಿತ್ರೆಯನ್ನು ತಿಳಿಯಲು ಈ ಶಾಸನವು ಸಹಕಾರಿಯಾಗಿದೆ. ಈ ಶಾಸನವು ತಾಮ್ರಶಾಸನವಾಗಿದ್ದು, ದಾನಶಾಸನಗಳಲ್ಲಿ ಪ್ರಮುಖವಾಗಿದೆ. ಈ ಶಾಸನವು ರಾಚಮಲ್ಲನನ್ನು ಯುವರಾಜನೆಂದು ಹೇಳಿದ್ದು ತನ್ನ ಬಾಲ್ಯ ಕಾಲದಲ್ಲಿಯೇ ರಾಜ್ಯಭಾರವನ್ನು ವಹಿಸಿಕೊಳ್ಳಲು ಸಮರ್ಥನೂ, ಚಂದ್ರನಂತೆ ನಿರ್ಮಲ ಯಶಸ್ಸು ಉಳ್ಳವನು,

ರಾಜ್ಯಲಕ್ಷ್ಮಿಯನ್ನು ಸ್ವತಃ ಪಡೆದವನೂ, ಗುಣನಿಧಿಯೂ, ತಲೆಬಾಗಿದವರಿಗೆ ಕಲ್ಪವೃಕ್ಷನೂ ಎಂದು ಮೊದಲಾಗಿ ಹೊಗಳಿದೆ.

ನರಸಾಪುರದ ಶಾಸನವು ನೀಡಿರುವಂತಹ ಗಂಗ ವಂಶಾವಳಿಯು ಈ ರೀತಿಯಾಗಿದೆ.

ಕೊಂಗಣಿವರ್ಮ ಧರ್ಮಮಹಾಧಿರಾಜ

|

ಮಾಧವ ಮಹಾಧಿರಾಜ

|

ಹರಿವರ್ಮ ಮಹಾಧಿರಾಜ

|

ವಿಷ್ಣುಗೋಪ ಮಹಾಧಿರಾಜ

|

ಮಾಧವ –II ಮಹಾಧಿರಾಜ

|

ಕೊಂಗುಣಿ ಮಹಾಧಿರಾಜ (ಅವನೀತ)

|

ದುರ್ವಿನೀತ

|

ಮುಷ್ಕರ

|

ಶ್ರೀವಿಕ್ರಮ

|

ಭೂವಿಕ್ರಮ | ಕೊಂಗಣಿಮಹಾರಾಜ ಶಿವಮಾರ I (ನವಕಾಮ)

|

(ಮೊಮ್ಮಗ)

|

ಪೃಥ್ವಿ ಕೊಂಗಣಿ ಮಹಾರಾಜ (ಶ್ರೀಪುರುಷ)

ಶಿವಮಾರದೇವ | ವಿಜಯಾದಿತ್ಯ

|

ಸತ್ಯವಾಕ್ಯ ರಾಚಮಲ್ಲ

|

ಶ್ರೀ ನೀತಿಮಾರ್ಗ

|

(ಸತ್ಯವಾಕ್ಯ ಪೆರ್ಮಾನಡಿ) ರಾಚಮಲ್ಲ – II

ಇಮ್ಮಡಿ ಸತ್ಯವಾಕ್ಯ ರಾಚಮಲ್ಲನ ನಂತರ ಆತನ ಪುತ್ರನಾದ ಇಮ್ಮಡಿ ನೀಡಿಮಾರ್ಗನು ಗಂಗ ಸಿಂಹಾಸನವನ್ನು ಏರಿದನು. ಈತನು ಮಹಾಬಲಿಕುಲ ವಿಧ್ವಂಸಕ ಎಂಬಂತಹ ಬಿರುದನ್ನು ಹೊಂದಿದ್ದನು. ಈತನು ನೊಳಂಬ ಮಹೇಂದ್ರನನ್ನು ಸೋಲಿಸಿದ್ದರಿಂದ ಮಹೇಂದ್ರಾಂತಕ ಎಂಬ ಬಿರುದನ್ನು ಗಳಿಸಿದ್ದನು. ಆದರೆ ಈತನಿಗೆ ಸಂಬಂಧಿಸಿದ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ.

ಇಮ್ಮಡಿ ನೀತಿಮಾರ್ಗನ ನಂತರ ಗಂಗನರಸಿಂಹನು ಗಂಗ ಸಿಂಹಾಸನವನ್ನು ಏರಿದನು. ಮುಂದೆ ಇವನ ತಮ್ಮ ಇಮ್ಮಡಿ ಬೂತುಗ, ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಸಹಾಯದಿಂದ ಗಂಗ ಸಿಂಹಾಸನವನ್ನು ಏರಿದನು. ಈತನ ಸಹಾಯದಿಂದ ಸಿಂಹಾಸನವನ್ನು ಅಲಂಕರಿಸಿದ್ದರಿಂದ ಸಹಜವಾಗಿ ಇಮ್ಮಡಿ ಬೂತುಗನು ರಾಷ್ಟ್ರಕೂಟ ದೊರೆ ಕೃಷ್ಣನಿಗೆ ಹಿತೈಷಿಯಾಗಿದ್ದನು. ಈತನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಹಲವಾರು ಯುದ್ಧಗಳಲ್ಲಿ ರಕ್ಷಿಸಿದ್ದುದರಿಂದ ಮುಮ್ಮಡಿ ಕೃಷ್ಣನ ವಿಶ್ವಾಸಕ್ಕೆ ಪಾತ್ರನಾಗಿದ್ದನು. ಈತನು ಕ್ರಿ.ಶ.೯೩೮ರಿಂದ ೯೬೦ರವರೆಗೆ ಗಂಗ ಸಿಂಹಾಸನವನ್ನು ಅಲಂಕರಿಸಿದ್ದನು. ರಾಷ್ಟ್ರಕೂಟರೊಂದಿಗೆ ಉತ್ತಮ ಮೈತ್ರಿಯನ್ನು ಗಳಿಸಿದ್ದರಿಂದಾಗಿ ರಾಷ್ಟ್ರಕೂಟರಿಗೆ ವಿರುದ್ಧವಾಗಿದ್ದ ಹಲವಾರು ಸಾಮಂತ ಅರಸರನ್ನು ಬಗ್ಗು ಬಡಿಯುವಲ್ಲಿ ಯಶಸ್ವಿಯಾದನು. ಇದೇ ಸಂದರ್ಭದಲ್ಲಿ ರಾಷ್ಟ್ರಕೂಟರು ಚೋಳರ ವಿರೋಧವನ್ನು ಎದುರಿಸಬೇಕಾಯಿತು. ಈ ಸಂದರ್ಭದಲ್ಲಿ ಇಮ್ಮಡಿ ಬೂತುಗನು ಮುಮ್ಮಡಿ ಕೃಷ್ಣನಿಗೆ ಬೆನ್ನಲುಬಾಗಿ ನಿಂತು ತಮಿಳುನಾಡಿನ ತಕ್ಕೋಲಂ ಬಳಿ ನಡೆದ ಘೋರ ಯುದ್ಧದಲ್ಲಿ ಚೋಳರನ್ನು ಸಂಪೂರ್ಣವಾಗಿ ಸೋಲಿಸಿದ್ದನು. ಈ ವಿಜಯದ ವಿವರಗಳನ್ನು ಮಂಡ್ಯ ತಾಲ್ಲೂಕಿನ ಆತಕೂರು ಶಾಸನವು ತಿಳಿಸುತ್ತದೆ.[೫೯]

ಆತಕೂರು ಶಾಸನವು ಕರ್ನಾಟಕದ ಶಾಸನಗಳಲ್ಲಿ ಪ್ರಸಿದ್ಧವಾದ ಶಾಸನವಾಗಿದ್ದು, ಗಂಗ ದೊರೆ ಸತ್ಯವಾಕ್ಯ ಕೊಂಗುಣಿವರ್ಮ, ಪೆರ್ಮಾನಡಿಯನ್ನು ಉಲ್ಲೇಖಿಸಿದ್ದು ಈತನನ್ನು ಕೋಲಾಳಪುರದ ಧರ್ಮಮಹಾರಾಜಾಧಿರಾಜ ಮತ್ತು ನಂದಗಿರಿಯ ಒಡೆಯನೆಂದು ತಿಳಿಸಿದೆ. ಈತನನ್ನು ಗಂಗಗಾಂಗೇಯಂ, ಗಂಗನಾರಾಯಣ ಎಂದು ಮೊದಲಾಗಿ ಪ್ರಶಂಸಿದೆ. ಈ ಪೆರ್ಮಾನಡಿಯ ಬಳಿಯಲ್ಲಿ ಆತನಿಗೆ ಪ್ರಿಯವಾದ ಕಾಳಿಯೆಂಬ ಒಂದು ನಾಯಿಯು ಇತ್ತು. ಅದನ್ನು ಬೂತುಗನಿಗೆ ಯುದ್ಧದಲ್ಲಿ ಸಹಾಯ ಮಾಡಿದ ವಲ್ಲಭಿಪುರವರೇಶ್ವರ ಮತ್ತು ಸಗರ ಕುಲದಲ್ಲಿ ಜನಿಸಿದ ಮಣಲೆರ ಎಂಬುವವನು ಕೇಳಿ ಪಡೆದನು. ಇದಕ್ಕೆ ಒಪ್ಪಿದ ಪೆರ್ಮಾನಡಿ ಕೆಳಲೆನಾಡಿನ ಬೆಳತೂರು ಎಂಬಲ್ಲಿ ನಡೆದ ನಾಯಿ ಮತ್ತು ಕಾಡುಹಂದಿಯ ಕಾಳಗದಲ್ಲಿ ಕಾಳಿಯೆಂಬ ನಾಯಿಯು ವೀರಾವೇಶದಿಂದ ಹೋರಾಡಿ ಹಂದಿಯನ್ನು ಸಾಯಿಸಿ ತಾನು ಮರಣವನ್ನು ಹೊಂದಿತು. ಈ ನಾಯಿಯ ಸ್ಮರಣಾರ್ಥವಾಗಿ ಆತಕೂರು ಬಳಿಯ ಚಲ್ಲೇಶ್ವರ ದೇವಾಲಯದ ಮುಂದೆ ಸ್ಮಾರಕವನ್ನು ನಿರ್ಮಿಸಿ ೨ ಖಂಡುಗ ಭೂಮಿಯನ್ನು ದಾನವಾಗಿ ನೀಡಿರುವ ಅಪೂರ್ವ ಮಾಹಿತಿಯನ್ನು ತಿಳಿಸುತ್ತದೆ.

ಅರಕೋಣಂ ಬಳಿಯ ತಕ್ಕೊಲಂ ಬಳಿ ನಡೆದ ಚೋಳ ರಾಷ್ಟ್ರಕೂಟರ ಯುದ್ಧವು ಚೋಳರಿಗೆ ಪರಾಜಯವನ್ನು ಮತ್ತೇ ಆಘಾತವನ್ನು ನೀಡಿತು. ಆದರೆ ಈ ಪರಾಜಯವು ಮುಂದೆ ಗಂಗರ ಅವಸಾನಕ್ಕೆ ಕಾರಣವು ಆಯಿತು. ಕೋಲಾರ ಜಿಲ್ಲೆಯಲ್ಲಿ ಬೂತುಗನಿಗೆ ಸಂಬಂಧಿಸಿದ ಶಾಸನಗಳು ದೊರೆಯುವುದಿಲ್ಲ.

ಇಮ್ಮಡಿ ಬೂತುಗನ ನಂತರ ಆತನ ಮಗನಾದ ಮರಳದೇವನು ಅವನ ಮರಣಾನಂತರ ಆತನ ಪುತ್ರನಾದ ರಾಚಗಂಗನು ಆನಂತರ ಈತನ ಚಿಕ್ಕಪ್ಪನಾದ ಇಮ್ಮಡಿ ಮಾರಸಿಂಹನು ಅಧಿಕಾರಕ್ಕೆ ಬಂದನು. ಈ ಇಮ್ಮಡಿ ಮಾರಸಿಂಹನು ಕ್ರಿ.ಶ.೯೬೩ರಿಂದ ೯೭೪ರ ತನಕ ಆಳ್ವಿಕೆ ನಡೆಸಿದ್ದನು. ಈತನಿಗೂ ರಾಷ್ಟ್ರಕೂಟ ದೊರೆಗಳ

ಸಹಾಯಹಸ್ತವು ದೊರಕಿತ್ತು. ಅದೇ ರೀತಿಯಾಗಿ ಈತನೂ ಕೂಡ ರಾಷ್ಟ್ರಕೂಟರಿಗೆ ಸಂಬಂಧಿಸಿದಂತಹ ಹಲವಾರು ಯುದ್ಧಗಳಲ್ಲಿ ಭಾಗಿಯಾಗಿದ್ದನು. ಮುಮ್ಮಡಿ ಕೃಷ್ಣನ ಮರಣಾನಂತರ ಉಂಟಾದ ಅರಾಜಕತೆಯನ್ನು ಸಮರ್ಥವಾಗಿ ಎದುರಿಸುವಲ್ಲಿ ಮತ್ತು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದನು.

ಇಮ್ಮಡಿ ಮಾರಸಿಂಹ ತನ್ನ ಸಮಕಾಲೀನರೂ ಮತ್ತು ತನ್ನ ಸಮಶತ್ರುಗಳಾಗಿದ್ದ ನೊಳಂಬ ಅರಸರನ್ನು ಹಿಮ್ಮೆಟ್ಟಿಸುವಲ್ಲಿ ಸಮರ್ಥನಾಗಿದ್ದನು. ರಾಷ್ಟ್ರಕೂಟ ಸಾಮ್ರಾಜ್ಯವನ್ನು ಹಲವಾರು ಸಮಸ್ಯೆಗಳಿಂದ ಮೇಲಕ್ಕೆತ್ತಲು ಪ್ರಯತ್ನಿಸುತ್ತಿರುವಂತಹ ಸಂದರ್ಭದಲ್ಲಿ ನೊಳಂಬರು, ಗಂಗವಾಡಿ ಪ್ರಾಂತ್ಯದ ಮೇಲೆ ಧಾಳಿ ಮಾಡಿದರು. ಈ ಸಂದರ್ಭದಲ್ಲಿ ಇತಿಹಾಸ ಪ್ರಸಿದ್ಧ ದಂಡನಾಯಕ ಚಾವುಂಡರಾಯನು ನೊಳಂಬರನ್ನು ಸಂಪೂರ್ಣವಾಗಿ ಸೋಲಿಸಿ ಗಂಗರನ್ನು ಪ್ರಬಲಗೊಳಿಸಿದನು. ಈತನು ಪ್ರಬಲ ಗಂಗ ಮಂತ್ರಿಯಾಗಿದ್ದು, ಗಂಗ ದೊರೆಗಳಾದ ಇಮ್ಮಡಿ ಮಾರಸಿಂಹ, ನಾಲ್ಕನೆಯ ರಾಚಮಲ್ಲ ಮತ್ತು ಐದನೆಯ ರಾಚಮಲ್ಲನ ಆಳ್ವಿಕೆಯಲ್ಲಿ ಆಧಾರಸ್ತಂಭದಂತೆ ಇದ್ದನು. ಈತನೇ ಶ್ರವಣಬೆಳಗೊಳದಲ್ಲಿರುವಂತಹ ಇತಿಹಾಸ ಪ್ರಸಿದ್ಧ ಗೊಮ್ಮಟೇಶ್ವರ ವಿಗ್ರಹದ ಪ್ರತಿಷ್ಠಾಪಕನು.

ಇಮ್ಮಡಿ ಮಾರಸಿಂಹನಿಗೆ ಸಂಬಂಧಿಸಿದಂತಹ ಒಂದೇ ಶಾಸನವು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಹುಲಿಕುಂದ ಗ್ರಾಮದಲ್ಲಿ ದೊರಕಿದ್ದು ಈತನ ರಾಜ್ಯಾಡಳಿತವನ್ನು ಉಲ್ಲೇಖಿಸಿದೆ.[೬೦] ಇದು ಎಮ್ಮೆ ತುರುಗೋಳ್ ಶಾಸನವಾಗಿದ್ದು ಪುಕ್ಕಂದದಲ್ಲಿ ನಡೆದಂತಹ ಕಾಳಗದಲ್ಲಿ "ಕುಪ್ಪಣ"ನೆಂಬುವವನು ಹೋರಾಡಿ ವೀರಮರಣವನ್ನು ಹೊಂದಿದ್ದನೆಂದು ಉಲ್ಲೇಖಿಸಿದೆ. ಶಾಸನದಲ್ಲಿ ಕಾಲದ ಉಲ್ಲೇಖವಿರುವುದಿಲ್ಲ.

ಇಲ್ಲಿ ಉಕ್ತವಾಗಿರುವಂತಹ ಹುಲಿಕುಂದ ಅಥವಾ ಪುಕ್ಕುಂದ ಗ್ರಾಮವು ಗಂಗ ಅರಸರ ಶಾಸನಗಳಲ್ಲಿ ಹೆಚ್ಚಾಗಿ ಪ್ರತಿಪಾದಿತವಾಗಿದೆ. ಬಂಗಾರಪೇಟೆ ತಾಲ್ಲೂಕಿನ ತಲ್ಲಪಲ್ಲಿ ಗ್ರಾಮದಲ್ಲಿ ಗಂಗ ದೊರೆ ಮುತ್ತರಸನಿಗೆ ಸಂಬಂಧಿಸಿದಂತಹ ಶಾಸನದಲ್ಲಿ ಪೊಂಕುಂದ-೧೨ ಎಂದು ಹೆಸರಿಸಿದೆ. ಇದು ಗಂಗ ಸಾಮ್ರಾಜ್ಯದ ವಿಭಾಗವಾಗಿತ್ತು. ಹನ್ನೆರಡು ಗ್ರಾಮಗಳನ್ನು ಹೊಂದಿದ್ದಂತಹ ನಾಡು ಇದಾಗಿರಬಹುದು. ಇಂದಿನ ಬಂಗಾರಪೇಟೆ ತಾಲ್ಲೂಕಿನ ಹುನಕುಂದ ಗ್ರಾಮವೇ ಅಂದಿನ ಪೊಂಕುಂದ ಗ್ರಾಮವಾಗಿತ್ತು.

ಇಮ್ಮಡಿ ಮಾರಸಿಂಹ ಆಳ್ವಿಕೆಯ ನಂತರ ಗಂಗ ಸಾಮ್ರಾಜ್ಯದಲ್ಲಿ ಹಲವಾರು ಕಾಲ ಆರಾಜಕತೆ ಉಂಟಾಗಿತ್ತು. ಮಾರಸಿಂಹನಿಗೆ ಮೂವರು ಪುತ್ರರಿದ್ದರು. ಆದರೆ ಸಿಂಹಾಸನವನ್ನೇರಲು ಈ ಮೂವರು ಪುತ್ರರು ಮತ್ತು ಮಾರಸಿಂಹನ ಸೋದರ ಗೋವಿಂದರಸನ ನಡುವೆ ಅಂತಃಕಲಹ ಉಂಟಾಯಿತು. ಈ ಎಲ್ಲಾ ಅರಾಜಕತೆಯ ನಡುವೆ ಮಾರಸಿಂಹನ ಹಿರಿಯ ಮಗ ನಾಲ್ಕನೆಯ ಸತ್ಯವಾಕ್ಯ ರಾಚಮಲ್ಲನು ಅಧಿಕಾರಕ್ಕೆ ಬಂದನು. ಆದರೆ ಈತನ ಆಳ್ವಿಕೆಯು ಮುಳ್ಳಿನ ಹಾದಿಯಾಗಿತ್ತು. ಕ್ರಿ.ಶ.೯೮೫ರಿಂದ ೧೦೨೪ರವರೆಗೆ ಆಳ್ವಿಕೆ ನಡೆಸಿದಂತಹ ಈತನಿಗೆ ಪ್ರಸಿದ್ಧ ಮಂತ್ರಿ ಚಾವುಂಡರಾಯನ ಮರಣವು ಗಾಯಕ್ಕೆ ಬರೆ ಎಳೆದಂತಾಗಿತ್ತು. ಈ ಸಮಯವನ್ನು ಕಾಯುತ್ತಿದ್ದ ಚೋಳ ಅರಸರು ಗಂಗವಾಡಿ ಮೇಲೆ ದಂಡೆತ್ತಿ ಬಂದರು. ಚೋಳರ ಆರಂಭದ ಕಾಲದ ಪ್ರಧಾನ ದೊರೆಯಾಗಿದ್ದಂತಹ ಒಂದನೆಯ ರಾಜರಾಜ ಚೋಳನು ಗಂಗರ ಹಲವಾರು ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದನು. ರಾಜರಾಜ ಚೋಳ ಎರಡು ಬಾರಿ ಗಂಗ ರಾಜ್ಯದ ಮೇಲೆ ಧಾಳಿ ಮಾಡಿದ್ದನು ಮತ್ತು ಈತನು ಆಳ್ವಿಕೆ ಮಾಡುವಂತಹ ಸಂದರ್ಭದಲ್ಲಿ ಗಂಗವಾಡಿ ಅಥವಾ ಕೋಲಾರನಾಡನ್ನು ನಿಗರಿಲಿ ಚೋಳಮಂಡಲವೆಂದು ಕರೆಯಲಾಗುತ್ತಿತ್ತು.

ಸತ್ಯವಾಕ್ಯ ರಾಚಮಲ್ಲನ ಸಹೋದರನಾದ ರಕ್ಕಸ ಗಂಗನು ಮುಂದೆ ಗಂಗ ಸಿಂಹಾಸನವನ್ನು ಏರಿದನು.ಗಂಗ ಸಾಮ್ರಾಜ್ಯವನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಬಹಳ ಶ್ರಮವಹಿಸಿದಂತಹ ಈ ರಕ್ಕಸ ಗಂಗ ರಾಚಮಲ್ಲನು ತನ್ನ ಆಡಳಿತಾವಧಿಯಲ್ಲಿ ಕುವಲಾಲಪುರದ ಆಡಳಿತವನ್ನು ಇನ್ನು ವಹಿಸಿಕೊಂಡಿದ್ದನು ಎಂಬ ಮಾಹಿತಿಯು ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿ[೬೧] ದೊರಕಿರುವಂತಹ ಶಾಸನದಿಂದ ವೇದ್ಯವಾಗುತ್ತದೆ. ಈ ಶಾಸನವು ರಕ್ಕಸಗಂಗನನ್ನು 'ಕುವಳಾಲ ಪರಮೇಶ್ವರ' ಎಂದು ಹೊಗಳಿದೆ. ಹಾಗಾಗಿ ಆತನು ಈ ಸಮಯದಲ್ಲಿ ಇನ್ನೂ ಸಾಮರ್ಥ್ಯಗಳನ್ನು ಹೊಂದಿದ್ದು ಶತ್ರುಗಳ ಆಕ್ರಮಣಗಳನ್ನು ಎದುರಿಸಲು ಸಮರ್ಥನಾಗಿದ್ದನೆಂದು ಊಹಿಸಬಹುದು. ಶಾಸನದಲ್ಲಿ ಉಕ್ತವಾಗಿರುವಂತೆ ಗಂಗರಿಗೂ ನೊಳಂಬರಿಗೂ ನಿಕಟವಾದ ಸಂಬಂಧವಿತ್ತು. ಆದರೆ ಕಾಲಾನಂತರದಲ್ಲಿ ಚೋಳರು ಪ್ರಬಲರಾಗಿ ನೊಳಂಬರನ್ನು ತಮ್ಮ ಕಡೆಗೆ ಸೆಳೆದುಕೊಂಡು ಗಂಗರನ್ನು ಸೋಲಿಸಲು ಯಶಸ್ವಿಯಾದರು. ಇದಾದ ಸ್ವಲ್ಪ ಸಮಯದ ನಂತರ ತಲಕಾಡಿನ ಸಮೀಪದ ಕಲಿಯೂರಿನಲ್ಲಿ ಜರುಗಿದ ಘೋರ ಯುದ್ಧದಲ್ಲಿ ಚೋಳರು ಗಂಗರನ್ನು ಸಂಪೂರ್ಣವಾಗಿ ಸೋಲಿಸಿ ಶರಣಾಗುವಂತೆ ಮಾಡಿದರು.

೨.೨.೩ ಬಾದಾಮಿ ಚಾಲುಕ್ಯರು

ಬನವಾಸಿಯ ಕದಂಬರ ನಂತರ ಸಂಪೂರ್ಣವಾಗಿ ಅಧಿಕಾರಕ್ಕೆ ಬಂದಂತಹ ಬಾದಾಮಿಯ ಚಾಲುಕ್ಯರು ಕ್ರಿ.ಶ.ಸುಮಾರು೫೪೦ರಿಂದ ಕ್ರಿ.ಶ.೭೫೦ರವರೆಗೆ ಆಳ್ವಿಕೆ ನಡೆಸಿದ್ದರು. ಕರ್ನಾಟಕವು ಸೇರಿದಂತೆ ಆಂಧ್ರ ಮತ್ತು ಮಹಾರಾಷ್ಟ್ರದ ಹಲವಾರು ಪ್ರದೇಶಗಳು ಚಾಲುಕ್ಯರ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಕೋಲಾರ ಜಿಲ್ಲೆಯು ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿದ್ದವು. ಆದರೆ ಅದನ್ನು ದೃಢಪಡಿಸುವಂತಹ ಯಾವುದೇ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುತ್ತಿಲ್ಲ. ವಕ್ಕಲೇರಿ ತಾಮ್ರಶಾಸನವೊಂದು ಚಾಲುಕ್ಯರಿಗೆ ಸಂಬಂಧಿಸಿದಂತಹ ಶಾಸನವಾಗಿದ್ದು ಕೋಲಾರ ಜಿಲ್ಲೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತಿಲ್ಲ.

ಚಾಲುಕ್ಯ ವಂಶದಲ್ಲಿ ಮಂಗಲೀಶ, ಇಮ್ಮಡಿಪುಲಕೇಶಿ, ಒಂದನೆಯ ವಿಕ್ರಮಾದಿತ್ಯ, ವಿನಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಮೊದಲಾದ ಪ್ರಸಿದ್ಧವಾದಂತಹ ರಾಜಾಧಿರಾಜರುಗಳಿದ್ದರು. ಇಮ್ಮಡಿ ಪುಲಕೇಶಿಯು ಕದಂಬ, ಗಂಗ ಮತ್ತು ಅಳುಪರನ್ನು ಜಯಿಸಿ ರಾಜ್ಯವಿಸ್ತಾರವನ್ನು ಮಾಡಿರುವುದಾಗಿ ಪುಲಕೇಶಿಗೆ ಸಂಬಂಧಿಸಿದಂತಹ ಹಲವಾರು ಶಾಸನಗಳು ತಿಳಿಸುತ್ತವೆ. ಆದುದರಿಂದ ಗಂಗರಿಗೂ ಚಾಲುಕ್ಯರಿಗೂ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧವಿತ್ತೆಂದು ಗಮನಿಸಬಹುದಾಗಿದೆ.

ಚಾಲುಕ್ಯರಿಗೂ ಗಂಗರಿಗೂ ನಿಕಟವಾಗಿ ಏನಾದರೊಂದು ಸಂಬಂಧವು ಇದ್ದೇ ಇದೆ. ಆದರೆ ಚಾಲುಕ್ಯರ ರಾಜಧಾನಿಯಾದ ಬಾದಾಮಿಯು ಗಂಗರ ಪ್ರಾಂತ್ಯದಿಂದ ದೂರವಿದ್ದುದರಿಂದ ಸಹಜವಾಗಿ ಚಾಲುಕ್ಯರ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ ಬಿದ್ದಿರುವುದು ಕಡಿಮೆ. ತಲಕಾಡಿನ ಗಂಗರು ಬಾದಾಮಿಯ ಚಾಲುಕ್ಯರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದಿದ್ದರು. ಸೌಹಾರ್ದಯುತವಾಗಿ ಮುಂದುವರೆದಿದ್ದ ಚಾಲುಕ್ಯ ಗಂಗರ ಸಂಬಂಧದಿಂದಾಗಿ ಗಂಗರೇ ಕೋಲಾರ ಜಿಲ್ಲೆಯ ಆಡಳಿತವನ್ನು ಮುಂದುವರೆಸಿಕೊಂಡು ಹೋದರು. ಆದರೆ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ದೊರೆತಂತಹ ಚಾಲುಕ್ಯರ ತಾಮ್ರಶಾಸನಗಳು ಕೋಲಾರ ಜಿಲ್ಲೆಯಲ್ಲಿ

ಪತ್ತೆಯಾಗಿದೆ. ಈ ತಾಮ್ರಶಾಸನಗಳು ಕಾರಣಾಂತರಗಳಿಂದಾಗಿ ಸ್ಥಾನಾಂತರವಾಗಿದ್ದು ಕೋಲಾರ ಜಿಲ್ಲೆಗೆ ಪ್ರವೇಶಿಸಿರಬಹುದು.

ಅವಿಭಜಿತ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ತಾಮ್ರಶಾಸನವು[೬೧]ಪುಲಿಕೇಶಿಯ ಆಡಳಿತವನ್ನು ತಿಳಿಸುತ್ತದೆ. ವಕ್ಕಲೇರಿ ಶಾಸನವು ಧಾರವಾಡ ಪ್ರದೇಶಕ್ಕೆ ಸಂಬಂಧಿಸಿದುದಾಗಿದ್ದು ಕಾರಣಾಂತರಗಳಿಂದ ವಲಸೆ ಬಂದಂತಹ ವ್ಯಕ್ತಿಗಳೊಂದಿಗೆ ಈ ಶಾಸನವು ಬಂದಿರಬಹುದಾಗಿದೆ.

ಬಾದಾಮಿಯ ಚಾಲುಕ್ಯರಿಗೆ ಸಂಬಂಧಿಸಿದ ಒಂದು ಶಾಸನವು ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿ ವಕ್ಕಲೇರಿ ಗ್ರಾಮದಲ್ಲಿ ದೊರಕಿದೆ. ಐದು ತಾಮ್ರಪತ್ರಗಳನ್ನು ಹೊಂದಿರುವಂತಹ ಈ ಶಾಸನವು ಹಳಗನ್ನಡಾಕ್ಷರದಲ್ಲಿದ್ದು, ಸಂಸ್ಕೃತ ಭಾಷೆಯಲ್ಲಿದೆ. ಆದರೆ ಕೋಲಾರ ಜಿಲ್ಲೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಶಾಸನವು ನೀಡುತ್ತಿಲ್ಲ.[೬೨]

ಈ ಶಾಸನವು ಬಾದಾಮಿ ಚಾಲುಕ್ಯರ ವಂಶಾವಳಿಯನ್ನು ಪ್ರತಿಪಾದಿಸುತ್ತಿದ್ದು, ಕೀರ್ತಿವರ್ಮ ಸತ್ಯಾಶ್ರಯ ಶ್ರೀಪೃಥಿವೀವಲ್ಲಭ ಮಹಾರಾಜನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಶಾಸನದಲ್ಲಿ ಚಾಲುಕ್ಯರ ವಂಶಾವಳಿಯು ಈ ರೀತಿಯಾಗಿದೆ.

ಶ್ರೀಪೊಲಕೇಶಿ (ಪುಲಕೇಶಿ)

।

ಕೀರ್ತಿವರ್ಮ

।

ಸತ್ಯಾಶ್ರಯ ಶ್ರೀ ಪೃಥಿವೀವಲ್ಲಭ

।

ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪೃಥಿವೀವಲ್ಲಭ

।

ವಿನಯಾದಿತ್ಯ ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ

।

ವಿಜಯಾದಿತ್ಯ ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ

।

ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ

।

ಕೀರ್ತಿವರ್ಮ ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ

ಈ ಶಾಸನವು ಈ ಎಲ್ಲಾ ರಾಜರನ್ನು ಬಹಳವಾಗಿ ಸ್ತುತಿಸಿದೆ. ಅದರಲ್ಲೂ ವಿಕ್ರಮಾದಿತ್ಯ ಸತ್ಯಾಶ್ರಯನು ರಣರಂಗದಲ್ಲಿ ನಂದಿಪೋತವರ್ಮನೆಂಬ ಪಲ್ಲವನನ್ನು ಸೋಲಿಸಿರುವನೆಂದು ಪ್ರತಿಪಾದಿಸಿದೆ. ಹಾಗಾಗಿ ಈ ರಾಜನು

ಚಾಲುಕ್ಯ ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಕೋಲಾರವನ್ನು ದಾಟಿ ಮುಂದೆ ಬಂದು ಪಲ್ಲವರನ್ನು ಸೋಲಿಸಿರಬಹುದೆಂದು ತೋರುತ್ತದೆ.

ಶಾಸನದ ವಿವರಣೆಯು ಈ ರೀತಿಯಾಗಿದೆ. ಕೀರ್ತಿವರ್ಮನು ಪೃಥ್ವಿಯನ್ನಾಳುತ್ತಿರಲು ೬೭೯ನೆಯ ಶಕ ವರ್ಷದಲ್ಲಿ (ಕ್ರಿ.ಶ.೭೪೭) ವಿಜಯರಾಜ್ಯವು ಅಭಿವೃದ್ಧಿ ಹೊಂದುತ್ತಿರಲು ೧೧ನೆಯ ವರ್ಷದಲ್ಲಿ ಭಾದ್ರಪದ ಮಾಸದ ಹುಣ್ಣಿಮೆಯಂದು ಶ್ರೀದೋಸಿರಾಜನೆಂಬುವವನ ವಿಜ್ಞಾಪನೆಯ ಮೇರೆಗೆ ಮಾಧವಶರ್ಮನೆಂಬುವವನಿಗೆ ಸುಳ್ಳಿಯೂರು ಎಂಬ ಗ್ರಾಮವನ್ನು ದಾನವಾಗಿ ನೀಡಿರುವಂತಹ ಮಾಹಿತಿಯಿದೆ.

ಚಾಲುಕ್ಯರು ಪ್ರಬಲ ರಾಜರಾಗಿದ್ದರು. ಇಮ್ಮಡಿ ಪುಲಿಕೇಶಿಯಂತಹ ಪ್ರಬಲರಾಜರಿಗೆ ಆಶ್ರಯದಾತೃವಾಗಿದ್ದಂತಹ ಈ ಚಾಲುಕ್ಯ ರಾಜ್ಯದ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ ಬೀಳದಿರುವುದು ಆಶ್ಚರ್ಯಕರವೂ ಪ್ರಶ್ನಾರ್ಥವೂ ಆಗಿದೆ.

೨.೨.೪ ರಾಷ್ಟ್ರಕೂಟರು

ಕರ್ನಾಟಕದ ಇತಿಹಾಸದಲ್ಲಿ ಸಾರ್ವಭೌಮರಾಗಿ ಮೆರೆದವರಲ್ಲಿ ರಾಷ್ಟ್ರಕೂಟರು ಪ್ರಧಾನರಾಗಿದ್ದಾರೆ. ಇವರ ರಾಜಧಾನಿ ಮಳಖೇಡ ಅಥವಾ ಮಾನ್ಯಖೇಟವಾದುದರಿಂದ ಇವರನ್ನು 'ಮಾನ್ಯಖೇಟದ ರಾಷ್ಟ್ರಕೂಟ'ರೆಂದು ಇತಿಹಾಸಕಾರರು ಹೆಸರಿಸಿದ್ದಾರೆ. ಬಾದಾಮಿ ಚಾಲುಕ್ಯರ ನಂತರ ಪ್ರಬಲರಾದಂತಹ ಇವರು ಕ್ರಿ.ಶ.೮ನೆಯ ಶತಮಾನದಿಂದ ೧೦ನೆಯ ಶತಮಾನದವರೆಗೆ ಸುಮಾರು ಎರಡು ಶತಮಾನಗಳವರೆಗೆ ಸಮರ್ಥರಾಗಿ ಆಳ್ವಿಕೆಯನ್ನು ನಡೆಸಿ ಕರ್ನಾಟಕದ ಭಾಷೆ ಮತ್ತು ಸಂಸ್ಕೃತಿಗೆ ಅಪಾರವಾದಂತಹ ಕಾಣಿಕೆಯನ್ನು ನೀಡಿದ್ದರು.

ರಾಷ್ಟ್ರಕೂಟರ ಮೂಲವು ಚರ್ಚಾಸ್ಪದವಾಗಿದೆ. ರಾಷ್ಟ್ರಕೂಟ ಎಂಬ ಶಬ್ದವು ಯಾವುದೇ ವಂಶ ಅಥವಾ ಮನೆತನವನ್ನು ಸೂಚಿಸುತ್ತಿಲ್ಲ. ರಾಷ್ಟ್ರಕೂಟ ಎಂಬ ಶಬ್ದದಲ್ಲಿ ರಾಷ್ಟ್ರ ಮತ್ತು ಕೂಟ ಎಂಬೆರಡು ಪದಗಳಿದ್ದು ರಾಷ್ಟ್ರವೆಂದರೆ ದೇಶವೆಂದೂ ಕೂಟ ಎಂದರೆ ಸಣ್ಣ ಸಣ್ಣ ಸಮೂಹಗಳೆಂದರ್ಥ, ಹಾಗಾಗಿ ಸಣ್ಣ ಸಣ್ಣ ಸಾಮಂತರಾಜರುಗಳು ಸೇರಿಕೊಂಡು ಕಟ್ಟಿದಂತಹ ರಾಜ್ಯವೇ ರಾಷ್ಟ್ರಕೂಟ ರಾಜ್ಯವಾಗಿದೆ. ಮಹಾರಾಷ್ಟ್ರದ ನರ್ಮದಾ ನದಿಯಿಂದ ಕರ್ನಾಟಕದ ಕಾವೇರಿ ಭಾಗದವರೆಗೆ ಹರಡಿದ್ದಂತಹ ಈ ರಾಜ್ಯದ ವಿಸ್ತಾರವು ಕೋಲಾರ ಜಿಲ್ಲೆಯನ್ನು ವ್ಯಾಪಿಸಿತ್ತು.

ಕಲೆ ಮತ್ತು ಸಾಹಿತ್ಯಕ್ಕೆ ಅಪಾರವಾದಂತಹ ಕೊಡುಗೆಯನ್ನು ನೀಡಿದ್ದಂತಹ ರಾಷ್ಟ್ರಕೂಟರು, ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡಕ್ಕೂ ಪ್ರಾಮುಖ್ಯತೆಯನ್ನು ನೀಡಿದ್ದರು. ಕನ್ನಡ ಭಾಷೆಯಲ್ಲಿ ದೊರಕಿರುವಂತಹ ಮೊದಲ ಕೃತಿಯಾದ 'ಕವಿರಾಜಮಾರ್ಗ'ವು ರಾಷ್ಟ್ರಕೂಟ ದೊರೆ ಅಮೋಘವರ್ಷನ ಕಾಲದ್ದಾಗಿದೆ. ಕನ್ನಡದ ಆದಿಕವಿ ಪಂಪನು 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಗ್ರಂಥವನ್ನು ರಚಿಸಿದ್ದು ರಾಷ್ಟ್ರಕೂಟರ ಆಳ್ವಿಕೆಯಲ್ಲಿ. ಶಾಂತಿಪುರಾಣವನ್ನು ರಚಿಸಿದ ಕವಿಚಕ್ರವರ್ತಿ ಪೊನ್ನ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನ ಆಸ್ಥಾನದಲ್ಲಿದ್ದನು. ಕನ್ನಡ ಮಾತ್ರವಲ್ಲದೆಯೇ ಸಂಸ್ಕೃತ ಭಾಷೆಯಲ್ಲಿಯೂ ಅಪಾರವಾದಂತಹ ಗ್ರಂಥಗಳ ರಚನೆಯು ರಾಷ್ಟ್ರಕೂಟರ ಆಡಳಿತಾವಧಿಯಲ್ಲಿ ನಡೆದಿತ್ತು. ತ್ರಿವಿಕ್ರಮನು ಸಂಸ್ಕೃತದಲ್ಲಿ 'ನಳಚಂಪೂ' ಕೃತಿಯನ್ನು, ಹಲಾಯುಧನು 'ಕವಿರಹಸ್ಯ'ವೆನ್ನುವ ಕೃತಿಯನ್ನು ರಚಿಸಿದ್ದನು.

ರಾಷ್ಟ್ರಕೂಟರು ಅನೇಕ ದೇವಾಲಯಗಳನ್ನು ಮಾತ್ರವಲ್ಲದೆ, ಗುಹಾಂತರ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮಹಾರಾಷ್ಟ್ರದ ಎಲ್ಲೋರದ ಗುಹಾಂತರ ದೇವಾಲಯ, ಎಲಿಫೆಂಟಾ ಗುಹಾಂತರ ದೇವಾಲಯ (ಮುಂಬಯಿ)ಗಳು ರಾಷ್ಟ್ರಕೂಟರ ಕಲಾ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ. ಪಟ್ಟದಕಲ್ಲಿನ ಜಿನಾಲಯ ಮೊದಲಾದವು ಇವರ ಕಲಾ ಕೈಗನ್ನಡಿಯಂತಿದೆ.

ರಾಷ್ಟ್ರಕೂಟರ ಸಾರ್ವಭೌಮತ್ವವು ಕರ್ನಾಟಕದ ಇತಿಹಾಸದ ಮೈಲುಗಲ್ಲಿನಂತಿದೆ. ರಾಷ್ಟ್ರಕೂಟರ ಮನೆತನಕ್ಕೆ ಸೇರಿದ ಪ್ರಮುಖ ರಾಜರುಗಳು ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೇ ಉತ್ತರ ಭಾರತಕ್ಕೂ ದಿಗ್ವಿಜಯ ಯಾತ್ರೆಯನ್ನು ಕೈಗೊಂಡು, ಉತ್ತರ ಭಾರತದ ಕೆಲವು ಪ್ರದೇಶಗಳ ಮೇಲೆ ಅಧಿಕಾರವನ್ನು ಹೊಂದಲು ಪ್ರಯತ್ನವನ್ನು ನಡೆಸಿದ್ದರು. ಬಾದಾಮಿ ಚಾಲುಕ್ಯರನ್ನು ಬದಿಗೊತ್ತಿ ಅಧಿಕಾರದ ಗದ್ದುಗೆಯನ್ನೇರಿದ ರಾಷ್ಟ್ರಕೂಟರು ಕೋಲಾರ ಜಿಲ್ಲೆಯ ಮೇಲೆ ಪ್ರಬಲವಾದ ಪ್ರಭಾವ ಬೀರಿದಂತೆ ಕಂಡುಬರುತ್ತಿಲ್ಲ.

ಭಾರತದ ವಿವಿಧ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಶಾಖೆಯ ರಾಷ್ಟ್ರಕೂಟ ಶಾಖೆಗಳಿದ್ದು ಇವರಲ್ಲಿ ಮಾನಪುರದ ರಾಷ್ಟ್ರಕೂಟರು (ಕ್ರಿ.ಶ.೩೭೫-೫೦೬ರವರೆಗೂ), ಅಚಲಪುರದ ರಾಷ್ಟ್ರಕೂಟರು (ಕ್ರಿ.ಶ.೫೭೫-೭೩೧ರವರೆಗೂ), ಮಾನ್ಯಖೇಟ ಅಥವಾ ಮಳಖೇಡದ ರಾಷ್ಟ್ರಕೂಟರು (ಕ್ರಿ.ಶ.೭೩೫ರಿಂದ ಸುಮಾರು ೧೦೦೦ವರೆಗೂ), ಗುಜರಾತಿನ ರಾಷ್ಟ್ರಕೂಟರು (೮-೯ನೆಯ ಶತಮಾನ) ಎಂದು ಪ್ರಧಾನ ಶಾಖೆಗಳಿದ್ದು ಸಣ್ಣ ಸಣ್ಣ ಪ್ರಾಂತ್ಯಗಳಲ್ಲಿ ಆಳಿದ್ದಂತಹ ರಾಷ್ಟ್ರಕೂಟರು ಪ್ರಬಲ ರಾಜವಂಶಗಳಲ್ಲಿ ಒಬ್ಬರಾಗಿ ಮೆರೆದಿದ್ದರು.[೭] ರಾಷ್ಟ್ರಕೂಟರು ಯಾದವ ವಂಶಜರು. ಒಂದನೆಯ ಅಮೋಘವರ್ಷನ ಸೊರಟೂರು ಶಾಸನವು ರಾಷ್ಟ್ರಕೂಟರನ್ನು ಯಾದವ ವಂಶೋದ್ಭವರೆಂದು ಹೆಸರಿಸಿದೆ. ನೇಗಿಲನ್ನು ರಾಜ ಲಾಂಛನವನ್ನಾಗಿಸಿಕೊಂಡಿದ್ದಂತಹ ಇವರು ಮೂಲತಃ ಕೃಷಿಕರಾಗಿದ್ದರೆಂದು ತಿಳಿಯಬಹುದಾಗಿದೆ. ಭೂಮಿ, ಮಳೆ ಮುಂತಾದ ವಿಷಯಗಳಲ್ಲೇ ಹೆಚ್ಚು ಆಸಕ್ತಿಯನ್ನು ಹೊಂದಿದ್ದಂತಹ ಇವರ ರಾಜರುಗಳು ತಮ್ಮ ಹೆಸರಿನಲ್ಲೂ ವರ್ಷ ಎಂಬ ಉಪನಾಮವನ್ನು ಬಳಸುತ್ತಿದ್ದರು. (ಅಮೋಘವರ್ಷ, ಅಕಾಲವರ್ಷ ಇತ್ಯಾದಿ)

ಮಾನ್ಯಖೇಟದ ರಾಷ್ಟ್ರಕೂಟರು ಕರ್ನಾಟಕದ ಪ್ರಬಲ ರಾಜಮನೆತನಗಳಲ್ಲೊಬ್ಬರಾಗಿದ್ದಾರೆ. ರಾಷ್ಟ್ರಕೂಟ ದೊರೆ ಅಮೋಘವರ್ಷನ ಕಾಲಕ್ಕೆ ಮಾನ್ಯಖೇಟ ರಾಜಧಾನಿಯಾಗಿತ್ತು. ಕ್ರಿ.ಶ.೭೩೫ರಿಂದ ೯೭೪ರವರೆಗೆ ಸುಮಾರು ೨೩೫ ವರ್ಷಗಳವರೆಗೆ ಈ ರಾಜಮನೆತನದವರು ಮಹಾರಾಷ್ಟ್ರ ಮತ್ತು ಕರ್ನಾಟಕದ ಭಾಗವನ್ನು ಆಳಿದ್ದರು. ಕರ್ಕರಾಜನು ಈ ಶಾಖೆಯ ಮೊದಲ ದೊರೆಯೆಂದು ಇತಿಹಾಸಕಾರರಲ್ಲಿ ಅಭಿಪ್ರಾಯಗಳಿದ್ದರೂ ಅದನ್ನು ಬಲಪಡಿಸುವ ಶಾಸನಾಧಾರಗಳು ದೊರಕುತ್ತಿಲ್ಲ. ದಂತಿವರ್ಮ, ಇಂದ್ರರಾಜ, ಗೋವಿಂದರಾಜ, ಇಮ್ಮಡಿ ಇಂದ್ರರಾಜ, ಮೊದಲಾದ ರಾಜರುಗಳು ಆರಂಭದ ಕಾಲದ ಪ್ರಸಿದ್ಧ ರಾಜರುಗಳಾಗಿದ್ದರು. ದಂತಿದುರ್ಗನು ಕ್ರಿ.ಶ.೭೫೩ರಲ್ಲಿ ಬಾದಾಮಿಯನ್ನು ಆಕ್ರಮಿಸಿ ವಶಪಡಿಸಿಕೊಂಡನು. ಇವನ ಕಾಲದಲ್ಲಿ ರಾಷ್ಟ್ರಕೂಟ ರಾಜ್ಯವು ವಿಸ್ತಾರವಾಗತೊಡಗಿತು. ಈತನ ನಂತರ ಅಧಿಕಾರಕ್ಕೆ ಬಂದಂತಹ ಒಂದನೆಯ ಕೃಷ್ಣನು ಪ್ರಬಲ ರಾಜನಾಗಿದ್ದನು. ಕ್ರಿ.ಶ.೭೫೬ರಿಂದ ೭೭೨ರವರೆಗೆ ಈತನು ತನ್ನ ಸಾಮ್ರಾಜ್ಯವನ್ನು ಉತ್ತರದಲ್ಲೂ ಮತ್ತು ದಕ್ಷಿಣದಲ್ಲೂ ವಿಸ್ತರಿಸಲು ಪ್ರಯತ್ನಿಸಿದನು. ಚಾಲುಕ್ಯ ದೊರೆ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಚಾಲುಕ್ಯರ ಮೇಲೆ ಅಧಿಪತ್ಯವನ್ನು ಸ್ಥಾಪಿಸಿದನು. ಈ ಸಂದರ್ಭದಲ್ಲಿ ಚಾಲುಕ್ಯರ ನಿಕಟವರ್ತಿಗಳಾಗಿದ್ದಂತಹ ಗಂಗರು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಸಹಿಸಿಕೊಳ್ಳದೇ ಅವರನ್ನು ಎದುರಿಸಲು ಪ್ರಯತ್ನಿಸಿದರು. ರಾಷ್ಟ್ರಕೂಟರಲ್ಲಿ ನಡೆಯುತ್ತಿದ್ದಂತಹ

ಅಂತಃಕಲಹದಲ್ಲಿ ಮತ್ತು ಅದನ್ನು ನಿವಾರಿಸುವಂತಹ ನಿಟ್ಟಿನಲ್ಲಿ ಗಂಗರು ಪ್ರಯತ್ನಿಸಿದರೂ ರಾಷ್ಟ್ರಕೂಟರನ್ನು ಎದುರಿಸಬೇಕಾಗಿ ಬಂದಾಗ ಅವರಿಂದ ಪ್ರಬಲವಾದಂತಹ ಆಕ್ರಮಣವನ್ನು ಗಂಗರು ಎದುರಿಸಿದರು.

ತತ್ಪರಿಣಾಮವಾಗಿ ಒಂದನೆಯ ಕೃಷ್ಣನು ಗಂಗವಾಡಿಯ ಮೇಲೆ ದಂಡೆತ್ತಿ ಬಂದು, ಗಂಗರ ರಾಜಧಾನಿಯನ್ನು ವಶಪಡಿಸಿಕೊಂಡಿದ್ದನು. ಈ ಸಂದರ್ಭದಲ್ಲಿ ಗಂಗರ ರಾಜಧಾನಿಯಾಗಿದ್ದಂತಹ ಮಣ್ಣೆ ಅಥವಾ ಮಾನ್ಯಪುರವು ರಾಷ್ಟ್ರಕೂಟರ ವಶವಾಗಿತ್ತು. ಆದರೆ ಈ ಪ್ರಾಂತ್ಯವನ್ನು ಬಹಳ ವರ್ಷಗಳ ತನಕ ಆಳ್ವಿಕೆ ನಡೆಸದೇ ಹಿಂತಿರುಗಿದರು. ಹಾಗಾಗಿಯೇ ಬಹುಶಃ ರಾಷ್ಟ್ರಕೂಟರಿಗೆ ಸಂಬಂಧಿಸಿದ್ದಂತಹ ಯಾವುದೇ ಶಾಸನಗಳು ಈ ಪ್ರದೇಶದಲ್ಲಿ ಲಭ್ಯವಾಗಿಲ್ಲ. ರಾಷ್ಟ್ರಕೂಟ ದೊರೆ ಒಂದನೆಯ ಕೃಷ್ಣನ ತಲೆಗಾಂವ್ ತಾಮ್ರಶಾಸನವು[೬೩] ಈ ಮಾಹಿತಿಯನ್ನೊದಗಿಸುತ್ತಿದೆ. ರಾಷ್ಟ್ರಕೂಟರು ತಮ್ಮ ಸೈನ್ಯವನ್ನು ಮಣ್ಣೆಯವರೆಗೂ ತಂದಿದ್ದರು. ಗಂಗರಿಗೂ ರಾಷ್ಟ್ರಕೂಟರಿಗೂ ಘೋರವಾದಂತಹ ಯುದ್ಧವು ನಡೆದಿತ್ತು. ಆ ಯುದ್ಧದಲ್ಲಿ ಗಂಗ ದೊರೆ ಶ್ರೀಪುರುಷನ ಮಗನಾದ ಗಂಗ ಸೇನಾಧಿಪತಿ 'ಸಿಯಗಲ್ಲ' ಮೊದಲಾದವರು ವೀರಾವೇಶದಿಂದ ಹೋರಾಡಿ ವೀರಸ್ವರ್ಗವನ್ನು ಹೊಂದಿದರೆಂದು ಶಾಸನಗಳು ತಿಳಿಸುತ್ತದೆ.

ಮುಂದಿನ ಹಂತದ ಯಾವುದೇ ಉಲ್ಲೇಖಗಳು ಶಾಸನಗಳಲ್ಲಿ ದೊರಕುವುದಿಲ್ಲವಾದುದರಿಂದ ಬಹುಶಃ ಈ ಯುದ್ಧದ ನಂತರ ಕೃಷ್ಣನು ಮರಳಿ ತನ್ನ ರಾಜಧಾನಿಗೆ ಹೋಗಿರಬಹುದು ಅಥವಾ ಗಂಗರಿಗೂ ರಾಷ್ಟ್ರಕೂಟರಿಗೂ ಪರಸ್ಪರ ಮಿತ್ರತ್ವವು ಉಂಟಾಗಿರಬಹುದು. ಒಂದನೇಯ ಕೃಷ್ಣನ ನಂತರ ಆತನ ಪುತ್ರನಾದ ಇಮ್ಮಡಿಗೋವಿಂದನು ಅಧಿಕಾರಕ್ಕೆ ಬಂದನು. ಈತನ ಕಾಲಕ್ಕೆ ಸಂಬಂಧಿಸಿದಂತಹ ಯಾವುದೇ ಉಲ್ಲೇಖಗಳು ಕೋಲಾರ ಜಿಲ್ಲೆಯಲ್ಲಿ ದೊರಕುತ್ತಿಲ್ಲ. ಇಮ್ಮಡಿ ಗೋವಿಂದನ ಪುತ್ರ ಧ್ರುವ ಪ್ರಸಿದ್ಧ ದೊರೆಯಾಗಿದ್ದನು. ಕ್ರಿ.ಶ.೭೭೫ರಿಂದ ೭೮೬ರವರೆಗೆ ಆಳಿದಂತಹ ಈತನು, ಪಟ್ಟಾಭಿಷಕ್ತನಾದಂತಹ ಸಂದರ್ಭದಲ್ಲಿ ರಾಜ್ಯವಿಸ್ತಾರ ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದನು. 'ಧಾರವರ್ಷ, ನರೇಂದ್ರದೇವ, ಮತ್ತು ಶ್ರೀವಲ್ಲಭ' ಮೊದಲಾದಂತಹ ಬಿರುದುಗಳು ಈ ರಾಜನಿಗಿದ್ದವು. ಪಟ್ಟಾಭಿಷಕ್ತನಾದ ಕೂಡಲೇ ಮಾನ್ಯಖೇಟದ ದಕ್ಷಿಣದ ಭಾಗಕ್ಕೆ ದಂಡೆತ್ತಿ ಬರುತ್ತಾನೆ. ಗಂಗ ದೊರೆ ಶಿವಮಾರನನ್ನು ಸೋಲಿಸಿ ಗಂಗವಾಡಿಯನ್ನು ವಶಪಡಿಸಿಕೊಳ್ಳುತ್ತಾನೆ. ಮುಂದುವರೆದು ಪಲ್ಲವ ದೊರೆ ದಂತಿವರ್ಮನನ್ನು ಸೋಲಿಸಿ ಆತನಿಂದ ಕಪ್ಪಕಾಣಿಕೆಗಳನ್ನು ಪಡೆಯುತ್ತಾನೆ. ಪ್ರಸಿದ್ಧ ದೊರೆ ಶ್ರೀಪುರುಷನಿಗೆ (ಕ್ರಿ.ಶ.೭೨೫–೭೮೮) ಐದು ಮಕ್ಕಳಲ್ಲಿ ಹಿರಿಯವನಾದ ಶಿವಮಾರನು ಪರಾಕ್ರಮಿಯಾಗಿದ್ದನು. ಕ್ರಿ.ಶ.೭೮೮ರ ಸುಮಾರಿಗೆ ತನ್ನ ಸೋದರರನ್ನು ಸೋಲಿಸಿ, ಶಿವಮಾರನು ಸಿಂಹಾಸನವೇರಿದ್ದನು. ತಾನು ಸಿಂಹಾಸನವನ್ನೇರಿದ ನಂತರ ರಾಷ್ಟ್ರಕೂಟರನ್ನು ಎದುರಿಸಲು ಹೋಗಿ ರಾಷ್ಟ್ರಕೂಟ ದೊರೆ ಧ್ರುವ ಮತ್ತು ಇಮ್ಮಡಿ ಗೋವಿಂದನ ಪ್ರಬಲವಾದಂತಹ ಆಕ್ರಮಣವನ್ನು ಎದುರಿಸಿದನು.

ರಾಷ್ಟ್ರಕೂಟರ ವಿರೋಧವನ್ನು ಕಟ್ಟಿಕೊಂಡಂತಹ ಶಿವಮಾರನು ಅವರಿಂದ ಸೋಲಿಸಲ್ಪಟ್ಟು ಬಂಧಿತನಾದನು. ಬಹಳ ವರ್ಷಗಳ ತನಕ ಶಿವಮಾರನು ರಾಷ್ಟ್ರಕೂಟರ ಬಂಧನದಲ್ಲಿದ್ದನು. ಅರಾಜಕತೆಯಿಂದ ಕೂಡಿದ ಗಂಗವಾಡಿ ಪ್ರದೇಶದಲ್ಲಿ ಧ್ರುವನು ತನ್ನ ಮಗ ಕಂಭನನ್ನು ನಿಯೋಜಿಸಿದನು. ಹಾಗಾಗಿ ಶಿವಮಾರನ ಅಧಿಕಾರಾವಧಿಯಲ್ಲಿ ಕೋಲಾರವು ಸೇರಿದಂತೆ ಗಂಗವಾಡಿಯ ಅನೇಕ ಪ್ರದೇಶಗಳು ರಾಷ್ಟ್ರಕೂಟರ ವಶವಾಗಿತ್ತು. ಧ್ರುವನ ಪುತ್ರನಾದ ಕಂಭನು ಕೇವಲ ಹೆಸರಿಗೆ ಮಾತ್ರ ರಾಜ್ಯಭಾರವನ್ನು ಮಾಡುತ್ತಿದ್ದುದರಿಂದ ಈ ಪ್ರದೇಶದಲ್ಲಿ

ಅಷ್ಟೇನು ಪ್ರಭಾವವನ್ನು ಬೀರಲಿಲ್ಲ. ಕಂಭನು ಶಿವಮಾರನ ಪುತ್ರನಾದ ಒಂದನೆಯ ಮಾರಸಿಂಹನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ರಾಷ್ಟ್ರಕೂಟರ ಮೂಲ ಸಿಂಹಾಸನವನ್ನು ಪಡೆಯಲು ಹವಣಿಸಿದನು.

ಕ್ರಿ.ಶ.೭೯೪ರಲ್ಲಿ ರಾಷ್ಟ್ರಕೂಟರಲ್ಲೂ ಅಂತಃಕಲಹವುಂಟಾಗಿ ಧ್ರುವನ ಪುತ್ರನಾದ ಮುಮ್ಮಡಿ ಗೋವಿಂದನಿಗೂ ಮತ್ತು ಕಂಭನಿಗೂ ಪರಸ್ಪರ ಸ್ಪರ್ಧೆ ನಡೆಯಿತು. ಕಂಬಯ್ಯನಿಗೆ ರಣಾವಲೋಕ ಎಂಬ ಬಿರುದಿದ್ದು, ಈತನು ಪುನ್ನಾಡು, ಎಡೆನಾಡು ವಿಷಯಗಳನ್ನೊಳಗೊಂಡ ಗಂಗವಾಡಿಯ ಪ್ರದೇಶವನ್ನು ಆಳುತ್ತಿದ್ದನು. ಕಂಬಯ್ಯನು ಧ್ರುವನ ಹಿರಿಯ ಮಗನಾಗಿದ್ದರು ಅವನ ಬದಲು ಕಿರಿಯವನಾದ ಮುಮ್ಮಡಿ ಗೋವಿಂದನನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಹವಣಿಸುತ್ತಾನೆ. ಇದೇ ಅಂತಃಕಲಹಗಳಿಗೆ ಕಾರಣವಾಗುತ್ತದೆ. ಈ ಸಂದರ್ಭದಲ್ಲಿ ಶಿವಮಾರನನ್ನು ಸೆರೆಮನೆಯಿಂದ ಬಿಡುಗಡೆಗೊಳಿಸಿ ಧ್ರುವನ ವಿರುದ್ಧವಾಗಿ ಹೋರಾಡುವಂತೆ ಮುಮ್ಮಡಿ ಗೋವಿಂದನು ಈತನಿಗೆ ಪ್ರಚೋದಿಸುತ್ತಾನೆ. ಆದರೆ ಮುಕ್ತನಾದ ಶಿವಮಾರನು ಕಂಬಯ್ಯನ ಪರವಾಗಿ ನಿಂತು ಮುಮ್ಮಡಿಗೋವಿಂದನಿಗೆ ಎದುರಾಗಿ ಯುದ್ಧದಲ್ಲಿ ನಿಲ್ಲುತ್ತಾನೆ. ಗೋವಿಂದನಿಗೂ ಮತ್ತು ಕಂಬಯ್ಯನಿಗೂ ನಡೆದ ಯುದ್ಧದಲ್ಲಿ ಗೋವಿಂದನು ಕಂಬಯ್ಯನನ್ನು ಸೋಲಿಸಿ ಶಿವಮಾರನನ್ನು ಬಂಧನದಲ್ಲಿರಿಸಿದನು. ಮುದುಗುಂಡೂರು ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಮುಮ್ಮಡಿಗೋವಿಂದನು ಕಂಬಯ್ಯನನ್ನು ಸೋಲಿಸಿ ಗಂಗವಾಡಿಯ ಅಧಿಕಾರವನ್ನು ಪುನಃ ಕಂಬಯ್ಯನಿಗೆ ನೀಡಿದನು. ಹಾಗಾಗಿ ಕಂಬಯ್ಯನು ಹೆಚ್ಚಿನ ಅವಧಿಯಲ್ಲಿ ಗಂಗವಾಡಿಯ ಪ್ರದೇಶವನ್ನು ಆಳಿದ್ದನು. ಆದರೆ ಕಂಬಯ್ಯನ ಆಳ್ವಿಕೆಯನ್ನು ಸೂಚಿಸುವಂತಹ ಯಾವುದೇ ಶಾಸನಗಳಾಗಲಿ, ಉಲ್ಲೇಖಗಳಾಗಲಿ ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ.

ಕಂಭನ ನಿಧನನಾದ ನಂತರ ಮತ್ತೆ ರಾಜಕೀಯ ಅಸ್ಥಿರತೆಯು ರಾಷ್ಟ್ರಕೂಟರಲ್ಲಿ ಕಂಡುಬಂದಿತು. ಶಿವಮಾರನ ಜೀವಿತಾವಧಿಯ ಅಂತ್ಯದಲ್ಲಿ ಮುಮ್ಮಡಿ ಗೋವಿಂದನು ಈತನ ಮೇಲೆ ದಯೆಯಿಂದ ಬಿಡುಗಡೆಗೊಳಿಸಿದನು. ಮುಂದೆ ಗಂಗರು ರಾಷ್ಟ್ರಕೂಟರಿಗೆ ಬಹಳ ಕಾಲದವರೆಗೆ ನಿಷ್ಠಾವಂತ ಸಾಮಂತರಾಗಿ ಮುಂದುವರಿದರೆಂದು ತೋರುತ್ತದೆ. ರಾಷ್ಟ್ರಕೂಟರಿಗೆ ಎದುರಾಗಿ ಬಂದಂತಹ ಚೇರ, ಚೋಳ, ಪಾಂಡ್ಯರ ಒಕ್ಕೂಟವನ್ನು ಎದುರಿಸಲು ಶಿವಮಾರನು ರಾಷ್ಟ್ರಕೂಟರಿಗೆ ನೆರವಾದನು. ಈ ರೀತಿಯಾಗಿ ಕೋಲಾರ ಜಿಲ್ಲೆಯಲ್ಲಿದ್ದಂತಹ ಗಂಗರು ರಾಷ್ಟ್ರಕೂಟರ ಸಾಮಂತರಾಗಿದ್ದುದರಿಂದ ಕೋಲಾರ ಜಿಲ್ಲೆಯು ರಾಷ್ಟ್ರಕೂಟರ ಆಡಳಿತಕ್ಕೆ ಒಳಪಟ್ಟಿತು.

ಗಂಗ ದೊರೆ ಶಿವಮಾರನು ರಾಷ್ಟ್ರಕೂಟರ ಪ್ರಭಾವದಿಂದ ಜೈನಧರ್ಮವನ್ನು ಸ್ವೀಕರಿಸಿದ್ದನು. ಆ ದೃಷ್ಟಿಯಿಂದ ಗಮನಿಸುವುದಾದರೆ ಕೋಲಾರ ಜಿಲ್ಲೆಯಲ್ಲಿ ಜೈನಧರ್ಮವು ಬೆಳೆಯಲು ರಾಷ್ಟ್ರಕೂಟರು ಕಾರಣರಾಗಿದ್ದರು. ಧ್ರುವನ ನಂತರ ಮುಮ್ಮಡಿ ಗೋವಿಂದನು ರಾಷ್ಟ್ರಕೂಟರ ಚುಕ್ಕಾಣಿಯನ್ನು ಹಿಡಿದನು. ಈತನೂ ಪರಾಕ್ರಮಿಯಾಗಿದ್ದು ಹೆಚ್ಚಾಗಿ ಉತ್ತರಭಾರತದ ಕಡೆಗೆ ತನ್ನ ರಾಜ್ಯವಿಸ್ತಾರವನ್ನು ಮಾಡುವ ಕಡೆಗೆ ಗಮನ ನೀಡಿದನು. ಈತನ ಸಹೋದರನಾದ ಕಂಬಯ್ಯನ ಅಣತಿಯಂತೆ ಗಂಗವಾಡಿಯ ಪ್ರದೇಶವನ್ನು ಮುಮ್ಮಡಿ ಗೋವಿಂದನು ಕಂಬಯ್ಯನಿಗೆ ವಹಿಸಿ ಕೊಟ್ಟಿದ್ದನು. ಹಾಗಾಗಿ ಮುಮ್ಮಡಿಗೋವಿಂದನ ಅಧಿಕಾರಾವಧಿಯಲ್ಲಿ ಕಂಬಯ್ಯನೇ ಗಂಗವಾಡಿಯ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದನು.

ಮುಮ್ಮಡಿ ಗೋವಿಂದನ ನಂತರ ಆತನ ಪುತ್ರನಾದ ಅಮೋಘವರ್ಷ ನೃಪತುಂಗನು ಅಧಿಕಾರಕ್ಕೆ ಬಂದನು. ಕೇವಲ ೧೪ ವರ್ಷ ವಯಸ್ಸಿನಲ್ಲೇ ಅಧಿಕಾರದ ಚುಕ್ಕಾಣಿಯನ್ನು ಹಿಡಿದಂತಹ ಈತನು, ರಾಷ್ಟ್ರಕೂಟರಲ್ಲಿ

ಅತ್ಯಂತ ಪ್ರಬಲ ರಾಜನಾಗಿದ್ದನು. ಕ್ರಿ.ಶ.೮೧೪ರಿಂದ ಕ್ರಿ.ಶ.೮೮೭ರವರೆಗೆ ಆಳಿದಂತಹ ಈತ ರಾಜಕೀಯದಲ್ಲಿ ಮಾತ್ರವಲ್ಲದೆ ಕಲೆ, ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದಾನೆ. ತನ್ನ ಆಳ್ವಿಕೆಯ ಪ್ರಾರಂಭದ ಕಾಲದಲ್ಲಿ ಸಣ್ಣ ಪ್ರಾಂತ್ಯದ ರಾಜರುಗಳನ್ನು ಎದುರಿಸಿದ ಇವನು ಅನಂತರ ವೆಂಗಿಯ ಚಾಳುಕ್ಯರನ್ನು ಸೋಲಿಸಿದನು. ಈತನ ಆಡಳಿತಾವಧಿಯಲ್ಲಿ ಗಂಗ ದೊರೆ ರಾಚಮಲ್ಲನು ಗಂಗವಾಡಿಯನ್ನು ಆಳುತ್ತಿದ್ದನು. ಈ ರಾಜ್ಯದ ಉತ್ತರದ ಭಾಗವನ್ನು ರಾಷ್ಟ್ರಕೂಟರು ವಶಪಡಿಸಿಕೊಂಡಿದ್ದರು.

ಗಂಗ ದೊರೆ ರಾಚಮಲ್ಲನು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಒಪ್ಪಲಿಲ್ಲ. ಸ್ವತಂತ್ರನಾಗ ಬಯಸಿ ಈತನು ರಾಷ್ಟ್ರಕೂಟರೊಂದಿಗೆ ಯುದ್ಧ ಮಾಡಿದನು. ಈ ಸಂದರ್ಭದಲ್ಲಿ ಪ್ರಾರಂಭವಾದ ರಾಷ್ಟ್ರಕೂಟ ಮತ್ತು ಗಂಗರ ಒಳಜಗಳವು ಸುಮಾರು ೨೦ ವರ್ಷಗಳವರೆಗೆ ಮುಂದುವರಿಯಿತು.

ಅಮೋಘವರ್ಷನ ನಂತರ ಇಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಈತನ ಅಧಿಕಾರಾವಧಿಯೂ ಪ್ರಮುಖವಾಗಿದ್ದು, ರಾಷ್ಟ್ರಕೂಟರ ಅಧಿಕಾರವನ್ನು ಪುನಃ ಪಡೆಯಲು ಪ್ರಯತ್ನಿಸಿದನು. ಕ್ರಿ.ಶ.೮೮೦ರಿಂದ ೯೧೪ರವರೆಗೆ ಆಳಿದಂತಹ ಈತನಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ. ಈತನ ಏಕಮಾತ್ರ ಪುತ್ರನಾದ ಜಗತ್ತುಂಗನು ಬೇಗನೆ ಮರಣ ಹೊಂದಿದುರಿಂದ ಕೃಷ್ಣನ ಮೊಮ್ಮಗನಾದ ಮುಮ್ಮಡಿ ಇಂದ್ರನು ಅಧಿಕಾರಕ್ಕೆ ಬಂದನು. ಈ ಸಮಯದಲ್ಲಿ ರಾಷ್ಟ್ರಕೂಟರಲ್ಲಿ ಹಲವಾರ ಬದಲಾವಣೆಗಳಾದವು. ನಾಲ್ಕನೆಯ ಗೋವಿಂದನ ನಂತರ ಇಮ್ಮಡಿ ಅಮೋಘವರ್ಷನೂ ಈತನ ನಂತರ ಮುಮ್ಮಡಿ ಅಮೋಘವರ್ಷನು ಅಧಿಕಾರಕ್ಕೆ ಬಂದನು. ಮುಮ್ಮಡಿ ಅಮೋಘವರ್ಷನು ರಾಜಕೀಯವಾಗಿ ತನ್ನ ರಾಜ್ಯವನ್ನು ವಿಸ್ತರಿಸುವುದರಲ್ಲಿ ವಿಮುಖನಾಗಿ ಧರ್ಮ ಪ್ರಚಾರವನ್ನು ಮಾಡಲು ನಿರ್ಧರಿಸಿದನು. ಇದರ ಪರಿಣಾಮವಾಗಿ ಮುಮ್ಮಡಿ ಕೃಷ್ಣನು ಅಧಿಕಾರಕ್ಕೆ ಬಂದನು. ಈತನು ರಾಷ್ಟ್ರಕೂಟ ದೊರೆಗಳಲ್ಲಿ ಪ್ರಸಿದ್ಧ ರಾಜನಾಗಿದ್ದು ತಮಿಳುನಾಡಿನ ರಾಮೇಶ್ವರದವರೆಗೆ ರಾಷ್ಟ್ರಕೂಟ ಸಾಮ್ರಾಜ್ಯವನ್ನು ವಿಸ್ತರಿಸಿದನು. ಆದರೆ ಮುಂದೆ ಗಂಗ ಮತ್ತು ರಾಷ್ಟ್ರಕೂಟರ ನಡುವೆ ವೈವಾಹಿಕ ಸಂಬಂಧವು ಮುಂದುವರೆದಿದುರಿಂದ ವಂಶಗಳ ನಡುವಿನ ವೈಷಮ್ಯವು ಕೊನೆಗೊಂಡಿತು.

ಕನ್ನರ ಬಲ್ಲಹ

ಮಾಲೂರು ತಾಲ್ಲೂಕಿನ ಲಕ್ಕೂರು ಹೋಬಳಿ ಅರಸನ ಹಳ್ಳಿಯಲ್ಲಿರುವ ಒಂದು ವೀರಗಲ್ಲು ಶಾಸನವು 'ಶ್ರೀಕನ್ನರಬಲ್ಲಹ'ನ ಉಲ್ಲೇಖವನ್ನು ಮಾಡಿದೆ. ಈ ರಾಜನ ಹೆಸರು ರಾಷ್ಟ್ರಕೂಟ ದೊರೆ 'ಕನ್ನರ'ನಾಗಿದ್ದು. ಬಿ.ಎಲ್.ರೈಸ್‌ರವರು ಈ ಶಾಸನವು ರಾಷ್ಟ್ರಕೂಟ ದೊರೆಗಳಿಗೆ ಸಂಬಂಧಿಸಿದೆಂದು ಸೂಚಿಸಿದ್ದಾರೆ.[೬೪]

ಈ ಶಾಸನವು ವೀರಗಲ್ಲು ಸ್ಮಾರಕ ಶಾಸನವಾಗಿದ್ದು ಹಳಗನ್ನಡದಲ್ಲಿದೆ. ಶಾಸನವು ಒಬ್ಬ ಶೂರನ ಪರಾಕ್ರಮವನ್ನು ಹೊಗಳುತ್ತಿದೆ. ಕನ್ನರಬಲ್ಲಹನು 'ದಳಿಗೆವಳಿಗೆ'ಯನ್ನು ಆಳುತ್ತಿದ್ದನು. ಮರಗಲ್ಲ ಗಾವುಂಡನ ಮಗ ದಾಮೋದರನು ಪುಳಗಾಣ ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಕಾದಾಡಿ ಸತ್ತು ಸ್ವರ್ಗಸ್ಥನಾದಂತಹ ವಿಚಾರವು ಶಾಸನದಲ್ಲಿದೆ. ಶಾಸನದ ಕಾಲವನ್ನು ಕ್ರಿ.ಶ.೯೦೦ ಎಂದು ಊಹಿಸಲಾಗಿದೆ. ಅಲ್ಲದೆ ಮುಮ್ಮಡಿ ಕೃಷ್ಣನ ತಮ್ಮನಾದ ಖೊಟ್ಟಿಗನ ಪುತ್ರನ ಹೆಸರು 'ಕನ್ನರ'ನೆಂದು ಇತಿಹಾಸವಿದೆ.

ಮುಮ್ಮಡಿ ಕೃಷ್ಣನ ನಂತರ ಖೊಟ್ಟಿಗನು ರಾಷ್ಟ್ರಕೂಟ ದೊರೆಯಾದನು. ಆದರೆ ಅಷ್ಟು ಪ್ರಸಿದ್ಧಿಗೆ ಬರದಂತಹ ಈತನು ಸಮರ್ಥನಾಗಿರಲಿಲ್ಲ. ಈತನ ನಂತರ ರಾಷ್ಟ್ರಕೂಟ ಸಾಮ್ರಾಜ್ಯವು ಅವನತಿಯತ್ತ ಮುಖ ಮಾಡಿತು. ರಾಷ್ಟ್ರಕೂಟ ದೊರೆ ಇಮ್ಮಡಿ ಕರ್ಕನ ಆಡಳಿತದಲ್ಲಿ ಈ ಸಾಮ್ರಾಜ್ಯವು ಸಂಪೂರ್ಣವಾಗಿ ಪತನವಾಯಿತು. ಮುಂದೆ ಬಾದಾಮಿ ಚಾಲುಕ್ಯರ ಪ್ರಮುಖ ದೊರೆಯಾದ ಇಮ್ಮಡಿ ತೈಲಪನು ಇಮ್ಮಡಿ ಕರ್ಕ ರಾಜನನ್ನು ಹಿಮ್ಮೆಟ್ಟಿಸಿ ಕಲ್ಯಾಣದ ಚಾಲುಕ್ಯರ ವಂಶಕ್ಕೆ ಮುನ್ನುಡಿ ಬರೆದನು. ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಕಾಲ ಆಳಿದಂತಹ ರಾಜವಂಶವೆಂಬ ಹೆಗ್ಗಳಿಕೆಯನ್ನು ಗಳಿಸಿದಂತಹ ಈ ರಾಜವಂಶವು ಕೋಲಾರ ಜಿಲ್ಲೆಯಲ್ಲಿ ಯಾವ ಕಾರಣಕ್ಕಾಗಿ ಪ್ರಭಾವವನ್ನು ಬೀರಲಿಲ್ಲವೆನ್ನುವುದು ಕಗ್ಗಂಟಾಗಿದೆ. ರಾಷ್ಟ್ರಕೂಟರು ಕಂಬಯ್ಯನಂತಹ ರಾಜರುಗಳನ್ನು ಪ್ರದೇಶದ ಅಧಿಕಾರಿಯ ರೀತಿಯಲ್ಲಿ ನಿಯೋಜಿಸಿದುದರಿಂದ ರಾಷ್ಟ್ರಕೂಟರ ಪ್ರಭಾವ ಕಡಿಮೆಯಾಗಿರಬಹುದು. ಗಂಗ ಮೊದಲಾದಂತಹ ರಾಜಮನೆತನಗಳ ಮೂಲ ಕೋಲಾರ ಜಿಲ್ಲೆಯಾದುದರಿಂದ ತಮ್ಮ ಜನ್ಮಭೂಮಿಯಲ್ಲಿ ಬೇರೆಯವರ ಅಧಿಕಾರವನ್ನು ಒಪ್ಪದಿರಬಹುದು.

ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಚೋಳರನ್ನು ತಕ್ಕೋಲಂ ಯುದ್ಧದಲ್ಲಿ ಸೋಲಿಸಿ ತಮಿಳುನಾಡಿನ ಬಹಳಷ್ಟು ಪ್ರದೇಶವನ್ನು ತನ್ನ ವಶಪಡಿಸಿಕೊಂಡಿದ್ದನು. ಇದರ ಆಡಳಿತಕ್ಕಾಗಿ ಮೇಲ್ಪಾಟ್ಟಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ಹೀಗಾಗಿ ಈ ಪ್ರದೇಶಕ್ಕೆ ಹೋಗಬೇಕಾದಲ್ಲಿ ಗಂಗವಾಡಿ ಮೂಲಕವೇ ಹೋಗಬೇಕಿತ್ತು. ಹೀಗಾಗಿ ರಾಷ್ಟ್ರಕೂಟರಿಗೂ ಕೋಲಾರಕ್ಕೂ ಹೆಚ್ಚಿನ ಸಂಬಂಧವಿದೆ ಎಂದು ತಿಳಿಯಬಹುದು. ಆದರೆ ಈ ರೀತಿಯಾದಂತಹ ಸಂಬಂಧಗಳಿದ್ದರೂ ಲಿಖಿತ ರೂಪವಾದ ದಾಖಲೆಗಳು ಇದನ್ನು ಸಮರ್ಥಿಸುತ್ತಿಲ್ಲ.

೨.೨.೫ ಕಲ್ಯಾಣದ ಚಾಲುಕ್ಯರು

೧೦ನೆಯ ಶತಮಾನದ ಅಂತ್ಯದಲ್ಲಿ ತಲೆ ಎತ್ತಿದಂತಹ ಕಲ್ಯಾಣದ ಚಾಲುಕ್ಯ ವಂಶವು ರಾಷ್ಟ್ರಕೂಟರನ್ನು ಸೋಲಿಸಿ ಈಗಿನ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ದಕ್ಷಿಣ ಕರ್ನಾಟಕ ಭಾಗಗಳಲ್ಲಿ ತಮ್ಮ ಪ್ರಬುದ್ಧತೆಯನ್ನು ಮೆರೆದಿದ್ದರು. ಬಾದಾಮಿಯ ಚಳುಕ್ಯವಂಶವು ಹಿಂದೆ ರಾಷ್ಟ್ರಕೂಟರಿಂದ ಸೋಲಿಸಲ್ಪಟ್ಟು ಅವನತಿಯ ಹಂತಕ್ಕೆ ತಲುಪಿದ್ದರೂ ಸುಮಾರು ಎರಡು ಶತಮಾನಗಳವರೆಗೆ ರಾಷ್ಟ್ರಕೂಟ ವಂಶದವರು ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ ಮತ್ತು ಇತರ ಪ್ರದೇಶಗಳನ್ನು ಆಳಿದ್ದರು. ಈ ಸಮಯದಲ್ಲಿ ಎಲೆಮರೆಯಾಗಿದ್ದಂತಹ ಚಳುಕ್ಯರು ಪುನಃ ಪ್ರಕಾಶಮಾನಕ್ಕೆ ಬಂದರು. ಬಾದಾಮಿ ಚಳುಕ್ಯರ ಮೂಲ ಮನೆತನದಿಂದ ಬಂದಂತಹ ಈ ವಂಶದಲ್ಲಿ ಇಮ್ಮಡಿ ತೈಲಪ, ಆರನೆಯ ವಿಕ್ರಮಾದಿತ್ಯ ಆಹವಮಲ್ಲ, ಜಗದೇಕಮಲ್ಲ ಮೊದಲಾದ ಪ್ರಸಿದ್ಧ ರಾಜರುಗಳಿದ್ದರು. ಕ್ರಿ.ಶ. ೯೭೩ರ ಸುಮಾರಿಗೆ ಇಮ್ಮಡಿ ತೈಲಪನಿಂದ ಪ್ರಾರಂಭವಾಗಿ ಸುಮಾರು ಹನ್ನೊಂದನೆಯ ಶತಮಾನದ ಅಂತ್ಯದವರೆಗೆ ಕಲ್ಯಾಣ ಚಾಲುಕ್ಯವಂಶವು ಆಳ್ವಿಕೆ ನಡೆಸಿತ್ತು. ಇಮ್ಮಡಿ ತೈಲಪನು ಹೊಸವಂಶವನ್ನು ಪ್ರಾರಂಭಿಸುವಂತಹ ಸಂದರ್ಭದಲ್ಲಿ ಮಾನ್ಯಖೇಟವೇ ಈ ಮನೆತನದ ರಾಜ್ಯವಾಗಿತ್ತು. ನಂತರ ಈ ವಂಶದಲ್ಲಿ ಬಂದಂತಹ ಜಯಸಿಂಹನು ಕಲ್ಯಾಣವನ್ನೇ ರಾಜಧಾನಿಯನ್ನಾಗಿರಿಸಿಕೊಂಡು ಆಳ್ವಿಕೆಯನ್ನು ನಡೆಸಿದ್ದನು. ಮಹಾರಾಷ್ಟ್ರ ರಾಜ್ಯದ ನರ್ಮದಾ ನದಿಯಿಂದ ಆರಂಭಿಸಿ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ಆಳ್ವಿಕೆ ನಡೆಸಿದಂತಹ ಈ ಮನೆತನವು ಕೋಲಾರ ಜಿಲ್ಲೆಗೂ ವ್ಯಾಪಿಸಿತ್ತು.[೬೬]

ಗಂಗವಾಡಿಯನ್ನು ಪ್ರಧಾನವಾಗಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದಂತಹ ಗಂಗರು ೯ನೆಯ ಶತಮಾನದ ಅಂತ್ಯಭಾಗದಲ್ಲಿ ರಾಷ್ಟ್ರಕೂಟರ ನಿಷ್ಠಾವಂತ ಸಾಮಂತರಾಗಿದ್ದರು. ಆದರೆ ರಾಷ್ಟ್ರಕೂಟರನ್ನು ವಶಪಡಿಸಿಕೊಂಡ ಕಲ್ಯಾಣ ಚಾಳುಕ್ಯರ ದೊರೆ ಇಮ್ಮಡಿ ತೈಲಪನು ಸಾಮಂತರಾಗಿದ್ದಂತಹ ಗಂಗರನ್ನು ವಶಪಡಿಸಿಕೊಂಡನು. ಹಾಗಾಗಿ ಕ್ರಿ.ಶ.೯೭೭ರಲ್ಲಿ ಗಂಗವಾಡಿಯು ನೇರವಾಗಿ ಕಲ್ಯಾಣದ ಚಾಳುಕ್ಯರ ವಶವಾಗಿತ್ತು. ಈ ಸಮಯದಲ್ಲಿ ಗಂಗವಾಡಿಯನ್ನು ಇಮ್ಮಡಿ ಮಾರಸಿಂಹನ ಪುತ್ರನಾದ ರಾಚಮಲ್ಲ(ನಾಲ್ಕನೆ)ನು ಆಳ್ವಿಕೆ ನಡೆಸುತ್ತಿದ್ದನು.

ಈ ಸಮಯವು ಗಂಗವಂಶದ ಅವನತಿಯ ಕಾಲವಾದರೆ ಚೋಳರು ತಮ್ಮ ರಾಜ್ಯವನ್ನು ವಿಸ್ತರಿಸಲು ಹವಣಿಸುತ್ತಿದ್ದಂತಹ ಕಾಲವಾಗಿತ್ತು. ಈ ಸಂದರ್ಭವು ಕಲ್ಯಾಣ ಚಾಳುಕ್ಯರಿಗೂ ಮತ್ತು ಚೋಳರಿಗೂ ಪರಸ್ಪರ ಯುದ್ಧದ ಪರಿಸ್ಥಿತಿಯನ್ನು ಉಂಟಾಗಿತ್ತು. ಇದರ ಪರಿಣಾಮವಾಗಿ ಇಮ್ಮಡಿ ತೈಲಪನು ದಕ್ಷಿಣದ ಕಡೆಗೆ ಧಾಳಿ ಮಾಡಿ ಗಂಗರನ್ನು ಮತ್ತು ಚೋಳರನ್ನು ಸೋಲಿಸಿದ್ದ ಸಂದರ್ಭದಲ್ಲಿ ಕೋಲಾರ ಪ್ರಾಂತ್ಯವು ಕಲ್ಯಾಣ ಚಾಳುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಆದರೆ ನಂತರ ಕಾಲದಲ್ಲಿ ಚೋಳರು ಪ್ರಬಲರಾಗಿ ಕಲ್ಯಾಣದ ಚಾಳುಕ್ಯರನ್ನು ಹಿಮ್ಮೆಟ್ಟಿಸುವಲ್ಲಿ ಶಕ್ತರಾದರು.

ಕಲ್ಯಾಣಿ ಚಾಳುಕ್ಯರ ಪ್ರಸಿದ್ಧ ದೊರೆ ೬ನೆಯ ವಿಕ್ರಮಾದಿತ್ಯನು ಯುವರಾಜನಾಗಿದ್ದಂತಹ ಸಂದರ್ಭದಲ್ಲಿ ಗಂಗವಾಡಿ ೯೬೦೦೦ವನ್ನು ಆಳುತ್ತಿದ್ದನೆಂದು ಕಂಡಬಂದರೂ ಇದನ್ನು ಸಮರ್ಥಿಸುವಂತಹ ಶಾಸನಗಳು ಇಲ್ಲಿ ದೊರೆಯುವುದಿಲ್ಲ.

೨.೨.೬. ಬಾಣರಸರು

ಕರ್ನಾಟಕದ ಇತಿಹಾಸದಲ್ಲಿ ಎಲೆಮರೆಯ ಕಾಯಿಯಂತೆ ಕಂಡು ಬಂದು ಆಳ್ವಿಕೆ ನಡೆಸಿದವರಲ್ಲಿ ಬಾಣರಸರು ಪ್ರಮುಖರು. ಬಾಣರಸರು ಒಮ್ಮೆ ಪ್ರಮುಖ ರಾಜರಂತೆಯೂ, ಕೆಲವೊಮ್ಮೆ ಮಾಂಡಲೀಕರಂತೆಯೂ ಕಂಡುಬರುತ್ತಾರೆ. ಆದರೆ ವಿಶೇಷವಾಗಿ ಕ್ರಿ.ಶ.೪ನೆಯ ಶತಮಾನದಿಂದಾರಂಭಿಸಿ ೧೧ನೆಯ ಶತಮಾನದವರೆಗೆ ಹಲವಾರು ಶಾಸನಗಳಲ್ಲಿ ಬಾಣಶಬ್ದವು ಪ್ರಯೋಗವಾಗಿದೆ. ಕನ್ನಡ ಮೊದಲ ಶಾಸನವಾದ ಹಲ್ಮಿಡಿ ಶಾಸನದಲ್ಲಿ[೬೭] **"ಸೇಂದ್ರಕ ಬಾಣೋಭಯ ದೇಶದಾ ವೀರಪುರುಷ ಸಮಕ್ಷದೆ"** ಎಂದು ಬಾಣರನ್ನು ಉಲ್ಲೇಖಿಸಲಾಗಿದೆ. ಕ್ರಿ.ಶ.೪ನೆಯ ಶತಮಾನದ ಆರಂಭ ಕಾಲದಲ್ಲಿಯೇ ಕರ್ನಾಟಕದ ಪೂರ್ವಭಾಗದಲ್ಲಿ ಸೇಂದ್ರಕ ಮೊದಲ ರಾಜಮನೆತನಗಳಂತೆ ಪ್ರಬಲ ರಾಜಮನೆತನದವರಾಗಿದ್ದರು. ಕದಂಬರ ಸಮಕಾಲೀನರಾಗಿ ಬಾಣರಸರು ನೆಲೆಸಿದ್ದರೆಂಬುವುದು ನಿರ್ಧಾರವಾದಂತಾಗುತ್ತದೆ. ಇದೇ ಕದಂಬರ ಆಳ್ವಿಕೆಯ ತಾಳಗುಂದ ಶಾಸನವು[೬೮] ಬಾಣರನ್ನು ಬೃಹತ್ ಬಾಣರೆಂದು ಉಲ್ಲೇಖಿಸಿದೆ.**"ಆದದೇ ಕರಾನ್ ಬೃಹದ್ಬಾಣ ಪ್ರಮುಖಾದ್ಬಹೂನ್ ರಾಜಮಂಡಲಾತ್"** ಈ ವಾಕ್ಯದಲ್ಲಿ ಬೃಹತ್ಬಾಣ ಶಬ್ದ ಪ್ರಯೋಗದಿಂದ ಬಾಣರು ವಿಸ್ತಾರವಾದಂತಹ ಸಾಮ್ರಾಜ್ಯವನ್ನು ಕಟ್ಟಿದ್ದರೆಂದು ತಿಳಿಯಬಹುದಾಗಿದೆ.

ಕದಂಬ ದೊರೆ ಮಯೂರವರ್ಮನು ಬಾಣರನ್ನು ಸೋಲಿಸುವಂತಹ ಸಂದರ್ಭದಲ್ಲಿ ಬಾಣರು ಶಾತವಾಹನರ ಸಾಮಂತರಾಗಿದ್ದರು. ಆರಂಭ ಕಾಲದಲ್ಲಿ ಶಾತವಾಹನರ ಸಾಮಂತರಾಗಿದ್ದಂತಹ ಬಾಣರು, ಪಲ್ಲವ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರೊಂದಿಗೆ ಗುರುತಿಸಿಕೊಂಡು ಅವರಿಗೆ ಸಾಮಂತರಾಗಿದ್ದು ಕೊಂಡು ಅಂತ್ಯದಲ್ಲಿ ಕಲ್ಯಾಣದ ಚಾಲುಕ್ಯರ ಮಂಡಲೀಕರಾಗಿದ್ದಂತಹ ಅಂಶವು ಶಾಸನಗಳಿಂದ ದೃಢವಾಗುತ್ತದೆ. ಗಂಗ

ಅರಸರೊಂದಿಗೆ ಕೆಲವೊಮ್ಮೆ ಮಿತ್ರರಾಗಿಯೂ ಕೆಲವೊಮ್ಮೆ ಶತ್ರುಗಳಾಗಿಯೂ ಕಂಡುಬರುವಂತಹ ಈ ಅರಸರು ಕೋಲಾರ ಜಿಲ್ಲೆಯಲ್ಲಿ ಪ್ರಬಲರಾಗಿದ್ದು ಗಂಗರಿಗೆ ಪ್ರಬಲ ಎದುರಾಳಿಗಳಾಗಿ ನಿಂತಿದ್ದರೆಂದು ಹೇಳಬಹುದಾಗಿದೆ. ತಮಿಳುನಾಡಿನ ಗುಡಿಯಾಟ್ಟ ತಾಲ್ಲೂಕಿನ ಉದಯೇಂದೀವರಂ ತಾಮ್ರಶಾಸನದಿಂದ ಗಂಗ ದೊರೆ ಒಂದನೆಯ ಮಾಧವನು ಬಾಣಮಂಡಲವನ್ನು ವಶಕೊಂಡಿರುವಂತಹ ವಿಚಾರವು ಕಂಡುಬರುತ್ತದೆ. ಆ ಕಾರಣದಿಂದ ಬಾಣರಸರ ಸಂಪೂರ್ಣ ಆಡಳಿತವನ್ನು ಗಂಗರು ವಶಪಡಿಸಿಕೊಂಡು 'ಕುವಳಾಲ ಪುರವರಾಧೀಶ್ವರ' ಎಂಬ ಬಿರುದನ್ನು ತಮ್ಮದಾಗಿಸಿಕೊಂಡರೆಂದು ತಿಳಿಯಬಹುದು.[೬೯] ಕೋಲಾರ ಜಿಲ್ಲೆಯಲ್ಲಿ ಬಾಣರಿಗೆ ಸಂಬಂಧಿಸಿದ ಉಲ್ಲೇಖವು ಕ್ರಿ.ಶ.೮ನೆಯ ಶತಮಾನದ ಪೂರ್ವಾರ್ಧದಿಂದ ದೊರಕುತ್ತದೆ. ಕೋಲಾರ ಜಿಲ್ಲೆಯ ನುಕ್ಕನಹಳ್ಳಿ ಗ್ರಾಮದ[೭೦] ಶಾಸನವು ಬಾಣರನ್ನು **"ಪರಮೇಶ್ವರ ಪ್ರತಿಹಾರೀಕೃತ ಮಹಾಬಲಿ ಕುಲೋದ್ಭವ ಶ್ರೀಮಹಾಬಲಿ ಬಾಣರಸರ್"** ಎಂದು ಉಲ್ಲೇಖಿಸಿದೆ. ಹಾಗಾಗಿ ಬಾಣರಸರು ಶ್ರೀಮಹಾಬಲಿಯ ವಂಶದಲ್ಲಿ ಹುಟ್ಟಿದವರೆಂದು ತೀರ್ಮಾನಿಸಬಹುದಾಗಿದೆ. ಅದಲ್ಲದೆಯೇ ಬಾಣರಸರಿಗೆ ಸಂಬಂಧಿಸಿದಂತಹ ಹೆಚ್ಚಿನ ಶಾಸನಗಳಲ್ಲೂ ಹಾಗೂ ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಶಾಸನಗಳಲ್ಲೂ ಇದೇ ವಿಚಾರವು ಕಂಡುಬರುತ್ತದೆ.

ಮಹಾಬಲಿ

ಭಾರತದಲ್ಲಿ ಪ್ರಸಿದ್ಧವಾಗಿರುವಂತಹ ಹದಿನೆಂಟು ಪುರಾಣಗಳಲ್ಲಿ ಒಂದಾದ ವಾಮನ ಪುರಾಣದಲ್ಲಿ ಮಹಾಬಲಿ ಚಕ್ರವರ್ತಿಯನ್ನು ವರ್ಣಿಸಲಾಗಿದೆ. ಪ್ರಹ್ಲಾದ ರಾಜನ ಪುತ್ರನಾದ ವಿರೋಚನನ ಮಗನೇ ಬಲಿಚಕ್ರವರ್ತಿ. ಇವನಿಗೆ ಇಂದ್ರಸೇನನೆಂಬ ಹೆಸರಿದ್ದು 'ವಿಶ್ವಜಿತ್' ಎಂಬ ಮಹಾಯಾಗವನ್ನು ಮಾಡಿ ಇಂದ್ರನನ್ನು ಯುದ್ಧದಲ್ಲಿ ಸೋಲಿಸಿ ಭೂಲೋಕ ಮತ್ತು ಸ್ವರ್ಗಲೋಕವನ್ನು ವಶಪಡಿಸಿಕೊಂಡು ಅಹಂಕಾರದಿಂದ ಮೆರೆಯುತ್ತಿದ್ದನು. ನರ್ಮದಾ ನದಿಯ ತೀರದಲ್ಲಿ ಬಲಿಚಕ್ರವತಿಯು ಅಶ್ವಮೇಧ ಯಾಗವನ್ನು ಮಾಡಲು ಪ್ರಾರಂಭಿಸಿದನು. ಈ ಸಂದರ್ಭದಲ್ಲಿ ಇಂದ್ರಾದಿ ದೇವತೆಗಳು ವಿಷ್ಣುವಿನ ಮೊರೆಹೋದಾಗ ವಿಷ್ಣುವು ವಾಮನ ಅವತಾರಿಯಾಗಿ (ಬ್ರಾಹ್ಮಣ ವಟು) ಬಂದು ಬಲಿಚಕ್ರವರ್ತಿಯ ಬಳಿ ತನಗೆ ಸಂಧ್ಯಾವಂದನೆಯನ್ನು ಮಾಡಲು ಮೂರಡಿ ಭೂಮಿಯನ್ನು ಕೇಳುತ್ತಾನೆ. ವಾಮನನು ಭೂಮಿ ಮತ್ತು ಆಕಾಶಗಳನ್ನು ಎರಡು ಪಾದಗಳಲ್ಲಿ ಅಳೆದನು. ತನ್ನ ಮೂರನೆಯ ಪಾದವನ್ನು ಎಲ್ಲಿಡಲಿ ಎಂದು ಕೇಳಿದಂತಹ ಸಂದರ್ಭದಲ್ಲಿ ಬಲಿಯು ತನ್ನ ತಲೆಯನ್ನು ತೋರಿಸಲು ವಾಮನವತಾರಿ ವಿಷ್ಣುವು ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದನು ಎಂದು ಪ್ರತೀತಿಯಿದೆ.[೭೧] ವಿಷ್ಣುವಿನ ಈ ಅವತಾರವು ವಿಷ್ಣುವಿನ ಪ್ರಸಿದ್ಧ ದಶಾವತಾರಗಳಲ್ಲಿ ನಾಲ್ಕನೆಯ ಅವತಾರವಾಗಿದೆ. ಈ ಕಥೆಯು ಮಹಾಭಾರತದ ಆದಿಪರ್ವದಲ್ಲೂ ಪ್ರಸಿದ್ಧವಾಗಿದೆ.

ಬಾಣ

ಬಲಿ ಚಕ್ರವರ್ತಿಗೆ ವಿಂಧ್ಯಾವಳಿ ಮತ್ತು ಕೋಟರೆಯೆಂಬ ಇಬ್ಬರು ಮಡದಿಯರಿದ್ದರು. ಅಲ್ಲದೆ ಬಲಿಚಕ್ರವರ್ತಿಗೆ ನೂರು ಮಂದಿ ಪುತ್ರರಿದ್ದರು. ಬಾಣ, ಧೃತರಾಷ್ಟ್ರ, ಸೂರ್ಯ, ಚಂದ್ರ, ಗುರ್ವಕ್ಷ, ಕುಕ್ಷಿ ಮೊದಲಾದ ಪುತ್ರರಲ್ಲಿ ಬಾಣನು ಹಿರಿಯವನೂ ಮಹಾಶಿವಭಕ್ತನೂ ಆಗಿದ್ದನು. ಈತನು ಶೋಣಿತಪುರದ ರಾಜನಾಗಿದ್ದನು. ಮಹಾಕಾಲನೆಂಬ ಉಪನಾಮವನ್ನು ಹೊಂದಿದ್ದು, ಇವನಿಗೆ ಈತನು ತನ್ನ ತಾಂಡವ ನೃತ್ಯದಿಂದ ಶಿವನನ್ನು

ಮೆಚ್ಚಿಸಿ ಶಿವನಿಂದ ತನಗೆ ಸಾವಿರ ತೋಳುಗಳು ಬರುವಂತೆಯೂ ವರ ಪಡೆದ ಶಿವನ ಗಣಗಳಲ್ಲಿ ಒಬ್ಬನು, ತನ್ನ ಅರಮನೆಯನ್ನು ಕಾಪಾಡುವಂತೆಯೂ ವರವನ್ನು ಪಡೆದು ಮಹಾಮಹಿಮನಾಗಿದ್ದನು. ಈತನಿಗೆ ಸಂಬಂಧಿಸಿದಂತಹ ಹಲವಾರು ಕಥಾನಕಗಳು ಭಾಗವತ ಪುರಾಣ, ವಿಷ್ಣುಪುರಾಣ ಮತ್ತು ವಾಮನ ಪುರಾಣಗಳಲ್ಲಿ ದೊರಕುತ್ತವೆ. ಇವನ ಭಕ್ತಿಗೆ ಮೆಚ್ಚಿ ಶಿವನು ಪಟ್ಟಣವನ್ನು ಕಾಯುವ ವೃತ್ತಿಯನ್ನು ನೀಡಿದ್ದನು. ಹಾಗಾಗಿ ಬಾಣ ವಂಶದವರು ಶಿವನ ನಗರವನ್ನು ಕಾಯುವಂತಹ ವೃತ್ತಿಯನ್ನು ಹೊಂದಿದ್ದರಿಂದಾಗಿಯೇ ಸ್ವತಃ ಶಾಸನಗಳೇ **'ಪ್ರತಿಹಾರೀಕೃತ ಮಹಾಬಲಿ . . .'** ಎಂದು ಪ್ರತಿಪಾದಿಸುತ್ತಿವೆ. ಹಾಗಾಗಿ ಬಾಣರಸರು ಮಹಾಬಲಿಯ ವಂಶದಲ್ಲಿ ಬಂದವರೆಂದು ತೀರ್ಮಾನಿಸಬಹುದಾಗಿದೆ. ಕೇರಳ ರಾಜ್ಯದಲ್ಲೂ ಬಲಿಚಕ್ರವರ್ತಿಯ ಆರಾಧನೆಯನ್ನು ಓಣಂ ಹಬ್ಬದ ಸಂದರ್ಭದಲ್ಲಿ ಆಚರಿಸುವುದನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಬೆಂಗಳೂರು, ಅವಿಭಜಿತ ಕೋಲಾರ ಜಿಲ್ಲೆಯ ಪ್ರಾಂತ್ಯಗಳಲ್ಲಿ ಬಾಣರಸರು ಆಳ್ವಿಕೆಯನ್ನು ನಡೆಸಿದ್ದರೆಂದು ಶಾಸನಾಧಾರಗಳಿಂದ ಗಮನಿಸಬಹುದಾಗಿದೆ. ತಮಿಳು ಗ್ರಂಥಗಳಾದ 'ಶಿಲಪ್ಪದಿಕಾರಂ' 'ಮಣಿಮೇಖಲೈ' ಮೊದಲಾದವುಗಳಲ್ಲೂ ಬಾಣವಂಶದ ಉಲ್ಲೇಖವಿದೆ.

ಬಾಣರ ಇತಿಹಾಸ

ಬಾಣರ ಕುಲವು ಪುರಾಣಗಳ ಆಧಾರವನ್ನಿಟ್ಟುಕೊಂಡು ನೋಡಿದರೆ ಅತ್ಯಂತ ಪ್ರಾಚೀನವಾದ ವಂಶವಾಗಿದೆ. ಡಾ.ಪಿ.ವಿ.ಕೃಷ್ಣಮೂರ್ತಿಯವರು ಬಾಣರ ಇತಿಹಾಸವನ್ನು ಮೂರು ಸ್ತರಗಳಲ್ಲಿ ವಿಭಾಗಿಸಿ ಚರ್ಚಿಸಿದ್ದಾರೆ.[೨]

೧. ಪ್ರಾಚೀನ ಬಾಣರಸರು

೨. ಮಹಾಬಲಿ ಬಾಣರಸರು

೩. ಹತ್ತನೆಯ ಶತಮಾನದ ನಂತರದ ಬಾಣರಸರು

ನಮಗೆ ಪ್ರಧಾನವಾಗಿ ದೊರಕುವಂತಹ ಹಲ್ಮಿಡಿಶಾಸನ, ತಾಳಗುಂದಶಾಸನ ಮತ್ತು ಉದಯೇಂದೀವರಂ ಶಾಸನಗಳನ್ನು ಗಮನಿಸಿದರೆ ಬಾಣರು ಕದಂಬರಿಗಿಂತ ಮೊದಲು ಆಳ್ವಿಕೆಯನ್ನು ನಡೆಸಿ ಶಾತವಾಹನರ ಮಾಂಡಲೀಕರಾಗಿದ್ದರು. ತುಂಗಾಭದ್ರಾ ನದಿಯು ಕರ್ನಾಟಕವನ್ನು ಉತ್ತರಭಾಗ ಮತ್ತು ದಕ್ಷಿಣಭಾಗವೆಂದು ವಿಭಜಿಸುತ್ತದೆ. ಉತ್ತರಭಾಗದಲ್ಲಿ ನಂದರು, ಶಾತವಾಹನರು ಆಳ್ವಿಕೆ ನಡೆಸುತ್ತಿದ್ದರೆ ದಕ್ಷಿಣಭಾಗದಲ್ಲಿ ಕದಂಬರು, ಬಾಣರು, ಗಂಗರು ಪಲ್ಲವರು ಪುನ್ನಾಟ ಮೊದಲಾದವರು ಆಳ್ವಿಕೆ ನಡೆಸುತ್ತಿದ್ದರು.

ದಕ್ಷಿಣಭಾಗದಲ್ಲಿ ಒಂದೊಂದು ಪ್ರದೇಶಗಳಲ್ಲಿ ಒಂದೊಂದು ರಾಜಮನೆತನದವರು ಆಳ್ವಿಕೆ ನಡೆಸುತ್ತಿದ್ದುದು ಕಂಡುಬರುತ್ತದೆ. ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದ ಗಡಿಭಾಗವನ್ನು ಹೊಂದಿಕೊಂಡು ಕರ್ನಾಟಕದ ಪೂರ್ವದಿಕ್ಕಿನಲ್ಲಿ ಬರುವಂತಹ ಕೋಲಾರ ಜಿಲ್ಲೆಯಲ್ಲಿ ಬಾಣರಸರು ನೆಲೆಸಿದ್ದರು. ಹೆಚ್ಚಿನ ಶಾಸನಗಳನ್ನು ಗಮನಿಸಿದರೆ ಬಾಣರು ಪಲ್ಲವರ ಮಾಂಡಲೀಕರಾಗಿದ್ದರು ಎಂದು ಭಾಸವಾಗುತ್ತದೆ. ಇತಿಹಾಸಕಾರರು ಕೋಲಾರ ಜಿಲ್ಲೆಯ ಇತಿಹಾಸವನ್ನು ವಿಮರ್ಶಿಸುವಂತಹ ಸಂದರ್ಭದಲ್ಲಿ ಕೋಲಾರ ಪ್ರದೇಶದಲ್ಲಿ ಬಾಣರ ಆಳ್ವಿಕೆಗಿಂತ ಮೊದಲು ಯಾರು ಆಳ್ವಿಕೆ ನಡೆಸುತ್ತಿದ್ದರು ಎಂದು ಗಮನಿಸಿದಾಗ ಕದಂಬರಿಗಿಂತ ಮೊದಲು ಪ್ರಬಲರಾಗಿದ್ದಂತಹ ಶಾತವಾಹನರು ಈ ಪ್ರದೇಶವನ್ನು ಆಳುತ್ತಿದ್ದರು ಮತ್ತು ಬಾಣರು ಶಾತವಾಹನರ ಮಾಂಡಲೀಕರಾಗಿದ್ದಿರಬಹುದೆಂಬ ಅಭಿಪ್ರಾಯ ಪಡುತ್ತಾರೆ. ತದನಂತರದ ಕಾಲದಲ್ಲಿ ತಮಿಳುನಾಡಿನ ಪಲ್ಲವರು

ಪ್ರಬಲರಾದಾಗ ಬಾಣರಿಗೆ ಶಾತವಾಹನರ ಸಂಪರ್ಕ ತಪ್ಪಿಹೋಗಿ ಪಲ್ಲವರ ಮಾಂಡಲೀಕರಾದರು ಎಂದು ಊಹಿಸುತ್ತಾರೆ.[೭೩]

ಕೋಲಾರ ಜಿಲ್ಲೆಯ ಬಾಣರಸರ ಶಾಸನಗಳು :

ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ೨೮ಕ್ಕಿಂತಲೂ ಅಧಿಕ ಬಾಣರಸರ ಶಾಸನಗಳು ದೊರಕುತ್ತಿವೆ. ಬೆಂಗಳೂರು, ಗುಲ್ಬರ್ಗಾ, ಬಳ್ಳಾರಿ ಮೊದಲಾದ ಜಿಲ್ಲೆಗಳಲ್ಲೂ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲೂ ದೊರೆಯುತ್ತವೆ. ಕ್ರಿ.ಶ.೭೫೦ರಿಂದ ಆರಂಭಿಸಿ ಕ್ರಿ.ಶ.೯೦೦ರವರೆಗಿನ ಶಾಸನಗಳು ದೊರಕುತ್ತಿದ್ದು ಹೆಚ್ಚಾಗಿ ವೀರಗಲ್ಲು ಸ್ಮಾರಕಶಾಸನಗಳೇ ಪ್ರಮುಖವಾಗಿದೆ.

ಬಾಣರಸರ ಶಾಸನಗಳ ಅಧ್ಯಯನ ಮಾಡುವುದಾದರೆ ಮೊದಲು ಮುಳಬಾಗಿಲು ತಾಲ್ಲೂಕಿನ ಮುಡಿಯನೂರು ತಾಮ್ರಶಾಸನವನ್ನು ಗಮನಿಸಬೇಕಾಗುತ್ತದೆ.[೭೪] ಸಂಸ್ಕೃತ ಭಾಷೆಯಲ್ಲಿರುವಂತಹ ಈ ಶಾಸನವು ಕೂಟಶಾಸನವೆಂದು ವಿದ್ವಾಂಸರಲ್ಲಿ ಅಭಿಪ್ರಾಯವಿದೆ. ಕಾಲದ ದೃಷ್ಟಿಯಿಂದ ಗಮನಿಸಿದರೆ ಅದು ಸರಿಯೆಂದನಿಸುತ್ತದೆ. ಶಾಸನವು ಕಾಲವನ್ನು "ಏಕಷಷ್ಟ್ಯುತರ ದ್ವಯಶತೇ ಶಕಾಬ್ದ' ಎಂದು ಉಲ್ಲೇಖಿಸಿದ್ದು ಇದು ಶಕವರ್ಷ ೨೬೧ ಎಂದಾಗುತ್ತದೆ. ಈ ಶಾಸನವು ಅಷ್ಟು ಹಿಂದಿನಿಂದಾಗಿರದು. ವಸ್ತುತಃ ಕ್ರಿ.ಶ.೩೦೦ ಅಥವಾ ಅದಕ್ಕಿಂತ ಹಿಂದೆ ಬಾಣರ ಉಲ್ಲೇಖಗಳು ಬರಲು ಸಾಧ್ಯವಿಲ್ಲ. ಅದಲ್ಲದೆಯೆ ಶಾಸನದ ಶೈಲಿ ಮತ್ತು ಲಿಪಿಯೂ ಸಹ ಶಾಸನದ ಪ್ರಾಚೀನತೆಯನ್ನು ದೃಢಪಡಿಸುವುದಿಲ್ಲ. ಈ ಶಾಸನದಲ್ಲಿರುವಂತಹ ಶಕವರ್ಷವನ್ನು ಹೊರತುಪಡಿಸಿದರೆ ಉಲ್ಲೇಖಿತವಾಗಿರುವಂತಹ ಬಾಣರಸನ ಆಳ್ವಿಕೆಯ ಕಾಲವನ್ನು ಆಧರಿಸಿ ಕ್ರಿ.ಶ.೮೭೮ ಎಂದು ಗುರುತಿಸಬಹುದಾಗಿದೆ.[೭೫] ಬಾಣರಸರ ವಂಶಾವಳಿಯನ್ನು ತಿಳಿಸುತ್ತಿರುವಂತಹ ಈ ಶಾಸನವು ಬಾಣದೊರೆ ಮಲ್ಲದೇವ ನಂದಿವರ್ಮನ (ಕ್ರಿ.ಶ.೮೩೫–೮೬೦) ಕಾಲಕ್ಕೆ ಸಂಬಂಧಿಸಿದುದಾಗಿದ್ದು ಈತನನ್ನು ಶಾಸನವು 'ವಧೂವಲ್ಲಭ ಮಲ್ಲದೇವನಂದಿ ವರ್ಮನೆಂದು ಹೊಗಳಿದೆ. ನಂದಿವರ್ಮನು ಮುಡಿಯನೂರು ಎಂಬ ಗ್ರಾಮವನ್ನು ೨೫ ಬ್ರಾಹ್ಮಣರುಗಳಿಗೆ ದಾನ ನೀಡಿರುವುದನ್ನು ಉಲ್ಲೇಖಿಸಿದೆ. ಶಾಸನದ ಇನ್ನೊಂದು ಪ್ರಮುಖ ವಿಷಯವೆಂದರೆ ಬಾಣರಾಜ್ಯದ ವಿಸ್ತಾರದ ವರ್ಣನೆ. **"ಆಂಧ್ರಮಂಡಲೇ ದ್ವಾದಶ ಸಹಸ್ರಗ್ರಾಮ ಸಂಪಾದಿತ ಸಪ್ತಾರ್ಧಲಕ್ಷ ವಿಷಯಾಧಿತಪತೇ"** ಎಂದು ತಿಳಿಸುತ್ತದೆ. ಆಂಧ್ರಮಂಡಲದಲ್ಲಿ ೧೨ ಸಾವಿರ ಗ್ರಾಮಗಳಲ್ಲಿ ಏಳುವರೆ ಲಕ್ಷ ವಿಷಯಗಳಿಗೆ ಅಧಿಪತಿಯಾಗಿದ್ದನೆಂದು ತಿಳಿಸಿದೆ. ಇದು ಬಾಣರು ಆಂಧ್ರಪ್ರದೇಶಗಳನ್ನೊಳಗೊಂಡಂತೆ ಕರ್ನಾಟಕದ ಗಡಿ ಭಾಗಗಳನ್ನು ಆಳುತ್ತಿದ್ದರೆಂಬ ಮಾಹಿತಿಯನ್ನು ನೀಡುತ್ತಿದೆ.

ಬಾಣರಸನನ್ನು ಉಲ್ಲೇಖಿಸುವಂತಹ ಶಾಸನಗಳಲ್ಲಿ ಕೋಲಾರ ತಾಲ್ಲೂಕಿನ ದಳಸನೂರಿನ ನುಕ್ಕನಹಳ್ಳಿ ಗ್ರಾಮದ ಶಾಸನವು[೭೬] ಪ್ರಮುಖವಾಗಿದೆ. ಕಾಲದ ಉಲ್ಲೇಖ ಇಲ್ಲದಿರುವ ಈ ಶಾಸನವು ಮಹಾಬಲಿ ಬಾಣರಸನು ನೆಕ್ಕುಂದಿ ನಾಡನ್ನು ಆಳುತ್ತಿರುವಂತೆ ತಿಳಿಸುತ್ತಿದೆ. ಬಾಣರಸರ ರಾಜ್ಯದ ರಾಜಧಾನಿಯು ನೆಕ್ಕುಂದಿ ಆಗಿದ್ದು ಈ ನೆಕ್ಕುಂದಿ ಗ್ರಾಮವು ಚಿಂತಾಮಣಿ ತಾಲ್ಲೂಕಿನಲ್ಲಿದೆ. ಈ ಬಾಣರಸನಿಗೆ ಪ್ರಬಲವಾದ ಸೈನ್ಯವಿದ್ದು, ಆ ಸೈನ್ಯವು ಪುಲಿಕುರುಕ್ಕಿಯ (ಹುಲಿಕುಂದ) ಮೇಲೆ ಧಾಳಿ ಮಾಡಿತ್ತು ಎಂದೂ ಶಾಸನವು ತಿಳಿಸುತ್ತದೆ. ಈ ಸೈನ್ಯದಲ್ಲಿ ಗುಟ್ಟರಸ ಮೊದಲಾದ ಪರಾಕ್ರಮಿಗಳು ಇದ್ದರು. ಡಾ.ಪಿ.ವಿ.ಕೃಷ್ಣಮೂರ್ತಿಯವರು ಶಾಸನದ ಕಾಲವನ್ನು ಕ್ರಿ.ಶ.೮೯೦

ಎಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಬಾಣರಸ ವಿಕ್ರಮಾದಿತ್ಯ ಜಯ ಮೇರು (ಬಾಣ ವಿದ್ಯಾಧರ) ಆಳ್ವಿಕೆ ನಡೆಸುತ್ತಿದ್ದನು. ಇದೇ ರೀತಿಯ ಮಾಹಿತಿಯನ್ನು ಒದಗಿಸುತ್ತಿರುವಂತಹ ಮುಳಬಾಗಿಲು ತಾಲ್ಲೂಕಿನ ತಾತಕಲ್ಲು ಗ್ರಾಮದ ವೀರಗಲ್ಲು ಶಾಸನವು[೭೭] ಪಲ್ಲವಲ್ಲ ಎಂಬ ಸ್ಥಳದಲ್ಲಿ ನಡೆದಿರುವಂತಹ ಘೋರ ಕಾಳಗವನ್ನು ತಿಳಿಸಿದೆ. ಹಿಂದೆ ತಿಳಿಸಿರುವಂತೆ ಬಾಣರಸನ ಬಳಿಯಲ್ಲಿ ಬಲವಾದಂತಹ ಸೈನ್ಯವಿತ್ತು. ಆದರೆ ಈ ಶಾಸನವು ಯುದ್ಧವು ಯಾರೊಂದಿಗೆ ಯಾವ ಕಾಲದಲ್ಲಿ ನಡೆದಿದೆಯೆಂದು ತಿಳಿಸಲು ಅಸಮರ್ಥವಾಗಿದೆ. ಇದೇ ತಾಲ್ಲೂಕಿನ ಉತ್ತನೂರು ವೀರಗಲ್ಲು ಶಾಸನವು[೭೮] ಮಹಾಬಲಿ ಬಾಣರಸನು ಈ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿಸುತ್ತಿದೆ. ಉತ್ತನೂರು ಪ್ರದೇಶವು ಮುಳಬಾಗಿಲು ತಾಲ್ಲೂಕಿಗೆ ಒಳಪಟ್ಟಿದ್ದು ಪ್ರದೇಶವು ಸಂಪೂರ್ಣವಾಗಿ ಬಾಣರಸರ ಆಳ್ವಿಕೆಗೆ ಸೇರಿತ್ತು. ಮುಳಬಾಗಿಲು ತಾಲೂಕಿನ ಗೊಲ್ಲಹಳ್ಳಿ[೭೯] ಮತ್ತು ತಾತಿಕಲ್ಲು ಗ್ರಾಮದಲ್ಲಿ[೮೦] ದೊರಕಿರುವಂತಹ ವೀರಗಲ್ಲು ಶಾಸನಗಳು ಬಾಣರಸರ ಕಾಲದಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ತಿಳಿಸುತ್ತಿವೆ.ಬಾಣರಸ ಉಲ್ಲೇಖವಿರುವಂತಹ ಇನ್ನೊಂದು ಶಾಸನವು[೮೧] ಯದರೂರು ಗ್ರಾಮದಲ್ಲಿ ದೊರಕಿದ್ದು ಬಾಣರಸನನ್ನು 'ಗೊಂಗು ಬಾಣರಸ'ನೆಂದು ಉಲ್ಲೇಖಿಸಲಾಗಿದೆ. ಈ ಬಾಣರಸನು ವೇಗೂರು ಮತ್ತು ಪೊಂಪುಲವೆಂಬ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿಸುತ್ತಿದೆ. ಈ ಶಾಸನವು ಕಾಲವನ್ನು ತಿಳಿಸದೇ ಇದ್ದು ಬಾಣರಸನೆಂಬುವವನು ಆಳ್ವಿಕೆ ನಡೆಸುತ್ತಿದ್ದನೆಂದಷ್ಟೇ ತಿಳಿಸುತ್ತಿದೆ. ಗುವಳಲಂ ಎಂಬ ಶಬ್ದ ಪ್ರಯೋಗವು ಈ ಶಾಸನದಲ್ಲಿದ್ದು ಇದು ಕುವಳಾಲ ಶಬ್ದದ ರೂಪಾಂತರವಾಗಿರಬಹುದು.ಗಂಗ ವಂಶದ ಆಡಳಿತ ವಿಭಾಗವಾದ ಗಂಗ–೬೦೦೦ವನ್ನು ಬಾಣರಸರು ಸ್ವಲ್ಪ ಕಾಲದವರೆಗೆ ಆಡಳಿತವನ್ನು ನಡೆಸಿದ್ದರು.

ಕೋಲಾರ ತಾಲ್ಲೂಕಿನ ಶೀಸಂದ್ರ ಗ್ರಾಮದ ಅಪೂರ್ಣವಾದ ವೀರಗಲ್ಲು ಶಾಸನವು ಶ್ರೀಮಹಾಬಲಿ ಬಾಣರಸನು ಗಂಗ ೬೦೦೦ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೮೨] ಗಂಗರಿಗೂ ಮತ್ತು ಬಾಣರಿಗೂ ಪರಸ್ಪರ ಸಹಕಾರವು ಏರ್ಪಟ್ಟಂತಹ ಸಂದರ್ಭದಲ್ಲಿ ಈ ಶಾಸನವು ಬಂದಿರುವುದಾಗಿದೆ. ಇದೇ ಮಹಾಬಲಿ ಬಾಣರಸನು ಗಂಗ ೬೦೦೦ವನ್ನು ಆಳುತ್ತಿದ್ದನು ಎಂಬ ವಿಚಾರವು ಬಂಗಾರಪೇಟೆ ತಾಲ್ಲೂಕಿನ ಹುಲಿಕುಂದ ಗ್ರಾಮದ ವೀರಗಲ್ಲು[೮೩] ಶಾಸನವು ತಿಳಿಸಿದೆ. ಬಾಣರಸರು ಗಂಗ ಅರಸರ ನಾಗದೇವನೊಂದಿಗೆ ಮೈತ್ರಿಯನ್ನು ಮಾಡಿಕೊಂಡಿದ್ದರು. ಈ ನಾಗದೇವನು ಪೊಕ್ಕಂದ೧೨ನ್ನು ಆಳುತ್ತಿದ್ದನು. ಪೊಕ್ಕುಂದ ಎನ್ನುವುದು ಈಗಿನ ಹುಲಿಕುಂದ (ಹುನಗುಂದ) ಗ್ರಾಮವಾಗಿದೆ. ಬೂದಿಕೋಟೆ ವೀರಗಲ್ಲು ಶಾಸನವು[೮೪] ಬಾಣರಸ ಮತ್ತು ಗಂಗ ದೊರೆಗಳ ನಡುವೆ ಪರಸ್ಪರ ವೈರತ್ವವನ್ನು ಪ್ರತಿಪಾದಿಸಿದೆ. ಗಂಗ ಅರಸರ ರಾಚಮಲ್ಲ ಪೆರ್ಮಾನಡಿ (ಕ್ರಿ.ಶ.೮೧೭–೮೫೩) ಮತ್ತು ಬಾಣರಸರ ನಡುವೆ ಘೋರವಾಗಿ ಯುದ್ಧವು ನಡೆದಿದ್ದು ಈ ಯುದ್ಧದಲ್ಲಿ ಬಾಣರಸನು ಅಗ್ಗಳ ಅರಸನೆಂಬುವವನಿಗೆ ಹೋರಾಡಲು ಆಜ್ಞಾಪಿಸಿರುವನು ಎಂದು ತಿಳಿಸಿದೆ.

ಗಂಗ ದೊರೆಗಳಲ್ಲಿ ರಾಚಮಲ್ಲ ಪೆರ್ಮಾನಡಿಯೆಂಬ ಹೆಸರುಳ್ಳ ಇಬ್ಬರು ರಾಜರುಗಳು ಪ್ರಸಿದ್ಧರಾಗಿದ್ದು, ಅವರಲ್ಲಿ ವಿಜಯಾದಿತ್ಯನ ಮಗನಾದ ಒಂದನೇಯ ರಾಚಮಲ್ಲ ಪೆರ್ಮಾನಡಿಯು ಕ್ರಿ.ಶ.೮೧೭ರಿಂದ ೮೫೩ರವರೆಗೆ ಗಂಗ ಸಾಮ್ರಾಜ್ಯವನ್ನು ಆಳಿದ್ದರೆ, ಈತನ ಮೊಮ್ಮಗನಾದ ಇಮ್ಮಡಿ ರಾಚಮಲ್ಲನು ಕ್ರಿ.ಶ.೮೭೦ರಿಂದ ಕ್ರಿ.ಶ.೯೦೭ರವರೆಗೆ ಆಳ್ವಿಕೆಯನ್ನು ನಡೆಸಿದ್ದನು. ಗಂಗ ಮತ್ತು ಬಾಣರ ಬಲಾಬಲಗಳನ್ನು ಗಮನಿಸಿದರೆ ಗಂಗರು ಪ್ರಬಲರಾಗಿದ್ದು ಬಾಣರು ಇವರ ಅಧೀನದಲ್ಲಿ ಇದ್ದವರಂತೆ ಭಾಸವಾಗುತ್ತದೆ. ಈ ಶಾಸನವು ಅಗ್ಗಳ ಅರಸನು ವೀರಾವೇಶದಿಂದ ಹೋರಾಡಿ ವೀರಮರಣವನ್ನು ಹೊಂದಿದನು ಎಂದು ತಿಳಿಸುತ್ತದೆ. ಈ ರಾಜರುಗಳ ಆಳ್ವಿಕೆಯ

ಕಾಲದಲ್ಲಿ ಕ್ರಮವಾಗಿ ಒಂದನೆಯ ವಿಜಯಾದಿತ್ಯನು ಬಾಣರಾಜ್ಯವನ್ನು ಮತ್ತು ಇಮ್ಮಡಿ ರಾಚಮಲ್ಲನ ಆಳ್ವಿಕೆಯ ಸಂದರ್ಭದಲ್ಲಿ ಇಮ್ಮಡಿ ವಿಜಯಾದಿತ್ಯನು ಬಾಣಸಾಮ್ರಾಜ್ಯವನ್ನು ಆಳ್ವಿಕೆ ನಡೆಸಿದ್ದನು.

ಬೂದಿಕೋಟೆಯ ಶಾಸನದಲ್ಲಿ[೮೫] ತಿಳಿಸಿರುವಂತಹ ರಾಚಮಲ್ಲನು ಮಹಾಬಲಿ ಬಾಣರಸನ ಮೇಲೆ ಯುದ್ಧಕ್ಕೆ ಬಂದಿರುವಂತಹ ಮಾಹಿತಿಯು ಮುಳಬಾಗಿಲು ತಾಲ್ಲೂಕಿನ ಬಂಗವಾಡಿ ವೀರಗಲ್ಲು ಶಾಸನವು ತಿಳಿಸುತ್ತದೆ. ಈ ರಾಚಮಲ್ಲ ದಡಿಗನ ಸಹಾಯವನ್ನು ಪಡೆದು ಬಾಣರಸನ ಮೇಲೆ ಮನ್ನವೂರು ಎಂಬಲ್ಲಿ ಯುದ್ಧಕ್ಕೆ ಬಂದಿರುವಂತೆಂದೂ ಈ ಯುದ್ಧದಲ್ಲಿ ಕಲಿಯೂರು ಎಂಬುವವನ ಮಗನು ವೀರಾವೇಶದಿಂದ ಹೋರಾಡಿದನೆಂದು ಶಾಸನವು ತಿಳಿಸಿದೆ. ಗಂಗ ದೊರೆಗಳಿಗೆ ನೊಳಂಬರ ಸಹಾಯವು ದೊರಕಿರುವಂತೆ ಶಾಸನವು ತಿಳಿಸಿದೆ. ಬೂದಿಕೋಟೆ ಶಾಸನವು ಸ್ವತಃ ಗಂಗ ದೊರೆಗಳೇ ಬಾಣ ಅರಸರ ಮೇಲೆ ಯುದ್ಧಕ್ಕೆ ಬಂದಿರುವರೆಂದು ತಿಳಿಸಿರುವುದರಿಂದ ಬಾಣರು ಈ ಕಾಲದಲ್ಲಿ ಪ್ರಬಲರಾಗಿದ್ದು ಗಂಗ ದೊರೆಗಳು ಇವರ ಮೇಲೆ ಪ್ರತೀಕಾರವನ್ನು ತೀರಿಸಿಕೊಳ್ಳಲು ಹವಣಿಸುತ್ತಿದ್ದಂತೆ ಭಾಸವಾಗುತ್ತದೆ. ಈ ಯುದ್ಧದಲ್ಲಿ ಗಂಗ ಮತ್ತು ನೊಳಂಬರು ಜೊತೆಯಾಗಿ ಆಕ್ರಮಣ ಮಾಡಿದುದರಿಂದ ಯುದ್ಧದಲ್ಲಿ ಬಾಣರಿಗೆ ಹಿನ್ನಡೆಯಾಗಿರಬಹುದು. ಇದೇ ರೀತಿಯಾಗಿ ಯುದ್ಧವನ್ನು ಮಲ್ಲನಾಯ್ಕನ ಹಳ್ಳಿಯ ಶಾಸನವು[೮೬] ತಿಳಿಸುತ್ತದೆ.

ಡಾ.ಪಿ.ವಿ.ಕೃಷ್ಣಮೂರ್ತಿಯವರು ಶಾಸನಗಳ ಆಧಾರದಿಂದ ಬಾಣರಸ ವಂಶವೃಕ್ಷವನ್ನು ಈ ರೀತಿಯಾಗಿ ನೀಡಿದ್ದಾರೆ.[೮೭]

ಮಹಾಬಲಿಚಕ್ರವರ್ತಿ

|

ಬಾಣರಸ

|

ನಂದಿವರ್ಮ

|

ವಿಜಯಾದಿತ್ಯದೇವ (I)

|

ವಧೂವಲ್ಲಭಮಲ್ಲದೇವ ನಂದಿವರ್ಮ

|

ವಿಕ್ರಮಾದಿತ್ಯ ಜಯಮೇರು (ಬಾಣವಿದ್ಯಾಧರ)

|

ವಿಜಯಾದಿತ್ಯ (II) ಪ್ರಭುಮೇರು

|

ವಿಕ್ರಮಾದಿತ್ಯ(II)

|

ವಿಜಯಾದಿತ್ಯ(II)

|

ವಿಕ್ರಮಾದಿತ್ಯ(III)

ಈ ರೀತಿಯಾಗಿ ಹತ್ತು ರಾಜರುಗಳ ವಂಶಾವಳಿಯು ಶಾಸನಗಳ ಮೂಲಕ (ಮುಡಿಯನೂರು ಶಾಸನ) ದೊರೆಯುತ್ತಿದ್ದು, ಕೆಲವೊಮ್ಮೆ ವಿಜಯಾದಿತ್ಯ ಮತ್ತು ವಿಕ್ರಮಾದಿತ್ಯ ರಾಜರುಗಳ ಆಳ್ವಿಕೆ ಮತ್ತೆ ಕಾಲಗಣನೆಯಲ್ಲಿ ಗೊಂದಲಗಳು ಕಂಡುಬರುತ್ತಿದೆ. ಅವನಿ ಹೋಬಳಿಯ ಬಲ್ಲ ಗ್ರಾಮದ ವೀರಗಲ್ಲು ಶಾಸನವು[೮೮] ಬಾಣ ಅರಸನನ್ನು ಬಾಣ ವಿದ್ಯಾಧರನೆಂದು ಹೇಳಿದೆ. ಅದಲ್ಲದೆಯೇ ಈತನ ವಿಜಯ ಸಂವತ್ಸರದ ಎರಡನೆಯ ವರ್ಷದಲ್ಲಿ ಬಂದಿರುವಂತಹ ಈ ಶಾಸನವು ವೀರನ ವೀರಮರಣವನ್ನು ಪ್ರತಿಪಾದಿಸುತ್ತದೆ.

ಈ ಶಾಸನದಲ್ಲಿ ಪ್ರತಿಪಾದಿಸಿರುವಂತಹ ಬಾಣವಿದ್ಯಾಧರನು ಬಾಣದೊರೆ ಜಯನಂದಿವರ್ಮನಿಂದ ಮೂರನೆಯ ತಲೆಮಾರಿನವನು. ಬಾಣರ ವಂಶವನ್ನು ಗಮನಿಸಿದರೆ ವಧೂವಲ್ಲಭ ಮಲ್ಲದೇವ ನಂದಿವರ್ಮನ ನಂತರ ಪಟ್ಟಾಭಿಷಕ್ತನಾಗಿರುವನು. ಈತನ ಕಾಲವನ್ನು ಕ್ರಿ.ಶ.೯ನೇ ಶತಮಾನವೆಂದು ನಿರ್ಧರಿಸಿದ್ದು ಕ್ರಿ.ಶ.೮೩೫ರಿಂದ ೮೪೬ರವರೆಗೆ ರಾಜ್ಯವಾಳಿದ್ದಾನೆ. ಹಾಗಾಗಿ ಬಾಣ ವಿದ್ಯಾಧರನು ಕ್ರಿ.ಶ.೮೪೬ರಲ್ಲಿ ಪಟ್ಟಾಭಿಷಕ್ತನಾಗಿರಬಹುದು. ಬಲ್ಲ ಗ್ರಾಮದ ಶಾಸನವು ರಾಜನ ಪಟ್ಟಾಭಿಷೇಕದ ನಂತರ ಎರಡನೆಯ ವರ್ಷದಲ್ಲಿ ಬಂದಿರುವುದಾಗಿದೆ. ಹಾಗಾಗಿ ಶಾಸನದ ಕಾಲವನ್ನು ಕ್ರಿ.ಶ.೮೪೮ ಎಂದು ತೀರ್ಮಾನಿಸಬಹುದಾಗಿದೆ.

ಬಾಣ ವಿದ್ಯಾಧರನು ಕ್ರಿ.ಶ.೮೭೫ರವರೆಗೂ ರಾಜನಾಗಿದ್ದನು. ಆಂಧ್ರಪ್ರದೇಶದಲ್ಲಿ ದೊರಕಿರುವಂತಹ ಕೆಲವು ಶಾಸನಗಳು ಬಾಣ ವಿದ್ಯಾಧರನನ್ನು ಉಲ್ಲೇಖಿಸಿದ್ದು, ಈತನಿಗೆ ಬಾಣಕಂದರ್ಪ, ವಿಕ್ರಮಾದಿತ್ಯ ಜಯಮೇರು ಇತ್ಯಾದಿಯಾಗಿ ವಿಶೇಷಣಗಳಿವೆ. ಬಾಣರು ಪಲ್ಲವರ ಸಾಮಂತರಾಗಿದ್ದು ಕೊಂಡು ಕೋಲಾರದ ಪ್ರಾಂತ್ಯವನ್ನು ಆಡಳಿತ ನಡೆಸುತ್ತಿದ್ದರು. ಇದೇ ಸಂದರ್ಭದಲ್ಲಿ ಗಂಗರು ಕೋಲಾರ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹಾಗಾಗಿ ಬಾಣರಿಗೂ ಗಂಗರಿಗೂ ಯುದ್ಧಗಳು ನಡೆಯುತ್ತಿದ್ದವು. ಬಾಣ ವಿದ್ಯಾಧರನು ಈ ಸಂದರ್ಭದಲ್ಲಿ ಗಂಗ-೬೦೦೦ ಪ್ರಾಂತ್ಯವನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಹಲವಾರು ಪ್ರಯತ್ನಗಳನ್ನು ನಡೆಸಿದನು. ಆಂಧ್ರಪ್ರದೇಶದ ಕೆಲವು ಶಾಸನಗಳು ಈತನು ಗಂಗ ೬೦೦೦ ಪ್ರದೇಶದ ಮೇಲೆ ತನ್ನ ಹಿಡಿತವನ್ನು ಸಾಧಿಸಿದ್ದನು ಎಂದು ತಿಳಿಸಿದೆ.

ಬಾಣರಿಗೂ ನೊಳಂಬರಿಗೂ ಕೋಲಾರ ಜಿಲ್ಲೆಯ ಹಲವಾರು ಪ್ರದೇಶಗಳ ಆಳ್ವಿಕೆಯನ್ನು ನಡೆಸುವ ವಿಚಾರದಲ್ಲಿ ಯುದ್ಧಗಳು ನಡೆಯುತ್ತಿದ್ದವು. ಪುಲಿನಾಡು ನೊಳಂಬರಿಗೆ ಸಂಬಂಧಿಸಿದಂತಹ ಪ್ರಮುಖ ಆಡಳಿತ ವಿಭಾಗವಾಗಿತ್ತು. ಶಾಸನಗಳು ಈ ಪ್ರದೇಶವನ್ನು ಪುಲಿನಾಡು-೬೦ ಎಂದು ಕರೆದಿವೆ. ಈ ಪುಲಿನಾಡು ಪ್ರದೇಶವನ್ನು ವಶಪಡಿಸಿಕೊಳ್ಳುವ ವಿಚಾರದಲ್ಲಿ ನೊಳಂಬರಿಗೂ ಮತ್ತು ಬಾಣರಿಗೂ ಹಲವಾರು ಯುದ್ಧಗಳು ನಡೆದಿದ್ದು, ಹೆಚ್ಚಿನ ಯುದ್ಧಗಳಲ್ಲಿ ನೊಳಂಬರಿಗೆ ಮೇಲುಗೈ ದೊರಕಿರುವಂತಹ ವಿಚಾರವು ಶಾಸನಗಳಿಂದ ದೊರಕುತ್ತದೆ. ನೊಳಂಬ ಅರಸರಲ್ಲಿ ಮಹೇಂದ್ರನು ಪ್ರಧಾನನಾಗಿದ್ದನು. ಈತನು ಬಾಣರೊಂದಿಗೆ ಹಲವಾರು ಯುದ್ಧಗಳಲ್ಲಿ ಹೋರಾಡಿ ಮೇಲುಗೈ ಸಾಧಿಸಿದ್ದನು. ಈತನು ಸಂಪೂರ್ಣವಾಗಿ ಬಾಣರನ್ನು ಹಿಮ್ಮೆಟ್ಟಿಸುವಲ್ಲಿ ಸಫಲನೂ ಆಗಿದ್ದನು. ಹಾಗಾಗಿ ಬಾಣರಸ ಮಹೇಂದ್ರನಿಗೆ 'ಮಹಾಬಲಿ ವಂಶ ವಿಧ್ವಂಸಕ' ಎಂದು ಬಿರುದು ಇರುವುದನ್ನು ಕೋಲಾರದ ಶಾಸನವು[೮೯] ತಿಳಿಸಿದೆ. ಗಂಗ ೬೦೦೦ವಲ್ಲದೆ ಪುಲಿನಾಡಿನ ಮೇಲೂ ಬಾಣರು ಅಧಿಪತ್ಯವನ್ನು ಹೊಂದಿದ್ದರೆಂದು ಈ ಶಾಸನವು ತಿಳಿಸುತ್ತದೆ.

ಶ್ರೀನಿವಾಸಪುರ ತಾಲ್ಲೂಕಿನ ಕಸಬಾ ಈಚಲಕುಂಟೆಯ ವೀರಗಲ್ಲು ಶಾಸನವು[೧೦] ಬಾಣ ವಿದ್ಯಾಧರನು ಬೃಹತ್ ಸೈನ್ಯವನ್ನು ಹೊಂದಿರುವನೆಂದು ತಿಳಿಸುತ್ತದೆ. ನೊಳಂಬರೊಂದಿಗೆ ಹೋರಾಡಬೇಕಾಗಿ ಬಂದಂತಹ ಸಂದರ್ಭದಲ್ಲಿ ಬಾಣರಸನು ಬೃಹತ್ ಸೇನೆಯನ್ನು ಕಟ್ಟಿರಬಹುದು.

ಬಾಣದೊರೆ ವಿಕ್ರಮಾದಿತ್ಯ ಮತ್ತು ಬಾಣ ಮಹಾದೇವಿ ಮಾರಕ ನಿಮ್ಮಡಿಯರ ಮಗನಾದ ವಿಜಯಾದಿತ್ಯ ಪ್ರಭು ಮೇರುವು ಸಮರ್ಥ ಬಾಣ ಚಕ್ರವರ್ತಿಯಾಗಿದ್ದನು. ಕ್ರಿ.ಶ.೮೯೮ರಿಂದ ೯೦೯ರವರೆಗೆ ಈತನು ರಾಜ್ಯಭಾರವನ್ನು ನಡೆಸಿದ್ದನೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಈತನಿಗೆ ವಿಜಯಾದಿತ್ಯ, ವೀರಚೂಡಾಮಣಿ ಮತ್ತು ಪ್ರಭುಮೇರು ಮೊದಲಾದ ಬಿರುದುಗಳಿದ್ದವು. ಜಯನಂದಿವರ್ಮನ ಪುತ್ರನೂ ವಿಜಯಾದಿತ್ಯನೆಂಬ ಹೆಸರುಳ್ಳವನಾಗಿದ್ದುದರಿಂದ ಈ ವಿಜಯಾದಿತ್ಯನನ್ನು ಇಮ್ಮಡಿ ವಿಜಯಾದಿತ್ಯನೆಂದು ಇತಿಹಾಸಶಾಸ್ತ್ರಜ್ಞರು ತೀರ್ಮಾನಿಸಿದ್ದಾರೆ. ರಾಮಚಂದ್ರಪುರ ಗ್ರಾಮದ ವೀರಗಲ್ಲು ಶಾಸನವು[೧೧] ವಿಜಯಿತ್ತ ಬಾಣರಸನೆಂದು ರಾಜನನ್ನು ಹೆಸರಿಸುತ್ತಿದೆ. ವಿಜಯಿತ್ತ ಎನ್ನುವುದು ವಿಜಯಾದಿತ್ಯ ಶಬ್ದದ ರೂಪಾಂತರವಾಗಿದೆ. ಇದೇ ರೀತಿಯಾದ ಮಾಹಿತಿಯು ಮುತ್ತುಗ ಪಲ್ಲಿಯ ಶಾಸನವು ತಿಳಿಸುತ್ತಿದ್ದು[೧೨] ರಾಜನನ್ನು ಶ್ರೀಬಿಜಯಿತ್ತಯ್ಯ ಎಂದು ಕರೆದಿದೆ. ಈ ಶಾಸನವು ರಾಜನಿಗೆ ಸಂಬಂಧಿಸಿದಂತಹ ಹೆಚ್ಚಿನ ಮಾಹಿತಿಗಳನ್ನು ನೀಡದೆ ಈ ಪ್ರದೇಶದಲ್ಲಿ ಬಾಣರಸರ ಆಳ್ವಿಕೆಯು ಇತ್ತೆಂಬ ವಿಚಾರವನ್ನು ಸಮರ್ಥಿಸುತ್ತದೆ.

ಈ ರಾಜನಿಗೆ ಸಂಬಂಧಿಸಿದಂತಹ ಗೊಲ್ಲಹಳ್ಳಿ ಗ್ರಾಮದ ವೀರಗಲ್ಲು[೧೩] ಶಾಸನವು ವಿಶೇಷವಾಗಿದೆ. ಈ ಶಾಸನವು ರಾಜನನ್ನು ಬಿಜೆಯಿತ್ತ ಎಂದು ಹೆಸರಿಸಿದ್ದು, ಇದು ವಿಜಯಾದಿತ್ಯನನ್ನು ಸೂಚಿಸುತ್ತದೆ. ಬಾಣರಸರು ವಸ್ತುತಃ ಪರಾಧೀನರಾಗಿಯೂ ಸಾಮಂತರಾಜರಾಗಿಯೂ ಆಳ್ವಿಕೆ ನಡೆಸಿದ್ದರು. ಆದರೆ ಇಮ್ಮಡಿ ವಿಜಯಾದಿತ್ಯನ ಆಳ್ವಿಕೆಯ ಸಮಯದಲ್ಲಿ ಸ್ವತಂತ್ರ ರಾಜನಾಗಿ ಆಳ್ವಿಕೆ ನಡೆಸಿರಬಹುದು. ಹಾಗಾಗಿ ನೆರೆಹೊರೆಯ ಪ್ರತಿಷ್ಠಿತ ಅರಸು ಮನೆತನದವರಂತೆ ಇವರು ಶಕವರ್ಷದ ಗಣನೆಯನ್ನು ಬಳಸಿಕೊಂಡಿರಬಹುದು ಎಂದು ಪಿ.ವಿ.ಕೃಷ್ಣಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.[೧೪]

ಬಾಣರಸರ ಶಾಸನಗಳಲ್ಲಿ ಕುವಲಾಲ ಪುರಾವರಾಧೀಶ್ವರ ಎಂಬ ಪ್ರಯೋಗವಾಗಿರುವಂತೆ ನಂದಗಿರಿನಾಥ, ಪರುವಿಪುರಾವರಾಧೀಶ್ವರ ಮೊದಲಾದ ಉಲ್ಲೇಖಗಳು ಕಂಡುಬರುತ್ತವೆ. ಬಾಣರಸರು ನಂದಗಿರಿಯನ್ನು ತಮ್ಮ ಕೇಂದ್ರಸ್ಥಾನವನ್ನಾಗಿರಿಸಿಕೊಂಡು ರಾಜ್ಯಭಾರವನ್ನು ಮಾಡಿದ್ದರು. ನಂತರದ ಕಾಲದಲ್ಲಿ ಪರುವಿ ಪ್ರದೇಶವನ್ನು ರಾಜಧಾನಿಯನ್ನಾಗಿರಿಸಿಕೊಂಡು ರಾಜ್ಯಭಾರವನ್ನು ಮಾಡಿದ್ದರು. ನಂದಗಿರಿಯು ಪ್ರಸ್ತುತಃ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿದುರ್ಗ ಅಥವಾ ನಂದಿಬೆಟ್ಟವೆಂದು ಮತ್ತು ಪರುವಿ ಎಂಬ ಪ್ರದೇಶವು ನಂದಿಗಿರಿಯಿಂದ ಉತ್ತರಕ್ಕಿರುವ ಪ್ರಸ್ತುತ ಆಂಧ್ರಪ್ರದೇಶದಲ್ಲಿರುವ 'ಪರಗಿ' ಎಂದು ಗುರುತಿಸಲಾಗಿದೆ. ಬಾಣರಸರು ಪರುವಿಯನ್ನು ರಾಜಧಾನಿಯನ್ನಾಗಿರಿಸಿಕೊಂಡು ಆಂಧ್ರಪ್ರದೇಶದ ನೈರುತ್ಯ ಭಾಗ ಮತ್ತು ತಮಿಳುನಾಡಿನ ವಾಯುವ್ಯ ಭಾಗಗಳನ್ನೊಳಗೊಂಡಂತೆ ಕೋಲಾರ ಮತ್ತು ಬೆಂಗಳೂರಿನ ಕೆಲವು ಭಾಗಗಳನ್ನು ಆಳ್ವಿಕೆ ನಡೆಸುತ್ತಿದ್ದರು. ಬಾಣರಸರುಗಳ ಶಾಸನಗಳಲ್ಲಿ ಉಲ್ಲೇಖವಾಗಿರುವ ಪ್ರಮುಖ ಶಬ್ದವೆಂದರೆ 'ಪೆರುಂಬಾಣಪ್ಪಾಡಿ'. ಆದರೆ ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಶಾಸನಗಳಲ್ಲಿ ಈ ಶಬ್ದವು ಉಲ್ಲೇಖವಾಗದಿದ್ದರೂ ವಿಕ್ರಮಾದಿತ್ಯ ಮತ್ತು ವಿಜಯಾದಿತ್ಯರ ಶಾಸನಗಳಲ್ಲಿ ಕಂಡುಬರುವಂತೆ ಬಾಣರಸರಿಗೆ ಬೃಹತ್ ಸೈನ್ಯವಿತ್ತೆಂಬ ಮಾತನ್ನು ಈ ಶಬ್ದವು ಪುಷ್ಟೀಕರಿಸುತ್ತದೆ. ಪೆರುಂ+ಬಾಣ ಎಂಬೆರಡು ಶಬ್ದಗಳನ್ನು ಸೇರಿಸಿದಾಗ ಪೆರುಂಬಾಣವೆಂಬ ಶಬ್ದವಾಗುವುದು.

ತಮಿಳು ಭಾಷೆಯಲ್ಲಿ ಪೆರುಂ ಎಂಬ ಶಬ್ದಕ್ಕೆ ಬೃಹತ್ ಅಥವಾ ದೊಡ್ಡ ಎಂಬ ಅರ್ಥವಿರುವುದು. ಹಾಗಾಗಿ ಪೆರುಂಬಾಣವಾಡಿ ಎಂದರೆ ಬೃಹತ್ ಬಾಣರ ಪ್ರದೇಶವೆಂಬ ಅರ್ಥ ಬರುವುದು. ಕೆಲವು ಶಾಸನಗಳಲ್ಲಿ ಪೆರ್ಬಾಣಪ್ಪಾಡಿ ಎಂದು ಉಲ್ಲೇಖವಾಗಿದ್ದು ಇದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಮತ್ತು ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳ ಗಡಿಪ್ರದೇಶವನ್ನು ಸೇರಿಸಿಕೊಂಡಿರುವ ಪ್ರದೇಶವಾಗಿತ್ತು.

ಬಾಣವಂಶದವರ ಅಧಿಕ ಶಾಸನಗಳು ಆಂಧ್ರಪ್ರದೇಶದ ನೈರುತ್ಯದಲ್ಲಿ ದೊರಕಿವೆ. ಮೊದಲು ಪಲ್ಲವ ದೊರೆಗಳಿಗೆ ಸಾಮಂತರಾಗಿದ್ದಂತಹ ಬಾಣರು ಕೆಲವು ಕಾಲ ಕದಂಬರೊಂದಿಗೆ ಮೈತ್ರಿಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ ಕದಂಬರಿಗೆ ಅಧೀನರಾಗಿದ್ದಂತಹ ಬಾಣರ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಲು ಗಂಗ ಅರಸನಾದ ಕೊಂಗುಣಿವರ್ಮ (ಕ್ರಿ.ಶ.೩೯೦-೪೨೫)ನನ್ನು ಪಟ್ಟಾಭಿಷೇಕಗೊಳಿಸಿದ್ದನು ಎಂದು ಗಂಗರ ಶಾಸನವೊಂದು[೫] ತಿಳಿಸುತ್ತದೆ. ಶಾಸನವು **"ಕೊಂಗುಣಿ ನಾಮಧೇಯ ಯೋ ಬಾಣಮಂಡಲ ಜಯಾಯ ಕೃತಾಭಿಷೇಕ"** ಎಂದು ಪಲ್ಲವರಾಜನು ಬಾಣಮಂಡಲವನ್ನು ಜಯಿಸುವುದಕ್ಕಾಗಿ ಕೊಂಗುಣಿ ಎಂಬುವವನನ್ನು ಪಟ್ಟಾಭಿಷೇಕ ಗೊಳಿಸಿದ್ದನೆಂದು ವರ್ಣಿಸಿದೆ. ಈ ಶಾಸನವನ್ನು ಗಮನಿಸಿದರೆ ಪಲ್ಲವರಿಗೂ ಬಾಣರಿಗೂ ಪರಸ್ಪರ ಮಿತ್ರತ್ವವಿದ್ದರು ರಾಜ್ಯದ ವಿಷಯದಲ್ಲಿ ವೈರತ್ವವಿದ್ದುದು ಗಮನಿಸಬಹುದಾಗಿದೆ. ಗಂಗರಿಗೂ, ಪಲ್ಲವರಿಗೂ ಪರಸ್ಪರ ಮಿತ್ರತ್ವವಿದ್ದುದು ಸ್ವತಃ ಪಲ್ಲವರಸರೇ ಗಂಗ ದೊರೆಗಳನ್ನು ಪಟ್ಟಾಭಿಷಕ್ತಗೊಳಿಸಿದ್ದರು. ಬಾಣರಿಗೆ ಕೇಂದ್ರಸ್ಥಾನವಾಗಿದ್ದಂತಹ ಪರುವಿ ಮತ್ತು ಕುವಳಾಲಪುರವನ್ನು ಗಂಗರು ಆಕ್ರಮಿಸಿಕೊಂಡು ಕುವಳಾಲಪುರವರಾಧೀಶ್ವರ ಎಂಬ ಬಿರುದನ್ನು ಗಳಿಸಿದ್ದರೆಂದು ಭಾಸವಾಗುತ್ತದೆ. ಬಂಗಾರಪೇಟೆಯ ಶಾಸನವು ಬಾಣರಸರು ಗಂಗರ ಸಾಮಂತರಾಗಿದ್ದುಕೊಂಡು ಎರೆಗೆರೆನಾಡು೭೦ ಆವನ್ಯನಾಡು ಮತ್ತು ಪೊಕ್ಕುಂದ೧೨ನ್ನು ಆಳುತ್ತಿದ್ದರು ಎಂದು ತಿಳಿಸುತ್ತದೆ. ಈ ರೀತಿಯಾಗಿ ಬಾಣರು ಸ್ವತಂತ್ರವಾಗಿ ಆಳ್ವಿಕೆಯನ್ನು ನಡೆಸಲು ಅಸಮರ್ಥರಾಗಿದ್ದರೂ ಕೆಲವೊಮ್ಮೆ ಪಲ್ಲವರ ಮತ್ತೊಮ್ಮೆ ಗಂಗರೊಂದಿಗೆ ಸಾಮಂತರಾಗಿದ್ದುಕೊಂಡು ಕೋಲಾರ ಪ್ರದೇಶದ ಪ್ರಾಂತ್ಯಗಳನ್ನು ಆಳ್ವಿಕೆ ನಡೆಸಿದ್ದರೆಂದು ವೇದ್ಯವಾಗುತ್ತದೆ.

೨.೨.೭. ನೊಳಂಬರು

ಕೋಲಾರ ಜಿಲ್ಲೆಯಲ್ಲಿ ದೊರಕುವಂತಹ ಹಲವಾರು ವೀರಗಲ್ಲು ಶಾಸನಗಳಲ್ಲಿಯೂ ಮತ್ತು ದಾನಶಾಸನಗಳಲ್ಲಿಯೂ ನೊಳಂಬ ಶಬ್ದವು ಪ್ರಸ್ತಾಪವಾಗಿದೆ. ಹೆಚ್ಚಾಗಿ ಪಲ್ಲವ ಶಬ್ದದೊಂದಿಗೆ ಪ್ರಸ್ತಾಪವಾಗಿರುವಂತಹ ನೊಳಂಬಶಬ್ದವು ಕೋಲಾರ ಜಿಲ್ಲೆಯಲ್ಲಿ ತನ್ನದೇ ಆದಂತಹ ಸ್ಥಾನವನ್ನು ಹೊಂದಿದೆ. ದೇವಾಲಯಗಳ ನಿರ್ಮಾಣದಲ್ಲಿ ತಮ್ಮದೇ ಆದಂತಹ ಶೈಲಿಯನ್ನು ಗುರುತಿಸಿಕೊಂಡಿದ್ದಂತಹ ನೊಳಂಬರು ಸಾಮಂತರಾಜರಾಗಿದ್ದಂತೆ ಭಾಸವಾಗುತ್ತದೆ. ಕದಂಬ, ಗಂಗ, ಚಾಳುಕ್ಯ, ರಾಷ್ಟ್ರಕೂಟ ಮೊದಲಾದ ಪ್ರಸಿದ್ಧರಾಜರು ಕರ್ನಾಟಕದ ಗತ ವೈಭವವನ್ನು ಮೆರೆದಂತೆ ಮಹಾಮಂಡಳೇಶ್ವರರೂ, ಮಹಾಸಾಮಂತರೂ ಅಷ್ಟೇ ಪ್ರಭಾವವನ್ನು ಮೆರೆದಿದ್ದರು. ಅಂತಹ ಮಹಾ ಸಾಮಂತರು, ಮಹಾಮಂಡಳೇಶ್ವರರಲ್ಲಿ ನೊಳಂಬರು ಪ್ರಮುಖವಾಗಿದ್ದಾರೆ. ಹಲವಾರು ರಾಜಮನೆತನಗಳಿಗೆ ಅಧೀನರಾಗಿದ್ದುಕೊಂಡು ಕ್ರಿ.ಶ.ಸುಮಾರು ೭೫೦ರಿಂದ ೧೦೫೪ರವರೆಗೆ ಇಂದಿನ ಅವಿಭಜಿತ ಕೋಲಾರ ಜಿಲ್ಲೆಯನ್ನೊಳಗೊಂಡಂತೆ ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಸಣ್ಣ ಪ್ರಾಂತ್ಯದಲ್ಲಿ ಆಳ್ವಿಕೆ ನಡೆಸಿದಂತಹ ನೊಳಂಬರು ನೊಳಂಬವಾಡಿ೩೨೦೦೦ ಪ್ರದೇಶವನ್ನು ಆಳುತ್ತಿದ್ದರು. ಈ ಪ್ರದೇಶವು ಇಂದಿನ

ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು, ಬಳ್ಳಾರಿ, ಅನಂತಪುರ, ಧರ್ಮಪುರಿ ಮೊದಲಾದ ಜಿಲ್ಲೆಗಳನ್ನೊಳಗೊಂಡಿತ್ತು.

ಹೇಮಾವತಿ ಶಾಸನದಲ್ಲಿ ಉಲ್ಲೇಖಗೊಂಡಿರುವಂತಹ 'ಹೆಂಜೇರು' ಇವರ ರಾಜಧಾನಿಯಾಗಿದ್ದು, ಇದು ಆಂಧ್ರಪ್ರದೇಶ ರಾಜ್ಯದ ಅನಂತಪುರದ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಇಂದಿನ 'ಹೇಮಾವತಿ' ಪ್ರದೇಶವಾಗಿದೆ. ಕಮಲದ ಮೇಲೆ ಮಲಗಿರುವ ನಂದಿಯ ಲಾಂಛನವನ್ನು ಹೊಂದಿದ್ದಂತಹ ನೊಳಂಬರನ್ನು ಕರ್ನಾಟಕದ ಪಲ್ಲವರೆಂದೂ ಕರೆದಿರುವುದಿದೆ. ದಕ್ಷಿಣ ಭಾರತದಲ್ಲಿ ತಮಿಳುನಾಡಿನ 'ಕಾಂಚೀಪುರ' ಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದ್ದಂತಹ ಪಲ್ಲವರ ವಂಶದಿಂದಲೇ ನೊಳಂಬ ಮನೆತನವು ಮುಂದುವರೆದಿದ್ದರೂ ಲಾಂಛನವನ್ನು ಬದಲಾಯಿಸಿಕೊಂಡಿರುವುದರಿಂದ ಕಂಚಿಯ ಪಲ್ಲವರು ಇವರ ಮೂಲವಲ್ಲವೆಂಬ ಸಂದೇಹ ಬರುತ್ತದೆ. ಪಲ್ಲವರ ಉಲ್ಲೇಖವು ಕರ್ನಾಟಕದ ಹಲವಾರು ಶಾಸನಗಳಲ್ಲಿ ಕಂಡುಬರುತ್ತದೆ. ಕರ್ನಾಟಕದ ಮೊದಲ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಕಾಕುಸ್ಥವರ್ಮನು ಕೇಕಯ, ಪಲ್ಲವರೊಡನೆ ಯುದ್ಧವನ್ನು ಮಾಡಿರುವಂತಹ ಉಲ್ಲೇಖವಿದೆ.

ಇದಲ್ಲದೆಯೇ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಹಿರೇಹಡಗಲಿ ಶಾಸನ ಮಯೂರಶರ್ಮನ ಚಂದ್ರವಳ್ಳಿ ಶಾಸನ, ಕಾಕುಸ್ಥವರ್ಮನ ತಾಳಗುಂದ ಶಾಸನ ಸೇರಿದಂತೆ ಕ್ರಿ.ಶ.೪ ಮತ್ತು ೫ನೆಯ ಶತಮಾನಕ್ಕೆ ಸೇರಿದ ಹಲವಾರು ಕದಂಬಶಾಸನಗಳು ಪಲ್ಲವರನ್ನು ಉಲ್ಲೇಖಿಸಿದೆ. ಹಾಗಾಗಿ ಪಲ್ಲವರು ಕದಂಬರ ಆಳ್ವಿಕೆಯ ಕಾಲದಲ್ಲಿ ನಿರಂತರವಾಗಿ ಆಕ್ರಮಣಗಳನ್ನು ಮಾಡುತ್ತಿದ್ದರು. ಕದಂಬರು ಕಂಚಿಯ ಪಲ್ಲವರನ್ನು ಎದುರಿಸಿ ಕರ್ನಾಟಕದಿಂದ ಹೊರದೂಡುವಲ್ಲಿ ಸಫಲರಾಗಿದ್ದರು. ಈ ರೀತಿಯಾಗಿ ಕದಂಬರ ವಿರೋಧವನ್ನು ಪ್ರಬಲವಾಗಿ ಎದುರಿಸಿದಂತಹ ಪಲ್ಲವರು ಕರ್ನಾಟಕದ ಕೆಲವು ಸಣ್ಣ ಸಣ್ಣ ಪ್ರದೇಶಗಳಲ್ಲಿ ಆಳ್ವಿಕೆಯನ್ನು ನಡೆಸಿದ್ದರು. ಅಂತಹ ರಾಜರುಗಳಲ್ಲಿ ನೊಳಂಬರು ಪ್ರಮುಖರು. ಆದರೆ ಪಲ್ಲವರೊಂದಿಗೆ ನೊಳಂಬರ ಸಂಬಂಧವು ಎಲ್ಲಿಂದ ಪ್ರಾರಂಭವಾಯಿತೆಂಬುವುದರ ಸ್ಪಷ್ಟ ಚಿತ್ರಣವು ದೊರಕುತ್ತಿಲ್ಲ.

ಇತಿಹಾಸಕಾರರು ನೊಳಂಬ ಸಂಬಂಧವನ್ನು ಗಂಗ ವಂಶದೊಂದಿಗೆ ಸೇರಿಸುತ್ತಾರೆ. ಪಲ್ಲವ ವಂಶವು ಹಲವಾರು ಪರಾಕ್ರಮಿ ರಾಜರುಗಳನ್ನು ಹೊಂದಿದ್ದು, ಅವರಲ್ಲಿ ಮುಮ್ಮಡಿ ನರಸಿಂಹವರ್ಮ ಪ್ರಖ್ಯಾತನು. ಈತನು ಚಾಲುಕ್ಯ ದೊರೆ ವಿಕ್ರಮಾದಿತ್ಯನ ಮಗನಾದ ವಿನಯಾದಿತ್ಯನಿಂದ ಪರಾಜಿತನಾಗಿದ್ದನು. ಈ ಸಂದರ್ಭದಲ್ಲಿ ಅನಾಥರಾದಂತಹ ಮುಮ್ಮಡಿ ನರಸಿಂಹವರ್ಮನ ಮೊಮ್ಮಕ್ಕಳನ್ನು ಗಂಗ ಅರಸರ ದೊರೆ ಭೂವಿಕ್ರಮನು (ಕ್ರಿ.ಶ.೬೬೯ – ೬೭೯) ತನ್ನ ರಾಜ್ಯಕ್ಕೆ ಕರೆದುಕೊಂಡು ಹೋಗಿ ಸಾಕಿ ಸಲಹಿದನು. ಈ ಮಕ್ಕಳೇ ಬೆಳೆದು ದೊಡ್ಡವರಾಗಿ ಪಲ್ಲವರ ಮೂಲವುಳ್ಳಂತಹ 'ಪಲ್ಲವ ನೊಳಂಬ' ಎಂಬ ಹೊಸ ಶಾಖೆಯನ್ನೇ ಪ್ರಾರಂಭಿಸಿದರು.[೯೬]

ನೊಳಂಬ ಚರಿತ್ರೆಯನ್ನು ಸಂಪೂರ್ಣವಾಗಿ ತಿಳಿಸುವಂತಹ ಹೇಮಾವತಿ ಶಾಸನವು[೯೭] ತ್ರಿನೇತ್ರ ಪಲ್ಲವನನ್ನು ಪಲ್ಲವ ನೊಳಂಬ ಶಾಖೆಯ ಮೂಲಪುರುಷನೆಂದು ತಿಳಿಸುತ್ತಿದೆ. ತಲಕಾಡಿನ ಗಂಗ ಅರಸರಿಗೂ ಕಂಚಿಯ ಪಲ್ಲವರಸರಿಗೂ ಮೊದಲಿನಿಂದಲೂ ಮಹಾರಾಜ ಮತ್ತು ಮಾಂಡಲಿಕ ಸಂಬಂಧಗಳಿದ್ದು ಕಂಚಿಯ ಪಲ್ಲವರಸರು ಗಂಗರಸರಿಂದ ಹಲವಾರು ರೀತಿಯಲ್ಲಿ ಉಪಕೃತರಾಗಿದ್ದಾರೆ. ತಲಕಾಡಿನ ಗಂಗರ ಸಾಮಂತರಾಗಿ ಆಳ್ವಿಕೆ ಆರಂಭಿಸಿದ ನೊಳಂಬರು, ಕ್ರಮೇಣ ರಾಜಕೀಯ ಏರುಪೇರಿನ ಲಾಭ ಪಡೆದು, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಮಾಂಡಲೀಕರಾಗಿ ಆಳಿದರು. ಸಾಂದರ್ಭಿಕವಾಗಿ ಚೋಳ, ಬಾಣ, ವೈದುಂಬರನ್ನು ಯುದ್ಧಗಳಲ್ಲಿ

ಸದೆಬಡಿದು ತಲಕಾಡಿನ ಗಂಗರು, ರಾಷ್ಟ್ರಕೂಟರು, ಪಲ್ಲವರು, ಇಳವಂಜಿರಾಯರೊಂದಿಗೆ ಮಿತ್ರರಾಗಿ ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡು ಕೆಲವೊಮ್ಮೆ ಮಿತ್ರರಾಗಿ, ಕೆಲವೊಮ್ಮೆ ಶತ್ರುಗಳಾಗಿ ಹಲವಾರು ಯುದ್ಧಗಳನ್ನು ಎದುರಿಸಿ ಗೆದ್ದು ಸೋತತಂತಹ ವೀರರೆನಿಸಿಕೊಂಡಿದ್ದಾರೆ. ಇಳವಂಜಿರಾಯರ ಪ್ರಸಿದ್ಧರಾಜನಾದ ಕೂತ್ತಾಡುನ್ ದೇವನ ರಾಣಿಯಾದ ಶಂಗಾಳ್ವಾರ್[೯೮] ಎಂಬುವವಳು ನೊಳಂಬಾಧಿರಾಯರ ಮಗಳೆಂದು ತಿಳಿದು ಬರುತ್ತದೆ. ಈ ರೀತಿಯಾಗಿ ನೊಳಂಬರು ಪ್ರಸಿದ್ಧ ರಾಜಮನೆತನದವರೊಂದಿಗೆ ಮಾತ್ರವಲ್ಲದೆಯೇ ಇತರ ಸಾಮಂತರಾಜರೊಂದಿಗೂ ಸಂಬಂಧವನ್ನು ಇರಿಸಿಕೊಂಡಿದ್ದರು.

'ನೊಳಂಬ ಇತಿಹಾಸ ದರ್ಶನ' ಪುಸ್ತಕದಲ್ಲಿ ಬಸವಲಿಂಗಪ್ಪನವರು ನೊಳಂಬ ಶಬ್ದವನ್ನು ಹಲವಾರು ರೀತಿಯಲ್ಲಿ ಅರ್ಥೈಸಿದ್ದಾರೆ.[೯೯] ಬಾಣರಸರಂತೆ ನೊಳಂಬ ಅರಸರಿಗೂ ಕೂಡಾ ಪೌರಾಣಿಕ ಕಥೆಯನ್ನು ಅಥವಾ ಐತಿಹ್ಯವನ್ನು ಜೋಡಿಸಲು ಪ್ರಯತ್ನಿಸಿದರೂ ಅದಕ್ಕೆ ಸರಿಯಾದಂತಹ ಆಧಾರಗಳು ದೊರೆಯುವುದಿಲ್ಲ. ಇದರ ಪ್ರಕಾರ ರಾಮಾಯಣದ ಕಥೆಯಲ್ಲಿ ಬರುವಂತೆ ರಾವಣನ ಕಿರಿಯ ಸಹೋದರನಾದ ಕುಂಭಕರ್ಣನಿಗೆ ನಿಕುಂಭ ಮತ್ತು ಕುಂಭ ಎಂಬ ಇಬ್ಬರು ಪುತ್ರರಿದ್ದರು.[೧೦೦] ಕುಂಭಕರ್ಣನ ಪುತ್ರನಾದ ನಿಕುಂಭನು ನೊಳಂಬ ವಂಶದ ಮೂಲಪುರುಷನೆಂದು ಅಭಿಪ್ರಾಯ ಪಡುತ್ತಾರೆ. ಸಂಕ್ಷಿಪ್ತ ಕನ್ನಡ ನಿಘಂಟಿನಲ್ಲಿ ನೊಳ ಅಥವಾ ನುಳ್ ಶಬ್ದಕ್ಕೆ ನುಗ್ಗುವುದು, ಮುಂದುವರಿಯುವುದು, ನಾಯಕತ್ವ ವಹಿಸು ಎಂಬ ಅರ್ಥ ಬರುವುದು. ಹಾಗಾಗಿ ಈ ಅರ್ಥವನ್ನು ತೆಗೆದುಕೊಂಡರೆ ನುಗ್ಗಿ ಹೋಗುವಂತಹ ಸ್ವಭಾವ ಉಳ್ಳ ರಾಜರನುಳ್ಳ ಮನೆತನದವರನ್ನು ನೊಳಂಬರೆಂದು ಕರೆದಿರಬಹುದೆಂದು ಜಯಮ್ಮ ಕರಿಯಣ್ಣನವರ ಅಭಿಪ್ರಾಯವಾಗಿದೆ.[೧೦೧]

ನೊಳಂಬ ಅರಸರು ಕೋಲಾರ ಜಿಲ್ಲೆಯ ಪಾಲಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಕಲೆ, ಸಂಸ್ಕೃತಿ ಮತ್ತು ರಾಜನೀತಿಕವಾಗಿ ಪ್ರಬಲವಾದಂತಹ ಕೊಡುಗೆಗಳನ್ನು ನೀಡಿದಂತಹ ನೊಳಂಬ ವಂಶದಲ್ಲಿ ಹಲವಾರು ಪ್ರಖ್ಯಾತ ರಾಜರುಗಳು ಆಳ್ವಿಕೆ ನಡೆಸಿದ್ದರು.

ನೊಳಂಬರ ವಂಶಾವಳಿ

- ಈಶ್ವರ ವಂಶ
  - ತ್ರಿನಯನ ಪಲ್ಲವರಸ
    - ಮಂಗಳ ನೊಳಂಬಾಧಿರಾಜ
      - ಸಿಂಹಪೋತ ಕಲಿ ನೊಳಂಬಾಧಿರಾಜ ಕೊಲ್ಲಿಯರಸ
        - ಚಾರು ಪೊನ್ನೇರ ಪಲ್ಲವಾಧಿರಾಜ
          - ಪೊಳಲ್ಚೋರ ನೊಳಂಬಾಧಿರಾಜ
            - ಮಹೇಂದ್ರಾಧಿರಾಜ
              - ನನ್ನಿಗ ಅಯ್ಯಪದೇವ(ಬೀರನೊಳಂಬ)
                - ಬೀರನೊಳಂಬ
                - ಇರಿವನೊಳಂಬ ದಿಲೀಪಯ್ಯ
                  - ನನ್ನಿನೊಳಂಬ
                    - ಇಮ್ಮಡಿ ಪೊಳಲ್ಚೋರ
                      - ವೀರಮಹೇಂದ್ರ ನೊಳಂಬಾಧಿರಾಜ
                        - ಇರಿವ ನೊಳಂಬ ಘಟೆಯಂಕಕಾರದೇವ
                  - ಇರಿವನೊಳಂಬ ನೊಳಪಯ್ಯ
                    - ಅಯ್ಯಪದೇವ
            - ನೊಳಂಬಾಧಿರಾಜ ಸೊಳೆಪಯ್ಯ (ಇರಿವ ನೊಳಂಬ)

ಆಧಾರ : ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಜಯಮ್ಮ ಕರಿಯಣ್ಣ

ನೊಳಂಬರ ವಂಶಾವಳಿಯ ಕುರಿತಾಗಿ ಹಲವಾರು ಭಿನ್ನಾಭಿಪ್ರಾಯಗಳಿದ್ದು ವಂಶಾವಳಿಯನ್ನು ನಿರ್ಧರಿಸಲು ಹೇಮಾವತಿ ಶಾಸನವೇ[illegible] ಆಧಾರವಾಗಿದೆ.

ನೊಳಂಬರ ವಂಶವನ್ನು ನಿರ್ಧರಿಸುವಂತಹ ಹೇಮಾವತಿ[೧೦೨] ಶಾಸನದ ಪ್ರಕಾರ ಈಶ್ವರನ ವಂಶದಲ್ಲಿ ಹುಟ್ಟಿದಂತಹ ತ್ರಿನಯನ ಎಂಬುವವನು ನೊಳಂಬ ವಂಶದ ಮೊದಲ ದೊರೆಯಾಗಿದ್ದನು. ತ್ರಿನಯನ ಪಲ್ಲವನೆಂದು ಕರೆಯಲ್ಪಡುತ್ತಿದ್ದಂತಹ ಈತನ ವಿಚಾರವಾಗಿ ಮತ್ತು ಮೂಲ ಪುರುಷನ ವಿಚಾರವಾಗಿ ಹಲವಾರು ಭಿನ್ನಾಭಿಪ್ರಾಯಗಳಿವೆ. ತೆಲುಗು ಚೋಡರ ಮೂಲಪುರುಷನೂ ಮತ್ತು ನೊಳಂಬರ ಪೂರ್ವಜನೂ ಒಬ್ಬನೇ ಎಂದು ಅಭಿಪ್ರಾಯಗಳಿವೆ. ಈ ತ್ರಿನಯನು ಕ್ರಿ.ಶ.೮ನೆಯ ಶತಮಾನದಲ್ಲಿ ಬಾದಾಮಿಯನ್ನು ಆಳುತ್ತಿದ್ದ ಚಾಲುಕ್ಯ ದೊರೆ ವಿಜಯಾದಿತ್ಯನಿಂದ ಸೋತಂತಹ ವ್ಯಕ್ತಿಯೇ ಆಗಿದ್ದಾನೆಂದು ಅಭಿಪ್ರಾಯವಿದೆ.[೧೦೩]

ತ್ರಿನಯನ ಪಲ್ಲವನ ಕುಲದಲ್ಲಿ ನೊಳಂಬಾಧಿರಾಜ ಮಂಗಲನೆಂಬ ರಾಜನು ಪ್ರಸಿದ್ಧಿಗೆ ಬಂದನು. ಈತನು ಕಿರಾತನೃಪತಿಯನ್ನು ಯುದ್ಧದಲ್ಲಿ ಸೋಲಿಸಿದುದರಿಂದ ಬಹಳವಾಗಿ ಪ್ರಶಂಸೆಗೊಳಗಾಗಿದ್ದನು. ಈ ಸಂದರ್ಭದಲ್ಲಿ ಕರ್ಣಾಟಕದಲ್ಲಿ ಪ್ರಸಿದ್ಧರಾಗಿದ್ದಂತಹ ರಾಜರೆಂದರೆ ಚಾಳುಕ್ಯರು, ಹಾಗಾಗಿ ನೊಳಂಬರು ಈ ಕಾಲದಲ್ಲಿ ಚಾಳುಕ್ಯರ ಸಾಮಂತರಾಗಿಯೂ ಅಥವಾ ಅವರ ಅಧೀನರಾಗಿಯೂ ಇದ್ದರು. ಮಂಗಲ ನೊಳಂಬಾಧಿರಾಜನ ಪುತ್ರನು ಸಿಂಹ ಪೋತನು. ಈತನೇ ನೊಳಂಬರಲ್ಲಿ ಶಾಸನೋಕ್ತ ಹೆಸರು ಪಡೆದಂತಹ ರಾಜರುಗಳಲ್ಲಿ ಮೊದಲಿಗನು. ಈತನಿಗೆ 'ಕಲಿನೊಳಂಬಾಧಿರಾಜ'ನೆಂದೂ, 'ಕೊಲ್ಲಿಯರಸ'ನೆಂತಲೂ ಹೆಸರುಗಳಿವೆ. ಈತನ ಕಾಲದಲ್ಲಿ ನೊಳಂಬರು ಗಂಗ ದೊರೆಗಳೊಂದಿಗೆ ಸಖ್ಯವನ್ನು ಬೆಳೆಸಿಕೊಂಡು ರಾಷ್ಟ್ರಕೂಟರ ವಿರುದ್ಧವಾಗಿ ಯುದ್ಧಕ್ಕೆ ಹೋಗಿದ್ದರು. ಹಾಗಾಗಿ ಸಿಂಹಪೋತನ ಆಳ್ವಿಕೆಯ ಕಾಲದಲ್ಲಿ ಗಂಗ ಅರಸರಿಗೂ ಮತ್ತು ರಾಷ್ಟ್ರಕೂಟರ ನಡುವೆ ಯುದ್ಧಗಳು ನಡೆಯುತ್ತಲೇ ಇದ್ದರೂ ಸಿಂಹಪೋತನು ಗಂಗ ಅರಸರೊಂದಿಗೆ ಸಖ್ಯವನ್ನು ಮಾಡಿಕೊಂಡಿದ್ದನು.

ಆದರೆ ಸಿಂಹಪೋತನ ಮಗನಾದ ಚಾರುಪೊನ್ನೇರನು ಉತ್ತರಾಧಿಕಾರಿಯಾದ ನಂತರ ನೊಳಂಬರು ರಾಷ್ಟ್ರಕೂಟರ ಸಾರ್ವಭೌಮತೆಯನ್ನು ಬಳಸಿಕೊಂಡರು. **"ಪಂಚಮಹಾಶಬ್ದ ಶ್ರೀಪೃಥುವೀವಲ್ಲಭ ಪರಮೇಶ್ವರ ಪಲ್ಲವಾದಿಯರಸ"**ನೆಂದು ಶಾಸನಗಳಲ್ಲಿ ಹೊಗಳಲ್ಪಟ್ಟಿರುವಂತಹ ಈತನು ನೊಳಂಬ ೧೦೦೦ವನ್ನು ಮತ್ತು ನೀರ್ಗುಂದ ನಾಡನ್ನು ಆಳುತ್ತಿದ್ದನು. ಮಡಿವಾಳದ ಮೂಲೇಶ್ವರ ದೇವಾಲಯದ ವೀರಗಲ್ಲು ಶಾಸನವು[೧೦೪] ಗಂಗ ಅರಸರ ಮತ್ತು ನೊಳಂಬರ ಪರಸ್ಪರ ಮೈತ್ರಿಯನ್ನು ತಿಳಿಸುತ್ತದೆ. ಗಂಗ ದೊರೆ ನೀತಿಮಾರ್ಗ ಪೆರ್ಮಾನಡಿಗಳು, ಗಂಗವಾಡಿ೬೦೦೦ ವನ್ನು ಆಳುತ್ತಿದ್ದರೆ, ನೊಳಂಬಾಧಿರಾಜನು ಗಂಗ೬೦೦೦ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಆದರೆ ನೊಳಂಬಾಧಿರಾಜನ ಹೆಸರಿನ ಉಲ್ಲೇಖವಿರದಿದ್ದು ನೀತಿಮಾರ್ಗನ ಆಳ್ವಿಕೆಯ ಸಮಕಾಲೀನನು ಪೋಳಲ್ಚೋರನಾಗುತ್ತಾನೆ. ಅದಲ್ಲದೆಯೇ ಪೊಳಲ್ಚೋರನು ಗಂಗ ದೊರೆ ಒಂದನೆಯ ನೀತಿಮಾರ್ಗನ ಕೈಕೆಳಗೆ ಸಾಮಂತನಾಗಿ ಆಳ್ವಿಕೆ ನಡೆಸಿದ್ದನು. ಈ ಸಂದರ್ಭದಲ್ಲಿ ಗಂಗರಿಗೂ ನೊಳಂಬರಿಗೂ ಪರಸ್ಪರ ಮೈತ್ರಿಯಿದ್ದು, ಇವರು ಬಾಣರನ್ನು ಯುದ್ಧದಲ್ಲಿ ಎದುರಿಸಿದ್ದರೆಂದು ಶಾಸನದ ಮೂಲಕ ವೇದ್ಯವಾಗುತ್ತದೆ. ಕೋಲಾರ ಜಿಲ್ಲೆಯನ್ನೊಳಗೊಂಡಂತಹ ಗಂಗ೬೦೦೦ವು ಒಮ್ಮೆ ಸಂಪೂರ್ಣವಾಗಿ ನೊಳಂಬರಿಗೆ ಸೇರಿ ಹೋಗಿತ್ತು. ಕೋಲಾರ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶಗಳು, ಆಂಧ್ರಪ್ರದೇಶದ ಧರ್ಮಪುರಿ ಜಿಲ್ಲೆಯ ಭಾಗಗಳು, ಬೆಂಗಳೂರು ಜಿಲ್ಲೆಯ ಕೆಲವು ಭಾಗಗಳನ್ನೊಳಗೊಂಡಂತಹ ಗಂಗ೬೦೦೦ ಪ್ರದೇಶವನ್ನು ನೊಳಂಬರು ಗಂಗರಿಂದ ಉಡುಗೊರೆಯಾಗಿ ಪಡೆದಿದ್ದರು. ಕ್ರಿ.ಶ.೮೦೦ರ ಸುಮಾರಿಗೆ ರಾಜನಾಗಿದ್ದಂತಹ ಈತನು ಗಂಗ ದೊರೆ ಒಂದನೆಯ ರಾಚಮಲ್ಲನ ಮಗಳಾದ ಜಾಯಬ್ಬೆಯನ್ನು ಮದುವೆಯಾಗುವ ಮುಖಾಂತರ ನೊಳಂಬರು ಗಂಗರ ಸಖ್ಯವನ್ನು

ಬಲಪಡಿಸಿಕೊಂಡಿದ್ದರು. ಇವಳಲ್ಲದೆಯೇ ದೀವಲಾಂಬೆ ಎನ್ನುವ ಇನ್ನೊಬ್ಬಳು ಮಡದಿಯಿದ್ದು ಇವಳಿಂದ ನೊಳಂಬಾಧಿರಾಜ ನೊಳಪಯ್ಯನು ಇರಿವ ನೊಳಂಬನೆಂಬ ಮಗನನ್ನು ಪಡೆದನು.

ಹಿಂದೆ ತಿಳಿಸಿರುವಂತೆ ಪೊಳಲ್ಚೋರನ ಆಡಳಿತಾವಧಿಯಲ್ಲಿ ನೊಳಂಬರಿಗೂ ಬಾಣರಿಗೂ ಪರಸ್ಪರ ಕಲಹವು ಅಧಿಕವಾದಂತೆ ಕಂಡುಬರುತ್ತದೆ. ಮೊದಲು ನೊಳಂಬರ ವಶದಲ್ಲಿದಂತಹ ಪುಲಿನಾಡನ್ನು ಬಾಣರು ಆಕ್ರಮಿಸಿದ್ದರು. ತದನಂತರ ಗಂಗ೬೦೦೦ವನ್ನು ಆಕ್ರಮಣ ಮಾಡಿದರು. ಆದರೆ ಪೊಳಲ್ಚೋರನ ಮಗನಾದ ಒಂದನೆಯ ಮಹೇಂದ್ರನು ಆ ಪ್ರದೇಶಗಳನ್ನು ಪುನಃ ವಶಪಡಿಸಿಕೊಂಡನು. ಮಹತ್ವಾಕಾಂಕ್ಷಿ ದೊರೆಯಾಗಿದ್ದಂತಹ ಈತನು ನೊಳಂಬರ ಪ್ರಖ್ಯಾತ ದೊರೆಯಾಗಿದ್ದನು. ತನ್ನ ನೆರೆ ಹೊರೆಯಲ್ಲಿದ್ದ ಬಾಣ, ಚೋಳ, ವೈದುಂಬ ಮುಂತಾದ ಸಣ್ಣ ಸಣ್ಣ ರಾಜ್ಯಗಳನ್ನು ಕೈವಶ ಮಾಡಿಕೊಂಡನು. ನೊಳಂಬಳಿಗೆ ೧೦೦೦ ರಾಜ್ಯವನ್ನು ವಿಸ್ತರಿಸುವಲ್ಲಿ ಪ್ರಯತ್ನ ಮಾಡುತ್ತಿದ್ದಂತಹ ಈತನು ಗಂಗ ಅರಸರೊಂದಿಗೆ ಸಖ್ಯವನ್ನು ಮಾಡಿಕೊಂಡು ಗಂಗ ರಾಜಕುಮಾರಿ ಗಾಮಬ್ಬೆಯನ್ನು ಮದುವೆಯಾಗುವುದರ ಮೂಲಕ ಗಂಗ ಸಾಮ್ರಾಜ್ಯದ ಉತ್ತರಾಧಿಕಾರಿಯಾಗಲು ಹವಣಿಸುತ್ತಾನೆ. ಇದು ಗಂಗರಿಗೂ ಮತ್ತು ನೊಳಂಬರಿಗೂ ದ್ವೇಷ ಉಂಟಾಗಲು ಕಾರಣವಾಗುತ್ತದೆ.

ಮಹೇಂದ್ರನ ಕಾಲಕ್ಕೆ ಉಂಟಾದಂತಹ ಪ್ರಮುಖ ರಾಜಕೀಯ ಬದಲಾವಣೆಯೆಂದರೆ ಬಾಣರೊಂದಿಗಿನ ಯುದ್ಧ. ಸೂರೆಮಡಿ ಮುಂತಾದವು ಸ್ಥಳಗಳಲ್ಲಿ ನಡೆದಂತಹ ಯುದ್ಧಗಳು ಬಾಣರಿಗೂ ಮತ್ತು ವೈದುಂಬರಿಗೂ ಪರಸ್ಪರ ಶತ್ರುತ್ವವಿದ್ದುದನ್ನು ತಿಳಿಸುತ್ತದೆ. ಶ್ರೀನಿವಾಸಪುರ ತಾಲ್ಲೂಕು ಬಯ್ಯಪಳ್ಳಿ ಗ್ರಾಮದಲ್ಲಿರುವಂತಹ ವೀರಗಲ್ಲು ಶಾಸನವು[೧೦೫] ಶ್ರೀಪೃಥ್ವೀವಲ್ಲಭ ನೆಳೊಂದಯೂರ (ನೊಳಂಬರಸ) ಚೋಳು ಪೆರ್ಮಾನಡಿಗಳ್ (ಚೋಳ ಪೆರ್ಮಾನಡಿ) ಮತ್ತು ಮಯಿಂದಮರಸ ಈ ಮೂವರು ಕಿರುತೊರೆ ಎಂಬ ಪ್ರದೇಶದಲ್ಲಿ ಆಳುತ್ತಿರಲು ನಡೆದಂತಹ ಯುದ್ಧದ ಘಟನೆಯನ್ನು ತಿಳಿಸುತ್ತದೆ. ಪೆರ್ಮಾನಡಿ ಶಬ್ದವು ಗಂಗ ವಂಶದಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು, ಶಿವಮಾರನನ್ನು ಸೂಚಿಸುವಾಗ ಈ ಶಬ್ದವನ್ನು ಬಳಸಲಾಗಿದ್ದರೂ, ಈ ಶಾಸನದಲ್ಲಿ ಚೋಳು ಪೆರ್ಮಾನಡಿಗಳ್ ಎಂದು ಚೋಳ ವಂಶವನ್ನು ಪ್ರಸ್ತಾಪಿಸಲಾಗಿದೆ. ಮಯಿಂದಮರಸನು ನೊಳಂಬ ವಂಶಕ್ಕೆ ಸೇರಿದವನಾಗಿದ್ದು, ನೊಳಂಬ 'ಮಯ್ದಮರಸ' ಎಂದು ಪ್ರಸಿದ್ಧನಾಗಿದ್ದನು. ಆದರೆ ಇಲ್ಲಿ ಪ್ರಸ್ತುತವಾಗಿರುವಂತಹ ಮಯಿಂದಮರಸನು ವೈದುಂಬರಸರ ವಂಶಕ್ಕೆ ಸೇರಿದವನಾಗಿರಬಹುದು. ಆದರೆ ಕೋಲಾರ ಜಿಲ್ಲೆಯ ಶಿಡ್ಲಘಟ್ಟದ ತಾಲ್ಲೂಕಿನ ಶೆಟ್ಟಿಹಳ್ಳಿ ಶಾಸನದಲ್ಲಿ ನೊಳಂಬ ಅರಸರ ದೊರೆಗಳಲ್ಲಿ ಪ್ರಸಿದ್ಧನಾಗಿದ್ದಂತಹ ಒಂದನೆಯ ಮಹೇಂದ್ರನನ್ನು ಮಯಿದವರ್ಮ ಎಂದು ಉಲ್ಲೇಖಿಸಲಾಗಿದೆ. ಹಾಗಾಗಿ ಈ ಶಾಸನದಲ್ಲಿ ಹೇಳಿರುವಂತಹ ನೊಳಂಬ ಮಯಿದಮರಸನು ಒಂದನೆಯ ಮಹೇಂದ್ರನಾಗಿರಬಹುದು. ಚೋಳಪೆರ್ಮಾನಡಿ ಮತ್ತು ವೈದುಂಬರ ದೊರೆಯಾದ ಮಯಿಂದಮರಸನ ಸಹಾಯದೊಂದಿಗೆ ಕಿರುತೊರೆಯನ್ನು ತಮ್ಮ ರಾಜ್ಯದ ಗಡಿಯಾಗಿಸಿಕೊಂಡು ಆಳುತ್ತಿದ್ದನೆಂದು ಇತಿಹಾಸಕಾರರ ಅಭಿಪ್ರಾಯವಿದೆ.[೧೦೬]

ಮಹೇಂದ್ರನಿಗೆ 'ತ್ರಿಭುವನ ಧೀರ ಮಹಾಬಲಿ ಕುಲ ವಿಧ್ವಂಸಕ'ನೆಂಬ ಬಿರುದಿತ್ತು. ಗಂಗ ದೊರೆ ಎರೆಯಪ್ಪನಿಗೆ 'ಮಹೇಂದ್ರಾಂತಕ'ನೆಂಬ ಬಿರುದಿತ್ತು. ಹಾಗಾಗಿ ಮಹೇಂದ್ರನು ಈತನಿಂದ ಹತನಾಗಿರಬೇಕು. ಮಹೇಂದ್ರನಿಗೆ ಬಿಜ್ಜ ಮಹಾದೇವಿ, ಪರಮ ಮಹಾದೇವಿ, ಅಕ್ಕಬ್ಬೆ ಮತ್ತು ದೊಂಬಬ್ಬೆ ಮೊದಲಾದಂತಹ ರಾಣಿಯರಿದ್ದು ಗಂಗ ಮನೆತನದ ಗಾಮಬ್ಬೆಯು ಪಟ್ಟದ ರಾಣಿಯಾಗಿದ್ದಳು. ಇವರಿಬ್ಬರಿಗೆ ಅಯ್ಯಪದೇವನೆಂಬ ಪುತ್ರನಿದ್ದನು. ಕ್ರಿ.ಶ.೮೭೮ರಿಂದ ೮೯೭ರವರೆಗೆ ಆಳ್ವಿಕೆ ನಡೆಸಿದ್ದ, ಈತನು ರಾಷ್ಟ್ರಕೂಟ ದೊರೆ ಗೋವಿಂದ

ಆಳ್ವಿಕೆಯಲ್ಲೂ ಗಂಗ ದೊರೆ ನೀತಿಮಾರ್ಗ ಆಳ್ವಿಕೆಯಲ್ಲೂ ನೊಳಂಬವಾಡಿಯನ್ನು ಆಳುತ್ತಿದ್ದನು. ಈತನು ಗಂಗ ದೊರೆ ನೀತಿಮಾರ್ಗನ ಪ್ರಬಲವಾದ ಧಾಳಿಯನ್ನು ಎದುರಿಸಬೇಕಾಗಿ ಬಂದಂತಹ ಸಂದರ್ಭದಲ್ಲಿ ತಮ್ಮಿಂದ ತಪ್ಪಿ ಹೋಗಿದ್ದಂತಹ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಗಂಗರೊಡನೆ ಹೋರಾಡಿದಂತೆ ಕಂಡುಬರುತ್ತದೆ. ಆದರೆ ಗಂಗರನ್ನು ಎದುರಿಸಲು ಅಶಕ್ತನಾಗಿ, ಅವರಲ್ಲಿ ಮಾಂಡಲೀಕತ್ವವನ್ನು ಪುನಃ ಸ್ವೀಕರಿಸಿ ಗಂಗ ರಾಜಕುಮಾರಿ ಪೊಲ್ಲಬ್ಬರಸಿಯನ್ನು ಮದುವೆಯಾಗಿದ್ದನು. ಗಂಗದೊರೆ ಇಮ್ಮಡಿ ರಾಚಮಲ್ಲನು ನೊಳಂಬರ ಕೈಯಿಂದ ತಪ್ಪಿಹೋಗಿದ್ದಂತಹ ಅವರದೇ ಪ್ರದೇಶಗಳನ್ನು ಒದಗಿಸಿಕೊಡುವಲ್ಲಿ ಯಶಸ್ವಿಯಾಗಿದ್ದನು.

ಗಂಗರ ಇತಿಹಾಸದಲ್ಲೂ ಈ ಸಮಯವು ತೀವ್ರವಾದಂತಹ ರಾಜಕೀಯ ಬದಲಾವಣೆಯನ್ನು ಎದುರಿಸಬೇಕಾಯಿತು. ಗಂಗರು ರಾಷ್ಟ್ರಕೂಟರ ಸಾರ್ವಭೌಮತ್ವವನ್ನು ಎದುರಿಸಬೇಕಾದಂತಹ ಸಂದರ್ಭ ಒದಗಿ ಬಂದಾಗ ನೊಳಂಬರೂ ಅನಿವಾರ್ಯವಾಗಿ ರಾಷ್ಟ್ರಕೂಟರ ಸಾಮಂತರಾದರು. ಆದರೆ ರಾಷ್ಟ್ರಕೂಟ ದೊರೆ ಇಮ್ಮಡಿ ಕೃಷ್ಣನು ತನ್ನ ಸೇನೆಯನ್ನು ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳಿಂದ ಹಿಂಪಡೆದಂತಹ ಸಂದರ್ಭದಲ್ಲಿ ನೊಳಂಬರು ನೊಳಂಬವಾಡಿ ಪ್ರದೇಶದಲ್ಲಿ ಪುನಃ ಸ್ವತಂತ್ರರಾಗಿದ್ದಂತೆ ಕಂಡುಬರುತ್ತದೆ.[೧೦೭]

ಅಯ್ಯಪದೇವನಿಗೆ ಅಣ್ಣಿಗ ಬೀರ ನೊಳಂಬ, ಏಕವಾಕ್ಯ ಇರಿವನೊಳಪ ದಿಲೀಪಯ್ಯ, ಮಯ್ದನೊಲಿಪ, ಅಂಕಯ್ಯನೆಂಬುವುದಾಗಿ ನಾಲ್ಕು ಜನ ಪುತ್ರರಿದ್ದರು. ಇವರಲ್ಲಿ ಹಿರಿಯವನಾದ ವೀರ (ಬೀರ)ನೊಳಂಬನಿಗೆ ಅಣ್ಣಿಗನೆಂಬತಹ ಇನ್ನೊಂದು ಹೆಸರಿದ್ದು, ಅಯ್ಯಪದೇವನ ನಂತರ ನೊಳಂಬ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿದ್ದನು.

ಬೀರನೊಳಂಬ

ವೀರನೊಳಂಬನನ್ನು ಉಲ್ಲೇಖಿಸುತ್ತಿರುವಂತಹ ಶಾಸನಗಳು ಕೋಲಾರ ತಾಲ್ಲೂಕಿನಲ್ಲಿ ಲಭ್ಯವಾಗಿದೆ. ಆದರೆ ಶಾಸನಗಳಲ್ಲಿ ಕಾಲದ ಉಲ್ಲೇಖವಿರದೇ ಇರುವುದು ಸಂಧಿಗ್ಧತೆಯನ್ನುಂಟು ಮಾಡುತ್ತದೆ. ವೀರನೊಳಂಬನನ್ನು ಉಲ್ಲೇಖಿಸುವಂತಹ ಮೊದಲ ಶಾಸನವು[೧೦೮] ಕೋಲಾರ ಜಿಲ್ಲೆಯ ನರಸಾಪುರ ಹೋಬಳಿಯ ಶಿವಾರಪಟ್ಟಣದಲ್ಲಿ ದೊರಕಿದ್ದು ದಾನವನ್ನು ಉಲ್ಲೇಖಿಸುತ್ತದೆ. ಬೀರನೊಳಂಬನನ್ನು ಶಾಸನವು ವೀರ ನೊಳಂಬನೆಂದು ಕರೆದಿದ್ದು, ಪಲ್ಲವಾನ್ವಯ (ಪಲ್ಲವ ವಂಶದವನು), ಪಲ್ಲವ ಕುಲತಿಲಕ (ಪಲ್ಲವ ವಂಶಕ್ಕೆ ತಿಲಕದಂತಿರುವವನು) ಪೃಥ್ವೀವಲ್ಲಭ ಎಂದು ಕರೆದಿದೆ. ರಾಜನು ರಾಜ್ಯವನ್ನಾಳುತ್ತಿರಲು ಶ್ರೀಮೆಂಡಿ ಮಂಗಲದ ಮಹಾಜನರಿಗೆ ನಾಗಯ್ಯ ಮತ್ತು ಕೊಂಡಯ್ಯ ಎಂಬುವವರು ಹದಿನಾರು ಗದ್ಯಾಣವನ್ನು ದಾನವಾಗಿ ನೀಡಿರುವಂತಹ ಮಾಹಿತಿಯಿದ್ದು ಬೀರನೊಳಂಬನು ಪರಾಕ್ರಮಿ ರಾಜನಾಗಿದ್ದನೆಂದು ತಿಳಿಯುತ್ತದೆ. ಶ್ರೀಮೆಂಡಿಮಂಗಲವೆನ್ನುವುದು ಪ್ರಸಿದ್ಧ ಅಗ್ರಹಾರವಾಗಿದ್ದಂತೆ ಶಾಸನವು ತಿಳಿಸುತ್ತದೆ. ಇದೇ ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿ ಕ್ಯಾಲನೂರಿನಲ್ಲಿರುವಂತಹ ಹಳಗನ್ನಡದ ಶಾಸನವು[೧೦೯] ಬೀರನೊಳಂಬನನ್ನು ಹೆಸರಿಸಿದೆ. ದಾನದ ವಿಚಾರವನ್ನು ಹೇಳುತ್ತಿರುವಂತಹ ಈ ಶಾಸನವು ಬೀರನೊಳಂಬನು ಅಯ್ಯಪದೇವನ ಮಗನೆಂದು ತಿಳಿಸುತ್ತದೆ. ಮಡಿವಾಳ ಗ್ರಾಮದಲ್ಲಿರುವಂತಹ ಶಾಸನವು[೧೧೦] ಬೀರನೊಳಂಬನ ಆಳ್ವಿಕೆಯನ್ನು ತಿಳಿಸಿದೆ. ರಾಜನಿಗೆ ಸಂಬಂಧಿಸಿದಂತಹ ಅಧಿಕ ವಿಷಯಗಳನ್ನು ದೊರಕುತ್ತಿಲ್ಲವಾದರೂ ವೀರನು ಮರಣ ಹೊಂದಿದ್ದನ್ನು ಶಾಸನವು ತಿಳಿಸಿದೆ.

ಇದೇ ಮಡಿವಾಳ ಗ್ರಾಮದಲ್ಲಿ ದೊರಕಿರುವಂತಹ ಬೀರನೊಳಂಬ ಉಲ್ಲೇಖವಿರುವಂತಹ ವೀರಗಲ್ಲು ಶಾಸನವು[೧೧೧] ಈತನು 'ಸಾಂತರ'ರ ಮೇಲೆ ಆಕ್ರಮಣ ಮಾಡಿದ ವಿಶೇಷ ಮಾಹಿತಿಯನ್ನೊದಗಿಸುತ್ತದೆ. ರಾಜನು ತನ್ನ ರಾಜ್ಯವಿಸ್ತಾರ ಮಾಡುವಂತಹ ಉದ್ದೇಶದಿಂದ ಗಂಗರ ಹಿತೈಷಿಗಳಾಗಿದ್ದ ಮತ್ತು ಸಾಮಂತರಾದಂತಹ ಸಾಂತರ ಮೇಲೆ ಆಕ್ರಮಣ ಮಾಡಿರಬಹುದು.

'ಪಲ್ಲವ ಕುಲ ತಿಲಕ'ನೆಂದು ನೊಳಂಬರಸನನ್ನು ಉಲ್ಲೇಖಿಸಿರುವಂತಹ ಶಾಸನವು ಶ್ರೀನಿವಾಸಪುರ ತಾಲ್ಲೂಕಿನ ತಿನ್ನಿಲಿ ಗ್ರಾಮದಲ್ಲಿ ದೊರಕಿದೆ.[೧೧೨] ಪಲ್ಲವ ಕುಲ ತಿಲಕನೆಂಬ ಉಲ್ಲೇಖವು ನೊಳಂಬರಸರ ವಿಶೇಷಣವಾಗಿದೆ. ಈ ವಂಶದ ಹೆಚ್ಚಿನ ರಾಜರುಗಳು ಪಲ್ಲವ ಕುಲತಿಲಕವೆಂಬ ಬಿರುದನ್ನು ಹೊಂದಿದ್ದರು. ಆದರೆ ಲಿಪಿಯ ದೃಷ್ಟಿಯಿಂದ ಈ ಶಾಸನವು ಅಣ್ಣಿಗ ಬೀರನೊಳಂಬನ ಕಾಲಕ್ಕೆ ಸಂಬಂಧಿಸಿದುದಾಗಿರಬಹುದು. ಅಣ್ಣಿಗ ಬೀರನೊಳಂಬನಿಗೆ ಪೃಥ್ವೀವಲ್ಲಭ, ಪಲ್ಲವ ಕುಲ ತಿಲಕ, ನೊಳಂಬಾಧಿರಾಜನೆಂಬಂತಹ ಬಿರುದುಗಳಿದ್ದವು. ರಾಜನಿಗೆ ಸಂಬಂಧಿಸಿದಂತಹ ವಿಶೇಷ ಮಾಹಿತಿಗಳು ದೊರೆಯದಿದ್ದರು, ಭೀಮನೆಂಬುವವನು ಪೊದಲ್ನಾಡು-೬೦ನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಈ ಪುದಲ್ನಾಡು-೬೦ ಪ್ರಾದೇಶಿಕ ಆಡಳಿತವಾಗಿದ್ದಿರಬಹುದು.

ಬೀರನೊಳಂಬನು ತನ್ನ ತಂದೆಯಾದ ಅಯ್ಯಪದೇವನ ಜೊತೆಗೆ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದಂತೆ ತಿಳಿದುಬರುತ್ತದೆ. ಕ್ರಿ.ಶ.೯೩೪ರಿಂದ ೯೪೦ರವರೆಗೆ ಆಳ್ವಿಕೆ ನಡೆಸಿದಂತಹ ಈತನು ತನ್ನ ತಂದೆಯಿಂದ ಆಡಳಿತಕ್ಕೆ ಸಂಬಂಧಿಸಿದಂತಹ ಅನುಭವವನ್ನು ಹೊಂದಿದ್ದನು. ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನು ಬೀರನೊಳಂಬನನ್ನು ಸೋಲಿಸಿರುವಂತಹ ಮಾಹಿತಿಯು ಕ್ರಿ.ಶ.೯೪೦ರ ಶಾಸನದಲ್ಲಿ[೧೧೩] ದೊರಕಿರುವುದರಿಂದ ಬೀರನೊಳಂಬನು ಸುಮಾರು ಇದೇ ಅವಧಿಯಲ್ಲಿ ಮರಣ ಹೊಂದಿರಬಹುದು. ಬೀರನೊಳಂಬನಿಗೆ ಇರುಳ ಚೋರನೆಂಬ ಮಗನಿದ್ದನು. ಆದರೆ ಈತನು ರಾಜ್ಯಭಾರ ಮಾಡಿದಂತಹ ಆಧಾರ ದೊರಕುವುದಿಲ್ಲ. ಕಾರಣಾಂತರಗಳಿಂದಾಗಿ ಅಣ್ಣಿಗಬೀರನೊಳಂಬನ ನಂತರ ಇರುಳಚೋರ ಈತನ ನಂತರ ಇರುವ ನೊಳಂಬ ದಿಲೀಪಯ್ಯನು ರಾಜ್ಯಭಾರವನ್ನು ವಹಿಸಿಕೊಂಡನು. ಬಹುಶಃ ಇರುಳ ಚೋಳನು ನೊಳಂಬವಾಡಿಗೆ ಸೇರಿದಂತಹ ಯಾವುದೋ ಸಣ್ಣ ಪ್ರದೇಶವನ್ನು ಆಳ್ವಿಕೆ ನಡೆಸುತ್ತಿದ್ದಿರಬೇಕು. ಆಂಧ್ರಪ್ರದೇಶದ ಧರ್ಮಪುರಿಯಲ್ಲಿ ದೊರಕಿರುವಂತಹ ತ್ರುಟಿತ ಶಾಸನವೊಂದು[೧೧೪] ಆಧಾರ. ಅಯ್ಯಪದೇವನ ಮಗ ಅಣ್ಣಿಗ ವೀರನೊಳಂಬ, ಈತನ ಮಗ ಇರಳ್ಚೋರನೆಂದು ತಿಳಿಸುತ್ತದೆ. ಆದರೆ ಈತನಿಗೆ ಸಂಬಂಧಿಸಿದಂತಹ ಹೆಚ್ಚಿನ ಮಾಹಿತಿಗಳಾವುವು ದೊರೆತಿಲ್ಲ.

ದಿಲೀಪ

ನೊಳಂಬ ಅರಸರಲ್ಲಿ ಹೆಚ್ಚು ಪ್ರಖ್ಯಾತನಾಗಿರುವವನೆಂದರೆ ದಿಲೀಪಯ್ಯನು. ಅಣ್ಣಿಗ ಬೀರನೊಳಂಬನ ನಂತರ ನೊಳಂಬ ಸಿಂಹಾಸನವೇರಿದಂತಹ ಈತನು, ನೊಳಂಬ ರಾಜಮನೆತನಗಳಲ್ಲಿ ಪ್ರಸಿದ್ಧನಾಗಿದ್ದನೆಂದು ತಿಳಿಯಬಹುದಾಗಿದೆ. ದಿಲೀಪಯ್ಯನು ಮೊದಲನೆಯ ಅಯ್ಯಪದೇವನ ಎರಡನೆಯ ಪುತ್ರನೂ ಮತ್ತು ಅಣ್ಣಿಗ ಬೀರನೊಳಂಬನ ಸಹೋದರನಾಗಿದ್ದನು. ಬೀರನೊಳಂಬನು ಉತ್ತರಾಧಿಕಾರಿಯಾಗಿ ಕ್ರಿ.ಶ.ಸುಮಾರು ೯೪೦ಕ್ಕೆ ಪಟ್ಟಕ್ಕೆ ಬಂದಿದ್ದನು. ಇಲ್ಲಿಂದ ಕ್ರಿ.ಶ.೯೬೭ರವರೆಗೆ ಆಳ್ವಿಕೆ ನಡೆಸಿದಂತಹ ಈತನು 'ಏಕವಾಕ್ಯ'ನೆಂಬಂತಹ ಬಿರುದನ್ನು ಹೊಂದಿದ್ದನು. ಬೀರನೊಳಂಬನು ರಾಷ್ಟ್ರಕೂಟರಿಂದ ಪರಾಜಿತನಾದ ಮೇಲೆ ದಿಲೀಪಯ್ಯನೂ ರಾಷ್ಟ್ರಕೂಟರ

ಸಾಮಂತನಾಗಿ ಮುಂದುವರಿದನೆಂದು ತೋರುತ್ತದೆ. ಕೋಲಾರ ಜಿಲ್ಲೆಯಲ್ಲಿ ದಿಲೀಪಯ್ಯನಿಗೆ ಸಂಬಂಧಿಸಿದಂತಹ ಹಲವಾರು ಶಾಸನಗಳು ದೊರಕುತ್ತವೆ.

ಹೇಮಾವತಿಯ ಸ್ತಂಭಶಾಸನವು[೧೧೫] ದಿಲೀಪರಸನ ತನಕ ವಂಶಾವಳಿಯನ್ನು ನೀಡಿದ್ದು ಇಲ್ಲಿಗೆ ವಂಶವು ಮುಗಿದಿರುವಂತೆ ಭಾಸವಾಗುತ್ತದೆ. ಈ ಶಾಸನದಲ್ಲಿ ನೊಳಂಬರ ಮೊದಲ ದೊರೆ ಈಶ್ವರನೆಂದು ತಿಳಿಸಿದ್ದು, ೧೧ ರಾಜರುಗಳ ವಿವರವನ್ನು ನೀಡಲಾಗಿದೆ. ಶಾಸನದ ಕಾಲವು ಕ್ರಿ.ಶ.೯೪೬ ಆಗಿದ್ದು, ಈ ಕಾಲಕ್ಕಾಗಲೇ ದಿಲೀಪರಸನು ಪ್ರಸಿದ್ಧರಾಜನಾಗಿದ್ದನು. ಬಂಗಾರಪೇಟೆಯ ಬೇತಮಂಗಲದ ಶಾಸನವು[೧೧೬] ದಿಲೀಪಯ್ಯನ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತಿದ್ದು ರಾಜನನ್ನು ಪಲ್ಲವ ಕುಲ ತಿಲಕನೆಂದು ಹೊಗಳಿದೆ. 'ಏಕವಾಕ್ಯ ಶ್ರೀಮತ್ ಇರಿವ ನೊಳಂಬಾಧಿರಾಜ'ನೆಂದು ದಿಲೀಪನನ್ನು ಸ್ತುತಿಸುತ್ತಿದ್ದು ವಿಜಯಾದಿತ್ಯ ಮಂಗಲದ ಕೆರೆಯನ್ನು ಜೀರ್ಣೋದ್ಧಾರ ಮಾಡಿರುವಂತಹ ವಿಷಯವನ್ನು ತಿಳಿಸುತ್ತದೆ. ಶಾಸನದಲ್ಲಿ ಕಾಲದ ಉಲ್ಲೇಖವಿರದಿರುವುದರಿಂದ ಪಟ್ಟಾಭಿಷೇಕದ ನಂತರ ಸ್ವಲ್ಪ ಕಾಲದಲ್ಲಿ ಈ ಶಾಸನವು ಬಂದಿರಬಹುದು ಎಂದು ಊಹಿಸಬಹುದಾಗಿದೆ. 'ಏಕವಾಕ್ಯ' ಎನ್ನುವ ಬಿರುದು ವಿಶೇಷವಾಗಿದ್ದು, 'ಒಂದೇಮಾತು' ಎಂಬರ್ಥವನ್ನು ಕೊಡುತ್ತದೆ.

ಕೋಲಾರ ಜಿಲ್ಲೆಯ ಹೆಚ್ಚಿನ ಶಾಸನಗಳಲ್ಲಿ ದಿಲೀಪಯ್ಯನೆಂದು ಉಲ್ಲೇಖವಾಗಿರುವಂತಹ ಇರುವನೊಳಂಬರಸನು ನೊಳಂಬರಲ್ಲಿ ಪ್ರಸಿದ್ಧನಾಗಿದ್ದಂತಹ ಅರಸನೆಂದು ತಿಳಿಯಬಹುದಾಗಿದೆ. ಈತನ ಆಡಳಿತಾವಧಿಯಲ್ಲಿ ಅನೇಕ ವೀರರು ತಮ್ಮ ಪ್ರಾಣತ್ಯಾಗ ಮಾಡಿದ್ದಾರೆಂಬುದಕ್ಕೆ ಇಲ್ಲಿ ದೊರಕುವಂತಹ ವೀರಗಲ್ಲುಗಳೇ ಸಾಕ್ಷಿಗಳಾಗಿವೆ. ಇರುಳ ನೊಳಂಬನ ಕಾಲದ ಪ್ರಮುಖ ಶಾಸನವೆಂದು ಕೋಲಾರ ತಾಲ್ಲೂಕಿನ ಹರಳುಕುಂಟೆಯ ಶಾಸನವನ್ನು[೧೧೭] ಹೇಳಬಹುದಾಗಿದೆ. ನೊಳಂಬರ ಶಾಸನಗಳಲ್ಲಿ ಅಪರೂಪವಾಗಿರುವಂತಹ ಶಕವರ್ಷದ ಉಲ್ಲೇಖವು ಈ ಶಾಸನದಲ್ಲಿ ಕಂಡುಬರುತ್ತದೆ. ತುರುಗೋಳು ಸ್ಮಾರಕಶಾಸನಗಳಲ್ಲಿಯೂ ಅಪರೂಪವಾಗಿರುವಂತಹ ಈ ವಿಷಯವು ನೊಳಂಬರ ಕಾಲ ನಿರ್ಧಾರ ಮಾಡುವಲ್ಲಿ ಪ್ರಮುಖ ಆಧಾರವಾಗಿದೆ. ೮೮೮ ಎಂದು ಶಕವರ್ಷವನ್ನು ತಿಳಿಸುತ್ತಿದ್ದು, ಇದು ಕ್ರಿ.ಶ.೯೦೬ಕ್ಕೆ ಸರಿಹೊಂದುತ್ತದೆ.

ಕೋಲಾರ ತಾಲೂಕಿನ ಕಲ್ಲಂದೂರು ಗ್ರಾಮದ[೧೧೮] ಮತ್ತು ಮುಳಬಾಗಿಲು ತಾಲೂಕಿನ ಕಾವತ್ತನಹಳ್ಳಿಯಲ್ಲಿ[೧೧೯] ದೊರೆತಿರುವಂತಹ ವೀರಗಲ್ಲು ಶಾಸನಗಳು ವೀರನೊಳಂಬನು ಈ ಪ್ರದೇಶದಲ್ಲಿ ಆಡಳಿತ ನಡೆಸಿದ್ದನೆಂದು ತಿಳಿಯಪಡಿಸುತ್ತಿದೆ. ಮುಳಬಾಗಿಲು ತಾಲ್ಲೂಕಿನ ಕಾವತ್ತನಹಳ್ಳಿಯಲ್ಲಿರುವ ಇನ್ನೊಂದು ವೀರಗಲ್ಲು ಶಾಸನವು[೧೨೦] ಹಿಂದಿನ ಶಾಸನದಂತೆ ಇರಿವ ನೊಳಂಬನನ್ನು ಹೆಸರಿಸಿದ್ದು ಎರಡಿಯೂರು ಎಂಬಲ್ಲಿ ನಡೆದಂತಹ ಊರಳಿವು ಕಾಳಗವನ್ನು ತಿಳಿಸುತ್ತದೆ. ಕಾಲದ ಉಲ್ಲೇಖವಿರುವಂತಹ ಈ ಶಾಸನವು ಎರಡಿಯೂರನ್ನು ಯುದ್ಧ ಭೂಮಿಯಂತೆ ಉಲ್ಲೇಖಿಸಿದೆ. ಇದೇ ಮುಳಬಾಗಿಲು ತಾಲ್ಲೂಕಿನ ಯಲ್ದೂರು ಗ್ರಾಮದಲ್ಲಿ ದೊರಕಿರುವಂತಹ ತುರುಗೋಳು ಸ್ಮಾರಕ ಶಾಸನವು[೧೨೧] ಇದೇ ರೀತಿಯಾದಂತಹ ಮಾಹಿತಿಯನ್ನೊದಗಿಸುತ್ತದೆ. ಈ ಶಾಸನದಲ್ಲೂ ಎರದಯೂರು ಸ್ಥಳದ ಉಲ್ಲೇಖವಿದ್ದು, ತಿರುವೆಂಗಡಯ್ಯ ಎಂಬುವವನು ವೀರಮರಣವನ್ನು ಹೊಂದಿರುವಂತಹ ವಿಷಯವಿದೆ.

ಮುಂದೆ ದೊರಕುವಂತಹ ಹಲವಾರು ಶಾಸನಗಳಲ್ಲಿ ಇರಿವ ನೊಳಂಬನನ್ನು ದಿಲೀಪಯ್ಯನೆಂದು ಉಲ್ಲೇಖಿಸಲಾಗಿದೆ. ಆವನಿ ಗ್ರಾಮದ ಶತ್ರುಘ್ನೇಶ್ವರ ದೇವಾಲಯದಲ್ಲಿರುವಂತಹ ಶಾಸನವು[೧೨೨] ದಿಲೀಪಯ್ಯನು ರಾಜ್ಯವನ್ನಾಳುತ್ತಿರಲು ಆವನಿಯ ಮಹಾದೇವರಿಗೆ ದಾನವನ್ನು ನೀಡಿರುವಂತಹ ಸಂಕ್ಷಿಪ್ತ ಮಾಹಿತಿ ನೀಡುತ್ತದೆ.

ಆದರೆ ಹೆಚ್ಚಿನ ಮಾಹಿತಿಗಳೇನು ಶಾಸನದಿಂದ ದೊರಕದಿದ್ದರೂ ಆವನಿಯು ನೊಳಂಬರ ರಾಜ್ಯಕ್ಕೊಳಪಟ್ಟಿದ್ದಂತಹ ಪ್ರದೇಶವಾಗಿತ್ತೆಂದು ಇದರಿಂದ ತಿಳಿಯಬಹುದು.

ಮುಳಬಾಗಿಲು ತಾಲ್ಲೂಕಿನ ತಾವರೆಕೆರೆ ಗ್ರಾಮದ ವೀರಗಲ್ಲು ಶಾಸನವು[೧೨೩] ದಿಲೀಪಯ್ಯನನ್ನು ದಿಲೀಪನೊಳಂಬ ಎಂದು ಕರೆದಿರುವುದು ವಿಶೇಷವಾಗಿದೆ. ಇದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ಸ್ಮಾರಕ ಶಾಸನವು[೧೨೪] ದಿಲೀಪಯ್ಯ ರಾಜನ ಆಳ್ವಿಕೆಯನ್ನು ತಿಳಿಸುತ್ತದೆ. ಈ ಶಾಸನವು ವಿಶಿಷ್ಟವಾಗಿದ್ದು, ಹುಲಿಬೇಟೆಯ ವಿಷಯವನ್ನು ತಿಳಿಸುತ್ತದೆ. ಕಾಲದ ಉಲ್ಲೇಖ ಇರದಿರುವ ಈ ಶಾಸನವು ಹುಲಿ ಬೇಟೆಯಲ್ಲಿ ವೀರನು ವೀರ ಮರಣವನ್ನು ಹೊಂದಿದನೆಂದು ತಿಳಿಸಿದೆ. ಇದೇ ಸ್ಥಳದಲ್ಲಿ ಎಮ್ಮೆ ತುರುಗೋಳಿನ ವಿಷಯವನ್ನು ಹೊತ್ತಿರುವಂತಹ ಸ್ಮಾರಕ ಶಾಸನವು[೧೨೫] ಶ್ರೀ ದಿಲೀಪನೊಳಂಬ ಆಳ್ವಿಕೆಯನ್ನು ಸೂಚಿಸುತ್ತದೆ.

ಬಂಗಾರಪೇಟೆ ದಾಸರ ಹೊಸಹಳ್ಳಿ ಹೋಬಳಿಯ ಹುಲಿಕುಂದ ಗ್ರಾಮದಲ್ಲಿ ದೊರಕಿರುವಂತಹ ಮೂರು ವೀರಗಲ್ಲು ಶಾಸನಗಳು[೧೨೬] ದಿಲೀಪಯ್ಯನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ವಿಶೇಷವೆಂದರೆ ಈ ಮೂರು ಶಾಸನಗಳಲ್ಲೂ ಪೊಕ್ಕುಂದ ಎಂಬಲ್ಲಿ ನಡೆದಂತಹ ಕಾಳಗಗಳಲ್ಲಿ ಹಲವು ವ್ಯಕ್ತಿಗಳು ವೀರಮರಣವನ್ನು ಹೊಂದಿದಂತೆ ಪ್ರತಿಪಾದಿಸುತ್ತವೆ. 'ಪೊಕ್ಕುಂದ'ವು ಹುಲಿಕುಂದವಾಗಿದ್ದು, ನೊಳಂಬರ ಒಂದು ಆಡಳಿತ ವಿಭಾಗವಾಗಿತ್ತು. ಹುಲಿಕುಂದನಾಡು ಎಂದು ಪ್ರಸಿದ್ಧವಾಗಿದ್ದಂತಹ ಪ್ರದೇಶವು ಬಂಗಾರಪೇಟೆಯಲ್ಲಿ ಒಂದು ಕಾಲದಲ್ಲಿ ವೀರರ ನಾಡಾಗಿದ್ದಂತೆ ತೋರುತ್ತದೆ.

ಸ್ಮಾರಕ ಶಾಸನಗಳಲ್ಲಿ ಸಾಮಾಜಿಕ ಕಳಕಳಿಯನ್ನೊಳಗೊಂಡಂತಹ ಶಾಸನಗಳೂ ದಿಲೀಪಯ್ಯನ ಹೆಸರಿನಲ್ಲಿ ದೊರಕುತ್ತವೆ. ದುಗ್ಗಸಂದ್ರದ ಕುರುಬರಹಳ್ಳಿ ಗ್ರಾಮದಲ್ಲಿರುವ ಕೆರೆಯ ಬಳಿಯಿರುವ ಶಾಸನವು[೧೨೭] ದಿಲೀಪಯ್ಯನು ರಾಜ್ಯವನ್ನಾಳುತ್ತಿರಲು ಚಂದ್ರಸೇಕರಮ್ಮನೆಂಬುವವನು ಮಂಡಿಗಲ್ಲ ಕೆರೆಯ ಪೌಳಿಯನ್ನು ಜೀರ್ಣೋದ್ಧಾರ ಮಾಡಿರುವಂತಹ ವಿಷಯವಿದೆ.

ರಾಜೇನಹಳ್ಳಿಯ ಅಪೂರ್ಣ ಶಾಸನವು[೧೨೮] ಇದೇ ರೀತಿಯಾದಂತಹ ಮಾಹಿತಿಯನ್ನೊದಗಿಸುತ್ತಿದ್ದು, ದಿಲೀಪಯ್ಯನ ರಾಜ್ಯಾಡಳಿತವನ್ನು ಪ್ರತಿಪಾದಿಸುತ್ತದೆ. "ಅಯ್ಯಪದೇವ ದಡಿಗವಡೆ" ಎಂದು ಶಾಸನವು ಅಪೂರ್ಣವಾದಂತಹ ವಿಷಯವನ್ನು ತಿಳಿಸುತ್ತಿದ್ದು, ಅಯ್ಯಪದೇವನು ಬೀರನೊಳಂಬನು ದಿಲೀಪಯ್ಯನ ತಂದೆಯಾಗಿದ್ದನು. ದಡಿಗವಡೆ ಎನ್ನುವುದು ದಳಿಗವಳಿಯ ರೂಪಾಂತರವಾಗಿದ್ದು ಈತನು ಆ ಪ್ರದೇಶದಲ್ಲಿ ನೆಲೆಸಿದ್ದಿರಬಹುದು. ಗಂಗರಿಗೂ ನೊಳಂಬರಿಗೂ ನಡುವೆ ನಡೆದಿರುವಂತಹ ಯಾವುದೋ ವಿಷಯವನ್ನು ಶಾಸನವು ತಿಳಿಸುತ್ತದೆ. ಶ್ರೀನಿವಾಸಪುರ ತಾಲ್ಲೂಕಿನ ಹೆಬಟಗ್ರಾಮದ ಶಾಸನವು[೧೨೯] ಕೆರೆಯನ್ನು ಜೀರ್ಣೋದ್ಧಾರ ಮಾಡಿರುವಂತಹ ವಿಷಯವನ್ನು ತಿಳಿಸುತ್ತದೆ. ಶ್ರೀದಿಲೀಪ ನೊಳಂಬನು ರಾಜ್ಯಭಾರ ಮಾಡುತ್ತಿದ್ದನೆಂದು ಉಲ್ಲೇಖಿಸಿದೆ. ನೊಳಂಬ ದಿಲೀಪರಸನ ಬಹಳಷ್ಟು ಶಾಸನಗಳಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಹಾಗಾಗಿ ದಿಲೀಪರಸನ ಆಳ್ವಿಕೆಯ ಕಾಲವನ್ನಾಧರಿಸಿ ಹೆಚ್ಚಿನ ಶಾಸನಗಳು ೧೦ನೆಯ ಶತಮಾನದ ಮಧ್ಯಭಾಗಕ್ಕೆ ಸಂಬಂಧಿಸಿದುದೆಂದು ಹೇಳಬಹುದು. ಹೆಚ್ಚಿನ ಶಾಸನಗಳು ವೀರರನ್ನು ಅವರ ಪರಾಕ್ರಮವನ್ನು ತಿಳಿಸಿದರೆ, ಕೆಲವು ಶಾಸನಗಳು ಕೆರೆಯನ್ನು ಕಟ್ಟಿರುವಂತಹ ವಿಷಯವನ್ನು ಒದಗಿಸುತ್ತದೆ.

ತ್ರಿಭುವನ ಕರ್ತಾರ ದೇವನೆಂಬ ವ್ಯಕ್ತಿಯ ಉಲ್ಲೇಖವು ದಿಲೀಪಯ್ಯನ ಶಾಸನಗಳಲ್ಲಿ ದೊರಕುತ್ತದೆ. ಮುಳಬಾಗಿಲು ತಾಲ್ಲೂಕು ಬಲ್ಲ ಗ್ರಾಮದ ಎರಡು ವೀರಗಲ್ಲು ಶಾಸನಗಳು ತ್ರಿಭುವನ ಕರ್ತಾರದೇವನನ್ನು

ಉಲ್ಲೇಖಿಸಿವೆ.[೧೩೦] ದಿಲೀಪಯ್ಯ ರಾಜನು ರಾಜ್ಯವನ್ನಾಳುತ್ತಿರಲು ತ್ರಿಭುವನ ಕರ್ತಾರದೇವನು ಆವನಿಯ ಸ್ಥಾನವನ್ನು ಆಳುತ್ತಿದ್ದನು ಎಂದು ತಿಳಿಸಿದೆ. ಎರಡನೆಯ ಶಾಸನವು ತಪರಾಜ್ಯಗೆಯ್ಯುತ್ತಿರೆ ಎಂದು ಉಲ್ಲೇಖಿಸಿದೆ. ಬಹುಶಃ ದಿಲೀಪಯ್ಯ ರಾಜನ ಆಳ್ವಿಕೆಯ ಕಾಲದಲ್ಲಿ ಆವನಿಯ ಸ್ಥಳವು ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದು, ತ್ರಿಭುವನ ಕರ್ತಾರದೇವನನ್ನು ದಿಲೀಪರಾಜನು ಧರ್ಮಾಧಿಕಾರಿಯ ರೀತಿಯಲ್ಲಿ ನಿಯೋಜಿಸಿರಬಹುದು. ಸಂಶೋಧಕಿ ಶ್ರೀಮತಿ ಹೆಚ್.ಜಯಮ್ಮ ಕರಿಯಣ್ಣನವರು ತ್ರಿಭುವನ ಕರ್ತಾರದೇವನು ಯತಿಯಾಗಿದ್ದನೆಂದು ತಿಳಿಸುತ್ತ ಆವನಿಯ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿಸಿದ್ದಾರೆ.[೧೩೧]

ಆವನಿಯ ಬಲ್ಲಗ್ರಾಮದ ಅಪೂರ್ಣ ಶಾಸನವೊಂದು ತ್ರಿಭುವನ ಕರ್ತಾರದೇವನು ರಾಜ್ಯವನ್ನಾಳುತ್ತಿರಲು ಎಂದು ತಿಳಿಸಿದೆ.[೧೩೨] ಹಾಗಾಗಿ ದಿಲೀಪಯ್ಯನು ತ್ರಿಭುವನ ಕರ್ತಾರದೇವನನ್ನು ಮಂತ್ರಿ ಅಥವಾ ಅಧಿಕಾರಿಯ ರೂಪದಲ್ಲಿ ನಿಯೋಜಿಸಿರಬಹುದು. ಈ ಎಲ್ಲಾ ಶಾಸನಗಳು ವೀರರ ಪರಾಕ್ರಮವನ್ನು ತಿಳಿಸುತ್ತದೆ. ಆವನಿ ಗ್ರಾಮದ ನಾಗರಕುಂಟೆಯ ಮಠದ ಸಮೀಪದ ವೀರಗಲ್ಲು ಶಾಸನವು ತ್ರಿಭುವನ ಕರ್ತಾರದೇವನು ಪ್ರಬಲರಾಜನಾಗಿದ್ದನೆಂಬಂತೆ ವರ್ಣಿಸಿದೆ. ದಿಲೀಪಯ್ಯ ರಾಜನು ಪೃಥ್ವಿಯನ್ನಾಳುತ್ತಿರಲು ತ್ರಿಭುವನ ಕರ್ತಾರ ಭಟಾರರನು ತಪ ರಾಜ್ಯವನ್ನಾಳುತ್ತಿದ್ದನೆಂಬಂತೆ ಚಿತ್ರಿಸಿದೆ. ವಿಶೇಷವೆಂದರೆ ಬಳಂಜ ಎನ್ನುವವನು ಗಂಗವಾಡಿ ೯೬೦೦೦ವನ್ನು ಬಾಣರವಾಡಿ-೧೨೦೦೦ವನ್ನು ಆಳುತ್ತಿದ್ದನೆಂಬಂತೆ ಈ ಶಾಸನವು ತಿಳಿಸುತ್ತದೆ.

ದಿಲೀಪಯ್ಯನ ನಂತರ ಕ್ರಿ.ಶ.ಸುಮಾರು ೯೬೮ರಲ್ಲಿ ನನ್ನಿನೊಳಂಬನು ಪಟ್ಟವೇರುತ್ತಾನೆ. ಮುಳಬಾಗಿಲು ತಾಲ್ಲೂಕಿನ ಉತ್ತನೂರಿನ[೧೩೩] ಶಾಸನವು ಈತನನ್ನು 'ಛಲದಂಕಕಾರ'ನೆಂದು ಕರೆದಿದೆ. ಆವನಿಯ ವಾಲಿಸುಗ್ರೀವರ ದೇವಾಲಯದ ಮಾನಸ್ತಂಭದಲ್ಲಿರುವಂತಹ ಈ ಶಾಸನವು ನೊಳಂಬ ರಾಜನನ್ನು **"ಪೃಥುವೀವಲ್ಲಭ ಪಲ್ಲವರಾಮ ಪಾದ ಪಂಕಜ ಭ್ರಮರ ಪ್ರತ್ಯಕ್ಷ ಕಂಜಾಸನಂ"** ಎಂದು ಹೊಗಳಿದ್ದು, ನನ್ನಿ ನೊಳಂಬನು ತನ್ನ ತಂದೆಯಾದ ದಿಲೀಪರಸನ ಕೈ ಕೆಳಗಿದ್ದುಕೊಂಡು ರಾಜ್ಯಭಾರ ಮಾಡುತ್ತಿದ್ದಿರಬಹುದೆಂದು ಊಹಿಸಬಹುದಾಗಿದೆ. ಬಹುಶಃ ಈತನು ತನ್ನ ತಂದೆಗೆ ಸಾಮಂತನಾಗಿದ್ದುಕೊಂಡು ಗಂಗ ೬೦೦೦ ಪ್ರಾಂತ್ಯವನ್ನು ಆಳುತ್ತಿದ್ದನೆಂದು ತಿಳಿಯಬಹುದು.

ಈತನು ಪಟ್ಟಾಭಿಷೇಕದ ವರ್ಷದಲ್ಲೇ ಬಂದಿರುವಂತಹ ಕ್ರಿ.ಶ.೯೬೮ರ ಉತ್ತನೂರಿನ ಶಾಸನವು[೧೩೪] ನನ್ನಿನೊಳಂಬನು ರಾಜ್ಯವನ್ನು ಆಳುತ್ತಿರಲು ಉತ್ತನೂರಿನ ಹನ್ನೆರಡು ಮಹಾಜನರಿಗೆ ದಾನವನ್ನು ನೀಡಿರುವುದನ್ನು ಉಲ್ಲೇಖಿಸಿದೆ. ಇದೇ ಕಾಲದ ಈಚಲಕುಂಟೆಯ ಶಾಸನವು ನೊಳಂಬರಸನೆಂದು ಕರೆದಿದ್ದು, ಈ ನೊಳಂಬರಸನು ನನ್ನಿನೊಳಂಬರಸನೇ ಆಗಿದ್ದಿರಬೇಕು. ನನ್ನಿನೊಳಂಬರಸನು ನೊಳಂಬರಿಗೆ ಸಂಬಂಧಿಸಿದಂತಹ ಪ್ರದೇಶವನ್ನು ಉಳಿಸಿಕೊಳ್ಳಲು ಹಲವಾರು ಪ್ರಯತ್ನಗಳನ್ನು ಮಾಡಿರುವನು. ಚಿಂತಾಮಣಿ ತಾಲ್ಲೂಕಿನ ಶಾಸನವು[೧೩೫] ಗಂಗ ದೊರೆ ಮಾರಸಿಂಹನು 'ನೊಳಂಬ ಕುಲಾಂತಕ'ನೆಂಬ ಬಿರುದನ್ನು ಹೊಂದಿದ್ದನೆಂದು ತಿಳಿಸುತ್ತದೆ. ಮಾರಸಿಂಹನು ನೊಳಂಬರನ್ನು ನಾಶ ಮಾಡಿದ್ದನೆಂದು ಶಾಸನದ ಅಭಿಪ್ರಾಯವಾಗಿದೆ. ಶಾಸನದ ಕಾಲವು ಕ್ರಿ.ಶ.೯೭೧ ಆಗಿರುವುದರಿಂದ ಈ ಕಾಲದಲ್ಲಿ ನನ್ನಿನೊಳಂಬನೇ ರಾಜ್ಯಭಾರ ಮಾಡುತ್ತಿದ್ದನು. ಈ ಕಾಲದ ನಂತರ ಆತನಿಗೆ ಸಂಬಂಧಿಸಿದಂತಹ ಶಾಸನಗಳ ಸಂಖ್ಯೆಯೂ ಕಡಿಮೆಯಾಗಿದೆ.

ಈತನ ನಂತರ ಇಮ್ಮಡಿ ಅಯ್ಯಪದೇವನು ನೊಳಂಬ ರಾಜ್ಯದ ಆಳ್ವಿಕೆ ಮಾಡಿದನು. ನೊಳಂಬರಿಗೆ ಸಂಬಂಧಿಸಿದಂತಹ ಬಿರುದಾವಳಿಗಳನ್ನು ಈತನು ಹೊಂದಿದ್ದುದರಿಂದ ಕೆಲವು ಕಾಲ ರಾಜ್ಯಭಾರ ಮಾಡಿ ಆ ಕಾಲದಲ್ಲಿ ಪ್ರಬಲರಾಗಿದ್ದಂತಹ ಗಂಗರಿಂದ ಸೋಲಲ್ಪಟ್ಟಿರಬಹುದು. ಈತನ ನಂತರ ಈತನ ಪುತ್ರನಾದ ಗನ್ನರಸನು

ನಂತರ ಇಮ್ಮಡಿ ಪೊಳಲ್ಚೋರನು (ಕ್ರಿ.ಶ.೯೭೫ -೯೭೭) ಆಳ್ವಿಕೆ ನಡೆಸಿದ್ದನು. ಆದರೆ ಇವರಿಗೆ ಸಂಬಂಧಿಸಿರುವಂತಹ ಹೆಚ್ಚಿನ ಮಾಹಿತಿಗಳು ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ. ಛಲದಂಕಕಾರ ನನ್ನಿ ನೊಳಂಬನ ನಂತರ ನೊಳಂಬರಸರಲ್ಲಿ ಪರಾಕ್ರಮಿಯಾಗಿದ್ದವನು ನೊಳಂಬಾಧಿರಾಜ ಇಮ್ಮಡಿ ಮಹೇಂದ್ರ, ಈತನು ತನ್ನ ತಾತನ ನಂತರ ಪಟ್ಟಕ್ಕೆ ಬಂದು ಗಂಗರನ್ನು ಸಮರ್ಥವಾಗಿ ಎದುರಿಸುತ್ತಾನೆ. ತನ್ನ ತಂದೆಯ ಕಾಲದಲ್ಲಿ ಚಾಲುಕ್ಯರೊಂದಿಗೆ ಸಹವಾಸವನ್ನು ಮಾಡಿಕೊಂಡಿದ್ದ ಈತನು ತಮ್ಮ ಕೈಯಿಂದ ತಪ್ಪಿ ಹೋಗಿದ್ದಂತಹ ನೊಳಂಬವಾಡಿಯನ್ನು ಗಂಗರಿಂದ ಹಿಂಪಡೆಯಲು ಪ್ರಯತ್ನಿಸಿದನು. ಇಂತಹ ಪ್ರಯತ್ನದಲ್ಲಿ ಸಫಲನಾದಂತಹ ಮಹೇಂದ್ರನು ತಮಗೆ ಸೇರಿದ್ದಂತಹ ಕೋಲಾರದ ಭಾಗಗಳನ್ನು ವಶಪಡಿಸಿಕೊಂಡಂತಹ ಮಾಹಿತಿಯು ಚಿಕ್ಕ ಬಳ್ಳಾಪುರ ತಾಲ್ಲೂಕಿನ ಶಾಸನದಿಂದ ದೊರೆಯುತ್ತದೆ.[೧೩೬] ಈ ಶಾಸನದಲ್ಲಿ ಗಂಗರಿಗೂ ಮತ್ತು ಪಲ್ಲವರಿಗೂ ಯುದ್ಧವಾದಂತೆ ಮಾಹಿತಿಯಿದೆ. ಈ ಪಲ್ಲವರು ನೊಳಂಬ ಪಲ್ಲವರಾಗಿದ್ದಾರೆ. ಶಾಸನದ ಕಾಲವು ಸುಮಾರು ಕ್ರಿ.ಶ.೯೭೭ ಆಗಿರುವುದರಿಂದ ಆ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದಂತಹ ಎರಡನೆಯ ಮಹೇಂದ್ರನೇ ಪಲ್ಲವರಾಜನೆಂದು ಊಹಿಸಬಹುದಾಗಿದೆ. ಈ ರಾಜನು ನೊಳಂಬರಿಂದ ಕೈ ತಪ್ಪಿ ಹೋಗಿದ್ದಂತಹ ನೊಳಂಬವಾಡಿಯನ್ನು ಮರಳಿ ಪಡೆದನು. ಈ ಮಹೇಂದ್ರನು ಗಂಗರೊಂದಿಗೆ ವೈರತ್ವವನ್ನು ಹೊಂದಿದ್ದನು. ಚಾಳುಕ್ಯರೊಂದಿಗೆ ಸಂಬಂಧವನ್ನು ಮುಂದುವರಿಸಿದ್ದನು. ಈತನ ಪತ್ನಿಯಾದ ರೇವಲಾದೇವಿಯು, ಚಾಲುಕ್ಯ ಮೂಲದವಳಾಗಿದ್ದಾಳೆ.[೧೩೭] ಈತನಿಗೆ ಪಲ್ಲವಾಭರಣ, ಅಮೋಘವಾಕ್ಯ, ನೊಳಂಬ ನಾರಾಯಣ ಎಂಬಂತಹ ಬಿರುದುಗಳಿದ್ದವು. ಈ ಕಾಲದಲ್ಲಿ ನೊಳಂಬರು ಚೋಳರ ಆಕ್ರಮಣವನ್ನು ಎದುರಿಸಬೇಕಾಗಿ ಬಂದಿತ್ತು. ಅದರ ಪರಿಣಾಮವಾಗಿ ಮಹೇಂದ್ರ ಅರಸನ ನಂತರ ಶಾಸನಗಳು ಅತ್ಯಲ್ಪವಾಗಿದ್ದು ನೊಳಂಬರಸರು ಚೋಳರ ಸಾಮಂತರಾಗಿ ಮುಂದುವರೆದಿರಬಹುದು. ಸಂಶೋಧಕಿ ಹೆಚ್.ಜಯಮ್ಮ ಕರಿಯಣ್ಣನವರು ನೊಳಂಬರ ಇತಿಹಾಸವನ್ನು ಮೂರು ಸ್ತರಗಳಲ್ಲಿ ಚಿತ್ರಿಸಿದ್ದಾರೆ.

೧. ಪ್ರಾಚೀನ ನೊಳಂಬರು
೨. ಕ್ರಿ.ಶ.೧೦೦೦ದ ನಂತರದ ನೊಳಂಬರಸರು
೩. ಅರ್ವಾಚೀನ ನೊಳಂಬರು

ಕ್ರಿ.ಶ.೧೦೦೦ದ ನಂತರ ಕರ್ನಾಟಕದಲ್ಲಿ ಬಲಿಷ್ಠರಾಗಿದ್ದಂತಹ ಗಂಗರು ಮತ್ತು ರಾಷ್ಟ್ರಕೂಟರು ಅಸ್ತಂಗತರಾಗಿದ್ದರಿಂದ ತಂಜಾವೂರಿನ ಚೋಳರು ಬಲಿಷ್ಠರಾದರು. ಆದರೆ ನೊಳಂಬರು ರಾಷ್ಟ್ರಕೂಟರ ಸಖ್ಯವನ್ನು ಬೆಳೆಸಿಕೊಂಡು ತಕ್ಕೋಲಂ ಯುದ್ಧದಲ್ಲಿ ಚೋಳರೊಂದಿಗೆ ಹೋರಾಡಲು ನೊಳಂಬರು ರಾಷ್ಟ್ರಕೂಟರಿಗೆ ಸಹಾಯ ಮಾಡಿದ್ದರು. ಹಾಗಾಗಿ ನೊಳಂಬರಿಗೆ ಚೋಳರ ಸಹವಾಸವು ಅಷ್ಟಾಗಿ ದೊರೆಯದೇ ಕರ್ನಾಟಕದ ಅರಸ ಮನೆತನದವರೊಂದಿಗೆ ಹೆಚ್ಚು ಸಖ್ಯವನ್ನು ಇರಿಸಿಕೊಂಡಿದ್ದರು. ಆದರೆ ಈ ಕಾಲದಲ್ಲಿ ನೊಳಂಬರ ವಿಸ್ತಾರವಾದ ಸಾಮ್ರಾಜ್ಯವು ಸೀಮಿತಗೊಳಿಸಿ ಕೊಂಡಿದ್ದು, ಇರಿವ ನೊಳಂಬ ಘಂಟೆಯಂಕಕಾರನೆಂಬ ರಾಜನು ನೊಳಂಬ ಸಾಮ್ರಾಜ್ಯವನ್ನು ಆಳುತ್ತಿದ್ದನು. ಈತನ ಕಾಲದ ಶಾಸನವು[೧೩೮] ಆವನಿ ಹೋಬಳಿಯ ಮೇಲಗಾಣಿ ಗ್ರಾಮದಲ್ಲಿ ದೊರಕಿದ್ದು ನೊಳಂಬಾಧಿರಾಜ ಚೋರಯ್ಯ ನೊಳಂಬನೆನ್ನುವವನು ಸೂರ್ಯ ಮಿನಿಯೂರಿನಲ್ಲಿ ಆಳುತ್ತಿದ್ದನೆಂದು ಉಲ್ಲೇಖಿಸಿದೆ. ಶಕ ವರ್ಷ ೯೫೮ರ (ಕ್ರಿ.ಶ.೧೦೩೬) ಕಾಲದ ಈ ಶಾಸನವು ನೊಳಂಬಾಧಿರಾಜ ಚೋರಯ್ಯನನ್ನು

ಹೆಸರಿಸಿದೆ. ಈ ಚೋರಯ್ಯನು ಪೊಳಲ್ಚೋರನ ಇನ್ನೊಬ್ಬನ ಮಗನಾಗಿರಬಹುದೆಂದು ಸಂಶೋಧಕಿ ಜಯಮ್ಮನವರ ಅಭಿಪ್ರಾಯವಾಗಿದೆ. ಶಾಸನವು ಇನ್ನಷ್ಟು ವಿಷಯವನ್ನು ಪ್ರತಿಪಾದಿಸುತ್ತಿದ್ದು 'ಕಾಂಚೀಪುರಾದೀಶ್ವರ'ನೆಂದು ಇವರನ್ನು ಹೆಸರಿಸಿದೆ.

ನೊಳಂಬರು ಹಿಂದೆ ತಿಳಿಸಿರುವಂತೆ ಕಾಲಕಾಲಕ್ಕೆ ಪ್ರಸಿದ್ಧರಾಗಿದ್ದಂತಹ ರಾಜರುಗಳ ಸ್ನೇಹವನ್ನು ಬಳಸಿಕೊಂಡು ರಾಜ್ಯಭಾರವನ್ನು ಮಾಡುತ್ತಿದ್ದರು. ರಾಷ್ಟ್ರಕೂಟರ ನಂತರ ಚಾಳುಕ್ಯರಿಗೆ ಸಾಮಂತರಾಗಿದ್ದಂತೆ ನೊಳಂಬರ ಚಿತ್ರಣವು ದೊರಕುತ್ತದೆ. ನೊಳಂಬರ ವಂಶದಲ್ಲಿ ಬರುವಂತಹ ಉದಯಾದಿತ್ಯದೇವನು ಜಗದೇಕಮಲ್ಲ ನೊಳಂಬ ಎನ್ನುವಂತಹ ವಿಶೇಷಣವನ್ನು ಹೊಂದಿದ್ದನು. ಈತನು ಇರಿವ ನೊಳಂಬನ ಪುತ್ರನು ಮತ್ತು ಚಾಳುಕ್ಯ ದೊರೆ ಜಗದೇಕಮಲ್ಲನ ಹೆಸರನ್ನು ತನ್ನ ಹೆಸರಿನೊಂದಿಗೆ ಸೇರಿಸಿ ಕೊಂಡಿರುವುದು ಗಮನಿಸಬಹುದಾಗಿದೆ. ಉದಯಾದಿತ್ಯದೇವನು ಚಾಳುಕ್ಯ ದೊರೆ ಜಗದೇಕ ಮಲ್ಲನ ಸಾಮಂತನಾಗಿದ್ದುಕೊಂಡು ನೊಳಂಬವಾಡಿ ೩೨೦೦೦, ಕದಂಬಳಿಗೆ೧೦೦೦ ಮೊದಲಾದ ನಾಡುಗಳನ್ನು ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತದೆ. ಈತನಿಗೆ ಸಂಬಂಧಿಸಿದಂತೆ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿಲ್ಲ.

ಉದಯಾದಿತ್ಯನ ನಂತರ ಈತನ ಪುತ್ರನಾದ ಜಗದೇಕಮಲ್ಲ ಇಮ್ಮಡಿ ನೊಳಂಬನು ಪಟ್ಟಕ್ಕೆ ಬಂದನು. ಇವನು ಚಾಳುಕ್ಯ ದೊರೆಗಳ ಸಾಮಂತನಗಿದ್ದಂತೆ ಈತನ ಹೆಸರಿನಿಂದ ತಿಳಿಯಬಹುದು. ಈತನ ನಂತರ ತ್ರೈಲೋಕ್ಯಮಲ್ಲ ನನ್ನಿನೊಳಂಬನು ಪಟ್ಟಕ್ಕೆ ಬಂದಿರುವನು. ಈತ ಉದಯಾದಿತ್ಯದೇವನ ಸಹೋದರನಾಗಿದ್ದು ಚಾಳುಕ್ಯ ದೊರೆ ತ್ರೈಲೋಕ್ಯಮಲ್ಲನ ಸಾಮಂತನಾಗಿದ್ದನು. ಪಾರಂಪರಿಕವಾಗಿ ಬರುವಂತಹ ನೊಳಂಬ ರಾಜರುಗಳಲ್ಲಿ ಈತ ಅಂತಿಮರಾಜನಾಗಿದ್ದನೆಂದು ಇತಿಹಾಸಕಾರರ ಅಭಿಪ್ರಾಯವಿದೆ. ಈತನಿಗೆ ಕುಮಾರ ಚೋರಯ್ಯನೆಂಬ ಪುತ್ರನೂ ಒಬ್ಬಳು ಮಗಳಿದ್ದಳೆಂದು ಅಭಿಪ್ರಾಯವಿದೆ. ಈಕೆಯನ್ನು ಚಾಳುಕ್ಯದೊರೆ ಜಯಸಿಂಹನಿಗೆ ಮದುವೆ ಮಾಡಿ ಕೊಡಲಾಗಿತ್ತೆಂದು ನಂಬಿಕೆ. ಈ ಜಯಸಿಂಹನೇ ನೊಳಂಬ ರಾಜ್ಯವನ್ನು ಮುಂದುವರೆಸಿಕೊಂಡು ಹೋಗಿದ್ದಾನೆ. ಈ ಜಯಸಿಂಹ ದೇವನು ನೊಳಂಬವಾಡಿಯ ಉತ್ತರಾಧಿಕಾರಿಯಾಗಿದ್ದನೆಂದು ತಿಳಿಯಬಹುದು. ತ್ರೈಲೋಕ್ಯಮಲ್ಲ ಜಯಸಿಂಹ ದೇವನೆಂಬ ವಿಶೇಷಣವನ್ನು ಹೊಂದಿದ್ದನು. ಆದರೆ ಈತನು ನೊಳಂಬರ ಹೆಸರನ್ನು ಹೇಗೆ ಹೊಂದಿದ್ದನೆಂದು ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಹುಶಃ ನೊಳಂಬರು ಚೋಳರ ಸಾಮಂತರಾಗಿದ್ದುಕೊಂಡು ಹೋಗಿರುವುದು ಇದಕ್ಕೆ ಕಾರಣವಾಗಿರಬಹುದು. ಈತನ ಕಾಲದ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುತ್ತಿಲ್ಲ.

ತ್ರಿಭುವನ ಕರ್ತಾರದೇವ

"ಶ್ರೀಮದಾವನ್ಯ ಸ್ಥಾನಮಂ ನಾಲ್ವತ್ತು
ವರ್ಷಮನಾಳ್ದಯಿವತ್ತು ದೇಗುಲಂ ಮಾಡಿಪಿರಿಯವೆ
ಎರಡು ಕೆರೆಯ ಕಟ್ಟಿ ಶಕ ವರುಷಮೆಂಟನೂರ್ರೆಂಬ
ತಮೂರಾದಂದು ವಿಶ್ರಾಂತಿಗೆಯ್ದು ಶ್ರೀ ತ್ರಿಭುವನಕರ್ತಾರದೇವಂ
ಕಲಿಯುಗರುದ್ರಾಂಕ ರುದ್ರಲೋಕ ಪ್ರಾಪ್ತನಾದಂ"

ಮುಳಬಾಗಿಲು ತಾಲ್ಲೂಕಿನ ಆವನಿ ಗ್ರಾಮದಲ್ಲಿರುವಂತಹ ಕಲ್ಲುಬಂಡೆಯ ಮೇಲಿರುವ ಶಾಸನವು[೧೪೯] ತ್ರಿಭುವನಕರ್ತರದೇವನೆಂಬುವವನನ್ನು ಉಲ್ಲೇಖಿಸಿವೆ. ಈತನು ಆವನಿ ಸ್ಥಾನವನ್ನು ನಲ್ವತ್ತು ವರ್ಷಗಳ ತನಕ ಆಳಿದವನೂ, ೫೦ ದೇಗುಲಗಳನ್ನು ಮಾಡಿಸಿದವನೂ, ಎರಡು ಕೆರೆಯನ್ನು ಕಟ್ಟಿಸಿರುವನೆಂದು ಶಾಸನವು ಉಲ್ಲೇಖಿಸಿದೆ. ಈತನು ಶಕ ವರುಷ ೮೫೩ರಂದು ರುದ್ರಲೋಕ ಪ್ರಾಪ್ತನಾದನೆಂದು ಶಾಸನವು ತಿಳಿಸುತ್ತದೆ.

ತ್ರಿಭುವನ ಕರ್ತಾರದೇವನೆಂಬ ಪ್ರಸಿದ್ಧನಾದ ವ್ಯಕ್ತಿಯಿದ್ದು ಆತನು ಆವನಿಯ ಪ್ರಾಂತ್ಯವನ್ನು ಆಳುತ್ತಿದ್ದನೆಂದು ಈ ಶಾಸನದಿಂದ ತಿಳಿಯಲ್ಪಡುತ್ತದೆ. ಅವನಿ ಹೋಬಳಿಯ ಈಶ್ವರ ದೇವಾಲಯದಲ್ಲಿ ಕೊರೆದಿರುವಂತಹ ವೀರಗಲ್ಲು ಶಾಸನವು[೧೫೦] ದಿಲೀಪಯ್ಯನು ಪೃಥುವಿಯನ್ನು ಆಳುತ್ತಿರಲು ತ್ರಿಭುವನ ಕರ್ತಾರನು 'ತಪೋರಾಜ್ಯ'ವನ್ನು ಮಾಡುತ್ತಿದ್ದನೆಂದು ತಿಳಿಸುತ್ತದೆ. ಹಾಗಾಗಿ ಈತನು ನೊಳಂಬ ದಿಲೀಪಯ್ಯನ ಆಳ್ವಿಕೆಯ ಕಾಲದಲ್ಲಿ ಆವನಿಯ ಕ್ಷೇತ್ರವನ್ನು ನೋಡಿಕೊಳ್ಳುತ್ತಿದ್ದನೆಂದು ತಿಳಿಯಬಹುದು. ತಪರಾಜ್ಯ ಗೈಯ್ಯುತ್ತಿರೆ ಎಂದು ಹೇಳಿರುವುದರಿಂದ ಬಹುಶಃ ಈತನು ಆವನಿ ಕ್ಷೇತ್ರದ ಧರ್ಮಾಧಿಕಾರಿಯಾಗಿದ್ದಿರಬಹುದು. ಆವನಿಯ ಸುತ್ತಮುತ್ತಲಿನ ಪ್ರದೇಶದ ಜವಾಬ್ದಾರಿಯನ್ನು ನೊಳಂಬರಸ ದಿಲೀಪಯ್ಯನು ಈತನಿಗೆ ನೀಡಿರಬಹುದು. ಹಾಗಾಗಿ ಆವನಿಯ ಶಾಸನದಲ್ಲಿ ಉಕ್ತವಾಗಿರುವಂತೆ ಈತನು ಸಾಮಾಜಿಕ ಕೆಲಸಗಳನ್ನು ಮಾಡುತ್ತಾ ಈ ಸ್ಥಳದ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು.

ಶ್ರೀ ತ್ರಿಭುವನ ಕರ್ತಾರದೇವ, ತ್ರಿಭುವನ ಕರ್ತಾರ ಭಟಾರರ, ತ್ರಿಭುವನ ಕರ್ತಾರ ಪಂಡಿತ, ಕಲಿಯುಗ ರುದ್ರಾಂಕ ಎಂದು ಮೊದಲಾಗಿ ಗೌರವಕ್ಕೆ ಪಾತ್ರನಾಗಿದ್ದ ಈತನು ಇತರ ರಾಜರುಗಳಿಗೆ ದೊರಕುತ್ತಿದ್ದಂತಹ ಗೌರವಗಳನ್ನು ಪಡೆದುಕೊಂಡಿದ್ದನು. ಬಹುಶಃ ನೊಳಂಬ ದೊರೆ ದಿಲೀಪಯ್ಯನ (ಕ್ರಿ.ಶ.೯೪೧ರಿಂದ ೯೬೮) ಆಡಳಿತಾವಧಿಯಲ್ಲಿ ಶ್ರೇಷ್ಠ ರಾಜನೊಬ್ಬನಿಗೆ ನೀಡಿದ್ದಂತಹ ಸ್ಥಾನವನ್ನು ಧಾರ್ಮಿಕ ಜೀವಿಯಾದ ಈತನಿಗೂ ನೀಡಿರಬಹುದು.

ಆವನಿಯ ರಾಮೇಶ್ವರ ದೇವಾಲಯದ ಪರಿಸರದಲ್ಲಿ ಇರುವಂತಹ ಲಕ್ಷ್ಮಣೇಶ್ವರ ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಗೋಡೆಯಲ್ಲಿರುವ ಒಂದು ಕೆತ್ತನೆಯಲ್ಲಿ 'ಶ್ರೀ ತ್ರಿಭುವನ ಕರ್ತರರ್ ಭಟರರ್' ಎಂದು ಬರೆಯಲಾಗಿದೆ. ತೇಜೋಮಯನಾದ ಒಬ್ಬ ಯತಿಯ ಈ ಕೆತ್ತನೆಯು ಒಬ್ಬ ಯತಿಗಿರಬೇಕಾದ ಸಹಜವಾದ ಉಡುಗೆ ತೊಡುಗೆಗಳನ್ನು ಹೊಂದಿದೆ. ಕಮಲದ ಹೂವಿನ ಮೇಲೆ ಕುಳಿತಿರುವ ಭಂಗಿಯಲ್ಲಿ ಕೆತ್ತನೆಯಿದ್ದು, ಒಂದು ಕೈಯಲ್ಲಿ ಕಮಂಡಲ, ಹೆಗಲಲ್ಲಿ ಯಜ್ಞೋಪವೀತ ಇತ್ಯಾದಿಗಳನ್ನು ಕಾಣಬಹುದು.

ಶಾಸನಗಳಲ್ಲಿ 'ರುದ್ರಲೋಕ ಪ್ರಾಪ್ತನಾದಂ' ಎಂದು ನೀಡಿರುವುದರಿಂದ ಈತನು ಶೈವ ಮತಾವಲಂಭಿಯಾಗಿದ್ದಿರಬಹುದು. ಈತನ ಮರಣದ ನಂತರವೂ ಈ ಪ್ರದೇಶದ ಜನರು ಈತನ ಗುಣಗಾನವನ್ನು ಮಾಡುತ್ತಿದ್ದಿರಬಹುದು. ಏಕೆಂದರೆ ಆವಣಿಯ ಗ್ರಾಮದ ರಾಮೇಶ್ವರ ದೇವಾಲಯದ ಪ್ರದೇಶದಲ್ಲಿರುವ ಇನ್ನೊಂದು ಶಾಸನವು ಮಹೇಂದ್ರ ಭಟ್ಟನೆಂಬುವವನು ಕಲಿಯುಗ ರುದ್ರನಿಗೆ ಕಿರಿಯ ದೇಗುಲವನ್ನು (ಚಿಕ್ಕದಾದದೇವಾಲಯ) ರಚಿಸಿರುವನೆಂದು ತಿಳಿಸುತ್ತದೆ.[೧೫೧] ಧಾರ್ಮಿಕವಾಗಿಯೂ, ರಾಜನೀತಿಕವಾಗಿಯೂ ತ್ರಿಭುವನ ಕರ್ತಾರದೇವನು ಆವಣಿಯ ಕ್ಷೇತ್ರದಲ್ಲಿ ಬಹಳ ಪ್ರಭಾವ ಬೀರಿದ್ದನು.

೨.೨.೮. ವೈದುಂಬರು

ಕರ್ನಾಟಕದ ಇತಿಹಾಸದಲ್ಲಿ ಅದರಲ್ಲೂ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಅಲ್ಪಸ್ವಲ್ಪ ಕಂಡುಬರುವಂತಹ ವೈದುಂಬರರು ಸಾಮಂತ ರಾಜಮನೆತನದವರಾಗಿದ್ದರು. ಈ ವೈದುಂಬರು ನೊಳಂಬ, ಗಂಗ ಮತ್ತು ನಿಡುಗಲ್ ಚೋಳರ ಸಮಕಾಲೀನರಾಗಿ ಕಂಡುಬರುತ್ತಾರೆ. ವೈದುಂಬರಿಗೆ ಸಂಬಂಧಿಸಿದಂತಹ ಶಾಸನಗಳು ಈ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ದೊರಕುತ್ತಿವೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲು ತಾಲ್ಲೂಕು ಮತ್ತು ದೊಡ್ಡಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಇವರಿಗೆ ಸಂಬಂಧಿಸಿದ ಶಾಸನಗಳು ದೊರಕಿವೆ. ಬಹುಶಃ ಕೋಲಾರ ಜಿಲ್ಲೆಗೆ ಬಂದು ಪ್ರಸಿದ್ಧರಾಗಿದ್ದಂತಹ ರಾಜಮನೆತನದವರೊಂದಿಗೆ ಸಾಮಂತರಾಗಿದ್ದಂತೆ ಕಂಡುಬರುತ್ತಿದ್ದಾರೆ.

ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಗ್ರಾಮದ ಶಾಸನವು[೧೪೨] 'ಶ್ರೀವೈದುಂಬನ್ ರಣಾಂತಕ'ನೆಂದು ಹೆಸರಿಸಿದೆ. ಮುಂದಿನ ವಿಷಯಗಳೇನು ದೊರೆಯುತ್ತಿಲ್ಲವಾದರೂ ವೈದುಂಬರ ಅಸ್ತಿತ್ವವನ್ನು ತಿಳಿಸಿರುವಂತಹ ಶಾಸನ ಇದಾಗಿದೆ. ಗಂಗರಿಗೂ ವೈದುಂಬರಿಗೂ ಪರಸ್ಪರ ಮೈತ್ರಿಯಿದ್ದಂತೆ ತೋರುತ್ತದೆ. ಕ್ರಿ.ಶ.೮೨೬ರರ ಸುಮಾರಿಗೆ ಗಂಗರಿಗೂ ಬಾಣರಿಗೂ ಯುದ್ಧನಡೆದಂತಹ ಸಂದರ್ಭದಲ್ಲಿ ವೈದುಂಬರ ರಾಜನು ಬಾಣರ ವಿರುದ್ಧ ಹೋರಾಡಲು ಗಂಗರಿಗೆ ಸಹಾಯ ಮಾಡಿದ್ದನು. ಈ ಯುದ್ಧವು ಗಂಗರ ರಾಜಧಾನಿಯಾಗಿದ್ದ ಮಾನ್ಯಪುರ(ಮಣ್ಣೆ)ದಲ್ಲಿ ನಡೆದಿತ್ತು. ಈ ಯುದ್ಧದಲ್ಲಿ ನೊಳಂಬ ದೊರೆಗಳು ವೈದುಂಬರೊಂದಿಗೆ ಸಹಾಯಹಸ್ತವನ್ನು ನೀಡಿದ್ದರೆಂದು ತೋರುತ್ತದೆ. ಹಾಗಾಗಿ ಈ ಅವಧಿಯಲ್ಲಿ ವೈದುಂಬರರು ಬಾಣರ ಮತ್ತು ಗಂಗರ ಒಡನಾಡಿಗಳಾಗಿದ್ದಿರಬಹುದು.[೧೪೩]

ನೊಳಂಬ ರಾಜಮನೆತನದಲ್ಲಿ ಒಂದನೆಯ ಮಹೇಂದ್ರನು ಪ್ರಸಿದ್ಧ ದೊರೆಯಾಗಿದ್ದನು. ಈತನು ಪಟ್ಟಾಭಿಷಕ್ತನಾದ ಕೂಡಲೇ ನೊಳಂಬರ ರಾಜ್ಯವನ್ನು ವಿಸ್ತಾರ ಮಾಡುವ ಸಲುವಾಗಿ ತನ್ನ ಸುತ್ತಮುತ್ತಲಿದ್ದಂತಹ ಸಣ್ಣ ಸಣ್ಣ ಸಾಮಂತರಾಜ್ಯಗಳನ್ನು ತನ್ನ ವಶಕ್ಕೆ ಮಾಡಿಕೊಳ್ಳುತ್ತಾನೆ. ತನ್ನ ಅಕ್ಕಪಕ್ಕದಲ್ಲಿದ್ದಂತಹ ಬಾಣ, ಚೋಳ, ವೈದುಂಬರೇ ಮೊದಲಾದಂತಹ ಸಣ್ಣ ರಾಜ್ಯಗಳ ವಿಸ್ತಾರವನ್ನು ಕುಗ್ಗಿಸಿ ನೊಳಂಬವಾಡಿಯನ್ನು ವಿಸ್ತರಿಸುತ್ತಾನೆ. ಬಹುಶಃ ಈ ಸಂದರ್ಭದಲ್ಲಿ ಕೋಲಾರದ ಆಗ್ನೇಯಭಾಗದ ಸಣ್ಣ ಪ್ರದೇಶದಲ್ಲಿ ವೈದುಂಬರು ನೆಲೆಸಿರಬಹುದು. ಮಹೇಂದ್ರನ ಆಡಳಿತಾವಧಿಯಲ್ಲಿ ಆತನು ತಮಗೆ ಒಮ್ಮೆ ಆಧಾರವಾಗಿದ್ದಂತಹ ಗಂಗರ ಮೇಲೆ ದಂಡೆತ್ತಿ ಹೋಗಬೇಕಾದಂತಹ ಸಂದರ್ಭದಲ್ಲಿ ಮಹೇಂದ್ರನು ಪುಲಿನಾಡಿನ ಮೇಲೆ ದಂಡೆತ್ತಿ ಬರುವಂತೆ ಮಹಾರಾಜನಿಗೆ ಹೇಳುತ್ತಾನೆ. ಈ ಮಹಾರಾಜನು ವೈದುಂಬರರ ರಾಜನಾಗಿದ್ದನು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಬೈಯಪ್ಪಳ್ಳಿ ಗ್ರಾಮದ ವೀರಗಲ್ಲು ಶಾಸನವು[೧೪೪] ಮೈಯಿಂದ–ಮರಸನೆಂದು ಉಲ್ಲೇಖಿಸಿದೆ. ಈ ಮಯಿಂದಮರಸನು ಯಾರೆಂದು ಭಿನ್ನಾಭಿಪ್ರಾಯಗಳಿದ್ದು (ವೈ)(ಮೈ)ದುಬರಸ ಎಂಬುವುದರ ರೂಪಾಂತರವು ಮಯಿಂದಮರಸ ಎಂದಾಗಿರಬಹುದು. ಈ ಮಯಿಂದಮರಸನು ಗಂಗರಿಗೆ ಅಧೀನನಾಗಿದ್ದನೆಂದು ಮತ್ತು ಚೋಳರೊಂದಿಗೆ ಮಿತ್ರತ್ವವನ್ನು ಹೊಂದಿದ್ದನೆಂದು ತಿಳಿಸುತ್ತದೆ. ಈ ಮಯಿಂದಮರಸನು ನೊಳಂಬ ದೊರೆ ಒಂದನೆಯ ಮಹೇಂದ್ರನೆಂಬ ಅಭಿಪ್ರಾಯವಿದೆ. ಈ ಮಹೇಂದ್ರನು ಬಾಣ, ಚೋಳ ಮತ್ತು ವೈದುಂಬರಸರಿಂದ ನೊಳಂಬರರಸರಿಗೆ ಸಂಬಂಧಿಸಿದಂತಹ ಪ್ರದೇಶಗಳನ್ನು ವಶಪಡಿಸಿಕೊಂಡು ನೊಳಂಬರಿಗೆ ೧೦೦೦೦ ವನ್ನು ಆಳುತ್ತಿದ್ದನು ಎಂದು ಶ್ರೀನಿವಾಸಪುರ ತಾಲ್ಲೂಕಿನ ಬೈರಗಾನಪಲ್ಲಿಯಲ್ಲಿರುವಂತಹ

ಶಾಸನವು[೧೪೫] ತಿಳಿಸಿದೆ. ಆದರೆ ಕ್ರಿ.ಶ. ಸುಮಾರು ೯೦೦ಕ್ಕೆ ಸರಿಹೊಂದಬಹುದು. ಬಹುಶಃ ಈ ವೈದುಂಬ ಅರಸನ ಮೇಲೆ ಮಹೇಂದ್ರನಿಂದ ಆಕ್ರಮಣವು ನಡೆದಿರಬಹುದು. ಪುಲಿನಾಡಿನ ಮೇಲೆ ಆಕ್ರಮಣವು ನಡೆದಾಗ ವೀರನೊಬ್ಬನು ಮರಣವನ್ನು ಹೊಂದಿರುವಂತಹ ಮಾಹಿತಿಯನ್ನು ಒದಗಿಸುತ್ತದೆ. ಪುಲಿನಾಡು ವೈದುಂಬರ ಕೇಂದ್ರಸ್ಥಾನವಾಗಿರಬಹುದು. ಹಿಂದೆ ವೈದುಂಬರ ಅರಸರ ಮಿತ್ರರಾಗಿದ್ದಂತಹ ನೊಳಂಬರೇ ಇವರ ಮೇಲೆ ಆಕ್ರಮಣ ಮಾಡಿರಬಹುದು.

ನೊಳಂಬರ ಒಂದನೆಯ ಮಹೇಂದ್ರನು ಪುಲಿನಾಡಿನ ಮೇಲೆ ಆಕ್ರಮಣ ಮಾಡಿರುವಂತಹ ವಿಚಾರವು ಬೇರೆ ಶಾಸನಗಳಿಂದ ತಿಳಿದುಬರುತ್ತದೆ. ತಮಿಳುನಾಡಿನ ಕೃಷ್ಣಗಿರಿ ತಾಲ್ಲೂಕಿನ ರಾಯಕೋಟೆಯಲ್ಲಿ ದೊರಕಿರುವಂತಹ ಕನ್ನಡ ಶಾಸನವೊಂದು[೧೪೬] ವೈದುಂಬರಸರ ಪ್ರಸ್ತಾಪವನ್ನು ಮಾಡಿದೆ. ಮಹಾಬಲಿ ಬಾಣರಸ ಜಯಮೇರುವಿನ ಆಳ್ವಿಕೆಗೆ ಸಂಬಂಧಿಸಿದ ಕ್ರಿ.ಶ.೮೪೭ರ ಈ ಶಾಸನವು ಕಂಚಿ, ಮಣ್ಣೆಯ, ವೈದುಂಬ, ಮಹಾಬಲಿಬಾಣರಸರ ಪ್ರಸ್ತಾಪ ಮಾಡಿದೆ.

ಬಂಗಾರಪೇಟೆ ತಾಲ್ಲೂಕು ಬೇತಮಂಗಲದ ವಿಜಯರಂಗ ಸ್ವಾಮಿ ದೇವಾಲಯದ ಶಾಸನವು[೧೪೭] ವೈದುಂಬರ ಕುರಿತಾಗಿ ಅಪೂರ್ವವಾದಂತಹ ಮಾಹಿತಿಯನ್ನು ನೀಡುತ್ತದೆ. ನೊಳಂಬ ದೊರೆ ಏಕವಾಕ್ಯ ಇರುವನೊಳಂಬಾಧಿರಾಜ ನೊಲಿಪಯ್ಯನ ಆಡಳಿತಕ್ಕೆ ಸಂಬಂಧಿಸಿದಂತಹ ಈ ಶಾಸನವು ವಿಕ್ರಮಾದಿತ್ಯನೆಂಬ ವೈದುಂಬ ಅರಸನನ್ನು ಹೆಸರಿಸಿದೆ. ಕ್ರಿ.ಶ.೯೨೦ರ ಈ ಶಾಸನವು ವೈದುಂಬರಸನು ನೊಲಿಪಯ್ಯನ ಸಾಮಂತರಾಗಿದ್ದಂತೆ ತಿಳಿಸುತ್ತಿದ್ದು, ವೈದುಂಬರಸನು ವಿಜಯಾದಿತ್ಯ ಮಂಗಲದಲ್ಲಿ ಕೆರೆಯನ್ನು ಜೀರ್ಣೋದ್ಧಾರಗೊಳಿಸಿದಂತೆ ವರ್ಣಿಸಿದೆ. ಅರಸನನ್ನು ವೈದುಂಬ ಶಿಖಾಮಣಿಯೆಂದು ಹೊಗಳಿದೆ. ವಿಜಯಾದಿತ್ಯ ಮಂಗಲವು ಈಗಿನ ಬೇತಮಂಗಲವಾಗಿದೆ. ಬೇತಮಂಗಲವು ಬಹುಶಃ ವೈದುಂಬರ ಪ್ರಮುಖ ಸ್ಥಾನವಾಗಿತ್ತು. 'ತ್ರಿನೇತ್ರ ಮದಕರಿ ಮಲ್ಲನೆಂದು ಈ ರಾಜನನ್ನು ಕರೆದಿದ್ದು, ರಾಜನು ಪಿರಿಯ ಕೆರೆಯನ್ನು ಜೀರ್ಣೋದ್ಧಾರಗೊಳಿಸಿ ಕಯ್ವಾರನಾಡಿನ ಮಹಾಜನರಿಗೆ ಬಿತ್ತುಕಟ್ಟು ನೀಡಿರುವುದನ್ನು ತಿಳಿಸಿದೆ. ವೈದುಂಬರು ನೊಳಂಬರ ಆಡಳಿತಾವಧಿಯಲ್ಲಿ ಪ್ರಬಲರಾಗಿದ್ದರೆಂದು ಈ ಶಾಸನದಿಂದ ಊಹಿಸಬಹುದಾಗಿದೆ. ಅದಲ್ಲದೆಯೇ ಕಯ್ವಾರ ನಾಡು ವೈದುಂಬರ ಆಳ್ವಿಕೆ ಸೇರಿತ್ತು.

ಕ್ರಿ.ಶ.೧೦೧೦ರ ಬಳ್ಳಾರಿ ತಾಲ್ಲೂಕಿನ ಸಿಂದಿಗೆರೆ ಗ್ರಾಮದ ನೊಳಂಬರ ಕಾಲದ ಶಾಸನವು[೧೪೮] ವೈದುಂಬ ವಂಶದ ಮಗ ಬೇತ ಮಹಾರಾಜನನ್ನು ಹೆಸರಿಸಿದೆ. ಈತನು ನೊಳಂಬರಿಗೆ ಮಹಾಮಂಡಲೇಶ್ವರನಾಗಿದ್ದನೆಂದೂ, '**ಅನೇಕ ಸಮರ ಸಂಘಟ್ಟನೋಪಲಬ್ದ ವಿಜಯಲಕ್ಷ್ಮಿ** . . . ಮೊದಲಾದಂತಹ ಬಿರುದಾಂಕಿತನೂ ಎಂದು ಉಲ್ಲೇಖಿಸಲಾಗಿದೆ.

ನೊಳಂಬರು ಕೋಲಾರ ಜಿಲ್ಲೆಯ ಪ್ರದೇಶಗಳನ್ನು ಬಿಟ್ಟು ರಾಯಚೂರು, ಬಳ್ಳಾರಿ ಮೊದಲಾದ ಪ್ರದೇಶಗಳನ್ನು ಆಳ್ವಿಕೆ ಮಾಡಲು ಪ್ರಾರಂಭಿಸಿದಂತಹ ಸಂದರ್ಭದಲ್ಲಿ ಇವರಿಗೆ ಅಧೀನರಾಗಿದ್ದಂತಹ ವೈದುಂಬರರೂ ಕೂಡ ಈಶಾನ್ಯ ಕರ್ನಾಟಕದ ಕಡೆಗೆ ಹೋಗಿರಬಹುದು.

೧೦ಮತ್ತು ೧೧ನೆಯ ಶತಮಾನದಲ್ಲಿದ್ದಂತಹ ವೈದುಂಬರಸರನ್ನು ಚೋಳ ದೊರೆಗಳಾದ ಪರಾಂತಕ ಚೋಳ ಮತ್ತು ವೀರರಾಜೇಂದ್ರರು ಸೋಲಿಸಿರುವಂತೆ ಕಂಡುಬರುತ್ತದೆ. ಹಿಂದೆ ತಿಳಿಸಿರುವಂತೆ ವೈದುಂಬರರ ಕುರಿತಾಗಿ ಮಾಹಿತಿಗಳು ಅತ್ಯಲ್ಪವಾಗಿ ದೊರಕುತ್ತಿದ್ದು ಪ್ರಧಾನರಾಗಬೇಕಾಗಿ ಪ್ರಯತ್ನ ನಡೆಸಿದ್ದರೂ ಪ್ರಮುಖ

ರಾಜಮನೆತನಗಳ ಪ್ರಭಾವಕ್ಕೊಳಗಾಗಿ ಸಾಮಂತರಾಗಿಯೇ ಉಳಿದರು. ಕ್ರಿ.ಶ.೮ರಿಂದ ಸುಮಾರು ೧೧ನೆಯ ಶತಮಾನದ ಅರ್ಧಭಾಗದ ಅವಧಿಯಲ್ಲಿ ಆಳ್ವಿಕೆ ನಡೆಸಿದಂತಹ ವೈದುಂಬರಸರು ನಂತರ ಕಾಲದಲ್ಲಿ ಮರೆಯಾದಂತೆ ಕಂಡುಬರುತ್ತಾರೆ.

೨.೨.೯. ಚೋಳರು

ಕರ್ನಾಟಕದ ಇತಿಹಾಸದಲ್ಲಿ ಕರ್ನಾಟಕದ ರಾಜಮನೆತನದವರು ಕರ್ನಾಟಕದಲ್ಲಿ ಮಾತ್ರವಲ್ಲದೆಯೇ ಇತರ ರಾಜ್ಯಗಳಲ್ಲಿ ತಮ್ಮ ಪ್ರಭಾವವನ್ನು ಬೀರಿರುವಂತೆ ಬೇರೆ ರಾಜ್ಯಗಳ ರಾಜಮನೆತನದವರು ಕರ್ನಾಟಕದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಅಂತಹ ಮನೆತನದವರಲ್ಲಿ ಚೋಳರು ಪ್ರಮುಖರು. ಈ ಮನೆತನದವರು ದಕ್ಷಿಣಭಾರತದಲ್ಲಿ ಪ್ರಮುಖ ರಾಜವಂಶದವರಾಗಿದ್ದರು. ಹತ್ತನೆಯ ಶತಮಾನದ ಅಂತ್ಯದಲ್ಲಿ ಗಂಗ ಅರಸರ ಪ್ರಾಬಲ್ಯವು ಕ್ಷೀಣಗೊಂಡಂತಹ ಸಂದರ್ಭದಲ್ಲಿ ತಂಜಾವೂರಿನ ಚೋಳರು ಪ್ರಬಲರಾಗಿ ಕರ್ನಾಟಕದ ಆಗ್ನೇಯ ಮತ್ತು ದಕ್ಷಿಣಭಾಗಗಳನ್ನು ವಶಪಡಿಸಿಕೊಂಡರು. ಅಂತಹ ಭಾಗಗಳಲ್ಲಿ ಕೋಲಾರ ಜಿಲ್ಲೆಯೂ ಸೇರಿತ್ತು. ಈ ಚೋಳರು ತಮ್ಮ ಸಮಕಾಲೀನರಾದ ರಾಷ್ಟ್ರಕೂಟರ ಸಹಾಯದಿಂದ ಗಂಗವಾಡಿ, ನೊಳಂಬವಾಡಿ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡರು.[೧೪೯]

ಚೋಳರು ತಮ್ಮ ಆಡಳಿತಾವಧಿಯಾದ ಕ್ರಿ.ಶ.೮೭೦ರಿಂದ ೧೧೧೮ರ ವರೆಗೆ ಕರ್ನಾಟಕದ ಹಲವಾರು ಪ್ರದೇಶಗಳನ್ನು ತಮ್ಮ ವಶಕ್ಕೆ ಒಳಪಡಿಸಿದ್ದರು. ತುಮಕೂರು, ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು ಮತ್ತು ಕೋಲಾರ ಜಿಲ್ಲೆಗಳಲ್ಲೂ ತಮ್ಮ ಆಡಳಿತವನ್ನು ವಿಸ್ತರಿಸಿದ್ದರು. ಕೋಲಾರ ಜಿಲ್ಲೆಯಲ್ಲೂ ಪ್ರಬಲವಾಗಿ ಇವರು ಆಡಳಿತವನ್ನು ಸ್ಥಾಪಿಸಿ ಆ ಜಿಲ್ಲೆಯಲ್ಲಿ ಕಲೆ, ಸಾಹಿತ್ಯ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹವನ್ನು ನೀಡಿದ್ದರು. ಚೋಳ ಅರಸರಲ್ಲಿ ಮೊದಲನೆಯವನಾದ ವಿಜಯಾಲಯ ಚೋಳನಿಂದ ಆರಂಭಿಸಿ ಮುಮ್ಮಡಿ ರಾಜೇಂದ್ರನವರೆಗಿನ ಹಲವಾರು ಬಲಿಷ್ಠ ರಾಜರುಗಳು ತಮ್ಮ ರಾಜ್ಯವನ್ನಷ್ಟೇ ಅಲ್ಲದೆ ಕರ್ನಾಟಕದಲ್ಲಿ ಅದರಲ್ಲೂ ಕೋಲಾರ ಜಿಲ್ಲೆಯ ಹಲವಾರು ಪ್ರದೇಶಗಳನ್ನು ತಮ್ಮ ಕೈವಶ ಪಡಿಸಿಕೊಂಡಿದ್ದರು.

ಕೋಲಾರ ಜಿಲ್ಲೆಯಲ್ಲಿ ಚೋಳರ ಪ್ರಾರಂಭಕಾಲಕ್ಕೆ ಸಂಬಂಧಿಸಿದ ಯಾವುದೇ ಶಾಸನಗಳು ದೊರಕುವುದಿಲ್ಲ. ಚೋಳರಿಗೆ ಸಂಬಂಧಿಸಿದ ಮೊದಲ ಶಾಸನವು[೧೫೦] ಮುಳಬಾಗಿಲು ತಾಲ್ಲೂಕಿನ ಬೈರಕೂರು ಗ್ರಾಮದಲ್ಲಿ ದೊರಕಿದ್ದು ಚೋಳರ ಪ್ರಮುಖ ಅರಸರುಗಳಲ್ಲಿ ಮೊದಲಿಗನಾದ ಒಂದನೆಯ ಪರಾಂತಕ ಚೋಳನಿಗೆ ಸಂಬಂಧಿಸಿದುದಾಗಿದೆ. ಇದು ಕ್ರಿ.ಶ.೯೩೬ನೆಯ ಇಸವಿಗೆ ಸಂಬಂಧಿಸಿದುದಾಗಿದ್ದು ಪರಾಂತಕ ಚೋಳನ ೨೯ನೆಯ ವರ್ಷದ ಆಳ್ವಿಕೆಯನ್ನು ಸೂಚಿಸಿದೆ. ಈ ಶಾಸನವು ದಾನಶಾಸನವಾಗಿದ್ದು, ಈತನ ಕಾಲಕ್ಕಾಗಲೇ ಚೋಳರು ಕರ್ನಾಟಕವನ್ನು ಪ್ರವೇಶಿಸಿ ಬೇರೂರಿದ್ದರು ಎಂದು ಊಹಿಸಬಹುದು.

ಚೋಳರ ಇತಿಹಾಸ

ದಕ್ಷಿಣಭಾರತದಲ್ಲಿ ಪ್ರಬಲರಾದಂತಹ ರಾಜರುಗಳಲ್ಲಿ ಚೋಳರು ಕೂಡ ಒಬ್ಬರು. ಕಂಚಿಯ ಪಲ್ಲವರ ಪತನಾನಂತರ ತಮಿಳುನಾಡಿನಲ್ಲಿ ಪ್ರಬಲವಾಗಿ ನೆಲೆನಿಂತವರು ಚೋಳರು. ಕ್ರಿ.ಶ.೯ನೆಯ ಶತಮಾನದಿಂದ ಕ್ರಿ.ಶ.೧೩ನೆಯ ಶತಮಾನದವರೆಗೆ ತಮಿಳುನಾಡು, ಆಂಧ್ರಪ್ರದೇಶದ ದಕ್ಷಿಣಭಾಗ ಮತ್ತು ಕರ್ನಾಟಕದ ಪೂರ್ವ

ಗಡಿಭಾಗದ ಅನೇಕ ಪ್ರದೇಶಗಳನ್ನು ಆಳಿದ್ದರು. ಇದಲ್ಲದೆ ಇಂದಿನ ಶ್ರೀಲಂಕಾ, ಆಗ್ನೇಯ ಏಷ್ಯ ಮತ್ತು ಮಾಲ್ಡೀವ್ಸ್ ದ್ವೀಪ ಸಮೂಹಗಳನ್ನು ಆಳಿದ್ದರೆಂದು ಇತಿಹಾಸಕಾರರು ಊಹಿಸುತ್ತಾರೆ. ಭಾರತೀಯ ಸಂಸ್ಕೃತಿಯನ್ನು ದೇಶ ವಿದೇಶಗಳಲ್ಲೂ ಹರಡುವಂತೆ ಮಾಡುವಲ್ಲಿ ತಮ್ಮ ಪಾಲನ್ನು ಸಲ್ಲಿಸಿದ್ದರು. ಬೃಹತ್ ದೇವಾಲಯಗಳ ನಿರ್ಮಾಣ ಮತ್ತು ತಮಿಳು ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಂತಹ ಚೋಳರು ಆ ಕ್ಷೇತ್ರಗಳಲ್ಲಿ ಅದ್ವಿತೀಯವಾದಂತಹ ಸೇವೆಯನ್ನು ಸಲ್ಲಿಸಿದ್ದರು. ತಂಜಾವೂರಿನ 'ಬೃಹದೇಶ್ವರ ದೇವಾಲಯ'ವು ಚೋಳರ ಕಲಾ ನೈಪುಣ್ಯತೆಗೆ ಕೈಗನ್ನಡಿಯಂತಿದೆ.

ತಮಿಳುನಾಡಿನ 'ಉರೈಯೂರು' ಇವರ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಚೋಳರು ಆಳ್ವಿಕೆ ನಡೆಸಿದಂತಹ ಪ್ರದೇಶವನ್ನು 'ಚೋಳಮಂಡಲ'ವೆಂದು ಕರೆಯುತ್ತಿದ್ದರು. ತಮಿಳನ್ನು ಪ್ರಧಾನವಾದಂತಹ ಭಾಷೆಯನ್ನಾಗಿರಿಸಿಕೊಂಡು ತಮಿಳು ಸಾಹಿತ್ಯ ಬೆಳೆಸುವಲ್ಲಿ ಶ್ರಮಿಸಿದ್ದರು. ತಮಿಳು ಭಾಷೆಯಲ್ಲಿ ಪ್ರಸಿದ್ಧವಾಗಿರುವಂತಹ 'ಕಂಬರಾಮಾಯಣ'ವನ್ನು ಕವಿ ಕಂಬನು ಚೋಳರ ಆಡಳಿತಾವಧಿಯಲ್ಲೇ ರಚಿಸಿರುವನು. ವಿಶಿಷ್ಟಾದ್ವೈತ ತತ್ವ ಪ್ರತಿಪಾದಕರಾದ ರಾಮಾನುಜಾಚಾರ್ಯರು ಚೋಳರ ಆಡಳಿತಾವಧಿಯಲ್ಲಿ ಶ್ರೀರಂಗನಲ್ಲಿ ತತ್ವ ಪ್ರಚಾರವನ್ನು ಮಾಡಿದ್ದರು. ಶೈವ ಧರ್ಮಾನುಯಾಯಿಗಳಾಗಿದ್ದಂತಹ ಚೋಳರು ಬೃಹತ್ ಶಿವ ದೇವಾಲಯಗಳನ್ನು ನಿರ್ಮಿಸಿದ್ದರು.

ಪಲ್ಲವರ ಅಧೀನರಾಗಿದ್ದುಕೊಂಡು ಆಡಳಿತವನ್ನು ನಡೆಸುತ್ತಿದ್ದಂತಹ ಚೋಳರು ೯ನೆಯ ಶತಮಾನದ ಮಧ್ಯಭಾಗದಲ್ಲಿ ಸ್ವತಂತ್ರ್ಯ ಸಾಮ್ರಾಜ್ಯವನ್ನು ಕಟ್ಟಿಕೊಂಡರು. ತಂಜಾವೂರನ್ನು ಇವರು ರಾಜಧಾನಿಯಾಗಿಸಿಕೊಂಡು ಅನೇಕ ವರ್ಷಗಳ ಕಾಲ ಪ್ರಬಲ ರಾಜರಾಗಿ ಆಳ್ವಿಕೆ ನಡೆಸಿದಂತಹ ಚೋಳರ ಸಾಮ್ರಾಜ್ಯವು ಅಂತಿಮವಾಗಿ ಮಧುರೈ ಪಾಂಡ್ಯರು, ವಾರಂಗಲ್ಲಿನ ಕಾಕತೀಯರು ಮತ್ತು ಹೊಯ್ಸಳರ ನಡುವೆ ಹರಿದು ಹಂಚಿಹೋಗಿ ೧೩ನೆಯ ಶತಮಾನದ ಮಧ್ಯಭಾಗದಲ್ಲಿ ಸಂಪೂರ್ಣವಾಗಿ ನಾಶ ಹೊಂದಿತು. ಚೋಳರು ಕರ್ನಾಟಕದ ಪೂರ್ವ ಮತ್ತು ಆಗ್ನೇಯ ಭಾಗದ ಗಡಿ ಭಾಗಗಳನ್ನು ವಶಪಡಿಸಿಕೊಂಡಿದ್ದರು. ಚನ್ನಪಟ್ಟಣದ ಅಪ್ರಮೇಯ ದೇವಾಲಯ, ಮಳೂರುಪಟ್ಟಣದ ನಾರಾಯಣಸ್ವಾಮಿ ದೇವಾಲಯ, ಬೆಂಗಳೂರಿನ ಸಮೀಪವಿರುವಂತಹ ಬೇಗೂರು ಚೋಳೇಶ್ವರ ದೇವಾಲಯ ಮತ್ತು ಬಿನ್ನಿಮಂಗಲದ ಮುಕ್ತೇಶ್ವರ ದೇವಾಲಯಗಳು ಚೋಳರ ಕಾಲದ ಕರ್ನಾಟಕಕ್ಕೆ ಸಂಬಂಧಿಸಿರುವಂತಹ ಪ್ರಧಾನ ದೇವಾಲಯಗಳಾಗಿವೆ.

ಚೋಳರು ಕರ್ನಾಟಕದ ಗಡಿ ಪ್ರದೇಶಗಳ ಮೇಲೆ ತಮ್ಮ ಪ್ರಭಾವವನ್ನು ತೋರಿದ್ದರು. ಪಾಂಡ್ಯರ ಮತ್ತು ಗಂಗರ ಸಮಕಾಲೀನವರಾಗಿದ್ದು, ಅವರೊಂದಿಗೆ ಹಲವಾರು ಯುದ್ಧಗಳನ್ನು ಎದುರಿಸಿದ್ದರು. ಇವರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕದ ಹಲವಾರು ಪ್ರದೇಶಗಳು ಚೋಳರ ಹೆಸರುಗಳಿಂದಲೇ ಮುಕ್ತಾಯ ಗೊಳ್ಳುತ್ತವೆ. ನಿಕರಿಲಿ ಚೋಳಮಂಡಲ, ಮುಡಿಗೊಂಡ ಚೋಳಮಂಡಲ, ಜಯಗೊಂಡ ಚೋಳಮಂಡಲ, ಇರುಟ್ಟುಪಾಡಿ ಚೋಳಮಂಡಲ ಮೊದಲಾದ ಆಡಳಿತ ವಿಭಾಗಗಳು ಗಂಗ ಅರಸರ ಮತ್ತು ನೊಳಂಬ ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಸಿದ್ಧವಾಗಿದ್ದವು, ಮಾತ್ರವಲ್ಲದೇ ಚೋಳರು ಈ ಅರಸರ ಮೇಲೆ ಯುದ್ಧ ಮಾಡಿ ಗೆದ್ದು ಆ ಪ್ರದೇಶಗಳನ್ನು ಚೋಳರು ಗೆದ್ದುಕೊಂಡರೆಂಬುವುದನ್ನು ಸೂಚಿಸಲು ಈ ರೀತಿಯಾಗಿ ಹೆಸರನ್ನು ನೀಡುತ್ತಿದ್ದಿರಬಹುದು.[೧೫೧]

ಪಾಂಡ್ಯರು, ಚೋಳರು ಮತ್ತು ಚೇರರು ಕರ್ನಾಟಕೇತರ ಪ್ರದೇಶಗಳಲ್ಲಿ ಪ್ರಧಾನವಾಗಿದ್ದಂತಹ ಮೂರು ರಾಜ್ಯಗಳಾಗಿದ್ದವು. ಪಾಂಡ್ಯರು ತಮಿಳುನಾಡಿನ ದಕ್ಷಿಣಭಾಗವಾದ ಮಧುರೈ, ತಿರುನಲ್ವೇಲಿ ಮೊದಲಾದ ಪ್ರದೇಶಗಳಿಂದ ಕೂಡಿದ ಭಾರತದ ಪರ್ಯಾಯ ದ್ವೀಪದ ತುದಿ ಭಾಗವನ್ನು ಆಳ್ವಿಕೆ ನಡೆಸುತ್ತಿದ್ದರು. 'ಮಧುರೈ' ಪಾಂಡ್ಯರಾಜ್ಯದ ರಾಜಧಾನಿಯಾಗಿತ್ತು. ಚೇರರು ಈಗಿನ ಕೇರಳ ರಾಜ್ಯಕ್ಕೆ ಸೇರಿದವರಾಗಿದ್ದಾರೆ. ಪಾಂಡ್ಯ ರಾಜ್ಯದ ಪಶ್ಚಿಮ ದಿಕ್ಕಿಗೆ, ಪಶ್ಚಿಮ ಘಟ್ಟಗಳ ಮತ್ತು ಕರಾವಳಿ ತೀರದ ಮಧ್ಯಭಾಗದಲ್ಲಿರುವಂತಹ ಪ್ರದೇಶವೇ ಚೇರ ರಾಜ್ಯವಾಗಿತ್ತು. ಚೋಳ ರಾಜ್ಯವು ಪಾಂಡ್ಯರಾಜ್ಯದ ಈಶಾನ್ಯಕ್ಕೆ ಪೆನ್ನಾರ್ ಮತ್ತು ವೇಲಾರ್ ನದಿಗಳ ಮಧ್ಯಭಾಗದಲ್ಲಿತ್ತು.[೧೫೨]

ಚೋಳ ಸಾಮ್ರಾಜ್ಯವು ಒಂದು ಕಾಲದಲ್ಲಿ ಉತ್ತರಭಾಗದಲ್ಲಿ ತುಂಗಭದ್ರಾ ನದಿಯಿಂದ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಹರಡಿತ್ತು. ದಕ್ಷಿಣ ಭಾರತದಲ್ಲಿ ಹತ್ತನೆಯ ಶತಮಾನದ ಅವಧಿಯಲ್ಲಿ ಪ್ರಧಾನ ರಾಜ್ಯಗಳಾಗಿದ್ದಂತಹ ಈ ಮೂವರು ರಾಜರುಗಳ ನಡುವೆ ಯಾವಾಗಲೂ ರಾಜ್ಯ ವಿಸ್ತರಣೆಯ ವಿಷಯವಾಗಿ ಪರಸ್ಪರ ಯುದ್ಧಗಳು ನಡೆಯುತ್ತಿದ್ದವು. ಆದರೆ ರಾಜ್ಯ ವಿಸ್ತರಣೆ ವಿಚಾರದಲ್ಲಿ ಪಾಂಡ್ಯ ಮತ್ತು ಚೇರರಿಗಿಂತ ಚೋಳರೇ ಪ್ರಮುಖರಾಗಿದ್ದರು. ಚೋಳರಿಗೆ ಹತ್ತಿಯ ವ್ಯಾಪಾರ ಕೇಂದ್ರವಾಗಿದ್ದಂತಹ 'ಉರೈಯೂರು' ಪ್ರಧಾನ ರಾಜಕೀಯ ಕೇಂದ್ರವಾಗಿದ್ದರೆ, ಪುಹಾರ್ ಅಥವಾ ಕಾವೇರಿಪಟ್ಟಣವು ಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು.

ಚೋಳರು ತಮ್ಮ ವಿಭಾಗಗಳ ಆಡಳಿತ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ತಮ್ಮ ಪ್ರದೇಶಗಳನ್ನು ಮಂಗಲ, ಊರು ಮತ್ತು ನಗರಂ ಎಂಬುವುದಾಗಿ ವಿಂಗಡಿಸಿದ್ದರು. ಒಂದು ವೇಳೆ ಪ್ರದೇಶಗಳು ಬ್ರಾಹ್ಮಣರುಗಳಿಗೆ ಸಂಬಂಧಿಸಿದುದಾದರೆ 'ಚತುರ್ವೇದಿ ಮಂಗಲ'ವೆಂದೂ, ರೈತರಿಗೆ ಸಂಬಂಧಿಸಿದ ಪ್ರದೇಶವಾದರೆ 'ಊರ್' ಎಂತಲೂ, ವ್ಯಾಪಾರಿಗಳಿಗೆ ಸಂಬಂಧಿಸಿದಂತಹ ಪ್ರದೇಶವಾದರೆ 'ನಗರಂ' ಎಂತಲೂ ಕರೆಯುತ್ತಿದ್ದರು.[೧೫೩] ಚೋಳರು ತಾವು ಹೊಸದಾಗಿ ಆಕ್ರಮಿಸಿಕೊಂಡಂತಹ ಪ್ರದೇಶಗಳಿಗೂ ಈ ಹೆಸರನ್ನು ನೀಡುತ್ತಿದ್ದರು.

ಚೋಳರ ಇತಿಹಾಸವನ್ನು ಅವಲೋಕಿಸಿದರೆ ರಾಜಕೀಯವಾಗಿಯೂ ಮತ್ತು ಸಾಂಸ್ಕೃತಿಕವಾಗಿಯೂ ಹಲವಾರು ಮೈಲುಗಲ್ಲುಗಳನ್ನು ಗಮನಿಸಬಹುದಾಗಿದೆ. ಮೊದಲು ಪಲ್ಲವರ ಅಧೀನದಲ್ಲಿ ಮಹಾಮಂಡಳೇಶ್ವರರಾಗಿ ಇದ್ದಂತಹ ಚೋಳರು ಕ್ರಮೇಣ ಪ್ರಬಲ ರಾಜರಾಗಿ ಉದಯವಾದರು. ಆದರೆ ಈ ವಂಶಕ್ಕೆ ಸಂಬಂಧಿಸಿದಂತಹ ಯಾವುದೇ ಐತಿಹ್ಯವಾಗಲೀ, ವಂಶದ ಮೂಲದ ವಿಷಯವಾಗಲೀ ಶಾಸಾನಾಧಾರಗಳಿಂದ ದೊರಕುವುದಿಲ್ಲ. ೯ನೆಯ ಶತಮಾನದ ಮಧ್ಯಭಾಗದಲ್ಲಿ ತಲೆಯೆತ್ತಲು ಪ್ರಾರಂಭಿಸಿದಂತಹ ಚೋಳರ ಮೊದಲ ದೊರೆಯನ್ನು ವಿಜಯಾಲಯನೆಂದು ಗುರುತಿಸುತ್ತಾರೆ.

ಈತನು ತಂಜಾವೂರು ಪಟ್ಟಣದ ಮೇಲೆ ಆಕ್ರಮಣವನ್ನು ಮಾಡಿ ಚೋಳ ಸಾಮ್ರಾಜ್ಯಕ್ಕೆ ಅಡಿಪಾಯವನ್ನು ಹಾಕಿದನು. ಈ ವಿಜಯಾಲಯನು ಸುಮಾರು ಕ್ರಿ.ಶ.೮೫೦ರಿಂದ ಕ್ರಿ.ಶ.೮೭೧ರವರೆಗೆ ಚೋಳ ಸಾಮ್ರಾಜ್ಯವನ್ನು ಆಳ್ವಿಕೆ ನಡೆಸಿದ್ದನು. ಈತನ ಉತ್ತರಾಧಿಕಾರಿಯಾಗಿ ಈತನ ಪುತ್ರ ಒಂದನೆಯ ಆದಿತ್ಯನು ಪಟ್ಟಾಭಿಷಕ್ತನಾಗಿದ್ದನು. ಅದಲ್ಲದೆಯೇ ಕ್ರಿ.ಶ.೮೭೧ರಿಂದ ಕ್ರಿ.ಶ.೯೦೭ರವರೆಗೆ ಆಳಿದಂತಹ ಈತನು ಗಂಗ ಪೃಥ್ವಿಪತಿಯನ್ನು ಯುದ್ಧದಲ್ಲಿ ಸೋಲಿಸಿ ಕೊಂಗುನಾಡನ್ನು ವಶಪಡಿಸಿಕೊಂಡಿದ್ದನು. ಈ ಸಮಯದಲ್ಲೇ ಚೋಳರು ಕರ್ನಾಟಕ ಪ್ರದೇಶವನ್ನು ಪ್ರವೇಶಿಸಲು ಪ್ರಾರಂಭಿಸಿದರೆಂದು ತಿಳಿಯಬಹುದಾಗಿದೆ. ಗಂಗ ದೊರೆ ಇಮ್ಮಡಿ ಶಿವಮಾರನ ಮಗ ಪೃಥ್ವೀಪತಿಯು ತನ್ನ ತಂದೆ ಮರಣ ಹೊಂದುವ ಸಂದರ್ಭದಲ್ಲಿ ಅಪ್ರಾಪ್ತ

ವಯಸ್ಕನಾದುದರಿಂದ ಸಿಂಹಾಸನವು ಈತನ ಚಿಕ್ಕಪ್ಪನಾದ ವಿಜಯಾದಿತ್ಯನ ಪಾಲಿಗೆ ಬಂದಿತು. ವಿಜಯಾದಿತ್ಯನು ತನ್ನ ಮಗ ರಾಚಮಲ್ಲನಿಗೆ ಸಿಂಹಾಸನವನ್ನು ನೀಡಿದುದರಿಂದ ಪೃಥ್ವೀಪತಿಗೆ ದೊರಕಬೇಕಾದಂತಹ ಸಿಂಹಾಸನವು ತಪ್ಪಿಹೋಯಿತು. ಈಗಾಗಲೇ ಚೋಳರಿಗೆ ಸಾಮಂತರಾದಂತಹ ಪರಿಸ್ಥಿತಿಯಲ್ಲಿದ್ದಂತಹ ಪೃಥ್ವೀಪತಿಯು ಚೋಳ ದೊರೆ ಒಂದನೆಯ ಆದಿತ್ಯನ ನೆರವನ್ನು ಪಡೆದನು. ಒಂದನೆಯ ಆದಿತ್ಯನು 'ತೊಂಡೈಮಂಡಲ' ಎಂಬ ಪ್ರದೇಶದಲ್ಲಿ ನಡೆದಂತಹ ಯುದ್ಧದಲ್ಲಿ ಪಲ್ಲವ ರಾಜ ಅಪರಾಜಿತನನ್ನು ಸೋಲಿಸಲು ಪ್ರಮುಖ ಕಾರಣನಾಗಿದ್ದನು. ಹಾಗಾಗಿ ಈ ಸಮಯದಲ್ಲಿ ಗಂಗರು ಮತ್ತು ಚೋಳರಿಗೆ ಪರಸ್ಪರ ಮಿತ್ರತ್ವವಿದ್ದಂತೆ ಅನಿಸುತ್ತದೆ. ಈ ಗಂಗ ದೊರೆಯು ಬಾಣರನ್ನು ಹೊಡೆದೋಡಿಸುವಲ್ಲೂ ಪ್ರಮುಖ ಪಾತ್ರವಹಿಸಿದ್ದನು. ಈ ಸಂದರ್ಭದಲ್ಲಿ ಬಾಣರು ಪರುವಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಕೋಲಾರ ಜಿಲ್ಲೆಯ ಉತ್ತರಭಾಗಗಳನ್ನು ಆಳುತ್ತಿದ್ದರೆ, ಗಂಗರು ಗಂಗವಾಡಿ ೯೬೦೦೦ ಪ್ರದೇಶದಲ್ಲಿ ತಲಕಾಡನ್ನು ಕೇಂದ್ರವಾಗಿಟ್ಟುಕೊಂಡು ಆಳುತ್ತಿದ್ದರು.

ಮೊದಲನೆಯ ಆದಿತ್ಯನ ಪುತ್ರನಾದ ಒಂದನೆಯ ಪರಾಂತಕಚೋಳನು ಕ್ರಿ.ಶ.೯೦೭ರಿಂದ ೯೫೫ರವರೆಗೆ ರಾಜ್ಯಭಾರವನ್ನು ಮಾಡಿ ಪರಾಕ್ರಮಿ ಎನಿಸಿದ್ದನು. ಈತನು ಚೋಳ ಸಾಮ್ರಾಜ್ಯವನ್ನು ವಿಸ್ತರಿಸುವ ಮಹಾದಾಸೆಯನ್ನು ಹೊಂದಿದವನಾಗಿದ್ದು, ಪಾಂಡ್ಯ ರಾಜಧಾನಿಯಾದ ಮಧುರೈಯನ್ನು ವಶಪಡಿಸಿಕೊಂಡು ಪಾಂಡ್ಯದೊರೆ ಎರಡನೆಯ ರಾಜಸಿಂಹನನ್ನು ಯುದ್ಧದಲ್ಲಿ ಸೋಲಿಸಿದನು. ಈ ಕಾರಣದಿಂದ ಈತನು 'ಮಧುರೈಕೊಂಡ' ಎಂಬ ಬಿರುದನ್ನು ಧರಿಸಿದ್ದನು. ಇದೇ ರೀತಿಯಾಗಿ ಮುಂದುವರೆಯುತ್ತಾ ಶ್ರೀಲಂಕಾ ದೇಶದವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ದಕ್ಷಿಣ ಭಾಗದ ಮೇಲೆ ದಿಗ್ವಿಜಯವನ್ನು ಸಾಧಿಸಿದ ತರುವಾಯ ಬಹುಶಃ ಆತನಿಗೆ ಉತ್ತರದ ಭಾಗವನ್ನು ಆಕ್ರಮಣ ಮಾಡಬೇಕೆಂಬ ಮಹಾದಾಸೆ ಉಂಟಾಗಿರಬಹುದು. ಕರ್ನಾಟಕದ ಗಡಿಪ್ರದೇಶಗಳ ಮೇಲೆ ಆಕ್ರಮಣ ಮಾಡಿದಂತಹ ಆದಿತ್ಯನು ಬಾಣ ಮತ್ತು ನೊಳಂಬ ರಾಜ್ಯಗಳ ಮೇಲೂ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದನು.

ಚೋಳರಿಗೆ ಸಂಬಂಧಿಸಿದಂತಹ ಮೊದಲ ಶಾಸನವು[೧೫೪] ಮುಳಬಾಗಿಲು ತಾಲ್ಲೂಕಿನ ಬೈರಕೂರು ಗ್ರಾಮದಲ್ಲಿ ದೊರಕಿದೆ. ಕ್ರಿ.ಶ.೯೩೬ನೆಯ ಇಸವಿಗೆ ಸಂಬಂಧಿಸಿರುವಂತಹ ಶಾಸನವು ಪರಾಂತಕ ಚೋಳನ ೨೯ನೆಯ ವರ್ಷದ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಹಾಗಾಗಿ ಪರಾಂತಕ ಚೋಳನು ಕ್ರಿ.ಶ.೯೦೭ನೆಯ ಇಸವಿಗೆ ಪಟ್ಟಾಭಿಷಕ್ತನಾಗಿದ್ದನು. ಹಿಂದೆ ತಿಳಿಸಿದಂತೆಯೇ ಪರಾಂತಕ ಚೋಳನು ತನ್ನ ಪಟ್ಟಾಭಿಷಕ್ತವಾದ ನಂತರ ಬಹಳ ಕಾಲ ದಕ್ಷಿಣದ ಕಡೆಗೆ ರಾಜ್ಯವಿಸ್ತಾರವನ್ನು ಮಾಡಿ ನಂತರ ಉತ್ತರದ ಕಡೆಗೆ ಆಕ್ರಮಣ ಮಾಡಿದ್ದನೆಂದು ತಿಳಿಯಬಹುದು. ಮೊದಲನೆಯ ಪರಾಂತಕ ಚೋಳನು ತನ್ನ ರಾಜ್ಯವನ್ನು ದಕ್ಷಿಣಕ್ಕೆ ಇನ್ನು ವಿಸ್ತರಿಸಬೇಕೆಂಬ ಮಹಾದಾಸೆಯಿಂದ ರಾಷ್ಟ್ರಕೂಟರೊಂದಿಗೆ ಯುದ್ಧಕ್ಕೆ ಸನ್ನದ್ಧನಾದನು. ಆದರೆ ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನಿಂದ (ಕ್ರಿ.ಶ.೯೩೯–೯೬೯) ತಕ್ಕೋಲಂ ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಪರಾಜಿತನಾದನು. ಈ ಪರಾಜಯವು ಪರಾಂತಕನಿಗೆ ಮಾತ್ರವಲ್ಲದೆಯೇ ಚೋಳರಿಗೂ ಭಾರಿ ಹಿನ್ನಡೆಯನ್ನು ಉಂಟು ಮಾಡಿತು. ಈ ಕಾರಣದಿಂದಲೇ ಒಂದನೆಯ ಪರಾಂತಕನ ನಂತರದ ಅವಧಿಯಲ್ಲಿ ಚೋಳರಿಗೆ ಸಂಬಂಧಿಸಿದಂತಹ ಶಾಸನಗಳು ದೊರೆಯುವುದಿಲ್ಲ.

ಒಂದನೆಯ ಪರಾಂತಕನ ನಂತರ ಆತನ ಪುತ್ರನಾದ ಗಂಡರಾದಿತ್ಯನು ಸಿಂಹಾಸನವೇರಿದನು. ಪರಾಂತಕನಿಗೆ ರಾಜಾದಿತ್ಯ ಮತ್ತು ಅರಿಂಜಯನೆಂಬ ಇನ್ನು ಇಬ್ಬರು ಪುತ್ರರಿದ್ದರು. ಆದರೆ ಇವರ್‍ಯಾರು ಅಷ್ಟು

ಪ್ರಸಿದ್ಧರಾದಂತಹ ರಾಜರಾಗಿರಲಿಲ್ಲ. ಇವರಲ್ಲಿ ಅರಿಂಜಯನ ಪುತ್ರನಾದ ಸುಂದರ ಚೋಳನು ನಂತರದ ಸಮಯದಲ್ಲಿ ಚೋಳ ಸಾಮ್ರಾಜ್ಯವನ್ನು ಎತ್ತಿಕಟ್ಟಲು ಪ್ರಯತ್ನಿಸಿದನು. ಈತನು ಕ್ರಿ.ಶ.೯೫೭ರಿಂದ ೯೭೧ರವರೆಗೆ ಆಳ್ವಿಕೆ ನಡೆಸಿದ್ದನು. ಈತನು 'ಇಮ್ಮಡಿ ಪರಾಂತಕ'ನೆಂದೂ, 'ಮಧುರೈಕೊಂಡ', 'ರಾಜಕೇಸರಿ ವರ್ಮನ್' ಎಂತಲೂ ಪ್ರಸಿದ್ಧನಾಗಿದ್ದನು. ಈತನ ನಂತರ ಗಂಡರಾದಿತ್ಯನ ಪುತ್ರನಾದ ಉತ್ತಮ ಚೋಳನಿಗೆ ಅನಿರೀಕ್ಷಿತವಾಗಿ ರಾಜ್ಯಭಾರವು ಒದಗಿಬಂದಾಗ ತನಗೆ ದೊರಕಿದಂತಹ ಅಪೂರ್ವ ಅವಕಾಶ ಮತ್ತು ತಾಯಿಯ ಅನುಗ್ರಹ ಪ್ರಸಾದದಿಂದಾಗಿ ಉತ್ತಮವಾಗಿ ಚೋಳ ಸಾಮ್ರಾಜ್ಯವನ್ನು ನೋಡಿಕೊಂಡನು. ಈತನು ತನ್ನ ಆಳ್ವಿಕೆಯ ಕಾಲದಲ್ಲಿ ಅನೇಕ ದಿಗ್ವಿಜಯ ಯಾತ್ರೆಗಳನ್ನು ಕೈಗೊಂಡಿದ್ದನು.

ಏತನ್ಮಧ್ಯೆ ಸುಂದರ ಚೋಳನ ಮೊದಲನೆಯ ಪುತ್ರನಾದ ಇಮ್ಮಡಿ ಆದಿತ್ಯನು ಅಲ್ಪಕಾಲ ಅಂದರೆ ಕ್ರಿ.ಶ.೯೬೨ರಿಂದ ೯೬೮ರವರೆಗೆ ಆಳ್ವಿಕೆ ನಡೆಸಿದ್ದರೂ ಈತನು ಸಮರ್ಥವಾಗಿ ರಾಜ್ಯಭಾರವನ್ನು ಮಾಡಿರಲಿಲ್ಲ. ಈತನ ನಂತರ ಗಂಡರಾದಿತ್ಯನ ಪುತ್ರನಾದ ಉತ್ತಮಚೋಳನು ಕ್ರಿ.ಶ.೯೭೧ರಿಂದ ಕ್ರಿ.ಶ.೯೮೯ರವರೆಗೆ ಆಳ್ವಿಕೆ ನಡೆಸಿದ್ದನು.

ರಾಜಕೀಯವಾಗಿ ಅಸ್ಥಿರತೆಯನ್ನು ಹೊಂದಿದ್ದಂತಹ ಚೋಳ ಸಾಮ್ರಾಜ್ಯವು ಪುನಃ ಒಂದನೆಯ ರಾಜರಾಜ ಚೋಳನ ಆಡಳಿತಾವಧಿಯಲ್ಲಿ ಪುನರುಜ್ಜೀವನವನ್ನು ಪಡೆಯಿತು. ಇಮ್ಮಡಿ ಪರಾಂತಕನ ಪುತ್ರನಾದ ಈತನು ಕ್ರಿ.ಶ.೯೮೫ರಿಂದ ಕ್ರಿ.ಶ.೧೦೧೪ರವರೆಗೆ ಚೋಳ ಸಾಮ್ರಾಜ್ಯವನ್ನು ಸಮರ್ಥವಾಗಿ ಮುನ್ನಡೆಸಿದನು. ಈತನು ಚೋಳ ರಾಜರುಗಳಲ್ಲಿ ಅತ್ಯಂತ ಪರಾಕ್ರಮಿಯಾಗಿದ್ದನು. ದೇವಾಲಯಗಳ ನಿರ್ಮಾಣ, ಕಲೆ, ಸಾಹಿತ್ಯ ಮೊದಲಾದ ಕ್ಷೇತ್ರಗಳಿಗೆ ಅಪಾರವಾದ ಕೊಡುಗೆಯನ್ನು ಈತನು ನೀಡಿದ್ದನು. ಸಹಸ್ರಮಾನಗಳ ವರ್ಷಾಚರಣೆಯನ್ನು ಆಚರಿಸಿಕೊಂಡಂತಹ ತಮಿಳುನಾಡಿನ ಪ್ರಸಿದ್ಧ ತಂಜಾವೂರು ಬೃಹದೇಶ್ವರ ದೇವಾಲಯವು ಈತನ ಆಳ್ವಿಕೆಯಲ್ಲೇ ನಿರ್ಮಾಣವಾಯಿತು. ಈತನು ಕ್ರಿ.ಶ.೧೦೦೪ರ ಸುಮಾರಿಗೆ ಗಂಗ ಅರಸರ ಜೊತೆಗೆ ಯುದ್ಧ ಮಾಡಿ ಗಂಗವಾಡಿಯನ್ನು ವಶಪಡಿಸಿಕೊಂಡಿದ್ದನು. ಕರ್ನಾಟಕದ ಪ್ರದೇಶಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಲು ಪ್ರಾರಂಭಿಸಿದ್ದನು. ಕೋಲಾರ ಜಿಲ್ಲೆಯಲ್ಲಿ ರಾಜರಾಜ ಚೋಳನಿಗೆ ಸಂಬಂಧಿಸಿದಂತಹ ಹಲವಾರು ತಮಿಳು ಶಾಸನಗಳು ದೊರೆಯುತ್ತವೆ. ಈತನು ಕರ್ನಾಟಕದಲ್ಲಿ ಗಂಗಪಾಡಿ(ವಾಡಿ), ನೊಳಂಬಪಾಡಿ, ತಡಿಗೈಪಾಡಿ ಮೊದಲಾದ ಪ್ರಾಂತ್ಯಗಳನ್ನು ಗೆದ್ದುಕೊಂಡಿದ್ದನು. ರಾಜರಾಜ ಚೋಳನು ಕ್ರಿ.ಶ.೧೦೦೪ರ ಸುಮಾರಿಗೆ ಕುಡುಮಲೈ ನಾಡಿನ ಮೇಲೆ ದಂಡೆತ್ತಿ ಹೋಗಿ ಉದಗೈಕೋಟೆಯನ್ನು ವಶಪಡಿಸಿಕೊಂಡಿದ್ದನು. ಕುಡುಮಲೈ ನಾಡು ಎಂಬುದು ಈಗಿನ ಕೊಡಗು ಜಿಲ್ಲೆಯೆಂದು ಇತಿಹಾಸಕಾರರಲ್ಲಿ ಅಭಿಪ್ರಾಯವಿದೆ. ಈತನು ಕೊಡಗು ಪ್ರಾಂತ್ಯವನ್ನು ಆಕ್ರಮಿಸಿ ಕೊಡಗಿನ ಸುತ್ತಮುತ್ತಲಿನ ಏಳು ಸಾವಿರ ಸೀಮೆಗೆ ಕೊಂಗಾಳ್ವರನ್ನು ರಾಜರನ್ನಾಗಿ ನಿಯೋಜಿಸಿದ್ದನು. ಇದರ ನಂತರ ರಾಜರಾಜ ಚೋಳನು ಮಂಡ್ಯದ ಪ್ರಾಂತ್ಯಗಳ ಮೇಲೆ ಆಕ್ರಮಣ ಮಾಡಿದ್ದನು. ಈ ಪ್ರಾಂತ್ಯವನ್ನು 'ದಡಿಗೈಪಾಡಿ' ಎಂದು ಕರೆಯುತ್ತಿದ್ದರು. ಇಂದು ಪ್ರಸಕ್ತ ಮಂಡ್ಯ ಜಿಲ್ಲೆಯ ನಾಗಮಂಗಲ, ಮಂಡ್ಯ, ಮಳವಳ್ಳಿ, ಶ್ರೀರಂಗಪಟ್ಟಣ ಮೊದಲಾದ ಪ್ರದೇಶಗಳಾಗಿದ್ದವು. ನಂತರ ಚೋಳನು ಪೂರ್ವದ ಭಾಗಗಳ ಮೇಲೆ ಆಕ್ರಮಣ ಮಾಡಿ ಗಂಗ ಅರಸರ ಪ್ರಾಬಲ್ಯವನ್ನು ಕಡಿಮೆ ಗೊಳಿಸಿದನು. ರಾಜರಾಜಚೋಳನು ಗಂಗ ಅರಸರ ಪ್ರಾಂತ್ಯವನ್ನು ವಶಪಡಿಸಿಕೊಂಡು ಆ ಪ್ರದೇಶಗಳಿಗೆ 'ಮುಡಿಗೊಂಡ ಚೋಳ ಮಂಡಲ'ವೆಂದು ಹೆಸರನ್ನು ನೀಡಿದನು. ರಾಜರಾಜ ಚೋಳ ದಿಗ್ವಿಜಯದ ಮಾರ್ಗವು ಪಶ್ಚಿಮದ ಭಾಗಗಳಾದ ನಾಗಮಂಗಲ, ಮಳವಳ್ಳಿ ಮೊದಲಾದ ಪ್ರದೇಶಗಳಿಂದ

ಪೂರ್ವದ ಕಡೆಗೆ ಸಾಗಿತ್ತು. ಅದಾಗಲೇ ಗಂಗರ ರಾಜಧಾನಿಯು ಕೋಲಾರದಿಂದ ತಲಕಾಡಿಗೆ ವರ್ಗಾವಣೆಯಾಗಿತ್ತು. ಹಾಗಾಗಿ ಚೋಳ ದೊರೆಯು ಮೊದಲು ತಲಕಾಡನ್ನು ಗೆದ್ದು ನಂತರ ನೊಳಂಬರನ್ನು ಗೆಲ್ಲುವ ಅಪೇಕ್ಷೆಯಿಂದ ಕೋಲಾರ ಪ್ರದೇಶವನ್ನು ಪ್ರವೇಶಿಸುತ್ತಾನೆ.

ಗಂಗರು ಅಧೀನರಾದಂತೆ ನೊಳಂಬರೂ ಸಹ ಮೊದಲು ಚೋಳರ ಆಳ್ವಿಕೆಯನ್ನು ಒಪ್ಪದಿದ್ದರೂ ನಂತರ ಕಾಲದಲ್ಲಿ ಚೋಳರ ವಶವಾದರು. ರಾಜ ರಾಜ ಚೋಳನು ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡ ನಂತರ ನೊಳಂಬವಾಡಿಯನ್ನು ಕಸಿದುಕೊಂಡನು. ಸ್ವಾಭಾವಿಕವಾಗಿ ತಲಕಾಡಿನೊಂದಿಗೆ ಕೋಲಾರ ಪ್ರದೇಶವು ಕೂಡ ಚೋಳರ ಕೈವಶವಾಯಿತು.

ಒಂದನೆಯ ರಾಜರಾಜನು ಚೋಳ ರಾಜರುಗಳಲ್ಲಿ ಅತ್ಯಂತ ಪ್ರಬಲ ರಾಜನಾಗಿದ್ದು, ರಾಜಕೇಸರಿವರ್ಮ, ಮುಮ್ಮಡಿ ಚೋಳನೆಂದು ಪ್ರಸಿದ್ಧನಾಗಿದ್ದನು. ಈತನು ತನ್ನ ರಾಜ್ಯ ವಿಸ್ತಾರವನ್ನು ಶ್ರೀಲಂಕಾ ದೇಶದವರೆಗೂ ವಿಸ್ತರಿಸಿದ್ದು, ಚೇರರನ್ನು, ಪಾಂಡ್ಯರನ್ನು ಸೋಲಿಸುವ ಮೂಲಕ ಮುಮ್ಮಡಿ ಚೋಳನೆಂಬ ಬಿರುದನ್ನು ಪಡೆದಿದ್ದನು. ಈತನು ವೆಂಗಿಮಂಡಲ, ಗಂಗವಾಡಿ, ನೊಳಂಬವಾಡಿ ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದನು. ಈತನು ಕ್ರಿ.ಶ.೯೮೫ರಿಂದ ೧೦೧೪ರವರೆಗೆ ಆಳ್ವಿಕೆಯನ್ನು ನಡೆಸಿದ್ದನು. ಈತನಿಗೆ ಸಂಬಂಧಿಸಿದ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿದ್ದು, ಈತನ ಆಳ್ವಿಕೆಯ ಸಂದರ್ಭದ ಕೋಲಾರ ಜಿಲ್ಲೆಗೆ 'ನಿಕಿರಿಲಿ ಚೋಳ ಮಂಡಲ'ವೆಂದು ಕರೆಯಲಾಗಿದೆ.

ಈತನ ಆಳ್ವಿಕೆಯ ಏಳನೆಯ ವರ್ಷಕ್ಕೆ ಸಂಬಂಧಿಸಿದ ಶಾಸನವು[೧೫೫] ಕೋಲಾರ ತಾಲ್ಲೂಕಿನ ಕೆಂದಟ್ಟಿ ಬೆಟ್ಟದಲ್ಲಿ ದೊರಕಿದ್ದು, ಈತನು ಸಾಮ್ರಾಜ್ಯವನ್ನಾಳುತ್ತಿರಲು ಈತನ ಪುತ್ರನಾದ ಕಾಂಚೀಪುರದ ಒಡೆಯನಾದ ರಾಜೇಂದ್ರ ಚೋಳನು ಕುವಲಾಲ ನಾಡಿನಲ್ಲಿರುವ ಸೂರೂರಿನಲ್ಲಿರುವ ವೀರಶ್ರೀ ತಿರುಮಲೈ ಬೆಟ್ಟದ ಸೋಮೇಶ್ವರ ಮಹಾದೇವಾಲಯಕ್ಕೆ ಪುರಕಟ್ಟಿ ಗ್ರಾಮವನ್ನು ದಾನ ಮಾಡಿರುವಂತಹ ಮಾಹಿತಿಯನ್ನು ನೀಡಿದೆ. ಶಾಸನದ ಕಾಲವು ಕ್ರಿ.ಶ.೯೯೨ಕ್ಕೆ ಸಂಬಂಧಿಸಿರುವುದಾಗಿದೆ.

ಮುಳಬಾಗಿಲು ತಾಲ್ಲೂಕಿನ ಹೆಬ್ಬಣಿ ಗ್ರಾಮದಲ್ಲಿ ದೊರಕಿರುವಂತಹ ಕ್ರಿ.ಶ.೧೦೦೦ಕ್ಕೆ ಸೇರಿದ ಶಾಸನವು[೧೫೬] ಒಂದನೆಯ ರಾಜರಾಜನ ಆಳ್ವಿಕೆಗೆ ಸಂಬಂಧಿಸಿದೆ. ಹಾಗೆಯೇ ನೊಳಂಬರ ಕುರಿತಾಗಿಯೂ ಚರ್ಚಿಸಿದೆ. ಈ ಸಂದರ್ಭದಲ್ಲಿ ಚೋಳರಿಗೂ, ನೊಳಂಬರಿಗೂ ಪರಸ್ಪರ ಮೈತ್ರಿ ಇತ್ತೆಂದು ಊಹಿಸಬಹುದು. ಇದೇ ತಾಲ್ಲೂಕಿನ ಉತ್ತನೂರಿನಲ್ಲಿ ದೊರಕಿರುವಂತಹ ಕ್ರಿ.ಶ.೧೦೦೪ರ ಶಾಸನವು[೧೫೭] ಒಂದನೆಯ ರಾಜರಾಜನ ಹಲವಾರು ದಿಗ್ವಿಜಯಗಳನ್ನು ಉಲ್ಲೇಖಿಸುತ್ತಿದ್ದು, ಗಂಗ-೬೦೦೦ದೊಳಗಿದ್ದಂತಹ ಪುದಲ್ನಾಡು ಪ್ರದೇಶದ ಉತ್ತನೂರ ದೇವಾಲಯಕ್ಕೆ ದಾನ ನೀಡಿರುವಂತಹ ಮಾಹಿತಿಯಿದೆ. ಈತನು ಕೋಲಾರದ ದೇವಾಲಯಗಳಿಗೆ ಹಲವಾರು ದಾನಗಳನ್ನು ನೀಡಿರುವಂತಹ ದಾಖಲೆಗಳು ಈತನ ಶಾಸನಗಳಿಂದ ತಿಳಿದುಬರುತ್ತವೆ. ತನ್ನ ಆಳ್ವಿಕೆಯ ೧೨ನೆಯ ವರ್ಷ ಮತ್ತು ೨೨ನೆಯ ವರ್ಷದಲ್ಲಿ ಕೋಲಾರದ ಪಿಡಾರಿ (ಕೋಲಾರಮ್ಮ) ದೇವಾಲಯಕ್ಕೆ ಹಲವಾರು ದಾನಗಳನ್ನು ನೀಡಿರುವಂತಹ ವಿಷಯಗಳು ಶಾಸನಗಳಿಂದ ತಿಳಿದುಬರುತ್ತದೆ. ಅದಲ್ಲದೆಯೇ ೪೪ನೆಯ ವರ್ಷಕ್ಕೆ ಸಂಬಂಧಿಸಿದಂತಹ ಇನ್ನೊಂದು ಶಾಸನವು ಒಂದನೆಯ ರಾಜ ರಾಜನ ಆಳ್ವಿಕೆಗೆ ಸಂಬಂಧಿಸಿದ್ದು ಗಂಗ - ಸಾಸಿರದಲ್ಲಿರುವ ಕುವಲಾಲ ನಾಡಿನ ಕುವಲಾಲದ ಪಿಡಾರಿಯರ್ (ಕೋಲಾರಮ್ಮ) ದೇವಿಗೆ ಅರೆಯೂರು ಗ್ರಾಮವನ್ನು ದಾನವಾಗಿ ನೀಡಿರುವಂತಹ ಮಾಹಿತಿಯಿದೆ.

ಚೋಳ ಅರಸರುಗಳಲ್ಲಿ ಪ್ರಸಿದ್ಧನಾದವನು ಒಂದನೆಯ ರಾಜೇಂದ್ರ ಚೋಳನು ಈತನು ಕ್ರಿ.ಶ.೧೦೧೪ರಿಂದ ೧೦೪೫ರವರೆಗೆ ರಾಜ್ಯಭಾರವನ್ನಾಳುತ್ತಿದ್ದನು. ಈತನಿಗೆ ಸಂಬಂಧಿಸಿದ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ಅವುಗಳಲ್ಲಿ ಹೆಚ್ಚಿನ ಶಾಸನಗಳು ತಮಿಳುಭಾಷೆಯಲ್ಲಿವೆ. ಈತನು ಒಂದನೆಯ ರಾಜ ರಾಜ ಚೋಳನ ಪುತ್ರನಾಗಿದ್ದು, ಯುವರಾಜನಾಗಿರುವಾಗಲೇ ಪಟ್ಟಾಭಿಷಕ್ತನಾಗಿದ್ದನು. ಈತನು ಕೋಲಾರ ಜಿಲ್ಲೆಯಲ್ಲಿ ಯುದ್ಧಗಳಲ್ಲಿ ಪಾಲ್ಗೊಂಡು ರಾಜ್ಯದ ವಿಸ್ತಾರವನ್ನು ಕರ್ನಾಟಕದ ಪೂರ್ವಭಾಗದ ಹಲವಾರು ಪ್ರದೇಶಗಳಿಗೆ ವಿಸ್ತರಿಸಿ ಪರಾಕ್ರಮವನ್ನು ಮೆರೆದಿದ್ದನೆಂದು ತಿಳಿಯಬಹುದು. ಕರ್ನಾಟಕದ ಪ್ರಮುಖ ರಾಜಮನೆತನವಾದ ಕಲ್ಯಾಣದ ಚಾಲುಕ್ಯರ ಸಮಕಾಲೀನನಾದ ಈತನು ಚಾಲುಕ್ಯರೊಂದಿಗೆ ಯುದ್ಧಗಳಲ್ಲಿ ಹೋರಾಡಿದ್ದನು. ನಂತರ ಆತನು ಆಂಧ್ರಪ್ರದೇಶದ ಕಡೆಗೆ ಆಕ್ರಮಣ ಮಾಡಿದಂತೆ ತೋರುತ್ತದೆ. ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ರಾಜೇಂದ್ರ ಚೋಳನು ಮಸಂಗಿ (ಈಗಿನ ಮಸ್ಕಿ) ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಚಾಳುಕ್ಯ ಅರಸರನ್ನು ಸೋಲಿಸಿದಂತೆ ತೋರುತ್ತದೆ. ಈತನು ಕೋಲಾರ ಜಿಲ್ಲೆಯ ದೇವಾಲಯಗಳಿಗೆ ಹಲವಾರು ದೇಣಿಗೆಗಳನ್ನು ನೀಡಿರುವನು. [೧೫೮]

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ದೊರೆತಿರುವಂತಹ ವೀರಗಲ್ಲು ಶಾಸನವು ಈತನನ್ನು 'ಗಂಗೆಕೊಂಡ ರಾಜೇಂದ್ರ'ನೆಂದು ಹೆಸರಿಸಿದ್ದು, ಈತನು ಆಳುತ್ತಿರಲು ನಡೆದಂತಹ ಕಾಳಗವನ್ನು ಪ್ರತಿಪಾದಿಸುತ್ತದೆ. ಶಾಸನದ ಕಾಲವು ಕ್ರಿ.ಶ.೧೦೧೫.[೧೫೯] ಇದೇ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ರಾಜೇಂದ್ರ ಚೋಳ ದೇವನನ್ನು ಹೆಸರಿಸಿದ್ದು ತುರುಗೋಳ್ ಕಾಳಗವನ್ನು ಉಲ್ಲೇಖಿಸಿದೆ. ಈ ಶಾಸನದ ಕಾಲವನ್ನು ಕ್ರಿ.ಶ.೧೦೧೫.[೧೬೦] ಎಂದು ಊಹಿಸಬಹುದಾಗಿದೆ.

ಕೋಲಾರ ಜಿಲ್ಲೆಯ ವೇಮಗಲ್ಲು ಹೋಬಳಿಯಲ್ಲಿರುವ ಸೀತಿ ಬೆಟ್ಟದಲ್ಲಿರುವಂತಹ ಶಾಸನವು[೧೬೧] ರಾಜೇಂದ್ರ ಚೋಳನನ್ನು ಉಲ್ಲೇಖಿಸಿದೆ. ರಾಜೇಂದ್ರ ಚೋಳನ ಆಳ್ವಿಕೆಗೆ ಸಂಬಂಧಿಸಿದ ಈ ಶಾಸನವು ರಾಜೇಂದ್ರ ಚೋಳನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಸಿಯತಿ (ಶೀತಿ) ಬೆಟ್ಟದಲ್ಲಿರುವಂತಹ ಭೈರವದೇವನ ಅಂಗ ರಂಗ ಭೋಗ ಮೊದಲಾದವುಗಳಿಗೆ ಕೈವಾರ ನಾಡಿನಲ್ಲಿರುವ ಕೆಲವು ಗ್ರಾಮಗಳನ್ನು ಉಂಬಳಿಯಾಗಿ ನೀಡಿರುವಂತಹ ಮಾಹಿತಿಯನ್ನು ನೀಡಿದೆ. ಅದಲ್ಲದೆಯೇ ಚೋಳದೇವನು ಹೊಯಿಸಳ ದೊರೆ ವೀರ ಬಲ್ಲಾಳನ ಜೊತೆಗೂಡಿ ಈ ದಾನವನ್ನು ನೀಡಿದ ಉಲ್ಲೇಖವಿದೆ.

ಈ ಶಾಸನದಿಂದ ಕಂಡು ಬರುವಂತಹ ಇನ್ನೊಂದು ವಿಷಯವೆಂದರೆ ಈತನ ಪ್ರಾಂತೀಯ ರಾಜಧಾನಿಗಳಲ್ಲಿ ಒಂದಾಗಿದ್ದ ವಿಕ್ರಮ ಚೋಳ ಪುರವು ಕೈವಾರ ನಾಡಿನಲ್ಲಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನವು ನರಸಿಂಗ ರಾಜ ವೊಡೆಯನ ಧರ್ಮಶಾಸನವಾಗಿದೆ. ಹಿಂದೆ ರಾಜೇಂದ್ರ ಚೋಳ ಮತ್ತು ವೀರಬಲ್ಲಾಳರು ಸೇರಿಕೊಂಡು ಭೈರವದೇವನ ದೇವಾಲಯದ ಜೀರ್ಣೋದ್ಧಾರ ಮಾಡಿ ನೀಡಿದಂತಹ ದಾನವನ್ನು ಮತ್ತೊಮ್ಮೆ ಈತನು ನೀಡಿರುವನೆಂದು ಶಾಸನವು ತಿಳಿಸುತ್ತದೆ. ಕಾಲವು ಕ್ರಿ.ಶ.೧೪೬೬ ಆಗಿದ್ದರೂ ಹಿಂದೆ ನಡೆದಂತಹ ಮಾಹಿತಿಯನ್ನು ಶಾಸನವು ನೀಡುತ್ತದೆ. ಈ ಶಾಸನವು ಹಿಂದೆ ನೀಡಿದ್ದಂತಹ ದಾನದ ವಿಚಾರವನ್ನು ತಿಳಿಸುತ್ತಿದೆಯಾದರೂ, ಕಾಲ ದೃಷ್ಟಿಯಿಂದ ಗಮನಿಸಿದರೆ ಅಸ್ಪಷ್ಟತೆಯನ್ನು ಹೊಂದಿದೆ. ಹೊಯ್ಸಳ ವೀರಬಲ್ಲಾಳನ ಕಾಲಕ್ಕೆ ಚೋಳರು ಕರ್ನಾಟಕವನ್ನು ತೊರೆದಿದ್ದು, ಹೊಯ್ಸಳರ ಆಡಳಿತವು ಈ ಹೊತ್ತಿಗಾಗಲೇ ಅವನತಿಯನ್ನು ಹೊಂದಿತ್ತು.

ಕೋಲಾರ ಜಿಲ್ಲೆಯ ವೇಮಗಲ್ಲು ಹೋಬಳಿ ಪುರಹಳ್ಳಿ ಗ್ರಾಮದಲ್ಲಿ ದೊರಕಿರುವ ತುರುಗೋಳು ಶಾಸನವು[೧೬೨] ವಿಶೇಷ ಶಾಸನವಾಗಿದ್ದು, ರಾಜೇಂದ್ರ ಚೋಳನ ರಾಜಧಾನಿಯನ್ನು ಕಯ್ಯರನಾಡು (ಕೈವಾರ) ಎಂದು ಹೇಳಿದ್ದು, ಈತನನ್ನು ಶ್ರೀ ಗಂಗೆಯಂಕಡಾರ ಎಂದು (ಗಂಗೈಕೊಂಡ) ಹೊಗಳಿದೆ. ಕಾಲ ಕ್ರಿ.ಶ.೧೦೨೭ ಎಂದು ಊಹಿಸಬಹುದು.

ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ದೊರಕಿರುವಂತಹ ಶಾಸನವು[೧೬೩] ರಾಜೇಂದ್ರ ಚೋಳನ ಆಳ್ವಿಕೆಯ ಸಂದರ್ಭದಲ್ಲಿ ನಡೆದಂತಹ ಸತಿ ಸಹಗಮನದ ವಿಚಾರವನ್ನು ತಿಳಿಸುತ್ತಿದ್ದು, ಈತನ ಆಳ್ವಿಕೆಯು ನೊಳಂಬ ಪಾಡಿಯ ತನಕ ಹರಡಿತ್ತೆಂದು ತಿಳಿಯಬಹುದು. ಶಾಸನದ ಕಾಲವು ಕ್ರಿ.ಶ.೧೦೧೮ ಎಂದು ತಿಳಿಯಬಹುದು.

ಕೋಲಾರ ಜಿಲ್ಲೆಯಲ್ಲಿ ರಾಜೇಂದ್ರ ಚೋಳನಿಗೆ ಸಂಬಂಧಿಸಿದಂತಹ ಹಲವಾರು ತಮಿಳು ಶಾಸನಗಳು ದೊರಕಿದ್ದು, ವಿಚಾರಗಳು ಹೆಚ್ಚಾಗಿ ದೇವಾಲಯಗಳಿಗೆ ದಾನ ನೀಡಿದವುಗಳಾಗಿವೆ. ರಾಜೇಂದ್ರಚೋಳನು ತನ್ನ ಪಟ್ಟಾಭಿಷೇಕದ ೮ನೆಯ ವರ್ಷದಲ್ಲಿ ರಾಜನು ಚೋಳಮಂಡಲ (ನೊಳಂಬಪಾಡಿ)ದ ಕುವಲಾಲ ನಾಡಿನಲ್ಲಿರುವ ಪಟ್ಟಾಲಕಿ ಎಂಬ ದೇವಿಗೆ ದಾನವನ್ನು ನೀಡಿರುವಂತೆ ಕೋಲಾರ ದೇವಾಲಯದ ಶಾಸನವು ಉಲ್ಲೇಖಿಸುತ್ತದೆ.[೧೬೪] ಚೋಳ ಅರಸರ ಕಾಲದಲ್ಲಿ ಕೋಲಾರ ಜಿಲ್ಲೆಯು ಸಂಪೂರ್ಣವಾಗಿ ಕರ್ನಾಟಕದ ಅರಸರ ಆಳ್ವಿಕೆಯಿಂದ ತಪ್ಪಿಹೋಗಿ ಚೋಳರಸರ ಅಧೀನಕ್ಕೆ ಒಳಪಟ್ಟಿತ್ತೆಂದು ತೀರ್ಮಾನಿಸಬಹುದು. ಶಾಸನದ ಕಾಲವು ಕ್ರಿ.ಶ.೧೦೧೯ ಆಗಿದೆ.

ಕೋಲಾರಮ್ಮನ ದೇವಾಲಯದಲ್ಲಿರುವ ತಮಿಳು ಶಾಸನವು[೧೬೫] ರಾಜೇಂದ್ರ ಚೋಳನ ೨೮ನೆಯ ವರ್ಷಕ್ಕೆ ಸಂಬಂಧಿಸಿದುದಾಗಿದ್ದು, ರಾಜನು ಆಳ್ವಿಕೆ ನಡೆಸುತ್ತಿರಲು ತಿಯಂಬಾಕಂ, ಅಣ್ಣಾಮನ್ ಮತ್ತು ಆಳನ್ ಮೊದಲಾದವರು ಕೋಲಾರದ ಪಟ್ಟಾಲಕಿ ದೇವಿಗೆ ದಾನವನ್ನು ನೀಡಿದ ಉಲ್ಲೇಖವಿದೆ. ಶಾಸನದ ಕಾಲವನ್ನು ಕ್ರಿ.ಶ.೧೦೩೯ ಎಂದು ಗುರುತಿಸಬಹುದಾಗಿದೆ.

ಇದೇ ರೀತಿಯಾಗಿ ಅಸ್ಪಷ್ಟವಾಗಿರುವಂತಹ ಇನ್ನೊಂದು ತಮಿಳುಶಾಸನವು[೧೬೬] ಕೂಡಾ ರಾಜೇಂದ್ರ ಚೋಳನನ್ನು ಉಲ್ಲೇಖಿಸಿದ್ದು, ಚೋಳರ ವಂಶಾವಳಿಯನ್ನು ಸೂಚಿಸಿದೆ. ರಾಜೇಂದ್ರ ಚೋಳನು ಕೋಲಾರಮ್ಮ ದೇವಾಲಯದಲ್ಲಿರುವ ಸಪ್ತ ಮಾತೃಕೆಯರಿಗೆ ಬಂಗಾರದಿಂದ ನಿರ್ಮಿಸಿದಂತಹ ಆಭರಣಗಳನ್ನು ದಾನ ನೀಡಿರುವಂತಹ ಮಾಹಿತಿಯಿದೆ. ಒಂದನೆಯ ರಾಜೇಂದ್ರಚೋಳನು ಕೋಲಾರ ಜಿಲ್ಲೆಗೆ ಬಹುಮುಖ್ಯವಾದಂತಹ ಕಾಣಿಕೆಯನ್ನು ನೀಡಿರುವಂತೆ ತೋರುತ್ತದೆ. ಈತನ ಕಾಲದಲ್ಲಿ ಕೋಲಾರ ಜಿಲ್ಲೆಯಲ್ಲಿರುವಂತಹ ಹಲವಾರು ದೇವಾಲಯಗಳು ಜೀರ್ಣೋದ್ಧಾರಗೊಂಡಿರುವಂತೆ ಶಾಸನಗಳಿಂದ ತಿಳಿಯುತ್ತದೆ.[೧೬೭]

ರಾಜೇಂದ್ರ ಚೋಳನ ಪುತ್ರನಾದ ಒಂದನೆಯ ರಾಜಾಧಿರಾಜನು ನಂತರ ಅಧಿಕಾರಕ್ಕೆ ಬಂದಿದ್ದನು. ಈತನು ಚಾಳುಕ್ಯರೊಂದಿಗೆ ನಡೆದಂತಹ ಯುದ್ಧದಲ್ಲಿ ಮರಣವನ್ನಪ್ಪಿದಾಗ ಈತನ ಸಹೋದರನಾದ ಇಮ್ಮಡಿ ರಾಜೇಂದ್ರಚೋಳದೇವನು ಅಧಿಕಾರಕ್ಕೆ ಬಂದನು. ಈತನಿಗೆ ಸಂಬಂಧಿಸಿದಂತಹ ತಮಿಳು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ಈ ಶಾಸನವು ಕ್ರಿ.ಶ.೧೦೫೪ಕ್ಕೆ ಸಂಬಂಧಿಸಿದ್ದು, ಇಮ್ಮಡಿ ರಾಜೇಂದ್ರ ಚೋಳನು ಚಾಲುಕ್ಯ ಆಹವಮಲ್ಲನೊಂದಿಗೆ ನಡೆದಂತಹ ಕುಪ್ಪಂ ಯುದ್ಧದಲ್ಲಿ ಸಂಪಾದಿಸಿದ್ದಂತಹ ಜಯವನ್ನು ವರ್ಣಿಸುತ್ತಾ ಸಾಂದರ್ಭಿಕವಾಗಿ ಕುವಲಾಲ ನಾಡಿನ ಕುವಲಾಲ ಪಿಡಾರಿಯನ್ ದೇವಿಗೆ ಎರಡು ನಂದಾದೀಪಗಳನ್ನು

ದಾನವನ್ನಾಗಿ ನೀಡಿರುವಂತಹ ಮಾಹಿತಿಯು ದೊರೆಯುತ್ತದೆ. ಇವನ ನಂತರ ಚೋಳವಂಶದಲ್ಲಿ ಇಮ್ಮಡಿ ರಾಜೇಂದ್ರ ಚೋಳದೇವ, ರಾಜಮಹೇಂದ್ರದೇವ ಚೋಳ, ಒಂದನೆಯ ವೀರ ರಾಜೇಂದ್ರ (ಕರಿಕಾಲ) ಚೋಳ ಮತ್ತು ಆದಿ ರಾಜೇಂದ್ರ ಚೋಳ ಮೊದಲಾದ ರಾಜರುಗಳು[೧೬೮] ಅಧಿಕಾರಕ್ಕೆ ಬಂದಿದ್ದರು.

ಒಂದನೆಯ ಕುಲೋತ್ತುಂಗ (ರಾಜೇಂದ್ರ) ಚೋಳನೂ ಕೂಡಾ ಚೋಳ ವಂಶದಲ್ಲಿ ಪರಾಕ್ರಮಿಯಾದ ರಾಜನಾಗಿದ್ದನು. ಈತನು ವೆಂಗಿಯ ಚಾಳುಕ್ಯ ಮನೆತನಕ್ಕೆ ಸೇರಿದವನಾಗಿದ್ದು ಇವನ ತಾಯಿಯು ಚೋಳ ವಂಶದವಳಾಗಿದ್ದಳು. ಈತನು ಆದಿ ರಾಜೇಂದ್ರನನ್ನು ಗದ್ದುಗೆಯಿಂದ ಕೆಳಗಿಳಿಸಿ ತಾನು ರಾಜ್ಯಭಾರ ಮಾಡಿದ್ದನು. ತನ್ನ ಸಮಕಾಲೀನರಾದ ಚಾಳುಕ್ಯರು ಮತ್ತು ಹೊಯ್ಸಳರೊಂದಿಗೆ ಹಲವಾರು ಯುದ್ಧಗಳಲ್ಲಿ ಹೋರಾಡಿ ಜಯಸಾಧಿಸಿ ಚೋಳ ಸಾಮ್ರಾಜ್ಯವನ್ನು ಕರ್ನಾಟಕದ ಈಶಾನ್ಯ ಮತ್ತು ಪೂರ್ವಭಾಗದ ಹಲವಾರು ಭಾಗಗಳಿಗೆ ವಿಸ್ತರಿಸಿದ್ದನು. ಈತನು ಕ್ರಿ.ಶ.೧೦೭೦ರಿಂದ ಕ್ರಿ.ಶ.೧೧೨೦ರವರೆಗೆ ರಾಜ್ಯಭಾರವನ್ನು ಮಾಡಿಕೊಂಡಿದ್ದನು. ಚಾಳುಕ್ಯರ ಪ್ರಸಿದ್ಧ ದೊರೆಯಾದ ಆರನೆಯ ವಿಕ್ರಮಾದಿತ್ಯನು ಚೋಳರ ಮೇಲೆ ದಂಡೆತ್ತಿ ಬಂದಾಗ ಅವರನ್ನು ತುಂಗಭದ್ರೆಯ ಆಚೆಯ ದಡದವರೆಗೆ ಓಡಿಸಿಕೊಂಡು ಹೋಗಿದ್ದನು. ಈ ರೀತಿಯಾಗಿ ದಂಡೆತ್ತಿ ಕೊಂಡು ಹೋದಂತಹ ಮಾರ್ಗವು ಕೋಲಾರ ಜಿಲ್ಲೆಯ ಪ್ರಾಂತ್ಯದಿಂದ ಮುಂದೆ ಮಣಲೂರು ಮಾರ್ಗವಾಗಿ ಹೋಗಿತ್ತು ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ.

ಈ ರಾಜನಿಗೆ ಸಂಬಂಧಿಸಿದ ಹಲವಾರು ಶಾಸನಗಳು ಕೋಲಾರ ಜಿಲ್ಲೆಯ ಕೋಲಾರ ಬಂಗಾರಪೇಟೆ, ಮಾಲೂರು, ಮುಳಬಾಗಿಲು ಮೊದಲಾದ ಸ್ಥಳಗಳಲ್ಲಿ ದೊರಕಿದ್ದು ಹೆಚ್ಚಿನ ಶಾಸನಗಳು ತಮಿಳು ಭಾಷೆಯಲ್ಲಿವೆ. ಕುಲೋತ್ತುಂಗ ಚೋಳನ ಎರಡನೆಯ ವರ್ಷದ ಆಳ್ವಿಕೆಯ[೧೬೯] ಸಂದರ್ಭದಲ್ಲಿ ನೀಡಿರುವಂತಹ ಶಾಸನವು ಈತನು ಕೋಲಾರದ ಪ್ರಾಂತ್ಯವನ್ನು ಆಳುತ್ತಿದ್ದಂತಹ ಸಂದರ್ಭದಲ್ಲಿ ಈತನ ಅಧಿಕಾರಿಯಾದ ಅಂಬಲವನ್ ತಿರುಪ್ಪೊಂಡೆಯಾರ್ ಎಂಬುವವನು ಕೋಲಾರದಲ್ಲಿರುವಂತಹ ಪಿಡಾರ ಗುಡಿಯಲ್ಲಿ ಮಂಟಪವೊಂದನ್ನು ನಿರ್ಮಿಸಿರುವಂತೆ ವರ್ಣಿಸಿದೆ. ಕ್ರಿ.ಶ.೧೦೭೧ ಇದರ ಕಾಲವಾಗಿದೆ. ಹಾಗಾಗಿ ಈತನ ಪಟ್ಟಾಭಿಷೇಕವು ಕ್ರಿ.ಶ.೧೦೬೯ರ ಸಂದರ್ಭದಲ್ಲಿ ನಡೆದಿರಬಹುದು. ರಾಜನ ಆಳ್ವಿಕೆಯ ೧೫ನೆಯ ವರ್ಷಕ್ಕೆ ಸಂಬಂಧಿಸಿದ ಒಂದು ಶಾಸನವು[೧೭೦] ಬಂಗಾರಪೇಟೆ ತಾಲ್ಲೂಕಿನಲ್ಲಿ ದೊರೆತಿದ್ದು ಚೋಳಮಂಡಲದ ಕೊಯ್ಯಕುರ್ರೈನಾಡುವಿನ ವಾಸಿಯಾದ ಕಾಶ್ಯಪಗೋತ್ರದ ಒಬ್ಬ ಬ್ರಾಹ್ಮಣನಿಗೆ ದಾನ ನೀಡಿರುವಂತಹ ಉಲ್ಲೇಖವಿದೆ.

ಕೋಲಾರ ಜಿಲ್ಲೆಯ ನರಸಾಪುರದಲ್ಲಿನ ಇವನ ಆಳ್ವಿಕೆಗೆ ಸಂಬಂಧಿಸಿದ ಶಾಸನವು[೧೭೧] ತುರುಗೋಳ್ ಕಾಳಗವನ್ನು ವಿವರಿಸಿದೆ. ಇದು ಕ್ರಿ.ಶ.೧೦೭೬ನೆಯ ಇಸವಿಗೆ ಸಂಬಂಧಿಸಿದುದಾಗಿದೆ ಮತ್ತು ಇದು ಆತನ ಆಳ್ವಿಕೆಯ ೭ನೆಯ ವರ್ಷವನ್ನು ಸೂಚಿಸಿದೆ.

ಈತನ ೧೦ನೆಯ ವರ್ಷದ ಆಳ್ವಿಯನ್ನು ಸೂಚಿಸುವಂತಹ ಇನ್ನೊಂದು ಶಾಸನವು[೧೭೨] ಮುಳಬಾಗಿಲು ತಾಲ್ಲೂಕಿನ ಆವನಿಯಲ್ಲಿ ದೊರಕಿದ್ದು, ಈ ಶಾಸನದಲ್ಲಿ ಚೋಳ ಅರಸರ ದಂಡನಾಯಕರು ಆವನಿಯಲ್ಲಿರುವ ತಿರುರಾಮೇಶ್ವರ ದೇವರಿಗೆ ದಾನವನ್ನು ನೀಡಿದಂತಹ ವಿಚಾರವು ತಿಳಿಯುತ್ತದೆ. ಈ ಶಾಸನವು ಕ್ರಿ.ಶ.೧೦೭೯ಕ್ಕೆ ಸಂಬಂಧಿಸಿದುದಾಗಿದೆ. ಇದೇ ರೀತಿಯಾಗಿ ಈತನ ಆಳ್ವಿಕೆಯ ೧೩ನೆಯ ವರ್ಷ (ಕ್ರಿ.ಶ.೧೦೮೨) ಮತ್ತು ೩೦ನೆಯ ವರ್ಷ (ಕ್ರಿ.ಶ.೧೦೯೯)ಕ್ಕೆ ಸಂಬಂಧಿಸಿದ ಶಾಸನಗಳು[೧೭೩] ಕೋಲಾರ ಜಿಲ್ಲೆಯ ಸೀತಿಬೆಟ್ಟದಲ್ಲಿ

ಕ್ಷೇತ್ರಪಾಲ ದೇವರಿಗೆ ಮತ್ತು ಕೋಲಾರ ಕಣ್ಣೂರಿನ ತಿರುವಿರಾಮೇಶ್ವರ ಮಹಾದೇವರಿಗೆ ಹಲವಾರು ದಾನವನ್ನು ನೀಡಿರುವಂತಹ ಮಾಹಿತಿಯಿದೆ.

ಮಾಲೂರು ತಾಲ್ಲೂಕಿನಲ್ಲೂ ಕುಲೋತ್ತುಂಗನಿಗೆ ಸಂಬಂಧಿಸಿದ ಶಾಸನ[೧೭೪] ದೊರೆತಿದ್ದು ಅಸ್ಪಷ್ಟವಾಗಿದೆ. ಈ ಶಾಸನವು ಕುಲೋತ್ತುಂಗನ ೪೨ನೆಯ ವರ್ಷದ ಆಳ್ವಿಕೆಗೆ ಸಂಬಂಧಪಟ್ಟಿದ್ದಾಗಿದ್ದು ಶಾಸನದ ಕಾಲವನ್ನು ಕ್ರಿ.ಶ.೧೧೧೧ ಎಂದು ತೀರ್ಮಾನಿಸಬಹುದು. ಇದೇ ರಾಜನಿಗೆ ಸಂಬಂಧಿಸಿದ ೪೩ನೆಯ ವರ್ಷಕ್ಕೆ ಸೇರಿರುವಂತಹ ಇನ್ನೊಂದು ಶಾಸನವು[೧೭೫] ವಿಕ್ರಮ ಚೋಳ ಮಂಡಲದಲ್ಲಿರುವಂತಹ 'ಕಯಕ್ಕುಂಡಾಚ್ಚಿನಾಡು'ವಿನಲ್ಲಿರುವ ಮಲಿಯೂರಿನ ಗಂಗೈಕೊಂಡ ಚೋಳೇಶ್ವರ ದೇವಾಲಯಕ್ಕೆ ದಾನವನ್ನು ನೀಡಿರುವಂತಹ ಉಲ್ಲೇಖವಿದೆ. ಶಾಸನದ ಕಾಲವು ಕ್ರಿ.ಶ.೧೧೧೨ಕ್ಕೆ ಸಂಬಂಧಿಸಿದಾಗಿದೆ.

ಈತನ ೨೯ನೆಯ ವರ್ಷದ ಆಳ್ವಿಕೆಯ ಸಂದರ್ಭದಲ್ಲಿ ನೀಡಿರುವಂತಹ ಇನ್ನೊಂದು ಶಾಸನವು[೧೭೬] ಮುಳಬಾಗಿಲು ತಾಲ್ಲೂಕು ಆವನಿಯಲ್ಲಿ ದೊರೆತಿದ್ದು ರಾಜನು ಯುವರಾಜನಾಗಿದ್ದುಕೊಂಡು ತನ್ನ ಪರಾಕ್ರಮವನ್ನು ಮೆರೆದಂತಹ ಉಲ್ಲೇಖವನ್ನು ಹೇಳಿದೆ. ಇದೇ ಸಂದರ್ಭದಲ್ಲಿ ಗಂಗ ಮಂಡಲದ ಸಿಂಗಣ್ಣನೆಂಬುವವನು ಆವನಿಯ ಶ್ರೀರಾಮೇಶ್ವರ ದೇವರ ಸೇವೆಗೆಂದು ದಾನ ನೀಡಿರುವಂತಹ ಮಾಹಿತಿಯಿದೆ. ಇದೇ ಸ್ಥಳದಲ್ಲಿ ದೊರಕಿರುವಂತಹ ಕ್ರಿ.ಶ.೧೧೦೦, ಕ್ರಿ.ಶ.೧೧೦೩ ಮತ್ತು ಕ್ರಿ.ಶ.೧೧೦೪ರ ಶಾಸನಗಳು[೧೭೭] ರಾಜೇಂದ್ರ ಚೋಳನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಆವನಿಯ ಶ್ರೀರಾಮೇಶ್ವರದೇವರಿಗೆ ಹಲವಾರು ದಾನಗಳನ್ನು ಕೊಟ್ಟಂತಹ ಉಲ್ಲೇಖ ನೀಡಿರುತ್ತದೆ. ವಿಕ್ರಮ ಚೋಳನು ಚೋಳರಸರಲ್ಲಿ ಪ್ರಸಿದ್ಧನಾಗಿದ್ದು ವೆಂಗಿನಾಡಿನ ಪ್ರಾಂತ್ಯಾಧಿಕಾರಿಯಾಗಿ ರಾಜ್ಯಾಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನು ಒಂದನೆಯ ಕುಲೋತ್ತುಂಗನ ನಾಲ್ಕನೆಯ ಮಗನಾಗಿದ್ದು ಕ್ರಿ.ಶ.೧೧೧೮ರಿಂದ ಕ್ರಿ.ಶ.೧೧೩೫ರವರೆಗೆ ರಾಜ್ಯಭಾರವನ್ನು ಮಾಡಿದ್ದನು. ಹೊಯ್ಸಳರು ಚೋಳ ಅರಸರ ಮೇಲೆ ಆಕ್ರಮಣವನ್ನು ಮಾಡಿ ಕರ್ನಾಟಕದ ಪ್ರಾಂತ್ಯದಲ್ಲಿ ಚೋಳರ ಪ್ರಭಾವ ಕಡಿಮೆ ಆದಂತಹ ಸಂದರ್ಭದಲ್ಲಿ ಈತನು ಆಡಳಿತಕ್ಕೆ ಬಂದಿದ್ದನು. ಈತನ ಆಳ್ವಿಕೆಯ ಎರಡನೆಯ ವರ್ಷಕ್ಕೆ ಸಂಬಂಧಿಸಿದ ಒಂದು ಶಾಸನವು[೧೭೮] ದೊರೆತಿದ್ದು ಇದು ಹೆಚ್ಚಿನ ಮಾಹಿತಿಯನ್ನು ನೀಡುತ್ತಿಲ್ಲವಾದರೂ ವಿಕ್ರಮಚೋಳನ ಸೇನಾಪತಿಯನ್ನು ವಿಕ್ರಮಚೋಳ ಚೋಳಿಯವರಾಯನ್ ಎಂದು ಉಲ್ಲೇಖಿಸಿದೆ.

ಈತನಿಗೆ ಸಂಬಂಧಿಸಿದ ಹೆಚ್ಚಿನ ಶಾಸನಗಳು ಶಿಡ್ಲಘಟ್ಟದಲ್ಲಿ ದೊರಕಿದ್ದು ಹೆಚ್ಚಿನವು ಸುಗಟೂರು ಪ್ರಾಂತ್ಯದಲ್ಲಿ ತಾನು ಆಳ್ವಿಕೆ ನಡೆಸಿರುವಂತೆ ಮತ್ತು ಹಲವಾರು ಅಗ್ರಹಾರಗಳನ್ನು ನಿರ್ಮಿಸಿರುವಂತೆಯೂ ಚಿತ್ರಿಸಿದೆ.

ಕ್ರಿ.ಶ.೧೧೨೭ನೆಯ ಇಸವಿಗೆ ಸಂಬಂಧಿಸಿದ ಮತ್ತು ಈತನ ಆಳ್ವಿಕೆಯ ಹತ್ತನೆಯ ವರ್ಷದಲ್ಲಿ ನೀಡಿರುವಂತಹ ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳ ಗ್ರಾಮದ ಶಾಸನವು[೧೭೯] ವಿಕ್ರಮ ಚೋಳನ ಆಳ್ವಿಕೆಯನ್ನು ಪ್ರತಿಪಾದಿಸುತ್ತಿದ್ದು ಈತನ ಕೈಕೆಳಗೆ ಪುದಲ್ನಾಡು ಮಾಂಡಲೀಕನು ರಾಜ್ಯಭಾರ ಮಾಡುತ್ತಿದ್ದು, ಆತನ ಮಗನಾದ ವಿಕ್ರಮಚೋಳ ವೀರನೊಳಂಬನು ಕುರನೆಲ್ಲಿಯ ಲೋಕೇಶ್ವರ ದೇವಾಲಯಕ್ಕೆ ದಾನವನ್ನು ನೀಡಿದ್ದನ್ನು ತಿಳಿಸುತ್ತದೆ. ಇದೇ ವರ್ಷದಲ್ಲಿ ನೀಡಿರುವಂತಹ ಇನ್ನೊಂದು ಶಾಸನವು ಕೋಲಾರ ಜಿಲ್ಲೆಯ ದಳಸನೂರು ಎಂಬ ಪ್ರದೇಶದಲ್ಲಿ ದೊರಕಿದ್ದು ಪುದಲ್ನಾಡು ಎಂಬ ಪ್ರದೇಶವು ರಾಜೇಂದ್ರಚೋಳನ ಆಳ್ವಿಕೆಗೆ ಒಳಪಟ್ಟಿದ್ದು, ಈತನ ಆಳ್ವಿಕೆಯ ಕಾಲದಲ್ಲಿ ಕೋಲಾರದ ಪ್ರದೇಶವನ್ನು ನಿಗರಿಲಿ ಚೋಳ ಮಂಡಲವೆಂದೂ ಕರೆಯುತ್ತಿದ್ದರು.

ಈತನ ಆಳ್ವಿಕೆಯ ನಂತರ ಇಮ್ಮಡಿ ರಾಜ ರಾಜ, ಇಮ್ಮಡಿ ರಾಜಾಧಿರಾಜ, ಮುಮ್ಮಡಿ ಕುಲೋತ್ತುಂಗ ಚೋಳ ಮೊದಲಾದ ರಾಜರು ಚೋಳ ಸಾಮ್ರಾಜ್ಯವನ್ನು ಆಳಿದರು. ಕೋಲಾರ ಜಿಲ್ಲೆಯ ದೊಡ್ಡ ಶಿವಾರ ಗ್ರಾಮದ ಶಾಸನವು[೧೮೦] ಚೋಳರಾಜನಿಗೆ ಸಂಬಂಧಿಸಿದುದಾಗಿದೆ. ಈ ಶಾಸನವು ವೀರಗಲ್ಲು ಶಾಸನವಾಗಿದ್ದು, ಚೋಳ ಅರಸನಾದ ರಾಜ ರಾಜ ಮುಮ್ಮಡಿ ಚೋಳದೇವನಿಗೆ ಸಂಬಂಧಿಸಿದುದಾಗಿದೆ. ರಾಜನು ಆಳ್ವಿಕೆಯನ್ನು ಮಾಡುತ್ತಿರಲು ಬಿರಂಗೈ ನಾಳ್ಗಾವುಂಡನು ಹೋರಾಡಿ ಮರಣ ಹೊಂದಿದನು ಎಂಬ ವಿಚಾರವಿದೆ.

ಅದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ಕೂಡ ಚೋಳದೇವನೆಂಬುವವನ ಹೆಸರನ್ನು ಉಲ್ಲೇಖಿಸಿದೆ. ಅಲ್ಲದೆ ಮುಂದೆ ಚೋಳರ ಸೆಟ್ಟಿ ಗಂಗದತ್ತ ಎಂದು ಚೋಳ ಶಬ್ದವನ್ನು ಪ್ರಯೋಗಿಸಿದ್ದು ಮಾಹಿತಿಯು ಅಪೂರ್ಣ, ಅಸ್ಪಷ್ಟವೂ ಆಗಿದೆ.[೧೮೧] ಈ ಶಾಸನವು ಗಂಗ ಅರಸ ದಡಿಗನನ್ನು ಉಲ್ಲೇಖಿಸಿದ್ದು ಆತನು ಹೆಂಜೆರೆಯನ್ನು ಆಳುತ್ತಿದ್ದನೂ ಮತ್ತು ಚೋಳದೇವನು 'ಎಲ್ಲಿಯಿವರ' (ವ್ಯಕ್ತಿನಾಮ) ಎಂಬುವವನ ಮಗನೆಂದು ಪ್ರತಿಪಾದಿಸಿದೆ.

ಕೋಲಾರ ತಾಲ್ಲೂಕು ವೇಮಗಲ್ಲು ಹೋಬಳಿ ಪುರಹಳ್ಳಿ ಗ್ರಾಮದಲ್ಲಿರುವಂತಹ ತುರುಗೋಳು ಶಾಸನವು[೧೮೨] ರಾಜೇಂದ್ರ ಚೋಳನನ್ನು ಉಲ್ಲೇಖಿಸಿದೆ. ಮುಮ್ಮಡಿ ಕುಲೋತ್ತುಂಗ ಚೋಳನು, ಚೋಳ ಸಾಮ್ರಾಜ್ಯವು ಸಂಪೂರ್ಣವಾಗಿ ಅವನತಿಯ ಹಂತಕ್ಕೆ ಬರುವಂತಹ ಸಂದರ್ಭದಲ್ಲಿ ಬಹಳ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಾ ಆಳ್ವಿಕೆಯನ್ನು ನಡೆಸುತ್ತಿದ್ದನು. ಈತನು ಕ್ರಿ.ಶ.೧೧೭೮ರಿಂದ ಕ್ರಿ.ಶ.೧೨೧೮ರ ಅವಧಿಯಲ್ಲಿ ರಾಜ್ಯಭಾರವನ್ನು ಮಾಡಿದ್ದನು. ಈತನ ಆಡಳಿತ ವರ್ಷದ ಮೊದಲನೆಯ ವರ್ಷಕ್ಕೆ ಸಂಬಂಧಿಸಿದ ಶಾಸನವು[೧೮೩] ಮುಳಬಾಗಿಲು ತಾಲ್ಲೂಕಿನಲ್ಲಿ ದೊರಕಿದ್ದು ಈತನು ಪಟ್ಟಾಭಿಷಕ್ತನಾಗಿ ೧೨ನೆಯ ವರ್ಷದಲ್ಲಿ ಬಂದಿರುವಂತಹ ಶಾಸನ ಇದಾಗಿದೆ. ಶಾಸನವು ಬಲ್ಲಾಳದೇವನು ಈ ಕಾಲಕ್ಕೆ ಭೂಮಿಯನ್ನಾಳುತ್ತಿದ್ದನೆಂದು ಉಲ್ಲೇಖಿಸಿದೆ.

ಈತನ ನಂತರ ಮುಮ್ಮಡಿ ರಾಜರಾಜ ಮತ್ತು ಮುಮ್ಮಡಿ ರಾಜೇಂದ್ರನು ಚೋಳ ಸಾಮ್ರಾಜ್ಯವನ್ನು ಆಳಿದನು. ಆದರೆ ಇವರಿಬ್ಬರು ಅಷ್ಟು ಪ್ರಭಾವಶಾಲಿಯಾಗಿರಲಿಲ್ಲ. ಅದಲ್ಲದೆಯೇ ಇವರಿಬ್ಬರಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ.

ಕೆಲವೊಂದು ಶಾಸನಗಳಲ್ಲಿ ಚೋಳ ಮತ್ತು ಪಲ್ಲವ ವಂಶಕ್ಕೆ ಸೇರಿದಂತಹ ಮಾರಾಳ್ವಾರ್ ಮತ್ತು ಜಯಗೊಂಡ ಚೋಳ ಇಳವಂಜಿರಾಯನ ಉಲ್ಲೇಖವಿದೆ. ಇಲ್ಲಿಂದ ಮುಂದೆ ಚೋಳರಿಗೆ ಸಂಬಂಧಿಸಿದಂತಹ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ.

ಈ ಎಲ್ಲಾ ಶಾಸನಗಳನ್ನು ಗಮನಿಸಿದರೆ ಚೋಳರು ಕರ್ನಾಟಕದ ಗಡಿ ಪ್ರದೇಶಗಳನ್ನು ಗೆದ್ದುಕೊಂಡು ಈ ಪ್ರದೇಶಗಳ ಮೇಲೆ ಸಂಪೂರ್ಣ ಪ್ರಭುತ್ವವನ್ನು ಮೆರೆದಿದ್ದರು. ಚೋಳರು ತಾವು ಆಳ್ವಿಕೆ ನಡೆಸಿದಂತಹ ಪ್ರದೇಶಗಳಿಗೆ ಚೋಳಮಂಡಲವೆಂದು ನಾಮಕರಣ ಮಾಡುತ್ತಿದ್ದರು. ಕರ್ನಾಟಕದ ನೈರುತ್ಯ ಭಾಗದಲ್ಲಿ ಕಾವೇರಿ ನದಿಯ ಪ್ರದೇಶಗಳಿಗೆ ಜಯಗೊಂಡ ಚೋಳಮಂಡಲವೆಂದೂ, ಗಂಗರ ಪ್ರದೇಶವನ್ನು ಆಕ್ರಮಣ ಮಾಡಿ ವಿಕ್ರಮ ಚೋಳಮಂಡಲವೆಂದೂ, ನೊಳಂಬರ ಪ್ರದೇಶವನ್ನು ಆಕ್ರಮಣ ಮಾಡಿ ನಿಗರಿಲಿ ಚೋಳಮಂಡಲವೆಂದು ಕರೆದಿದ್ದರು. ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ ಮತ್ತು ಆಂಧ್ರಪ್ರದೇಶದ ಹಿಂದೂಪುರ ಮೊದಲಾದ ರಟ್ಟಪಾಡಿ ಪ್ರದೇಶಗಳನ್ನು ಇರಟ್ಟಪಾಡಿ ಚೋಳಮಂಡಲವೆಂದೂ, ಕೋಲಾರದ ದಕ್ಷಿಣಕ್ಕಿದ್ದಂತಹ ಗಂಗವಾಡಿಯ ಭಾಗಗಳನ್ನು ಮುಡಿಗೊಂಡ ಚೋಳಮಂಡಲವೆಂದೂ ಕರೆದರು. ಹಾಗಾಗಿ ಗಂಗ

೬೦೦೦, ಪುಲಿನಾಡು, ಕೊವಳಾಲ ನಾಡು, ಕೈವಾರ ನಾಡು, ಆವನಿ ನಾಡು ಮೊದಲಾದವು ಚೋಳರ ಆಡಳಿತಕ್ಕೆ ಒಳಪಟ್ಟಿತು.

ಕೋಲಾರ ಪ್ರದೇಶವನ್ನು ಕರ್ನಾಟಕದ ಎಲ್ಲಾ ಮನೆತನದವರು ಆಳಿದ್ದರು. ಅದರಲ್ಲಿ ಹೊಯ್ಸಳರು ಪ್ರಮುಖರು. ಕ್ರಿ.ಶ.೧೧ನೆಯ ಶತಮಾನದಲ್ಲಿ ಉದಯಿಸಿದಂತಹ ಈ ಸಾಮ್ರಾಜ್ಯವು ಕೋಲಾರ ಪ್ರದೇಶವನ್ನು ಪ್ರಬಲವಾಗಿ ಆಳ್ವಿಕೆ ನಡೆಸಿತ್ತು. ಚೋಳರು ಹೊಯ್ಸಳರ ಧಾಳಿಯನ್ನು ಎದುರಿಸಬೇಕಾಯಿತು. ಹೊಯ್ಸಳ ರಾಜಮನೆತನದಲ್ಲಿ ವಿಷ್ಣುವರ್ಧನನು ಅತ್ಯಂತ ಪರಾಕ್ರಮಿಯಾಗಿದ್ದನು. ಕ್ರಿ.ಶ.ಸುಮಾರು ೧೧೧೦ಲರಿಂದ ೧೧೫೨ರವರೆಗೆ ಆಳಿದ್ದಂತಹ ಈತನು ಹೊಯ್ಸಳ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಗಂಗವಾಡಿಯ ಪ್ರದೇಶದ ಮೇಲೆ ಆಕ್ರಮಣ ಮಾಡಿದನು. ಗಂಗವಾಡಿಯ ಪ್ರಧಾನ ಕೇಂದ್ರವಾಗಿದ್ದಂತಹ ತಲಕಾಡನ್ನು ಈ ಸಂದರ್ಭದಲ್ಲಿ ಚೋಳರು ವಶಪಡಿಸಿಕೊಂಡಿದ್ದರು. ಹಾಗಾಗಿ ಹೊಯ್ಸಳ ವಿಷ್ಣುವರ್ಧನನು ಚೋಳರೊಂದಿಗೆ ಯುದ್ಧಕ್ಕೆ ನಿಂತಿನು. ಇದರ ಪರಿಣಾಮವಾಗಿ ಸುಮಾರು ಕ್ರಿ.ಶ.೧೧೧೪ರ ಸುಮಾರಿಗೆ ತಲಕಾಡಿನಲ್ಲಿ ಚೋಳರಿಗೂ ಹೊಯ್ಸಳ ವಿಷ್ಣುವರ್ಧನನಿಗೂ ಯುದ್ಧವು ನಡೆಯಿತು. ಈ ಸಂದರ್ಭದಲ್ಲಿ ಒಂದನೆಯ ರಾಜೇಂದ್ರ ಚೋಳನ ಮೊಮ್ಮಗನಾದ ಒಂದನೆಯ ಕುಲೋತ್ತುಂಗನು ಚೋಳ ಸಾಮ್ರಾಜ್ಯವನ್ನು ಆಳುತ್ತಿದ್ದನು. ಕುಲೋತ್ತುಂಗನು ಪರಾಕ್ರಮಿಯಾಗಿದ್ದರೂ ಸಹ ವಿಷ್ಣುವರ್ಧನನ ಆಕ್ರಮಣಕ್ಕೆ ತಲೆಬಾಗಿ ತಲಕಾಡು ಪಟ್ಟಣವನ್ನು ಬಿಟ್ಟುಕೊಡಬೇಕಾಯಿತು. ಇದರೊಂದಿಗೆ ಕರ್ನಾಟಕದ ಭಾಗದಲ್ಲಿದ್ದಂತಹ ಚೋಳರ ಆಡಳಿತವು ಕ್ಷೀಣಗೊಂಡಿತು. ಹಾಗಾಗಿ ಈ ಯುದ್ಧದ ಪರಿಣಾಮವಾಗಿ ಕರ್ನಾಟಕದಲ್ಲಿ ಚೋಳರ ಪ್ರಭಾವವು ಕ್ಷೀಣಗೊಂಡು ತಮಿಳುನಾಡಿಗೆ ಮಾತ್ರ ಅವರ ಆಡಳಿತ ಸೀಮಿತವಾಯಿತು.

ಚೋಳರಸರ ವಂಶ ವೃಕ್ಷ

- ವಿಜಯಾಲಯ
  - ಆದಿತ್ಯ– I
    - ಪರಾಂತಕ
      - ರಾಜಾದಿತ್ಯ
      - ಗಂಡರಾದಿತ್ಯ
      - ಅರಿಂಜಯ
        - ಸುಂದರ ಚೋಳ(ಪರಾಂತಕ– II)
          - ಆದಿತ್ಯ– II
          - ರಾಜರಾಜ–1
            - ರಾಜೇಂದ್ರ ಚೋಳ–1
              - ರಾಜಾಧಿರಾಜ–1
              - ರಾಜೇಂದ್ರ– II
              - ವೀರರಾಜೇಂದ್ರ
              - ಅಮ್ಮಂಗದೇವಿ
                - ಕುಲೋತ್ತುಂಗ–1
                  - ವಿಕ್ರಮಚೋಳ
                    - ಕುಲೋತ್ತುಂಗ II
                      - ರಾಜ ರಾಜ –II
                    - ರಾಜಾಧಿರಾಜ– II
                      - ಕುಲೋತ್ತುಂಗ – III
                        - ರಾಜ ರಾಜ– III
                          - ರಾಜೇಂದ್ರ– III

ಮೂಲ : ಕರ್ನಾಟಕ ಪುರಾತತ್ವ ಮತ್ತು ಇತಿಹಾಸ, ಪು.ಸಂ.೪೨೧

೨.೨.೧೦. ದ್ವಾರಸಮುದ್ರದ ಹೊಯ್ಸಳರು

ಕರ್ನಾಟಕದಲ್ಲಿ ಕಲ್ಯಾಣದ ಚಾಲುಕ್ಯದ ನಂತರ ಪ್ರಧಾನವಾಗಿ ಆಳ್ವಿಕೆ ನಡೆಸಿದವರಲ್ಲಿ ಹೊಯ್ಸಳರು ಪ್ರಧಾನರು. ಆರಂಭದಲ್ಲಿ ಚಾಲುಕ್ಯರ ಸಾಮಂತರಾಗಿದ್ದಂತಹ ಇವರು ಕ್ರಿ.ಶ.೧೧ನೆಯ ಶತಮಾನದ ಆದಿಯಿಂದ ಕ್ರಿ.ಶ.೧೪ನೆಯ ಶತಮಾನದ ಆದಿಯವರೆಗೆ ಸುಮಾರು ೩೦೦ ವರ್ಷಗಳ ತನಕ ಆಳ್ವಿಕೆಯನ್ನು ನಡೆಸಿದ್ದರು. ಹೊಯ್ಸಳ ಸಾಮ್ರಾಜ್ಯದ ದಾರಿಯು ಕಲ್ಲುಮುಳ್ಳುಗಳಿಂದ ಕೂಡಿದ್ದಾಗಿದ್ದು, ದಕ್ಷಿಣಭಾರತದಲ್ಲಿ ಇವರು ನಿರಂತರವಾಗಿ ಚೋಳ, ಸೇವುಣ ಮತ್ತು ಮುಸ್ಲಿಂ ದೊರೆಗಳ ಆಕ್ರಮಣಗಳನ್ನು ಎದುರಿಸಬೇಕಾಯಿತು. ಕರ್ನಾಟಕದ ದಕ್ಷಿಣಭಾಗ ಮತ್ತು ತಮಿಳುನಾಡಿನ ಉತ್ತರಭಾಗವನ್ನು ತಮ್ಮ ರಾಜ್ಯದ ಪರಿಧಿಯನ್ನಾಗಿ ಇಟ್ಟುಕೊಂಡು ಮೊದಲು ಶಶಕಪುರ ಅಥವಾ ಸೊಸೆವೂರನ್ನು [ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಅಂಗಡಿ] ನಂತರ ಹಳೇಬೀಡು (ದ್ವಾರಸಮುದ್ರ) ನಂತರದ ಕಾಲದಲ್ಲಿ ರಾಜಕೀಯ ಅಸ್ಥಿರತೆ ಉಂಟಾದಾಗ ತಮಿಳುನಾಡಿನ ತಿರುವಣ್ಣಾಮಲೈ, ಕಣ್ಣಾನೂರು ಪ್ರದೇಶಗಳನ್ನು ರಾಜಧಾನಿಯನ್ನಾಗಿ ಇರಿಸಿಕೊಂಡು ಆಳ್ವಿಕೆ ನಡೆಸಿದ್ದರು. ಹೊಯ್ಸಳರು ನಿರಂತರ ಆಕ್ರಮಣ ಮತ್ತು ಧಾಳಿಗಳಿಂದ ರಾಜ್ಯವನ್ನು ವಿಸ್ತರಿಸಿದರು ಮತ್ತು ಪ್ರಬಲಗೊಳಿಸಿದರು. ಕೋಲಾರ ಜಿಲ್ಲೆಯ ಬಹುತೇಕ ಭಾಗಗಳು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದವು. ಕೋಲಾರ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ಹೊಯ್ಸಳ ದೊರೆಗಳ ಶಾಸನಗಳು ದೊರಕುವುದು ಇದಕ್ಕೆ ಪುಷ್ಟೀಕರಿಸುತ್ತದೆ.

ಹೊಯ್ಸಳರ ಮೂಲ

ಹೊಯ್ಸಳರ ಮೂಲದ ವಿಚಾರವಾಗಿ ಹಲವಾರು ಗೊಂದಲಗಳು ಇವೆ. ಇವರು ಕರ್ನಾಟಕದವರು. ಆದರೂ ಇವರ ಮೂಲ ಉತ್ತರ ಭಾರತದ ಗುಜರಾತ್ ರಾಜ್ಯದ ದ್ವಾರಕ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ದ್ವಾರಕವು ಯದುವಂಶದ ಪ್ರಧಾನಪುರುಷನಾಗಿದ್ದ ಶ್ರೀಕೃಷ್ಣನ ರಾಜಧಾನಿಯಾಗಿತ್ತು. ಹಾಗಾಗಿ ಹೆಚ್ಚಿನ ಹೊಯ್ಸಳ ಶಾಸನಗಳಲ್ಲಿ ತಮ್ಮನ್ನು ಯದುವಂಶದವರು, ಯಾದವನಾರಾಯಣರು, ಯಾದವ ಕುಲಾಂಬರ ದ್ಯುಮಣಿ, ದ್ವಾರಾವತಿ ಪುರವಾದೀಶ್ವರರು ಎಂದು ಕರೆದುಕೊಂಡಿದ್ದಾರೆ. ಹಾಗಾಗಿ ಹೆಚ್ಚಿನ ಇತಿಹಾಸಕಾರರು ಈ ದ್ವಾರಕವೇ [ಗುಜರಾತ್] ಹೊಯ್ಸಳರ ಮೂಲ ಸ್ಥಳವೆಂದು ಊಹಿಸುತ್ತಾರೆ. ಈ ವಂಶದಲ್ಲಿ ಬ್ರಹ್ಮ, ಅತ್ರಿ, ಚಂದ್ರ, ಪುರೂರವ ಮತ್ತು ಯಾದವ ಎಂಬ ರಾಜರುಗಳು ಜನಿಸಿದ್ದರು. ಹಾಗಾಗಿ ಈ ವಂಶವನ್ನು ಯಾದವ ವಂಶವೆಂದೂ ಕರೆಯುತ್ತಾರೆ.

ಕೆಲವು ಐತಿಹ್ಯಗಳ ಪ್ರಕಾರ ಯಾದವ ವಂಶದ ಕೆಲವು ವ್ಯಕ್ತಿಗಳು ಉತ್ತರ ಭಾರತದಿಂದ ದಕ್ಷಿಣಭಾರತಕ್ಕೆ ವಲಸೆ ಬಂದರು. ಈ ರೀತಿಯಾಗಿ ವಲಸೆ ಬಂದ ಒಂದು ಪಂಗಡವು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಬೇಲೂರು ತಾಲ್ಲೂಕಿನ ಶಶಕಪುರ ಅಥವಾ ಸೊಸೆಯೂರು ಎಂಬ ಪ್ರದೇಶಕ್ಕೆ ಬಂದು ನೆಲೆಸಿದ್ದರು. ಈ ಪ್ರದೇಶವು ಈಗ 'ಅಂಗಡಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಕರ್ನಲ್ ಮೆಕೆಂಜಿ ಅವರು ಈ ಸಮೂಹವು ತಮ್ಮ ಜನ್ಮಸ್ಥಳದಿಂದ ಈ ಪ್ರದೇಶಕ್ಕೆ ಬಂದು ತಮ್ಮ ಜನ್ಮಸ್ಥಳದ ಹೆಸರಾದ ದ್ವಾರಕವನ್ನೇ ಈ ಪ್ರದೇಶಕ್ಕೆ ಅನ್ವಯವಾಗುವಂತೆ ದ್ವಾರಸಮುದ್ರ ಎಂದು ನೀಡಿದರು ಎಂದು ಅಭಿಪ್ರಾಯಪಡುತ್ತಾರೆ.

ಆದರೆ ಕೋಹಿಲೋ ಮೊದಲಾದ ವಿದ್ವಾಂಸರು ಇದನ್ನು ಅಲ್ಲಗಳೆದು ಇವರು ಕನ್ನಡಿಗರೇ ಮತ್ತು ಇವರ ಮಾತೃಭಾಷೆಯು ಕನ್ನಡವಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪುಷ್ಟೀಕರಿಸುವಂತೆ ಪೌರಾಣಿಕ

ಕಥೆಯೂ ಇದೆ. ಹಿಂದೆ ತಿಳಿಸಿದ ಅಂಗಡಿ ಎಂಬ ಪ್ರದೇಶದ ಹೊರವಲಯದಲ್ಲಿರುವ ಪದ್ಮಾವತಿ ದೇವಾಲಯದಲ್ಲಿ ಜೈನಗುರುವಾದ ಸುದತ್ತಾಚಾರ್ಯ ಎಂಬುವವರು ದೇವತಾರಾಧನೆಯಲ್ಲಿ ತೊಡಗಿರುವಂತಹ ಸಂದರ್ಭದಲ್ಲಿ ಅಲ್ಲಿಯೇ ಇರುವ ಕಾಡಿನಿಂದ ಭಯಂಕರವಾದ ಒಂದು ಹುಲಿಯು ಆಕ್ರಮಣ ಮಾಡಿತು. ಆ ಸಂದರ್ಭದಲ್ಲಿ ಆ ದೇವಾಲಯದಲ್ಲಿ ಸಳನೆಂಬ ವ್ಯಕ್ತಿಯು ಕೂಡ ಇದ್ದನು. ಭಯಭೀತರಾದ ಜನರನ್ನು ಸಮಾಧಾನ ಪಡಿಸಲು ಆ ಜೈನಮುನಿಯು ತಮ್ಮ ಬಳಿಯಲ್ಲಿದ್ದ ಕಬ್ಬಿಣದ ಸಲಾಕೆಯನ್ನು ಕೈಯ್ಯಲ್ಲಿ ಹಿಡಿದು ಸಳನನ್ನು ಕುರಿತು 'ಪೊಯ್‌ಸಳ' [ಹೇ ಸಳನೇ ಹುಲಿಯನ್ನು ಕೊಲ್ಲು] ಎಂದು ಹೇಳಿದನು. ಅದರಂತೆ ಸಳನು ವೀರಾವೇಶದಿಂದ ಹೋರಾಡಿ ಹುಲಿಯನ್ನು ಸಾಯಿಸಿದನು. ಈ ಚಾರಿತ್ರಿಕ ಘಟನೆಯೇ ಹೊಯಿಸಳ ವಂಶಕ್ಕೆ ನಾಂದಿಯಾಯಿತು. ಸಳನ ಪರಾಕ್ರಮವನ್ನು ಮೆಚ್ಚಿ ಜೈನಗುರುವು ಅವನಿಗೆ ಆಶೀರ್ವಾದವನ್ನು ಮಾಡಿದನು. ಈ ಜೈನಗುರುವಿನ ಮತ್ತು ವಾಸಂತಿಕ ದೇವಿಯ ಅನುಗ್ರಹದಿಂದ ಸಳನು ಒಂದು ಚಿಕ್ಕ ರಾಜ್ಯವನ್ನು ಸ್ಥಾಪಿಸಿ ಪರಾಕ್ರಮಿಯಾಗಿ ಮೆರೆದನು. ಈತನು ಸ್ಥಾಪಿಸಿದ ಈ ವಂಶಕ್ಕೆ ಹೊಯಿಸಳ ವಂಶ ಎಂದು ನಾಮಕರಣ ಮಾಡಿದನು. ಈ ಘಟನೆಯನ್ನು ನೆನಪಿಸುವ ಸಲುವಾಗಿ ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವು ಹೊಯಿಸಳರ ರಾಜಲಾಂಛನವಾಗಿ ಪ್ರಸಿದ್ಧಿಯಾಯಿತು. ಹಾಗಾಗಿ ಸಳನನ್ನು ಹೊಯಿಸಳ ವಂಶದ ಮೂಲ ಪುರುಷನೆಂದು ಅಭಿಪ್ರಾಯಪಡುತ್ತಾರೆ.[೧೮೪]

ಹೊಯಿಸಳರು ಆಳ್ವಿಕೆಗೆ ಬಂದ ಮೇಲೆ ಚೋಳರ ನಿರಂತರ ಘರ್ಷಣೆಯನ್ನು ಎದುರಿಸಬೇಕಾಯಿತು. ಈ ಚೋಳರ ರಾಜಲಾಂಛನವು ಹುಲಿಯಾಗಿತ್ತು. ಹೊಯ್ಸಳರ ಶತ್ರುಗಳಾದ ಚೋಳರನ್ನು ಸೋಲಿಸುತ್ತಿರುವಂತಹ ಸಂಕೇತವು ಕೂಡ ಈ ಲಾಂಛನದಲ್ಲಿದೆ.

ಚಾಲುಕ್ಯರ ಸಮಕಾಲೀನರಾದ ಚಾಲುಕ್ಯರ ಚಕ್ರವರ್ತಿ ಸೋಮೇಶ್ವರನು ಹೊಯ್ಸಳ ದೊರೆ ವಿನಯಾದಿತ್ಯನ ಸೋದರಿಯನ್ನು ಮದುವೆಯಾಗಿದ್ದನು. ಈ ವಿನಯಾದಿತ್ಯನು ಹೊಯ್ಸಳರಲ್ಲಿ ಎರಡನೇಯ ತಲೆಮಾರಿನ ರಾಜನಾಗಿದ್ದನು. ಚಾಲುಕ್ಯ ಚಕ್ರವರ್ತಿಗಳ ಸೊಸೆಯ ಊರು ಈ 'ಅಂಗಡಿ' ಪ್ರದೇಶವಾದುದರಿಂದ ಇದನ್ನೇ 'ಸೊಸೆಯೂರು' ಎಂದು ಕರೆದರು ಎಂದು ವಿದ್ವಾಂಸರಲ್ಲಿ ಅಭಿಪ್ರಾಯವಿದೆ.

ಹಿಂದೆ ತಿಳಿಸಿದಂತಹ ಕಥೆಗಳಲ್ಲಿಯೂ ಅನೇಕ ಮೂಲ ವ್ಯತ್ಯಾಸಗಳೊಡನೆ ೧೨ ಮತ್ತು ಅನಂತರದ ಶತಮಾನಗಳಲ್ಲಿ ಕಂಡುಬರುವಂತಹ ಶಾಸನಗಳಲ್ಲಿ ಮಾತ್ರ ದೊರೆಯುತ್ತಿದ್ದು, ಹೊಯ್ಸಳರು ರಾಜ್ಯ ಸ್ಥಾಪಿಸಿದ ಮೇಲೆ ಆ ವಂಶದ ಹೆಸರನ್ನು ವಿವರಿಸಲು ಹುಟ್ಟಿಕೊಂಡವು ಎಂಬುದಾಗಿ ಅಭಿಪ್ರಾಯವಿದೆ.

ಹೊಯ್ಸಳ ವಂಶಾವಳಿ :

ಹೊಯ್ಸಳ ಮೂಲಕ್ಕೆ ಸಂಬಂಧಿಸಿದಂತೆ ಗೊಂದಲಗಳಿರುವಂತೆ ಈ ವಂಶದ ಮೊದಲ ರಾಜನ ಕುರಿತಾಗಿಯೂ ಹಲವಾರು ಸಂದೇಹಗಳಿವೆ. ಈ ವಂಶದ ಆದಿಯ ಕುರಿತಾಗಿ ಹೇಳಿರುವಂತಹ ಕಥೆಯಲ್ಲಿ ಸಳನೆಂಬ ರಾಜನ ಉಲ್ಲೇಖವಿದ್ದರೂ ಆತನ ಇರುವಿಕೆಯನ್ನು ಸ್ಥಿರಪಡಿಸುವಂತಹ ಶಾಸನಗಳಾವುವು ದೊರಕುವುದಿಲ್ಲ. ಕೆಲವು ಶಾಸನಗಳು ನೃಪಕಾಮನನ್ನು ಮೊದಲ ರಾಜನೆಂದು ಉಲ್ಲೇಖಿಸಿವೆ.

ಕಾಮ ಅಥವಾ ನೃಪಕಾಮನು ಹೊಯ್ಸಳರ ಮೊದಲ ರಾಜನಾಗಿದ್ದ. ಕೆಲವು ವಿದ್ವಾಂಸರುಗಳ ಅಭಿಪ್ರಾಯದಂತೆ ನೃಪಕಾಮ ಮತ್ತು ಸಳ ಇಬ್ಬರೂ ಒಬ್ಬರೇ ಬೇರೆಯಲ್ಲ ಎಂದಿದೆ. ಹೊಯ್ಸಳರ ಮೊದಲ ದೊರೆ ಎಂದು ಗುರುತಿಸಲ್ಪಟ್ಟಿರುವ ಸಳ ಮತ್ತು ನೃಪಕಾಮರ ಮಧ್ಯೆ ಹಲವಾರು ರಾಜರುಗಳ ಆಳ್ವಿಕೆ ಇದ್ದಂತೆ

ಕಂಡುಬರುತ್ತಿದ್ದರೂ ಕೆಲವೊಮ್ಮೆ ನೃಪಕಾಮನೇ ಹೊಯ್ಸಳರ ಮೊದಲ ರಾಜನಾಗಿದ್ದಂತೆಯೂ ಕಂಡುಬರುತ್ತದೆ. ಈ ನೃಪಕಾಮನು ಸಾಮಂತನಾಗಿದ್ದು ನಂತರ ಮಹಾರಾಜನಾಗಲು ಪ್ರಯತ್ನ ನಡೆಸಿದ್ದನು. ಕ್ರಿ.ಶ.೧೦೨೨ರ ಕಾಲದ ಸಕಲೇಶಪುರದ ತಾಲ್ಲೂಕಿನ ರಾಜೇಂದ್ರಪುರದ ಶಾಸನವು ನೃಪಕಾಮನನ್ನು ಬಹಳವಾಗಿ ಸ್ತುತಿಸಿದೆ.

ಇದೇ ರೀತಿಯಾಗಿ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಹೆಣ್ಣೂರು ಗ್ರಾಮದ ಶಾಸನವು ಮುಂಡ ಹೊಯ್ಸಳನೆಂಬ ರಾಜನನ್ನು ಗುರುತಿಸುತ್ತದೆ. ಈ ಮುಂಡ ಹೊಯ್ಸಳನಿಗೂ ಚೋಳ ದೊರೆ ರಾಜೇಂದ್ರ ಚೋಳನಿಗೂ ಮಣ್ಣೆಪ್ರದೇಶದಲ್ಲಿ ಯುದ್ಧ ನಡೆದಂತೆ ಕಂಡುಬರುತ್ತದೆ. ಹಾಗಾಗಿ ಕ್ರಿ.ಶ.೧೦೨೮ರ ಸುಮಾರಿಗೆ ಹೊಯ್ಸಳರು ತಮಗೆ ಪೂರ್ವದಲ್ಲಿದ್ದಂತಹ ಕೋಲಾರದ ಕಡೆಗೆ ದಂಡೆತ್ತಿ ಬರಲು ಪ್ರಯತ್ನಿಸಿದ್ದರು. ಹಾಗಾಗಿ ಮುಂಡ ಪೊಯ್ಸಳನೆಂಬ ಪ್ರಬಲ ರಾಜನಂತೆ ಕಂಡುಬರುತ್ತಿದ್ದು ಈತನು ರಾಜ್ಯ ವಿಸ್ತರಣೆಯನ್ನು ಮಾಡಲು ಪ್ರಯತ್ನಿಸಿದ್ದನು.

ಈ ರೀತಿಯಾಗಿ ಗಮನಿಸಿದಾಗ ಹೊಯ್ಸಳ ವಂಶದಲ್ಲಿ ಸಳ ಮತ್ತು ನೃಪಕಾಮನೆಂಬ ಪ್ರಸಿದ್ಧ ರಾಜರಿದ್ದರು, ಅದರಲ್ಲೂ ಎರಡನೆಯ ನೃಪಕಾಮನ ಮಗನಾದ ವಿನಯಾದಿತ್ಯನ ನಂತರದ ವಂಶಾವಳಿಯು ಯಾವುದೇ ಗೊಂದಲವನ್ನೊದಗಿಸುತ್ತಿಲ್ಲ. ಆದರೆ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಹೊಯ್ಸಳ ಕಾಲದ ಶಾಸನಗಳು ಅರೆಕೆಲ್ಲ, ಮಾರುಗ ಮೊದಲಾದವರ ಹೆಸರನ್ನು ಸೂಚಿಸಿದೆ. ಸಂಶೋಧಕರಾದ ಎಂ.ಎನ್.ಪ್ರಭಾಕರ್‌ರವರು ಹೊಯ್ಸಳ ವಂಶಾವಳಿಯನ್ನು ಪರಿಷ್ಕರಿಸಿ ವಿನಯಾದಿತ್ಯನಿಗಿಂತ ಮೊದಲಿನ ಹೊಯ್ಸಳ ದೊರೆಗಳ ಮಾಹಿತಿಯನ್ನು ನೀಡಿದ್ದಾರೆ. ಸಕಲೇಶಪುರ, ಅರಕಲಗೂಡು ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಮಾಹಿತಿಯನ್ನನುಸರಿಸಿ ಹೊಯ್ಸಳರ ಪರಿಷ್ಕೃತ ವಂಶಾವಳಿಯನ್ನು ಈ ರೀತಿಯಾಗಿ ನೀಡಿದ್ದಾರೆ.

ಸಾಮಂತ ಚೂಡಾಮಣಿ ಅರೆಕಲ್ಲು
|
ರಾಮನ್ನಣ್ಣೆ ಕಂದರ್ಪ
|
ಪೊಯ್ಸಳ ಮಾರುಗ
|
ಒಂದನೆಯ ನೃಪಕಾಮ
|
ಹೊಯ್ಸಳ ಮಾರೆಯ
|
ಮುಂಡ ಪೊಯ್ಸಳ
|
ಎರಡನೆಯ ನೃಪಕಾಮ
|
ವಿನಯಾದಿತ್ಯ
|
ಎರೆಯಂಗ

(ಮುಂದಿನ ವಂಶಾವಳಿಯು ಅದೇ ರೀತಿಯಾಗಿದೆ)

ಈತನ ಪುತ್ರ ವಿನಯಾದಿತ್ಯನು. ಈತನು ಕ್ರಿ.ಶ.೧೦೪೭ರಿಂದ ೧೦೯೮ರವರೆಗೆ ಆಳಿದ್ದನು. ಚಾಲುಕ್ಯರ ನೆರವಿನೊಂದಿಗೆ ಭದ್ರಬುನಾದಿಯನ್ನು ಹೊಯ್ಸಳ ವಂಶಕ್ಕೆ ನೀಡಲು ಪ್ರಯತ್ನಿಸಿದನು. ಹೊಯ್ಸಳರ ಶಾಸನಗಳನ್ನು ಗಮನಿಸಿದರೆ ಅವರ ವಂಶಾವಳಿಯನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ.

ಹೊಯ್ಸಳ ವಂಶಾವಳಿಯು ಈ ರೀತಿಯಾಗಿದೆ.

- ಸಳ
  - ನೃಪಕಾಮ
    - ವಿನಯಾದಿತ್ಯ
      - ಎರೆಯಂಗ
        - ಬಲ್ಲಾಳ – 1
        - ವಿಷ್ಣುವರ್ಧನ
          - ಬಲ್ಲಾಳದೇವ
          - ನರಸಿಂಹ – 1
            - ಬಲ್ಲಾಳ –11
              - ನರಸಿಂಹ – 11
                - ಸೋಮೇಶ್ವರ
                  - ನರಸಿಂಹ – 111
                    - ಬಲ್ಲಾಳ – 111
                      - ವಿರೂಪಾಕ್ಷ ಬಲ್ಲಾಳ
                  - ರಾಮನಾಥ
                    - ವಿಶ್ವನಾಥ
        - ಉದಯಾದಿತ್ಯ (ವಿಜಯಾದಿತ್ಯ)

ಆದರೆ ವಿನಯಾದಿತ್ಯನ ವಿಚಾರವಾಗಿಯೇ ಯಾವುದೇ ಶಾಸನಗಳು ದೊರೆಯುವುದಿಲ್ಲ. ಈತನ ಪುತ್ರನು ಎರೆಯಂಗನು ಕೇವಲ ಎರಡು ವರ್ಷಗಳ ತನಕ ರಾಜ್ಯವನ್ನಾಳಿದ್ದನು. ಈತನಿಗೆ ಒಂದನೆಯ ಬಲ್ಲಾಳ, ವಿಷ್ಣುವರ್ಧನ ಮತ್ತು ವಿಜಯಾದಿತ್ಯರೆಂಬ ಮೂವರು ಪುತ್ರರಿದ್ದರು. ಒಂದನೆಯ ಬಲ್ಲಾಳನು ಹೊಯ್ಸಳ ಸಾಮ್ರಾಜ್ಯವನ್ನು ಎತ್ತಿಕಟ್ಟಲು ಬಹಳವಾಗಿ ಪ್ರಯತ್ನಿಸಿದನಾದರೂ ಚಾಲುಕ್ಯರ ವಿರೋಧವನ್ನೂ ಕಟ್ಟಿಕೊಳ್ಳಬೇಕಾದ ಪರಿಸ್ಥಿತಿ ಒದಗಿಬಂದು ಅವರ ಸಾಮಂತರಾಗಿ ಕೆಲಕಾಲ ಮುಂದುವರಿಯಬೇಕಾಯಿತು.

ಹೊಯ್ಸಳ ಸಾಮ್ರಾಜ್ಯದಲ್ಲಿ ಅತ್ಯಂತ ಪ್ರಬಲನಾದವನೆಂದರೆ ವಿಷ್ಣುವರ್ಧನನು, ಈತನನ್ನು ಬಿಟ್ಟಿದೇವ ಅಥವಾ ಬಿಟ್ಟಿಗ ಎಂತಲೂ ಶಾಸನಗಳು ಕರೆದಿವೆ. ತನ್ನ ಅಣ್ಣನಾದ ಬಲ್ಲಾಳ ಮತ್ತು ತಂದೆ ಎರೆಯಂಗರ ಜೊತೆಗೆ ಹಲವಾರು ಯುದ್ಧಗಳಲ್ಲಿ ಹೋರಾಡಿ ಅಪಾರ ಅನುಭವವನ್ನು ಗಳಿಸಿಕೊಂಡಿದ್ದನು. ಇದನ್ನೇ ಆಧಾರವಾಗಿಟ್ಟುಕೊಂಡು ತನ್ನ ಜೈತ್ರಯಾತ್ರೆಯನ್ನು ಆರಂಭಿಸಿದಂತಹ ವಿಷ್ಣುವರ್ಧನನು ಅಪಾರ ಯಶಸ್ಸನ್ನು ಗಳಿಸಿದನು. ತನ್ನ ಆರಂಭ ದಿನಗಳಲ್ಲಿ ಚಾಲುಕ್ಯರ ಅಧೀನದಲ್ಲಿದಂತಹ ಹೊಯ್ಸಳ ರಾಜ್ಯವನ್ನು ತನ್ನ ವಶಕ್ಕೆ ವಶಪಡಿಸಿಕೊಂಡು ಸ್ವತಂತ್ರ ರಾಜ್ಯವನ್ನಾಗಿ ಪರಿವರ್ತಿಸಿಕೊಂಡನು. ತನ್ನ ಹಿಂದಿನ ಯುದ್ಧದ ಅನುಭವಗಳ ಸಹಯೋಗದೊಂದಿಗೆ ಅಪಾರ ಸೈನ್ಯವನ್ನು ಕಟ್ಟಿಕೊಂಡು ಕರ್ನಾಟಕದ ಪೂರ್ವಭಾಗದಲ್ಲಿ ಮೊದಲು ತನ್ನ ಆಧಿಪತ್ಯವನ್ನು ಸಾಧಿಸಲು ಹೊರಡುವಂತಹ ವಿಷ್ಣುವರ್ಧನನು ಸಫಲನಾಗುತ್ತಾನೆ. ಮೊದಲು ಗಂಗವಾಡಿ ಮತ್ತು ನೊಳಂಬವಾಡಿಗಳ ಮೇಲೆ ದಂಡೆತ್ತಿ ಹೋಗುತ್ತಾನೆ.

ಅಂತಿಮಕಾಲದಲ್ಲಿ ಗಂಗರು ಚೋಳರ ಆಕ್ರಮಣಗಳಿಂದ ಮುಳುಗಿ ಹೋಗಿ ಅವರಿಗೆ ಸಂಪೂರ್ಣವಾಗಿ ಅಧೀನರಾಗಿದ್ದರು. ಹಾಗಾಗಿ ಕರ್ನಾಟಕದ ಪ್ರಬಲ ರಾಜವಂಶವು ಅಸ್ತಂಗತವಾಗಿತ್ತು. ಈ ಸಂದರ್ಭದಲ್ಲಿ ಗಂಗವಾಡಿಯ ದಕ್ಷಿಣದ ಭೂಭಾಗಗಳಾದ ತಲಕಾಡು ಮತ್ತು ಕೋಲಾರವು ಚೋಳರ ಅಧೀನದಲ್ಲಿದ್ದವು. ವಿಷ್ಣುವರ್ಧನನು ಚೋಳರ ಮೇಲೆ ಯುದ್ಧವನ್ನು ಸಾರಿದನು. ತಲಕಾಡು ಪ್ರದೇಶದಲ್ಲಿ ಕ್ರಿ.ಶ.೧೧೧೬ರ ಸುಮಾರಿಗೆ ಘೋರಯುದ್ಧವು ನಡೆಯಿತು. ಈ ಯುದ್ಧದಲ್ಲಿ ವಿಷ್ಣುವರ್ಧನನು ಚೋಳರನ್ನು ಸಂಪೂರ್ಣವಾಗಿ ಸೋಲಿಸಿ ತಲಕಾಡಿನಿಂದ ಚೋಳರನ್ನು ಓಡಿಸಿದನು. ಕೋಲಾರವು ಸೇರಿದಂತೆ ನಿಗರಿಲಿ ಚೋಳಮಂಡಲವು ಸಂಪೂರ್ಣವಾಗಿ ವಿಷ್ಣುವರ್ಧನನ ಕೈವಶವಾಯಿತು. ಆದ್ದರಿಂದ ಈತನು 'ತಲಕಾಡುಗೊಂಡ' ಎಂಬ ಬಿರುದನ್ನು ಪಡೆದನು. ತಲಕಾಡಿನಲ್ಲಿದ್ದಂತಹ ಆದಿಯಮನೆಂಬ ಚೋಳ ಪ್ರತಿನಿಧಿಯನ್ನು ಮತ್ತು ಇನ್ನಿತರ ಚೋಳಾಧಿಕಾರಿಗಳನ್ನು ಓಡಿಸಿ ಗಂಗವಾಡಿ, ಕೊಂಗುದೇಶ ಮತ್ತು ಕುವಳಾಲನಾಡುಗಳನ್ನು ವಶಪಡಿಸಿಕೊಂಡು ಕೋಲಾರದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸಿ ತನ್ನ ತಮ್ಮನಾದ ಉದಯಾದಿತ್ಯನನ್ನು ಈ ಪ್ರದೇಶದ ನಿರ್ವಹಣೆಗೆಂದು ನೇಮಿಸಿದನು. ಈ ಉದಯಾದಿತ್ಯನ ಮಗಳು ಏಚಲಾದೇವಿಯು ವಿಜಯಾದಿತ್ಯಮಂಗಲ ಎಂಬ ಪ್ರದೇಶದಲ್ಲಿ ಮರಣ ಹೊಂದಿರುವಂತಹ ವಿಷಯವು ಶಾಸನದಲ್ಲಿ[೧೮೫] ಪ್ರತಿಪಾದಿತವಾಗಿದೆ. ಈ ವಿಜಯಾದಿತ್ಯಮಂಗಲವೆಂಬ ಪ್ರದೇಶವು ಬೇತಮಂಗಲವಾಗಿದೆ. ಈ ಸಮಯಕ್ಕಾಗಲೇ ಹೊಯ್ಸಳರು ಕೋಲಾರದಲ್ಲಿ ಆಧಿಪತ್ಯವನ್ನು ಸ್ಥಾಪಿಸಿದರು ಎಂದು ಊಹಿಸಬಹುದು. ಇದಕ್ಕೆ ಪುಷ್ಠಿಕರಿಸುವಂತೆ ವಿಷ್ಣುವರ್ಧನನಿಗೆ 'ನಂಗಲಿಗೊಂಡ' ಎಂಬ ಬಿರುದು ಇದ್ದಂತೆ ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ನಂಗಲಿಯು ಮುಳಬಾಗಿಲು ತಾಲ್ಲೂಕಿನಲ್ಲಿದೆ.

ತಲಕಾಡನ್ನು ಆಕ್ರಮಿಸಿದಂತಹ ವಿಷ್ಣುವರ್ಧನನು ಚೋಳರನ್ನು ಸೋಲಿಸುವುದರೊಂದಿಗೆ ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳು ಮತ್ತು ತಮಿಳುನಾಡಿನ ಕೊಯಮತ್ತೂರು, ಸೇಲಂ ಮತ್ತು ಉತ್ತರ ಅರ್ಕಾಟು ಜಿಲ್ಲೆಗಳ ಮೇಲೂ ಆಕ್ರಮಣ ಮಾಡಿದನು. ಕ್ರಿ.ಶ.೧೧೧೭ರ ಮಳವಳ್ಳಿಶಾಸನವು[೧೮೬] ವಿಷ್ಣುವರ್ಧನನ ಪರಾಕ್ರಮವನ್ನು ವರ್ಣಿಸುತ್ತಾ ಆತನ ರಾಜ್ಯ ವಿಸ್ತಾರವು ದಕ್ಷಿಣದಲ್ಲಿ ಕೊಂಗು ವಿಷಯ (ನೀಲಗಿರಿ, ಕೊಯಮತ್ತೂರು) ಉತ್ತರದಲ್ಲಿ ಸಾವಿಮಲೆ(ಬಳ್ಳಾರಿ ಜಿಲ್ಲೆ), ಪೂರ್ವದಲ್ಲಿ ಸಂಗಘಟ್ಟ (ಇದು ಮುಳಬಾಗಿಲು ತಾಲ್ಲೂಕಿನ ನಂಗಲಿ) ಪಶ್ಚಿಮದಲ್ಲಿ ಬಾರಕನೂರು (ಉಡುಪಿಜಿಲ್ಲೆಯ ಬಾರ್ಕೂರು)ವರೆಗೆ ಇತ್ತೆಂದು ಉಲ್ಲೇಖಿಸಿದೆ. ವಿಷ್ಣುವರ್ಧನನು ಗಂಗವಾಡಿ ೯೬೦೦೦ವನ್ನು ಸಂಪೂರ್ಣವಾಗಿ ವಶಪಡಿಸಿ ಕೊಂಡುದುದರಿಂದ ಈತನಿಗೆ 'ವೀರಗಂಗ'ನೆಂದೂ, ತಮಿಳುನಾಡಿನ ಕಂಚಿಯನ್ನು ವಶಪಡಿಸಿದುದರಿಂದ 'ಕಂಚಿಗೊಂಡ' ಎಂಬಂತಹ ಬಿರುದುಗಳಿದ್ದವು. ಈತನ ರಾಜ್ಯವು ಗಂಗವಾಡಿ ೯೬೦೦೦, ನೊಳಂಬವಾಡಿ೩೨೦೦೦, ಬನವಾಸಿ೧೨೦೦೦, ಹಾನುಗಲ್ಲು೫೦೦, ಪುಲಿಗೆರೆ, ಹಲಸಿಗೆ ಮತ್ತು ಬೆಳ್ವೊಲ ಪ್ರಾಂತ್ಯಗಳನ್ನು ಹೊಂದಿತ್ತು. ಗಂಗವಾಡಿಯನ್ನು ಆಕ್ರಮಿಸಿದ ನಂತರ ವಿಷ್ಣುವರ್ಧನನು ಚೋಳ ಸಾಮಂತರಾದಂತಹ ಕೊಂಗಾಳ್ವರನ್ನು ನಿಡುಗಲ್ಲಿನ ಚೋಳರನ್ನು ಕೊಂಗು ರಾಜ್ಯವನ್ನು ವಶಪಡಿಸಿಕೊಂಡನು. ಇದಾದ ನಂತರ ತನ್ನ ವಿಜಯದ ಹುಮ್ಮಸಿನಿಂದ ಒಂದೊಮ್ಮೆ ತನ್ನ ಅಧೀನರಾಜರಾಗಿದ್ದ ಚಾಲುಕ್ಯರ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಬೇಕೆಂಬ ಮಹಾದಾಸೆಯಾಯಿತು.

ಆ ನಿಟ್ಟಿನಲ್ಲಿ ನೇರವಾಗಿ ಚಾಲುಕ್ಯರ ಮೇಲೆ ಆಕ್ರಮಣ ಮಾಡದೇ ಅವರ ಸಾಮಂತರಾದಂತಹ ಉಚ್ಛಂಗಿ ಪಾಂಡ್ಯರನ್ನು ಸೋಲಿಸಿದನು. ನಂತರ ಬಳ್ಳಾರಿಯನ್ನು ಗೆದ್ದು ಬೆಳುವೊಲವನ್ನು ಗೆದ್ದನು. ವಿಷ್ಣುವರ್ಧನನ ಈ ಎಲ್ಲಾ ಪರಾಕ್ರಮಗಳನ್ನು ಸಹಿಸದಂತಹ ಚಾಳುಕ್ಯರು ವಿಷ್ಣುವರ್ಧನ ಮೇಲೆ ಆಕ್ರಮಣ ಮಾಡಿದರು. ಆದರೆ ವಿಷ್ಣುವರ್ಧನನಿಗೆ ಯುದ್ಧದಲ್ಲಿ ಜಯ ಉಂಟಾಯಿತು. ಕ್ರಿ.ಶ.೧೧೧೮ರಲ್ಲಿ ಕಣಿಗಾಲ ಎಂಬ ಪ್ರದೇಶದಲ್ಲಿ ನಡೆದ ಯುದ್ಧದಲ್ಲಿ ವಿಷ್ಣುವರ್ಧನನು ತನ್ನ ದಂಡನಾಯಕ ಗಂಗರಾಜನ ಸಹಾಯದಿಂದ ವಿಜಯವನ್ನು ಸಂಪಾದಿಸಿದನು.

ಇದೇ ರೀತಿಯಾಗಿ ತನ್ನ ವಿಜಯ ಯಾತ್ರೆಯನ್ನು ಮುಂದುವರಿಸಿದಂತಹ ವಿಷ್ಣುವರ್ಧನನು ಹಾನಗಲ್ಲಿನ ಕದಂಬರನ್ನು ಸೋಲಿಸಿದನು. ಇದಾದ ನಂತರ ಒಂದು ಬಾರಿ ಹೊಯ್ಸಳರಿಂದ ಆಘಾತಕ್ಕೆ ಒಳಗಾಗಿದ್ದಂತಹ ಚಾಳುಕ್ಯರು ಕ್ರಿ.ಶ.೧೧೨೨ರ ಸುಮಾರಿಗೆ ಹೊಯ್ಸಳರ ರಾಜಧಾನಿ ದ್ವಾರಸಮುದ್ರವನ್ನು ಆಕ್ರಮಣ ಮಾಡಿ ವಿಷ್ಣುವರ್ಧನನು ಶರಣಾಗುವಂತೆ ಮಾಡಿದನು. ಚಾಳುಕ್ಯ ವಿಕ್ರಮಾದಿತ್ಯನು ವಿಷ್ಣುವರ್ಧನನ್ನು ಸೋಲಿಸಿದನು. ಇದರ ಪರಿಣಾಮವಾಗಿ ಹತ್ತು ವರ್ಷಗಳ ತನಕ ವಿಷ್ಣುವರ್ಧನನು ಚಾಲುಕ್ಯರ ಸಾಮಂತರಾಗಿ ಮುಂದುವರಿಯಬೇಕಾಯಿತು. ವಿಷ್ಣುವರ್ಧನನು ಈ ಸಂದರ್ಭದಲ್ಲಿ ರಾಜಕೀಯವಾಗಿ ದುರ್ಬಲನಾಗಿದ್ದನು. ತನ್ನ ಪರಾಕ್ರಮದಿಂದ ವಶಕ್ಕೆ ತೆಗೆದುಕೊಂಡಿದ್ದಂತಹ ಗಂಗವಾಡಿ ಪ್ರಾಂತ್ಯವನ್ನು ವಿಕ್ರಮ ಚೋಳನು ಪುನಃ ಆಕ್ರಮಿಸಲು ಪ್ರಯತ್ನಿಸಿದನು. ಇದರ ಫಲವಾಗಿ ಕೋಲಾರ ಜಿಲ್ಲೆಯ ಹಲವಾರು ಭಾಗಗಳು ಅವನ ವಶವಾದವು. ಇದೇ ಸಂದರ್ಭದಲ್ಲಿ ವಿಷ್ಣುವರ್ಧನನು ತನ್ನ ಸಹೋದರನಾದ ವಿನಯಾದಿತ್ಯನ ಮರಣದ ಆಘಾತವನ್ನು ಎದುರಿಸಬೇಕಾಯಿತು. ಹಾಗಾಗಿ ಪೂರ್ವದ ಪ್ರಾಂತ್ಯಗಳ ಸಂಪೂರ್ಣ ಹೊಣೆಗಾರಿಕೆಯು ಮತ್ತೊಮ್ಮೆ ಅವನ ಮೇಲೆ ಬಿತ್ತು. ಇದರ ಪರಿಣಾಮವಾಗಿ ಆತನು ಸ್ವತಂತ್ರ್ಯವಾಗಿ ಆಳಬೇಕೆನ್ನುವ ಮಹಾದಾಸೆಯು ಸ್ವಲ್ಪಮಟ್ಟಿಗೆ ಕರಗಿತು.

ವಿಷ್ಣುವರ್ಧನನು ಕ್ರಿ.ಶ.೧೧೩೬ರ ಸಂದರ್ಭದಲ್ಲಿ ಹಾನಗಲ್ ಕದಂಬರನ್ನು ಸೋಲಿಸಿ ಅವರ ಭದ್ರಕೋಟೆಗಳೆಂದು ಕರೆಯಲ್ಪಡುತ್ತಿದ್ದ ಹಾನುಗಲ್ಲು ಮತ್ತು ಬಂಕಾಪುರಗಳನ್ನು ವಶಪಡಿಸಿಕೊಂಡನು ಮತ್ತು ಬಂಕಾಪುರವನ್ನು ತನ್ನ ಉಪ-ರಾಜಧಾನಿಯನ್ನಾಗಿ ಪರಿವರ್ತಿಸಿದನು. ಕಾವೇರಿ ನದಿಯಿಂದ ಕೃಷ್ಣಾ ನದಿಯವರೆಗೆ ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನಗಲ್ಲು ಮತ್ತು ಪುಲಿಗೆರೆ ಮುಂತಾದ ಪ್ರದೇಶಗಳನ್ನು ಬಂಕಾಪುರದಿಂದ ಆಳುತ್ತಿದ್ದನೆಂದು ಶಾಸನಗಳು ಪ್ರತಿಪಾದಿಸಿವೆ. ಪರಾಕ್ರಮಿಯಾಗಿದ್ದಂತಹ ಈ ರಾಜನು ಬಂಕಾಪುರದಲ್ಲಿ ಕ್ರಿ.ಶ.೧೧೪೨ರಲ್ಲಿ ಕಾಲವಾದನು.[೧೮೭]

ಹೊಯ್ಸಳರ ಶಾಸನಗಳು

ಕ್ರಿ.ಶ.೧೦ನೆಯ ಶತಮಾನವು ಹೊಯ್ಸಳರ ಪ್ರಾರಂಭ ಕಾಲವಾಗಿದ್ದು. ಕೋಲಾರ ಜಿಲ್ಲೆಯಲ್ಲಿ ೧೧ನೆಯ ಶತಮಾನದಿಂದ ಆರಂಭಿಸಿ ಇವರ ಶಾಸನಗಳು ಲಬ್ಧವಾಗಿದೆ. ಹೊಯ್ಸಳರ ರಾಜಮನೆತನದಲ್ಲಿ ಪ್ರಸಿದ್ಧರಾದಂತಹ ವಿಷ್ಣುವರ್ಧನ, ನರಸಿಂಹ, ರಾಮನಾಥ ಬಲ್ಲಾಳ ಮೊದಲಾದವರ ಶಾಸನಗಳು ಲಭ್ಯವಾಗಿದೆ. ಅವುಗಳಲ್ಲಿ ಹೆಚ್ಚಿನ ಶಾಸನಗಳು ತಮಿಳು ಭಾಷೆಯ ಪ್ರಭಾವವನ್ನು ಹೊಂದಿರುವಂತೆ ಕಾಣುತ್ತಿದೆ.

ವಿಷ್ಣುವರ್ಧನನು ಹೊಯ್ಸಳ ಅರಸರುಗಳಲ್ಲಿ ಅತ್ಯಂತ ಪ್ರಸಿದ್ಧನೂ, ಪರಾಕ್ರಮಶಾಲಿಯೂ ಆಗಿದ್ದನು. ಈತನು ಕ್ರಿ.ಶ.೧೧೦೮ರಿಂದ ೧೧೪೧ರ ತನಕ ಹೊಯ್ಸಳ ಸಾಮ್ರಾಜ್ಯವನ್ನು. ಆಳಿದ್ದನು. ಅದಲ್ಲದೆಯೇ ಕ್ರಿ.ಶ.೧೧೬೧ರ ಸುಮಾರಿನಲ್ಲಿ ಈತನು ಗಂಗ ಅರಸರ ಪ್ರಧಾನ ಕೇಂದ್ರಗಳಾದ ತಲಕಾಡು ಮತ್ತು ಕೋಲಾರವನ್ನು ವಶಪಡಿಸಿಕೊಂಡಿದ್ದನು. ಈತನ ಉಲ್ಲೇಖವಿರುವಂತಹ ದಾನಶಾಸನವೊಂದು[೧೮೮] ಕೋಲಾರ ಜಿಲ್ಲೆಯಲ್ಲಿ ದೊರಕಿದ್ದು, ಕ್ಷೇತ್ರಪಾಲದೇವರಿಗೆ ದೇವದಾನವನ್ನು ನೀಡಿರುವಂತಹ ಮಾಹಿತಿಯನ್ನು ಒದಗಿಸುತ್ತದೆ. ಈ ಶಾಸನದ ಕಾಲವನ್ನು ಕ್ರಿ.ಶ.೧೧೨೦ ಎಂದು ಊಹಿಸಬಹುದು. ಈತನು ಕೋಲಾರಜಿಲ್ಲೆಯಲ್ಲಿ ಗಂಗ ಅರಸರ ಪ್ರದೇಶಗಳನ್ನು ವಶಪಡಿಸಿಕೊಂಡ ಗುರುತನ್ನು ನೀಡುತ್ತಿದೆ.

ಮಾಲೂರು ತಾಲ್ಲೂಕಿನ ಇನ್ನೊಂದು ದಾನಶಾಸನವು[೧೮೯] ಕೂಡ ವಿಷ್ಣುವರ್ಧನನ್ನು ಉಲ್ಲೇಖಿಸಿದ್ದು, ಈತನ ಸಾಮಂತಾಧಿಪತಿಯಾದ ನಿಮಂಗಾವಲಿ ದೇವರೆಂಬುವವನು ದಾನವನ್ನು ನೀಡಿರುವಂತಹ ವಿಚಾರವಿದೆ. ಈ ದಾನವನ್ನು ವೆಲ್ಲಿಯೂರು ಎಂಬ ಸ್ಥಳದಲ್ಲಿ ನೀಡಲಾಗಿದೆ. ಈ ಸ್ಥಳದ ಇನ್ನೊಂದು ಹೆಸರನ್ನು 'ವಿಷ್ಣುವರ್ಧನ ಚತುರ್ವೇದಿಮಂಗಲ'ವೆಂದು ಹೇಳಿದ್ದು ಇದು 'ವಿಷ್ಣುವರ್ಧನ' ರಾಜನಿಂದಲೇ ಪ್ರಸಿದ್ಧಿಗೆ ಬಂದಿರಬಹುದು. ಈ ಶಾಸನವು ಕ್ರಿ.ಶ.೧೧೨೦ನೆಯ ಶತಮಾನಕ್ಕೆ ಸಂಬಂಧಿಸಿದುದಾಗಿದೆ. ವಿಷ್ಣುವರ್ಧನನಿಗೆ ಸಂಬಂಧಿಸಿದಂತಹ ಇನ್ನೊಂದು ಶಾಸನವು[೧೯೦] ಮಾಲೂರು ತಾಲ್ಲೂಕಿನಲ್ಲಿ ದೊರಕಿದ್ದು, ವೀರ-ಗಂಗ-ಪೊಯ್ಸಳ ದೇವರ ಉಲ್ಲೇಖವಿದ್ದು ಹಣವನ್ನು ದಾನ ನೀಡಿದ ಉಲ್ಲೇಖವಿದೆ.

ಹೊಯ್ಸಳ ದೊರೆ ವಿಷ್ಣುವರ್ಧನನ ಉಲ್ಲೇಖವಿರುವಂತಹ ಕನ್ನಡ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ವಿರಳವಾಗಿ ದೊರಕಿವೆ. ಈತನಿಗೆ ಸಂಬಂಧಿಸಿದ ತಮಿಳು ಶಾಸನಗಳೇ ಹೆಚ್ಚಾಗಿ ದೊರಕಿವೆ. ಗೌರಿಬಿದನೂರು ತಾಲ್ಲೂಕು ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಎರಡು ತಮಿಳು ಶಾಸನಗಳು ದೊರಕಿವೆ. ಆದರೆ ಆಧುನಿಕ ಕೋಲಾರ ಜಿಲ್ಲೆಯನ್ನು ಗಮನಿಸಿದಾಗ ವಿಷ್ಣುವರ್ಧನನ್ನೂ ಉಲ್ಲೇಖಿಸಿರುವಂತಹ ಶಾಸನಗಳು ಕೋಲಾರ ಮತ್ತು ಮಾಲೂರು ತಾಲ್ಲೂಕಿನಲ್ಲೂ ದೊರಕಿದೆ. ಎಲ್ಲಾ ಶಾಸನಗಳು ತಮಿಳು ಶಾಸನಗಳಾಗಿವೆ. ಹೊಯ್ಸಳರು ಚೋಳರ

ಪ್ರಬಲ ವಿರೋಧಿಗಳಾಗಿದ್ದರೂ ಅವರನ್ನು ಸಂಪೂರ್ಣವಾಗಿ ಹತೋಟಿಗೆ ತಂದವನು ವಿಷ್ಣುವರ್ಧನನು, ಚೋಳರಿಗೂ ಹೊಯ್ಸಳರಿಗೂ ತಲಕಾಡಿನಲ್ಲಿ ನಡೆದಂತಹ ಯುದ್ಧದ ನಂತರ ಚೋಳರನ್ನು ಸಂಪೂರ್ಣವಾಗಿ ಸೋಲಿಸಿ ಪ್ರಬಲರಾಜನಾಗಿ ಮೆರೆದನು. ಈತನು ಕ್ರಿ.ಶ.೧೧೦೮ರ ಸುಮಾರಿಗೆ ಪಟ್ಟಾಭಿಷಕ್ತನಾಗಿದ್ದನೆಂದು ಇತಿಹಾಸಕಾರರ ಅಭಿಪ್ರಾಯವಿದೆ. ಕ್ರಿ.ಶ.೧೧೧೪ರಲ್ಲಿ ತಲಕಾಡು ಕದನವು ನಡೆದಿತ್ತು. ಈತನ ಪಟ್ಟಾಭಿಷೇಕದ ೧೨ ವರ್ಷದ ನಂತರ ಈತನ ಉಲ್ಲೇಖ ಉಳ್ಳಂತಹ ಒಂದು ತಮಿಳು ಶಾಸನವು[೧೯೧] ಕೋಲಾರ ತಾಲ್ಲೂಕಿನಲ್ಲಿ ದೊರಕಿದೆ. ಮುರುದೇರಿಯು ಉತ್ತರಭಾಗದಲ್ಲಿರುವಂತಹ ಒಂದು ಭೂಭಾಗವನ್ನು ಕ್ಷೇತ್ರಪಾಲದೇವರಿಗೆ ದೇವದಾನ ನೀಡಿರುವಂತಹ ಮಾಹಿತಿಯನ್ನು ನೀಡುತ್ತದೆ.

ಇದಾದ ನಂತರ ೯ನೆಯ ವರ್ಷವನ್ನು ಸೂಚಿಸುವಂತಹ ಇನ್ನೊಂದು ಶಾಸನವು[೧೯೨] ಮಾಲೂರು ತಾಲ್ಲೂಕಿನಲ್ಲಿ ದೊರಕಿದ್ದು ವಿಶೇಷ ಮಾಹಿತಿಯನ್ನು ನೀಡುತ್ತಿದೆ. ಶಾಸನವು ತಮಿಳುಭಾಷೆಯಲ್ಲಿ ದೊರಕಿದ್ದು 'ಸೌಮ್ಯಕಾರ್ತ್ತಿಗೈ' ಎಂದು ತಿಳಿಸಿದ್ದು ಇದು ಸೌಮ್ಯ ಸಂವತ್ಸರದ ಕಾರ್ತಿಕ ಮಾಸವಾಗಿದೆ. ಇದನ್ನು ಗಮನಿಸಿದಾಗ ಇದು ಕ್ರಿ.ಶ.೧೧೨೯ಕ್ಕೆ ಸಂಬಂಧಿಸಿದ ಶಾಸನವಾಗಿದೆ. ಈ ಸಮಯಕ್ಕಾಗಲೇ ವಿಷ್ಣುವರ್ಧನನು ಬಲಿಷ್ಟರಾಜನಾಗಿದ್ದನು. ಏಕೆಂದರೆ ಆತನು ತನ್ನ ರಾಜ್ಯ ವಿಸ್ತಾರವನ್ನು ಮಾಡಿ ಬೇರೆ ಬೇರೆ ವಿಭಾಗಗಳಿಗೆ ಸೈನ್ಯಾಧಿಕಾರಿಗಳನ್ನು ನಿಯೋಜಿಸಿದ್ದನು. ಅಂತಹ ವಿಚಾರವು ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಶಾಸನವು ಪ್ರತಿಪಾದಿಸುತ್ತಿದೆ.

ಕ್ರಿ.ಶ. ೧೧೩೪ಕ್ಕೆ ಸಂಬಂಧಿಸಿದಂತಹ ವಿಷ್ಣುವರ್ಧನನ ಶಾಸನವು[೧೯೩] 'ವೀರಗಂಗ ಪೊಯ್ಸಳ ದೇವ ಪಿಚ್ಚದೇವ'ನೆಂದು ಉಲ್ಲೇಖಿಸಿದ್ದು ಇದು ವಿಷ್ಣುವರ್ಧನನ್ನು ಸೂಚಿಸಿದೆ. ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಈ ಶಾಸನವು ತಮಿಳುಭಾಷೆಯಲ್ಲಿದೆ. ಕಂಚೀಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ದೇವಾಲಯಕ್ಕೆ ಧನ ಸಹಾಯವನ್ನು ನೀಡಿರುವಂತೆ ಉಲ್ಲೇಖವಿದೆ.

ಒಂದನೆಯ ನರಸಿಂಹ

ವಿಷ್ಣುವರ್ಧನನ ಪುತ್ರ ಒಂದನೆಯ ನರಸಿಂಹನು. ಈತನು ತಂದೆಯಂತೆ ಪರಾಕ್ರಮಿಯಾಗಿರದೆ ಅಶಕ್ತನಾಗಿದ್ದನು. ಆದರೂ ಕೋಲಾರ ತಾಲ್ಲೂಕು ಮತ್ತು ಬಂಗಾರಪೇಟೆ ತಾಲ್ಲೂಕಿನಲ್ಲಿ ಮತ್ತು ಮಾಲೂರು ತಾಲ್ಲೂಕಿನಲ್ಲಿ ಒಂದು ತಮಿಳುಶಾಸನವು ಲಭ್ಯವಾಗಿದೆ.

ಮಾಲೂರು ತಾಲ್ಲೂಕಿನಲ್ಲಿ ಲಭ್ಯವಾಗಿರುವಂತಹ ಶಾಸನವು[೧೯೪] ಭೂದಾನ ಶಾಸನವಾಗಿದ್ದು, ರಾಜನನ್ನು ತಿರುವಗಟ್ಟೀಶ್ವರಂಉಡಯೈನ ವರದ ಕೊಟ್ಟನ್ ಎಂದು ಉಲ್ಲೇಖಿಸಿದ್ದು, ಇದು ನರಸಿಂಹನನ್ನು ಪ್ರತಿಪಾದಿಸುತ್ತದೆ. ಈತನು ತುಳಾರಿನ ಅಧಿಪತಿಯೆಂದು ಶಾಸನ ಹೇಳುತ್ತದೆ.ಈತನು ವೆಳಿಯೂರಿನಲ್ಲಿರುವ ಮಹಾದೇವರಿಗೆ ಭೂದಾನವನ್ನು ನೀಡಿರುವಂತೆ ಶಾಸನವು ತಿಳಿಸುತ್ತದೆ. ಶಾಸನದಲ್ಲಿ ವಿರೋಧಿ ಸಂವತ್ಸರವೆಂದು ಪ್ರತಿಪಾದಿತವಾಗಿದ್ದು ಇದು ಕ್ರಿ.ಶ.೧೧೬೯ ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ.

ಕೋಲಾರ ತಾಲ್ಲೂಕು ನರಸಾಪುರ ಹೋಬಳಿ ಬೆಳ್ಳೂರು ಗ್ರಾಮದ ಕಣ್ಣೇಶ್ವರ ದೇವಾಲಯದಲ್ಲಿರುವಂತಹ ತಮಿಳುಶಾಸನವು[೧೯೫] ಒಂದನೆಯ ನರಸಿಂಹನ ರಾಜ್ಯಾಡಳಿತವನ್ನು ಉಲ್ಲೇಖಿಸಿದೆ. ಶಾಸನದ ಕಾಲವನ್ನು ಕ್ರಿ.ಶ.೧೧೬೭ ಎಂದು ಇತಿಹಾಸಕಾರರು ಪ್ರತಿಪಾದಿಸಿದ್ದಾರೆ.

ಈತನು ರಾಜ್ಯಾಡಳಿತವನ್ನು ಮಾಡುತ್ತಿರಲು ವೆಳ್ಳಿಯೂರಿನ ಶ್ರೀ ನರಸಿಂಗ ದೇವರಿಗೆ ಭೂದಾನವನ್ನು ನೀಡಿರುವಂತಹ ಉಲ್ಲೇಖವಿದೆ. ಈ ಶಾಸನವು ರಾಜಕೀಯವಾಗಿ ಮಹತ್ವವನ್ನು ಪಡೆದಿದೆ. ನರಸಿಂಹನು ತಲಕಾಡು, ನಂಗಲಿ, ಉಚ್ಚಂಗಿ, ಬನವಾಸಿ, ಪಾನುಂಗಲ್ (ಹಾನುಗಲ್ಲು) ಬೆಳ್ವೊಲಗಳನ್ನು ಆಳುತ್ತಿದ್ದನೆಂಬ ಮಾಹಿತಿಯಿದ್ದು, ಇದು ಹೊಯ್ಸಳರ ರಾಜ್ಯವಿಸ್ತಾರವನ್ನು ತಿಳಿಸುತ್ತದೆ. ಇದು ಮಾರಸಿಂಹನ ರಾಜ್ಯಾಡಳಿತದ ಮಧ್ಯಕಾಲವಾಗಿದ್ದು ಆತನು ತನ್ನ ರಾಜ್ಯ ವಿಸ್ತಾರ ಮಾಡಲು ಪ್ರಯತ್ನಿಸಿದ್ದನೆಂದು ಊಹಿಸಬಹುದು.

ಈ ರಾಜನನ್ನು ಉಲ್ಲೇಖಿಸುವಂತಹ ಇನ್ನೊಂದು ತಮಿಳುಶಾಸನವು[೧೯೬] ಬಂಗಾರಪೇಟೆ ತಾಲ್ಲೂಕಿನ ಬೇತಮಂಗಲ ಹೋಬಳಿಯ ಬೇತಮಂಗಲ ಗ್ರಾಮದಲ್ಲಿರುವಂತಹ ಕೆರೆಯ ಸಮೀಪದಲ್ಲಿ ದೊರಕಿದೆ. ಈ ಶಾಸನವು ದಾನಭಾಗವನ್ನು ಉಲ್ಲೇಖಿಸುತ್ತಾ ನರಸಿಂಹ ರಾಜ್ಯಾಡಳಿತವನ್ನು ಉಲ್ಲೇಖಿಸಿದೆ. ನರಸಿಂಹನು ಪೃಥ್ವಿಯನ್ನಾಳುತ್ತಿರಲು ವಿಷ್ಣುವರ್ಧನನ ಗೌಂಡನಾಗಿದ್ದ ಹಿರಿಯ ದಂಡನಾಯಕ ಚೋಕ್ಕಿಮ್ಮಯ್ಯನು ಗಂಗವಾಡಿ ೯೬೦೦೦ನ್ನು ಆಳುತ್ತಿರಲು ನಂಗಲಿಯ ಸಮೀಪವಿರುವಂತಹ ಪ್ರದೇಶದ ಶಂಕ ಮತ್ತು ಪುನರ್ ಚೊಟ್ಟರೆಂಬ ಅರಸರನ್ನು ಸೋಲಿಸಿ ಕಂಚಿ–ಕೊಂಗು ನಾಡುಗಳನ್ನು ವಶಪಡಿಸಿಕೊಂಡು ಬೇತಮಂಗಲದ ಸೇನಾಶಿಬಿರದಲ್ಲಿ ತಂಗಿದ್ದಂತಹ ಸಂದರ್ಭದಲ್ಲಿ 'ವಿಜಯಾದಿತ್ಯ ಮಂಗಲ'ವೆಂಬ ಮಹಾತಟಾಕದ ಏರಿಯನ್ನು ಕಲ್ಲಿನಿಂದ ಕಟ್ಟಿಸಿ ದೊಡ್ಡ ತೂಬನ್ನು ಅಳವಡಿಸಿ ಕೆರೆಯನ್ನು ಜೀರ್ಣೋದ್ಧಾರ ಮಾಡಿರುವಂತಹ ಉಲ್ಲೇಖವಿದೆ. ಇದೇ ಸಂದರ್ಭದಲ್ಲಿ ಕೆರೆಯ ಮೂಡಲು ಕಟ್ಟೆಯ ಬುಡದಲ್ಲಿ ೪೦೦ ಕುಳಿಗದ್ದೆಯನ್ನು ದುರ್ಗಾದೇವಿಯ ಸೇವೆಗೆಂದು ದಾನವಾಗಿ ಬಿಟ್ಟಿರುವುದನ್ನು ಉಲ್ಲೇಖಿಸಲಾಗಿದೆ. ಶಾಸನದ ಕಾಲವನ್ನು ಕ್ರಿ.ಶ.೧೧೫೫ ಎಂದು ಊಹಿಸಬಹುದಾಗಿದೆ.

ಹಿಂದಿನ ಶಾಸನದ ಕಾಲವನ್ನೇ ಸೂಚಿಸುವಂತಹ ಇನ್ನೊಂದು ಶಾಸನವು[೧೯೭] ಇದೇ ಸ್ಥಳದಲ್ಲಿ ದೊರೆತಿದ್ದು ನರಸಿಂಹನ ಆಳ್ವಿಕೆಯನ್ನು ಪ್ರತಿಪಾದಿಸಿದೆ. ಆದರೆ ಶಾಸನವು ಸಂಕ್ಷಿಪ್ತವಾಗಿದ್ದು ಗ್ರಾಮದಲ್ಲಿರುವ ಆಲೂರು ಕೆರೆಯನ್ನು ನಿರ್ಮಾಣ ಮಾಡಿರುವಂತಹ ಉಲ್ಲೇಖವಿದೆ.

ಇದೇ ಸ್ಥಳದ ನಲ್ಲೂರು ಗ್ರಾಮದಲ್ಲಿ ದೊರಕಿರುವಂತಹ ದಾನ ಶಾಸನವು[೧೯೮] ನರಸಿಂಹನು ಪ್ರಧಾನವಾಗಿ ರಾಜ್ಯವನ್ನಾಳುತ್ತಿರಲು ಈತನ ದಂಡನಾಯಕ ಅಮರೇಶ್ವರನು ವಿಜಯಾದಿತ್ಯ ಮಂಗಲದಲ್ಲಿ ನೆಲೆಸಿರುವಂತಹ ಸಂದರ್ಭದಲ್ಲಿ ಮನವಾಳ್ವಾರ ದೇವರ ಕಲ್ಯಾಣೋತ್ಸವನ್ನು ನೆರವೇರಿಸಿ ದೇವರ ಸೇವೆಗೆಂದು೧೦೦೦ ಕುಳಿ ಭೂಮಿಯನ್ನು ವಿತ್ತಿರುಂಡ ಪೆರುಮಾಳರಿಂದ ಖರೀದಿಸಿ ದೇವರಿಗೆ ದಾನ ಬಿಟ್ಟಂತಹ ಅಂಶವಿದೆ. ಶಾಸನದ ಕಾಲವು ಕ್ರಿ.ಶ.೧೧೬೭ ಆಗಿದೆ.

ಬಂಗಾರಪೇಟೆ ಹೋಬಳಿ ಮಾರಿಮಂಗಲ[೧೯೯] ಎಂಬ ಗ್ರಾಮದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ನರಸಿಂಹನನ್ನು ಉಲ್ಲೇಖಿಸಿದೆ. ಶಾಸನದ ಕಾಲವು ಕ್ರಿ.ಶ.೧೧೬೩ ಆಗಿದ್ದು ಹೆಚ್ಚಿನ ಮಾಹಿತಿಗಳು ಲಭಿಸಿರುವುದಿಲ್ಲ.

ಹೊಯ್ಸಳರ ರಾಜಮನೆತನದಲ್ಲಿ ಇಮ್ಮಡಿ ನರಸಿಂಹ ಆಡಳಿತದ ನಂತರ ರಾಜಕೀಯವಾಗಿ ಹಲವಾರು ಬದಲಾವಣೆಗಳುಂಟಾದವು. ಇಮ್ಮಡಿ ನರಸಿಂಹನ ಆಳ್ವಿಕೆಯ ನಂತರ ಸೋಮೇಶ್ವರನು ಆಳ್ವಿಕೆಯನ್ನು ನಡೆಸಿದನು. ಈತನಿಗೆ ತಮಿಳುನಾಡಿನ ಅರಸರ ಸಂಪರ್ಕವು ಅಧಿಕವಾಗಿ ಇದ್ದಂತೆ ತೋರುತ್ತದೆ. ಇದುವೇ ಮುಂದೆ ಹೊಯ್ಸಳ ಸಾಮ್ರಾಜ್ಯವು ಇಬ್ಭಾಗವಾಗುವಂತೆ ಆಗಲು ಪ್ರಮುಖ ಕಾರಣವಾಯಿತು. ಕೋಲಾರ ಜಿಲ್ಲೆಯಲ್ಲಿ ಈತನಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ದೊರೆಯುವುದಿಲ್ಲ.

ಈತನಿಗೆ ಮುಮ್ಮಡಿ ನರಸಿಂಹ ಮತ್ತು ರಾಮನಾಥರೆಂಬ ಇಬ್ಬರು ಪುತ್ರರಿದ್ದರು. ಅಖಂಡ ಹೊಯ್ಸಳ ಸಾಮ್ರಾಜ್ಯವು ಈ ಇಬ್ಬರು ಪುತ್ರರಿಗೆ ವಿಭಾಗವಾಯಿತು. ಹಿರಿಯಪುತ್ರನಾದ ಮುಮ್ಮಡಿ ನರಸಿಂಹನು ಹೊಯ್ಸಳ ಸಾಮ್ರಾಜ್ಯದ ಪ್ರಧಾನ ಭಾಗವಾದ ದ್ವಾರಸಮುದ್ರವನ್ನು ಆಳಿದರೆ, ರಾಮನಾಥನು ಕೋಲಾರ ಜಿಲ್ಲೆಯ ಪ್ರದೇಶಗಳನ್ನು ಅದರೊಂದಿಗೆ ತಮಿಳುನಾಡಿನ ಗಡಿಪ್ರದೇಶಗಳನ್ನು ಆಳಿದನು. ಈ ಪ್ರದೇಶಗಳಿಗೆ ಕಣ್ಣಾನೂರನ್ನು ರಾಜಧಾನಿಯ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದನು. ಸಹಜವಾಗಿ ಈ ಇಬ್ಬರು ಸಹೋದರರ ನಡುವೆ ರಾಜಕೀಯ ವೈಮನಸ್ಸು ಉಂಟಾಗಿತ್ತು. ಎಷ್ಟೇ ರಾಜಕೀಯ ಅಸ್ಥಿರತೆಗಳಿದ್ದರೂ ರಾಮನಾಥನ ಆಡಳಿತಾವಧಿಯು ಕೋಲಾರ ಜಿಲ್ಲೆಯ ಮೇಲೆ ಅಪಾರ ಪರಿಣಾಮವನ್ನು ಬೀರಿತ್ತು. ಅದರ ಪರಿಣಾಮವಾಗಿ ರಾಮನಾಥನಿಗೆ ಸಂಬಂಧಿಸಿದ ಹಲವಾರು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುತ್ತದೆ.

ಕ್ರಿ.ಶ.೧೨೫೪ಕ್ಕೆ ಪಟ್ಟಾಭಿಷಕ್ತನಾದ ಈತನು ಸುಮಾರು ೪೧ ವರ್ಷಗಳ ತನಕ ರಾಜ್ಯಭಾರವನ್ನು ಮಾಡಿದನು. ಈತನ ಆಡಳಿತದ ೩೧ನೇಯ ವರ್ಷವೆಂದು ಸೂಚಿಸುವಂತಹ ಶಾಸನವು ಕೋಲಾರ ಜಿಲ್ಲೆಯ ವೇಮಗಲ್ಲು ಹೋಬಳಿ ಮಡಿವಾಳ ಗ್ರಾಮದ ಇರುವಂತಹ ಮಾಲೇಶ್ವರ ದೇವಾಲಯದಲ್ಲಿ ದೊರಕಿದೆ. ಈ ತಮಿಳುಶಾಸನವು[೨೦೦] ದಾನದ ವಿಚಾರ ತಿಳಿಸುತ್ತಾ ರಾಮನಾಥನ ಆಳ್ವಿಕೆಯನ್ನು ತಿಳಿಸುವಂತಾಗಿದೆ. ರಾಮನಾಥ ರಾಜನು ಆಳ್ವಿಕೆಯನ್ನು ನಡೆಸುತ್ತಿರಲು ನಿಗಿರಿಲಿ ಚೋಳ ಮಂಡಲದ ಕೈವಾರ ನಾಡಿನ ಅಂಬಡಕ್ಕಿರುಪ್ಪಿನ ಕುರಿತ್ತಿ ಉಳಿಗಯ್ಯನು ಪೆರುಮಾಳ ದೇವರಿಗೆ ಕೋಳಿಕೂಗುವ (ಕೋಳಿ ಕೂಗಿನ ಊರು ಅಂದರೆ ಜನವಸತಿ ಇರುವ) ಎಲ್ಲಾ ಊರುಗಳಿಂದ ತಲಾ ಒಂದೊಂದು ಪಣವನ್ನು ನೀಡಿರುವಂತಹ ಮಾಹಿತಿಯಿದೆ. ರಾಮನಾಥನನ್ನು ಶಾಸನವು ಬಹಳ ಕೊಂಡಾಡಿದ್ದು, ಮಾಲ್ಯೆಯೂರಗೊಂಡ, ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ಪಾಂಡ್ಯಕುಲಸಮುದ್ಧರಣ, ಮಕರ ರಾಜ್ಯ ಪ್ರತಿಷ್ಠಾಚಾರ್ಯ ಮುಂತಾದ ಬಿರುದುಗಳನ್ನು ಹೊಂದಿದ್ದನೆಂದು ಹೊಗಳಿದೆ. ಅದಲ್ಲದೆಯೇ ಕೋಲಾರ ಮಂಡಲವನ್ನು ಇನ್ನೂ ನಿಗಿರಿಲಿ ಚೋಳ ಮಂಡಲವೆಂದು ಕರೆಯುತ್ತಿದ್ದರೆಂದು ತಿಳಿಯುತ್ತದೆ. ಶಾಸನದ ಕಾಲವು ಕ್ರಿ.ಶ.೧೨೮೬ ಎಂದು ಹೇಳಲಾಗಿದೆ.

ಕೋಲಾರ ತಾಲ್ಲೂಕಿನ ನೆರಗಳ್ಳ ಗ್ರಾಮದಲ್ಲಿ[೨೦೧] ದೊರಕಿರುವಂತಹ ಶಾಸನವು ರಾಜನ ಆಡಳಿತವನ್ನು ಸೂಚಿಸುತ್ತಾ ಪೆರುಮಂಗಲದ ಆರ್ಯವಾರ ಪೆರುಮಾಳನು ತನ್ನ ಅಜ್ಜಿಗಾಗಿ ಆತನ ತಂದೆಯು ನಿರ್ಮಿಸಿದ್ದಂತಹ ಈಶ್ವರ ದೇವರ ಸೇವೆಗಾಗಿ ಕಾನಕಟ್ಟೆಯನ್ನು ನಿರ್ಮಿಸಿ ಭೂದಾನ ನೀಡಿರುವಂತಹ ಮಾಹಿತಿಯಿದೆ. ಶಾಸನದ ಕಾಲವು ಕ್ರಿ.ಶ.೧೨೯೧ ಆಗಿದೆ.

ಇಳವಂಜಿರಾಯನೆಂಬುವವನು ರಾಮನಾಥನ ಮಂತ್ರಿಯಾಗಿದ್ದನು. ಈತನನ್ನು ಉಲ್ಲೇಖಿಸುವಂತಹ ವೀರಗಲ್ಲು ಶಾಸನವೊಂದು ದೊರಕಿದ್ದು, ಈತನು ರಾಜನಿಗೆ ನಿಷ್ಠಾವಂತ ಮಂತ್ರಿಯಾಗಿದ್ದನೆಂದು ಶಾಸನವು ತಿಳಿಸುತ್ತದೆ. ರಾಮನಾಥನ ಆಳ್ವಿಕೆಯ ೩೨ನೆಯ ವರ್ಷವನ್ನು ಹೇಳಿರುವಂತಹ ಶಾಸನವು[೨೦೨] ಮಾಲೂರು ತಾಲ್ಲೂಕಿನಲ್ಲಿ ದೊರಕಿದೆ. ಶಾಸನದ ಕಾಲವು ವ್ಯಯ ಸಂವತ್ಸರದ ಮಾಗಳಿ (ಮಾಘಮಾಸ) ಎಂದು ಉಲ್ಲೇಖಿತವಾಗಿದ್ದು ಇದು ಕ್ರಿ.ಶ.೧೨೮೬ಕ್ಕೆ ಸರಿ ಹೊಂದುತ್ತದೆ. ಈ ಶಾಸನವು ಬ್ರಹ್ಮಾಧಿರಾಯರ ಉಲ್ಲೇಖವನ್ನು ಮಾಡುತ್ತಿದ್ದು, ಬ್ರಹ್ಮಾಧಿರಾಯರ ಆಳ್ವಿಕೆಯನ್ನು ದೃಢಪಡಿಸುವಂತಹ ಶಾಸನಗಳಲ್ಲಿ ಪ್ರಮುಖವಾಗಿದೆ. ರಾಮನಾಥನನ್ನು ಪೋಸಳ-ರಾಮನಾಥ ದೇವನು ಎಂದು ಕರೆದಿದ್ದು ಈತನು ಆಳ್ವಿಕೆಯನ್ನು ನಡೆಸುತ್ತಿರಲು

ವಾಶಿನಾಯಯನ ಪುತ್ರನಾದ ಆಯನ ಅಂಕಕಾರ ತುತ್ತರಾದಿತ್ತ ರಾಜನಾರಾಯಣ ಬ್ರಹ್ಮಾಧಿರಾಯನು ವೆಳ್ಳಿಯೂರಿನಲ್ಲಿರುವಂತಹ ವಾಳ ವಂಡಪ ಪೆರುಮಾಳ್ ದೇವರಿಗೆ ದಾನವನ್ನು ನೀಡಿರುವಂತಹ ಮಾಹಿತಿಯಿದೆ. ಈ ಕಾಲಕ್ಕಾಗಲೇ ರಾಮನಾಥನು ಪ್ರಬಲ ರಾಜನಾಗಿದ್ದನೆಂದು ತಿಳಿಯಬಹುದು.

ಈತನ ೩೩ನೇಯ ವರ್ಷದ ಆಳ್ವಿಕೆಯನ್ನು ತಿಳಿಸುವಂತಹ ಶಾಸನವು[೨೦೩] ಮಾಲೂರು ತಾಲ್ಲೂಕಿನಲ್ಲಿ ದೊರಕಿದ್ದು ಸರ್ವಜಿತು ಸಂವತ್ಸರದ ಪಂಗುಣಿ (ಫಾಲ್ಗುಣಿ) ಎಂದು ಸೂಚಿತವಾಗಿದ್ದು ದಾನದ ಮಾಹಿತಿಯನ್ನು ತಿಳಿಸುತ್ತದೆ. ವೆಳ್ಳಿಯೂರು ಗ್ರಾಮ ಸಭೆಯ ಸದಸ್ಯನೂ ಮಾಲುಗಭಟ್ಟನ ಪುತ್ರನೂ ಆದ ಮರುಗನ್ ಎಂಬುವವನು ಭೂದಾನವನ್ನು ನೀಡಿರುವುದಾಗಿ ಶಾಸನವು ತಿಳಿಸುತ್ತದೆ.

ಕ್ರಿ.ಶ.೧೨೯೩ ರಾಮನಾಥನ ಆಳ್ವಿಕೆಯ ೩೯ನೆಯ ವರ್ಷವಾಗಿದ್ದು ಈ ಸಮಯವನ್ನು ಸೂಚಿಸುವಂತಹ ಎರಡು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ಕೋಲಾರ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿರುವಂತಹ ಸ್ವಯಂಭೂದೇವರಿಗೆ ರಾಜನಾದ ರಾಮನಾಥನ ಶ್ರೇಯೋಭಿವೃದ್ಧಿಗಾಗಿ ಆತನ ಅಧಿಕಾರಿಯಾದಂತಹ ಮಂಜಯ ಮಾವುತ್ತನು ದಾನವನ್ನು ನೀಡಿರುವಂತಹ ಮಾಹಿತಿಯಿದೆ.[೨೦೪]

ಇದೇ ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ತಮಿಳು ಶಾಸನವು ಕೂಡಾ ದೇವದಾನವನ್ನು ನೀಡಿರುವಂತಹ ಉಲ್ಲೇಖವನ್ನು ನೀಡುತ್ತಿದ್ದು, ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೈಯರ್ ದೇವರಿಗೆ ಸಾತ್ತಾಪ್ಪಾದೈದಯನ್ (ಮಂಜಯಮಾವುತ್ತ) ಎಂಬುವವನು ಭೂದಾನವನ್ನು ನೀಡಿರುವನು ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೨೯೫ ಈತನ ಆಳ್ವಿಕೆಯ ೪೧ನೆಯ ವರ್ಷವಾಗಿದ್ದು, ಈ ಕಾಲವನ್ನು ತಿಳಿಸುವಂತಹ ಒಂದು ಶಾಸನವು[೨೦೫] ಕೋಲಾರ ತಾಲ್ಲೂಕಿನ ಮಡಿವಾಳದಿಂದ ವರದಿಯಾಗಿದೆ. ಗ್ರಾಮದಲ್ಲಿರುವಂತಹ ಸ್ವಯಂಭೂನಾಯನಾರ್ ದೇವರಿಗೆಂದು ಇಳವಂಜಿನಾಡಿನ ಕೇಶವನಪಳ್ಳದಲ್ಲಿ ಭೂದಾನವನ್ನು ನೀಡಿರುವಂತಹ ಮಾಹಿತಿಯಿದೆ. ಬಹುಶಃ ಇದು ರಾಮನಾಥ ರಾಜನ ಆಳ್ವಿಕೆಯನ್ನು ಸೂಚಿಸುವಂತಹ ಕೊನೆಯ ಶಾಸನವಾಗಿದ್ದು ವಿಶೇಷ ಮಾಹಿತಿಯನ್ನು ನೀಡಿದೆ. ರಾಮನಾಥನು ಆಳ್ವಿಕೆಯನ್ನು ನಡೆಸುತ್ತಿರಲು ಇಳವಂಜಿರಾಯನು ಪ್ರಧಾನ ಅಧಿಕಾರಿಯಾಗಿದ್ದನು. ಬಹುಶಃ ಈತನ ನೆನಪಿನಲ್ಲಿ ರಾಜನು ಇಳವಂಜಿನಾಡು ಎಂದು ನೀಡಿರಬಹುದು. ಕೇಶವನಪಳ್ಳ ಎಂಬುವುದು ಈಗಿನ ಕ್ಯಾಸಂಬಳ್ಳಿಯಾಗಿದೆ.

ಕಣ್ಣಾನೂರು ಶಾಖೆಯನ್ನೇ ಪ್ರಧಾನವಾಗಿಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದಂತಹ ರಾಮನಾಥನ ಆಳ್ವಿಕೆಯ ನಂತರ ಆತನ ಪುತ್ರನಾದ ವಿಶ್ವನಾಥನು ಉತ್ತರಾಧಿಕಾರಿಯಾಗಿ ಮುಂದುವರೆದನು. ಆದರೆ ಈತನು ಬಹಳ ಕಾಲದ ತನಕ ರಾಜ್ಯಭಾರವನ್ನು ಮಾಡದೇ ಇದ್ದವನಾಗಿದ್ದು, ಈತನಿಗೆ ಸಂಬಂಧಿಸಿದಂತಹ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕುವುದಿಲ್ಲ.

ಮುಮ್ಮಡಿ ಬಲ್ಲಾಳನು ಹೊಯ್ಸಳ ಸಾಮ್ರಾಜ್ಯದ ಅಂತಿಮ ದೊರೆಯಾಗಿದ್ದನು. ಹೊಯ್ಸಳ ಸಾಮ್ರಾಜ್ಯದ ಆಡಳಿತಾವಧಿಯಲ್ಲಿ ೧೪ನೆಯ ಶತಮಾನದ ಆದಿಭಾಗವು ಹೊಯ್ಸಳ ಸಾಮ್ರಾಜ್ಯ ಮಾತ್ರವಲ್ಲದೆಯೇ ಆ ಸಮಯದಲ್ಲಿ ಆಡಳಿತಾರೂಢನಾಗಿದ್ದಂತಹ ಮುಮ್ಮಡಿ ಬಲ್ಲಾಳನಿಗೂ ಹಲವಾರು ಸಂಕಷ್ಟಗಳನ್ನು ಎದುರಿಸುವಂತೆ ಮಾಡಿತು. ಇದು ಉತ್ತರದ ರಾಜರುಗಳು ದಕ್ಷಿಣ ಭಾರತದ ಮೇಲೆ ನಿರಂತರ ಧಾಳಿ ಮಾಡುತ್ತಿದ್ದಂತಹ ಕಾಲವಾಗಿತ್ತು. ಇದರೊಂದಿಗೆ ಮಧುರೈ ಸುಲ್ತಾನನ ಧಾಳಿಯನ್ನು ಸಮರ್ಥವಾಗಿ ಎದುರಿಸಬೇಕಾದಂತಹ ಪರಿಸ್ಥಿತಿ

ಒದಗಿಬಂದಿತ್ತು. ಆದರೂ ಇದೆಲ್ಲವನ್ನು ಸಮರ್ಥವಾಗಿ ಎದುರಿಸಿ ಹೊಯ್ಸಳ ಸಾಮ್ರಾಜ್ಯದಲ್ಲಿದ್ದಂತಹ ರಾಜಕೀಯ ಅಸ್ಥಿರತೆಯನ್ನು ದೂರ ಮಾಡಿ ಒಡೆದು ಹೋಗಿದ್ದಂತಹ ಹೊಯ್ಸಳ ಸಾಮ್ರಾಜ್ಯವನ್ನು ಒಂದುಗೂಡಿಸಿದನು. ಕ್ರಿ.ಶ.೧೨೯೨ರಲ್ಲಿ ಪಟ್ಟಾಭಿಷಿಕ್ತನಾದಂತಹ ಈತನು ಸಮರ್ಥವಾಗಿ ಹೊಯ್ಸಳ ಸಾಮ್ರಾಜ್ಯವನ್ನು ಮುನ್ನಡೆಸಿಕೊಂಡು ಹೋದನು.

ಕೋಲಾರ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ಈತನ ಆಳ್ವಿಕೆಯನ್ನು ಸೂಚಿಸುವಂತಹ ಹಲವಾರು ಶಾಸನಗಳು ಉಪಲಬ್ಧವಾಗಿದೆ. ಹೆಚ್ಚಿನ ಶಾಸನಗಳು ದಾನ ಶಾಸನಗಳಾಗಿದ್ದು ಉಪಯುಕ್ತ ಮಾಹಿತಿಯನ್ನೊದಗಿಸುತ್ತದೆ. ಮಾರೆಪುಕ್ಕಾಮನ್ ಶೊಣ್ಣನಾಯನ್ ಎಂಬುವವನು ವಲ್ಲಾಳ (ಬಲ್ಲಾಳ) ದೇವರ ಖಡ್ಗದ ಮತ್ತು ಬಾಹುಗಳ ವಿಜಯಯಾತ್ರೆಗಾಗಿ ಮಾದಿಪ್ಪುರಂ ಎಂಬ ಗ್ರಾಮವನ್ನು ಶ್ರೀಪತಿ ನಾಯನಾರ್ ಎಂಬ ದೇವರ ಸೇವಕನಾದ 'ಉಮೈಯಪ್ಪ ಪಿಳ್ಳೈ' ಎಂಬುವವನಿಗೆ ದಾನ ನೀಡಿರುವಂತಹ ಉಲ್ಲೇಖವು ಕ್ರಿ.ಶ.೧೩೦೨ರ ಶಾಸನವು ಪ್ರತಿಪಾದಿಸಿದೆ. ಈ ಶಾಸನವು ಕೋಲಾರ ತಾಲ್ಲೂಕಿನಲ್ಲಿ ದೊರಕಿದ್ದು ವೀರಬಲ್ಲಾಳನ ಆಡಳಿತವನ್ನು ದೃಢಪಡಿಸಿದೆ.[೨೦೬]

ಈ ಶಾಸನವು ವೀರಬಲ್ಲಾಳನು ಪಟ್ಟಾಭಿಷಿಕ್ತನಾದ ೧೦ ವರ್ಷಗಳ ನಂತರ ಬಂದಿರುವಂತಹ ಶಾಸನವಾಗಿದೆ. ರಾಜನ ಶ್ರೇಯೋಭಿವೃದ್ಧಿಗಾಗಿ ಆತನ ಅನುಯಾಯಿಗಳು ದಾನ ನೀಡಬೇಕೆಂದರೆ ಆತನು ಪ್ರಬುದ್ಧತೆಗೆ ಬರುತ್ತಿದ್ದಂತಹ ಕಾಲವಿರಬೇಕು. ಅದಲ್ಲದೆಯೇ ಜನರು ಪ್ರೀತಿ ವಿಶ್ವಾಸಗಳನ್ನು ಪಡೆದಿರುವಂತಹ ರಾಜನಾಗಿ ಉದ್ಭವಿಸಿರಬಹುದು.

ಇದೇ ರೀತಿಯಾದಂತಹ ಜನರ ಮತ್ತು ಇತರ ರಾಜರುಗಳ ಸಹಾಯವನ್ನು ವೀರಬಲ್ಲಾಳನು ಪಡೆದಿರುವಂತಹ ಮಾಹಿತಿಯು ಈತನ ಆಳ್ವಿಕೆಯ ೧೪ನೆಯ ವರ್ಷದ ಶಾಸನವು ತಿಳಿಸುತ್ತದೆ. ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಶಾಸನವು ವೀರಬಲ್ಲಾಳನ ಯೋಗಕ್ಷೇಮಕ್ಕಾಗಿ ಅಪಾರ ಸಂಖ್ಯೆಯ ಜನರು ಸೇರಿಕೊಂಡು ದಾನವನ್ನು ನೀಡಿರುವಂತಹ ಮಾಹಿತಿಯು ದೊರಕಿದೆ.[೨೦೭]

ಕುಂದಾಣಿ ಅಡಾಕ್ಕಮಟ್ಟಲಂ (ಮಂಡಲ), ಮಹೇಶ್ವರರು, ಸೋಗುಂಡಪಾಡಿ ಅತ್ತಿಮುಗ್ಯೆ, ಕೆಂಡುಂದೇವನಾಯನಾರ್ ಕೊಯಿಲ್, ತೇಕಲ್‌ನಾಡು, ಪೆರಿಯನಾಡು, ಕೇಶವನ ಪಲ್ಲಂ, ಆವಿನೀಯಂ, ಉತ್ತನೂರು, ಕುರುಡುಮಲೈ, ಕುವಲಾಲ೩೦೦ ಮೊದಲಾದ ನಾಡಿನ ಜನರೆಲ್ಲರೂ ಶ್ರೀಪತಿ, ನಂದಿ, ಹದಿನೆಂಟು ಜನರೂ ಮತ್ತು ೧೮ ಭೂಮಿಯ (ಪ್ರದೇಶದ) ಜನರೂ, ಸನ್ಯಾಸಿಗಳು, ಸ್ಥಾನಾಧಿಪತಿಗಳು ಆದಿಕೇಶ್ವರ ದೇವಾಲಯದ ಪೂಜಾರಿಗಳು, ದೇವಾಲಯದ ಲೆಕ್ಕಾಧಿಕಾರಿಗಳೂ, ತೇನಾಂದಿರಿ ನಾಯರ್, ಪಡಿಯಿಲಾಯಿರ ಸೋಮ, ಅನೂಕ್ಕರ್, ಈ ದೇವಾಲಯದ ಕೈಕ್ಕೋಳಾರ್‌ರವರು ಮತ್ತು ಮೂಲ ಚೈದಿ ವೀರಭಟರರ್ ಮತ್ತು ಇತರರು ವೀರಬಲ್ಲಾಳ ದೇವನಿಗೆ ಒಳ್ಳೆಯದಾಗಲೆಂದು ಕಲ್ಲಿನಲ್ಲೂ ಮತ್ತು ತಾಮ್ರದಲ್ಲೂ ಶಾಸನವನ್ನು ಕೆತ್ತಲಾಗಿದೆ. ತಾಮ್ರಶಾಸನವನ್ನು ತೇಕ್ಕಲ್‌ನಾಡಿನ ಉಡಯ ನಾಯನಾರ್ ಎಂಬುವವನ ಶಿಷ್ಯನಾದ ಅಳೈ-ಸೇನ್ರಾರ್ ಎಂಬುವವನಿಗೆ ನೀಡಲಾಗಿದೆ. ಬಲ್ಲಾಳದೇವನಿಗೆ ಎಷ್ಟೆಲ್ಲ ಜನರು ಇಷ್ಟಾರ್ಥವನ್ನು ಬಯಸುತ್ತಾರೆಂದರೆ ಈ ಸಂದರ್ಭದಲ್ಲಿ ಅತ್ಯಂತ ಪ್ರಬಲ ರಾಜನಾಗಿ ಉದಯಿಸಿದ್ದನೆಂದು ಊಹಿಸಬಹುದು. ಈ ಶಾಸನದಲ್ಲಿ ಕುವಲಾಲ೩೦೦, ಉತ್ತನೂರು, ಕುರುಡಮಲೈ ಮೊದಲಾದ ಗ್ರಾಮಗಳನ್ನು ಹೆಸರಿಸಿದ್ದು, ಕೋಲಾರ ಜಿಲ್ಲೆಗೆ ಸಂಬಂಧಿಸಿದಂತಹ ಗ್ರಾಮಗಳಾಗಿವೆ. ಕುವಲಾಲ೩೦೦ ಎನ್ನುವುದು ವಿಶೇಷವಾಗಿದ್ದು, ಈ ಸಂದರ್ಭದಲ್ಲಿ ಕುವಲಾಳ

ನಾಡು ೩೦೦ ಗ್ರಾಮಗಳನ್ನು ಹೊಂದಿತ್ತೆಂದು ಊಹಿಸಬಹುದು. ಅದಲ್ಲದೆಯೇ ಕೋಲಾರ ಜಿಲ್ಲೆಯಲ್ಲಿ ಬಲ್ಲಾಳದೇವನು ಪ್ರಬಲ ರಾಜನಾಗಿದ್ದನು.

ಪ್ಲವಂಗ ಸಂವತ್ಸರದ ಋಷಭಮಾಸದ ಪೂರ್ವಪಕ್ಷದ ದ್ವಾದಶಯೆಂದು ಕಾಲ ಸೂಚಿಸುತ್ತಿರುವಂತಹ ಕ್ರಿ.ಶ.೧೩೦೭ನೆಯ ವರ್ಷದ ಶಾಸನವೊಂದು ಇದೇ ರೀತಿಯಾದಂತಹ ಮಾಹಿತಿಯನ್ನೊದಗಿಸುತ್ತಾ ರಾಜನ ಪರಾಕ್ರಮವನ್ನು ಸೂಚಿಸಿದೆ.[೨೦೮] ವೀರಬಲ್ಲಾಳನ ಭುಜಬಲ ಮತ್ತು ಖಡ್ಗದ ವಿಜಯ ಯಾತ್ರೆಗಾಗಿ ಕಡತ್ತೂರ ಸ್ವಾಮಿಗಳಾದ ಇಳಯೊಳ್ವರ್ ಎಂಬುವವನಿಗೆ ಭೂದಾನವನ್ನು ನೀಡಿರುವುದಾಗಿ ಶಾಸನವು[೨೦೯] ತಿಳಿಸುತ್ತದೆ. ಇದೇ ರೀತಿಯಾಗಿ ಕೋಲಾರದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ರಾಜನ ಪರವಾಗಿ ದಾನ ನೀಡಿರುವುದನ್ನು ಉಲ್ಲೇಖಿಸಿದೆ. ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೈಯ್ಯಾರ್ ಎಂಬ ದೇವರಿಗೆ ವೀಳ್ಯದೆಲೆ ಮತ್ತು ಅಡಿಕೆಯನ್ನು ದಾನವಾಗಿ ನೀಡಲಾಗಿದೆ.

ಶಾಸನವು ವ(ಬ)ಲ್ಲಾಳ ದೇವರ ವಿಜಯ ಯಾತ್ರೆಗಾಗಿ ಪೆರುಮಾಪ್ಪಿಳ್ಳೈ ಮತ್ತು ಇತರರು ಕೆಲವು ಸಾಲಗಳನ್ನು ಮನ್ನಾ ಮಾಡಲಾಗಿರುವಂತಹ ಮಾಹಿತಿಯಿದೆ. ಈ ಘಟನೆಯು ಕೈವಾರ ನಾಡಿನಲ್ಲಿರುವಂತಹ ನೊಂಡಗುಳಿ ಎಂಬಲ್ಲಿ ನಡೆದ ಜಾತ್ರೆಯಲ್ಲಿ ನಡೆದಿರುವುದಾಗಿ ತಿಳಿಸಲಾಗಿದೆ.

ವೀರಬಲ್ಲಾಳನ ಉಲ್ಲೇಖವಿರುವಂತಹ ಶಾಸನವು ಮುಂದೆ ಕ್ರಿ.ಶ.೧೩೧೭ರ ಅವಧಿಯಲ್ಲಿ ದೊರಕಿದ್ದು, ಈ ಮಧ್ಯದ ಆರು, ಏಳು ವರ್ಷಗಳ ಅವಧಿಯಲ್ಲಿ ರಾಜಕೀಯ ಪ್ರಕ್ಷೋಭೆ ಉಂಟಾಗಿರುವುದು ಕಾರಣವಾಗಿರಬಹುದು. ಕ್ರಿ.ಶ.೧೪ನೆಯ ಶತಮಾನದ ಪ್ರಾರಂಭದ ಅವಧಿಯಲ್ಲಿ ಮುಸಲ್ಮಾನ ದೊರೆಗಳು ತಮ್ಮ ವಿಜಯ ಯಾತ್ರೆಯನ್ನು ದಕ್ಷಿಣಭಾರತದ ಕಡೆಗೆ ಪಸರಿಸುತ್ತಿದ್ದಂತಹ ಕಾಲವಾಗಿತ್ತು. ಈ ಹೊತ್ತಿಗಾಗಲೇ ಇಮ್ಮಡಿ ವೀರಬಲ್ಲಾಳನು ಸೇವುಣರನ್ನು ನೊಳಂಬವಾಡಿಯ ನೊಳಂಬರನ್ನು ಮತ್ತು ಕಲ್ಯಾಣದ ಕಳಚುರಿಗಳನ್ನು ತನ್ನ ವಶಪಡಿಸಿಕೊಂಡು ಸಮರ್ಥ ರಾಜನೆನಿಸಿ, ಹೊಯ್ಸಳರ ಸಾಮ್ರಾಜ್ಯವನ್ನು ವಿಸ್ತರಿಸಿದ್ದಲ್ಲದೆ ಸಾಮ್ರಾಜ್ಯದ ಗತವೈಭವವನ್ನು ಮರುಕಳಿಸಿದನು. ತಮಿಳುನಾಡಿನ ತಿರುವಣ್ಣಾಮಲೈ ತನಕ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು.

ಕ್ರಿ.ಶ. ೧೩೧೧ರ ಸುಮಾರಿಗೆ ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕನಾದ ಮಲ್ಲಿಕಾಫರನು ದಕ್ಷಿಣ ಭಾರತದ ಮೇಲೆ ಆಕ್ರಮಣವನ್ನು ಆರಂಭಿಸಿದನು. ಈತನು ಸೇವುಣರ ಮೇಲೆ ಆಕ್ರಮಣ ಮಾಡಿ ಅವರನ್ನು ಸೋಲಿಸಿ ಅದೇ ವರ್ಷದಲ್ಲಿ ಹೊಯ್ಸಳರ ರಾಜಧಾನಿ ದ್ವಾರಸಮುದ್ರದ ಮೇಲೆ ಆಕ್ರಮಣವನ್ನು ಮಾಡಿ ತನಗೆ ಮನಬಂದಂತೆ ರಾಜಧಾನಿಯನ್ನು ಲೂಟಿ ಮಾಡಿದನು. ಅದಲ್ಲದೆಯೇ ಮುಮ್ಮಡಿ ಬಲ್ಲಾಳನನ್ನು ಸೋಲಿಸಿ ಆತನು ಶರಣಾಗುವಂತೆ ಮಾಡಿದನು.

ಮಲ್ಲಿಕಾಫರನಿಗೆ ತನ್ನ ಪುತ್ರನಾದ ವಿರೂಪಾಕ್ಷ ಬಲ್ಲಾಳನನ್ನು ಒತ್ತೆಯಾಳಾಗುವಂತೆ ಮಾಡಿದನು. ಆದರೆ ಕ್ರಿ.ಶ.೧೩೧೩ರಲ್ಲಿ ಆತನನ್ನು ಮರುಕಳುಹಿಸಲಾಯಿತು. ಅದರೊಂದಿಗೆ ಹಲವಾರು ಒಪ್ಪಂದಗಳನ್ನು ಮಾಡುವುದರ ಮೂಲಕ ತನ್ನ ರಾಜ್ಯವನ್ನು ಮರು ಪಡೆದುಕೊಂಡನು. ಹಲವಾರು ಪ್ರಕ್ಷುಬ್ಧತೆಗಳನ್ನು ಎದುರಿಸಿಕೊಂಡು ತನ್ನ ರಾಜ್ಯಭಾರವನ್ನು ಪುನಃ ಪ್ರಾರಂಭಿಸಲು ಪ್ರಯತ್ನಿಸಿದನು. ಈ ರೀತಿಯಾಗಿ ಕ್ರಿ.ಶ.೧೩೨೭ರವರೆಗೂ ತನ್ನ ಆಳ್ವಿಕೆಯನ್ನು ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸಿದನು. ಹಾಗಾಗಿ ಇತಿಹಾಸಕಾರರು ಈತನನ್ನು 'ದಕ್ಷಿಣ ರಾಜಕೀಯ ಅಂಧಕಾರದ ವಾತಾವರಣದಲ್ಲಿ ಉದಯಿಸಿದಂತಹ ಸೂರ್ಯ'ನೆಂದು ಬಿಂಬಿಸಿದ್ದಾರೆ.[೨೧೦]

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಅಸ್ಪಷ್ಟವಾದ ಶಾಸನವು ಬಲ್ಲಾಳದೇವ ಮಂತ್ರಿಯ ಉಲ್ಲೇಖವನ್ನು ಮಾಡುತ್ತಿದೆ.[೨೧೧] ಕ್ರಿ.ಶ.೧೩೧೭ನೆಯ ಇಸವಿಗೆ ಸಂಬಂಧಿಸಿದಂತಹ ಈ ಶಾಸನವು ರಾಜನ ಮಂತ್ರಿಯಾದ ಕಠಾರಿ ಸಾಳುವ ಇರಸಾಯ ನಾಯಕ ಎಂಬುವವನು ದಾನವನ್ನು ನೀಡಿರುವಂತಹ ಮಾಹಿತಿಯಿದ್ದು ಅಪೂರ್ಣವಾಗಿದೆ.

ಕಂಪಿಲ ದುರ್ಗದ ಕಂಪಿಲರಾಯನು ಸೇವುಣರ ಅಧೀನದಲ್ಲಿದ್ದನು. ಆದರೆ ಈ ಘಟನೆಯ ನಂತರ ಕಂಪಿಲರಾಯನು ಸ್ವತಂತ್ರ ರಾಜನಾದನು. ಈತನ ಸುತನೇ ಇತಿಹಾಸ ಪ್ರಸಿದ್ಧ ಕುಮಾರರಾಮನೆಂದು ಇತಿಹಾಸಕಾರರ ಅಭಿಮತವಾಗಿದೆ. ಈ ಕಂಪಿಲರಾಯನ ಮೇಲೆ ಬಲ್ಲಾಳದೇವನು ಆಕ್ರಮಣವನ್ನು ಮಾಡಿದರೂ ಅದರಲ್ಲಿ ವಿಫಲನಾದನು. ಇದೇ ಸಂದರ್ಭದಲ್ಲಿ ದೆಹಲಿಯಲ್ಲಿ ಮಹಮದ್ ಬಿನ್ ತುಘಲಕ್‌ನು ಅಧಿಕಾರಕ್ಕೆ ಬಂದನು. ಈತನೂ ಪ್ರಸಿದ್ಧರಾಜನಾಗಿದ್ದು, ದಕ್ಷಿಣಭಾರತದ ಮೇಲೆ ಆಕ್ರಮಣ ಮಾಡುವಂತಹ ಅತೀವ ಇಚ್ಛೆಯಿತ್ತು. ಮೊದಲಿಗೆ ಈತನು ಕಾಕತೀಯ ರಾಜ್ಯವನ್ನು ಸಂಪೂರ್ಣವಾಗಿ ಸೋಲಿಸಿದನು. ಈ ಸಂದರ್ಭದಲ್ಲಿ ದಕ್ಷಿಣಭಾರತದಲ್ಲಿದ್ದಂತಹ ಪ್ರಸಿದ್ಧರಾಜ ಮನೆತನವೆಂದರೆ ಹೊಯ್ಸಳರು ಮತ್ತು ಕಂಪಿಲರಾಜಮನೆತನಗಳು.

ಕ್ರಿ.ಶ.೧೩೧೮ರ ಇಸವಿಯನ್ನು ಸೂಚಿಸುವಂತಹ ಇನ್ನೊಂದು ಶಾಸನವು[೨೧೨] ಮಾಲೂರು ತಾಲ್ಲೂಕಿನಲ್ಲಿ ದೊರಕಿದ್ದು ವೀರಬಲ್ಲಾಳನ ಆಳ್ವಿಕೆಯನ್ನು ಸೂಚಿಸಿದೆ. ಕಾಳಯುಕ್ತಿ ಸಂವತ್ಸರದ ಪುರತ್ತುದಿ (ಪುಷ್ಯಮಾಸ)ಮಾಸದ ಪ್ರಥಮ ದಿನವನ್ನು ಸೂಚಿಸುತ್ತಿದ್ದು ಸಾಮಾಜಿಕ ಕಾರ್ಯವನ್ನು ಸೂಚಿಸುವಂತಹ ಶಾಸನವಿದಾಗಿದೆ. ರಾಜನು ಆಳ್ವಿಕೆ ನಡೆಸುತ್ತಿರಲು ಮಹಾಸಾಮಂತಾಧಿಪತಿಯೂ, ವೀರಕುಮಾರ ಸೊಕ್ಕರ ನಾಯಕ್ಕನ್ ಎನ್ನುವವನ ಪುತ್ರನಾದ 'ಕುಳದೇವರ್ ಮಿಂಡಿದೇವರ್' ಎಂಬುವವನು ಒಂದು ಕೆರೆಯನ್ನು ಮತ್ತು ತೂಬನ್ನು ನಿರ್ಮಿಸಿರುವಂತಹ ವಿಚಾರವಿದೆ. ಈ ಕೆರೆಯು ಪುಲ್ಲಮಂಗಲಂ ಎಂಬ ಪ್ರದೇಶದಲ್ಲಿದೆ.

ಎರಡು ವರ್ಷದ ನಂತರದ ಕಾಲವನ್ನು ತಿಳಿಸುವಂತಹ ಇನ್ನೊಂದು ಶಾಸನವು ಮಾಲೂರು ತಾಲ್ಲೂಕಿನಲ್ಲಿ ದೊರಕಿದೆ. ರೌದ್ರಿ ಸಂವತ್ಸರದ (ಕ್ರಿ.ಶ.೧೩೨೦) ಕಾಲದ ಈ ಶಾಸನವು[೨೧೩] ರಾಜನ ಆಳ್ವಿಕೆಯನ್ನು ತಿಳಿಸುತ್ತಾ ಅಳ್ಳಾಲ, ಪೆರುಮಾಳ್ ಮತ್ತು ವರಂದರರು ಪೆರುಮಾಳ್ ದೇವರ ಪ್ರೀತ್ಯರ್ಥವಾಗಿ ನಂಬೂರಿ ಪುರುಷೋತ್ತಮ ಎಂಬುವವರಿಗೆ ದಾನವನ್ನು ನೀಡಿರುವಂತಹ ಮಾಹಿತಿಯಿದೆ.

ಕ್ರಿ.ಶ.೧೩೨೧ರ ಕಾಲದ ಇನ್ನೊಂದು ಶಾಸನವು[೨೧೪] ವೀರಬಲ್ಲಾಳ ದೇವನ ಸೈನ್ಯಾಧಿಕಾರಿಯ ಉಲ್ಲೇಖವನ್ನು ಮಾಡುತ್ತಿದ್ದು, ಈತ ರಾಜನನ್ನು ಅತಿಯಾಗಿ ಗೌರವಿಸುತ್ತಿದ್ದನೆಂಬ ವಿಚಾರವು ಕಂಡುಬರುತ್ತಿದೆ. ಬಲ್ಲಾಳದೇವನ ಸೈನ್ಯಾಧಿಕಾರಿಯನ್ನು ಕಠಾರಿ ಸಾಳುವ ರಾಚಯ್ಯ ನಾಯಕನೆಂದೂ ಈತನನ್ನು 'ಮಹಾವೀರನಾಯಕಾಚಾರಿ' ಎಂದೂ ಕರೆದಿದೆ. ಈತನು ವೀರಬಲ್ಲಾಳ ದೇವರಿಗೆ ಜಯವಾಗಲೆಂದು ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೆಯರ್ ದೇವರಿಗೆ ದಾನವನ್ನು ನೀಡಿರುವಂತಹ ಉಲ್ಲೇಖವಿದೆ. ಕಾಲವನ್ನು ಕಲಿಯುಗ ವರ್ಷ ೪೪೨೩ ಎಂದು ಉಲ್ಲೇಖಿಸಿರುವುದು ವಿಶೇಷವಾಗಿದೆ.

ಕ್ರಿ.ಶ.೧೩೩೦ರ ಮಾಲೂರು ಶಾಸನವು[೨೧೫] ಈತನು ಆಳ್ವಿಕೆಯನ್ನು ನಡೆಸುತ್ತಿರಲು ತೇಕಲ್‌ನಲ್ಲಿರುವ ದೇವಾಲಯದ ಒಬ್ಬ ಪ್ರಧಾನ ಅಧಿಕಾರಿಯಾದ ಶೋಕ್ಕಪ್ಪೆರುಮಾಳ್ ದಾದರ್ ಎಂಬಾತನು ದೇವಾಲಯಕ್ಕೆ ನೇರವಾಗಿ ಅಲ್ಲದಿದ್ದರೂ ದೇವತಾ ಕಾರ್ಯವೆಂಬಂತಹ ರೀತಿಯಲ್ಲಿ ದಾನವನ್ನು ನೀಡಿರುವಂತಹ ವಿಚಾರವಿದೆ. ದೇವಾಲಯದಲ್ಲಿ ದೇವರಿಗೆ ಪ್ರತಿನಿತ್ಯವು ನರ್ತನ ಸೇವೆಯನ್ನು ನೀಡುವಂತಹ ನರ್ತಕಿಯರಾದ ಮಲಯ್ಯತ್ತಾಯರ್,

ಪೆಟ್ಟಪೆರುಮಾಳ್ ಮಾಣಿಕ್ಕಂ, ಉಳಗಾರ್, ಆಂಡಾವರ್ ಮತ್ತು ಸೆಂಬನ್ ಎನ್ನುವವರಿಗೆ ೪ ಮನೆಗಳನ್ನು, ಸ್ವಲ್ಪ ಭೂಮಿಯನ್ನು ಮತ್ತು ಪ್ರತಿನಿತ್ಯದ ಖರ್ಚಿಗಾಗಿ ಸ್ವಲ್ಪ ಧನವನ್ನು ನೀಡಿರುವಂತಹ ವಿಚಾರವಿದೆ. ರಾಜನು ಈ ಸಂದರ್ಭದಲ್ಲಿ ತೇಕಲ್ ಪ್ರದೇಶದಲ್ಲಿ ನೆಲೆನಿಂತಿದ್ದನು.

ಇದೇ ವರ್ಷಕ್ಕೆ ಸಂಬಂಧಿಸಿದಂತಹ ಇನ್ನೊಂದು ಶಾಸನವು[೨೧೬] ಮಾಲೂರು ತಾಲ್ಲೂಕಿನ ದೊರಕಿದ್ದು ವೀರಬಲ್ಲಾಳ ದೇವನ ದಂಡನಾಯಕನ ಕುರಿತಾಗಿ ಹೇಳುವಂತಾಗಿದೆ. ಹೆಚ್ಚಿನ ವಿಷಯಗಳೇನು ತಿಳಿಸುತ್ತಿಲ್ಲವಾದರು ಶಿಂಗೆದಂಡನಾಯಕನೆನ್ನುವವನು ದತ್ತಿಗಳನ್ನು ನೀಡಿರುವಂತಹ ಉಲ್ಲೇಖವಿದೆ.

ಕ್ರಿ.ಶ.೧೩೩೨ ಅಂದರೆ ರಾಜನ ಪಟ್ಟಾಭಿಷೇಕದ ನಂತರ ೩೦ನೆಯ ವರ್ಷದ ಆಳ್ವಿಕೆಯನ್ನು ಸೂಚಿಸುತ್ತಿರುವ ಮಾಲೂರು ತಾಲೂಕಿನ ಶಾಸನವು ದಾನದ ವಿಚಾರವನ್ನು ತಿಳಿಸುತ್ತದೆ.[೨೧೭] ಎರುಮಲೈನಾಡು ಎಂಬ ಪ್ರದೇಶದಲ್ಲಿರುವಂತಹ ತಿರುಮಲೈ ಎಂಬ ಗ್ರಾಮದ ವಾಸಿಯಾದಂತಹ ಮತ್ತು ಪಟ್ಟಣದ ಸ್ವಾಮಿಯೂ ಆಗಿರುವಂತಹ ವರದಪ್ಪನ್ ಎನ್ನುವವರಿಗೆ ಅರಂಗ ನಾಯಕ್ಕರ್ ಮತ್ತು ಮಾದೇಯ ನಾಯಕ್ಕರ್ ಎನ್ನುವವರಿಬ್ಬರು ಭೂದಾನವನ್ನು ನೀಡಿರುವಂತಹ ಉಲ್ಲೇಖವಿದೆ.

ರಾಜನು ಈ ಸಮಯದಲ್ಲಿ ಪೂರ್ವದ ಭಾಗದಲ್ಲಿಯೇ ನೆಲೆಯೂರಲು ಪ್ರಯತ್ನಿಸುತ್ತಿದ್ದನೆಂಬುವುದನ್ನು ಊಹಿಸಬಹುದು. ಇದೇ ರೀತಿಯಾಗಿ ವೀರಬಲ್ಲಾಳನು ಇನ್ನೂ ಪ್ರಬಲನಾದಂತಹ ರಾಜನಾಗಿದ್ದನೆಂದು ತಿಳಿಸುವಂತಹ ಶಾಸನವು ಕೋಲಾರ ತಾಲ್ಲೂಕಿನಲ್ಲಿ ದೊರಕಿದ್ದು ರಾಜನ ಒಳಿತಿಗಾಗಿ ದಾನ ನೀಡಿರುವಂತಹ ಉಲ್ಲೇಖವಿದೆ. ಶಾಸನವು ನಾಡಿನ ಒಳಿತಿಗಾಗಿ ಮತ್ತು ವೀರಬಲ್ಲಾಳದೇವನ ಖಡ್ಗ ಮತ್ತು ಭುಜಗಳ ಒಳಿತಿಗಾಗಿ ಸೊಪ್ಪೈನಾಯಕ್ಕರ್ ಎಂಬುವವನು ದೇವಾಲಯ ಪೂಜಾರಿಗೆ ಭೂದಾನವನ್ನು ನೀಡಿರುವಂತಹ ವಿಚಾರವು ಶಾಸನದಲ್ಲಿದೆ.[೨೧೮]

ಕಲಿಯುಗ ಸಂವತ್ಸರ ೪೪೨೪ನೆಯ ಈಶ್ವರ ಸಂವತ್ಸರಕ್ಕೆ (ಕ್ರಿ.ಶ.೧೩೩೭) ಸಂಬಂಧಿಸಿರುವಂತಹ ಕೋಲಾರ ಜಿಲ್ಲೆಯ ಶಾಸನವು[೨೧೯] ಪೊಯ್ಸಳ ವೀರಬಲ್ಲಾಳ ದೇವನ ಪುತ್ರನ ಪರಾಕ್ರಮಿ ದಂಡನಾಯಕನಾದ ದಾಡೆ ಸಿಗೆಯ ದಣ್ಣಾಯಕರು ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೈಯರ್ ದೇವರಿಗೆ ಧಾನ್ಯ ದಾನವನ್ನು ನೀಡಿರುವಂತಹ ಉಲ್ಲೇಖವು ಈ ಶಾಸನದಲ್ಲಿದೆ. ವೀರಬಲ್ಲಾಳದೇವನ ಪುತ್ರನು ಧನ ದಾನವನ್ನು ನೀಡಿರುವುದಾಗಿಯೂ ಉಲ್ಲೇಖವಾಗಿದೆ.

ಬಲ್ಲಾಳ ದೇವನ ಪುತ್ರ ವಿರೂಪಾಕ್ಷ ಬಲ್ಲಾಳನೆಂದು ಶಾಸನಗಳಿಂದ ಸಿದ್ದವಾಗಿದೆ. ಹಿಂದೆ ತಿಳಿಸಿದಂತೆ ಒಂದು ಬಾರಿ ಮಲ್ಲಿಕಾಫರನಿಂದ ಸೆರೆ ಸಿಕ್ಕಲ್ಪಟ್ಟಿದಂತಹ ಈ ವಿರೂಪಾಕ್ಷನೇ ಮುಂದೆ ವಿಜಯನಗರ ಸಾಮ್ರಾಜ್ಯವನ್ನು ಮುನ್ನಡೆಸಿದವನೆಂದು ಇತಿಹಾಸಕಾರರ ಅಭಿಪ್ರಾಯವಿದೆ. ವೀರ ವಿರೂಪಾಕ್ಷನು ವೀರಬಲ್ಲಾಳನ ನಂತರ ಕ್ರಿ.ಶ.೧೩೪೩ರಲ್ಲಿ ಪಟ್ಟಾಭಿಷಿಕ್ತನಾಗಿದ್ದನು. ಆದರೆ ಮಧುರೈ ಸುಲ್ತಾನರ ಧಾಳಿಗೆ ಒಳಗಾಗಿ ೧೩೪೬ರಲ್ಲಿ ಮರಣ ಹೊಂದಿದನು.

ಕೋಲಾರ ಜಿಲ್ಲೆಯ ವೇಮಗಲ್ಲು ಹೋಬಳಿ ಹೊಲೇರಹಳ್ಳಿಯಲ್ಲಿ ದೊರಕಿರುವಂತಹ ಶಾಸನವು ವೀರಬಲ್ಲಾಳನ ಉಲ್ಲೇಖ ಉಳ್ಳಂತಹ ಅಂತಿಮ ಶಾಸನವೆಂದು[೨೨೦] ಹೇಳಬಹುದು. ೧೨೬೪ನೆಯ ಶಕವರ್ಷಕ್ಕೆ ಸೇರಿರುವಂತಹ ಈ ಶಾಸನವು ಚಿತ್ರಭಾನು ಸಂವತ್ಸರದ ಅಶ್ವೀಜ ಶುದ್ಧ ೧೩ ಸೋಮವಾರವೆಂದು ಉಲ್ಲೇಖವಾಗಿದ್ದು ಇದು ಕ್ರಿ.ಶ.೧೩೪೨ಕ್ಕೆ ಸರಿ ಹೊಂದುವಂತಾಗಿದೆ. ರಾಜನು ಪೃಥ್ವಿಯನ್ನು ಪರಿಪಾಲಿಸುತ್ತಿರಲು

ಸೋಮಯ ದಂಡನಾಯಕರ ಕುಮಾರನು, ಬಳ್ಳಪ್ಪ ದಂಡನಾಯಕರ ಪ್ರಧಾನನೂ ಆದಂತಹ ಕಳುವಚಿಕ್ಕವೀರಪ್ಪನ ಸಹೋದರಿಯಾದ ಚವಡಿಯಕ್ಕ ಎಂಬುವವಳು ಭೈರವ ದೇವರಿಗೆ ದತ್ತಿಯನ್ನು ನೀಡಿರುವಂತಹ ಮಾಹಿತಿಯಿದೆ. ಈತನು ಕ್ರಿ.ಶ.೧೩೪೨ ಇಸವಿಯ ತನಕ ತನ್ನ ೮೦ನೆಯ ವರ್ಷದಲ್ಲಿ ಮಧುರೈನ ಸುಲ್ತಾನರೊಂದಿಗೆ ಹೋರಾಡಿ ದಯನೀಯವಾಗಿ ಮರಣವನ್ನು ಹೊಂದಿದ್ದನು. ಈತನ ಮರಣದೊಂದಿಗೆ ಹೊಯ್ಸಳ ಸಾಮ್ರಾಜ್ಯವೂ ಕೂಡ ಪತನವಾಯಿತು.

ಈತನು ದಕ್ಷಿಣ ಭಾರತದಲ್ಲಿ ಮುಸ್ಲಿಂ ದೊರೆಗಳ ಧಾಳಿಯನ್ನು ಸಮರ್ಥವಾಗಿ ಎದುರಿಸಿ ವೀರಬಲ್ಲಾಳನು ದ್ವಾರಸಮುದ್ರ, ತಿರುವಣ್ಣಾಮಲೈಗಳಲ್ಲದೆಯೇ ತನ್ನ ಸಾಮ್ರಾಜ್ಯಕ್ಕೆ ಇನ್ನೊಂದು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಈ ಮೂರನೆಯ ರಾಜಧಾನಿಯ ವಿಷಯವಾಗಿ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವು ವಿದ್ವಾಂಸರು ವಿರೂಪಾಕ್ಷಪುರವೆಂದು, ಕೆಲವು ವಿದ್ವಾಂಸರು ಹೊಸವೀಡು, ಹೊಸದುರ್ಗ ಅಥವಾ ಹೊಸಪಟ್ಟಣವೆಂದು ಅಭಿಪ್ರಾಯ ಪಡುತ್ತಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಹೊಸ ಪಟ್ಟಣವೆನ್ನುವುದು ಬಳ್ಳಾರಿ ಜಿಲ್ಲೆಯ ತುಂಗಭದ್ರಾ ನದಿಯ ದಡದಲ್ಲಿರುವಂತಹ ಹೊಸಪೇಟೆ ಅಥವಾ ಹಂಪಿ ಎಂದು ಅಭಿಪ್ರಾಯ ಪಡುತ್ತಾರೆ. ಮುಂದೆ ಇದೇ ಸ್ಥಳವು ವಿಜಯನಗರದ ಪ್ರಧಾನ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆಯಿತು.[೨೨೧]

ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿ ಸೀತಿಬೆಟ್ಟದ ಬುಡದಲ್ಲಿ ದೊರಕಿರುವಂತಹ ನರಸಿಂಗರಾಯನಿಗೆ ಸಂಬಂಧಿಸಿರುವಂತಹ ಶಾಸನವು[೨೨೨] ವೀರಬಲ್ಲಾಳನ ಹೆಸರನ್ನು ಪ್ರಸ್ತಾಪಿಸುತ್ತಿದೆ. ೧೩೮೮ನೆಯ ಶಕವರ್ಷಕ್ಕೆ ಸಂಬಂಧಿಸಿರುವಂತಹ ಶಾಸನವು ರಾಜೇಂದ್ರಚೋಳ ಮತ್ತು ವೀರಬಲ್ಲಾಳನನ್ನು ಉಲ್ಲೇಖಿಸುತ್ತಾ ಸಿಹತ್ತಿಯ ಭೈರಾದೇವರಿಗೆ ಹಿಂದೆ ಇವರಿಬ್ಬರು ನೀಡಿರುವಂತಹ ವಿವರವನ್ನು ನೀಡುತ್ತದೆ. ನರಸಿಂಗರಾಜ ವೊಡೆಯರು ಸರ್ವಮಾನ್ಯವಾಗಿ ನೀಡಿರುವಂತಹ ಶಾಸನವಿದಾಗಿದ್ದು ವೀರಬಲ್ಲಾಳನು ಯಾವಾಗ ಈ ದಾನವನ್ನು ನೀಡಿರುವನೆಂಬಂತಹ ಉಲ್ಲೇಖವಿರುವುದಿಲ್ಲ.

ಆದರೆ ಗೌರಿಬಿದನೂರು ತಾಲ್ಲೂಕು ಹೊಸೂರಿನಲ್ಲಿರುವಂತಹ ಒಂದು ಶಾಸನವು ವೀರಬಲ್ಲಾಳನು ಹೊಸವೀಡನ್ನು ರಾಜಧಾನಿಯನ್ನಾಗಿಸಿಕೊಂಡು ಕ್ಷೇಮದಿಂದ ರಾಜ್ಯಭಾರವನ್ನು ಮಾಡುತ್ತಿದ್ದನೆಂಬ ವಿಚಾರವಿದ್ದು, ಇಲ್ಲಿ ಪ್ರತಿಪಾದಿತವಾಗಿರುವಂತಹ ಹೊಸವೀಡು ಶಾಸನ ದೊರಕಿರುವಂತಹ ಹೊಸೂರು ಆಗಿರಬೇಕೆಂದು ಕೆಲವು ವಿದ್ವಾಂಸರುಗಳು ಅಭಿಪ್ರಾಯವಾಗಿದೆ. ವೀರಬಲ್ಲಾಳನಿಗೆ ದಕ್ಷಿಣಭಾರತದಲ್ಲಿ ಪ್ರಬಲವಾದ ಹಿಂದೂ ಸಾಮ್ರಾಜ್ಯವನ್ನು ಪ್ರತಿಷ್ಠಾಪಿಸಬೇಕೆಂಬಂತಹ ಅದಮ್ಯವಾದ ಆಸೆ ನೆಲೆಯೂರಿತ್ತು. ಆದರೆ ರಾಜಕೀಯ ಪ್ರಕ್ಷುಬ್ಧತೆಗಳಿಂದಾಗಿ ಆತನಿಗೆ ಅದು ಅಸಾಧ್ಯವಾಯಿತು. ಆದರೆ ಈತನ ಕನಸಿನ ರೂಪದ ಬೀಜವು ಗಿಡವಾಗಿ ಕ್ರಿ.ಶ.೧೩೩೬ರಲ್ಲಿ ಹುಟ್ಟಿ ವಿಜಯನಗರ ಸಾಮ್ರಾಜ್ಯವೆಂಬ ಹೆಮ್ಮರವಾಗಿ ಬೆಳೆಯಿತು. ವಿದ್ವಾಂಸರಾದ ಎಸ್.ಕೆ.ಐಯ್ಯಂಗಾರರು ವಿರೂಪಾಕ್ಷಪುರವೆಂಬುವುದು ವಿಜಯನಗರವೇ ಆಗಿದ್ದು, ಕ್ರಿ.ಶ.೧೩೩೯ರಲ್ಲಿ ವೀರ ವಿರೂಪಾಕ್ಷನು ವಿಜಯನಗರ ಸಾಮ್ರಾಜ್ಯವನ್ನು ಮುಂದುವರೆಸಿಕೊಂಡು ಹೋದನೆಂದು ಅಭಿಪ್ರಾಯ ಪಡುತ್ತಾರೆ.[೨೨೩]

೨.೨.೧೧. ಇಳವಂಜಿರಾಯರು :

ಕೋಲಾರ ಜಿಲ್ಲೆ ಹಲವಾರು ರಾಜಮನೆತನಗಳ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಆದರೆ ಕಾಲಾನಂತರದಲ್ಲಿ ಪ್ರಮುಖ ರಾಜಮನೆತನಗಳು ಶಕ್ತಿಕುಂದಿದಾಗ ಸಣ್ಣಪುಟ್ಟ ಸಾಮಂತರು ಆಡಳಿತವನ್ನು ಮಾಡಲು ಪ್ರಯತ್ನಿಸಿದರು. ಗಂಗ, ಹೊಯ್ಸಳ ಮೊದಲಾದ ರಾಜಮನೆತನದವರು ತಾವು ಒಂದು ಸಂದರ್ಭದಲ್ಲಿ ಪ್ರಬಲವಾಗಿ ಆಡಳಿತ ನಡೆಸಿದಂತಹ ಪ್ರದೇಶಗಳು ಕೈತಪ್ಪಿ ಹೋಗಬಾರದೆಂದು ಸಣ್ಣ ಮನೆತನದ ರಾಜರುಗಳನ್ನು ಅಧಿಕಾರಿಗಳನ್ನಾಗಿ ನಿಯೋಜಿಸುತ್ತಿದ್ದರು. ಇಂತಹ ಅಧಿಕಾರಿಗಳಲ್ಲಿ ಇಳವಂಜಿರಾಯರು ಪ್ರಮುಖರು. ಇವರು ಆಡಳಿತ ನಡೆಸಿದಂತಹ ಪ್ರದೇಶವು ಇಳವಂಜಿನಾಡು ಎಂದು ಪ್ರಸಿದ್ಧವಾಗಿದೆ.

ಕೋಲಾರ ಜಿಲ್ಲೆಯಲ್ಲೇ ಸುಮಾರು ೧೨ ಶಾಸನಗಳಲ್ಲಿ ಇಳವಂಜಿನಾಡು ಎಂದೇ ಉಲ್ಲೇಖವಾಗಿರುವಂತಹ ಈ ನಾಡು ವಿವಿಧ ಕಾಲಘಟ್ಟದಲ್ಲಿ ವಿವಿಧ ರಾಜರುಗಳಿಗೆ (ಪ್ರದೇಶಗಳಿಗೆ) ಸೇರಿಹೋಗಿತ್ತು. ಕನ್ನಡ ಮತ್ತು ತಮಿಳು ಶಾಸನಗಳಲ್ಲೂ ಉಕ್ತವಾಗಿರುವಂತಹ ಈ ನಾಡಿನ ಹೆಸರು ವ್ಯಕ್ತಿವಾಚಕ ಪದವಾಗಿದೆ. ಶಾಸನಗಳೇ ತಿಳಿಸುವಂತೆ ಇಳವಂಜಿರಾಯನೆಂಬ ಪ್ರಸಿದ್ಧರಾಜನಿದ್ದನು. ಆತನು ಆಳ್ವಿಕೆ ನಡೆಸಿದಂತಹ ನಾಡೇ ಇಳವಂಜಿನಾಡೆಂದು ಉಲ್ಲೇಖವಾಗಿದೆ. ಇಂದಿನ ಬಂಗಾರುಪೇಟೆಯ ಅಧಿಕ ಭಾಗವು ಇಳವಂಜಿನಾಡಿಗೆ ಸೇರಿತ್ತೆಂದು ವಿದ್ವಾಂಸರಾದ ಡಾ.ಪಿ.ವಿ.ಕೃಷ್ಣಮೂರ್ತಿಯವರು[೨೪] ಅಭಿಪ್ರಾಯಪಡುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಸುಮಾರು ಕ್ರಿ.ಶ.೧೨೬೮ರಿಂದ ೧೫೧೮ರ ಅವಧಿಯಲ್ಲಿ ಇಳವಂಜಿರಾಯರ ಉಲ್ಲೇಖವಿರುವಂತಹ ಶಾಸನಗಳು ಈ ರೀತಿಯಾಗಿವೆ. ವಿವಿಧ ಕಾಲಘಟ್ಟದಲ್ಲಿ ಇಳವಂಜಿನಾಡು ಯಾವ ಪ್ರದೇಶಕ್ಕೆ ಸೇರಿತ್ತೆಂಬುವುದಾಗಿ ಶಾಸನಗಳು ವಿಸ್ತಾರವಾದ ಮಾಹಿತಿಯನ್ನು ಒದಗಿಸುತ್ತವೆ.

1. E.C. X ಬಂಗಾರಪೇಟೆ 60 ಕ್ರಿ.ಶ.1268 ನಿಗರಿಲಿ ಚೋಳಮಂಡಲ
2. E.C. X ಬಂಗಾರಪೇಟೆ–34 ಕ್ರಿ.ಶ.1269 ನಿಗರಿಲಿ ಚೋಳಮಂಡಲ
3. E.C. X ಬಂಗಾರಪೇಟೆ–76 ಕ್ರಿ.ಶ.1275 ಇಳವಂಜಿನಾಡು
4. E.C. X ಬಂಗಾರಪೇಟೆ–29 ಕ್ರಿ.ಶ.1285 ಇಳವಂಜಿನಾಡು
5. E.C. X ಬಂಗಾರಪೇಟೆ–23 ಕ್ರಿ.ಶ.1293 ಇಳವಂಜಿನಾಡು
6. E.C. X ಬಂಗಾರಪೇಟೆ–27 ಕ್ರಿ.ಶ.1293 ಇಳವಂಜಿನಾಡು
7. E.C. X ಬಂಗಾರಪೇಟೆ–25 ಕ್ರಿ.ಶ.1295 ನಿಗರಿಲಿ ಚೋಳಮಂಡಲ
8. E.C. X ಬಂಗಾರಪೇಟೆ–34 ಕ್ರಿ.ಶ.1338 ಇಳವಂಜಿನಾಡು
9. E.C. X ಬಂಗಾರಪೇಟೆ–17 ಕ್ರಿ.ಶ.1338 ನಿಗರಿಲಿ ಚೋಳಮಂಡಲ
10. E.C. X ಬಂಗಾರಪೇಟೆ–18 ಕ್ರಿ.ಶ.1465 ಎಳವಂಜಿನಾಡು
11. E.C. X ಬಂಗಾರಪೇಟೆ–19 ಕ್ರಿ.ಶ.1470 ಎಳವಂಜಿನಾಡು
12. E.C. X ಮುಳಬಾಗಿಲು–19 ಕ್ರಿ.ಶ.1518 ಮುಳುವಾಯಿರಾಜ್ಯ

ಈ ರೀತಿಯಾಗಿ ಶಾಸನಗಳನ್ನು ಗಮನಿಸಿದರೆ ಬಂಗಾರಪೇಟೆ ತಾಲ್ಲೂಕಿನಲ್ಲಿಯೇ ಶಾಸನಗಳು ದೊರಕುವುದರಿಂದ ಈ ಪ್ರದೇಶದಲ್ಲಿಯೇ ಇಳವಂಜಿನಾಡು ಪ್ರಚಲಿತದಲ್ಲಿತ್ತೆಂದು ತಿಳಿಯುತ್ತದೆ. ಒಮ್ಮೊಮ್ಮೆ ಸ್ವತಂತ್ರವಾಗಿಯೂ, ಒಮ್ಮೊಮ್ಮೆ ನಿಗರಿಲಿ ಚೋಳಮಂಡಲದ ಅವಿಭಾಜ್ಯ ಅಂಗವಾಗಿಯೂ ಕಂಡು ಬರುವಂತಹ ಈ ನಾಡು ಅಂತಿಮವಾಗಿ ಮುಳುವಾಯಿ ರಾಜ್ಯದಲ್ಲಿ ಸೇರಿಹೋಯಿತೆಂದು ತಿಳಿಯಬಹುದು.

ನೆರೆಯ ತಮಿಳುನಾಡಿನಲ್ಲಿ ಕ್ರಿ.ಶ.೯ನೆಯ ಶತಮಾನದಲ್ಲಿ ಹುಟ್ಟಿಕೊಂಡಂತಹ ಚೋಳ ಸಾಮ್ರಾಜ್ಯವು ಕೋಲಾರದ ಅನೇಕ ಪ್ರದೇಶಗಳ ಮೇಲೆ ಪ್ರಭಾವ ಬೀರಿತ್ತು. ಚೋಳ ದೊರೆ ಪರಾಂತಕ ಚೋಳನ ಕರ್ನಾಟಕ ರಾಜ್ಯಕ್ಕೆ ಪ್ರವೇಶದ ನಂತರ ಹಲವಾರು ಚೋಳ ಅರಸರು ಕೋಲಾರ ಜಿಲ್ಲೆಯಲ್ಲಿ ತಮ್ಮ ಆಡಳಿತ ವಿಭಾಗಗಳನ್ನು ರಚಿಸಿದ್ದರು. ಹೆಚ್ಚಿನ ವಿಭಾಗಗಳಿಗೆ ಚೋಳಮಂಡಲವೆಂದೇ ಹೆಸರನ್ನು ನೀಡುತ್ತಿದ್ದರು. ಗಂಗ ಅರಸರೊಂದಿಗೆ ಯುದ್ಧಗಳನ್ನು ಮಾಡಿ ಅವರಿಂದ ಅನೇಕ ನಾಡುಗಳನ್ನು, ಉಪವಿಭಾಗಗಳನ್ನು ವಶಪಡಿಸಿಕೊಂಡಿದ್ದರು. ಇನ್ನು ಅನೇಕ ಉಪವಿಭಾಗಗಳನ್ನು ಚೋಳರು ತಮ್ಮ ಆಡಳಿತಾವಧಿಯಲ್ಲಿ ಮಾಡಿದ್ದರು. ಈ ರೀತಿಯಾಗಿ ಹುಟ್ಟಿಕೊಂಡಂತಹ ನಾಡುಗಳಲ್ಲಿ ಇಳವಂಜಿನಾಡು ಒಂದಾಗಿದೆ. ಚೋಳರು ಸಣ್ಣ ಸಣ್ಣ ಆಡಳಿತ ವಿಭಾಗಗಳನ್ನು ಹೊಸದಾಗಿ ನಿರ್ಮಿಸಿ ಆಡಳಿತವನ್ನು ಬಲಪಡಿಸಿ ತಮ್ಮ ರಾಜಾದಾಯ (ತೆರಿಗೆ)ವನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿದ್ದರು.

ಶಾಸನಗಳನ್ನು ಗಮನಿಸಿದರೆ ಇಳವಂಜಿ ನಾಡು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರುವಂತಹ ಚೋಳರ ಆಡಳಿತ ವಿಭಾಗದಂತೆ ತೋರುತ್ತದೆ. ಆಧುನಿಕ ಕೋಲಾರ ಜಿಲ್ಲೆಯನ್ನು ಗಮನಿಸಿದರೆ ಬಂಗಾರಪೇಟೆಯ ಸಂಪೂರ್ಣ ಭಾಗವನ್ನು ಇಳವಂಜಿನಾಡು ಆಕ್ರಮಿಸಿತ್ತು. ಪೂರ್ವ ಮತ್ತು ಆಗ್ನೇಯದಲ್ಲಿ ಆಂಧ್ರಪ್ರದೇಶದ ಗಡಿಪ್ರದೇಶವನ್ನು ದಕ್ಷಿಣಕ್ಕೆ ತಮಿಳುನಾಡಿನ ಗಡಿಪ್ರದೇಶವನ್ನು, ಪಶ್ಚಿಮಕ್ಕೆ ತೇಕಲ್‌ನಾಡು, ಉತ್ತರಕ್ಕೆ ಕುವಳಾಲನಾಡು ಮತ್ತು ಈಶಾನ್ಯಕ್ಕೆ ಆವನಿಯ ನಾಡು ಇವುಗಳಿಂದ ಇಳವಂಜಿನಾಡು ಅವೃತ್ತವಾಗಿತ್ತು.

ಚೋಳ ಅರಸರ ಮತ್ತು ವಿಜಯನಗರ ಅರಸರ ಕಾಲದಲ್ಲಿ ವಿವಿಧ ರಾಜ್ಯಗಳಿಗೆ ಈ ನಾಡು ಸೇರಿತ್ತು. ಚೋಳ ಅರಸರು ನೊಳಂಬ ರಾಜ್ಯವನ್ನು ವಶಪಡಿಸಿಕೊಂಡು ಅದಕ್ಕೆ ನಿಗರಿಲಿ ಚೋಳಮಂಡಲವೆಂದು ಹೆಸರು ನೀಡಿದರು. ಚೋಳರ ಕೆಲವು ಶಾಸನಗಳಲ್ಲಿ ನಿಗರಿಲಿ ಚೋಳಮಂಡಲ ಇಳವಂಜಿನಾಡು ಎಂದು ಉಲ್ಲೇಖಿತವಾಗಿದೆ.[೨೨೫] ವಿಜಯನಗರದ ಅರಸರ ಕಾಲದಲ್ಲಿ ಮುಳವಾಯಿ ರಾಜ್ಯಕ್ಕೆ ಇಳವಂಜಿನಾಡು ಸೇರಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ.[೨೨೬] ಬಂಗಾರಪೇಟೆಯ ತಾಲ್ಲೂಕಿನ ಪ್ರಸಿದ್ಧ ಸ್ಥಳಗಳಾದ ಬೇತಮಂಗಲ, ಕ್ಯಾಸಂಬಳ್ಳಿ (ಕೇಶವನಪಳ್ಳಿ) ಸೂಲಿಕುಂಟೆ, ಮಡಿವಾಳ, ಬಂಗಾರಪೇಟೆ ಮೊದಲಾದ ಸ್ಥಳಗಳು ಇಳವಂಜಿನಾಡಿಗೆ ಸೇರಿತ್ತು.

ಇಳವಂಜಿನಾಡು ಎಂಬ ಶಬ್ದದ ಉತ್ಪತ್ತಿಯ ವಿಷಯವಾಗಿ ಸ್ಪಷ್ಟವಾದ ಮಾಹಿತಿಗಳು ದೊರೆಯುತ್ತಿಲ್ಲ. ಇಳವಂಜಿನಾಡು ಹಿಂದೆ ತಿಳಿಸಿರುವಂತೆ ಬಂಗಾರುಪೇಟೆಯ ಸಂಪೂರ್ಣ ಭಾಗವನ್ನು ಆವರಿಸಿತ್ತು. ಇಳವಂಜಿ ಶಬ್ದದಲ್ಲಿ ಇಳ ಮತ್ತು ವಂಜಿ ಎಂಬೆರಡು ಶಬ್ದಗಳಿವೆ. ಇಳ ಶಬ್ದವು ಭೂಮಿ ಎಂಬ ಅರ್ಥವನ್ನು ಸೂಚಿಸುತ್ತದೆ. ವಂಜಿ ಶಬ್ದಕ್ಕೆ ಹಲವಾರು ಅರ್ಥಗಳಿವೆ. ವಂಚಿಸು, ಹೆಣ್ಣು, ಛತ್ರಿ ಮತ್ತು ವೈರಿಯ ಮೇಲೆ ನಡೆಸುವ ಧಾಳಿ ಎಂದರ್ಥವಿದೆ. ಹೆಣ್ಣು ಫಲವತ್ತತೆಯ ಪ್ರತೀಕವಾಗಿದೆ. ಹಾಗಾಗಿ ಬಂಗಾರದಂತಹ ಖನಿಜಗಳಿಂದ ಫಲವತ್ತತೆಯನ್ನು ಹೊಂದಿದ್ದಂತಹ ನಾಡು ಇಳವಂಜಿನಾಡು ಎಂದು ಅರ್ಥೈಸಬಹುದು. ಅದೇ ರೀತಿಯಾಗಿ ಶತ್ರುಗಳ ಭೂಮಿಯ

ಮೇಲೆ ಧಾಳಿ ನಡೆಸುವಂತಹ ಸಮರ್ಥ ರಾಜರುಗಳನ್ನು ಹೊಂದಿರುವಂತಹ ನಾಡು ಇಳವಂಜಿನಾಡು ಎಂದು ಅರ್ಥವನ್ನು ಪಿ.ವಿ.ಕೃಷ್ಣಮೂರ್ತಿಯವರು ಅಭಿಪ್ರಾಯ ಪಡುತ್ತಾರೆ.[೨೨೭]

ಇಳ/ಎಳ = ಯುವ ಎಂದು ಅರ್ಥ

ಇಳಅರಸ = ಯುವರಾಜ ಎಳಅರಸ = ಯುವರಾಜ

ಈ ಹಿನ್ನೆಲೆಯಲ್ಲೂ ಇದರ ಅರ್ಥವನ್ನು ಗ್ರಹಿಸಬಹುದಾಗಿದೆ. ಇಳವಂಜಿರಾಯ ಎಂಬ ರಾಜನ ಹೆಸರಿನಿಂದಲೂ ಇಳವಂಜಿನಾಡು ಎಂಬ ಶಬ್ದವು ಬಂದಿರಬಹುದೆಂದು ತಿಳಿಯಬಹುದಾಗಿದೆ.

ಇಳವಂಜಿರಾಯ :

ಇಳವಂಜಿರಾಯರೆಂಬ ರಾಜನಿಂದ ಇಳವಂಜಿನಾಡು ಎಂಬ ಶಬ್ದವು ನಿಷ್ಪತ್ತಿಯಾಗಿದೆ. ಕೆಲವು ತಮಿಳು ಶಾಸನಗಳು ಇಳವಂಜಿರಾಯನನ್ನು ಪ್ರಧಾನ ರಾಜನನ್ನಾಗಿ ಸೂಚಿಸಿವೆ. ಬಂಗಾರಪೇಟೆಯ ತಮಿಳುಶಾಸನವು[೨೨೮] ಮೊದಲು ಇಳವಂಜಿರಾಯನನ್ನು ಪ್ರಸ್ತಾಪಿಸುತ್ತಿದ್ದು ರಾಜನು ಪರಾಕ್ರಮಿಯಾಗಿದ್ದನೆಂದು ತಿಳಿಸುತ್ತದೆ. ಕ್ರಿ.ಶ.೧೨೨೫ನೆಯ ವರ್ಷಕ್ಕೆ ಸಂಬಂಧಿಸಿರುವಂತಹ ಈ ಶಾಸನವು ರಾಜನ ವಿಜಯಯಾತ್ರೆಗಾಗಿ 'ಕಾಮದೇವನ್' ಎನ್ನುವವನು ಗವರೀಶೂರಂ ಉಡ್ಯೆಯಾರ್ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ದಾನವನ್ನು ಬಿಟ್ಟಂತೆ ಉಲ್ಲೇಖಿಸಿದೆ. ಈ ಸಂದರ್ಭದಲ್ಲಿ ರಾಜನು ಈ ಪ್ರದೇಶದಲ್ಲಿ ಪ್ರಧಾನ ರಾಜನಾಗಿದ್ದನು.

ಮುಳಬಾಗಿಲು ತಾಲ್ಲೂಕಿನ ತಾಮ್ರಶಾಸನವು[೨೨೯] ಇಳವಂಜಿರಾಯನ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಈ ಶಾಸನದ ಪ್ರಕಾರ ಇಳವಂಜಿರಾಯನು ರಾಜಾಧಿರಾಜ ಮಹಾರಾಜನೂ, ಕಂಚೀ ವಂಶೋದ್ಧಾರಕನೂ, ಏಕಾಂಬರೇಶ್ವರ ಸ್ವಾಮಿಯವರ ಪ್ರಸಾದಕನೂ, ಮಹಾರಾಯ ವೀರರಾಯರ ಕುಮಾರನೂ ಎಂದು ವರ್ಣಿಸಿದೆ. ಈ ರೀತಿಯಾದ ಮಾಹಿತಿಯು ಬೇರೆ ಶಾಸನಗಳಲ್ಲಿ ದೊರೆಯುತ್ತಿಲ್ಲ. ಕಂಚಿಯ ಪ್ರಸಿದ್ಧ ವಂಶದಲ್ಲಿ ಜನಿಸಿದವನೆಂದು ಉಲ್ಲೇಖಿಸಿರುವುದರಿಂದ ಈತನು ತಮಿಳುನಾಡಿನ ಕಂಚಿಪ್ರದೇಶದವನಾಗಿರುವನು. ಹಾಗಾಗಿ ಚೋಳರ ಆಡಳಿತಕ್ಕೊಳಪಟ್ಟ ಪ್ರದೇಶದಲ್ಲಿ ಜನಿಸಿದ ಈತನು ನಂತರ ಚೋಳ ಪ್ರಭಾವಕ್ಕೊಳಪಟ್ಟು ಯಾವುದೇ ಉನ್ನತ ಹುದ್ದೆಯನ್ನಲಂಕರಿಸಿರಬಹುದು. ನಂತರ ಚೋಳರು ಕೋಲಾರ ಪ್ರದೇಶಗಳನ್ನು ವಶಪಡಿಸಿಕೊಂಡು ಆ ಪ್ರದೇಶಗಳನ್ನು ಆಳ್ವಿಕೆ ನಡೆಸಲು ಪ್ರಾರಂಭಿಸಿದ ನಂತರ ಚೋಳರಸರು ಕೋಲಾರದ ಪ್ರಾಂತ್ಯವನ್ನು ಈತನ ಸುಪರ್ದಿಗೆ ನೀಡಿರಬಹುದು. ಏಕೆಂದರೆ ಈ ಶಾಸನೋಕ್ತ ಪ್ರಕಾರವಾಗಿ ಈತನು ದಾನವನ್ನು ನೀಡಿರುವನು. ಆದರೆ ಆತನು ದಾನ ನೀಡಿರುವಂತಹ ಗ್ರಾಮಗಳು ಮುಳುವಾಯಿ ರಾಜ್ಯಕ್ಕೆ ಸೇರಿದುದಾಗಿದೆ. ಅಲ್ಲದೆಯೇ ಈ ಗ್ರಾಮಗಳನ್ನು ಗಮನಿಸಿದರೆ ಇಳವಂಜಿನಾಡಿನ ಸೀಮೆಯನ್ನು ಊಹಿಸಬಹುದಾಗಿದೆ. ಶಾಸನದ ಕಾಲವೂ ಶಕ ವರ್ಷ ೧೧೮೩ ಎಂದು ತಿಳಿಸುತ್ತಿದ್ದು, ಕ್ರಿ.ಶ.೧೨೬೧ ಎಂದಾಗುತ್ತದೆ. ಈ ಕಾಲವು ಚೋಳ ದೊರೆ ಮುಮ್ಮಡಿ ಚೋಳನ ಆಡಳಿತ ಕಾಲವಾಗಿದ್ದು, ಮುಮ್ಮಡಿ ಚೋಳನು ಇಳವಂಜಿರಾಯನನ್ನು ಬಂಗಾರಪೇಟೆಯ ಪ್ರದೇಶಕ್ಕೆ ಅಧಿಕಾರಿಯನ್ನಾಗಿ ನಿಯೋಜಿಸಿರಬಹುದು. ಬಂಗಾರಪೇಟೆಯ ಇನ್ನೊಂದು ಅಪೂರ್ಣ ಶಾಸನವು ಇಳವಂಜಿರಾಯನ ಹೆಸರನ್ನಷ್ಟೇ ಉಲ್ಲೇಖಿಸಿದೆ.[೨೩೦]

ಮುಂದೆ ವಿಜಯನಗರ ಕಾಲಕ್ಕೆ ಸೇರುವ ಬಂಗಾರಪೇಟೆಯ ಶಾಸನವು ಎಳವಂಜಿ ನಾಡನ್ನು ಉಲ್ಲೇಖಿಸಿದ್ದು, ಈ ನಾಡು ಮುಳುವಾಯಿ ರಾಜ್ಯಕ್ಕೆ ಸೇರಿದ್ದು ಮಡವಾಳ (ಮಡಿವಾಳ ಗ್ರಾಮ)ವು ಈ ರಾಜ್ಯಕ್ಕೆ

ಒಳಪಟ್ಟಿತ್ತೆಂದು ಹೇಳಲಾಗಿದೆ.[೨೩೧] ಶಾಸನದ ಕಾಲವು ಶಕವರ್ಷ ೧೩೮೨ ಆಗಿದ್ದು ಈ ಕಾಲಕ್ಕಾಗಲೇ ಇಳವಂಜಿರಾಯರ ಆಡಳಿತವು ಮುಗಿದಿದ್ದು ರಾಜ್ಯವು ವಿಜಯನಗರದ ಆಡಳಿತಕ್ಕೊಳಪಟ್ಟಿತ್ತು. ವಿಜಯನಗರದ ಆಡಳಿತಕ್ಕಾಗಲೇ ಇಳವಂಜಿನಾಡು ಪ್ರಸಿದ್ಧಿಯಾಗಿದ್ದಿರಬಹುದು. ಇಳವಂಜಿನಾಡು ಚೋಳರ ನೇರ ಆಡಳಿತವನ್ನು ಬಿಟ್ಟು ವಿಜಯನಗರದ ಆಡಳಿತವನ್ನು ಸ್ವೀಕರಿಸಿದ ನಂತರ ಇಳವಂಜಿನಾಡಿನಲ್ಲಿ ಯಾರು ಆಡಳಿತಾಧಿಕಾರಿಯಾಗಿದ್ದರೆಂದು ಶಾಸನವು ತಿಳಿಸುತ್ತಿಲ್ಲ.

ವಿಜಯನಗರದರಸರ ಪ್ರವೇಶಕ್ಕಿಂತ ಮೊದಲು ಕೋಲಾರದ ಪ್ರದೇಶವು ಹೊಯ್ಸಳರ ನೇರ ಆಡಳಿತಕ್ಕೊಳಪಟ್ಟಿತ್ತು. ಕ್ರಿ.ಶ.೧೨ನೆಯ ಶತಮಾನದ ಅಂತ್ಯದಲ್ಲಿ ಚೋಳರ ಸಾಮ್ರಾಜ್ಯವು ಪತನವಾಯಿತು. ಆದರೆ ಹೊಯ್ಸಳ ದೊರೆ ವಿಷ್ಣುವರ್ಧನನ ಆಡಳಿತಾವಧಿಯಲ್ಲಿ (ಕ್ರಿ.ಶ.೧೧೦೮-೧೧೫೨) ಚೋಳರು ಸಂಪೂರ್ಣವಾಗಿ ಕೋಲಾರ ಪ್ರದೇಶವನ್ನು ಬಿಟ್ಟು ಹೋಗಿದ್ದರು. ಆದರೂ ನಂತರದ ಅವಧಿಯಲ್ಲಿ ಚೋಳರ ಮೂಲವನ್ನೊಳಗೊಂಡ ಕೆಲವು ಮಾಂಡಲೀಕರು ಕೋಲಾರದ ಕೆಲವು ಪ್ರದೇಶಗಳಲ್ಲಿ ಇನ್ನು ಹಿಡಿತವನ್ನು ಹೊಂದಿದ್ದರು. ಆದರೆ ಇಂತಹ ಮಾಂಡಲೀಕ ರಾಜರು ಬೇರೆ ಬೇರೆ ರಾಜರುಗಳ ಆಡಳಿತವನ್ನು ಒಪ್ಪಿ ರಾಜ್ಯವನ್ನು ನಡೆಸುತ್ತಿದ್ದರು. ಏಕೆಂದರೆ ಇಳವಂಜಿನಾಡು ಚೋಳರ ಆಡಳಿತಕ್ಕೊಳಪಟ್ಟ ಪ್ರದೇಶವೆಂದು ಹಿಂದೆ ಗಮನಿಸಿದ್ದೆವು. ಇದೇ ಇಳವಂಜಿರಾಯನು ಹೊಯ್ಸಳರ ಆಡಳಿತವನ್ನು ಒಪ್ಪಿದನೆಂದು ಕೋಲಾರದ ಶಾಸನದಿಂದ ತಿಳಿದುಬರುತ್ತದೆ. ಕೋಲಾರದಲ್ಲಿ ದೊರಕಿರುವಂತಹ ಹೊಯ್ಸಳರ ಕಾಲದ ವೀರಗಲ್ಲು ಶಾಸನವು ಇಳವಂಜಿರಾಯನು ಹೊಯ್ಸಳ ದೊರೆ ರಾಮನಾಥನ ಮಂತ್ರಿಯಾಗಿದ್ದನೆಂದು ತಿಳಿಸಿದೆ.

ರಾಮನಾಥನು ಕ್ರಿ.ಶ.೧೨೫೪ರಿಂದ ೧೨೯೫ರವರೆಗೆ ಹೊಯ್ಸಳ ಸಾಮ್ರಾಜ್ಯವನ್ನು ಆಳಿದ್ದನು. ಈ ರಾಮನಾಥನು ಕೋಲಾರದ ಪ್ರದೇಶಗಳಿಗೆ ರಾಜನಾಗಿದ್ದನು. ಈ ಸಮಯದಲ್ಲಿ ಇಳವಂಜಿನಾಡು ಹೊಯ್ಸಳನಾಡಿನ ಸಾಮಂತ ರಾಜ್ಯವಾಗಿದ್ದು. ಇಳವಂಜಿರಾಯನು ಇಳವಂಜಿನಾಡಿನ ಆಡಳಿತಾಧಿಕಾರಿಯಾಗಿದ್ದನೆಂದು ತಿಳಿಯಬಹುದಾಗಿದೆ.[೨೩೨]

ಇಳವಂಜಿರಾಯರು ಮತ್ತು ಇಳವಂಜಿನಾಡಿನ ಮಾಹಿತಿಗಳು ತಮಿಳು ಶಾಸನಗಳಲ್ಲಿ ದೊರಕುತ್ತವೆ. ಕೋಲಾರ ಮತ್ತು ಮುಳಬಾಗಿಲು ತಾಲ್ಲೂಕುಗಳಲ್ಲಿ ದೊರೆಯುವಂತಹ ಕೆಲವು ತಮಿಳು ಶಾಸನಗಳು ಜಯಗೊಂಡ ಚೋಳ ಇಳವಂಜಿರಾಯನೆಂದು ಕರೆದಿದೆ. ಚೋಳರು ಕರ್ನಾಟಕದ ಗಡಿಪ್ರದೇಶವನ್ನು ಪ್ರವೇಶಿಸಿದ ನಂತರ ಕಾವೇರಿಯ ಉತ್ತರದ ಪ್ರದೇಶವನ್ನು ಆಕ್ರಮಣ ಮಾಡಿ ನಂತರ ಆ ಪ್ರದೇಶಕ್ಕೆ ಜಯಗೊಂಡ ಚೋಳಮಂಡಲವೆಂದು ನಾಮಕರಣ ಮಾಡಿದರು. ಬಹುಶಃ ಮೊದಲು ಇಳವಂಜಿರಾಯನನ್ನು ಜಯಗೊಂಡ ಚೋಳಮಂಡಲಕ್ಕೆ ನಿಯೋಜಿಸಿರಬಹುದೆಂದು ತಿಳಿಯಬಹುದಾಗಿದೆ.

ಇಳವಂಜಿರಾಯರೆಂದು ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖ ಉಳ್ಳಂತಹ ಇವರ ವಂಶವೂ ಕೂಡಾ ಪ್ರಸಿದ್ಧವಾಗಿದೆ. ವೆಂಕಟಾಚಲ ಕವಿಯ ತನ್ನ 'ಶಿವರಹಸ್ಯ ಕಾಂಡಂ' ಕೃತಿಯಲ್ಲಿ ಇಳವಂಜಿರಾಯರ ವಂಶಾವಳಿಯನ್ನು ವರ್ಣಿಸಲಾಗಿದ್ದು, ಶಾಸನಗಳಲ್ಲಿ ಪ್ರತಿಪಾದಿಸಿರುವಂತಹ ವಿಷಯಕ್ಕೆ ಭಿನ್ನಾಭಿಪ್ರಾಯಗಳಿವೆ. ಶಿವರಹಸ್ಯ ಕಾಂಡಂ ಕೃತಿಯ ಪ್ರಕಾರ ವಿರುಪಾಲನ ಮಗ ಯಳವಂಜಿರಾಯ, ಈತನ ಮಗ ಎಳವಂಜಿರಾಯನು ಮತ್ತು ಯಳವಂಜಿರಾಯನು ಈ, ವಂಶದ ಮೂಲಪುರುಷನು. ಈತನು ತಮಿಳುನಾಡಿನ ಕಂಚಿಯಿಂದ ಬಂದು ಕುರುಡುಮಲೆ ಎಂಬಲ್ಲಿ ಸೋಮೇಶ್ವರ ದೇವಾಲಯವನ್ನು ಪ್ರತಿಷ್ಠಾಪಿಸಿದನು ಎಂದು ಶಾಸನಗಳು ತಿಳಿಸುತ್ತದೆ.

ಮುಳಬಾಗಿಲಿನ ಶಾಸನವನ್ನು[೨೩೪] ಗಮನಿಸಿದರೆ ಎಳವಂಜಿರಾಯನು ಕಂಚಿಯಿಂದ ಬಂದಿರುವನೆಂಬ ವಿಷಯವು ದೃಢವಾಗುತ್ತದೆ. ಶಾಸನಗಳನ್ನು ಗಮನಿಸಿದರೆ ಇದಕ್ಕೆ ವ್ಯತಿರಿಕ್ತವಾದಂತಹ ಮಾಹಿತಿಗಳು ದೊರೆಯುತ್ತವೆ.

ಹೊಯ್ಸಳ ದೊರೆ ಇಮ್ಮಡಿ ಬಲ್ಲಾಳನಿಗೆ ಮಗ ನರಸಿಂಹ ಮತ್ತು ಮಗಳು ಸೋವಲಾದೇವಿಯಿದ್ದರು. ಇವಳನ್ನು ಚೋಳ ದೊರೆ ಮೂರನೆಯ ಕುಲೋತ್ತುಂಗ (ಕ್ರಿ.ಶ.೧೧೭೮-೧೨೧೮)ನಿಗೆ ಮದುವೆ ಮಾಡಿ ಕೊಡಲಾಗಿತ್ತು. ಆದರೆ ಮೂರನೆಯ ಕುಲೋತ್ತುಂಗನ ಅಕಾಲಿಕ ಮರಣದಿಂದಾಗಿ ವಿಧವೆಯಾದ ಸೋವಲಾದೇವಿಯ ಒಂಟಿತನ ಮತ್ತು ಬೇಸರಗಳ ನಿವಾರಣೆಗಾಗಿ ನರಸಿಂಹನು ತನ್ನ ಪುತ್ರನಾದ ಸೋಮೇಶ್ವರನನ್ನು ತಂಗಿಯ ಬಳಿ ಕಳುಹಿಸಿದನು. ಸೋಮೇಶ್ವರನು ಚೋಳ ಸಾಮ್ರಾಜ್ಯಕ್ಕೆ ಬಂದು ಚೋಳರಿಗೆ ಸಂಬಂಧಿಸಿದಂತಹ ಶತ್ರುಗಳನ್ನು ಸೋಲಿಸುವಲ್ಲಿ ಸಹಾಯವನ್ನು ಮಾಡಿದಂತಹ ಈತ 'ಚೋಳ ಪ್ರತಿಷ್ಠಾಪನಾಚಾರ್ಯ'ನೆಂದು ತನ್ನನ್ನು ಕರೆದುಕೊಂಡಿದ್ದಾನೆ. ಈ ಸಂದರ್ಭದಲ್ಲಿ ಅಂದರೆ ಹೊಯ್ಸಳರಿಗೂ ಮತ್ತು ಚೋಳರಿಗೂ ಪರಸ್ಪರ ಸಂಬಂಧ ಏರ್ಪಡುವಂತಹ ಸಂದರ್ಭದಲ್ಲಿ ಇಳವಂಜಿರಾಯನ ಉಲ್ಲೇಖವು ಕಂಡುಬರುತ್ತದೆ. ಚೋಳ ಅರಸರು ತಾವು ಮೊದಲೆ ವಶಪಡಿಸಿಕೊಂಡಿದ್ದಂತಹ ಜಯಗೊಂಡ ಚೋಳಮಂಡಲಕ್ಕೆ ಒಬ್ಬ ಅಧಿಕಾರಿಯನ್ನು ನಿಯೋಜಿಸಿದರು. ಈ ಅಧಿಕಾರಿಯೇ ತಮಿಳು ಮೂಲದವನಾದ ಕುತ್ತಾಡನ್‌ದೇವನೆಂದು ಇತಿಹಾಸಕಾರರಲ್ಲಿ ಅಭಿಪ್ರಾಯವಿದೆ.[೨೩೫]

ಈ ಕುತ್ತಾಡುನ್‌ದೇವನೇ ಇಳವಂಜಿರಾಯನೆಂದು ಪ್ರಸಿದ್ಧನಾಗಿದ್ದು, ಈತನು ಆವನಿಯನ್ನು ಕೇಂದ್ರವಾಗಿಟ್ಟುಕೊಂಡು ಕೋಲಾರದ ಸುತ್ತಮುತ್ತಲಿನ ಪ್ರದೇಶದಲ್ಲಿ ಆಳ್ವಿಕೆ ನಡೆಸಿದನೆಂದೂ ಮುಂದೆ ಈತನ ಸಂತತಿಯವರು ಆ ಪ್ರದೇಶವನ್ನು ಆಳ್ವಿಕೆ ನಡೆಸಿಕೊಂಡು ಹೋದರೆಂದು ಪ್ರತೀತಿಯಿದೆ. ಆದರೆ ಸಂಶೋಧಕರಾದ ಪಿ.ವಿ.ಕೃಷ್ಣಮೂರ್ತಿಯವರು ಇಳವಂಜಿರಾಯನ ಇನ್ನೊಂದು ಹೆಸರು ಕೊತ್ತಾಡುನ್ ದೇವನೆಂದು ಅಭಿಪ್ರಾಯ ಪಡುತ್ತಾರೆ.[೨೩೬] ಈ ಇಳವಂಜಿರಾಯರ ವಂಶದಮೂಲ ಪುರುಷ ಮಾರಾಳ್ವನೆಂಬ ವಿಷಯವನ್ನು ಕೆಲವು ಶಾಸನಗಳು ತಿಳಿಸುತ್ತವೆ. ಆವನಿ ಪ್ರದೇಶದ ಕೆಲವು ಶಾಸನಗಳು ಮಾರಾಳ್ವನನ್ನು ಈ ವಂಶದ ಮೂಲ ಪುರುಷನೆಂದೂ, ಈ ವಂಶವು ಪ್ರಸಿದ್ಧಿಗೆ ಬರಲು ಮಾರಾಳ್ವನ್ ಕೊತ್ತಾಡುನ್‌ದೇವ ಮತ್ತು ವಾಸುದೇವರು ಕಾರಣರೆಂದೂ ತಿಳಿಸುತ್ತಿವೆ. ಈ ವಿಷಯವಾಗಿ ಗೊಂದಲಗಳಿದ್ದರು ಕುತ್ತಾಡುನ್ ದೇವನೆಂಬುವವನಿದ್ದು, ಈತನು ಬಹಳ ಪ್ರಸಿದ್ಧಿಗೆ ಬಂದವನಾಗಿದ್ದನೆಂಬುವುದು ನಿರ್ವಿವಾದವಾಗಿದೆ. ಈ ಕೊತ್ತಾಡುನ್‌ದೇವನು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಅವರಿಗೆ ಸಾಮಂತರಾಗಿದ್ದುಕೊಂಡು ಹಲವಾರು ದೇವಾಲಯಗಳ ಜೀರ್ಣೋದ್ಧಾರವನ್ನು ಮಾಡಿರುವನು. ಕೋಲಾರ ಜಿಲ್ಲೆಯ ನಂಗಲಿ ಪ್ರದೇಶದ ಇತಿಹಾಸವನ್ನು ಗಮನಿಸಿದರೆ, ಈ ಕೊತ್ತಾಡುನ್ ದೇವನು ಮತ್ತು ಈತನ ವಂಶಸ್ಥರು ಇಳವಂಜಿ ನಾಡನ್ನು ಮುನ್ನಡೆಸಿಕೊಂಡು ಹೋಗಿ ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಹಲವಾರು ಉನ್ನತ ಕಾರ್ಯಗಳನ್ನು ನಿರ್ವಹಿಸಿದ್ದರೆಂದು ತೋರುತ್ತದೆ.[೨೩೭]

ಕೊತ್ತಡುನ್‌ದೇವನು ತಮಿಳು ಮೂಲದವನೆಂದು ಚೋಳರ ಆಳ್ವಿಕೆಯ ಕಾಲದಲ್ಲಿ ಈತನನ್ನು ತಮಿಳುನಾಡಿನಿಂದ ಕರೆಯಿಸಿ ಇಳವಂಜಿನಾಡಿಗೆ ಅಧಿಕಾರಿಯನ್ನಾಗಿ ಮಾಡಿದ್ದರು. 'ಕೊತ್ತಾಡುನ್' ಶಬ್ದವು 'ಕೊತ್ತಾನ್' ಶಬ್ದದಿಂದ ಬಂದಿರವುದಾಗಿದ್ದು, ಕೊತ್ತಾನ್ ಎಂದರೆ ನರ್ತನ ಮಾಡುವ ವ್ಯಕ್ತಿಯೆಂಬ ಅರ್ಥವನ್ನು ನೀಡುತ್ತದೆ. ಆದರೆ ಈ ಶಬ್ದವು ವ್ಯಕ್ತಿವಾಚಕವಾಗಿ ಹೇಗೆ ಪ್ರಸಿದ್ಧಿಯಾಯಿತೆಂದು ವಿಶೇಷವಾದ ವಿಚಾರವಾಗಿದೆ.

'ಕೊತ್ತಾಡುನ್' ಶಬ್ದವು ಕೋಲಾರ ಜಿಲ್ಲೆಯ ಕೆಲವು ತಮಿಳು ಶಾಸನಗಳಲ್ಲಿ ದೊರಕಿದ್ದು ಈತನನ್ನು ಜಯಗೊಂಡ ಚೋಳ ದೇವನೊಂದಿಗೆ ಸೇರಿಸಿ ಹೇಳಲಾಗಿದೆ. ಮುಳಬಾಗಿಲು ತಾಲ್ಲೂಕಿನ ಕ್ರಿ.ಶ.೧೨೩೧ರ ಕಾಲದ ಉಲ್ಲೇಖವಿರುವಂತಹ ಶಾಸನವು[೨೩೮] ಕುತ್ತಾಡುನ್‌ದೇವನ ಸಮರ್ಥ ಅಧಿಕಾರಿಯಾದ 'ಶೂರಿಯಾಳ್ವರ್' ಎಂಬುವವನು ದೇವಾಲಯದಲ್ಲಿ ನಂದಾದೀವಿಗೆಗಾಗಿ ದಾನವನ್ನು ನೀಡಿರುವಂತಹ ಮಾಹಿತಿಯನ್ನು ನೀಡುತ್ತಿದ್ದು, ಕುತ್ತಾಡುನ್ ಎಂಬುವವನನ್ನು ದೇವನೆಂದು ಕರೆದಿರುವುದು ವಿಶೇಷವಾಗಿದ್ದು, ಇದರಿಂದ ಜಯಗೊಂಡ ಚೋಳ ಇಳವಂಜಿರಾಯ ಮತ್ತು ಕೊತ್ತಾಡುನ್ ದೇವರಿಬ್ಬರೂ ಒಬ್ಬನೆಂದು ತೀರ್ಮಾನಿಸಬಹುದಾಗಿದೆ. ಇದೇ ರೀತಿಯಾಗಿ ಕುತ್ತಾಡುನ್ ದೇವನ ಉಲ್ಲೇಖವಿರುವಂತಹ ಇದೇ ಮುಳಬಾಗಿಲು ತಾಲ್ಲೂಕಿನ ಆವನಿ ಗ್ರಾಮದ ರಾಮೇಶ್ವರ ದೇವಾಲಯದಲ್ಲಿ ದೊರಕಿರುವಂತಹ ಕ್ರಿ.ಶ.೧೨೩೧ರ ಶಾಸನವು ಕುತ್ತಾಂಡುನ್ ದೇವನ ಆಳ್ವಿಕೆಯನ್ನು ಉಲ್ಲೇಖಿಸಿದೆ.[೨೩೯]

ಮಾಲೂರು ತಾಲ್ಲೂಕಿನ ಕ್ರಿ.ಶ.೧೨೪೩ರ ಅಪೂರ್ಣವಾದ ಶಾಸನವು[೨೪೦] ಕುತ್ತಾಡುನ್‌ದೇವನನ್ನು ಉಲ್ಲೇಖಿಸಿದೆ. ಚೋಳ ಸಾಮ್ರಾಜ್ಯವನ್ನು ಈ ಸಮಯದಲ್ಲಿ ಮುಮ್ಮಡಿ ರಾಜರಾಜನು ಮತ್ತು ಹೊಯ್ಸಳ ಸಾಮ್ರಾಜ್ಯವನ್ನು ಸೋಮೇಶ್ವರನು ಆಳುತ್ತಿದ್ದರು. ಸೋಮೇಶ್ವರನು ತಮಿಳುನಾಡಿನಲ್ಲಿ ಪ್ರಸಿದ್ಧರಾಗಿದ್ದಂತಹ ಚೋಳರಸರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದು, ಹೊಯ್ಸಳ ಸಾಮ್ರಾಜ್ಯದ ಪೂರ್ವದ ಭಾಗಗಳಿಗೆ ತಮಿಳುನಾಡಿನ ಕಣ್ಣಾನೂರನ್ನು ರಾಜಧಾನಿಯನ್ನಾಗಿ ನಿಯೋಜಿಸಿದ್ದನು. ನಂತರ ಕಾಲದಲ್ಲಿ ಇದೇ ಸೋಮೇಶ್ವರನ ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥರ ನಡುವೆ ರಾಜ್ಯವು ವಿಭಜಿಸಲ್ಪಟ್ಟಿತ್ತು. ರಾಮನಾಥನಿಗೆ ಕೋಲಾರ ಭಾಗಗಳ ಆಡಳಿತವು ದೊರಕಿತ್ತು. ರಾಮನಾಥ ಕಣ್ಣಾನೂರನ್ನು ರಾಜಧಾನಿಯನ್ನಾಗಿಸಿಕೊಂಡು ಇಳವಂಜಿನಾಡನ್ನು ಸೇರಿಸಿಕೊಂಡು ಕೋಲಾರದ ಪ್ರಾಂತ್ಯಗಳನ್ನು ಆಳ್ವಿಕೆ ನಡೆಸುತ್ತಿದ್ದನು. ಹಿಂದೆ ತಿಳಿಸಿರುವಂತೆ ಇಳವಂಜಿರಾಯನು ರಾಮನಾಥನ ಮಂತ್ರಿಯಾಗಿದ್ದನು. ಹಾಗಾಗಿ ಕುತ್ತಾಡುನ್ ದೇವನು ಹೊಯ್ಸಳರ ಅಧಿಪತ್ಯವನ್ನು ಸ್ವೀಕರಿಸಿದ್ದನೆಂದು ತೋರುತ್ತದೆ. ಇದೇ ಕುತ್ತಾಂಡನ್‌ದೇವನು ತಿರುಚಿರಾಂಬಾಳ್ ಬ್ರಹ್ಮಾದಿರಾಯನ ಮಗನೆಂಬ ವಿಶೇಷವಾದಂತಹ ಮಾಹಿತಿಯನ್ನು ಕೋಲಾರದ ಶಾಸನವು ತಿಳಿಸುತ್ತದೆ.[೨೪೧]

ಕ್ರಿ.ಶ.೧೨೮೫ರ ಕಾಲದ ಶಾಸನವು ಕುತ್ತಾಂಡುನ್‌ದೇವನನ್ನು ಬ್ರಹ್ಮಾದಿರಾಯನ ವಂಶದವರೆಂದು ತಿಳಿಸುತ್ತದೆ. ಬ್ರಹ್ಮಾದಿರಾಯರೂ ಇಳವಂಜಿರಾಯರಂತೆ ಸಾಮಂತ ರಾಜರಾಗಿದ್ದರು. ಇಲ್ಲಿ ತಿಳಿಸಿರುವಂತಹ 'ತಿರುಚಿರಂಬಾಳ' ಬಹುಶಃ ಕುತ್ತಾಂಡುನ್ ದೇವನತಾಯಿಯಾಗಿದ್ದು ಈಕೆಯು ಬ್ರಹ್ಮಾದಿರಾಯರ ವಂಶಕ್ಕೆ ಸೇರಿದವಳಾಗಿರಬೇಕು. ಬಂಗಾರುಪೇಟೆಯ ಇನ್ನೊಂದು ಅಪೂರ್ಣ ಶಾಸನವು ಇಳವಂಜಿರಾಯನನ್ನು ಹೆಸರಿಸುತ್ತದೆ. ಈ ಶಾಸನದ ಕಾಲವನ್ನು ಬಿ.ಎಲ್.ರೈಸ್‌ರವರು ಕ್ರಿ.ಶ.೧೩೦೦ ಎಂದು ಊಹಿಸಿದ್ದು, ಶಾಸನಗಳಲ್ಲಿ ಉಲ್ಲೇಖಿಸಿರುವಂತಹ ಮಾರಾಳ್ವರ್ ಮತ್ತು ಇಳವಂಜಿರಾಯರಿಬ್ಬರು ಒಬ್ಬರೇ ಎಂದು ಅಭಿಪ್ರಾಯವಿದೆ.

ಕೋಲಾರ ಜಿಲ್ಲೆಯಲ್ಲಿ ಕ್ರಿ.ಶ.೧೨೨೫ರಿಂದ ೧೨೮೫ರವರೆಗೆ ದೊರೆಯುವಂತಹ ಇಳವಂಜಿರಾಯನ ಮತ್ತು ಕುತ್ತಾಂಡನ್‌ದೇವನ ಉಲ್ಲೇಖವಿರುವಂತಹ ಶಾಸನಗಳು ೬೦ ವರ್ಷಗಳ ದೀರ್ಘಕಾಲದ ಆಡಳಿತವನ್ನು ಸೂಚಿಸುತ್ತದೆ. ಚೋಳರ, ಹೊಯ್ಸಳರ ಮತ್ತು ಅಂತಿಮವಾಗಿ ವಿಜಯನಗರದರಸರ ಆಳ್ವಿಕೆಯನ್ನು ಸವಿದಂತಹ ಇಳವಂಜಿನಾಡಿನ ಅರಸರು ಎಲಮರೆಯ ಕಾಯಿಯಂತೆ ಕರ್ನಾಟಕದ ಇತಿಹಾಸದಲ್ಲಿ ಕಂಡು ಬರುತ್ತಿದ್ದಾರೆ. ಈ

ಶಾಸನಗಳನ್ನು ಗಮನಿಸಿದರೆ ಕುತ್ತಾಡನ್‌ದೇವ ಇಳವಂಜಿರಾಯನ ಹೆಸರು ಕಾಲಕಾಲಕ್ಕೆ ಅಲ್ಪಸ್ವಲ್ಪ ಬದಲಾವಣೆಗಳನ್ನು ಹೊಂದುತ್ತಾ ಹೋಗಿರುವಂತೆ ಕಾಣುತ್ತದೆ.

ಇಳವಂಜಿ, ಎಳವಂಜಿ, ಎಲವಂಚಿ ಮತ್ತು ಯಲವಂಜಿ ಎಂಬುವುದಾಗಿ ರೂಪಾಂತರಗೊಳ್ಳುತ್ತಾ ಬಂದಿರುವಂತಹ ಈ ಶಬ್ದವು ನಂತರ ಕಾಲದಲ್ಲಿ ದೇವತಾ ಸ್ವರೂಪವನ್ನು ಪಡೆದಿರುವುದು ವಿಶೇಷವಾಗಿದೆ. ಇಳವಂಜಿರಾಯನು ಈ ಪ್ರದೇಶದ ದೇವಾಲಯಗಳಿಗೆ ನೀಡಿರುವಂತಹ ಅಪಾರ ಕೊಡುಗೆಗಳಿಂದಾಗಿ ನಂತರ ಜನಾಂಗದವರು ಈತನನ್ನು ದೇವರೆಂದು ನಂಬಿರಬಹುದು.

ಇಳವಂಜಿರಾಯನ ಮಡದಿಯಾದ ಶಂಗಾಳ್ವರ್ ಮತ್ತು ಪುತ್ರ ವಾಸುದೇವನು ಕೆಲವು ದೇವಾಲಯಗಳಲ್ಲಿ ಮೂರ್ತಿ ಸ್ವರೂಪವನ್ನು ಹೊಂದಿದ್ದಾರೆ. ಆವನಿಯ ದೇವಾಲಯಗಳಲ್ಲಿ ಇಳವಂಜಿರಾಯ ದಂಪತಿಗಳ ಪ್ರತಿಮೆಯನ್ನು ಕೆತ್ತಲಾಗಿದೆ. ಮರಾಳ್ವನ್, ಕುತ್ತಾಡುನ್‌ದೇವ ಮತ್ತು ವಾಸುದೇವ ಈ ಮೂರು ತಲೆಮಾರಿನವರು ಇಳವಂಜಿರಾಯ ವಂಶದಲ್ಲಿ ಬಂದಂತಹ ಪ್ರಸಿದ್ಧ ರಾಜರಾಗಿದ್ದರು. ಮಾತ್ರವಲ್ಲದೆಯೇ ಇಳವಂಜಿರಾಯ ಮತ್ತು ವಾಸುದೇವರಿಬ್ಬರು ಕೋಲಾರ ಪ್ರದೇಶದ ದೇವಾಲಯಗಳಿಗೆ ಅಪಾರವಾದಂತಹ ಕಾಣಿಕೆಯನ್ನು ನೀಡಿದ್ದಾರೆ. ಕುರುಡುಮಲೆ ಎಂಬ ಪ್ರಸಿದ್ಧ ಸ್ಥಳವು ಕುತ್ತಾಂಡುನ್ ದೇವನಲ್ಲೂರು ಎಂಬ ಇನ್ನೊಂದು ಹೆಸರನ್ನು ಹೊಂದಿದ್ದು, ಇಳವಂಜಿರಾಯರಿಂದಾಗಿ ಈ ಹೆಸರನ್ನು ಪಡೆದಿರುತ್ತದೆ.

೨.೨.೧೨. ಬ್ರಹ್ಮಾದಿರಾಯರು

ಕೋಲಾರದಲ್ಲಿ ಶೀತಿ (ಸೀತಿ) ಬೆಟ್ಟದ ಪರಿಸರದಲ್ಲಿ ದೊರಕುವಂತಹ ಶಾಸನಗಳಲ್ಲಿ 'ಬ್ರಹ್ಮಾದಿರಾಯ'ರೆಂಬ ರಾಜವಂಶದವರ ಉಲ್ಲೇಖವು ಕಂಡುಬರುತ್ತದೆ. ತಮಿಳುಶಾಸನಗಳಲ್ಲಿ ಹೆಚ್ಚಾಗಿ ಉಲ್ಲೇಖವಾಗಿರುವಂತಹ ಈ ರಾಜವಂಶೀಯರ ಉಲ್ಲೇಖವು ಕ್ರಿ.ಶ.೧೦೦೫ರಿಂದ ಕ್ರಿ.ಶ.೧೨೮೫ರವರೆಗಿನ ಶಾಸನಗಳಲ್ಲಿ ದೊರೆಯುತ್ತದೆ. ಮೊದಲು ಚೋಳರೊಂದಿಗೆ ನಂತರ ಹೊಯ್ಸಳರೊಂದಿಗೆ ಗುರುತಿಸಿಕೊಂಡಿರುವಂತಹ ಈ ವಂಶಜರು ನಂತರ ಇಳವಂಜಿರಾಯರೊಂದಿಗೆ ಸಂಬಂಧವನ್ನು ಹೊಂದಿರುವಂತೆ ಕಂಡುಬರುತ್ತದೆ. ಬ್ರಹ್ಮಾದಿರಾಯರ ಮೂಲ ಜನ್ಮಸ್ಥಾನದ ಕುರಿತಾಗಿ ಸ್ಪಷ್ಟವಾದಂತಹ ಚಿತ್ರಣವು ಸಿಗುತ್ತಿಲ್ಲವಾದರೂ ಅವರು ಸಾಮಂತರಾಗಿಯೇ ರಾಜ್ಯಭಾರ ಮಾಡುತ್ತಿದ್ದರೆಂದು ತೋರುತ್ತದೆ.

ಬ್ರಹ್ಮಾದಿರಾಯರಿಗೆ ಸಂಬಂಧಿಸಿದಂತಹ ಮೊದಲ ಉಲ್ಲೇಖವು[೨೪೨] ಕೋಲಾರ ತಾಲ್ಲೂಕಿನ ಶೀತಿ ಬೆಟ್ಟದ ಭೈರವ ದೇವಾಲಯದ ಸಮೀಪದಲ್ಲಿ ದೊರೆಯುತ್ತದೆ. ಚೋಳ ದೊರೆ ಒಂದನೆಯ ರಾಜೇಂದ್ರಚೋಳನ (ಕ್ರಿ.ಶ.೧೦೧೩-೧೦೪೫) ಆಳ್ವಿಕೆಗೆ ಸಂಬಂಧಿಸಿದಂತಹ ಶಾಸನವಿದಾಗಿದೆ. ರಾಜನು ಆಳ್ವಿಕೆ ನಡೆಸುತ್ತಿರಲು 'ತನ್ಮಸೆಟ್ಟಿ' ಮತ್ತು ಉಳಿದವರು ಕ್ಷೇತ್ರಪಾಲ ದೇವರಿಗೆ ದಾನವನ್ನು ನೀಡಿರುವಂತೆ ಶಾಸನವು ಉಲ್ಲೇಖಿಸಿದೆ. ಈ ದಾನಕ್ಕೆ ಸಾಕ್ಷಿಗಳಾಗಿ 'ಬ್ರಹ್ಮಾಧಿರಾಯ'ರನ್ನು ತಿಳಿಸಿದೆ. ಅದಲ್ಲದೆಯೇ ಶಾಸನವು ಈತನನ್ನು ಉನ್ನತ ಅಧಿಕಾರಿಯೆಂದು ಪ್ರತಿಪಾದಿಸಿದೆ. ಬಹುಶಃ ಈತನು ಚೋಳ ರಾಜನ ದಂಡನಾಯಕನಾಗಿರಬಹುದು. ಅಳಗಿಯ ಚೋಳ ಬ್ರಹ್ಮಮರಾಯನ್, ಗಂಡರ ಮಾಣಿಕ್ಕ (ಮಾಣಿಕ್ಯ), ಬ್ರಹ್ಮಾಧಿರಾಜನ್ ಮೊದಲಾದವರು ಈ ಶಾಸನಕ್ಕೆ ಸಾಕ್ಷಿಗಳೆಂದು ಶಾಸನವು ತಿಳಿಸುತ್ತದೆ.

ಚೋಳರಿಗೆ ಸಂಬಂಧಿಸಿದಂತಹ ತಮಿಳುಶಾಸನಗಳಲ್ಲಿ 'ಬ್ರಹ್ಮಮಾರಾಯ' ಎಂಬ ಶಬ್ದವು ಪ್ರಯೋಗವಾಗಿದ್ದು ಕಾಲಕಾಲಕ್ಕೆ ಬ್ರಹ್ಮಾಧಿರಾಯರು ಚೋಳರಿಗೆ ಆಡಳಿತದಲ್ಲಿ ಸಹಾಯಕರಾಗಿದ್ದುಕೊಂಡು ಮುಂದುವರೆದಿರಬಹುದು.

ಬ್ರಹ್ಮಾಧಿರಾಯರನ್ನು ಅಯ್ಯನ ಅಂಕಕಾರ ತುತ್ತರಾದಿತ್ಯನೆಂದೂ, ಗಂಗ ಪೆರುಮಾಳ್[೨೪೩] ಎಂದೂ ಮತ್ತು ವಾಶಿನಾಯನನ ಪುತ್ರನೆಂದೂ ಶಾಸನವು ತಿಳಿಸುತ್ತದೆ. ಗಂಗ ಪೆರುಮಾಳ್ ಎಂಬ ಶಬ್ದ ಪ್ರಯೋಗದಿಂದಾಗಿ ಬ್ರಹ್ಮಾಧಿರಾಯರು ಗಂಗ ವಂಶದ ಮೂಲದವರಾಗಿರಬಹುದು. ಕ್ರಿ.ಶ.೧೦೦೪ರ ನಂತರ ತಲಕಾಡಿನ ಗಂಗರನ್ನು ಹಿಮ್ಮೆಟ್ಟಿಸಿ ಚೋಳರು ಪ್ರಬಲರಾದರು. ಕ್ರಿ.ಶ.೧೧೧೭ರ ಸುಮಾರಿನಲ್ಲಿ ಪ್ರಬಲರಾಗಿದ್ದಂತಹ ಚೋಳರನ್ನು ತಲಕಾಡಿನಿಂದ ಓಡಿಸಿ ಹೊಯ್ಸಳ ಸಾಮ್ರಾಜ್ಯವನ್ನು ವಿಸ್ತರಿಸುವಲ್ಲಿ ವಿಷ್ಣುವರ್ಧನನು ಸಮರ್ಥನಾಗಿದ್ದನು. ಚೋಳರು ಗಂಗರನ್ನು ಸಂಪೂರ್ಣವಾಗಿ ಸೋಲಿಸಿದ್ದರು. ನಂತರದ ಕಾಲದಲ್ಲಿ ಗಂಗರು ಕೆಲವು ಪ್ರದೇಶದಲ್ಲಿ ಮಾಂಡಲೀಕರಾಗಿಯೋ, ಸಣ್ಣ ರಾಜರಾಗಿಯೋ ಮುಂದುವರೆದಿದ್ದರು. ಮುಂದೆ ಹೊಯ್ಸಳರು ಪ್ರಾಬಲ್ಯಕ್ಕೆ ಬಂದಾಗ ಮಾಂಡಲಿಕರಾಗಿದ್ದಂತಹ ಗಂಗರು ಪ್ರಬಲರಾಗಲು ಪ್ರಯತ್ನಿಸಿದ್ದರು.

ಹಾಗಾಗಿ ಗಂಗರ ಮೂಲ ಮತ್ತು ಚೋಳರ ಸಾಮಂತರಾಗಿದ್ದಂತಹ ಕೆಲವು ರಾಜರುಗಳ ಉಲ್ಲೇಖವು ಕೋಲಾರ ಜಿಲ್ಲೆಯಲ್ಲಿ ಕಂಡುಬರುತ್ತದೆ. ವೀರಗಂಗ, ಉತ್ತಮಚೋಳ ಸೆಲ್ವಗಂಗ[೨೪೪] ಗಂಗ ಪೆರುಮಾಳ, ಉತ್ತಮಚೋಳ ಗಂಗ ವೀರಗಂಗ ಮೊದಲಾದ ರಾಜರುಗಳ ಉಲ್ಲೇಖವು ಹೊಯ್ಸಳರ ಕಾಲದ ತಮಿಳು ಶಾಸನಗಳಲ್ಲಿ ಲಭ್ಯವಿದೆ. ಇವರೆಲ್ಲರ ಹೆಸರಲ್ಲಿ ಗಂಗ ಶಬ್ದವು ಕಂಡು ಬರುವುದರಿಂದ ಈ ಮಹಾಮಂಡಲೇಶ್ವರರು ಗಂಗ ಮೂಲದವರೆಂದು ಹೊಯ್ಸಳರ ಅವಧಿಯಲ್ಲಿ ಪ್ರಧಾನರಾದರೆಂದು ಡಾ.ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯವಾಗಿದೆ.[೨೪೫]

ಗಂಗ ಪೆರುಮಾಳ್ ಎಂಬ ರಾಜನ ಉಲ್ಲೇಖವು ತಮಿಳು ಶಾಸನಗಳಲ್ಲಿ ಕಂಡುಬರುತ್ತದೆ. ಬ್ರಹ್ಮಾಧಿರಾಯರ ವಂಶದಲ್ಲಿ ಗಂಗ ಪೆರುಮಾಳ್ ಶಬ್ದದ ಪ್ರಯೋಗವು ಹೆಚ್ಚಾಗಿ ಕಂಡುಬರುತ್ತದೆ. ಹಿಂದೆ ತಿಳಿಸಿರುವಂತಹ ವೀರಗಂಗ ಉತ್ತಮ ಚೋಳ ಸೆಲ್ವಗಂಗನ ಪುತ್ರನು ಗಂಗ ಪೆರುಮಾಳನು. ಈ ವೀರಗಂಗನಿಗೆ ಕುವಳಾಲ ಪುರ ಪರಮೇಶ್ವರ, ಗಂಗ ಕುಲೋದ್ಭವ, ನಂದಗಿರಿನಾಥ, ಕಾವೇರಿ ವಲ್ಲಭ, ಉತ್ತಮ ಚೋಳಗಂಗವೆಂಬ ಬಿರುದಗಳಿದ್ದವೆಂದು ಕೋಲಾರದ ಶಾಸನವು ತಿಳಿಸುತ್ತದೆ.[೨೪೬] ಹಾಗಾಗಿ ಬ್ರಹ್ಮಾಧಿರಾಯರು ಗಂಗ ವಂಶದವರು, ನಂದಗಿರಿಯ ಒಡೆಯರೂ, ಕುವಳಾಲ ಪ್ರದೇಶದ ಅಧಿರಾಜರೆಂದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಕ್ರಿ.ಶ.೧೧೮೭ರ ಮಾಲೂರಿನ ತಮಿಳುಶಾಸನವು ಗಂಗ ಪೆರುಮಾಳನು ವೆಲ್ಲಿಯೂರಿನ 'ವಾಳ ವಂದ ಪೆರುಮಾಳ' ದೇವರಿಗೆ ತನ್ನ ಮಡದಿಯಾದ ಅರಣವಲ್ಲಿಯೊಂದಿಗೆ ಸೇರಿಕೊಂಡು ದಾನವನ್ನು ನೀಡಿರುವಂತಹ ಉಲ್ಲೇಖವು ಕಂಡುಬರುತ್ತದೆ. ಇದು ಚೋಳ ದೊರೆ ಮುಮ್ಮಡಿ ಕುಲೋತ್ತುಂಗ ಚೋಳ (ಕ್ರಿ.ಶ.೧೧೭೮ರಿಂದ ೧೨೧೮)ನ ಆಡಳಿತ ಕಾಲವಾಗಿತ್ತು.

ಚೋಳ ಸಾಮ್ರಾಜ್ಯದ ಅವನತಿಯ ನಂತರ ಸಾಮಂತರಾಗಿದ್ದಂತಹ ಕೆಲವು ಅರಸರು ಪ್ರಬಲರಾಗಲು ಪ್ರಯತ್ನಿಸಿದರು. ಹಾಗಾಗಿ ಕೋಲಾರದ ಪ್ರದೇಶವನ್ನು ಆ ಸಮಯದಲ್ಲಿ ಪ್ರಬಲರಾಗಿದ್ದಂತಹ ಗಂಗ ಪೆರುಮಾಳನು ಆಳ್ವಿಕೆ ನಡೆಸಲು ಪ್ರಾರಂಭಿಸಿರಬಹುದು. ಅದಲ್ಲದೆಯೇ ವೀರಗಂಗನು ಕುಲೋತ್ತುಂಗ,ಮುಮ್ಮಡಿ ಚೋಳನಿಗೆ ನಿಷ್ಠಾವಂತ ಅಧಿಕಾರಿಯಾಗಿದ್ದುದರಿಂದ ಚೋಳ ರಾಜನು ಗಂಗ ಪೆರುಮಾಳನಿಗೆ ಕೋಲಾರ ಪ್ರದೇಶವನ್ನು

ಉಂಬಳಿಯಾಗಿ ನೀಡಿರಬಹುದು. ಮುಂದೆ ಕ್ರಿ.ಶ.೧೨೧೭ರ ಕಸಬಾ ಹೋಬಳಿಯ ತೇರುಹಳ್ಳಿಯ ಗಂಗಾಧರೇಶ್ವರ ದೇವಾಲಯದಲ್ಲಿರುವ ಶಾಸನವು 'ಉತ್ತಮ ಚೋಳ ಗಂಗ ಸೆಲ್ವಗಂಗ'ನನ್ನು ಮಹಾಮಂಡಲೇಶ್ವರನೆಂದು ಕರೆದಿದ್ದು, ಈತನ ಮಾವನಾದ ಪೋಲಾಳ ದಣ್ಣಾಯಕನ ತಮ್ಮನಾದ ಶಿವಕದಂಣ್ಣಾಯಕನು ವೀರಗಂಗಿ(ಗೇ)ಶ್ವರ ದೇವರಿಗೆ ಮತ್ತು ದೇವಾಲಯ ಉದ್ಯಾನವನ ನಿರ್ಮಾಣ ಮಾಡುವುದಕ್ಕಾಗಿ ದತ್ತಿಯನ್ನು ನೀಡಿರುವುದನ್ನು ಉಲ್ಲೇಖಿಸಿದೆ.[೨೪೭] ಈ ಸೀಮಿತ ಅವಧಿಯಲ್ಲಿ ಗಂಗ ಪೆರುಮಾಳನು ಪ್ರಬಲನಾಗಿದ್ದನೆಂದು ತಿಳಿಯಬಹುದಾಗಿದೆ.

ಚೋಳರ ಪತನಾನಂತರ ಬ್ರಹ್ಮಾಧಿರಾಯರಿಗೆ ಹೊಯ್ಸಳರ ಆಡಳಿತವನ್ನು ಸ್ವೀಕರಿಸಬೇಕಾಯಿತು. ಹೊಯ್ಸಳರ ಆಡಳಿತಾವಧಿಯಲ್ಲೂ ಬ್ರಹ್ಮಾಧಿರಾಯರು ಸಾಮಂತರಾಗಿದ್ದಂತೆಯೇ ಶಾಸನಗಳು ತಿಳಿಸುತ್ತದೆ. ಮುಂದೆ ಬ್ರಹ್ಮಾಧಿರಾಯನಿಗೆ ಸಂಬಂಧಿಸಿದಂತ ಉಲ್ಲೇಖವು ಹೊಯ್ಸಳ ದೊರೆ ರಾಮನಾಥನ ಆಳ್ವಿಕೆಯಲ್ಲಿ ದೊರೆಯುತ್ತದೆ. ಹೊಯ್ಸಳ ದೊರೆ ರಾಮನಾಥನು ಕ್ರಿ.ಶ.೧೨೫೪ರಿಂದ ೧೨೯೫ರವರೆಗೆ ಕೋಲಾರ ಪ್ರದೇಶದ ಭಾಗವನ್ನೊಳಗೊಂಡಂತೆ ಹೊಯ್ಸಳ ಸಾಮ್ರಾಜ್ಯದ ತಮಿಳು ಪ್ರದೇಶಗಳನ್ನು ರಾಜಧಾನಿ ಕಣ್ಣಾನೂರಿನಿಂದ ಆಳುತ್ತಿದ್ದನು. ಈ ಸಂದರ್ಭದಲ್ಲಿ ಹೊಯ್ಸಳ ದೊರೆ ಸೋಮೇಶ್ವರನ ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥನ ನಡುವೆ ಹೊಯ್ಸಳ ಸಾಮ್ರಾಜ್ಯವು ಇಬ್ಭಾಗವಾಯಿತು. ರಾಮನಾಥನ ಪಟ್ಟಾಭಿಷೇಕದ ೩೨ನೆಯ ವರ್ಷದ (ಕ್ರಿ.ಶ.೧೨೮೬) ಮಾಲೂರು ತಾಲ್ಲೂಕಿನ ನರಸಾಪುರ ಹೋಬಳಿಯ ಬೆಳ್ಳೂರಿನ ಕಣ್ಣೇಶ್ವರ ದೇವಾಲಯದ ಶಾಸನವು ಬ್ರಹ್ಮಾಧಿರಾಯರನ್ನು ಅಯ್ಯನ ಅಂಕಕಾರ ದುತ್ತರಾದಿತ್ಯ (ದುಷ್ಟರಾದಿತ್ಯ), ಗಂಗ ಪೆರುಮಾಳ್ ಎಂದು ಮತ್ತು ವಾಶಿನಾಯನನ ಪುತ್ರನೆಂದು ತಿಳಿಸುತ್ತದೆ.

ವಾಸುದೇವನೆಂಬ ಹೆಸರುಳ್ಳ ಬ್ರಹ್ಮಾಧಿರಾಯನ ಉಲ್ಲೇಖವನ್ನು ಕೆಲವು ತಮಿಳು ಶಾಸನಗಳು ನೀಡುತ್ತವೆ. ಈತನನ್ನು ಅಯ್ಯನಂಕಕಾರ, ದುತ್ತರಾದಿತ್ಯ (ದುಷ್ಟರಾದಿತ್ಯ)ನೆಂದೂ ಶಾಸನವೂ ಹೊಗಳಿದೆ. ಈ ಗಂಗ ಪೆರುಮಾಳನು ರಾಜ ನಾರಾಯಣ ಬ್ರಹ್ಮಾಧಿರಾಯನ ಪುತ್ರನೆಂದೂ ತಿಳಿಸಿದೆ. ದಾನದ ಮಾಹಿತಿಯನ್ನು ನೀಡುತ್ತಿರುವಂತಹ ಈ ಶಾಸನವು ಗಂಗ ಪೆರುಮಾಳನು ಯಾರಿಗೆ ಯಾವ ಸಂದರ್ಭದಲ್ಲಿ ದಾನ ನೀಡಿರುವನೆಂಬುದು ಅಸ್ಪಷ್ಟವಾಗಿದೆ. ಈತನು ಈ ಸಂತತಿಯ ಪ್ರಬಲರಾಜನಾಗಿದ್ದನು. ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿಯಲ್ಲಿ ದೊರಕಿರುವಂತಹ ಈ ಶಾಸನವು[೨೪೮] ಸುಮಾರು ಕ್ರಿ.ಶ.೧೨೮೬ನೆಯ ಇಸವಿಗೆ ಸರಿ ಹೊಂದುತ್ತದೆ.

ಕೋಲಾರ ತಾಲ್ಲೂಕಿನಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ಬ್ರಹ್ಮಾಧಿರಾಯನನ್ನು 'ತಿರುಚಿರಂಬಾಳ್' ಎಂದು ಕರೆದಿದೆ. ತಾಲ್ಲೂಕಿನ ವೇಮಗಲ್ಲು ಹೋಬಳಿ ಭೈರವೇಶ್ವರ ದೇವಾಲಯದಲ್ಲಿ ದೊರಕಿರುವಂತಹ ಶಾಸನವು[೨೪೯] ಕೂಡಾ ಬ್ರಹ್ಮಾಧಿರಾಯರ ಇರುವಿಕೆಯನ್ನು ಖಚಿತ ಪಡಿಸುತ್ತದೆ. ದಾನದ ವಿಚಾರವನ್ನು ತಿಳಿಸುತ್ತಿರುವಂತಹ ಈ ಶಾಸನವು 'ಪೆರುಮಾಳ್' ಶಬ್ದವನ್ನು ಪ್ರಯೋಗಿಸಿದೆ. ಇದೇ ದೇವಾಲಯದಲ್ಲಿ ದೊರಕಿರುವಂತಹ ಶಾಸನವು ಕುಪ್ಪಾಂಡೆಯ ಮಗನಾದ ಸೆಲ್ವಗಂಗನು[೨೫೦] ಸೀತಿಯ ಭೈರವ ದೇವರ ನಂದಾದೀವಿಗೆಗಾಗಿ ದಾನವನ್ನು ನೀಡಿರುವಂತಹ ವಿಚಾರವಿದೆ. ಈತನನ್ನು ಅಣ್ಣನಂಕಕಾರ, ದುತ್ತರಾದಿತ್ಯ, ರಾಜನಾರಯಣ ಬ್ರಹ್ಮಾಧಿರಾಜನೆಂದು ಹೊಗಳಿರುವುದರಿಂದ ಮತ್ತು ಈ ಹೆಸರುಗಳು ಬ್ರಹ್ಮಾಧಿರಾಯರಲ್ಲಿ ಪ್ರಸಿದ್ಧವಾಗಿರುವುದರಿಂದ ಈತನನ್ನು ಇದೇ ವಂಶಕ್ಕೆ ಸೇರಿಸಬಹುದು.

ಹೊಯ್ಸಳರ ಆಡಳಿತದಲ್ಲಿ ಬ್ರಹ್ಮಾಧಿರಾಜರಂತೆ ಇಳಿವಂಜಿರಾಯರೂ ಪ್ರಸಿದ್ಧರಾಗಿದ್ದರು. ಹೊಯ್ಸಳರ ಆಡಳಿತದಲ್ಲಿ ಇವರಿಬ್ಬರೂ ಪ್ರಾಂತ್ಯಗಳ ಅಧಿಕಾರಿಗಳಾಗಿದ್ದರು. ಹೊಯ್ಸಳರ ದೊರೆ ರಾಮನಾಥನ ಆಡಳಿತದ ಸಂದರ್ಭದಲ್ಲಿ ಪೂರ್ವಭಾಗ ಹೊಯ್ಸಳ ·ಪ್ರಾಂತ್ಯದ ರಾಮನಾಥನ ಸುಪರ್ದಿಗೆ ಬಂದಿದ್ದು ಆತನು ದೂರದ ಕಣ್ಣಾನೂರಿನಿಂದ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದು, ಇವರಿಬ್ಬರಿಗೆ ಕೋಲಾರ ಪ್ರಾಂತ್ಯದ ಅಧಿಕಾರವನ್ನು ನೀಡಿರಬಹುದು. ಇಳವಂಜಿರಾಯರು ಬಂಗಾರಪೇಟೆಯನ್ನೊಳಗೊಂಡಂತೆ ದಕ್ಷಿಣ ಭಾಗಗಳನ್ನು ಆಳುತ್ತಿದ್ದರೆ ಉತ್ತರದ ಭಾಗಗಳನ್ನು ಬ್ರಹ್ಮಾಧಿರಾಯರು ಆಳುತ್ತಿದ್ದರು. ಇವರಿಬ್ಬರಿಗೂ ಕೌಟುಂಬಿಕ ಸಂಬಂಧಗಳು ಇದ್ದವು. ಕೋಲಾರ ತಾಲ್ಲೂಕಿನ ವೇಮಗಲ್ಲು ಗ್ರಾಮದ ಶಾಸನವು[೨೫೧] ತಿರುಚರಂಬಾಳ್ ಬ್ರಹ್ಮಾಧಿರಾಯನ ಮಗನಾದ ಕೂತ್ತಾಡುನ್ ದೇವನು ಭೂದಾನವನ್ನು ನೀಡಿರುವನೆಂದು ತಿಳಿಸುತ್ತದೆ.

ವೇಮಗಲ್ಲು ಗ್ರಾಮದ ಭೈರವ ದೇವಾಲಯದಲ್ಲಿ ದೊರಕುವಂತಹ ಇನ್ನೊಂದು ಶಾಸನವು ಇರಾಜ ನಾರಾಯಣ ಬ್ರಹ್ಮಾಧಿರಾಜನೆಂಬುವವನ ಪುತ್ರನಾದ 'ಮರೈಪೆರುಮಾಳ್' ಎಂಬುವವನು ದಾನವನ್ನು (ಭೈರವ ದೇವಾಲಯಕ್ಕೆ) ನೀಡಿರುವಂತಹ ವಿಚಾರವಿದೆ. ಶಾಸನದ ಕಾಲವು ಶಾಲಿವಾಹನ ಶಕ ೧೨೧೧ (ಕ್ರಿ.ಶ.೧೨೮೯)ಕ್ಕೆ ಸೇರಿದೆಂದು ಸೂಚಿಸುತ್ತದೆ.

ಸೆಲ್ವಗಂಗ, ಉತ್ತಮ ಚೋಳ ವೀರಗಂಗ, ಉತ್ತಮ ಚೋಳ ಗಂಗ ಹೆಸರುಗಳು ಕೋಲಾರ ತಾಲೂಕಿನ ಶಾಸನಗಳಲ್ಲಿ ಪ್ರಯೋಗವಾಗಿದ್ದು,[೨೫೨] ಇವರೆಲ್ಲರೂ ಬ್ರಹ್ಮಾಧಿರಾಯರ ವಂಶಕ್ಕೆ ಸೇರಿದವರಾಗಿರಬೇಕು. ಬ್ರಹ್ಮಾಧಿರಾಯರು ಕೋಲಾರದಲ್ಲಿರುವ ಸೀತಿಬೆಟ್ಟದ ಭೈರವ ದೇವಾಲಯದ ದೇವರ ಪರಮ ಭಕ್ತರಾಗಿದ್ದರು. ಹಾಗಾಗಿಯೇ ಈ ದೇವಾಲಯಕ್ಕೆ ಹಲವಾರು ದತ್ತಿಗಳನ್ನು ನೀಡಿರುವಂತೆ ಶಾಸನಗಳು ತಿಳಿಸುತ್ತದೆ. ಬ್ರಹ್ಮಾಧಿರಾಯರಂತೆ ಪೂರ್ವಾದಿರಾಯರೆಂಬ ಸಾಮಂತ ರಾಜರೂ ೧೩ನೆಯ ಶತಮಾನದ ನಂತರದ ಶಾಸನಗಳಲ್ಲಿ ದೊರೆಯುತ್ತದೆ. ಆದರೆ ಕೋಲಾರ ಪ್ರದೇಶದಲ್ಲಿ ಇವರನ್ನು ಹೆಸರಿಸುವಂತಹ ಶಾಸನಗಳು ದೊರೆಯುತ್ತಿಲ್ಲ.

೨.೩. ಪ್ರಾಚೀನ ಆಡಳಿತ ವಿಭಾಗಗಳು

೨.೩.೧ ಗಂಗವಾಡಿ ೯೬೦೦೦

ಗಂಗವಾಡಿ ೯೬೦೦೦ ಎನ್ನುವುದು ಗಂಗರ ಪ್ರಸಿದ್ಧವಾದ ಆಡಳಿತ ವಿಭಾಗವಾಗಿತ್ತು. ಗಂಗರಿಗೆ ಸಂಬಂಧಿಸಿರುವಂತಹ ಶಾಸನಗಳು ಈ ಪ್ರದೇಶವನ್ನು ಹೆಚ್ಚಾಗಿ ಉಲ್ಲೇಖಿಸಿವೆ. ಕೋಲಾರ ಜಿಲ್ಲೆಯನ್ನು ಮಾತ್ರವಲ್ಲದೆಯೇ ದಕ್ಷಿಣ ಭಾರತದ ಹಲವಾರು ಪ್ರಾಂತ್ಯಗಳನ್ನು ಆಳಿದ್ದಂತಹ ಗಂಗ ಅರಸರು ತಮ್ಮನ್ನು ನಂದಗಿರಿನಾಥರೆಂದು ಗುರುತಿಸಿಕೊಂಡು ಕುವಳಾಲವನ್ನು ಕೇಂದ್ರವಾಗಿರಿಸಿಕೊಂಡು ರಾಜ್ಯವನ್ನು ಕಟ್ಟಿದ್ದರು. ಹಾಗಾಗಿ ಗಂಗರ ರಾಜ್ಯದ ಮೊದಲ ರಾಜಧಾನಿ ಕುವಳಾಲಪುರ ಅಥವಾ ಕೋಲಾರವಾಗಿದೆ. ಕೆಲವು ಕಾಲ ನೆಲಮಂಗಲ ಮಣ್ಣೆ ಅಥವಾ ಮಾನ್ಯಪುರವು ಇವರ ರಾಜಧಾನಿಯಾಗಿತ್ತು.

ಗಂಗರಾಜ್ಯ, ಗಾಂಗೇಯ ರಾಜ್ಯ, ಗಂಗನಾಡು, ಗಂಗವಾಡಿ ಮತ್ತು ಷಣ್ಣವತಿ ಸಹಸ್ರ ಎಂದು ಕರೆಯಲ್ಪಟ್ಟಂತಹ ಪ್ರದೇಶವು ಕೊಂಗುಣಿವರ್ಮನ ಕಾಲದಿಂದಲೂ (ಕ್ರಿ.ಶ.೪ನೆಯ ಶತಮಾನ) ಶಾಸನಗಳಲ್ಲಿ ಪ್ರಯುಕ್ತವಾಗುತ್ತಾ ಬಂದಿದೆ. ಕೊಂಗುಣಿವರ್ಮನನ್ನು ಗಂಗವಾಡಿ ೯೬೦೦೦ದ ಮೂಲ ಸ್ಥಾಪಕನೆಂದು ಗುರುತಿಸಲಾಗಿದೆ. ಪೂರ್ವದಲ್ಲಿ ಕೋಲಾರ ಜಿಲ್ಲೆಯೂ, ಪಶ್ಚಿಮದಲ್ಲಿ ಕೊಡಗುಜಿಲ್ಲೆಯೂ, ದಕ್ಷಿಣದಲ್ಲಿ ಕೊಯಮತ್ತೂರು –ಸೇಲಂ ಜಿಲ್ಲೆಗಳಿಂದಲೂ ಮತ್ತು ಉತ್ತರದಲ್ಲಿ ಬಳ್ಳಾರಿ, ಧಾರವಾಡ ಜಿಲ್ಲೆಗಳಿಂದಲೂ ಆವೃತ್ತವಾಗಿದ್ದಂತಹ ಈ ನಾಡು ಅನೇಕ ಉಪವಿಭಾಗಗಳನ್ನು ಹೊಂದಿತ್ತು.

ಗಂಗವಾಡಿ೬೦೦೦, ಕೈವಾರ ವಿಷಯ, ಮುದುಕುತ್ತೂರು ವಿಷಯ, ಕೆರೆಗುಂದನಾಡು೩೦, ಆವನಿಯನಾಡು೩೦, ಎಡೆತೊರೆನಾಡು, ಪರುವಿ ವಿಷಯ, ಕೋಳಾಲ (ವಿಷಯ)೩೦೦, ನೊಳಂಬಳಿಗೆ೧೦೦೦, ನಿರ್ಗ್ಗುಂದನಾಡು೩೦೦, ಬೆಳತೂರ್ನಾಡು, ಅಸಂದಿನಾಡು, ವಡಗೆರೆನಾಡು, ಎಡೆನಾಡು, ಕಳ್ವುಪ್ಪು ೧೭೦೦, ಮಣ್ಣೆ೨೦೦ ಮುಂತಾದ ಉಪವಿಭಾಗಗಳನ್ನು ಹೊಂದಿದ್ದಂತಹ ವಿಶಾಲವಾದ ಗಂಗವಾಡಿ೯೬೦೦೦, ವಿಭಾಗವು ಗಂಗ ಅರಸರು ಬೃಹತ್ತಾದ ರಾಜ್ಯವನ್ನು ಕಟ್ಟಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ.

ಕೋಲಾರ ತಾಲ್ಲೂಕಿನ ಮಡಿವಾಳ ಗ್ರಾಮದ ಮೂಲೇಶ್ವರ ದೇವಾಲಯದಲ್ಲಿರುವ ಶಾಸನವು[೨೫೩] ಗಂಗರಸ ರಾಜ್ಯವು ಗಂಗವಾಡಿ೯೬೦೦೦ ಎಂದಾಗಿರುವುದನ್ನು ದೃಢಪಡಿಸುತ್ತದೆ. ಗಂಗವಾಡಿ೯೬೦೦೦ ಪ್ರದೇಶವು ಒಮ್ಮೆ ನೊಳಂಬರ ಅಧೀನಕ್ಕೂ ಬಂದಿದ್ದಿರಬಹುದು. ಬಳ್ಳಾರಿ ತಾಲ್ಲೂಕಿನಲ್ಲಿ ದೊರಕಿರುವಂತಹ ಶಾಸನವು ನೊಳಂಬ ದೊರೆ ಅಣ್ಣಿಗನು ಗಂಗಮಂಡಲಕ್ಕೂ ರಾಜನಾಗಿದ್ದನೆಂದು ತಿಳಿಸುತ್ತದೆ.[೨೫೪]

"ಷಣ್ಣವತಿ ಸಹಸ್ರ ಪ್ರಮುಖ ಗಂಗ ಮಂಡಳ ವಿಳಾಸಿನೈಕ

ವಲ್ಲಭೋ ಮಹೇಂದ್ರ"

ನೊಳಂಬ ದೊರೆ ಅಯ್ಯಪದೇವನ ಮಗನಾದ ಅಣ್ಣಿಗನು ಕೆಲವು ಕಾಲ ಗಂಗವಾಡಿ–೯೬೦೦೦ವನ್ನು ಆಳ್ವಿಕೆ ನಡೆಸಿರಬಹುದು. ಅದಲ್ಲದೆಯೇ ನೊಳಂಬರಿಗೂ ಗಂಗರಿಗೂ ಪರಸ್ಪರ ಮಿತ್ರತ್ವವಿದ್ದುದರಿಂದ ಕೆಲವು ಕಾಲ ಆಳ್ವಿಕೆ ನಡೆಸಲು ಗಂಗವಾಡಿಯನ್ನು ನೊಳಂಬರಿಗೆ ನೀಡಿರಬಹುದು. ೯೬೦೦೦ಎನ್ನುವುದು ಹಳ್ಳಿಗಳ ಸಂಖ್ಯೆಯನ್ನು ಸೂಚಿಸುತ್ತಿರಬಹುದು. ಮನಸ್ಮೃತಿ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ರಾಜನು ತನ್ನ ರಾಜ್ಯವನ್ನು ಹಳ್ಳಿಗಳ ಗುಂಪನ್ನು ಮಾಡಿ ಆ ಗುಂಪಿಗೆ ಪ್ರಾಂತ್ಯಗಳೆಂದು ಹೆಸರಿಸಿ ಪ್ರಾಂತ್ಯಾಧಿಕಾರಿಯನ್ನು ನಿಯೋಜಿಸಬೇಕೆಂದು ತಿಳಿಸಿದೆ.

ದ್ವಯೋಸ್ತ್ರಯಾಣಾಂ ಸಂಚಾನಾಂ ಮಧ್ಯೇ ಗುಲ್ಮಮದಿಷ್ಠಿತಂ ।

ತಥಾ ಗ್ರಾಮ ಶತಾನಾಂ ಚ ಕುರ್ಯಾದ್ರಾಷ್ಟಸ್ಯ ಸಂಗ್ರಹಂ [೨೫೫] ॥

ಎರಡು, ಮೂರು ಅಥವಾ ಐದು ಗ್ರಾಮಗಳ ಗುಂಪು ಮಾಡಿ ಅವುಗಳಿಗೆ ಪ್ರಧಾನರನ್ನು ನೇಮಿಸಿರಬೇಕು. ಅದೇ ರೀತಿ ೧೦೦ ಗ್ರಾಮಗಳ ಒಕ್ಕೂಟಕ್ಕೆ ರಕ್ಷಕನಾದ ಅಧಿಪತಿಗಳನ್ನು ನೇಮಿಸಿರಬೇಕು.

ಗಂಗವಾಡಿ೯೬೦೦೦ ಎಂಬಲ್ಲಿ ೯೬೦೦೦ಎನ್ನುವುದು ಹಳ್ಳಿಗಳ ಸಂಖ್ಯೆಯನ್ನು ಸೂಚಿಸುತ್ತದೆಂದು ಡಾ.ದೇವರಕೊಂಡಾ ರೆಡ್ಡಿಯವರು ಅಭಿಪ್ರಾಯಪಡುತ್ತಾರೆ.[೨೫೬] ಆದರೆ ಗಂಗವಾಡಿ ೯೬೦೦೦ ಎಂಬ ಪ್ರದೇಶದಲ್ಲಿ ೯೬೦೦೦ ಹಳ್ಳೀಗಳಿದ್ದವೇ ಎಂಬ ವಿಷಯವಾಗಿ ಸಂಶಯಗಳುಂಟಾಗುತ್ತದೆ. ಕೆಲವೊಮ್ಮೆ ಇಂತಹ ಈ ಸಂಖ್ಯೆಗಳನ್ನು ಸಾಂಕೇತಿಕವಾಗಿಯೂ ಬಳಸಿಕೊಂಡಿರಬಹುದು.

ಇತಿಹಾಸಕಾರರಾದ ಡಾ.ಬಿ.ಷೆಕ್ ಆಲಿಯವರ ಅಭಿಪ್ರಾಯದಂತೆ ೯೬೦೦೦ ಎಂಬುದು ೯೬ ವಿಭಾಗಗಳು ಅಥವಾ ನಾಡುಗಳಾಗಿದ್ದು, ಪ್ರತಿಯೊಂದು ವಿಭಾಗಗಳು ೧೦೦೦ ಗ್ರಾಮಗಳನ್ನು ಹೊಂದಿತ್ತು. ಗ್ರಾಮಗಳ ಸಂಖ್ಯೆಯು ಕೆಲವೊಮ್ಮೆ ಹೆಚ್ಚು ಅಥವಾ ಕಡಿಮೆಯೂ ಆಗಿರಬಹುದು.

"Gangavadi was divided into 96 divisions as nadus and each division was supposed to have 1000 villages in it" [೨೫೭]

ಕರ್ನಾಟಕ ಶಾಸನ ಪಿತಾಮಹ ಬಿ.ಎಲ್.ರೈಸ್‌ರವರು ಇಂತಹ ಸಂಖ್ಯೆಗಳು ಪ್ರಾಚೀನ ರಾಜ್ಯಗಳ ಪ್ರಾದೇಶಿಕ ವಿಭಾಗಗಳಲ್ಲಿ ಬರುತ್ತಿದ್ದಂತಹ ಆದಾಯದ ಪ್ರಮಾಣವನ್ನು ಸೂಚಿಸುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕೆಲವು ಆಡಳಿತ ವಿಭಾಗಗಳ ಸಂಖ್ಯೆಯನ್ನು ಗಮನಿಸಿದರೆ ಇದು ಪ್ರಶ್ನಾರ್ಥಕವಾಗಿದೆ. (ಉದಾ:ಬೆಳ್ವೊಲ೩೦೦, ಮುಳುಗುಂದ೧೨, ಇತ್ಯಾದಿ)

ಈ ರೀತಿಯಾಗಿ ಗಮನಿಸಿದರೆ ಗಂಗವಾಡಿ೯೬೦೦೦ ಎನ್ನುವುದು ಕೋಲಾರ ಜಿಲ್ಲೆಯನ್ನು ಮಾತ್ರವಲ್ಲದೆಯೇ ದಕ್ಷಿಣ ಭಾರತದ ಹಲವಾರು ಪ್ರದೇಶಗಳನ್ನು ವ್ಯಾಪಿಸಿತ್ತು. ಸುಮಾರು ೮ ಶತಮಾನಗಳಿಗೂ ಹೆಚ್ಚು ಕಾಲ ಕರ್ನಾಟಕದ ದಕ್ಷಿಣ ಭಾಗವಲ್ಲದೆಯೇ ಇತರ ಹಲವಾರು ಭಾಗಗಳನ್ನು ಆಳಿದಂತಹ ಗಂಗರು ರಾಜ್ಯಾಡಳಿತದಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ. ಭಾರತದಲ್ಲಿ ಅತಿ ದೀರ್ಘಕಾಲ ರಾಜ್ಯಭಾರ ಮಾಡಿದ ಕೆಲವು ಸಣ್ಣ ಅರಸು ಮನೆತನಗಳಲ್ಲಿ ಗಂಗರ ಮನೆತನವೂ ಒಂದು. ವಿಶೇಷವೆಂದರೆ ಬೃಹತ್ತಾದ ಸಾಮ್ರಾಜ್ಯವನ್ನು ಹೊಂದಿದ್ದರೂ, ಆಡಳಿತದ ಸೌಲಭ್ಯಕ್ಕಾಗಿ ಸಣ್ಣ ಸಣ್ಣ ನಾಡುಗಳ ಅಥವಾ ಪ್ರಾಂತ್ಯಗಳ ರಚನೆಯನ್ನು ಮಾಡಿಕೊಂಡಿದ್ದರು.

ಗಂಗರು ಆಡಳಿತ ಮಾಡಲು ಪ್ರಾರಂಭಿಸಿದಾಗಿನಿಂದ ಗಂಗವಾಡಿ ೯೬೦೦೦ ಎನ್ನುವ ಆಡಳಿತ ವಿಭಾಗವು ಮುಂದುವರೆದಿತ್ತು. ಮುಂದೆ ಶ್ರೀಪುರುಷನ ಆಡಳಿತ ಕಾಲಕ್ಕಾಗಲೇ ಗಂಗರ ರಾಜಧಾನಿಯು ಕೋಲಾರದಿಂದ ತಲವನಪುರ ಅಥವಾ ತಲಕಾಡಿಗೆ ವರ್ಗಾವಣೆಯಾಗಿತ್ತು. ಚೋಳರು ತಲಕಾಡನ್ನು ವಶಪಡಿಸಿಕೊಂಡ ಮೇಲೆ ಗಂಗರ ಸಂಪೂರ್ಣ ಹತೋಟಿಯನ್ನು ಪಡೆಯಲು ಕೋಲಾರ ಪ್ರದೇಶದ ಮೇಲೂ ಆಕ್ರಮಣ ಮಾಡಿದ್ದರು. ಈ ಸಮಯದವರೆಗೂ ಗಂಗವಾಡಿ೯೬೦೦೦ವೆಂಬ ಆಡಳಿತ ವಿಭಾಗವು ಅಸ್ತಿತ್ವದಲ್ಲಿದ್ದು ನಂತರ ಚೋಳಮಂಡಲ (ನಿಕರಿಲಿ ಚೋಳಮಂಡಲ)ದೊಂದಿಗೆ ವಿಲೀನವಾಯಿತು.

ಗಂಗರಿಗೆ ಸಂಬಂಧಿಸಿದಂತಹ ಕೆಲವು ತಾಮ್ರಶಾಸನಗಳಲ್ಲಿ ದಾನದ ವಿಚಾರವನ್ನು ಹೇಳಿದ ನಂತರ ಆ ದಾನಕ್ಕೆ ಸಾಕ್ಷಿಗಳು ಯಾರೆಂಬುದಾಗಿ ತಿಳಿಸಿರುತ್ತಾರೆ. ಇಂತಹ ಶಾಸನಗಳಲ್ಲಿ ದಾನದ ಸಾಕ್ಷಿಗಳಾಗಿ ೯೬೦೦೦ ವಿಷಯಗಳ ಜನರು' ಎಂದು ತಿಳಿಸಿದೆ. ಶಾಸನಗಳಲ್ಲಿ ತಿಳಿಸಿರುವಂತೆ ೯೬೦೦೦ ಎನ್ನುವುದು ವಿಷಯವನ್ನು ತಿಳಿಸುತ್ತಿದ್ದು, ಆಧುನಿಕ 'ಜಿಲ್ಲೆಗೆ' ಸರಿಯಾಗಿ ನಿಲ್ಲುತ್ತದೆ. ಹಾಗಾಗಿ ೯೬೦೦೦ ಎನ್ನುವುದು ೯೬ ಸಾವಿರ ಜಿಲ್ಲೆಗಳ ಸಂಖ್ಯೆಯನ್ನು ಸೂಚಿಸಿತ್ತಿರಬಹುದು.

೨.೩.೨ ಗಂಗ ೬೦೦೦

ಗಂಗವಾಡಿ ೯೬೦೦೦ ಎನ್ನುವ ವಿಶಾಲ ರಾಜ್ಯದಲ್ಲಿ ಗಂಗ೬೦೦೦ ಎನ್ನುವುದು ಒಂದು ಉಪವಿಭಾಗವಾಗಿ ಕಂಡುಬರುತ್ತದೆ. ಈ ಪ್ರದೇಶವನ್ನು ನೊಳಂಬರಸರೇ ಹೆಚ್ಚಾಗಿ ಆಳ್ವಿಕೆ ನಡೆಸಿದ್ದರು. ಗಂಗ ಅರಸರ ಮೊದಲ ಆಡಳಿತ ಸ್ಥಾನವಾಗಿದ್ದ ಈ ಪ್ರದೇಶವು ನಂತರ ನೊಳಂಬರ ಮತ್ತು ಬಾಣರಸರ ಆಡಳಿತಕ್ಕೆ ಒಳಪಟ್ಟಿತ್ತು. ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕು, ಬಂಗಾರಪೇಟೆ, ಮಾಲೂರು ತಾಲ್ಲೂಕು ದಕ್ಷಿಣದಲ್ಲಿ ತಮಿಳುನಾಡಿನ ಗಡಿಪ್ರದೇಶ ಮತ್ತು ಬೆಂಗಳೂರು ಜಿಲ್ಲೆಯ ಪೂರ್ವದ ಭಾಗಗಳು ಈ ಪ್ರಾದೇಶಿಕ ಕೇಂದ್ರದ ವ್ಯಾಪ್ತಿಗೆ ಒಳಪಟ್ಟಿತ್ತು. ಅದಲ್ಲದೆಯೇ ನೊಳಂಬರಿಗೂ, ಗಂಗರಿಗೂ ಮಿತ್ರತ್ವವಿದ್ದುದರಿಂದ ಗಂಗರಿಂದ ಈ ಪ್ರದೇಶವನ್ನು ಉಡುಗೊರೆಯ ರೂಪದಲ್ಲಿ ಪಡೆದಿರಬಹುದು.[೨೫೮]

ಕೋಲಾರ ಜಿಲ್ಲೆಯಲ್ಲಿ ಗಂಗರ ಮತ್ತು ನೊಳಂಬರಸರ ಶಾಸನಗಳಲ್ಲಿ ಗಂಗ೬೦೦೦ದ ಉಲ್ಲೇಖವು ಕಂಡುಬರುತ್ತದೆ. ಮುಳಬಾಗಿಲು ತಾಲ್ಲೂಕಿನ ಆವನಿ ಹೋಬಳಿಯ ಮೇಲಗಾಣಿ ಗ್ರಾಮದ ಗಂಗ ದೊರೆ ಶ್ರೀಪುರುಷನ ಆಳ್ವಿಕೆಯ ಕಾಲದ ಶಾಸನ ದುಗ್ಗಮಾರನು ಗಂಗ೬೦೦೦ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೨೫೯]

ಶ್ರೀಪುರುಷನ ಮಗನಾದ ದುಗ್ಗಮಾರನು ಕುವಳಾಲನಾಡು೩೦೦ ಮತ್ತು ಗಂಗ೬೦೦೦ ಬಹುಶಃ ಪ್ರಾಂತ್ಯಾಧಿಕಾರಿಯ ರೂಪದಲ್ಲಿ ಆಳುತ್ತಿದ್ದಿರಬೇಕು. ಶ್ರೀಪುರುಷನು ತನ್ನ ರಾಜ್ಯವನ್ನು ಪ್ರಾಂತ್ಯಗಳಾಗಿ ವಿಭಾಗಿಸಿ ತನ್ನ ಮಕ್ಕಳಿಗೆ ನೀಡಿರಬಹುದು. ಅದಲ್ಲದೆಯೇ ದುಗ್ಗಮಾರನ ಮಹಾದೇವಿ ಕಂಚಿಯಬ್ಬೆಯು ಅಗಳಿಯನ್ನಾಳುತ್ತಿದ್ದಳೆಂದು ಇದೇ ಶಾಸನವು ತಿಳಿಸುತ್ತದೆ. ಶ್ರೀಪುರುಷನ ಆಳ್ವಿಕೆಯ ಕಾಲದಲ್ಲಿ ಗಂಗವಾಡಿ೬೦೦೦ವು ಪ್ರಧಾನವಾಗಿ ಗಂಗರಿಗೆ ಸೇರಿದ್ದಾಗಿದ್ದು ಶ್ರೀಪುರುಷನ ಮಗ ದುಗ್ಗಮಾರನೇ ಈ ಪ್ರಾಂತ್ಯದ ಅಧಿಕಾರಿಯಾಗಿದ್ದನೆಂಬ ವಿಚಾರವು ಮುಳಬಾಗಿಲು ತಾಲ್ಲೂಕಿನ ಬಿಸ್ಸನಹಳ್ಳಿ ಗ್ರಾಮದ ಶಾಸನದಿಂದ ವೇದ್ಯವಾಗುತ್ತದೆ.[೨೬೦] ನಂತರ ಕಾಲದಲ್ಲಿ ನೊಳಂಬರೇ ಗಂಗ-೬೦೦೦ವನ್ನು ಆಳ್ವಿಕೆ ನಡೆಸಿದಂತೆ ಶಾಸನಗಳು ತಿಳಿಸುತ್ತದೆ.

ಬಂಗಾರಪೇಟೆ ತಾಲ್ಲೂಕಿನ ಕಾರುಬೆಲೆಯ ಶಾಸನವು ನೊಳಂಬಾಧಿರಾಜ ಮಹೇಂದ್ರನು ಗಂಗ೬೦೦೦ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೨೬೧] ಬಂಗಾರಪೇಟೆಯ ದಾಸರ ಹೊಸಹಳ್ಳಿ ಹೋಬಳಿ ಹುಲಿಕುಂದ ಗ್ರಾಮದ ವೀರಗಲ್ಲು ಶಾಸನವು ಮಹಾಬಲಿ ಬಾಣರಸನು ಗಂಗ೬೦೦೦ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೨೬೨] ಹಿಂದೆ ತಿಳಿಸಿರುವಂತೆ ಸ್ವಲ್ಪ ಕಾಲ ನೊಳಂಬರ ಆಡಳಿತಕ್ಕೊಳಪಟ್ಟಿದ ಗಂಗ ೬೦೦೦ ಪ್ರಾಂತ್ಯವು ಚೋಳರ ಆಡಳಿತಾವಧಿಯಲ್ಲಿ ನಿಕಿರಲಿ ಚೋಳಮಂಡಲದ ವ್ಯಾಪ್ತಿಗೂ ಹೊಯ್ಸಳ ಆಡಳಿತಾವಧಿಯಲ್ಲಿ ಹೊಯ್ಸಳ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು.

ಡಾ.ದೇವರ ಕೊಂಡಾ ರೆಡ್ಡಿಯವರು ಮೊರಸುನಾಡು ಮತ್ತು ಗಂಗ೬೦೦೦ವು ಒಂದೇ ಎಂದು ಅಭಿಪ್ರಾಯ ಪಡುತ್ತಾರೆ.[೨೬೩] ೬೦೦೦ ಗ್ರಾಮಗಳನ್ನು ಹೊಂದಿದ್ದಂತಹ ಈ ಸಣ್ಣ ಆಡಳಿತ ವಿಭಾಗವು ನೊಳಂಬರಿಗೆ ಪ್ರಮುಖ ಆಡಳಿತ ವಿಭಾಗವಾಗಿತ್ತು.

೨.೩.೪. ಬಾಣರಸರ ನಾಡು

ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಹೆಸರಿಸಲ್ಪಟ್ಟ ಬಾಣರಸರು ಪ್ರಬಲರಾಗಿದ್ದು ಸ್ವತಂತ್ರವಾದ ರಾಜ್ಯವನ್ನು ಕಟ್ಟಿದ್ದರು. ನಂತರ ಕದಂಬರ ಆಳ್ವಿಕೆಯಲ್ಲಿ ಪ್ರಬಲರಾಗಿದ್ದಂತೆ ಕಂಡುಬರುವ ಬಾಣರು ಕರ್ನಾಟಕದ ಪೂರ್ವ ಮತ್ತು ಆಗ್ನೇಯದ ಪ್ರದೇಶದಲ್ಲಿ ರಾಜ್ಯವನ್ನು ಕಟ್ಟಿರುವಂತೆ ಕಂಡುಬರುತ್ತದೆ.

ಬಾಣರಸರು ತಮ್ಮ ಶಾಸನಗಳಲ್ಲಿ ನಂದಗಿರಿನಾಥ, ಪರುವಿ ಪುರವರಾಧೀಶ್ವರ ಮೊದಲಾಗಿ ಕರೆದುಕೊಂಡಿದ್ದಾರೆ.[೨೬೪] ಗಂಗ ಅರಸರು ಕುವಳಾಲಕ್ಕೆ ಬರುವುದಕ್ಕಿಂತ ಮೊದಲು ಬಾಣರು ಈ ಪ್ರದೇಶದಲ್ಲಿ ಪ್ರಧಾನರಾಗಿದ್ದಿರಬಹುದು. **'ಶ್ರೀಮಹಾಬಲಿ ಬಾಣರಸರ್ ಗಂಗ ಆರು ಸಾಸಿರಮನಾಳೆ.** .' ಎಂದು ಹುಲಿಕುಂದ ಗ್ರಾಮದ ಶಾಸನವು[೨೬೫] ವರ್ಣಿಸುತ್ತಿದ್ದು, ಬಾಣರಸರು ಗಂಗ-ಆರು ಸಾವಿರಕ್ಕೂ ಪ್ರಧಾನರಾಗಿದ್ದರು. ಹಿಂದೆ ತಿಳಿಸಿರುವಂತಹ 'ನಂದಗಿರಿ' ಎನ್ನುವುದು ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ನಂದಿಬೆಟ್ಟವಾಗಿದ್ದು, ಪರುವಿ ಎನ್ನುವುದು ಇಂದಿನ ಆಂಧ್ರಪ್ರದೇಶ ರಾಜ್ಯದ ಮಡಕ ಸಿರಾ ಜಿಲ್ಲೆಯ 'ಪರಿಗಿ' ಎನ್ನುವ ಸ್ಥಳವಾಗಿದೆ. ಹಾಗಾಗಿ ಆಂಧ್ರಪ್ರದೇಶದ ಗಡಿಭಾಗದಿಂದ ಕೋಲಾರದ ಅಂತ್ಯದವರೆಗೂ ಬಾಣರಸರ ನಾಡು ಹರಡಿತ್ತೆಂದು ತೀರ್ಮಾನಿಸಬಹುದಾಗಿದೆ.

ಮುಳಬಾಗಿಲು ತಾಲ್ಲೂಕಿನ ಮುಡಿಯನೂರು ಗ್ರಾಮದ[೨೬೬] ವಿಶೇಷವಾದ ತಾಮ್ರಶಾಸನವು ಬಾಣರಸರ ಸಾಮ್ರಾಜ್ಯವನ್ನು ಈ ರೀತಿಯಾಗಿ ವರ್ಣಿಸಿದೆ.

"ಆಂಧ್ರ ಮಂಡಲೇ ದ್ವಾದಶ ಸಹಸ್ರ ಗ್ರಾಮ ಸಂಪಾದಿತ

ಸಪ್ತಾರ್ಧಲಕ್ಷ ವಿಷಯಾಧಿಪತೇ. . . ."

ಆಂಧ್ರ ಮಂಡಲದ ೧೨,೦೦೦ ಗ್ರಾಮಗಳು, ಏಳೂವರೆ ಲಕ್ಷ ವಿಷಯಗಳು ಬಾಣರಾಜ್ಯದಲ್ಲಿ ಅಂತರ್ಗತವಾಗಿತ್ತೆಂದು ಉಲ್ಲೇಖಿಸುತ್ತದೆ. ಈ ಶಾಸನವನ್ನು ಗಮನಿಸಿದರೆ ಬಾಣರ ಸಾಮ್ರಾಜ್ಯವು ಆಂಧ್ರಪದೇಶದ ಗಡಿಭಾಗದ ಹೆಚ್ಚಿನ ಪ್ರದೇಶವನ್ನು ಆವರಿಸಿತ್ತೆಂದು ತಿಳಿಯಬಹುದು.

ಬಾಣರಸ ರಾಜ್ಯದ ವಿಸ್ತಾರದ ವಿಷಯವಾಗಿ ಶಾಸನಗಳು ಮೌನ ವಹಿಸಿದಂತೆ ತೋರುತ್ತದೆ. ಕೋಲಾರ ಜಿಲ್ಲೆಯ ಬಾಣರಸ ಶಾಸನಗಳನ್ನು ಗಮನಿಸಿದರೆ ಬಾಣರಸರ ವಿಸ್ತಾರದ ಕುರಿತಾಗಿ ಅಷ್ಟೇನೂ ಮಾಹಿತಿ ದೊರಕುತ್ತಿಲ್ಲ. ಆದರೆ ಮುಳಬಾಗಿಲು ತಾಲ್ಲೂಕಿನ ಬಂಗವಾಡಿ ಗ್ರಾಮದ ಸೋಮೇಶ್ವರ ದೇವಾಲಯದ ವೀರಗಲ್ಲು ಶಾಸನವು[೨೬೭] "ಬಾಣರಸರಾ ಮಹಾರಾಜರಾ ನಾಡಗೊಂಡು ನೊಳಂಬ. . . ."ಎಂದು ಬಾಣರಸರಸರ ನಾಡನ್ನು ಹೆಸರಿಸಿದೆ. ಇದೇ ಮುಳಬಾಗಿಲಿನ ಇನ್ನೊಂದು ಶಾಸನವು 'ಬಾಣರವಾಡಿ' ಎಂಬ ಶಬ್ದವನ್ನು ಪ್ರಯೋಗಿಸಿದೆ.[೨೬೮]

ಬಾಣರಿಗೆ ಸಂಬಂಧಿಸಿದಂತಹ ಕನ್ನಡ ಮತ್ತು ತಮಿಳು ಶಾಸನಗಳಲ್ಲಿ 'ಬಡುಗವರ ಪನ್ನಿಚ್ಛಾಸಿರ' ಮತ್ತು ವಡುಗವರ ಮೇಕ್ಕು' ಎಂದು ಪ್ರಯೋಗವಾಗಿದೆ.[೨೬೯] 'ಬಡಗವರ' ಅಥವಾ ವಡುಗವರ ಎಂಬುವುದು ಬಡಗು ದಿಕ್ಕಿನ ರೂಪಾಂತರವಾಗಿದ್ದು ಉತ್ತರದ ದಿಕ್ಕು ಎಂದು ಊಹಿಸಬಹುದು. ಅದಲ್ಲದೆಯೇ

ತಮಿಳುಭಾಷೆಯಲ್ಲಿ ವಡಗರ ಎಂದರೆ ಉತ್ತರವೆಂದಾಗುತ್ತದೆ. ಹಾಗಾಗಿ ತಮಿಳುನಾಡಿನ ಉತ್ತರಕ್ಕೆ ಇದ್ದಂತಹ ಪ್ರದೇಶವು ಬಾಣರ ಆಡಳಿತ ವಿಭಾಗವಾಗಿರಬೇಕು. ಇದಲ್ಲದೆಯೇ ಮುಡಿಯನೂರು ಶಾಸನದಲ್ಲಿ ಬಾಣರಸ ನಾಡನ್ನು ಆಂಧ್ರಪ್ರದೇಶದಲ್ಲಿದ್ದುದನ್ನು ಹಿಂದೆಯೇ ಗಮನಿಸಿದ್ದೇವೆ. ಹಾಗಾಗಿ ಬಾಣರವಾಡಿಯು ಆಂಧ್ರಪ್ರದೇಶದ ದಕ್ಷಿಣಭಾಗವನ್ನೊಳಗೊಂಡಂತೆ ಕರ್ನಾಟಕ ಮತ್ತು ತಮಿಳುನಾಡಿನ ಗಡಿಭಾಗವನ್ನು ಆವರಿಸಿತ್ತು.

ಬಾಣರ ರಾಜ್ಯಕ್ಕೆ 'ಪೆರ್ಬಾಣವಾಡಿ' ಎಂಬ ಹೆಸರಿತ್ತಂತೆ ಚೋಳರ ಕಾಲದ ಶಾಸನಗಳು ಪ್ರತಿಪಾದಿಸುತ್ತವೆ. **"ಜಯಗೊಂಡ ಚೋಳ ಮಂಡಲದ ಪಡವೂರ ಕೊಟ್ಟಂನ ಪೆರುಂಬಾಣಪ್ಪಾಡಿಯ ಪುಲಿನಾಡಿಗೆ ಸೇರಿದ ಮುಕ್ಕೈವಾಡಿ"** ಎಂಬುವುದಾಗಿ ಚೋಳ ರಾಜೇಂದ್ರನಿಗೆ ಸಂಬಂಧಿಸಿದ ಪುಂಗನೂರು ಶಾಸನವು ತಿಳಿಸುತ್ತದೆ.[೨೭೦] ಪೆರ್ಬಾಣವಾಡಿ ಎಂಬುವುದು ಪೆರುಂಬಾಣಪ್ಪಾಡಿಯ ರೂಪಾಂತರವಾಗಿರಬಹುದು. ಪೆರುಂಬಾಣಪಾಡಿ ಎಂಬಲ್ಲಿ ಪೆರುಂಬಾಣ ಮತ್ತು ಪಾಡಿ ಎಂದು ವಿಭಾಗಗಳಿದ್ದು ಪಾಡಿ ಎಂಬುವುದು ಪ್ರದೇಶವನ್ನು ಸೂಚಿಸಿದರೆ, ಪೆರುಂಬಾಣ ಎನ್ನುವುದು ವಂಶವನ್ನು ಸೂಚಿಸುತ್ತದೆ. ಪೆರುಂ ಎಂಬುವುದು ಬೃಹತ್ ಶಬ್ದದ ರೂಪಾಂತರವಾಗಿದೆ. ಹಾಗಾಗಿ ಕದಂಬರ ತಾಳಗುಂದ ಶಾಸನದಲ್ಲಿ ಉಕ್ತವಾಗಿರುವ ಬೃಹತ್ ಬಾಣ ಶಬ್ದವು ಪೆರುಂಬಾಡಿ ಶಬ್ದವನ್ನು ಸೂಚಿಸುತ್ತದೆ ಎಂದು ಡಾ.ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯವಾಗಿದೆ.[೨೭೧] ಪೆರುಂಬಾಣ ಪಾಡಿಯು ಚೋಳರಸ ಶಾಸನಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿದೆ.

೨.೩.೪ ಮೊರಸುನಾಡು

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ ಸೇರಿಕೊಂಡು ಇದ್ದಂತಹ ಸಣ್ಣ ಪ್ರಾದೇಶಿಕ ವಿಭಾಗ ಮೊರಸುನಾಡು, ಬೆಂಗಳೂರು ಜಿಲ್ಲೆಯ ಹೊಸಕೋಟೆ, ಆನೇಕಲ್ಲು ತಾಲ್ಲೂಕು, ತಮಿಳುನಾಡು ರಾಜ್ಯದ ಹೊಸೂರಿನ ಪ್ರದೇಶಗಳನ್ನೊಳಗೊಂಡಿತ್ತು. ಗಂಗ ದೊರೆಗಳ ಶಾಸನಗಳಿಂದಾರಂಭಿಸಿ ವಿಜಯನಗರದರಸರ ಶಾಸನಗಳಲ್ಲೂ ಮೊರಸುನಾಡಿನ ಉಲ್ಲೇಖವು ದೊರೆಯುತ್ತದೆ. ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ತಮಿಳುಶಾಸನದಲ್ಲಿ ಮೊರಸುನಾಡಿನ ಉಲ್ಲೇಖವು ಮೊದಲು ಕಂಡುಬರುತ್ತದೆ.[೨೭೨]

ಮೊರಸುನಾಡಿನ ಕುರಿತಾಗಿ ದೇವರ ಕೊಂಡಾರೆಡ್ಡಿಯವರು ಮಾನವಿಕ ಕರ್ನಾಟಕದಲ್ಲಿ ಚರ್ಚಿಸಿದ್ದಾರೆ.[೨೭೩] ಕರ್ನಾಟಕದಲ್ಲಿ ಪ್ರಸಿದ್ಧ ರಾಜಮನೆತನದವರ ರಾಜ್ಯಗಳಲ್ಲಿ ಪ್ರಾದೇಶಿಕ ವಿಭಾಗಗಳಾಗಿ ಹಲವಾರು 'ನಾಡು'ಗಳ ಹೆಸರು ದೊರೆಯುತ್ತದೆ. ಇಳವಂಜಿನಾಡು, ತೇಕಲ್ ನಾಡು, ಮೊರಸುನಾಡು ಮೊದಲಾದವು ಕೋಲಾರ ಪ್ರದೇಶದಲ್ಲಿ ಪ್ರಸಿದ್ಧವಾಗಿದ್ದಂತಹ ನಾಡುಗಳಾಗಿವೆ. ಬೆಂಗಳೂರಿನಲ್ಲಿ ದೊರಕಿರುವಂತಹ ಗಂಗ ದೊರೆ ಮಾಧವ ವರ್ಮನ ಶಾಸನವು ಮೊರಸನಾಡನ್ನು ಉಲ್ಲೇಖಿಸಿದೆ. ಕ್ರಿ.ಶ.೮೩೦ರ ಈ ಶಾಸನದಲ್ಲಿ ಈ ಉಲ್ಲೇಖವು ದೊರಕಿದೆ.[೨೭೪]

". . . . . ಕೊಣ್ಣಂದ ನಾಮಗೋತ್ರಸ್ಯ
ಶಕ್ತಿಶರ್ಮ ಪಡೆದದ್ದು ಮೊರಸನಾಡು ಪೆರ್ಪ್ಪುಸೊರ್ನಾಮ ."

ಶಕ ವರ್ಷ ೧೩೦೪ನೆಯ (ಕ್ರಿ.ಶ.೧೩೮೨) ದುಂದುಭಿ ಸಂವತ್ಸರಕ್ಕೆ ಸಂಬಂಧಿಸಿದಂತಹ ದೇವನಹಳ್ಳಿ ಶಾಸನವು 'ಮೊರಸುನಾಡ'ನ್ನು ಉಲ್ಲೇಖಿಸಿದೆ.[೨೭೫] ಇದಲ್ಲದೆಯೇ ವಿಜಯನಗರದರಸ ಅಚ್ಯುತರಾಯನ ಕಾಲದ

ಶಾಸನವು ಮೊರಸುನಾಡನ್ನು ಉಲ್ಲೇಖಿಸಿದೆ. ಇದು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೊರಕಿದ್ದು ಸಂಸ್ಕೃತ ಭಾಷೆಯಲ್ಲಿದೆ.[೨೬೬] ಮೇಲಿನ ಶಾಸನಗಳನ್ನು ಗಮನಿಸಿದರೆ 'ಮೊರಸುನಾಡು' ಎಂಬ ವಿಭಾಗವು ಪ್ರಚಲಿತದಲ್ಲಿ ಇತ್ತೇ ವಿನಃ ಅದರ ವಿಸ್ತಾರದ ಕುರಿತಾಗಿ ಮಾಹಿತಿಯು ಲಭ್ಯವಾಗುವುದಿಲ್ಲ.

ಬೆಂಗಳೂರಿನಲ್ಲಿದ್ದಂತಹ ಯಲಹಂಕ ನಾಡ ಪ್ರಭುಗಳೇ ಅಥವಾ ಅವರ ರಾಜ್ಯವೇ ಮೊರಸುನಾಡು ಎಂದು ವಾದಿಸಿರುವ ಕರ್ಲಮಂಗಲಂ ಶ್ರೀಕಂಠಯ್ಯನವರ ವಾದವನ್ನು ಡಾ.ದೇವರಕೊಂಡಾರೆಡ್ಡಿಯವರು ಅಲ್ಲಗಳೆದಿದ್ದಾರೆ. ಇದೇ ರೀತಿಯಾಗಿ ಎಂ.ವಿ.ಕೃಷ್ಣರಾಯರು ಯಣವಂಜಿ (ಇಳವಂಜಿ)ರಾಯರ ಇಳವಂಜಿನಾಡು ಮತ್ತು ಮೊರಸುನಾಡು ಒಂದೇ ಎಂಬ ವಾದವನ್ನು ಡಾ.ದೇವರಕೊಂಡಾರೆಡ್ಡಿಯವರು ನಿರಾಕರಿಸಿದ್ದಾರೆ.

ಆನೇಕಲ್ಲು ತಾಲ್ಲೂಕಿನಲ್ಲಿ ಮೊರಸೂರು ಎಂಬ ಪ್ರದೇಶವಿದ್ದು ಇದು ಮೊರಸುನಾಡಿಗೆ ಸೇರಿದ್ದುದರಿಂದ ಈ ಪ್ರದೇಶವು ಮೊರಸುನಾಡಿನ ಕೇಂದ್ರಸ್ಥಾನವಾಗಿದ್ದಿರಬಹುದು. ಹಾಗಾಗಿ ಮೊರಸೂರು ಎಂಬ ಪ್ರದೇಶವು ಕೇಂದ್ರಸ್ಥಾನವಾಗಿದ್ದುದರಿಂದ ಈ ನಾಡಿಗೆ ಮೊರಸುನಾಡು ಎಂದು ಹೆಸರು ಬಂದಿರಬಹುದು. ಜಾತಿವಾಚಕವಾಗಿಯೂ ಮೊರಸು ಶಬ್ದವನ್ನು ಬಳಸಿರುವುದು ಕಂಡುಬರುತ್ತಿದೆ. ಮೊರಸು ಒಕ್ಕಲಿಗರು ಎಂಬ ಪಂಗಡದವರು ಬೆಂಗಳೂರಿನ ದಕ್ಷಿಣ ಪ್ರಾಂತ್ಯ ಮತ್ತು ಆನೇಕಲ್ಲು ಪ್ರದೇಶದಲ್ಲಿ ಕಂಡುಬರುತ್ತಾರೆ. ಅವರು ವಾಸವಾಗಿದ್ದಂತಹ ನಾಡು ಮೊರಸುನಾಡು ಎಂದು ಕರೆದಿರಬಹುದು.

ಕೋಲಾರ ಪ್ರದೇಶದ ನೈರುತ್ಯ ಭಾಗದಲ್ಲಿರುವಂತಹ ಮಾಲೂರು ತಾಲ್ಲೂಕಿನ ಪ್ರದೇಶವು ನೇರವಾಗಿ ಯಾವುದೇ ರಾಜರುಗಳ ಪ್ರಭಾವಕ್ಕೆ ಬಿದ್ದಂತೆ ಕಂಡುಬರುವುದಿಲ್ಲ. ಗಂಗ೬೦೦೦, ಗರ್ಗ೬೦೦೦ ನೊಳಂಬವಾಡಿ ಎಳವಂಜಿನಾಡು ಹೀಗೆ ಬೇರೆ ಪ್ರಾಂತ್ಯಗಳಿಗೆ ಸೇರಿಹೋಗಿತ್ತೇ ವಿನಹ ಯಾವುದೇ ರಾಜಮನೆತನದವರ ಪ್ರಮುಖ ಕೇಂದ್ರವಾಗಿ ಗುರುತಿಸಿಕೊಂಡು ಬಂದಿಲ್ಲ. ಗಂಗ೬೦೦೦ ಎಂಬ ಪ್ರಾಂತ್ಯವು ಮೊರಸುನಾಡು ಪ್ರಾಂತ್ಯಕ್ಕೆ ಸೇರಿತ್ತು. ಗಂಗ೬೦೦೦ ಪ್ರಾಂತ್ಯವು ಕಾಲಕಾಲಕ್ಕೆ ಬೇರೆ ರಾಜಮನೆತನದವರ ಕೈವಶವಾಗುತ್ತಿತ್ತು. ಪ್ರಾರಂಭದಲ್ಲಿ ಗಂಗರ ಪ್ರಾಂತ್ಯವಾಗಿದ್ದ ಈ ಪ್ರದೇಶವು ಕೆಲವೊಮ್ಮೆ ಬಾಣರಸರಿಗೂ, ಕೆಲವೊಮ್ಮೆ ನೊಳಂಬರಸರಿಗೂ ಸೇರಿಹೋಗಿತ್ತು. ಈ ರೀತಿಯಾಗಿ ಒಮ್ಮೆ ಗಂಗರಸರ ಕೈವಶವಾಗುತ್ತಿದ್ದ ಈ ಪ್ರದೇಶವು ಪದೇ ಪದೇ ಅವರ ಕೈಯಿಂದ ತಪ್ಪಿಹೋಗುತ್ತಿತ್ತು. ಪದೇ ಪದೇ ತಮ್ಮ ವಶದಿಂದ ಬೇರೆಯವರ ವಶಕ್ಕೆ ಹೋಗುತ್ತಿದ್ದಂತಹ ಈ ಪ್ರದೇಶವನ್ನು ಗಂಗರಸರು ಮೊರಸುನಾಡು ಎಂದು ಕರೆದಿರಬಹುದು. ಅದಲ್ಲದೆಯೇ ಗಂಗ೬೦೦೦ ಮತ್ತು ಮೊರಸುನಾಡುಗಳ ಪ್ರದೇಶ ವ್ಯಾಪ್ತಿಯು ಒಂದೇ ಆಗಿದೆ. ಹಾಗಾಗಿ ಮೊರಸುನಾಡು ಎಂಬುವುದು ಗಂಗ೬೦೦೦ ಪ್ರಾಂತ್ಯಕ್ಕೆ ಸೇರಿಹೋಗಿದ್ದ ಆಡಳಿತ ವಿಭಾಗವೆಂದು ಡಾ.ದೇವರಕೊಂಡಾರೆಡ್ಡಿಯವರ ಅಭಿಪ್ರಾಯವಾಗಿದೆ.

ಮೊರಸುನಾಡು ಶಾಸನಗಳಲ್ಲಿ ಬಹಳ ಅಲ್ಪವಾಗಿ ಪ್ರಯುಕ್ತವಾಗಿದೆ. ಅದಲ್ಲದೆಯೇ ಗಂಗ ದೊರೆಯಾದ ಮಾಧವವರ್ಮನ ಆಡಳಿತಕ್ಕೆ ಸಂಬಂಧಿಸಿದಂತಹ ಶಾಸನದಲ್ಲಿ ಮೊರಸುನಾಡಿನ ಉಲ್ಲೇಖವಿರುವುದರಿಂದ ಮೊರಸುನಾಡು ಗಂಗರಿಗೆ ಸಂಬಂಧಿಸಿದಂತಹ ಪ್ರದೇಶವಾಗಿತ್ತು. ಗಂಗರ ೬೦೦೦ ಪ್ರಾಂತ್ಯವನ್ನು ನೊಳಂಬರಿಗೆ ನೀಡಿದಂತಹ ಸಂದರ್ಭದಲ್ಲಿ ಮೊರಸುನಾಡು ಎಂದು ಕರೆಯಲ್ಪಡುತ್ತಿದ್ದಂತಹ ಪ್ರದೇಶವು ನೊಳಂಬರಿಗೆ ಸೇರಿ ಹೋಗಿರಬಹುದು. ಹಾಗಾಗಿ ಮೊರಸುನಾಡು ಎನ್ನುವುದು ಗಂಗ೬೦೦೦ಕ್ಕೆ ಇದ್ದಂತಹ ಇನ್ನೊಂದು ಹೆಸರು ಅಥವಾ ಗಂಗ ೬೦೦೦ ಪ್ರದೇಶದಲ್ಲಿಯೇ ಮೊರಸುನಾಡು ಸೇರಿತ್ತೆಂಬ ಡಾ.ದೇವರಕೊಂಡಾರೆಡ್ಡಿಯವರ ಅಭಿಪ್ರಾಯವನ್ನು ಒಪ್ಪಿಕೊಳ್ಳಬಹುದಾಗಿದೆ.

೨.೩.೫. ನೊಳಂಬವಾಡಿ

ನೊಳಂಬರು ಹೆಂಜೇರು ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಆಂಧ್ರಪ್ರದೇಶ ಮತ್ತು ಕರ್ನಾಟಕದ ಗಡಿ ಪ್ರದೇಶಗಳ ಪ್ರಾಂತ್ಯವನ್ನು ಆಳುತ್ತಿದ್ದರು. ಇವರಿಗೆ ಸಂಬಂಧಿಸಿದಂತಹ ಹೇಮಾವತಿ ಶಾಸನವು ನೊಳಂಬರ ವಿಷಯವಾಗಿ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತದೆ. ಮೊದಲು ನೊಳಂಬರ ಆಳ್ವಿಕೆಯ ಪರಿಧಿಯು ಆಂಧ್ರಪ್ರದೇಶದ ಮಡಕ ಸಿರಾದಲ್ಲಿರುವ ಹೇಂಜೇರುವಿನ ಸುತ್ತಮುತ್ತಲ ಪ್ರದೇಶಕ್ಕೆ ಸೀಮಿತವಾಗಿತ್ತು. ಈ ಪ್ರದೇಶವನ್ನು ನೊಳಂಬಳಿಗೆ ೧೦೦೦ ಎಂದು ಕರೆಯುತ್ತಿದ್ದರು. ಈ ಪ್ರದೇಶಕ್ಕೆ ಕೋಲಾರ ಜಿಲ್ಲೆಯು ಸೇರಿರಲಿಲ್ಲ. ನೊಳಂಬರ ದೊರೆ ಮಹೇಂದ್ರನು ನೊಳಂಬಳಿಗೆ ನಾಡನ್ನು ಉತ್ತರದಲ್ಲಿ ಅಂದರೆ ಚಿತ್ರದುರ್ಗ ಜಿಲ್ಲೆ ಮತ್ತು ತುಮಕೂರು ಜಿಲ್ಲೆಯ ಪ್ರದೇಶಗಳಲ್ಲಿ ವಿಸ್ತರಿಸಲು ಪ್ರಯತ್ನಿಸುತ್ತಾನೆ. ಹಾಗಾಗಿ ಮಹೇಂದ್ರನ ಕಾಲಕ್ಕೆ ಕೋಲಾರ ಜಿಲ್ಲೆಯು ನೊಳಂಬ ಆಳ್ವಿಕೆಗೆ ನೇರವಾಗಿ ಒಳಪಟ್ಟಿರಲಿಲ್ಲ.

ಒಂದನೆಯ ಮಹೇಂದ್ರನ ಪುತ್ರನಾದ ಅಯ್ಯಪ್ಪದೇವನು ಮಹತ್ವಾಂಕ್ಷೆಯ ದೊರೆಯಾಗಿದ್ದನು. ಈತನು ನೊಳಂಬವಾಡಿಯನ್ನು ದಕ್ಷಿಣಭಾಗದಲ್ಲಿ ವಿಸ್ತರಿಸಿದನು. ಹಾಗಾಗಿ ಅಯ್ಯಪದೇವ ಆಡಳಿತಾವಧಿಯಲ್ಲಿ ಕೋಲಾರ ಜಿಲ್ಲೆಯು ನೊಳಂಬರ ನೇರ ಆಡಳಿತಕ್ಕೊಳಪಟ್ಟಿತ್ತು. ಹಾಗಾಗಿ ಇವನ ಕಾಲದ ನಂತರ ನೊಳಂಬರ ಶೈಲಿಯ ದೇವಾಲಯಗಳು ಹೆಚ್ಚಾಗಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ಈ ಅವಧಿಯಲ್ಲಿ ನೊಳಂಬವಾಡಿಯು ನೊಳಂಬಳಿಗೆ ೧೦೦೦ದಿಂದ ವಿಸ್ತಾರವಾಗಿ ನೊಳಂಬವಾಡಿ ೩೨೦೦೦ವಾಗಿ ರೂಪಾಂತರವಾಗಿತ್ತು. ಅಯ್ಯಪದೇವನ ಆಡಳಿತಕ್ಕಿಂತ ಮೊದಲಿದ್ದಂತಹ ಪ್ರದೇಶವನ್ನೊಳಗೊಂಡಂತೆ ಬೆಂಗಳೂರು–ಕೋಲಾರ, ಆಂಧ್ರಪ್ರದೇಶದ ಗಡಿಭಾಗಗಳ ತಾಲ್ಲೂಕುಗಳು ಮತ್ತು ತಮಿಳುನಾಡಿನ ಗಡಿಭಾಗದ ತಾಲ್ಲೂಕುಗಳನ್ನು ಒಳಗೊಂಡಿದ್ದು ವಿಸ್ತಾರವಾಗಿ ಬೆಳೆದಿತ್ತು. ಹೆಂಜೇರುವಿನಿಂದ ಪ್ರಾರಂಭವಾದಂತಹ ನೊಳಂಬರ ರಾಜ್ಯವು ಅಂತಿಮವಾಗಿ ಹೊಸಪೇಟೆ ತಾಲ್ಲೂಕಿನ ಕಂಪ್ಲಿಯಲ್ಲಿ ನೆಲೆನಿಂತ ಹಾಗೆ ಕಂಡುಬರುತ್ತದೆ. ಹೆಂಜೇರು ಅಥವಾ ಹೇಮಾವತಿಯನ್ನು ಕೇಂದ್ರವಾಗಿರಿಸಿಕೊಂಡು ಆಧುನಿಕ ತುಮಕೂರು, ದಾವಣಗೆರೆ ಮತ್ತು ಅಂಧ್ರಪ್ರದೇಶಗಳ ಗಡಿಪ್ರದೇಶವನ್ನು ವ್ಯಾಪ್ತಿಯನ್ನಾಗಿ ಪಡೆದುಕೊಂಡಿತ್ತು. ನಂತರ ನೊಳಂಬ ದೊರೆ ಒಂದನೆಯ ಮಹೇಂದ್ರನ ಆಡಳಿತಾವಧಿಯಲ್ಲಿ ನೊಳಂಬರ ರಾಜ್ಯವು ಆಗ್ನೇಯ ಭಾಗದಲ್ಲಿ ವಿಸ್ತಾರವಾಗುತ್ತಾ ಬಂದು ಕೋಲಾರ ಜಿಲ್ಲೆಯನ್ನು ವ್ಯಾಪಿಸಿತ್ತು. ಈ ರೀತಿಯಾಗಿ ಕೋಲಾರ ಜಿಲ್ಲೆಯನ್ನು ಪ್ರವೇಶಿಸುವಾಗ ನೊಳಂಬರು ಗಂಗ ೬೦೦೦ ಪ್ರಾಂತ್ಯವನ್ನು ಸ್ವಲ್ಪ ಕಾಲ ನೇರವಾಗಿಯೋ ಅಥವಾ ಸಾಂಮತರಾಗಿಯೋ ಆಳ್ವಿಕೆ ನಡೆಸಿದ್ದಿರಬಹುದು. ನೊಳಂಬರು ಕಂಪ್ಲಿಯನ್ನು ಕೇಂದ್ರವಾಗಿರಿಸಿಕೊಂಡು ಆಳ್ವಿಕೆ ನಡೆಸಲು ಪ್ರಾರಂಭಿಸುವವರೆಗೂ ನೊಳಂಬರ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ ಬಿದ್ದಿತ್ತು.

ನೊಳಂಬ ದೊರೆ ಸಿಂಹಪೋತ ಕಲಿ ನೊಳಂಭಾಧಿರಾಜನ ಮಗನಾದ ಚಾರು ಪೊನ್ನೇರನು ನೊಳಂಬರ ರಾಜ್ಯವಿಸ್ತಾರವನ್ನು ಮೊದಲು ಕೈಗೊಂಡನು. ಈತನು ತನ್ನ ರಾಜ್ಯವನ್ನು ನೊಳಂಬಳಿಗೆ ಸಾಸಿರ (೧೦೦೦) ಎಂದು ಕರೆದಿದ್ದನು. ಹಿಂದೆ ತಿಳಿಸಿದಂತೆ ನೊಳಂಬರ ರಾಜ್ಯವು ಆಗ್ನೇಯ ಭಾಗದಲ್ಲಿ ವಿಸ್ತಾರವಾದಂತೆ ನೊಳಂಬವಾಡಿ ೩೨,೦೦೦ ಎಂದು ರೂಪಾಂತರಗೊಂಡಿತ್ತು. ನೊಳಂಬ ದೊರೆ ಚಾರು ಪೊನ್ನೇರನು ನೊಳಂಬಳಿಗೆ ೧೦೦೦ ಮತ್ತು ನೀರ್ಗುಂದ ೩೦೦ನ್ನು ಆಳುತ್ತಿದ್ದನೆಂದು ಆತನಿಗೆ ಸಂಬಂಧಿಸಿದಂತಹ ಶಾಸನವು ತಿಳಿಸುತ್ತದೆ.[೨೭೭]

ಮುಂದೆ ನೊಳಂಬ ದೊರೆ ಅಯ್ಯಪದೇವನ ಆಡಳಿತಾವಧಿಯಲ್ಲಿ ನೊಳಂಬವಾಡಿಯು ನೊಳಂಬವಾಡಿ೩೨,೦೦೦ ಎಂದು ಪ್ರಸಿದ್ಧಿಯಾಯಿತು. ಈ ನೊಳಂಬವಾಡಿಯು ಕೋಲಾರ ಜಿಲ್ಲೆಯನ್ನೊಳಗೊಂಡಂತೆ ತುಮಕೂರು, ಬೆಂಗಳೂರು, ಚಿತ್ರದುರ್ಗ, ಬಳ್ಳಾರಿ, ಆಂಧ್ರಪ್ರದೇಶ ರಾಜ್ಯದ ಅನಂತಪುರ ಮತ್ತು ಚಿತ್ತೂರು ಜಿಲ್ಲೆಯ ಗಡಿಪ್ರದೇಶಗಳನ್ನೂ, ತಮಿಳುನಾಡು ರಾಜ್ಯದ ಧರ್ಮಪುರಿ ಜಿಲ್ಲೆಯ ಗಡಿಭಾಗಗಳನ್ನು ಹೊಂದಿತ್ತು. ನೊಳಂಬವಾಡಿಯ ಮೊದಲ ರಾಜಧಾನಿ ಹೆಂಜೇರುವಾಗಿದ್ದು ಅಂತಿಮವಾಗಿ ಕಂಪ್ಲಿಯಾಗಿ ಮಾರ್ಪಾಡಾಯಿತು. ನೊಳಂಬರಿಗೆ ಸಂಬಂಧಿಸಿರುವಂತಹ ದಾವಣಗೆರೆಯ ಶಾಸನವು ನೊಳಂಬವಾಡಿಯು 'ಲಕ್ಷ್ಮಿಗೆ ಜನ್ಮ ಭೂಮಿ' ಮತ್ತು ಸಮಸ್ತ ಜನರಿಗೆ ಸಂತಸವನ್ನು ಕೊಡುವ ಭೂಮಿಯೆಂದು ವರ್ಣಿಸಿದೆ.

"ನೋಡೆ ನೊಣಂಬವಾಡಿಯೊಳಗಗ್ಗದ ಸಾವಿರ ನಾಡಿನೊಳ್ ಕರಂ
ನಾಡೆಯು ಮೊಳ್ವುವೆತ್ತೆಸೆನ ಬೆಳ್ತುರು ಲಕ್ಷ್ಮಿಗೆ ಜನ್ಮಭೂಮಿ ಕೊಂ
ಡಾಡುವ ಭೋಗ ಭೂಮಿಗನುಸಾರಿ ಸಮಸ್ತ ಜನಕ್ಕೆ ಸಂತಸಂ
ಮಾಡಲು ಗಂಧ ಸಾಳಿಯುಂ . . ವನಾಳಿಯುಂ . . ಚೆಲ್ವಿನಾವಗಂ

೨.೩.೬ ಪುಲಿನಾಡು

ಕೋಲಾರ ಜಿಲ್ಲೆಯಲ್ಲಿ ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವಂತಹ ನಾಡುಗಳಲ್ಲಿ 'ಪುಲಿನಾಡು' ಒಂದಾಗಿದೆ. ಈ ಪ್ರದೇಶವು ಪ್ರಾಗೈತಿಹಾಸಿಕವಾಗಿ ಮತ್ತು ಚಾರಿತ್ರಿಕವಾಗಿ ಮಹತ್ವವನ್ನು ಪಡೆದಿದೆ. ಕರ್ನಾಟಕದ ಪೂರ್ವ ಭಾಗದ ಪ್ರದೇಶವನ್ನು ಆವರಿಸಿಕೊಂಡು ಆಧುನಿಕ ಕೋಲಾರ ತಾಲ್ಲೂಕು, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳೊಂದಿಗೆ ಆಂಧ್ರಪ್ರದೇಶದ ಸ್ವಲ್ಪಭಾಗವನ್ನು ಹೊಂದಿಕೊಂಡು ಇರುವಂತಹ ಈ ಪ್ರದೇಶವು ಅನೇಕ ಐತಿಹಾಸಿಕ ಸನ್ನಿವೇಶಗಳಿಗೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ ಈ ಪ್ರದೇಶವು ವೀರಭೂಮಿಯಾಗಿತ್ತು ಎಂಬ ವಿಚಾರವನ್ನು ಇಲ್ಲಿಯ ವೀರಗಲ್ಲು ಶಾಸನಗಳು ದೃಢಪಡಿಸಿವೆ.

ಈ ಹೆಸರಿನ ಸ್ಥಳವು ಆಧುನಿಕ ಕೋಲಾರ ಜಿಲ್ಲೆಯಲ್ಲಿ ದೊರೆಯದಿದ್ದರೂ ಈ ಸ್ಥಳದ ಶಬ್ದ ಉತ್ಪತ್ತಿಯನ್ನು ಅಚ್ಚಗನ್ನಡದಿಂದಲೇ ಸ್ವೀಕರಿಸಲಾಗಿದೆ. ಪುಲಿನಾಡು ಶಬ್ದದ ಉತ್ಪತ್ತಿಯನ್ನು ಕನ್ನಡದ ನಿಘಂಟಿನ ಸಹಾಯದಿಂದ ಸ್ವೀಕರಿಸಲಾಗಿದೆ. ಪುಲಿನಾಡು ಎಂಬ ಶಬ್ದದಲ್ಲಿ ಪುಲಿ ಮತ್ತು ನಾಡು ಎಂಬ ಎರಡು ಶಬ್ದಗಳಿದ್ದು ನಾಡು ಎಂದರೆ ಪ್ರದೇಶವಾಚಕವಾಗಿದೆ. ಪುಲಿ ಎಂದರೆ ಪ್ರಾಣಿವಾಚಕ ಶಬ್ದವಾದ ಹುಲಿಯಾಗಿದೆ. ಹಾಗಾಗಿ ಪ್ರಾಕೃತಿಕವಾಗಿ ಕಾಡುಪ್ರದೇಶಗಳಿಂದ ಸುತ್ತುವರಿದಂತಹ ಈ ಪ್ರದೇಶದಲ್ಲಿ ಹುಲಿಗಳ ಸಂಖ್ಯೆಯು ಅಧಿಕವಾಗಿದ್ದಿರಬಹುದು. ಆ ದೃಷ್ಟಿಯಿಂದ ಹುಲಿನಾಡು (ಪುಲಿನಾಡು) ಪ್ರಸಿದ್ಧಿಯಾಗಿದ್ದಿರಬಹುದು. ಈ ವಿಷಯವನ್ನು ಪುಷ್ಟೀಕರಿಸುವಂತಹ ಹಲವಾರು ವೀರಗಲ್ಲು ಸ್ಮಾರಕ ಶಾಸನಗಳು ಇಲ್ಲಿ ದೊರಕಿವೆ. ಹುಲಿಬೇಟೆಯ ವೀರಗಲ್ಲು ಶಾಸನಗಳು ದೊರೆತಿವೆ.

ಭೌಗೋಳಿಕವಾಗಿ ಗಮನಿಸಿದರೆ ಪುಲಿ ಶಬ್ದಕ್ಕೆ ಇನ್ನೂ ಎರಡು ಅರ್ಥವನ್ನು ಕಲ್ಪಿಸಬಹುದಾಗಿದೆ. ಪುಳಿ ಶಬ್ದಕ್ಕೆ ಹುಳಿ (ಹುಣಸೆಹುಳಿ) ಎಂದರ್ಥವಿದ್ದು, ಪ್ರಾಕೃತಿಕವಾಗಿ ಹುಣಿಸೆಮರಗಳು ಅಧಿಕವಾಗಿ ಬೆಳೆಯುವಂತಹ ಪ್ರದೇಶವೇ ಪುಲಿನಾಡಾಗಿರಬಹುದು. ಈ ಪ್ರದೇಶವು ಬೇಡ ಜನಾಂಗದವರಿಂದ ಕೂಡಿದುದಾಗಿದೆ. ಬೇಡ

ಜನಾಂಗದವರಿಗೆ 'ಪುಲಿಂದ' ಎಂಬ ನಾಮಾಂತರವಿದ್ದು, ಬೇಡರಿಂದ ಕೂಡಿರುವಂತಹ ಪ್ರದೇಶವು ಪುಲಿಂದ ನಾಡಾಗಿರಬಹುದು.

ಇನ್ನೊಂದು ಸ್ಥಳ ಐತಿಹ್ಯದ ಪ್ರಕಾರ ಈ ಪ್ರದೇಶದಲ್ಲಿ ಕಳವರ್ ಎಂಬಂತಹ ಬುಡಕಟ್ಟು ಜನಾಂಗದವರು ಪ್ರಸಿದ್ಧರಾಗಿದ್ದರು. ಈ ಜನಾಂಗದವರು ಮದನಪಲ್ಲಿ (ಆಂಧ್ರಪ್ರದೇಶ) ಸಮೀಪದ ಪುಲಿಕೊಂಡ ಪ್ರದೇಶದವರೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಈ ಜನಾಂಗದಲ್ಲಿ ಬಂದಂತಹ ಪುಲ್ಲಿಯೆಂಬುವವನು ಈ ಪ್ರದೇಶವನ್ನು ಆಳಿದ್ದನು. ಹಾಗಾಗಿ ಪುಲ್ಲಿ ಎಂಬುವವನು ಆಳಿದಂತಹ ಈ ನಾಡು 'ಪುಲಿನಾಡು' ಎಂದು ಪ್ರಸಿದ್ಧಿಗೆ ಬಂದಿರಬಹುದೆಂದು ಪಿ.ವಿ.ಕೃಷ್ಣಮೂರ್ತಿ ಅವರ ಅಭಿಪ್ರಾಯವಾಗಿದೆ.[೨೭೮] ಆದರೆ ಪ್ರಾಚೀನ ಕಾಲದಿಂದಲೇ ಈ ಪ್ರದೇಶವು ಪುಲಿನಾಡೆಂದು ಹೆಸರುಗೊಂಡಿರುವುದರಿಂದ ಈ ಐತಿಹ್ಯಕ್ಕೆ ಮಹತ್ವ ಕೊಡಬೇಕಾಗಿಲ್ಲ ಎಂದು ಡಾ.ದೇವರಕೊಂಡಾ ರೆಡ್ಡಿಯವರ ಅಭಿಪ್ರಾಯವಾಗಿದೆ.

ಶಾಸನಗಳಲ್ಲಿ ಈ ಪ್ರದೇಶವು ಪುಲಿನಾಡು೬೦, ಪುಲಿನಾಟ್ಟು ಮತ್ತು ಪುಲಿನಾಡು ಎಂದು ಉಲ್ಲೇಖವಾಗಿದೆ. ಬಹುಶಃ ಈ ಪ್ರದೇಶವು ೬೦ ಗ್ರಾಮಗಳನ್ನೊಳಗೊಂಡಂತಹ ಪ್ರದೇಶವಾಗಿದ್ದಿರಬಹುದು. ಮಲ್ಲನಾಯಕನಹಳ್ಳಿಯ ವೀರಗಲ್ಲು ಶಾಸನವು ಕುಂದತೂರು ಎಂಬಲ್ಲಿ ತುರುಗೋಳ್ ಕಾಳಗವು ನಡೆದಿದ್ದು, ಆ ಯುದ್ಧದಲ್ಲಿ ಮಡಿದ ವೀರನಿಗೆ "ಪುಲಿನಾಡು೬೦"ಯ ಕೊಡುಗೆಯಾಗಿ ನೀಡಿರುವುದನ್ನು ಉಲ್ಲೇಖಿಸಿದೆ.

ಈ ಪ್ರದೇಶವು ಶ್ರೀನಿವಾಸಪುರ, ಮುಳಬಾಗಿಲು, ಮತ್ತು ಆಂಧ್ರಪ್ರದೇಶದ ಗಡಿಪ್ರದೇಶವನ್ನು ಹೊಂದಿತ್ತು. ಈ ಪ್ರದೇಶವು ನೊಳಂಬರ ಆಡಳಿತಾವಧಿಯಲ್ಲಿ ಸಣ್ಣ ಪ್ರಾಂತ್ಯವಾಗಿ ಪ್ರಸಿದ್ಧಿಯಾಗಿತ್ತು. ಮುಳಬಾಗಿಲು ತಾಲ್ಲೂಕಿನ ಮಲ್ಲನಾಯಕನಹಳ್ಳಿಯ ವೀರಗಲ್ಲು ಶಾಸನವು 'ಪುಲಿನಾಡು' ಶಬ್ದದ ಪ್ರಯೋಗವನ್ನು ಮಾಡಿದೆ. ಮಹಾಬಲಿ ಬಾಣರಸ ಆಡಳಿತವನ್ನು ಉಲ್ಲೇಖಿಸಿರುತ್ತಿರುವಂತಹ ಈ ಶಾಸನವು ವೀರನೊಬ್ಬನಿಗೆ ಒಕ್ಕೊಂಡುಗ (ಒಂದು ಖಂಡುಗ) ಕಳನಿಯನ್ನು ನೀಡಿರುವಂತೆ ತಿಳಿಸುತ್ತದೆ. ಈ ಭೂಮಿಯನ್ನು ಪುಲಿನಾಡು೬೦ ಎಂಬ ಪ್ರಾದೇಶಿಕ ವಿಭಾಗದಲ್ಲಿ ಖರೀದಿಸಿ ನೀಡಲಾಗಿದೆಯೆಂದು ಶಾಸನವು ತಿಳಿಸುತ್ತದೆ.[೨೭೯]

ಇದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ವೀರಗಲ್ಲು ಶಾಸನವು ಇದೇ ರೀತಿಯಾದಂತಹ ವಿಷಯವನ್ನು ತಿಳಿಸುತ್ತದೆ. ಕುಂದತೂರು ಎಂಬಲ್ಲಿ ತುರುಗೋಳ್ ಕಾಳಗವು ನಡೆದಿರಲು ವೀರಮರಣವನ್ನು ಹೊಂದಿದ್ದಂತಹ ವ್ಯಕ್ತಿಗೆ ರಾಜನು ಒಂದು ಖಂಡುಗ ಭೂಮಿಯನ್ನು ನೀಡಿರುವನು. ಬಾಣರಸನು ಆಳ್ವಿಕೆ ನಡೆಸುತ್ತಿರಲು ಈ ಘಟನೆ ನಡೆದಂತೆ ತಿಳಿಯುತ್ತದೆ. ರಾಜನು ಪುಲಿನಾಡನ್ನು ಪಡೆದು ವೀರನಿಗೆ ಒಂದು ಖಂಡುಗ ಭೂದಾನವನ್ನು ನೀಡಿರುವಂತೆ ಶಾಸನವು ಉಲ್ಲೇಖಿಸಿದೆ.[೨೮೦]

ಬಾಣರಸ ಆಳ್ವಿಕೆಯ ಸಮಯದಲ್ಲೇ ಪುಲಿನಾಡು ೬೦ ಎಂಬ ವಿಭಾಗವು ಪ್ರಚಲಿತದಲ್ಲಿತ್ತು. ಮುಳಬಾಗಿಲು ತಾಲ್ಲೂಕಿನ ಬೈರಕೂರು ಹೋಬಳಿ ಪೆದ್ದನೆಗವರದಲ್ಲಿ ದೊರೆತಿರುವಂತಹ ಕಂಭ ಶಾಸನವು 'ಪುಲಿನಾಡ'ನ್ನು ಉಲ್ಲೇಖಿಸಿದೆ.[೨೮೧]

೯೩೮ನೆಯ ಶಕವರ್ಷಕ್ಕೆ ಸೇರಿದ ಈ ಶಾಸನವು ದೇವಾಲಯಕ್ಕೆ ದತ್ತಿಯನ್ನು ಬಿಟ್ಟ ಮಾಹಿತಿಯನ್ನು ಒದಗಿಸುತ್ತದೆಯಾದರೂ ಯಾವ ರಾಜನ ಆಳ್ವಿಕೆಯನ್ನು ತಿಳಿಸುತ್ತಿಲ್ಲ. ಪುಲಿನಾಡ ಮಲ್ಲಿಕಾರ್ಜುನ ದೇವಾಲಯದ ನಂದಾದೀವಿಗೆಗಾಗಿ ಭೂದಾನವನ್ನು ನೀಡಿರುವಂತೆ ಶಾಸನವು ತಿಳಿಸುತ್ತದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ತಾಲ್ಲೂಕು, ಪಲಮನೇರು ತಾಲ್ಲೂಕಿನ ಭಾಗಗಳು, ಕರ್ನಾಟಕದಲ್ಲಿ ಕೋಲಾರ ಜಿಲ್ಲೆಯ

ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲ್ಲೂಕಿನ ಪೂರ್ವದ ಭಾಗಗಳನ್ನು ಪಶ್ಚಿಮದಲ್ಲಿ ಹೊಂದಿಕೊಂಡಂತೆ ೬೦ ಗ್ರಾಮಗಳ ಸಣ್ಣ ಆಡಳಿತ ವಿಭಾಗಗಳಾಗಿ ಪುಲಿನಾಡು ಪ್ರಸಿದ್ಧವಾಗಿತ್ತೆಂದು ಗಮನಿಸಬಹುದಾಗಿದೆ.

೨.೩.೭. ನಿಕರಿಲಿ ಚೋಳಮಂಡಲ :-

ಕೋಲಾರ ಜಿಲ್ಲೆಯು ಕರ್ನಾಟಕದ ಪ್ರಧಾನ ರಾಜಮನೆತನಗಳ ಆಡಳಿತಕ್ಕೊಳಪಟ್ಟಂತೆ ಹೊರ ರಾಜ್ಯದವರ ಆಡಳಿತಕ್ಕೂ ಒಳಪಟ್ಟಿತ್ತು. ಇದಕ್ಕೆ ಚೋಳರ ಆಡಳಿತವೇ ನಿದರ್ಶನವಾಗಿದೆ. ಚೋಳರು ಕ್ರಿ.ಶ.೧೦ನೆಯ ಶತಮಾನದ ಅಂತ್ಯದಲ್ಲಿ ಕರ್ನಾಟಕವನ್ನು ಪ್ರವೇಶಿಸಿ ಕರ್ನಾಟಕದ ಪೂರ್ವ, ಆಗ್ನೇಯ ಮತ್ತು ದಕ್ಷಿಣದ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿದ್ದರು. ಚೋಳರು ತಾವು ಗೆದ್ದಂತಹ ಪ್ರದೇಶಗಳಿಗೆ ಚೋಳಮಂಡಲವೆಂಬ ಉಪನಾಮವನ್ನು ನೀಡಿರುವುದು ಕಂಡುಬರುತ್ತದೆ. ಇರಟ್ಟಪಾಡಿ ಚೋಳಮಂಡಲ, ಜಯಗೊಂಡ ಚೋಳಮಂಡಲ, ಮುಡಿಗೊಂಡ ಚೋಳಮಂಡಲ, ವಿಕ್ರಮಚೋಳ ಮಂಡಲ ಇತ್ಯಾದಿಯಾಗಿ ಚೋಳರ ಆಳ್ವಿಕೆಗೆ ಸಂಬಂಧಿಸಿದಂತಹ ಸ್ಥಳಗಳು ದೊರೆಯುತ್ತವೆ. ಇವುಗಳಲ್ಲಿ ಪ್ರಸಿದ್ಧವಾಗಿರುವಂತಹ ಆಡಳಿತ ವಿಭಾಗವೆಂದರೆ ನಿಕರಿಲಿ ಚೋಳಮಂಡಲ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲು, ಬಂಗಾರಪೇಟೆ ಮತ್ತು ಕೋಲಾರ ತಾಲ್ಲೂಕುಗಳಲ್ಲಿ ದೊರಯುವಂತಹ ಶಾಸನಗಳು ನಿಕರಿಲಿ ಚೋಳಮಂಡಲ ಶಬ್ದವನ್ನು ಪ್ರಯೋಗಿಸಿವೆ. ಚೋಳರಲ್ಲಿ ಪ್ರಸಿದ್ಧ ದೊರೆ ಒಂದನೆಯ ರಾಜ ರಾಜ ಚೋಳನು. ಚೋಳ ಸಾಮ್ರಾಜ್ಯವನ್ನು ಕರ್ನಾಟಕದಲ್ಲಿ ಹರಡುವಂತೆ ಮಾಡಿದುದರಲ್ಲಿ ಈತನು ಪ್ರಮುಖನು. ಈತನಿಗೆ 'ನಿಗರಿಲಿ ಚೋಳ' ಎಂಬ ಬಿರುದು ಇತ್ತು. ಚೋಳರು ಕರ್ನಾಟಕವನ್ನು ಪ್ರವೇಶಿಸುವಾಗ ಗಂಗರು ತಲಕಾಡನ್ನು ಕೇಂದ್ರವಾಗಿದ್ದು ಕೊಂಡು ಆಡಳಿತ ನಡೆಸುತ್ತಿದ್ದರು.[೨೮೨]

ಚೋಳರು ತಲಕಾಡನ್ನು ಆಕ್ರಮಣ ಮಾಡಿದ ಮೇಲೆ ಕೋಲಾರ ಪ್ರದೇಶವನ್ನು ವಶಪಡಿಸಿಕೊಂಡರು. ಈ ಸಂದರ್ಭದಲ್ಲಿ ನೊಳಂಬರು ಕೋಲಾರ ಪ್ರದೇಶವನ್ನು ಆಳುತ್ತಿದ್ದರು. ಹಾಗಾಗಿ ಚೋಳರು ಕೋಲಾರವನ್ನು ಪ್ರವೇಶಿಸುವಾಗ ನೊಳಂಬವಾಡಿಯನ್ನು ಗೆದ್ದು, ಆ ಪ್ರದೇಶಕ್ಕೆ ತನ್ನ ಹೆಸರನ್ನು ಸೇರಿಸಿ ನಿಕರಿಲಿ ಚೋಳ ಮಂಡಲವೆಂದು ಪ್ರತಿನಾಮಕರಣ ಮಾಡಿರುವನು. ಹಾಗಾಗಿ ಈ ಪ್ರದೇಶವು 'ನಿಕರಿಲಿ ಚೋಳಮಂಡಲ'ವೆಂದು ಪ್ರಸಿದ್ಧಿಯಾಯಿತು. ಈ ಪ್ರದೇಶವು ಕೋಲಾರ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶವಾಗಿತ್ತು. ನಿಕರಿಲಿ ಚೋಳ ಮಂಡಲ ಶಬ್ದದ ಪ್ರಯೋಗವು ರಾಜರಾಜ ಚೋಳನ ಶಾಸನದಿಂದ ವಿಜಯನಗರದರಸರ ಶಾಸನಗಳಲ್ಲೂ ದೊರೆಯುತ್ತಿದೆ. ಚೋಳರು ಕೋಲಾರ ಪ್ರದೇಶವನ್ನು ಆಕ್ರಮಣ ಮಾಡಿ ತಮ್ಮ ಕೈವಶಪಡಿಸಿ ಕೊಂಡ ಮೇಲೆ ಆಯಾಯಾ ಪ್ರದೇಶಗಳಲ್ಲಿ ಹಿಂದೆ ಯಾವ ರಾಜರು ಆಳ್ವಿಕೆ ನಡೆಸುತ್ತಿದ್ದರೋ ಅವರ ಹೆಸರಿಗೆ ಸಂಬಂಧಪಟ್ಟ ಹಾಗೆ ಬೇರೆ ಬೇರೆ ಹೆಸರನ್ನು ನೀಡಿರಬಹುದು. ಏಕೆಂದರೆ ನೊಳಂಬವಾಡಿಯನ್ನು ಗೆದ್ದು ನಿಕರಿಲಿ ಚೋಳ ಮಂಡಲವೆಂದು ಹೆಸರು ನೀಡಿರಬಹುದು. ಈ ಪ್ರದೇಶವು ಮಾಲೂರು ತಾಲೂಕನ್ನು ಒಳಗೊಂಡಿತ್ತು. ಚೋಳರು ರಾಷ್ಟ್ರಕೂಟರ ವಶದಲ್ಲಿದ್ದಂತಹ ಪ್ರದೇಶವನ್ನು ವಶಪಡಿಸಿಕೊಂಡು 'ರಟ್ಟವಾಡಿ' ಎಂದು ನಾಮಕರಣ ಮಾಡಿಕೊಂಡರು. ಹಾಗಾಗಿ ರಾಷ್ಟ್ರಕೂಟರ ಸಾಮ್ರಾಜ್ಯವನ್ನು 'ಇರಟ್ಟಪಾಡಿ' ಎಂದು ಚೋಳರು ಕರೆದಿರುವರು. ಚೋಳ ದೊರೆ ಒಂದನೆಯ ರಾಜೇಂದ್ರಚೋಳ(ಕ್ರಿ.ಶ.೧೦೧೩ರಿಂದ೧೦೪೫)ನಿಗೆ ಇರಟ್ಟರಾಜಕುಲಕಾಲನ್ ಎಂಬ ಬಿರುದು ಇತ್ತು.

೨.೩.೮ ಇತರೆ ನಾಡುಗಳು

"ಸ್ವಸ್ತಿ ಶ್ರೀಪುರುಷ ಮಹಾರಾಜ ಪೃ . . . ಜ್ಯಂಗೆಯ
ಅವರಾಮಗನ್ದಿದುಗ್ಗೆ ಮಾರೆಯೆ . . ಪ್ರೊ ಕೊವಳಲನಾಡು
ಮೂನುರುಂಗಂಗರು ಸಾಸಿ . . . ತಯನಾಡು, ಪನ್ನೆನಾಡು
ಬೆಳತ್ತೂನಾಡು, ವಿಮಲಯಂ . . . ಪುಲ್ವಕಿನಾಡು ಸಾಸಿರ
ಮುಬೆಪೋಡು ಸಾಸಿರಮು . . . . ನಾಡರುವತ್ತು ಮನಾಳುತ್ತಿರೆ
. . . .

ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿ[೨೮೩] ದೊರಕಿರುವಂತಹ ಶಾಸನವು ಹಲವಾರು ಸಣ್ಣ ಸಣ್ಣ ಪ್ರಾದೇಶಿಕ ವಿಭಾಗಗಳ ಹೆಸರನ್ನು ಸೂಚಿಸುತ್ತಿದೆ. ಶ್ರೀಪುರುಷನ ಮಗನಾದ ದುಗ್ಗಮಾರನು ಕುವಳಾಲ೩೦೦, ಗಂಗ ೬೦೦೦, ಮುಬೇಪೋಡು ೧೦೦೦, ಮೊದಲಾದ ನಾಡುಗಳನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಈ ಮೇಲೆ ಉಲ್ಲೇಖಿತ ನಾಡುಗಳಲ್ಲಿ ಕೆಲವನ್ನು ನೋಡೋಣ.

ಶಾಸನೋಕ್ತ ತಯನಾಡು, 'ತಾಯಲುನಾಡು' ಎಂಬುದರ ರೂಪಾಂತರವಾಗಿದೆ. 'ತಯನಾಡು೧೨' ಎಂಬುವುದು ಬಾಣರಸರ ಶಾಸನಗಳಲ್ಲಿ ಪ್ರಯುಕ್ತವಾಗಿದೆ.[೨೮೪] ಮುಳಬಾಗಿಲು ತಾಲ್ಲೂಕಿನಲ್ಲಿ 'ತಾಯಲೂರು' ಎಂಬ ಹೆಸರಿನ ಗ್ರಾಮವಿದ್ದು ಶಾಸನೋಕ್ತ ಸ್ಥಳವು ಇದೇ ಆಗಿರಬಹುದು. ತಾಯನೂರು ನಾಡಿನ ಉಲ್ಲೇಖವು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹರೂರು ತಾಲ್ಲೂಕಿನ ನವಲಿ ಶಾಸನದಲ್ಲೂ ದೊರೆಯುತ್ತದೆ.[೨೮೫]

ಪನ್ನೆನಾಡುವಿನ ಬಗ್ಗೆ ಉಲ್ಲೇಖವು ದೊರಕುವುದಿಲ್ಲ. ಪನ್ನೆನಾಡು ಪೊನ್ನಾಡವಿನ ರೂಪಾಂತರವಾಗಿರಬಹುದು.[೨೮೬] ಬೆಳತ್ತೂರು ನಾಡು ಎನ್ನುವುದು ಗೌರಿಬಿದನೂರು ತಾಲ್ಲೂಕಿನಲ್ಲಿರುವ ಬೆಳತೂರು ಗ್ರಾಮವಾಗಿದೆ. ಪುಲ್ವಾಕಿನಾಡು೧೦೦೦, ಎನ್ನುವುದು ಯಾವ ಪ್ರದೇಶವೆಂದು ತಿಳಿದುಬರುವುದಿಲ್ಲ. ಗುಡಿಬಂಡೆ ತಾಲ್ಲೂಕಿನಲ್ಲಿ ಪುಲವಮಾಕನಹಳ್ಳಿ ಎಂಬ ಗ್ರಾಮವಿದ್ದು, ಇದುವೇ ಪುಲ್ವಕಿನಾಡು೧೦೦೦ ಆಗಿರಬಹುದು. ಈ ನಾಡು ಸಾವಿರ ಗ್ರಾಮಗಳನ್ನು ಒಳಗೊಂಡಿತ್ತು. ಪ್ರಾಯಶಃ ಗುಡಿಬಂಡೆ ಮತ್ತು ಗೌರಿಬಿದನೂರು ತಾಲ್ಲೂಕಿನ ಪ್ರದೇಶಗಳನ್ನು ಈ ವಿಭಾಗಗಳು ಹೊಂದಿರಬಹುದು. ಬೇಪೋಡು ೧೦೦೦ ಎನ್ನುವುದು ಸಾವಿರ ಗ್ರಾಮಗಳನ್ನು ಹೊಂದಿರುವಂತಹ ಗ್ರಾಮವಾಗಿದೆ. ಇದು ಯಾವ ಪ್ರದೇಶವೆಂದು ಗುರುತಿಸಲಾಗುತ್ತಿಲ್ಲ. ಈ ಶಾಸನದಲ್ಲಿ ಪ್ರಯೋಗವಾಗಿರುವಂತಹ ಆಡಳಿತ ವಿಭಾಗಗಳು ಗಂಗ ಅರಸರ ಸಾಮ್ರಾಜ್ಯದ ವಿಸ್ತಾರವನ್ನು ತಿಳಿಸುತ್ತಿದೆ.

ರಾಜಮಹಾರಾಜರು ಒಂದಿಲ್ಲ ಒಂದು ರೀತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ತಮ್ಮ ವಿಸ್ತಾರವಾದಂತಹ ರಾಜ್ಯವನ್ನು ಹಲವಾರು ಸಣ್ಣ ಸಣ್ಣ ವಿಭಾಗಗಳನ್ನಾಗಿ ವಿಭಾಗಿಸಿ ಉತ್ತಮ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದರೆಂಬುದಕ್ಕೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ದೊರಕಿರುವಂತಹ ಶಾಸನವೇ ಸಾಕ್ಷಿಯಾಗಿದೆ. ನಾಡುಗಳು ಚೋಳರ ಆಡಳಿತಾವಧಿಯಲ್ಲಿ ಮಂಡಲಗಳಾಗಿ ವಿಭಾಗವಾಗಿತ್ತು. (ನಿಕಿರಲಿ ಚೋಳ ಮಂಡಲ, ರಾಜೇಂದ್ರ ಚೋಳಮಂಡಲ, ಇರಟ್ಟಪಾಡಿ ಚೋಳ ಮಂಡಲ ಇತ್ಯಾದಿ)

ರಾಜಕೀಯವಾಗಿ ಮತ್ತು ಜನಾಂಗೀಯ ಹಿನ್ನೆಲೆಯಿಂದಾಗಿ ನಾಡುಗಳ ರಚನೆಯಾಗಿರಬಹುದು. ಗಂಗ ೯೬೦೦೦, ಗಂಗ ೬೦೦೦, ನೊಳಂಬವಾಡಿ, ಬಾಣರವಾಡಿ ಮೊದಲಾದವುಗಳು ರಾಜಕೀಯವಾಗಿ ರೂಪುಗೊಂಡಿರುವಂತಹ ನಾಡುಗಳಾಗಿದ್ದರೆ, ಪುಲಿನಾಡು, ಬೆಳತ್ತೂರ್ನಾಡು, ಪುಲ್ವಕಿನಾಡು ಮೊದಲಾದವುಗಳು

ಜನಾಂಗೀಯ ಹಿನ್ನೆಲೆಯಿಂದಾಗಿ ಅಥವಾ ಸ್ಥಳಗಳ ಪ್ರಭಾವದಿಂದ ಉಂಟಾಗಿರುವಂತಹ ನಾಡುಗಳಾಗಿವೆ. ಇಂತಹ ನಾಡುಗಳು ರಾಜನಿಗೆ ಆಡಳಿತವನ್ನು ನಡೆಸಲು ಮಹದುಪಕಾರವನ್ನು ನೀಡುತ್ತಿದ್ದವು.

ನೆಕ್ಕುಂದಿನಾಡು ಬಾಣರಸರ ಶಾಸನಗಳಲ್ಲಿ ಉಕ್ತವಾಗಿರುವಂತಹ ನಾಡಾಗಿದೆ. ಕೋಲಾರ ತಾಲ್ಲೂಕಿನ ನುಕ್ಕನಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ವೀರಗಲ್ಲು ಶಾಸನವು 'ನೆಕ್ಕುಂದಿನಾಡಿ'ನ ಉಲ್ಲೇಖವನ್ನು ನೀಡಿದೆ.[೨೮೭] ಈ ಶಾಸನವು ಪುಲಿಕ್ಕರುಕ್ಕಿ ಮತ್ತು ಬೆಳ್ಳಂಬರವಿ ಎಂಬ ಎರಡು ಗ್ರಾಮಗಳನ್ನು ಉಲ್ಲೇಖಿಸಿದ್ದು, ಇದು ನೆಕ್ಕುಂದಿ ನಾಡಿನಲ್ಲಿ ಅಂತರ್ಗತವಾಗಿತ್ತು ಚಿಂತಾಮಣಿ ತಾಲ್ಲೂಕಿನ ಸುತ್ತಮುತ್ತಲಿನ ಪ್ರದೇಶಗಳು ಈ ಪ್ರಾದೇಶಿಕ ವಿಭಾಗಕ್ಕೆ ಸೇರಿದ್ದವು.[೨೮೮]

೨.೪. ಶಾಸನೋಕ್ತ ಸ್ತ್ರೀಯರು

ಮಹಿಳೆಯರು ಪುರುಷರಂತೆ ಸಮಾಜದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದರೂ ಪ್ರಾಚೀನ ಸಮಾಜದಲ್ಲಿ ಅನೇಕ ಕಟ್ಟುಪಾಡುಗಳು ಇರುತ್ತಿದ್ದವು. ಅದನ್ನು ಮೀರಿ ಸಮಾಜದಲ್ಲಿ ಗೌರವಯುತವಾದಂತಹ ಸ್ಥಾನವನ್ನು ಮಹಿಳೆಯರು ಪಡೆದಿದ್ದರು. ಇಂತಹ ಸ್ತ್ರೀಯರಿಗೆ ಸಂಬಂಧಿಸಿದಂತಹ ಶಾಸನಗಳು ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ದೊರೆಯುತ್ತವೆ. ಗಂಗ ಮತ್ತು ನೊಳಂಬರ ಆಡಳಿತಕ್ಕೆ ಸಂಬಂಧಿಸಿದಂತಹ ಕೆಲವು ಶಾಸನಗಳು ಮಹಿಳೆಯರಿಗೆ ಸಂಬಂಧಿಸಿದಂತೆ ವಿವರಗಳನ್ನು ನೀಡುತ್ತದೆ.

". . . ದುಗ್ಗಮಾರ ಎರೆ ಅಪ್ಪೊನ್ ಕುವಳಾಲ ನಾಡು ಮುನೂರಂ
ಗಂಗರು ಸಾವಿರ ಮುಮಾಳೆ ಅವರಾ ಮಹಾದೇವಿ ಕಂಚಿ ಅಬ್ಬೆ ಅಗಳಿ"

ಗಂಗದೊರೆ ಶ್ರೀಪುರುಷನ ಮಗ ದುಗ್ಗಮಾರ ಎರೆಯಪ್ಪನ ಪತ್ನಿ ಮಹಾದೇವಿ ಕಂಚಿಯಬ್ಬೆಯು 'ಅಗಳಿ' ನಾಡನ್ನು ಆಳುತ್ತಿದ್ದಳೆಂದು ಈ ಶಾಸನವು[೨೮೯] ತಿಳಿಸುತ್ತದೆ. ಅಗಳಿನಾಡು ಎಂಬುವುದು ಕುವಳಾಲನಾಡು ಅಥವಾ ಗಂಗ ಆರು ಸಾವಿರ ರಾಜ್ಯದಲ್ಲಿ ಅಂತರ್ಗತವಾಗಿದ್ದಂತಹ ಒಂದು ಪ್ರಾದೇಶಿಕ ವಿಭಾಗವಾಗಿದ್ದಿರಬಹುದು. ಇದೇ ಶ್ರೀಪುರುಷನ ಆಳ್ವಿಕೆಯ ಕಾಲದ ಹೆಬಟ ಶಾಸನವು ಶ್ರೀಪುರುಷ ಪಟ್ಟದರಸಿ 'ವಿನೇತಿ ನಿಮ್ಮಡಿ' ಎಂಬುವವಳನ್ನು ಉಲ್ಲೇಖಿಸುತ್ತದೆ. [೨೯೦]

ಇವಳು ಮಲವೆಲ್ಲೂರನ್ನು ಆಳುತ್ತಿದ್ದಳೆಂದೂ ಶಾಸನವು ತಿಳಿಸಿದ್ದು, ಇದು ತಮಿಳುನಾಡಿನ ಪ್ರದೇಶದಲ್ಲಿದ್ದಂತಹ ಸ್ಥಳವಾಗಿರಬಹುದು. ಜೈನಧರ್ಮಕ್ಕೆ ಸಂಬಂಧಿಸಿದಂತಹ ಒಂದು ಶಾಸನವು ಜೈನ ಮತಾವಲಂಭಿಯಾದ ಮಹಿಳೆಯೊಬ್ಬಳು ಬಸದಿಯನ್ನು ಕಟ್ಟಿಸಿ ಆ ಬಸದಿಗೆ ದತ್ತಿಯನ್ನು ನೀಡಿರುವಳೆಂದು ತಿಳಿಸುತ್ತದೆ. ಕಮುಂಗೆರೆಯ ಕಡಹುರ ಭಟಾರರ ಶಿಷ್ಯರಾದ ಉತ್ತನಂದಿ ಪುರಿ ಮಂಡಲ ಭಟಾರರ ಶಿಷ್ಯೆಯು (ಹೆಸರಿನ ಉಲ್ಲೇಖವಿಲ್ಲ) ಕಮುಂಗೆರೆಯ ಕಂತಿಯರಿಗೆ ಈ ದತ್ತಿಯನ್ನು ಬಿಟ್ಟಂತೆ ಶಾಸನವು ಉಲ್ಲೇಖಿಸುತ್ತದೆ.

ಕರ್ನಾಟಕದ ಮಾಂಡಳಿಕ ಅರಸು ಮನೆತನಗಳಲ್ಲಿ ಪ್ರಮುಖವಾಗಿ ಕಂಡುಬರುವ ನೊಳಂಬ ವಂಶದಲ್ಲಿ ದೀವಳಬ್ಬರಸಿಯು ಅತ್ಯಂತ ಪ್ರಮುಖಳು, ನೊಳಂಬ ದೊರೆ ಪೊಳಲ್ಚೋರನ ಪಟ್ಟದ ರಾಣಿಯಾದ ದೀವಳಬ್ಬರಸಿಯು ಮುಳಬಾಗಿಲಿನ ಆವನಿಯ ರಾಮೇಶ್ವರ ದೇವಾಲಯದಲ್ಲಿ ದೊರೆಯುವ ಶಾಸನದಲ್ಲಿ ಬಹುವಾಗಿ ವರ್ಣಿತಳಾಗಿದ್ದಾಳೆ. [೨೯೧]

ಸುಮಾರು ೭ ಪದ್ಯಗಳಲ್ಲಿ ದೀವಬ್ಬರಸಿಯನ್ನು ಕೊಂಡಾಡಿರುವುದು ಅವಳ ಗರಿಮೆಯನ್ನು ತೋರಿಸುತ್ತದೆ. ಆವನಿಯ ರಾಮೇಶ್ವರ ದೇವಾಲಯದಲ್ಲಿರುವ ಕಲ್ಲು ಕಂಬದಲ್ಲಿ ಕಾಣಬಹುದಾದ ಈ ಶಾಸನವು ಪೊಳಲ್ಚೋರನ ಪಟ್ಟದರಸಿ ದೀವಳಬ್ಬೆಯೆಂದು ತಿಳಿಸಿದೆ. ನೊಳಂಬ ವಂಶದಲ್ಲಿ ಪೊಳಲ್ಚೋರ ಎಂಬ ಹೆಸರಿನ ಇಬ್ಬರು ರಾಜರಿದ್ದರು. ಮೊದಲನೆಯವನು ಚಾರುಪೊನ್ನೇಳಿರಸ ಪುತ್ರ ಪೊಳಲ್ಚೋರನು ಈತನು ಕ್ರಿ.ಶ.೮೦೦ರಿಂದ ೮೬೫ರವರೆಗೆ ನೊಳಂಬ ರಾಜ್ಯವನ್ನು ಆಳಿದ್ದರೆ, ಎರಡನೆಯವನು ನನ್ನಿಯ ನೊಳಂಬನ ಪುತ್ರ ಇಮ್ಮಡಿ ಪೊಳಲ್ಚೋರನು, ಈತನು ಕ್ರಿ.ಶ.೯ನೆಯ ಶತಮಾನದ ಅಂತಿಮ ಭಾಗದಲ್ಲಿ ಆಳ್ವಿಕೆ ನಡೆಸಿದ್ದನು.

ಆದರೆ ಇದೇ ಶಾಸನದ ೫ನೆಯ ಮತ್ತು ೬ನೆಯ ಪದ್ಯ ಭಾಗದಲ್ಲಿ ಇವಳಿಗೆ ಮಹೇಂದ್ರ ಮತ್ತು ಇರಿವ ನೊಳಂಬರೆಂಬ ಇಬ್ಬರು ಪುತ್ರರಿದ್ದರೆಂದು ತಿಳಿಸುತ್ತದೆ. ಆದರೆ ಶಾಸನದ ೬ನೆಯ ಪದ್ಯದಲ್ಲಿ 'ನೆಟ್ಟನೆ ಕದಂಬ ವಂಶಂ' ಎಂದು ಹೇಳಿರುವುದರಿಂದ ದೀವಬ್ಬರಸಿಯು ಕದಂಬ ವಂಶದವಳೆಂದು ಶಾಸನವು ತಿಳಿಸುತ್ತದೆ.

ಡಾ.ಜಯಮ್ಮ ಕರಿಯಣ್ಣ ಅವರು ತಮ್ಮ ಸಂಶೋಧನಾ ಗ್ರಂಥದಲ್ಲಿ ದೇವಳಬ್ಬರಸಿಯು ಇಮ್ಮಡಿ ಪೊಳಲ್ಚೋರನ ಮಡದಿಯೆಂದು ವಿಮರ್ಶಿಸಿದ್ದಾರೆ. ವಸ್ತುತಃ ಈಕೆ ಹಾನಗಲ್ಲನ್ನು ಕೇಂದ್ರವನ್ನಾಗಿಸಿಕೊಂಡು ಆಳಿದ ಹಾನಗಲ್ಲ ಕದಂಬರ ವಂಶಕ್ಕೆ ಸೇರಿದವಳಾಗಿದ್ದಾಳೆ.[೨೯೨]

ಅವನಿಯ ಭರತೇಶ್ವರ ದೇವಾಲಯದ ತಳಪಾದಿಯಲ್ಲಿರುವ ಇನ್ನೊಂದು ಶಾಸನವು[೨೯೩] ದೇವಬ್ಬರಸಿಯು ಕದಂಬ ವಂಶದವಳೆಂದು ಸ್ಪಷ್ಟಪಡಿಸಿದೆ.

"ಸತ್‌ಕದಂಬ ಮಹಾನ್ವಯೇ ಸಮಭವದ್ದೇವೀಹ ದೀವಾಂಬಿಕಾ"

ಈ ಶಾಸನವು ದೀವಬ್ಬರಸಿಯು ಮನೋಹಾರಿಣಿಯೂ (ಸುಂದರಿಯೂ) ಸನ್ಮಾರ್ಗಗಳಿಗೆ ಅಡೆತಡೆಯಿದ್ದರೆ ಅದನ್ನು ಭೇದಿಸುವವಳು, ಸತ್ಪಾತ್ರರಿಗೆ ದಾನವನ್ನು ನೀಡುವುದರಲ್ಲಿ ನಿರತಳೂ, ಭೂಲೋಕದ ಮುಕುಟಮಣಿಯೂ ನೊಳಂಬ ನಾರಾಯಣೇಶ್ವರ ದೇವಾಲಯದ ನಿರ್ಮಾತೃಳೂ ಎಂದು ಕೊಂಡಾಡಿದೆ. ಭರತೇಶ್ವರ ದೇವಾಲಯವನ್ನು ನಿರ್ಮಿಸಿ 'ಎಳೆನಗರ'ವನ್ನು ದಾನವಾಗಿ ನೀಡಿರುವಳು.

ರಾಮೇಶ್ವರ ದೇವಾಲಯದಲ್ಲಿ ದೊರಕಿರುವಂತಹ ಶಾಸನವು ದೀವಳಬ್ಬರಸಿಯನ್ನು ಬಹಳವಾಗಿ ಕೊಂಡಾಡಿದೆ. ದೇವಬ್ಬರಸಿಯು ಭುವನಾಂಬಿಕೆ (ಭೂದೇವಿ) ವಾಕ್‌ದೇವಿ (ಸರಸ್ವತಿ)ಯಂತೆ ಮಹಿಮಾವಂತಳೂ ಆಗಿರುವಳು. ಇವಳು ತನ್ನ ಹೆಸರಿನಲ್ಲೂ ಮತ್ತು ತನ್ನ ಪತಿಯ ಕೀರ್ತಿಯು ವಿಶ್ವದಲ್ಲೆಲ್ಲಾ ಹರಡಿ ಶಾಶ್ವತವಾಗಿ ಉಳಿಯಲೆಂದು ಅಗ್ರಹಾರವನ್ನು ನಿರ್ಮಿಸಿರುವಳು. ದೀವಳಬ್ಬರಸಿಯು ಅರುಂಧತಿದೇವಿಗೆ ಸಮಾನಳು, ತನಗೆ ಸಹಕಾರವನ್ನು ನೀಡುವಂತಹ ಸುತನನ್ನು ಪಡೆದಿರುವಳು. ಇವಳು ಅಪಾರವಾದ ಜಲರಾಶಿಯಿಂದ ಕೂಡಿರುವಂತಹ 'ದೀವಬ್ಬರಸಿ ಸಮುದ್ರ' (ಕೆರೆ)ಯನ್ನು ನಿರ್ಮಿಸಿರುವಳು. ಈ ಕೆರೆಯಲ್ಲಿ ಉತ್ತರದಿಂದ ಗಂಗಾದೇವಿಯೇ ಬಂದು ಪ್ರತಿ ವರ್ಷವು ನೆಲೆಸುತ್ತಾಳೆ. ದೀವಬ್ಬರಸಿಯು ತನ್ನ ಪುತ್ರನಾದ ನೊಳಂಬ ಪಲ್ಲವ ಇರಿವನೊಳಂಬನ ಕೀರ್ತಿಯು ಆಕಾಶದೆತ್ತರಕ್ಕೇರಲಿ ಅವನ ಕೀರ್ತಿಯು ಅಜರಾಮರವಾಗಿ ನೆಲಸಲಿ ಎಂದು ನೊಳಂಬ ನಾರಾಯಣೇಶ್ವರನಿಗೆ ಪಾಪ ವಿನಾಶವೆಂಬ ಘಂಟೆಯನ್ನು ಅರ್ಪಣೆ ಮಾಡಿದಂತೆ ತಿಳಿಸುತ್ತದೆ.

ಮುಳಬಾಗಿಲು ತಾಲ್ಲೂಕು ಕಾರುಬೆಲೆಗ್ರಾಮದಲ್ಲಿರುವ ಶಾಸನವು ಸಾವಿಯಬ್ಬೆಯನ್ನು ಹೆಸರಿಸಿದೆ.[೨೯೪]

"ಸ್ವಸ್ತಿ ಶ್ರೀ ನಾಗಾರ್ಜುನಯ್ಯ ನಂದಿಂಗೆಯ ಬೀಯ
ಮಗಳ್ ಸಾಮಿನಿರ್ಮ್ಮಡಿ ಸರ್ವಶಾಸ್ತ್ರ ಪ್ರಸಿದ್ಧಿ ಶ್ರೀ"

ಸಾವಿಯಬ್ಬೆಯ ನಾಗಾರ್ಜುನಯ್ಯ ಮತ್ತು ನಂದಿಂಗೆಯಬ್ಬೆಯರ ಮಗಳೂ, ಸರ್ವಶಾಸ್ತ್ರ ಪಂಡಿತೆಯೂ ಎಂದು ಹೊಗಳಿದೆ. ಈ ಶಾಸನವು ಶಿಲಾ ಶಾಸನವಾಗಿದ್ದು, ಕೈಯಲ್ಲಿ ಪುಸ್ತಕಗಳನ್ನು, ಹಿಡಿದಿರುವ ಮಹಿಳೆಯ ಚಿತ್ರವನ್ನು ಶಾಸನದಲ್ಲಿ ಕೆತ್ತಲಾಗಿದೆ. ಹಾಗಾಗಿ ಸಾವಿಯಬ್ಬೆಯೂ ವಿದ್ಯಾವಂತಳೂ, ಸರ್ವಶಾಸ್ತ್ರ ಪಂಡಿತೆಯೂ ಆಗಿದ್ದಳೆಂದೂ ಶಾಸನಾಧಾರದಿಂದ ತಿಳಿಯಬಹುದಾಗಿದೆ. ಕೋಲಾರ ಜಿಲ್ಲೆಯಲ್ಲಿ ಮಹಿಳೆಯರಿಗೆ ವಿದ್ಯಾಭ್ಯಾಸದಲ್ಲಿ ಪ್ರಾಶಸ್ತ್ಯವನ್ನು ನೀಡುತ್ತಿದ್ದರೆಂದು ತಿಳಿಯಬಹುದಾಗಿದೆ. ಹೀಗೆ ಈ ಜಿಲ್ಲೆಯಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ಉಲ್ಲೇಖಗಳು ಮಹಿಳೆಯರ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದೆ.

ಸ್ತ್ರೀಯರ ಸ್ಮಾರಕ ಶಿಲೆಯಲ್ಲಿ ಸಾವಿನಿರ್ಮ್ಮಡಿಯ ಶಿಲೆಯು ವಿಶೇಷವಾಗಿದೆ. ಶಿಲ್ಪಿಯು ಸಾವಿನಿರ್ಮ್ಮಡಿಯ ಶಿಲ್ಪವನ್ನು ಬಿಡಿಸುವಾಗ ಆಕೆಯು ತನ್ನ ಕೈಯಲ್ಲಿ ಹಸ್ತಪ್ರತಿಯ ಚಿತ್ರವನ್ನು ಬಿಡಿಸಿದ್ದಾನೆ. ಸಾಮಾನ್ಯವಾಗಿ ವೀರನು ಸತ್ತಾಗ ಅವನ ಕೈಯಲ್ಲಿ ಖಡ್ಗವಿದ್ದು, ಅಪ್ಸರೆಯರು ಆತನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಾರೆ. ಆದರೆ ಸ್ತ್ರೀಯು ಮರಣವನ್ನು ಹೊಂದಿದ್ದರೆ ಅಪ್ಸರೆಯರು ಅವಳನ್ನು ಹೊತ್ತುಕೊಂಡು ಹೋಗುವ ಚಿತ್ರಣವು ಕಂಡುಬರುವುದಿಲ್ಲ. ಹಾಗಾಗಿ ಸಾವಿನಿರ್ಮ್ಮಡಿಯ ಶಿಲ್ಪವು ಸಮಕಾಲೀನ ಸಮಾಜದ ನಿಯಮಗಳಿಗೆ ಬೆಲೆ ನೀಡಿರುವುದನ್ನು ಕಾಣುತ್ತೇವೆ. ಈ ರೀತಿಯಾದ ಶಿಲ್ಪಗಳು ಗಂಗರ ಕಾಲದ ನಿಜವಾದ ಚಿತ್ರಣವನ್ನು ನಮ್ಮ ಮುಂದೆ ಪ್ರಸ್ತುತ ಪಡಿಸುತ್ತದೆ.[೨೯೫]

ಉಪಸಂಹಾರ

ಅಧ್ಯಯನದ ದೃಷ್ಟಿಯಿಂದ ಪ್ರಧಾನವಾಗಿರುವಂತಹ ಈ ಅಧ್ಯಾಯವು ವಿಸ್ತಾರವಾಗಿ ಕೋಲಾರದ ರಾಜಕೀಯ ಚಿತ್ರಣವನ್ನು ಪ್ರದರ್ಶಿಸಿದೆ. ಪ್ರಮುಖ ರಾಜ ಮನೆತನಗಳಲ್ಲದೆಯೇ ಇತರೆ ಸಾಮಂತ ಅರಸರೂ ಪ್ರಧಾನ ಭೂಮಿಕೆಯನ್ನು ಈ ಜಿಲ್ಲೆಯ ಮೇಲೆ ನೀಡಿದ್ದಾರೆ. ಇತಿಹಾಸವನ್ನು ಗಮನಿಸಿದರೆ ಗಂಗ ಅರಸರು ಪ್ರಧಾನವಾಗಿ ಕೋಲಾರ ಜಿಲ್ಲೆಯ ಮೇಲೆ ಪ್ರಭಾವವನ್ನು ಬೀರಿದ್ದಾರೆ. ಗಂಗ ಅರಸರಲ್ಲಿ ಪ್ರಧಾನವಾಗಿ ಬರುವಂತಹ ಎಲ್ಲಾ ರಾಜರುಗಳ ಆಡಳಿತಾವಧಿಯ ಶಾಸನಗಳು ಈ ಜಿಲ್ಲೆಯಲ್ಲಿ ದೊರಕುತ್ತಿವೆ. ಕುವಳಾಲಪುರವು(ಕೋಲಾರ) ಗಂಗರಸರ ರಾಜಧಾನಿಯಾಗಿತ್ತು. ಅದೇ ರೀತಿಯಾಗಿ ನೊಳಂಬರಸರಿಗೂ, ಬಾಣರಸರಿಗೂ ಕೋಲಾರ ಪ್ರದೇಶವು ಪ್ರಧಾನವಾಗಿ ಆಳ್ವಿಕೆಯ ಸ್ಥಾನವಾಗಿತ್ತು. ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧರಾಗಿರದಂತಹ ಇಳವಂಜಿರಾಯರ ಮತ್ತು ಬ್ರಹ್ಮಾದಿರಾಯರ ಇತಿಹಾಸವನ್ನು ತಿಳಿಸುವುದರಲ್ಲಿ ಈ ಅಧ್ಯಾಯವು ಸಮರ್ಥವಾಗಿದೆ. ಪ್ರಾಚೀನ ಆಡಳಿತ ವಿಭಾಗಗಳನ್ನು ಗಮನಿಸಿದರೆ ಆಡಳಿತಾತ್ಮಕವಾಗಿ ಕೋಲಾರ ಜಿಲ್ಲೆಯು ಎಷ್ಟು ವಿಭಾಗಗಳಾಗಿತ್ತು ಎಂದು ಗಮನಿಸಬಹುದಾಗಿದೆ. ರಾಜ ಮಹಾರಾಜರುಗಳ ಆಡಳಿತದಲ್ಲಿ ಮಹಿಳೆಯರೂ ಪ್ರಧಾನವಾದಂತಹ ಕೊಡುಗೆಯನ್ನು ನೀಡಿದ್ದಾರೆಂದು ಈ ಅಧ್ಯಾಯದಿಂದ ತಿಳಿಯಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಪು.ಸಂ.೧೭
೨. Indian Archaglogy – A Review 1983-84, Kolar, District, Exagavation.
೩. ವಿಷಯಗಳನ್ನು ಸಂಗ್ರಹಿಸುವಾಗ ಕೋಲಾರ ಜಿಲ್ಲಾ ಗ್ಯಾಸೆಟಿಯರ್ ಮತ್ತು ಕ್ಷೇತ್ರ ಕಾರ್ಯದ ಮಾಹಿತಿಯನ್ನು ಬಳಸಲಾಗಿದೆ.
೪. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೨೨
೫. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೪೬
೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೧ ಮತ್ತು ೨
೭. ಶಾಸನ ಪರಿಚಯ, ಪು.ಸಂ.೨
೮. ಬನವಾಸಿಯ ಕದಂಬರು, ಪೀಠಿಕೆ
೯. E.C. X ಮುಳಬಾಗಿಲು, ೫೦
೧೦. E.C. X ಮಾಲೂರು, ೭೨
೧೧. ಕೊಂಗು ದೇಶ ರಾಜಕ್ಕಳ್ ಗ್ರಂಥವು ತಮಿಳಿನ ಪ್ರಸಿದ್ಧ ಕೃತಿಯಾಗಿದ್ದು, ಕೊಂಗು ದೇಶದ ರಾಜರುಗಳ ವಂಶಾವಳಿಯನ್ನು ತಿಳಿಸುತ್ತದೆ. ಈ ಗ್ರಂಥದ ಲೇಖಕನ ಕುರಿತಾಗಿ ಮಾಹಿತಿಗಳು ಅಲಭ್ಯವಾಗಿದೆ. ಈ ಗ್ರಂಥವನ್ನು ಎಂ.ಆರೋಗ್ಯಸ್ವಾಮಿಯವರು ಆಂಗ್ಲಭಾಷೆಗೆ ಅನುವಾದಿಸಿದ್ದಾರೆ. ಅದಲ್ಲದೆಯೇ ಕೊಂಗು ದೇಶದ ರಾಜರು ಎಂಬ ಲೇಖನದಲ್ಲಿ ಬಿ.ಜಿ.ಎಲ್.ಸ್ವಾಮಿಯವರು ಮಾಹಿತಿಯನ್ನು ಒದಗಿಸಿದ್ದಾರೆ.
೧೨. E.I ಸಂ–೩, ಪರಿವಿಡಿ.
೧೩. E.C. 7 ಶಿವಮೊಗ್ಗ –೪
೧೪. ಅವಲೋಕನ : ಕರ್ನಾಟಕ ಪರಂಪರೆಯ ಸಮೀಕ್ಷೆ; ಗಂಗರ ಕಾಲ – ಡಾ.ಶ್ರೀನಿವಾಸ ರಿತ್ತಿ, ಪು.ಸಂ.೫೮
೧೫. E.C. 6 ಪರಿವಿಡಿ.
೧೬. ಕೋಲಾರ ಜಿಲ್ಲಾ ಗ್ಯಾಸೆಟಿಯರ್ ಪು.ಸಂ.೬೭
೧೭. Mysore and Coorg from Inscription, Page No-31
೧೮. E.C. X ಕೋಲಾರ, ೯೦
೧೯. M.A.R -1921 ಉದಯೇಂದೀವರಂ ಶಾಸನ
೨೦. E.C. X ಕೋಲಾರ –೯೦
೨೧. M.A.R – 1914 ನಂದಿ ಶಾಸನ
೨೨. E.C. X ಮಾಲೂರು – ೭೩
೨೩. M.A.R – 1914-15ಬೆಂಡಿಗನಹಳ್ಳಿ ಶಾಸನ
೨೪. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಪುಟ ಸಂಖ್ಯೆ–೬೬, ೬೭ (೧೫–೨೬)
೨೫. M.A.R. 1924, 79-81
೨೬. ಕರ್ನಾಟಕದ ಅರಸು ಮನೆತನಗಳು, ಪು–ಸಂ.೧೨೦
೨೭. M.A.R. 1921 ಪು.ಸಂ.೨೭
೨೮. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ – ೬೬, ೬೭ (೧೫–೨೬)
೨೯. E.C. X ಮಾಲೂರು –೭೩
೩೦. M.A.R. 1924 Page No – 67- 69
೩೦a. ಕರ್ನಾಟಕ ಅರಸು ಮನೆತನಗಳು – ಪು.ಸಂ.೧೨೬
೩೧. E.C. X ಮಾಲೂರು – ೭೨
೩೨. M.A.R. 1924 Page No – 69- 72

೩೩. M.A.R. 1916 Page No – 35-37
೩೪. ಕರ್ನಾಟಕದ ಅರಸು ಮನೆತನಗಳು – ಪು.ಸಂ.೧೩೭
೩೫. M.A.R. 1916 -17 Page No – 81
೩೬. M.A.R. 1925, Page No – 90-92
೩೭. E.C XII ತುಮಕೂರು –೨೩
೩೮. M.A.R. 1925, Page No – 85-89
೩೯. M.A.R. 1914, 1944, 1956
೪೦. E.C X ಮುಳಬಾಗಿಲು – ೮೦
೪೧. E.C X ಮುಳಬಾಗಿಲು – ೨೨೫
೪೨. E.C X ಕೋಲಾರ –೦೭
೪೩. E.C X ಶ್ರೀನಿವಾಸಪುರ –೬೫
೪೪. M.A.R. 1922-23, Page No – 23-24
೪೫. M.A.R. 1926-27, Page No – 84
೪೬. E.C X ಶ್ರೀನಿವಾಸಪುರ –೨೦
೪೭. E.C X ಶ್ರೀನಿವಾಸಪುರ – ೫೭
೪೮. E.C X ಕೋಲಾರ – ೨೯
೪೯. E.C X ಕೋಲಾರ – ೧೧
೫೦. E.C X ಮಾಲೂರು –೯೬
೫೧. M.A.R. 1916-17, Page No – 31
೫೨. M.A.R. 1924-25, Page No – 66
೫೩. E.C X ಬಂಗಾರಪೇಟೆ –೧೩
೫೪. M.A.R. 1914-, Page No – 27 ನಂದಿಶಾಸನ
೫೫. ಕರ್ನಾಟಕ ಅರಸು ಮನೆತನಗಳು, ಪು.ಸಂ.೧೫೦
೫೬. E.C X ಕೋಲಾರ –೨೩೧
೫೭. E.C X ಕೋಲಾರ – ೭೯
೫೮. E.C X ಕೋಲಾರ – ೯೦
೫೯. E.I Vol-II, P.P.167-74
೬೦. E.C X ಬಂಗಾರಪೇಟೆ –೪೭
೬೧. E.C X ಶ್ರೀನಿವಾಸಪುರ –೫೯
೬೨. E.C X ಗೌರಿಬಿದನೂರು –೩೦
೬೩. E.C X ಕೋಲಾರ – ೬೩
೬೪. ರಾಷ್ಟ್ರಕೂಟ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ.೭೪, ೭೫, ೭೬
೬೫. E.I 14 - ತಲೆಗಾಂವ್ ಶಾಸನ
೬೬. E.C X ಮಾಲೂರು– ೧೮೭
೬೬a. ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ.ಡಿ.ಎಂ.ನಾಗರಾಜು, ಪು.ಸಂ.೨೫
೬೭. M.A.R. 1936, ಎಂ.ಎಚ್.ಕೃಷ್ಣ

೬೮. E.I VII ತಾಳಗುಂದ ಶಾಸನ
೬೯. E.I VII ಉದಯೇಂದೀವರಂ ಶಾಸನ
೭೦. E.C X ಕೋಲಾರ –೩೦೦
೭೧. ಪುರಾಣ ನಾಮ ಚೂಡಾಮಣಿ – ಪು.ಸಂ.೪೦
೭೨. ಬಾಣರಸರ ಶಾಸನಗಳು – ಒಂದು ಅಧ್ಯಯನ, ಪು.ಸಂ.೪೪
೭೩. The Bana's in South Indian History -- JIH – Vol-29 T.V.Mahalingam, P-157
೭೪. E.C X ಮುಳಬಾಗಿಲು –೧೫೭
೭೫. ಬಾಣರಸರ ಶಾಸನಗಳು ಒಂದು ಅಧ್ಯಯನ, ಪು.ಸಂ.೨೪
೭೬. E.C X ಕೋಲಾರ –೨೦೦
೭೭. E.C X ಮುಳಬಾಗಿಲು –೨೬
೭೮. E.C X ಮುಳಬಾಗಿಲು –೧೨೪
೭೯. E.C X ಮುಳಬಾಗಿಲು –೨೩೦
೮೦. E.C X ಮುಳಬಾಗಿಲು –೨೬೧
೮೧. E.C X ಮುಳಬಾಗಿಲು –೨೬೫
೮೨. E.C X ಕೋಲಾರ –೨೩೫
೮೩. E.C X ಬಂಗಾರಪೇಟೆ – ೪೮
೮೪. E.C X ಬಂಗಾರಪೇಟೆ – ೮೧
೮೫. E.C X ಮುಳಬಾಗಿಲು –೨೨೮
೮೬. E.C X ಮುಳಬಾಗಿಲು –೨೪೪
೮೭. ಬಾಣರಸರ ಶಾಸನಗಳು ಒಂದು ಅಧ್ಯಯನ, ಪು.ಸಂ.೫೧
೮೮. E.C X ಮುಳಬಾಗಿಲು –೯೩
೮೯. E.C X ಕೋಲಾರ – ೬೫
೯೦. E.C X ಕೋಲಾರ –೦೬
೯೧. E.C X ಮುಳಬಾಗಿಲು –೨೪೩
೯೨. E.C X ಶ್ರೀನಿವಾಸಪುರ –೪೦
೯೩. E.C X ಮುಳಬಾಗಿಲು –೧೫೭
೯೪. ಬಾಣರಸರ ಶಾಸನಗಳು ಒಂದು ಅಧ್ಯಯನ, ಪು.ಸಂ.೫೯
೯೫. I.A. Vol.III P.P. 187
೯೬. ನೊಳಂಬರ ಇತಿಹಾಸ ದರ್ಶನ –ಪು.ಸಂ.೧೦
೯೭. E.C X SL-28(ಹೇಮಾವತಿ ಶಾಸನ)
೯೮. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೧೦೧
೯೯. ನೊಳಂಬರ ಇತಿಹಾಸ ದರ್ಶನ – ಪು.ಸಂ.೭
೧೦೦. ಪುರಾಣ ನಾಮ ಚೂಡಾಮಣಿ –ಪು.ಸಂ.೩೩೮
೧೦೧. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೧೨
೧೦೨. E.C X SI-28
೧೦೩. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೧೬
೧೦೪. E.C X ಕೋಲಾರ –೭೯

೧೦೫. E.C X ಶ್ರೀನಿವಾಸಪುರ –೩೦
೧೦೬. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೨೮
೧೦೭. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೭೮
೧೦೮. E.C X ಕೋಲಾರ –೯
೧೦೯. ಅದೇ, –೫೭
೧೧೦. E.C X ಶ್ರೀನಿವಾಸಪುರ –೫೮
೧೧೧. E.C X ಶ್ರೀನಿವಾಸಪುರ –೬೪
೧೧೨. E.C X ಶ್ರೀನಿವಾಸಪುರ – ೧೫೦
೧೧೩. E.I.I. IV ದೇವೋಲಿ ಶಾಸನ
೧೧೪. S.I.I P-1 No.38
೧೧೫. S.I.I VI P-1 No.561
೧೧೬. E.C X ಬಂಗಾರಪೇಟೆ –೦೪
೧೧೭. E.C X ಕೋಲಾರ –೨೪೫
೧೧೮. E.C X ಕೋಲಾರ – ೧೫೮
೧೧೯. E.C X ಮುಳಬಾಗಿಲು – ೩೧
೧೨೦. E.C X ಮುಳಬಾಗಿಲು –೩೨
೧೨೧. E.C X ಮುಳಬಾಗಿಲು –೧೦೮
೧೨೨. E.C X ಮುಳಬಾಗಿಲು – ೫೧
೧೨೩. E.C X ಮುಳಬಾಗಿಲು – ೧೬೧
೧೨೪. E.C X ಮುಳಬಾಗಿಲು – ೧೬೨
೧೨೫. E.C X ಮುಳಬಾಗಿಲು – ೧೬೩
೧೨೬. E.C X ಬಂಗಾರಪೇಟೆ – ೪೦, ೪೧, ೪೩
೧೨೭. E.C X ಮುಳಬಾಗಿಲು – ೧೯೮
೧೨೮. E.C X ಮಾಲೂರು – ೬೩
೧೨೯. E.C X ಶ್ರೀನಿವಾಸಪುರ –೨೫
೧೩೦. E.C X ಮುಳಬಾಗಿಲು – ೯೩ ಮತ್ತು ೯೪
೧೩೧. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೩೭
೧೩೨. E.C X ಮುಳಬಾಗಿಲು –೨೬೪
೧೩೩. E.C X ಮುಳಬಾಗಿಲು –೫೯
೧೩೪. ಅದೇ,
೧೩೫. E.C X ಚಿಂತಾಮಣಿ –೧೬೫
೧೩೬. E.C X ಚಿಕ್ಕಬಳ್ಳಾಪುರ –೪೫
೧೩೭. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೪೨
೧೩೮. E.C X ಮುಳಬಾಗಿಲು –೮೪
೧೩೯. E.C X ಮುಳಬಾಗಿಲು –೬೫
೧೪೦. E.C X ಮುಳಬಾಗಿಲು –೯೧
೧೪೧. E.C X ಮುಳಬಾಗಿಲು –೬೨

೧೪೨. E.C X ಬಾಗೇಪಲ್ಲಿ -೯೧
೧೪೩. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೨೨
೧೪೪. E.C X ಶ್ರೀನಿವಾಸಪುರ -೩೦
೧೪೫. E.C X ಶ್ರೀನಿವಾಸಪುರ – ೮೫
೧೪೬. S.I.I Vol. VII -02
೧೪೭. E.C X ಬಂಗಾರಪೇಟೆ – ೦೪
೧೪೮. ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ-೦೧, ಬಳ್ಳಾರಿ -೬೦
೧೪೯. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೩೦.
೧೫೦. E.C X ಮುಳಬಾಗಿಲು -೨೦೭
೧೫೧. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೮೪
೧೫೨. ಪ್ರಾಚೀನ ಭಾರತ, ಪು.ಸಂ.೧೭೯
೧೫೩. ಕರ್ನಾಟಕ ಪುರಾತತ್ವ ಮತ್ತು ಇತಿಹಾಸ, ಪು.ಸಂ.೪೨೩
೧೫೪. E.C X ಮುಳಬಾಗಿಲು – ೨೦೪
೧೫೫. E.C X ಕೋಲಾರ – ೭೫
೧೫೬. E.C X ಮುಳಬಾಗಿಲು -೨೦೮
೧೫೭. E.C X ಮುಳಬಾಗಿಲು – ೧೧೯
೧೫೮. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೮೪
೧೫೯. E.C X ಶ್ರೀನಿವಾಸಪುರ – ೧೭
೧೬೦. E.C X ಶ್ರೀನಿವಾಸಪುರ – ೧೪
೧೬೧. E.C X ಕೋಲಾರ -೩೨
೧೬೨. E.C X ಕೋಲಾರ – ೧೪
೧೬೩. E.C X ಬಂಗಾರಪೇಟೆ – ೯೭
೧೬೪. E.C X ಕೋಲಾರ – ೨೬೬
೧೬೫. E.C X ಕೋಲಾರ – ೨೬೨
೧೬೬. E.C X ಕೋಲಾರ – ೨೬೧
೧೬೭. E.C X ಕೋಲಾರ – ೨೬೩
೧೬೮. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೮೬
೧೬೯. E.C X ಕೋಲಾರ – ೪೨ (R)
೧೭೦. E.C X ಬಂಗಾರಪೇಟೆ – ೮೮
೧೭೧. E.C X ಕೋಲಾರ – ೯೧
೧೭೨. E.C X ಮುಳಬಾಗಿಲು – ೭೦
೧೭೩. E.C X ಕೋಲಾರ – ೩೮
೧೭೪. E.C X ಮಾಲೂರು – ೧೧೦
೧೭೫. E.C X ಮಾಲೂರು – ೧೦೩
೧೭೬. E.C X ಮಾಲೂರು – ೭೧
೧೭೭. E.C X ಮಾಲೂರು – ೭೨, ೭೨, ೭೪
೧೭೮. E.C X ಮಾಲೂರು – ೨೬೮

೧೭೯. E.C X ಶ್ರೀನಿವಾಸಪುರ –೧೭
೧೮೦. E.C X ಕೋಲಾರ –೧೦
೧೮೧. E.C X ಮಾಲೂರು – ೧೧೩
೧೮೨. E.C X ಕೋಲಾರ – ೧೪
೧೮೩. E.C X ಮುಳಬಾಗಿಲು – ೧೮
೧೮೪. ಕರ್ನಾಟಕ ವಿಷಯ ವಿಶ್ವಕೋಶ, ಪು.ಸಂ.೧೬೨೩
೧೮೫. E.C X ಬಂಗಾರಪೇಟೆ –೨
೧೮೬. E.C VII ಮಳವಳ್ಳಿ – ೨೬೪
೧೮೭. ಕರ್ನಾಟಕ ವಿಷಯ ವಿಶ್ವಕೋಶ, ಪು.ಸಂ.೧೬೨೫
೧೮೮. E.C X ಕೋಲಾರ – ೩೪೫
೧೮೯. E.C X ಮಾಲೂರು – ೧೪೫
೧೯೦. E.C X ಮಾಲೂರು – ೧೪೨
೧೯೧. E.C X ಕೋಲಾರ – ೧೬
೧೯೨. E.C X ಮಾಲೂರು – ೧೪೫
೧೯೩. E.C X ಮಾಲೂರು – ೧೪೨
೧೯೪. E.C X ಮಾಲೂರು – ೧೬೨
೧೯೫. E.C X ಕೋಲಾರ – ೯೨
೧೯೬. E.C X ಬಂಗಾರಪೇಟೆ – ೬
೧೯೭. E.C X ಬಂಗಾರಪೇಟೆ – ೯
೧೯೮. E.C X ಬಂಗಾರಪೇಟೆ – ನಲ್ಲೂರು – ೧೦
೧೯೯. E.C X ಬಂಗಾರಪೇಟೆ – ಮಾದಿಮಂಗಲ – ೭೯
೨೦೦. E.C X ಕೋಲಾರ – ವೇಮಗಲ್ಲು – ೧೨
೨೦೧. E.C X ಕೋಲಾರ – ನೆರಗಲ್ಲ – ೧೩
೨೦೨. E.C X ಮಾಲೂರು – ೧೫೧
೨೦೩. E.C X ಮಾಲೂರು – ೧೬೨
೨೦೪. E.C X ಕೋಲಾರ – ೩೨೮
೨೦೫. E.C X ಕೋಲಾರ – ೮೧
೨೦೬. E.C X Supp - 352
೨೦೭. E.C X ಮಾಲೂರು – ೨೧೦
೨೦೮. E.C X ಕೋಲಾರ – ೮೩
೨೦೯. E.C X ಕೋಲಾರ – ೩೩೭
೨೧೦. ಕರ್ನಾಟಕ ಸಂಕ್ಷಿಪ್ತ ಇತಿಹಾಸ – ಡಾ.ವಿ.ಸೂರ್ಯನಾಥ ಕಾಮತ್
೨೧೧. E.C X ಮಾಲೂರು – ೧೨೩
೨೧೨. E.C X ಮಾಲೂರು – ೧೭೬
೨೧೩. E.C X ಮಾಲೂರು – ೪೯(R)
೨೧೪. E.C X ಕೋಲಾರ – ೩೭೯

೨೧೫. E.C X ಮಾಲೂರು – ೧೮ (ಠ)
೨೧೬. E.C X ಮಾಲೂರು – ೨೦೦
೨೧೭. E.C X ಮಾಲೂರು – ೧೭೭
೨೧೮. E.C X ಮಾಲೂರು – ೩೪೪
೨೧೯. E.C X ಮಾಲೂರು – ೩೩೬
೨೨೦. E.C X ಮಾಲೂರು – ೩೨ (ಠ)
೨೨೧. ಕರ್ನಾಟಕದ ಸಂಕ್ಷಿಪ್ತ ಇತಿಹಾಸ. ಡಾ.ವಿ.ಸೂರ್ಯನಾಥ ಕಾಮತ್
೨೨೨. E.C X ಕೋಲಾರ – ೩೯
೨೨೩. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೯೩
೨೨೪. ಇತಿಹಾಸ ದರ್ಶನ, ಸಂ–೬, ಪು.ಸಂ.೧೮೨
೨೨೫. E.C X ಬಂಗಾರಪೇಟೆ – ೬೦, ೩೪
೨೨೬. E.C X ಮುಳಬಾಗಿಲು – ೧೯
೨೨೭. ಇತಿಹಾಸ ದರ್ಶನ ಸಂ–೨೨, ಪು.ಸಂ.೧೮೨–೧೮೭
೨೨೮. E.C X ಬಂಗಾರಪೇಟೆ – ೧೦೩
೨೨೯. E.C X ಬಂಗಾರಪೇಟೆ –೦೭
೨೩೦. E.C X ಮುಳಬಾಗಿಲು – ೧೮
೨೩೧. E.C X ಬಂಗಾರಪೇಟೆ – ೧೮
೨೩೨. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಪು.ಸಂ.೯೩
೨೩೩. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೧೦೨
೨೩೪. E.C X ಮುಳಬಾಗಿಲು – ೧೮
೨೩೫. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೧೦೧
೨೩೬. ಇತಿಹಾಸ ದರ್ಶನ, ಸಂ–೨೨, ಪು.ಸಂ.೧೮೨, ೧೮೭
೨೩೭. ಕುವಳಾಲ, ಕೆ.ಆರ್.ನರಸಿಂಹನ್, ಪು.ಸಂ.೫೬
೨೩೮. E.C X ಮುಳಬಾಗಿಲು – ೭೨
೨೩೯. E.C X ಮುಳಬಾಗಿಲು – ೭೩
೨೪೦. E.C X ಮಾಲೂರು
೨೪೧. E.C X ಕೋಲಾರ – ೩೩೧
೨೪೨. E.C X ಕೋಲಾರ – ೪೪
೨೪೩. E.C X ಮಾಲೂರು –೧೫೧
೨೪೪. E.C X ಕೋಲಾರ – ೧೩೨, ೨೮೭, ೨೮೩
೨೪೫. ಶ್ರೀಭೈರವ ಕ್ಷೇತ್ರದ ಸೀತಿ ಬೆಟ್ಟ – ೧೯೯೬, ಪು.ಸಂ.೭
೨೪೬. E.C X ಕೋಲಾರ – ೨೮೮
೨೪೭. E.C X ಕೋಲಾರ – ೨೮೭
೨೪೮. E.C X ಕೋಲಾರ – ೩೩೨
೨೪೯. E.C X ಕೋಲಾರ – ೩೩೧
೨೫೦. E.C X ಕೋಲಾರ – ೨೨೬
೨೫೧. E.C X ಕೋಲಾರ – ೩೩೧

೨೫೨. E.C X ಕೋಲಾರ – ೩೨೬, ೨೮೩, ೩೨೭
೨೫೩. E.C X ಕೋಲಾರ – ೭೯
೨೫೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – ೧, ಶಾಸನ – ೮೩
೨೫೫. ಮನುಸ್ಮೃತಿ, ಅಧ್ಯಾಯ – ೦೭, ಶ್ಲೋಕ – ೧೧೪
೨೫೬. ಬೇಗೂರಿನ ಶಾಸನ ಒಂದು ವಿವೇಚನೆ, ಪು.ಸಂ. – ೯೯
೨೫೭. History of Western Ganga's, P.no.190
೨೫೮. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.–೧೧೧
೨೫೯. E.C X ಮುಳಬಾಗಿಲು – ೮೦
೨೬೦. E.C X ಮುಳಬಾಗಿಲು – ೨೫೫
೨೬೧. E.C X ಬಂಗಾರಪೇಟೆ – ೬೪
೨೬೨. E.C X ಬಂಗಾರಪೇಟೆ – ೪೮
೨೬೩. ಮಾನವಿಕ ಕರ್ನಾಟಕ, ಸಂ–೧೬, ಸಂ–೨
೨೬೪. E.C X ಮುಳಬಾಗಿಲು – ೨೨೮
೨೬೫. E.C X ಮುಳಬಾಗಿಲು – ೪೮
೨೬೬. E.C X ಮುಳಬಾಗಿಲು – ೧೫೭
೨೬೭. E.C X ಮುಳಬಾಗಿಲು – ೨೨೮
೨೬೮. E.C X ಮುಳಬಾಗಿಲು – ೩೦೬
೨೬೯. E.C X I ಗುಡಿಮಲ್ಲ ಶಾಸನ
೨೭೦. ARI – 1906, B-573
೨೭೧. ಬಾಣರಸರ ಶಾಸನಗಳು ಒಂದು ಅಧ್ಯಯನ, ಪು.ಸಂ.೧೭
೨೭೨. E.C X ಮಾಲೂರು – ೭೧
೨೭೩. ಮಾನವಿಕ ಕರ್ನಾಟಕ, ಸಂ–೪, ಸಂ–೨
೨೭೪. E.C IX ಬೆಂಗಳೂರು – ೪೦
೨೭೫. E.C IX ದೇವನಹಳ್ಳಿ – ೫೭
೨೭೬. E.C IX ದೊಡ್ಡ ಬಳ್ಳಾಪುರ – ೩೦
೨೭೭. E.C XI - C.L. 33
೨೭೮. ಇತಿಹಾಸ ದರ್ಶನ, ಸಂ–೧೪
೨೭೯. E.C X ಮುಳಬಾಗಿಲು – ೨೪೩
೨೮೦. E.C X ಮುಳಬಾಗಿಲು – ೨೪೪
೨೮೧. E.C X ಮುಳಬಾಗಿಲು – ೨೪೫
೨೮೨. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ.೧೯೮
೨೮೩. E.C X ಶ್ರೀನಿವಾಸಪುರ – ೫೭
೨೮೪. E.I. Vol – 38, P-277
೨೮೫. E. I. 38 ನವಿಲೈ ಶಾಸನ
೨೮೬. ಬಾಣರಸರ ಶಾಸನಗಳ ಒಂದು ಅಧ್ಯಯನ – ಪು.ಸಂ.೨೧
೨೮೭. E.C X ಕೋಲಾರ – ೨೦೦
೨೮೮. ಬಾಣರಸರ ಶಾಸನಗಳ ಒಂದು ಅಧ್ಯಯನ, ಪು.ಸಂ.೨೨

೨೮೯. E.C X ಮುಳಬಾಗಿಲು -೮೦
೨೯೦. M.A.R. 1917/18
೨೯೧. E.C X ಮುಳಬಾಗಿಲು – ೩೮
೨೯೨. ನೊಳಂಬ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಪು.ಸಂ.೪೧
೨೯೩. E.C X ಮುಳಬಾಗಿಲು – ೫೦
೨೯೪. E.C X ಬಂಗಾರಪೇಟೆ – ೬೫
೨೯೫. ತಲಕಾಡಿನ ಗಂಗರ ದೇವಾಲಯಗಳು, ಪು.ಸಂ.೧೧೬

ಅಧ್ಯಾಯ – ೩

ದಾನಶಾಸನಗಳು

೩.೧ ಪೀಠಿಕೆ

೩.೨ ದಾನದ ಮಹತ್ವ

೩.೩ ಜೈನಧರ್ಮ

೩.೪ ದೇವಭೋಗ ಮತ್ತು ಭೂದಾನ ಶಾಸನಗಳು

೩.೫ ಬ್ರಹ್ಮದೇಯ ಅಥವಾ ಬ್ರಾಹ್ಮಣರುಗಳಿಗೆ ನೀಡಿರುವ ದಾನಗಳು

೩.೬ ವೀರರಿಗೆ ಬಿಡುತ್ತಿದ್ದ ದತ್ತಿಗಳು

೩.೭ ವಿಶೇಷ ದಾನಶಾಸನಗಳು

೩.೮ ದಾನಶಾಸನಗಳಲ್ಲಿ ಪ್ರಯೋಗವಾಗಿರುವಂತಹ ವಿಶೇಷ ಪದಗಳು

ಅಧ್ಯಾಯ – ೩
ದಾನ ಶಾಸನಗಳು

೩.೧ ಪೀಠಿಕೆ

ದಾನಂ ಭೋಗೋ ನಾಶಸ್ತಿಸ್ರೋ ಗತಯಃ ಭವಂತಿವಿತ್ತಸ್ಯ ।

ಯೋನ ದದಾತಿ ನ ಭುಂಕ್ತೇ ತಸ್ಯ ತೃತೀಯಾಗತಿರ್ಭವಿಷ್ಯತಿ ॥ [೧]

ಸಂಸ್ಕೃತದ ಪ್ರಸಿದ್ಧವಾದ ಸುಭಾಷಿತದ ಮಾತಿನಂತೆ ಸಂಪತ್ತಿಗೆ ದಾನ ಮಾಡುವಿಕೆ, ಭೋಗಿಸುವಿಕೆ ಮತ್ತು ನಾಶವಾಗುವಿಕೆ ಎಂಬುದಾಗಿ ಮೂರು ವಿಧವಾದ ಗತಿಗಳಿರುತ್ತದೆ. ಯಾರು ಸಂಪತ್ತನ್ನು ದಾನ ಮಾಡುವುದಿಲ್ಲವೋ ಅಥವಾ ಭೋಗಿಸುವುದಿಲ್ಲವೋ ಆತನ ಸಂಪತ್ತಿಗೆ ಮೂರನೆಯ (ನಾಶ) ಗತಿಯು ಬರುವುದು. ಹಾಗಾಗಿ ದೇವರ ಕೃಪೆಯಿಂದ ಸಂಪತ್ತು ಒಲಿದು ಬಂದರೆ ಅದನ್ನು ಭೋಗಿಸಬೇಕು ಅಥವಾ ದಾನ ಮಾಡಬೇಕು. ಇದೇ ಧ್ಯೇಯವಾಕ್ಯವನ್ನು ಪ್ರಾಚೀನ ಕಾಲದ ಹಲವಾರು ರಾಜ ಮನೆತನಗಳ ರಾಜ ಮಹಾರಾಜರು ಪರಿಪಾಲಿಸಿಕೊಂಡು ಹೋಗಿದ್ದರು. ಅವರು ತಮ್ಮಲ್ಲಿರುವಂತಹ ಎಷ್ಟು ಸಂಪತ್ತನ್ನು ಭೋಗಿಸುತ್ತಿದ್ದರೂ ಅಷ್ಟೇ ದಾನ, ಧರ್ಮ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳಿಗೂ ಬಳಸುತ್ತಿದ್ದರು. ಇದಕ್ಕೆ ಸಾಕ್ಷಿ ಶಾಸನಗಳೇ ಆಗಿವೆ. ಅದರಲ್ಲೂ ತಾಮ್ರಶಾಸನಗಳು ದಾನದ ವಿಷಯಗಳನ್ನು ಮತ್ತಷ್ಟು ಸಮರ್ಥಿಸುವುದರಲ್ಲಿ ಸಮರ್ಥವಾಗಿದೆ.

ದಾನವೆನ್ನುವುದು ಕೇವಲ ರಾಜರಿಗೆ ಮಾತ್ರ ಸೀಮಿತವಾಗಿರದೆ ಜನಸಾಮಾನ್ಯರಿಗೂ ಕೂಡ ದಾನದ ವಿಷಯದಲ್ಲಿ ಅಧಿಕಾರಗಳಿದ್ದವು. ಶ್ರದ್ಧಾಪೂರ್ವಕವಾಗಿ ಅರ್ಹ ವ್ಯಕ್ತಿಗೆ ಏನನ್ನಾದರೂ ಅಥವಾ ಆತನಿಗೆ ಇಷ್ಟವಾದಂತಹ ವಸ್ತುವನ್ನು ನೀಡುವುದೇ ದಾನವಾಗಿದೆ. ಸಂಸ್ಕೃತ ಭಾಷೆಯಲ್ಲಿ ದಾನ ಶಬ್ದಕ್ಕೆ ಯಾವುದೇ ಫಲಾಪೇಕ್ಷೆಯಿಲ್ಲದೆ ಏನನ್ನಾದರೂ ಇನ್ನೊಬ್ಬನಿಗೆ ನೀಡುವುದು ಎಂದರ್ಥ. ಯಾವುದೇ ರೀತಿಯಾದಂತಹ ಹಣದ ವ್ಯವಹಾರವಿಲ್ಲದೆಯೇ ಮತ್ತು ಯಾವುದೇ ಅಪೇಕ್ಷೆಯಿಲ್ಲದೆ ಇನ್ನೊಬ್ಬರಿಗೆ ವಸ್ತುವನ್ನು ಅರ್ಪಿಸುವುದೇ ದಾನವಾಗಿದೆ. ಹಾಗಾಗಿ ಪುಣ್ಯ ಸಂಪಾದನೆಯು ದಾನದ ಉದ್ದೇಶವಾಗಿದೆ.

೩.೨ ದಾನದ ಮಹತ್ವ

ಹಿಂದೂ ಸಾಮಾಜಿಕ ಸಂಸ್ಕೃತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂದು ನಾಲ್ಕು ಜಾತಿಗಳಿವೆ. ಇವರಿಗೆ ಅವರ ಜಾತಿಗನುಗುಣವಾಗಿ ಬೇರೆ ಬೇರೆ ವೃತ್ತಿಗಳನ್ನು ನೀಡಲಾಗಿದೆ. ಬ್ರಾಹ್ಮಣರಿಗೆ ವೇದಾಧ್ಯಯನ, ವೈದಿಕ ನಿತ್ಯವಿಧಿಗಳು, ಧಾರ್ಮಿಕ ಕಾರ್ಯಗಳ ಪರಿಪಾಲನೆ ಮೊದಲಾದವುಗಳಾದರೆ ಕ್ಷತ್ರಿಯರಿಗೆ ರಾಜ್ಯಪರಿಪಾಲನೆಯೇ ಪ್ರಮುಖ ವೃತ್ತಿಯಾಗಿದೆ. ವೈಶ್ಯನು ವ್ಯಾಪಾರೀ ಪ್ರವೃತ್ತಿಯನ್ನು ನೆರವೇರಿಸಿದರೆ. ಶೂದ್ರನು ಸೇವಾವೃತ್ತಿಯನ್ನು ಮಾಡುತ್ತಿದ್ದನು. ಪ್ರಾಚೀನ ಸಾಮಾಜಿಕ ಪದ್ಧತಿಯಲ್ಲಿ ರಾಜನು ಪ್ರಜಾಪರಿಪಾಲನೆಯನ್ನು ಮಾಡುತ್ತಾ ಸಾಮಾಜಿಕ ನ್ಯಾಯವನ್ನು ಜನರಿಗೆ ನೀಡುತ್ತಿದ್ದನು. ರಾಷ್ಟ್ರದ ಸಂಪತ್ತು ಅವನಲ್ಲಿದ್ದು ತೆರಿಗೆಗಳ ಮೂಲಕ ತನ್ನ ಕೋಶವನ್ನು ತುಂಬಿಸಿಕೊಳ್ಳುತ್ತಿದ್ದನು. ಈ ರೀತಿಯಾಗಿ ಸಂಗ್ರಹವಾಗುತ್ತಿದ್ದಂತಹ ಸಂಪತ್ತನ್ನು ರಾಜ್ಯದ

ರಕ್ಷಣೆಗಾಗಿಯೂ ತನ್ನ ಅರಮನೆಯ ವೆಚ್ಚಗಳಿಗೂ ಮತ್ತು ಅನೇಕ ಅಭಿವೃದ್ಧಿಕಾರ್ಯಗಳಿಗೂ ಬಳಸಿಕೊಂಡು ಉಳಿದಂತಹ ಸಂಪತ್ತನ್ನು ಅರ್ಹರಿಗೆ ದಾನ ಮಾಡುತ್ತಿದ್ದನು. ವೈಶ್ಯ ಜಾತಿಯವರು ವ್ಯಾಪಾರದಲ್ಲಿ ತೊಡಗಿದ್ದು ಅವರ ಖರ್ಚುವೆಚ್ಚಗಳನ್ನು ಅವರೇ ಪಡೆದುಕೊಳ್ಳುತ್ತಿದ್ದರು. ಶೂದ್ರನಾದರೋ ಶ್ರೀಮಂತರ ಆಶ್ರಯದಲ್ಲಿ ಇದ್ದುಕೊಂಡು ಅವರು ನೀಡುವಂತಹ ಆಹಾರ ಇತ್ಯಾದಿಗಳಿಂದ ತನ್ನ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದನು. ಆದರೆ ಬ್ರಾಹ್ಮಣ ಜಾತಿಯವರು ಪ್ರತಿನಿತ್ಯವೂ ದೇವತಾ ಕೆಲಸಗಳನ್ನು ಮಾಡುತ್ತಾ ಲೋಕಕಲ್ಯಾಣದ ಹಾದಿಯನ್ನೇ ಅನುಸರಿಸುತ್ತಿದ್ದರು. ದೇಶದ ರಾಜನು ಬ್ರಾಹ್ಮಣ ವರ್ಗದವರನ್ನು ಪೋಷಿಸಿ ಸಲಹುತ್ತಿದ್ದನು. ಅವರಿಗೆ ಬೇಕಾದಂತಹ ಎಲ್ಲಾ ವಿಧದ ಸೌಲಭ್ಯಗಳನ್ನು ಒದಗಿಸಿ ಬ್ರಾಹ್ಮಣರುಗಳಿಗೆ ಮೀಸಲಾಗಿರುವ ಅಗ್ರಹಾರವೆಂಬಂತಹ ಸ್ಥಳಗಳನ್ನು ನಿರ್ಮಿಸಿ ಕಾಲಕಾಲಕ್ಕೆ ದಾನಧರ್ಮಗಳನ್ನು ನೀಡುತ್ತಿದ್ದನು. ಬ್ರಾಹ್ಮಣರು ಯಾವುದೇ ಲಾಭವನ್ನು ಕೊಡುವಂತಹ ವೃತ್ತಿಯನ್ನು ಮಾಡಬಾರದೆಂಬ ನಿಯಮವಿತ್ತು.

ದಾನ ಕೊಡುವುದು ಭಾರತೀಯರ ಪರಂಪರೆಯಾಗಿದೆ. ಇದು ಸಂಸ್ಕೃತಿಯಲ್ಲಿ ಹಾಸು ಹೊಕ್ಕಿದೆ. ದಾನ ಎನ್ನುವುದು ಕೇವಲ ಹಣದ ರೂಪದಲ್ಲಿ ಮಾತ್ರವಿರದೆ ಭೂಮಿ ಮತ್ತು ಇತರ ವಸ್ತುಗಳ ರೂಪದಲ್ಲೂ ಇರಬಹುದಾಗಿದೆ. ರಾಜಮನೆತನಗಳಲ್ಲಿ ರಾಜರುಗಳು ಭೂದಾನವನ್ನೇ ಪ್ರಧಾನವನ್ನಾಗಿರಿಸಿ ಕೊಂಡಿದ್ದರು. ಹೆಚ್ಚಿನ ಶಾಸನಗಳಲ್ಲಿ ಭೂದಾನವೇ ಮತ್ತು ಅದಕ್ಕೆ ಸಂಬಂಧಿಸಿದಂತಹ ವಿಷಯಗಳೇ ಹೆಚ್ಚಾಗಿ ಕಂಡುಬರುತ್ತದೆ.

ಭೂಮಿದೋ ಭೂಮಿಮಾಪ್ನೋತಿ ದೀರ್ಘಮಾಯುರ್ಹಿರಣ್ಯದಃ

ಗೃಹದೋಗ್ರ್ಯಾಣಿ ವೇಶ್ಮಾನಿ ರೂಪದೋ ರೂಪಮುತ್ತಮಂ ॥ [೨]

ಮನುಸ್ಮೃತಿಯಲ್ಲಿ ವರ್ಣಿಸಿರುವಂತೆ ಭೂದಾನವನ್ನು ಕೊಟ್ಟವನ ಭೂಮಿಯು ವೃದ್ಧಿಸುತ್ತದೆ. ಸ್ವರ್ಣದಾನದಿಂದ ಆಯುಷ್ಯವು ಲಭಿಸುತ್ತದೆ. ಗೃಹದಾನದಿಂದ ಇನ್ನೂ ಶ್ರೇಷ್ಠವಾದ ಮನೆಯು ದೊರೆಯುತ್ತದೆ. ಬೆಳ್ಳಿಯನ್ನು ದಾನ ಮಾಡಿದರೆ ಸುಂದರವಾದ ರೂಪವು ದೊರೆಯುತ್ತದೆ. ರಾಜರುಗಳಿಗೆ ತನ್ನ ರಾಜ್ಯದ ಅಭಿವೃದ್ಧಿಯೇ ಮುಖ್ಯ ಗುರಿಯಾಗಿತ್ತು. ಹಾಗಾಗಿ ರಾಜನಾದವನು ಆದಷ್ಟು ತನ್ನ ಜೀವಿತಾವಧಿಯಲ್ಲಿ ಭೂದಾನವನ್ನು ನೀಡಲು ಪ್ರಯತ್ನಿಸುತ್ತಿದ್ದನು. ಅದರ ಫಲವೋ ಎಂಬಂತೆ ಕೋಲಾರ ಜಿಲ್ಲೆಯಲ್ಲಿ ದಾನಶಾಸನಗಳು ಅಧಿಕ ಸಂಖ್ಯೆಯಲ್ಲಿ ದೊರಕಿವೆ.

ದಾನ ಧರ್ಮಂ ನಿಷೇವೇತ ನಿತ್ಯಮೈಷ್ಟಿಕ ಪೌತ್ರಿಕಂ ।

ಪರಿತುಷ್ಟೇನ ಭಾವೇನ ಪಾತ್ರಮಾಸಾದ್ಯ ಶಕ್ತಿತಃ ॥ [೩]

ಒಳ್ಳೆಯ ಶ್ರೋತ್ರಿಯ ಬ್ರಾಹ್ಮಣರಿಗೆ ದಾನವನ್ನು ಮತ್ತು ಯಜ್ಞ, ಜಲಾಶಯ ನಿರ್ಮಾಣ, ಅನ್ನಛತ್ರ, ಅರವಟ್ಟಿಗೆ ಮುಂತಾದ ಪ್ರಜಾಕಲ್ಯಾಣಕರವಾದ, ಕಾರ್ಯಗಳನ್ನು ನಿತ್ಯವು ಮಾಡುತ್ತಲಿದ್ದರೆ ಅದು ಸತ್ಫಲದಾಯಕವಾಗುತ್ತದೆ. ಮನುವಿನ ಉಕ್ತಿಯಂತೆ ರಾಜನಾದವನು ದಾನಧರ್ಮಾದಿ ಕಾರ್ಯಗಳನ್ನು, ಸಾಮಾಜಿಕ ಕಾರ್ಯಗಳನ್ನು, ಅಭಿವೃದ್ಧಿಪರವಾದಂತಹ ಕಾರ್ಯಗಳನ್ನು ಯಾವಾಗಲೂ ಆಚರಿಸುತ್ತಿರಬೇಕು ಎಂದು ಕಿವಿ ಮಾತು ಹೇಳಿದ್ದಾನೆ. ಹಾಗಾಗಿ ಸಾಮಾಜಿಕ ಕಾರ್ಯಗಳಲ್ಲಿ ದಾನದ ವಿಷಯವನ್ನು ಸೇರಿಸಿರುವುದರಿಂದಾಗಿ ದಾನವೂ ಕೂಡ ಸಾಮಾಜಿಕ ಕಾರ್ಯಗಳಲ್ಲಿ ಸೇರಿತ್ತು. ಬ್ರಾಹ್ಮಣ ವರ್ಗದವರಿಗೆ ಮತ್ತು ನಿರ್ಗತಿಕರಿಗೆ ದಾನ ಮಾಡುವುದರ ಮೂಲಕ ಸಾಮಾಜಿಕ ಕಳಕಳಿಯನ್ನು ರಾಜನು ಗಳಿಸುತ್ತಿದ್ದನು.

ಗೋ ಭೂತಿಲ ಹಿರಣ್ಯಾದಿ ಪಾತ್ರೇ ದಾತವ್ಯಮುಚಿತಂ ।

ನಾ ಪಾತ್ರೇ ವಿದುಷಾ ಕಿಂಚಿತ್ ಆತ್ಮನಃ ಶ್ರೇಯ ಇಚ್ಛತಾ ॥ [೪]

ಆಕಳು, ಭೂಮಿ, ಎಳ್ಳು, ಬಂಗಾರ ಮೊದಲಾದವುಗಳನ್ನು ಶಾಸ್ತ್ರೋಕ್ತವಾಗಿ ಉದಕ ದಾನಾದಿ ಕರ್ತವ್ಯಗಳನ್ನು ಮಾಡಿಕೊಡಬೇಕು. ಪಾತ್ರತೆಯಿದ್ದಲ್ಲಿ ದಾನ ಮಾಡಿದರೆ ವಿಶೇಷ ಫಲವು ದೊರೆಯುವುದು. ಅಪಾತ್ರರಿಗೆ ದಾನ ಮಾಡಿದರೆ ವಿಪರೀತ ಫಲವು ದೊರಕುವುದು. ಅಪಾತ್ರರ ವಿಷಯವಾಗಿ ಮನುಸ್ಮೃತಿ ಮೊದಲಾದ ಗ್ರಂಥಗಳು ಸ್ಪಷ್ಟವಾದ ನಿಲುವನ್ನು ತೋರಿದೆ. ದಾನವನ್ನು ಸಾಮಾನ್ಯವಾಗಿ ಬ್ರಾಹ್ಮಣ ವರ್ಗದವರಿಗೆ ನೀಡುತ್ತಿದ್ದುದು ಪ್ರಸಿದ್ಧವಿದೆ. ಹಾಗಾದರೆ ಸತ್ಪಾತ್ರರಿಗೆ ಎಂದ ಮೇಲೆ ಬ್ರಾಹ್ಮಣರೆಂದ ವಿಧಿತವಾಗಿರುವಾಗ ಪುನಃ ಸತ್ಪಾತ್ರರ ಶಬ್ದವನ್ನು ಬಳಸಿದುದರ ಔಚಿತ್ಯವೇನೆಂದು ಭಾವಿಸಬಹುದು. ಬ್ರಾಹ್ಮಣರಲ್ಲೂ ಉನ್ನತ ಸ್ಥರದವರು, ಕೆಳಗಿನ ಸ್ಥರದವರಿದ್ದರೆಂದು ತಿಳಿಯಬಹುದಾಗಿದೆ. ಹಾಗಾದರೆ ಸತ್ಪಾತ್ರ ಬ್ರಾಹ್ಮಣರೆಂದರೇ ಯಾರೆಂಬ ಪ್ರಶ್ನೆ ಮೂಡುವುದು. ನಾಲ್ಕು ವೇದಗಳನ್ನು ತಿಳಿದವನೂ, ನಿತ್ಯವೂ ಜಪ, ಹೋಮ, ಸಂಧ್ಯಾವಂದನಾದಿ, ನೈತಿಕ ಕರ್ಮಗಳನ್ನು ನೆರವೇರಿಸುವವನು, ಉತ್ತಮ ಗೋತ್ರದಲ್ಲಿ ಜನಿಸಿದವನೂ, ಶ್ರೋತ್ರಿಯನೂ, ದಾನಕ್ಕೆ ಸಂಬಂಧಿಸಿದಂತಹ ಎಲ್ಲಾ ನಿಯಮಗಳನ್ನು ಪರಿಪಾಲಿಸುವವನೂ ಸತ್ಪಾತ್ರನಾಗಿರುವನು.

ಯಾವುದೇ ಕಾರ್ಯವನ್ನು ಶಾಸ್ತ್ರ ಸಮ್ಮತವಾಗಿ ಮಾಡಬೇಕು. ನಿಯಮಬಾಹಿರವಾಗಿ, ಗೊತ್ತಿದ್ದು, ಗೊತ್ತಿಲ್ಲದಂತೆ ಕಾರ್ಯವನ್ನು ಮಾಡಿದರೆ ಅದರ ಫಲವು ವಿಪರೀತವಾಗುವುದು. ಅದೇ ರೀತಿಯಾಗಿ ದಾನದ ವಿಚಾರವಾಗಿಯೂ ಹಲವಾರು ನೀತಿ ನಿಯಮಗಳು ಕ್ರಮಗಳು ಧರ್ಮಶಾಸ್ತ್ರದಲ್ಲಿ ಪ್ರತಿಪಾದಿತವಾಗಿದೆ. ಅದನ್ನು ಅನುಸರಿಸಿಕೊಂಡು ಹೋದರೆ ದಾನದ ಫಲವು ಸಂಪೂರ್ಣವಾಗಿ ದೊರಕುವುದು. ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿ ಬಹುವಿಸ್ತಾರವಾಗಿ ದಾನದ ವಿಚಾರವಾಗಿ ಚರ್ಚಿತವಾಗಿದೆ. ಹಾಗಾಗಿ ತಮ್ಮಲ್ಲಿರುವಂತಹ ಯಾವುದೇ ವಸ್ತುವನ್ನು ಇನ್ನೊಬ್ಬನು ಯಾಚಿಸಿದಾಗ ಆ ವಸ್ತುವನ್ನು ಯಾವುದೇ ಫಲಾಪೇಕ್ಷೆಯಿಲ್ಲದೆಯೇ ನೀಡುವುದನ್ನು ದಾನವೆಂದು ಹೇಳಬಹುದಾಗಿದೆ.

ಗೀತಾಚಾರ್ಯನಾದ ಭಗವಾನ್ ಶ್ರೀಕೃಷ್ಣನು ಭಗವದ್ಗೀತೆಯ ೧೭ನೆಯ ಅಧ್ಯಾಯದಲ್ಲಿ ಶ್ರದ್ಧೆ, ತಪಸ್ಸು, ಆಹಾರ ದಾನ ಮೊದಲಾದ ಮನುಷ್ಯನಿಗಿರಬೇಕಾದ ಗುಣಗಳನ್ನು ಮತ್ತು ಸತ್ವ, ರಜಸ್ಸು, ತಮಸ್ಸುಗಳೆಂಬ ಅದರ ಮೂರು ವಿಧವಾದ ವಿಭಾಗಗಳನ್ನು ಪ್ರತಿಪಾದಿಸುತ್ತಾ ದಾನದ ಸ್ವರೂಪವನ್ನು ಈ ರೀತಿಯಾಗಿ ತಿಳಿಸಿದ್ದಾನೆ. ದಾನಗಳಲ್ಲಿ ಸಾತ್ತ್ವಿಕದಾನ, ರಾಜಸದಾನ ಮತ್ತು ತಾಮಸದಾನವೆಂದು ಮೂರು ವಿಧವಿದೆ.

ಸಾತ್ತ್ವಿಕದಾನ : **ದಾತವ್ಯಮಿತಿ ಯದ್ದಾನಂ ದೀಯತ್ತೇನುಪಕಾರಿಣೇ ।**

ದೇಶೇ ಕಾಲೇಚ ಪಾತ್ರೇಚ ತದ್ದಾನಂ ಸಾತ್ತ್ವಿಕಂ ಸ್ಮೃತಂ ॥ [೫]

ಇನ್ನೊಬ್ಬರಿಗೆ ತನ್ನಿಂದ ಸಹಾಯವೇನಾದರೂ ಆಗಬೇಕೆಂದು ಬಯಸಿ ಅಸಹಾಯಕನಿಗೆ, ಉತ್ತಮ ಕಾಲದಲ್ಲಿ, ಉತ್ತಮ ಜನರಿಗೆ ನೀಡಿರುವಂತಹ ದಾನವು ಸಾತ್ತ್ವಿಕ ದಾನವಾಗಿದೆ.

ರಾಜಸ ದಾನ : **ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।**

ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಂ ॥ [೬]

ಯಾರು ಇನ್ನೊಬ್ಬರಿಂದ ಪ್ರತಿಯಾಗಿ ಉಪಕಾರವನ್ನು ಬಯಸಿ ಅಥವಾ ಫಲಾಪೇಕ್ಷೆಯಿಂದ ದಾನ ಮಾಡುತ್ತಾರೋ ಅದು ರಾಜಸ ದಾನವಾಗುವುದು.

ತಾಮಸ ದಾನ : ಅದೇಶ ಕಾಲೇ ಯದ್ದಾನ ಮಪಾತ್ರೇಭ್ಯಶ್ಚ ದೀಯತೇ ।

ಅಸತ್ಕೃತ ಮವ ಜ್ಞಾತಂ ತತ್ತಾಮಸಮುದಾಹೃತಂ ॥ [೭]

ಗೊತ್ತು, ಗುರಿಯಿಲ್ಲದೆಯೇ, ಅಕಾಲದಲ್ಲಿ, ಅಪಾತ್ರರಿಗೆ ಸರಿಯಾದಂತಹ ಕ್ರಮವಿಲ್ಲದೆಯೇ, ದಾನದ ಮಹತ್ವವನ್ನು ತಿಳಿಯದೆಯೇ ನೀಡುವಂತಹ ದಾನವು ತಾಮಸದಾನವಾಗುವುದು.

ಕಲಿಯುಗದಲ್ಲಿ ದಾನಕ್ಕೆ ವಿಶೇಷವಾದ ಸ್ಥಾನವನ್ನು ಮನ್ನಣೆಯನ್ನು ನೀಡಲಾಗಿದೆ. ರಾಜ ಮಹಾರಾಜರುಗಳಿಂದ ಹಿಡಿದು, ಸಾಮಾನ್ಯ ಜನರು ಕೂಡಾ ದಾನ ಧರ್ಮಗಳನ್ನು ಮಾಡುತ್ತಿದ್ದರು. ಪರಾಶರರು ತಮ್ಮ ಸ್ಮೃತಿಯಲ್ಲಿ ದಾನದ ವಿಚಾರವಾಗಿ ಈ ರೀತಿಯಾಗಿ ವಿಮರ್ಶಿಸಿದ್ದಾರೆ.

ಕಲಿಯುಗದಲ್ಲಿ ತಪ್ಪಸ್ಸು ಶ್ರೇಷ್ಠ, ತ್ರೇತಾಯುಗದಲ್ಲಿ ಜ್ಞಾನವು ಶ್ರೇಷ್ಠ, ದ್ವಾಪರಾಯುಗದಲ್ಲಿ ಯಜ್ಞವು ಶ್ರೇಷ್ಠ, ಅದೇ ರೀತಿಯಾಗಿ ಕಲಿಯುಗದಲ್ಲಿ ದಾನವೇ ಶ್ರೇಷ್ಠವಾದುದಾಗಿದೆ.

ತಪಃ ಪರಂ ಕಲಿಯುಗೇ ತ್ರೇತಾಯಾಂ ಜ್ಞಾನ ಮುಚ್ಯತೇ ।

ದ್ವಾಪರೇ ಯಜ್ಞಮಿತ್ಯಾಹು ದಾನಮೇಕಂ ಕಲೌ ಯುಗೇ ॥ [೮]

ಸುಭಾಷಿತಕಾರರೂ ಕೂಡಾ ದಾನದ ಮಹತ್ವವನ್ನು ಬಹಳವಾಗಿ ಕೊಂಡಾಡಿದ್ದಾರೆ. ಅನ್ನದಾನದ ಮಹತ್ವನ್ನು ಕೊಂಡಾಡುತ್ತಾ ಸುಭಾಷಿತಕಾರನು ಈ ರೀತಿಯಾಗಿ ಹೇಳಿದ್ದಾರೆ. ಅನ್ನದಾನವು ದೊಡ್ಡ ದಾನ. ಆದರೆ ವಿದ್ಯಾದಾನವು ಅದಕ್ಕಿಂತಲೂ ಮಿಗಿಲು. ಅನ್ನದಿಂದ ಒಂದು ಹೊತ್ತಿನ ತೃಪ್ತಿ ಸಿಕ್ಕರೆ ವಿದ್ಯೆಯಿಂದ ಆ ಜನ್ಮವು ತೃಪ್ತಿ ದೊರೆಯುತ್ತದೆ.

ಅನ್ನದಾನಂ ಪರಂ ದಾನಂ ವಿದ್ಯಾದಾನ ಮತಃ ಪರಂ ।

ಅನ್ನೇನ ಕ್ಷಣಿಕಾ ತೃಪ್ತಿ ಯಾವಜ್ಜೀವಂ ಚ ವಿದ್ಯಯಾ ॥ [೯]

ಶಾಸನಗಳಿಗೂ ದಾನಧರ್ಮ ಪ್ರಕರಣಕ್ಕೂ ಅವಿನಾಭಾವ ಸಂಬಂಧವಿದೆ. ಹೆಚ್ಚಿನ ಶಾಸನಗಳು ದಾನವನ್ನು ತಿಳಿಸುವಂತಹುದಕ್ಕೆ ಪ್ರಾಶಸ್ತ್ಯವನ್ನು ನೀಡಿದೆ. ಶಾಸನಗಳು ರಾಜನ ಸಾಮಾಜಿಕ ಕಾರ್ಯಗಳನ್ನು ಪ್ರತಿಬಿಂಬಿಸುವಂತಹ ಕನ್ನಡಿಗಳಂತಿವೆ. ಕರ್ನಾಟಕದಲ್ಲಿ ಅದರಲ್ಲೂ ಕೋಲಾರ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ತಿಳಿಯುತ್ತದೆ. ಶಾಸನಕಾರರು ಶಾಸನಗಳ ಕೂಲಂಕುಷ ಅಧ್ಯಯನ ನಡೆಸಿ ವಿಷಯ ಪ್ರತಿಪಾದನೆಯ ಆಧಾರದ ಮೇಲೆ ಅವುಗಳನ್ನು ವಿಂಗಡಿಸಿದ್ದಾರೆ. ಅದನ್ನೇ ಗಮನದಲ್ಲಿಟಟುಕೊಂಡು ಶಾಸನಗಳನ್ನು ದಾನಶಾಸನಗಳು, ಪ್ರಶಸ್ತಿ ಶಾಸನಗಳು, ಸ್ಮಾರಕ ಶಾಸನಗಳು, ರಾಜಾಜ್ಞೆಗಳು ಇತ್ಯಾದಿಗಳಾಗಿ ವಿಂಗಡಿಸಿದ್ದಾರೆ.[೧೦]

ದಾನ ಶಾಸನಗಳು ಶಾಸನಶಾಸ್ತ್ರದಲ್ಲಿ ಬಹಳ ಪ್ರಮುಖ ಸ್ಥಾನವನ್ನು ಹೊಂದಿದೆ. ಅವುಗಳು ಹೆಚ್ಚಾಗಿ ತಾಮ್ರಶಾಸನಗಳಾಗಿದ್ದು, ರಾಜನ ವಂಶಾವಳಿ ಆತನ ವೈಶಿಷ್ಟ್ಯ ಇತ್ಯಾದಿಗಳನ್ನು ತಿಳಿಯಲು ಪ್ರಮುಖವಾಗಿ ಸಹಾಯವಾಗಿದೆ. ರಾಜನು ಯಾವುದಾದರೂ ವಸ್ತುವನ್ನು ದಾನ ಮಾಡುವಾಗ ಅದರೊಂದಿಗೆ ಆ ದಾನದ ಉಲ್ಲೇಖವನ್ನು ಹೊಂದಿರುವಂತಹ ತಾಮ್ರಶಾಸನವನ್ನು ರಾಜನು ನೀಡುತ್ತಿದ್ದನು. ಹಾಗಾಗಿ ರಾಜನ ವಿವರಣೆಯೊಂದಿಗೆ ಆತನು ಮಾಡಿರುವಂತಹ ಧಾರ್ಮಿಕ ವಿಧಿವಿಧಾನಗಳನ್ನು ಪ್ರಚುರ ಪಡಿಸುವಂತಹ

ಉಲ್ಲೇಖಗಳೇ ದಾನಶಾಸನವಾಗಿದೆ. "ಮುಖ್ಯವಾಗಿ ದೇವಸ್ಥಾನಗಳಿಗೆ, ಮಠಗಳಿಗೆ, ವಿದ್ವಾಂಸರಿಗೆ, ಗುರುಗಳಿಗೆ ಸಾರೋದ್ಧಾರವಾಗಿ ನಡೆಯಲೆಂದು ಹೊಲವನ್ನೋ, ಹಣವನ್ನೋ, ಮನೆಯನ್ನೋ ಅಥವಾ ಆದಾಯದ ಒಂದು ಭಾಗವನ್ನೋ ಬಿಟ್ಟುಕೊಟ್ಟ ವಿಷಯವನ್ನು ಹೇಳುವಂತಹ ಶಾಸನಗಳು ದಾನಶಾಸನಗಳು.[೧೧]

"ಯಾವನೇ ಒಬ್ಬ ವ್ಯಕ್ತಿ ಯಾವುದಾದರೂ ಒಂದು ಸಾರ್ಥಕವಾದ ಉದ್ದೇಶದೊಂದಿಗೆ ಒಬ್ಬ ವ್ಯಕ್ತಿಗೊ, ಒಂದು ಸಂಸ್ಥೆಗೊ ನೀಡುವ ಆರ್ಥಿಕ ಮೂಲವಾದ ನೆರವನ್ನು ದಾಖಲು ಮಾಡುವುದು ಈ ಬಗೆಯ ಶಾಸನಗಳ ಮುಖ್ಯ ಉದ್ದೇಶ[೧೨] ಶಾಸನಗಳನ್ನು ಕೂಲಂಕುಷವಾಗಿ ಗಮನಿಸಿದರೆ ಉಳಿದ ಶಾಸನಗಳಿಗಿಂತ ದಾನಶಾಸನಗಳೇ ಹೆಚ್ಚಾಗಿ ದೊರಕುತ್ತವೆ. ಶಿಲಾ ಶಾಸನಗಳಿಗಿಂತ ಹೆಚ್ಚಾಗಿ ತಾಮ್ರಶಾಸನಗಳು ದಾನದ ವಿಚಾರವನ್ನು ಪ್ರಚುರ ಪಡಿಸುವುದನ್ನು ಗಮನಿಸಿದರೆ ಶಾಸನಗಳು ದಾನದ ವಿಷಯವನ್ನು ತಿಳಿಸಲೇ ಹೊರಟಂತೆ ತೋರುತ್ತದೆ.

ಕೆಲವೊಮ್ಮೆ ಶಾಸನಗಳು ಒಂದು ಗ್ರಾಮದ ಜನರಿಗೆ, ದೇವಾಲಯಗಳಿಗೆ, ಜಿನಾಲಯಗಳಿಗೆ ಕೊಟ್ಟಂತಹ ದತ್ತಿಯನ್ನು ಮಾತ್ರವಲ್ಲದೆಯೇ ಯುದ್ಧದಲ್ಲಿ ಮಡಿದಂತಹ ವೀರನಿಗೂ ದಾನ ನೀಡಿರುವುದನ್ನು ಉಲ್ಲೇಖಿಸಿದೆ. ಇಂತಹ ಶಾಸನಗಳು ಶಿಲಾ ಶಾಸನಗಳೇ ಆಗಿರುತ್ತವೆ. ಹೆಚ್ಚಾಗಿ ಭೂದಾನಗಳನ್ನೇ ಈ ಸಂದರ್ಭದಲ್ಲಿ ನೀಡಿರುವುದು ಉಲ್ಲೇಖವಾಗಿದ್ದು, ರಾಜನು ಮಾತ್ರವಲ್ಲದೆಯೇ ಊರಿನ ಜನರು ಇಂತಹ ದಾನವನ್ನು ನೀಡಿರುವುದು ಕಂಡುಬರುತ್ತವೆ. ವೀರನೊಬ್ಬನ ಸಾವನ್ನು ವರ್ಣಿಸಿ ಅವನ ಕುಟುಂಬದವರಿಗಾಗಿ ರಾಜನೇ ಊರಿನವರು ಕೊಟ್ಟ ದತ್ತಿಯನ್ನು ನಿರೂಪಿಸುವ ಶಾಸನವು ವೀರಶಾಸನವು ಹೌದು, ದಾನಶಾಸನವು ಹೌದು[೧೩] ಇಂತಹ ಶಾಸನಗಳನ್ನು ಬಾಳ್ಗಚ್ಚು, ಬಿತ್ತುವಟ್ಟ, ಕಲ್ನಾಟು ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ.

ಶಾಸನಶಾಸ್ತ್ರಜ್ಞರು ವಿಶೇಷವಾಗಿ ದಾನಶಾಸನಗಳನ್ನು ಕೂಲಂಕುಷವಾಗಿ ಅಧ್ಯಯನವನ್ನು ನಡೆಸಿ ಅವುಗಳು ಪ್ರತಿಪಾದಿಸಿರುವಂತಹ ವಿಷಯಕ್ಕನುಗುಣವಾಗಿ ವಿಷಯಾನುಕ್ರಮಣಿಕೆಯನ್ನು ವಿಮರ್ಶಿಸಿದ್ದಾರೆ. ಆ ವಿಷಯಾನುಕ್ರಮಣಿಕೆಯನ್ನು ಗಮನಿಸಿದರೆ ಹೆಚ್ಚಿನ ಅಂಶಗಳು ದಾನವನ್ನೇ ಪ್ರತಿಪಾದಿಸುತ್ತದೆ. ಹಿಂದೆ ತಿಳಿಸಿರುವಂತೆ ಸತ್ಪಾತ್ರರಿಗೆ ದಾನವನ್ನು ನೀಡಬೇಕೆಂಬ ವಿಷಯವನ್ನು ಗಮನಿಸಿದರೆ ದಾನ ಕೊಟ್ಟಂತಹ ರಾಜನ ವಿಚಾರವು ಮತ್ತು ದಾನವನ್ನು ಸ್ವೀಕರಿಸಿದಂತಹ ವ್ಯಕ್ತಿಗಳ ವಿಚಾರವು ದೊರೆಯುತ್ತದೆ. ದಾನ ಸ್ವೀಕರಿಸುವಂತಹ ವ್ಯಕ್ತಿಯು ವೈದಿಕ ಲಕ್ಷಣ ಅಥವಾ ಯಾವ ಶಾಸ್ತ್ರದಲ್ಲಿ ನಿಷ್ಣಾತನು ಎಂಬ ವಿಚಾರವು, ಆತನ ಗೋತ್ರ, ತಂದೆ, ತಾತ ಮತ್ತು ಮುತ್ತಾತರ ಹೆಸರೂ ಮತ್ತು ಆತನ ಜನ್ಮಸ್ಥಳವನ್ನು ನಮೂದಿಸುತ್ತಿದ್ದರು.

ಸ್ಮಾರಕ ಶಾಸನಗಳಲ್ಲಿ ಈ ವಿಷಯಾನು ಪೂರ್ವಿಯು ಸಂಕ್ಷಿಪ್ತವಾಗಿದೆ. ವೀರಗಲ್ಲು ಶಾಸನಗಳು ಬಾಳ್ಗಚ್ಚು, ಬಿತ್ತುವಟ್ಟ ಮೊದಲಾದ ಸ್ಮಾರಕ ಶಾಸನಗಳಲ್ಲಿ ಪ್ರಾರ್ಥನೆ ರಾಜನ ವಂಶಾವಳಿ, ವೀರರು ಯುದ್ಧದಲ್ಲಿ ಹೋರಾಡಿದಂತಹ ಸಂದರ್ಭ ಮತ್ತು ಅವರಿಗೆ ನೀಡಿರುವಂತಹ ದಾನದ ವಿಷಯಗಳನ್ನು ಗಮನಿಸಬಹುದಾಗಿದೆ. ಸ್ಮಾರಕ ಶಾಸನಗಳು ಸಂಕ್ಷಿಪ್ತ ವಿಷಯವನ್ನು ಹೇಳುವಂತಹವುಗಳಾಗಿದ್ದು, ಶಿಲಾ ರೂಪದಲ್ಲಿಯೇ ದೊರೆಯುತ್ತವೆ.

ಕೋಲಾರ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ದಾನದ ವಿಚಾರವು ಇತರ ಪ್ರದೇಶಗಳಲ್ಲಿದ್ದಷ್ಟೇ ಇಲ್ಲಿಯೂ ಇದೆ ಎಂದು ತಿಳಿಯುತ್ತದೆ. ಶಾಸನಗಳ ಪ್ರಕಾರಗಳಲ್ಲಿ ಬರುವಂತಹ ಎಲ್ಲಾ ರೀತಿಯಾದಂತಹ ಶಾಸನಗಳು ದೊರಕಿವೆ. ಈ ದಾನ ಶಾಸನಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಿದಾಗ ಬ್ರಾಹ್ಮಣರಿಗೆ, ದೇವಾಲಯಗಳಿಗೆ, ವೀರರಿಗೆ ಮತ್ತು ಸಾಮಾಜಿಕವಾಗಿ ನೀಡಿರುವಂತಹ ದಾನ ದತ್ತಿಗಳನ್ನು ಸೂಚಿಸುತ್ತವೆ. ದಾನಗಳು ಭೂಮಿಯ ರೂಪದಲ್ಲೂ ಮತ್ತು ಹಣದ ರೂಪದಲ್ಲೂ ನೀಡಿರುವುದನ್ನು ಗಮನಿಸಬಹುದಾಗಿದೆ.

ಕರ್ನಾಟಕದ ಇತಿಹಾಸದಲ್ಲಿ ಪ್ರಧಾನವಾಗಿರುವ ವಂಶಗಳಾದಂತಹ ಗಂಗ, ಹೊಯ್ಸಳ, ನೊಳಂಬ, ಬಾಣ ಹಾಗೂ ಚೋಳರ ಆಳ್ವಿಕೆಯ ಕಾಲದಲ್ಲಿ ಹುಟ್ಟಿರುವಂತಹ ಹಲವಾರು ದಾನ ಶಾಸನಗಳ ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ಶ್ರೀನಿವಾಸಪುರ ತಾಲ್ಲೂಕಿನ ಒಂದು ದಾನಶಾಸನವು ಊರಿನ ಪ್ರಸಿದ್ಧ ಶೂದ್ರನಿಗೆ ಭೂದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.[೧೪] ಪ್ರಸಿದ್ಧ ರಾಜರುಗಳಲ್ಲದೆಯೇ ಗಾವುಂಡರೂ, ದಂಡನಾಯಕರು ದಾನ ನೀಡಿರುವುದನ್ನು ಶಾಸನಗಳು ಪ್ರತಿಪಾದಿಸಿವೆ. ಈ ದಾನಶಾಸನಗಳು ಹಲವಾರು ಪ್ರಮಾಣಗಳನ್ನು, ಅಳತೆ ಮಾನಗಳನ್ನು ತಿಳಿಸುತ್ತವೆ.

ಅಧ್ಯಯನ ದೃಷ್ಟಿಯಿಂದ ಕೋಲಾರ ಜಿಲ್ಲೆಯ ದಾನಶಾಸನವನ್ನು ಈ ರೀತಿಯಾಗಿ ವಿಂಗಡಿಸಲಾಗಿದೆ.

೧. ಜೈನ ದಾನಶಾಸನಗಳು
೨. ಸಾಮಾನ್ಯ ಭೂದಾನ ಶಾಸನಗಳು
೩. ಬ್ರಹ್ಮದೇಯ ಶಾಸನಗಳು
೪. ದೇವದಾಯ ಶಾಸನಗಳು (ದೇವಭೋಗ)
೫. ವೀರರಿಗೆ ನೀಡಿರುವಂತಹ ದಾನಶಾಸನಗಳು
೬. ಸಾಮಾಜಿಕ ಉದ್ದೇಶದಿಂದ ಕೂಡಿದಂತಹ ದಾನಶಾಸನಗಳು

೩.೩ ಜೈನಧರ್ಮ ಶಾಸನಗಳು

ಜಿನತತ್ವವನ್ನು ಪ್ರತಿಪಾದಿಸುವಂತಹ ಜೈನಧರ್ಮವು ಅಹಿಂಸಾ ತತ್ವವನ್ನು ಬಲವಾಗಿ ನಂಬಿ ವಿಶ್ವ ಪ್ರಸಿದ್ಧವಾದಂತಹ ಧರ್ಮವಾಗಿದೆ. ವರ್ಧಮಾನ ಮಹಾವೀರರಿಂದ ಸ್ಥಾಪಿತವಾದಂತಹ ಈ ಧರ್ಮವು ಹಿಂದೂ ಧರ್ಮದಂತೆ ಭಾರತದ ಸಮಾಜದಲ್ಲಿ ತಳವೂರಿ ನಿಂತಿದೆ. ಬಸದಿಗಳು ಜೈನಧರ್ಮದ ಶ್ರದ್ಧಾಕೇಂದ್ರವಾಗಿದೆ. ಮೂಡುಬಿದರೆ, ಶ್ರವಣಬೆಳಗೊಳ ಮೊದಲಾದ ಸ್ಥಳಗಳು ಜೈನಧರ್ಮದ ಶ್ರದ್ಧಾಕೇಂದ್ರಗಳಾಗಿವೆ. ಕೋಲಾರ ಜಿಲ್ಲೆಯಲ್ಲಿ ಅಲ್ಪಪ್ರಮಾಣದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದಂತಹ ಬಸದಿಗಳು ದೊರಕಿವೆ.

ಜೈನಧರ್ಮಕ್ಕೆ ಸಂಬಂಧಿಸಿದಂತಹ ಶಾಸನಗಳಲ್ಲಿ ದಾನಶಾಸನಗಳು ಮತ್ತು ನಿಷಿಧಿ ಶಾಸನಗಳು ಪ್ರಸಿದ್ಧವಾಗಿವೆ. ನಿಷಿಧಿ ಶಾಸನಗಳು ಜೈನಮುನಿಗಳು ಸಜೀವವಾಗಿ ಸಮಾಧಿಯಾಗಿರುವಂತಹ ವಿಷಯವನ್ನು ತಿಳಿಸಿದರೆ, ದಾನಶಾಸನಗಳು ಬಸದಿಗಳಿಗೆ ದಾನ ನೀಡಿರುವುದನ್ನು ತಿಳಿಸಲು ಹೊರಟಿವೆ. ಕೋಲಾರ ಜಿಲ್ಲೆಯಲ್ಲಿ ಜಿನಬಸದಿಗಳಿಗೆ ರಾಜನು ಭೂದಾನ ನೀಡಿರುವುದನ್ನು ತಿಳಿಸುತ್ತವೆ. ಕರ್ನಾಟಕದ ಇತಿಹಾಸದಲ್ಲಿ ಬರುವಂತಹ ಪ್ರಧಾನ ರಾಜವಂಶಗಳ ಪ್ರಸಿದ್ಧ ರಾಜರುಗಳು ಜೈನಧರ್ಮವನ್ನು ಅವಲಂಬಿಸಿದ್ದರು.

ಕೋಲಾರ ಜಿಲ್ಲೆಯಲ್ಲಿ ಜೈನರಿಗೆ ಸಂಬಂಧಿಸಿದಂತಹ ಶಾಸನಗಳು ಕೆಲವೊಂದು ದೊರೆಯುತ್ತವೆ. ಕೋಲಾರ ಮತ್ತು ಮಾಲೂರು ತಾಲ್ಲೂಕುಗಳಲ್ಲಿ ದೊರಕಿರುವಂತಹ ತಾಮ್ರಶಾಸನಗಳಲ್ಲಿ ಜೈನ ಬಸದಿಗಳಿಗೆ ನೀಡಿರುವಂತಹ ದಾನಗಳನ್ನು ಪ್ರತಿಪಾದಿಸುತ್ತವೆ. ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದೊರಕಿರುವಂತಹ ಕ್ರಿ.ಶ.೯೦೨ರ ತಾಮ್ರಶಾಸನವು"[೧೫] ಎರಡು ಬಸದಿಗಳಿಗೆ ಬೇರೆ ಬೇರೆಯವರು ಬೇರೆ ಬೇರೆ ದಾನಗಳನ್ನು ನೀಡಿರುವುದು ಉಲ್ಲೇಖವಾಗಿದೆ. ಮಾಲೂರು ತಾಲ್ಲೂಕಿನ ನೊಣಮಂಗಲದ ೫ನೆಯ ಶತಮಾನಕ್ಕೆ

ಸಂಬಂಧಿಸಿರುವಂತಹ ತಾಮ್ರಶಾಸನವು[೧೭] ಜೈನಬಸದಿಗೆ ಭೂದಾನವನ್ನು ನೀಡಿರುವುದನ್ನು ಉಲ್ಲೇಖಿಸಿದೆ. ಮಾಧವವರ್ಮ ಮಹಾಧಿರಾಜನು ತನ್ನ ಶ್ರೇಯಸ್ಸಿಗಾಗಿ ತನ್ನ ಪಟ್ಟಾಭಿಷೇಕದ ೧೩ನೆಯ ವರ್ಷದ ಫಾಲ್ಗುಣ ಮಾಸದ ಶುಕ್ಲ ಪಕ್ಷದ ಪಂಚಮಿಯಂದು ಆಚಾರ್ಯ ವೀರದೇವರ ಉಪದೇಶದ ಮೇರೆಗೆ ಮುದುಕುತ್ತೂರ ವಿಷಯದಲ್ಲಿರುವ ಪೆರ್ಬೊಳ ಎಂಬ ಗ್ರಾಮದಲ್ಲಿರುವ ಈ ಶಾಸನವು ಗಂಗ ದೊರೆ ಮಾಧವವರ್ಮನ ಉಲ್ಲೇಖವನ್ನು ಮಾಡುತ್ತಿದ್ದು ಈತನು ವಿಷ್ಣುಗೋಪನ ಪುತ್ರ ಇಮ್ಮಡಿ ಮಾಧವವರ್ಮನಾಗಿದ್ದಾನೆ. ಈತನು ಕ್ರಿ.ಶ.೪೩೦ರಿಂದ ೪೬೬ರವರೆಗೆ ಗಂಗ ಸಾಮ್ರಾಜ್ಯವನ್ನು ಆಳಿದ್ದು ಕ್ರಿ.ಶ.೪೩೦ಕ್ಕೆ ಪಟ್ಟಾಭಿಷಿಕ್ತನಾಗಿದ್ದನು. ಶಾಸನವು ರಾಜನ ಪಟ್ಟಾಭಿಷೇಕದ ೧೩ನೆಯ ವರ್ಷವೆಂದು ಉಲ್ಲೇಖಿಸಿರುವುದು ಕ್ರಿ.ಶ.೪೪೩ಕ್ಕೆ ಸರಿಹೊಂದುತ್ತದೆ. ಶಾಸನೋಕ್ತ ಮುದುಕುತ್ತೂರು ಸ್ಥಳವು ಪ್ರಾಚೀನ ಜೈನ ಕೇಂದ್ರವಾಗಿದ್ದಿರಬಹುದು.

ಅರ್ಹತ್ ದೇವಾಲಯಕ್ಕೆ ಗ್ರಾಮದಲ್ಲಿರುವ ದೊಡ್ಡ ಕೆರೆಯ ಕೆಳಗೆ ೧೨ ಖಂಡುಗದಷ್ಟು ಭೂಮಿಯನ್ನು ಒಂದು ತೋಟವನ್ನು ಒಂದು ಪಟು ಕ್ಷೇತ್ರವನ್ನು ಮತ್ತು ಕುಮಾರಪುರವೆಂಬ ಗ್ರಾಮವನ್ನು ಜಲಧಾರೆಯೊಂದಿಗೆ ನೀಡಲಾಯಿತೆಂದು ವರ್ಣಿತವಾಗಿದೆ. ಇದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ಕೊಂಗುಣಿವರ್ಮ ಧರ್ಮ ಮಹಾಧಿರಾಜನು ತನ್ನ ಶ್ರೇಯೋಭಿವೃದ್ಧಿಗಾಗಿ ತನ್ನ ಪಟ್ಟಾಭಿಷಿಕ್ತವಾದ ಮೊದಲನೆಯ ವರ್ಷದ ಫಾಲ್ಗುಣ ಮಾಸದ ಶುಕ್ಲಪಕ್ಷ ಪಂಚಮಿ ತಿಥಿಯಂದು ತನ್ನ ಗುರುವೂ, ಪರಮಾರ್ಹತನೂ ಆದ ವಿಜಯಕೀರ್ತಿಯ ಉಪದೇಶದ ಮೇರೆಗೆ ಉರನೂರಿನ ಅರ್ಹತ್ ದೇವಾಲಯಕ್ಕೆ ಕೊರಿಕುಂದ ವಿಷಯದಲ್ಲಿರುವ ಚೆನ್ನೆಲ್ಕರನಿ ಎಂಬ ಗ್ರಾಮವನ್ನು ದಾನವಾಗಿ ನೀಡಿರುವನು. ಅದೇ ರೀತಿಯಾಗಿ ಪೆರೂರ ವಿಷಯದಲ್ಲಿರುವ ಚಾನಿಯಡಿಗಳಿಂದ ನಿರ್ಮಿತವಾದ ಅರ್ಹತ್ ಆಯತನಕ್ಕೆ ಈ ಆಯತನದ ಹೊರಗೆ ೧/೪ ಭಾಗ ಕರ್ಷಾಪಣ ಕ್ಷೇತ್ರವನ್ನು ದೇವಭೋಗ ಕ್ರಮದಂತೆ ನೀಡಿರುವನೆಂದು ಈ ಶಾಸನವು ಪ್ರತಿಪಾದಿಸಿದೆ."[೧೭]

ಪೊಲ್ಮ ಎಂಬ ಗ್ರಾಮದ ನಿವಾಸಿಯೂ ಮಾದ ದೇನಾಂದಾಕರರ ಪುತ್ರನಾದ ಅಯ್ಯಮ್ಮ ದೇನಂದಾಕರರ ಮಗನಾದ ತೇನಾಂದಾಕಯಾಳೆಯರ್ ಎಂಬುವವನು ಕನ್ನಮಂಗಲದಲ್ಲಿ ಬಸದಿಯನ್ನು ನಿರ್ಮಿಸುತ್ತಾನೆ. ಈ ಬಸದಿಗೆ ಈತನು ಭೂದಾನಗಳನ್ನು ನೀಡಿರುತ್ತಾನೆ. ಬಸದಿಯ ಪಶ್ಚಿಮಕ್ಕೆ ಹೊಸದಾಗಿ ನಿರ್ಮಿಸಿರುವಂತಹ ತೋಟ, ಬಸದಿಯ ಪಶ್ಚಿಮಕ್ಕಿರುವಂತಹ ನದಿಯ (ಉಲ್ಲೇಖವಿರುವುದಿಲ್ಲ) ಪೂರ್ವದ ದಡದಲ್ಲಿರುವಂತಹ ಹೊಸ ತೋಟವನ್ನು ಮತ್ತು ಕೆರೆಯ ಕೆಳಗಿರುವ ತಂಬೋಲ ಎಂಬ ಹಳ್ಳದ ಬಳಿಯಿರುವ ಗದ್ದೆಯಲ್ಲಿ ಮೂರು ಖಂಡುಗ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಈ ದಾನವನ್ನು ಕಡಹೊರ ಭಟಾರರ ಶಿಷ್ಯರಾದ ಉತ್ತನಂದಿ ಪುರಿಯ ಮಂಡಲ ಭಟಾರರ ಶಿಷ್ಯೆಯಾದ ಕಾಮುಂಗರೆ ಕಂಟಿಯಾರ್ ಎಂಬುವವಳ ಸಮ್ಮುಖದಲ್ಲಿ ನೀಡಲಾಗಿದೆ. ಗಂಗ ದೊರೆ ಸತ್ಯವಾಕ್ಯ ಪೆರ್ಮಾನಡಿ ರಾಜಮಲ್ಲನ ಆಳ್ವಿಕೆಗೆ ಸಂಬಂಧಿಸಿರುವಂತಹ ಈ ಶಾಸನವು ರಾಜನು ಜೈನಧರ್ಮಕ್ಕೆ ಪ್ರೋತ್ಸಾಹ ನೀಡುತ್ತಿದ್ದನು ಎಂದು ಗಮನಿಸಬಹುದಾಗಿದೆ. ಶಾಸನೋಕ್ತ ಕನ್ನಮಂಗಲ ಸ್ಥಳವು ಬಹುಶಃ ಗಂಗ ದೊರೆಗಳ ಆಳ್ವಿಕೆಯ ಕಾಲದಲ್ಲಿ ಜೈನರ ಪ್ರಧಾನ ಕೇಂದ್ರವಾಗಿದ್ದಿರಬಹುದು. ಸರ್ವಧರ್ಮ ಸಹಿಷ್ಣುವಾಗಿದ್ದ ಸತ್ಯವಾಕ್ಯ ರಾಜಮಲ್ಲನು ಜೈನ ಮತಾವಲಂಭಿಯಾಗಿದ್ದು, ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದನು.

ಇದೇ ಕನ್ನಮಂಗಳ ಗ್ರಾಮದಲ್ಲಿ ಸೊಟ್ಟಿಯೂರ ಪ್ರಧಾನನಾದ ಮಾದಮ್ಮಯ್ಯನ ಪುತ್ರನಾದ ಶ್ರೀವರ್ಮಯ್ಯನು ಬಸದಿಯನ್ನು ನಿರ್ಮಿಸಿ, ಈ ಬಸದಿಯ ಹಿಂಬದಿಯಲ್ಲಿರುವ ತೋಟವನ್ನು ಮತ್ತು ತಂಬೋಲ

ಎಂಬ ಪ್ರದೇಶದಲ್ಲಿ ಎಂಟು ಕೊಳಗದಷ್ಟು ಧಾನ್ಯ ಬೆಳೆಯುವಂತಹ ಭೂಮಿಯನ್ನು ನೀಡಿರುವನು. ಎಳನೊಮ್ಮದೀವೆ ಎನ್ನುವವನ ಪುತ್ರನಾದ ಅಯ್ಯಪು ನೊಮ್ಮಯ್ಯ ಎನ್ನುವವನು ಈ ಬಸದಿಯ ಪಶ್ಚಿಮದಲ್ಲಿರುವ ತೆಂಗಿನತೋಟವನ್ನು ಮತ್ತು ನಾಲ್ಕು ಕೊಳಗದಷ್ಟು ಭತ್ತವನ್ನು ಬೆಳೆಯುವಂತಹ ಕ್ಷೇತ್ರವನ್ನು ಇದೇ ಬಸದಿಗೆ ದಾನವಾಗಿ ನೀಡಿರುವನು. ಈ ಮೇಲೆ ಉಲ್ಲೇಖವಾಗಿರುವಂತಹ ಎಲ್ಲಾ ದಾನಗಳು ಶಕವರ್ಷ ೮೨೪ನೆಯ ವರ್ಷದ (ಕ್ರಿ.ಶ.೯೦೨) ಫಾಲ್ಗುಣ ಮಾಸದ ಶುಕ್ಲ ಪಕ್ಷದ ಪಂಚಮಿ, ಬುಧವಾರ ಮತ್ತು ರೋಹಿಣಿ ನಕ್ಷತ್ರ ಉಳ್ಳಂತಹ ದಿನದಂದು ಈ ದಾನವನ್ನು ನೀಡಲಾಗಿದೆ.

ಶಾಸನವು ಗಂಗ ಅರಸ ಕೊಂಗಣಿ ವರ್ಮ ಧರ್ಮ ಮಹಾಧಿರಾಜನ ಆಳ್ವಿಕೆಗೆ ಸಂಬಂಧಿಸಿದುದಾಗಿದ್ದು, ಆಳ್ವಿಕೆ ನಡೆಸುತ್ತಿದ್ದ ಶಾಸನವು ರಾಜನ ಪಟ್ಟಾಭಿಷೇಕದ ಮೊದಲ ವರ್ಷವನ್ನು ತಿಳಿಸಿರುವುದರಿಂದ ಶಾಸನದ ಕಾಲ ಕ್ರಿ.ಶ.ಸು.೫ನೆಯ ಶತಮಾನವಾಗುತ್ತದೆ. ಶಾಸನ ಪ್ರತಿಪಾದಿತವಾದ ಕುರಿತ ವಿಷಯವು ಗಂಗರ ಒಂದು ಆಡಳಿತ ವಿಭಾಗವಾಗಿದ್ದಿರಬಹುದು. ಸಂಖ್ಯೆಯ ದೃಷ್ಟಿಯಿಂದ ಗಮನಿಸಿದರೆ ಕೋಲಾರ ಜಿಲ್ಲೆಯಲ್ಲಿ ಜೈನ ಶಾಸನಗಳು ಅತ್ಯಲ್ಪವಾಗಿದೆ. ಆದರೂ ಕೋಲಾರ ಜಿಲ್ಲೆಯಲ್ಲಿ ಕ್ರಿ.ಶ.೫ನೆಯ ಶತಮಾನದಿಂದಲೂ ಜೈನಧರ್ಮವು ತಳವೂರಿತ್ತೆಂಬ ವಿಷಯವನ್ನು ನರಸಾಪುರ ಗ್ರಾಮದ ಶಾಸನದಿಂದ ತಿಳಿಯಬಹುದಾಗಿದೆ. ಜೈನಧರ್ಮವು ಕರ್ನಾಟಕದ ಇತರ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ತೋರಿಸಿದಂತೆ ಕೋಲಾರ ಜಿಲ್ಲೆಯಲ್ಲೂ ತೋರಿಸಲು ಪ್ರಯತ್ನಿಸಿತ್ತೆಂದು ಗಮನಿಸಬಹುದಾಗಿದೆ.

೩.೪ ದೇವಭೋಗ ಮತ್ತು ಭೂದಾನಗಳು

ರಾಜರು ತಮಗೂ ತಮ್ಮ ಕುಟುಂಬದವರಿಗೂ ಒಳ್ಳೆಯದಾಗಬೇಕು ತಮ್ಮ ವಿಜಯ ಯಾತ್ರೆಯು ಶಾಶ್ವತವಾಗಿ ಮುಂದುವರೆದುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ದೇವಾಲಯಗಳಿಗೆ ದಾನದತ್ತಿಯನ್ನು ಬಿಟ್ಟಿರುವುದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಹೆಚ್ಚಾಗಿ ಇಂತಹ ಸಂದರ್ಭಗಳಲ್ಲಿ ಭೂದಾನವನ್ನು ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. "ಭೋಗ"ವೆಂದರೆ ಅನುಭವಿಸುವುದು, ಭೋಗಿಸುವುದು ಎಂದರ್ಥ. ದೇವಭೋಗವೆಂದರೆ ದೇವರ ಅನುಭೋಗಕ್ಕಾಗಿ ನೀಡಿರುವಂತಹ ದಾನವೆಂದರ್ಥವಾಗುತ್ತದೆ. ರಾಜರು ಹೆಚ್ಚಾಗಿ ದೇವದಾನ ಅಥವಾ ದೇವಭೋಗವನ್ನು ದೇವಾಲಯದಲ್ಲಿ ನಡೆಯುವಂತಹ ಪೂಜೆ ಪುನಸ್ಕಾರಗಳಿಗೋ, ನಂದಾದೀಪಕ್ಕಾಗಿಯೋ ಭೂಮಿಯ ರೂಪದಲ್ಲಿ ಅಥವಾ ಹಣದ ರೂಪದಲ್ಲಿ ದಾನದತ್ತಿಗಳನ್ನು ನೀಡುತ್ತಿದ್ದರು.

೩.೪.೧ ದೇವಭೋಗ

೮ನೇಯ ಶತಮಾನದ ರಾಮೇನಹಳ್ಳಿಯ ಶಾಸನವೊಂದು[೧೮] ಲೋಕಾದಿತ್ಯ ಎಳ – ಅರಸನು ಪುಲಿಕ್ಕುರಕ್ಕಿ ಭಟಾರ ದೇವರಿಗೆ ೧೦೦ ಗದ್ಯಾಣ ಇನ್ನೂ ಹಲವಾರು ಕಳನಿಯನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸಿದೆ. ಇಲ್ಲಿ ನೀಡಿರುವಂತಹ ಹಣದಿಂದ ಸ್ವಲ್ಪಭೂಮಿಯನ್ನು ಖರೀದಿಸಿ ದೇವಭೋಗವಾಗಿ ಉಪಯೋಗಿಸಿಬೇಕೆಂದು ತಿಳಿಸಿದೆ. ದೇವಭೋಗವಾಗಿ ನೀಡಿರುವಂತಹ ಭೂಮಿಯನ್ನು ನಾಗೊಮ್ಮೆ ಎಂಬುವವನಿಗೆ ಕೃಷಿ ಮಾಡಲು ನೀಡಲಾಗಿದೆ. ಈ ಭೂಮಿಯು ಕದಂಬೂರು ಎಂಬ ಸ್ಥಳದಲ್ಲಿದ್ದು, ಈ ದಾನಕ್ಕೆ ಸಾಕ್ಷಿಗಳು ಬೆಳತೂರಿನ

ಮಹಾಜನರು, ಕಡತೂರಿನ ಮಹಾಜನರು ಮತ್ತು ಕದಂಬೂರಿನ ೪೦ ಮಹಾಜನರೆಂದು ತಿಳಿಸುತ್ತದೆ. ಬಂಗಾರದ ಗದ್ಯಾಣಗಳನ್ನು ದೇವಭೋಗವಾಗಿ ನೀಡಿರುವುದು ವಿಶೇಷವಾಗಿದೆ.

೮ನೆಯ ಶತಮಾನದ ಹಳೇಕೊಪ್ಪದ ಶಾಸನವು[೧೯] ಸೆಟ್ಟಿ (ಶೆಟ್ಟಿ)ಯೊಬ್ಬನು ದೇವಿಗೆ ದೇವಭೋಗದ ರೀತಿಯಲ್ಲಿ ಪಟ್ಟದ ಕೆರೆಯ ಕೆಳಭಾಗದಲ್ಲಿರುವ ೧೦ ಕೊಳಗ ಭೂಮಿಯನ್ನು (ಕಳನಿಯನ್ನು) ಇರಿಸಿದನು. (ಕಾಯ್ದಿರಿಸಿದನು) ಎಂದು ಶಾಸನವು ತಿಳಿಸಿದೆ. ೮ನೆಯ ಶತಮಾನಕ್ಕೆ ಸಂಬಂಧಿಸಿದ ಗಂಗರ ಶಾಸನವೊಂದು ಭೂದಾನವನ್ನು ಉಲ್ಲೇಖಿಸಿದ್ದು, ಕೊಂಗಣಿ ಮುತ್ತರಸನು ಪೆರ್ಪಟ (ಹೆಬ್ಬಟ) ಗ್ರಾಮವನ್ನು ದಾನ ನೀಡಿರುವನು. ಆದರೆ ಶಾಸನದ ತೇದಿಯಗಿ ದಾನ ನೀಡಿರುವಂತಹ ಉದ್ದೇಶವಾಗಲಿ, ದಾನ ಸ್ವೀಕರಿಸಿದಂತಹ ವ್ಯಕ್ತಿಗಳ ಹೆಸರಾಗಲಿ ಶಾಸನದಲ್ಲಿ ಉಲ್ಲೇಖಿತವಾಗಿಲ್ಲ.

ಶ್ರೀಪುರುಷನ ಆಳ್ವಿಕೆಗೆ ಸಂಬಂಧಿಸಿದ ೮ನೆಯ ಶತಮಾನದ ಇನ್ನೊಂದು ಶಾಸನವು[೨೦] ಭೂದಾನವನ್ನು ದೇವರಿಗೆ ನೀಡಿರುವಂತಹ ವಿಷಯವನ್ನು ತಿಳಿಸುತ್ತದೆ. ಶ್ರೀವಲ್ಲವ ಎನ್ನುವವನು ದುಗ್ಗಮಾರನಿಂದ ಅಪ್ಪಣೆಯನ್ನು ಪಡೆದು ಖಂಡುಗಳಷ್ಟು ಭೂಮಿಯನ್ನು ಶಿವ ದೇವಾಲಯಕ್ಕೆ ದಾನವಾಗಿ ನೀಡಿರುವನು. ತೊಂಡೀಶ್ವರ ಎಂದು ಅಸ್ಪಷ್ಟವಾಗಿದ್ದು ಎಷ್ಟು ಖಂಡುಗಗಳಷ್ಟು ಭೂದಾನವನ್ನು ನೀಡಿರುವನೆಂದು ಸ್ಪಷ್ಟವಾಗುವುದಿಲ್ಲ. ಬಹುಶಃ ಮೂರು ಖಂಡುಗದಷ್ಟು ಭೂದಾನವನ್ನು ನೀಡಿರುಬಹುದು.

ದಾಸರಹಳ್ಳಿ ಹೋಬಳಿ ಕಾಮದೇವನ ಹಳ್ಳಿಯಲ್ಲಿ ದೊರಕಿರುವಂತಹ ಶಾಸನವು[೨೧] ಸೆಟ್ಟಿಯೊಬ್ಬನ ಭಕ್ತಿ ವಿನಮ್ರತೆಯನ್ನು ಸಾರುತ್ತಿದೆ. ಶ್ರೀವಮ್ಮಗಚರೆಸೆಟ್ಟಿ ಎಂಬುವವನು ಈ ಸ್ಥಳದಲ್ಲಿ ಈಶ್ವರ ದೇಗುಲವನ್ನು ನಿರ್ಮಾಣ ಮಾಡಿ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಿ, ಈ ದೇಗುಲವನ್ನು ನಿರ್ಮಿಸಲು ಕಾರಣ ಕರ್ತೃವಾದ ನೊಳಂಬಾಚಾರಿ ಎಂಬುವವನಿಗೆ ಒಂದು ಖಂಡುಗ ಗದ್ದೆಯನ್ನು ಧಾರೆಯ ನೆರೆದು ಕೊಟ್ಟನು. ಈತನು ಇದೇ ಸಂದರ್ಭದಲ್ಲಿ ಈಶ್ವರ ದೇವರಿಗೆ ಮೂರು ಖಂಡುಗ ಗದ್ದೆಯನ್ನು ದೇವರಿಗೆ ಧಾರೆಯನೆರೆದು ಕೊಟ್ಟನು. ಇದೇ ಸೆಟ್ಟಿಯು ತಿರುಪೆರಿ ಭಟ್ಟ ಎಂಬುವವರಿಗೆ ದಾನವನ್ನು ನೀಡಿರುವಂತಹ ಮಾಹಿತಿಯು ಶಾಸನದಲ್ಲಿ ಉಲ್ಲೇಖವಾಗಿದೆ, ಈ ದಾನಕ್ಕೆ ಚ್ಯುತಿ ತಂದವನು. ಈ ಶಿವನ ಲಿಂಗವನ್ನು ನಾಶ ಮಾಡಿದ ಪಾಪಕ್ಕೆ ಗುರಿಯಾಗುವನು ಎಂದಿದೆ.

ಕ್ರಿ.ಶ. ೧೦೧೯ರ ಕೋಲಾರದ ಶಾಸನವು[೨೨] ಕುವಲಾಲ ನಾಡಿನಲ್ಲಿರುವ ಕುವಲಾಲ ಎಂಬ ಪ್ರದೇಶದಲ್ಲಿರುವ ಪಟ್ಟಾಲಕಿ ದೇವಿಗೆ ದಾನ ನೀಡಿರುವಂತೆ ತಿಳಿಸುತ್ತದೆ. ಆದರೆ ದಾನದ ಉದ್ದೇಶ ಮತ್ತು ದಾನಿಯಾರೆಂದು ಸ್ಪಷ್ಟವಾಗುತ್ತಿಲ್ಲ. ಇದೇ ದೇವಿಗೆ ತಿಯಂಬಾಕನ್, ಅಣ್ಣಾಮನ್ ಮತ್ತು ಆಳನ್ ಮೊದಲಾದವರು ದತ್ತಿಯನ್ನು ಬಿಟ್ಟಿರುವರೆಂದು ಇದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ತಿಳಿಸುತ್ತದೆ. ಕೋಲಾರದಲ್ಲಿದ್ದಂತಹ ಪಟ್ಟಾಲಕ್ಕಿ ದೇವಿಯ ಗುಡಿಯು ಬಹಳ ಹೆಸರುವಾಸಿಯಾಗಿದ್ದಿರಬಹುದು.

ಕ್ರಿ.ಶ.೧೧೧೨ರ ಚೋಳರಾಜ ಕುಲೋತ್ತುಂಗನ ಕಾಲದ ಶಾಸನವು ಮಾಳಿಯೂರಿನ ಗಂಗೈಕೊಂಡ ಕೋಳೀಶ್ವರ ದೇವರಿಗೆ ಇರುಮುಡಿ ಪೆರು ಇರಾಯರ್ ಎಂಬುವವನು ದಾನವನ್ನು ನೀಡಿರುವನು[೨೩] ಎಂದು ತಿಳಿಸುತ್ತದೆ.

ಹೊಯ್ಸಳ ದೊರೆ ವಿಷ್ಣುವರ್ಧನನು ಮಹುದೇರಿ ಎಂಬ ಪ್ರದೇಶದ ಉತ್ತರಕ್ಕಿರುವ ಕ್ಷೇತ್ರಪಾಲ ದೇವರಿಗೆ ದೇವದಾನದ ರೂಪದಲ್ಲಿ ದಾನ ನೀಡಿರುವನು. ಕ್ರಿ.ಶ.೧೧೨೦ರ ಸಮಯಕ್ಕೆ ಸೇರಿರುವಂತಹ ಈ ಶಾಸನವು ರಾಜನು ಏನನ್ನು ದಾನವಾಗಿ ನೀಡಿರುವನೆಂಬ ಮಾಹಿತಿ ನೀಡುತ್ತಿಲ್ಲ.[೨೪]

ವಿಷ್ಣುವರ್ಧನನಿಗೆ ಸಂಬಂಧಿಸಿದ ಕ್ರಿ.ಶ.೧೦೨೯ರ ಇನ್ನೊಂದು ಶಾಸನವು[೨೫] ಆತನ ಅನುಯಾಯಿಗಳು ದೇವಭೋಗ ರೂಪದಲ್ಲಿ ನೀಡಿರುತ್ತಾರೆ. ಕ್ರಿ.ಶ.೧೧೨೯ರ ಶಾಸನವು ಶ್ರೀಕೈಲಾಸಂ ದೇವಾಲಯದಲ್ಲಿರುವ ಕೂತ್ತಾಡುನ್‌ದೇವ ದೇವರಿಗೆ ನಂದಾದೀಪದ ಉರಿಯುವಿಕೆಗಾಗಿ ಭೂದಾನವನ್ನು ನೀಡಿರುವನೆಂದು ಉಲ್ಲೇಖಿಸಿದೆ. ದಾನ ನೀಡಿರುವವನು ವಿಷ್ಣುವರ್ಧನ ರಾಜನ ಅನುಯಾಯಿ ಅಥವಾ ಸಾಮಂತನಾದ ಭುಜಬಲ ವೀರ ಗಂಗ ಪೊಯ್ಸಳ ತಲಗಾಡುಗೊಂಡನೆಂದು ಶಾಸನವು ತಿಳಿಸುತ್ತದೆ.

ಮಾಲೂರಿನ ಇನ್ನೊಂದು ಹೊಯ್ಸಳರ ಶಾಸನವು[೨೬] (ಕ್ರಿ.ಶ.೧೧೬೯) ವೆಲ್ಲಯೂರಿನ ಮಹಾದೇವರಿಗೆ ತಿರುವಗಟ್ಟೀಶ್ವರ ಉದಯಾನ್ ವರದ ಕೊಟ್ಟನ್ ಎಂಬಾತನು ಭೂದಾನವನ್ನು ನೀಡಿರುವನೆಂದು ತಿಳಿಸುತ್ತದೆ. ದಾನಿಯು 'ತುಳಾರ್' ಎಂಬ ಗ್ರಾಮದ ಒಡೆಯನಾಗಿರುವನು.

ಕ್ರಿ.ಶ. ೧೨೮೬ರ ಹೊಯ್ಸಳ ದೊರೆ ರಾಮನಾಥ ದೇವನು ರಾಜ್ಯವನ್ನಾಳುತ್ತಿರಲು ಗಂಗ ಪೆರುಮಾಳ್ ಎಂಬಾತನು ವೆಳ್ಳಿಯೂರು ಎಂಬಲ್ಲಿರುವ ವಾಳವಂದ ಪೆರುಮಾಳ್ ದೇವರಿಗೆ ದಾನವನ್ನು ನೀಡಿರುವನು. ಗ್ರಾಮದಿಂದ ಬರುವಂತಹ ತೆರಿಗೆಯನ್ನು ದಾನದ ರೂಪದಲ್ಲಿ ದೇವರಿಗೆ ಅರ್ಪಿಸಿರುವನು.[೨೭]

ಕ್ರಿ.ಶ.೧೨೯೩ ಕೋಲಾರದ ಶಾಸನವು[೨೮] ಹೊಯ್ಸಳ ದೊರೆ ರಾಮನಾಥನ ಆಳ್ವಿಕೆಯ ಕಾಲದಲ್ಲಿ ಇರಾಮಾಣ ದೇವರ ಆರೋಗ್ಯ ಸುಧಾರಿಸಲಿ ಎಂಬ ಉದ್ದೇಶದಿಂದ ಅಳಗಿಯಾನ್ ಎಂಬುವವನು ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೈಯಾರ್ ಎಂಬ ದೇವರಿಗೆ ದಾನವನ್ನು ನೀಡಿರುವನು ಕಳ್ಳಪಳ್ಳಿ ಮತ್ತು ನಲ್ಲಾಲಂ ಎಂಬ ಗ್ರಾಮದಲ್ಲಿ ದೊರಕುವಂತಹ ತೆರಿಗೆಯನ್ನು ದಾನವಾಗಿ ನೀಡಿರುವನೆಂದು ಉಲ್ಲೇಖವಿದೆ.

ಹೊಯ್ಸಳ ದೊರೆ ಬಲ್ಲಾಳ ದೊರೆಯ ಆಳ್ವಿಕೆಗೆ ಸೇರಿದ ಕ್ರಿ.ಶ.೧೩೦೯ರ ದಾನ ಶಾಸನವೊಂದು[೨೯] ವಿಶೇಷವಾದ ಮಾಹಿತಿಯನ್ನು ನೀಡುತ್ತದೆ. ಕೈವಾರ ನಾಡಿನ ನೊಂಡಗುಳಿಯಲ್ಲಿ ನಡೆದ ಜಾತ್ರೆಯಲ್ಲಿ ಬಲ್ಲಾಳ ದೇವರ ವಿಜಯಕ್ಕಾಗಿ ಮತ್ತು ಕುಲದೇವರ ಶ್ರೇಯೋಭಿವೃದ್ಧಿಗಾಗಿ ಪೆರುಮಾಪಿಳ್ಳೈ ಮತ್ತು ಇತರರು ತೆರಿಗೆಯನ್ನು ಮನ್ನಾ ಮಾಡುತ್ತಾರೆ. ಈ ಹಣವನ್ನು ಶ್ರೀಪತಿ (ಸೀತಿಬೆಟ್ಟ)ಯಲ್ಲಿರುವ ತ್ರಿಭುವನ ವಿಡಂಗ ಕ್ಷೇತ್ರಪಾಲ ದೇವರಿಗೆ ವೀಳ್ಯದೆಲೆ ಮತ್ತು ಅಡಿಕೆಯನ್ನು ಸಮರ್ಪಿಸುವುದಕ್ಕಾಗಿ ಬಳಸಲಾಗಿದೆಯೆಂದು ಶಾಸನವು ಉಲ್ಲೇಖಿಸುತ್ತದೆ.

ಕ್ರಿ.ಶ. ೧೩೨೯ರ ಶಾಸನವೊಂದು ನಂಬೂರಿ ಪುರುಷೊತ್ತಮನೆಂಬುವವರಿಗೆ ದಾನವನ್ನು ನೀಡಲಾಗಿರುವ ವಿಷಯವನ್ನು ತಿಳಿಸುತ್ತಿದ್ದು, ಇದನ್ನು ಅಲ್ಲಾಳ್ ಪೆರುಮಾಳ್ ಮತ್ತು ವರದಾರುಂ ಪೆರುಮಾಳ್ ದೇವರ ಅನುಗ್ರಹವನ್ನು ಪಡೆಯುವುದಕ್ಕಾಗಿ ದಾನವನ್ನು ನೀಡಲಾಗಿದೆ.[೩೦]

ಕೋಲಾರ ತಾಲ್ಲೂಕಿನ ಕ್ರಿ.ಶ.೧೩೨೧ರ ಶಾಸನವೊಂದು ದೇವದಾನವನ್ನು ತಿಳಿಸುತ್ತದೆ. ಕಠಾರಿ ಸಾಳುವ ರಾಚೆಯ ನಾಯಕನು ವೀರಬಲ್ಲಾಳ ದೇವನಿಗೆ ಜಯ ದೊರಕಲಿ ಎಂದು ತ್ರಿಭುವನ ವಿಡಂಗ ಕ್ಷೇತ್ರಪಾಲ ಪಿಳ್ಳೈಯರ್ ದೇವರಿಗೆ ದಾನವನ್ನು ನೀಡಿರುವಂತಹ ವಿಚಾರವಿದೆ. ಕಠಾರಿ ಸಾಳುವನು ತುರುಷ್ಕರನ್ನು ನಾಶ ಮಾಡಿದವನೂ ಮಹಾವೀರ ನಾಯಕಾಚಾರಿ ಎಂದು ಶಾಸನವು ವರ್ಣಿಸಿದೆ.[೩೧]

ಇದೇ ದೇವರಿಗೆ ಹೊಯ್ಸಳ ದೊರೆ ವೀರಬಲ್ಲಾಳ ದೇವನ ಮಗನಾದ ದಂಡೆ ಸಿಂಗೆಯ ದಂಡನಾಯಕನು ಅಕ್ಕಿಯ ದಾನವನ್ನು ನೀಡಿರುವುದು ಉಲ್ಲೇಖಿಸಿದೆ. ಅಕ್ಕಿಯ ಜೊತೆಗೆ ಹಣವನ್ನು ದೇವರಿಗೆ ದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸುತ್ತದೆ. ಈ ಶಾಸನದ ಕಾಲವು ಕ್ರಿ.ಶ. ೧೩ನೆಯ ಶತಮಾನವಾಗಿದೆ.[೩೨]

ಉತ್ತನೂರು ಗ್ರಾಮದಲ್ಲಿ ದೊರಕಿರುವಂತಹ ಶಾಸನವೊಂದು ಚಿಕ್ಕರಾಯರ ತಮ್ಮ ಅಪ್ಪಗೌಡರು ಶಿವರಾತ್ರಿಯ ಪುಣ್ಯಕಾಲದಲ್ಲಿ ಹಿರಿಯಗೌಡರಿಗೆ ಪುಣ್ಯವಾಗಲಿಯೆಂದು ವರದರಾಜ ಸ್ವಾಮಿ ದೇವರಿಗೆ ದಾನವನ್ನು ನೀಡಿರುವಂತಹ ವಿಚಾರವಿದೆ.[೩೩]

ಮುಳಬಾಗಿಲು ತಾಲ್ಲೂಕಿನಲ್ಲಿ ದೊರಕಿರುವಂತಹ ತಾಮ್ರಶಾಸನವು ಇಳವಂಜಿರಾಯನನ್ನು ಉಲ್ಲೇಖಿಸುತ್ತಿದ್ದು, ಶಕವರ್ಷ ೧೧೮೩ (ಕ್ರಿ.ಶ.೧೨೬೧)ರ ಜಯನಾಮ ಸಂವತ್ಸರದ ಆಶ್ವಯುಜ ಶುದ್ಧ ದಶಮಿಯಂದು ಇಳವಂಜಿರಾಯನು ಪ್ರಸನ್ನ ಸೋಮೇಶ್ವರ ಸ್ವಾಮಿಗೆ ಹಲವಾರು ದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸುತ್ತದೆ. ಪ್ರಸನ್ನ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರವನ್ನು ಮಾಡಿಸಿ ಪ್ರತಿಷ್ಠಾ ಮಹೋತ್ಸವದ ಸಂದರ್ಭದಲ್ಲಿ ದೇವರ ದೀಪಾರಾಧನೆ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ರಥೋತ್ಸವ, ವರುಷೋತ್ಸವದ ಸಂದರ್ಭದಲ್ಲಿ ಅಂಗ ರಂಗ ಭೋಗ ಭಾಗ್ಯ ವೈಭೋಗಗಳು ನಡೆಯಬೇಕೆಂದು ಮುಳುವಾಯಿಯ ಚಾವಡಿಗೆ ಸಲ್ಲುವ ಇಂಡ್ಲಹಳ್ಳಿ, ಗಮ್ಮಕಲ್ಲುಗ್ರಾಮ, ಮಾರಂಡ ಹಳ್ಳಿಗ್ರಾಮ ಕೊಂಡೇನಹಳ್ಳಿ ಗ್ರಾಮ, ಗಡಿಪಲ್ಲಿ ಬಳಿಯಲ್ಲಿರುವ ನೆಲ್ಲಿಕುಂಟೆ ಗ್ರಾಮವನ್ನು ಕಗ್ಗನಹಳ್ಳಿ ಗ್ರಾಮ, ತಿರುವಲ್ಲಹಳ್ಳಿ, ಪಾಲೇನಹಳ್ಳಿ ಗ್ರಾಮ ತೊಲಡಿಗ್ರಾಮ, ಮೇಲುತಾಯಲೂರು ಗ್ರಾಮವನ್ನು, ತ್ಯಾತಕಲ್ಲು ಸೀಮೆಯೊಳಗೆ ಕಂಪಸಮುದ್ರ ಗ್ರಾಮವನ್ನು ಕಸಬೆಯೊಳಗೆ ಸೋಮೇಶ್ವರ ಕೆರೆಯನ್ನು ಇದೇ ಸೋಮೇಶ್ವರ ಕೆರೆಯ ಕೆಳಗೆ ಹತ್ತು ಖಂಡುಗ ಗದ್ದೆಯನ್ನು ಜಲಧಾರಾ ಪೂರ್ವಕವಾಗಿ ನೀಡಿರುವನು. ಈ ಎಲ್ಲಾ ದಾನಗಳನ್ನು ದೇವಾಲಯದ ಅರ್ಚಕರೂ, ಯಜುಶಾಖ್ಯಾಧ್ಯಾಯರು, ಭೋದಾಯನ ಸೂತ್ರ, ಭಾರ್ಗವ ಗೋತ್ರದವರೂ, ಆದ ಚಂದ್ರಶೇಖರ ದೀಕ್ಷಿತರನ್ನು ನಿಮಿತ್ತವಾಗಿಟ್ಟುಕೊಂಡು ನೀಡಲಾಗಿದೆ. [೩೪]

೩.೪.೨ ಭೂದಾನ ಶಾಸನಗಳು

ಕ್ರಿ.ಶ.೧೦೮೪ರ ಬಂಗಾರಪೇಟೆಯ ಶಾಸನವು[೩೫] ಭೂದಾನವನ್ನು ಉಲ್ಲೇಖಿಸಿದೆ. ಆದರೆ ಯಾರು ಈ ದಾನವನ್ನು ನೀಡಿರುವರೆಂಬ ಮಾಹಿತಿ ದೊರಕುತ್ತಿಲ್ಲ. ಚೋಳರಾಜ ಕುಲೋತ್ತುಂಗನು ಆಳ್ವಿಕೆ ನಡೆಸುತ್ತಿರಲು ಇರಟ್ಟಪಾಡಿ ಕೊಂಡ ಚೋಳ ಮಂಡಲದಲ್ಲಿರುವ ಕೊರ್ರ್ಯುಕ್ಕುಲ್ಯೆ ನಾಡುವಿನ ಸೇಲೂರಿನ ನಿವಾಸಿಯೂ ಕಾಶ್ಯಪ ಗೋತ್ರದ ಒಬ್ಬ ವ್ಯಕ್ತಿಯು ಸೇಲೂರಿನಲ್ಲಿರುವ ಒಂದು ದೇವಾಲಯಕ್ಕೆ ಭೂದಾನವನ್ನು ನೀಡಿರುವನು.

ಕ್ರಿ.ಶ.೧೦೦೫ರ ಕೋಲಾರದ ಚೋಳದೊರೆ ರಾಜೇಂದ್ರ-೧ ತಮಿಳುಶಾಸನವು[೩೬] ಭೂದಾನದ ವಿಷಯವನ್ನು ಸ್ಪಷ್ಟಪಡಿಸುತ್ತಾ ತನ್ಮಶೆಟ್ಟಿ ಎನ್ನುವವನು ಮತ್ತು ಇತರರು ೧,೦೦೦ ಕುಳಿಗಳಷ್ಟು ಭೂಮಿಯನ್ನು ದಾನವಾಗಿ ನೀಡಿದ್ದಾರೆ ಎಂಬ ವಿಷಯವಿದೆ. ಈ ಭೂದಾನ ಕ್ಷೇತ್ರಪಾಲ ದೇವರಿಗೆ ಪೂಜೆಯನ್ನು ಕೊಡುವ ಸಲುವಾಗಿ ನೀಡಿರಬಹುದು. ದಾನವನ್ನು ಯಾರಿಗೆ ನೀಡಲಾಯಿತು ಎಂಬ ಮಾಹಿತಿ ಇರುವುದಿಲ್ಲ. ಆದರೆ ದಾನಕ್ಕೆ ಸಾಕ್ಷಿಗಳಾಗಿ ಹಲವಾರು ವ್ಯಕ್ತಿಗಳ ಸಹಿ ಇದೆ. ಇಲ್ಲಿ ಪ್ರಯೋಗವಾಗಿರುವಂತಹ 'ಕುಳಿ' ಶಬ್ದವು ಖಂಡುಗದಂತೆಯೇ ಅಳತೆಯ ಪ್ರಮಾಣವಾಗಿರಬಹುದು.

ಕ್ರಿ.ಶ. ೧೩೦೭ರ ಕೋಲಾರ ಶಾಸನವೊಂದು ಹೊಯ್ಸಳದೊರೆ ಮೂರನೆಯ ಬಲ್ಲಾಳನ ಭುಜಗಳಿಗೆ ಮತ್ತು ಖಡ್ಗಕ್ಕೆ ಜಯ ದೊರಕಲೆಂದು ಕಡತ್ತೂರ ಸ್ವಾಮಿಯಾದ ಇಳೈಯಾಳ್ವರ್ ಎಂಬಾತನು ಭೂದಾನವನ್ನು ಮಾಡಿರುವನೆಂದು ತಿಳಿಸಿದೆ. ಭೂದಾನದ ಪ್ರದೇಶವು ತಿಳಿಸಿಲ್ಲವಾದರೂ ಕಡತ್ತೂರಿನಲ್ಲಿ ಯಾವುದೋ ಪ್ರದೇಶವನ್ನು ದಾನವಾಗಿ ನೀಡಿರಬಹುದು.[೩೭]

ಕ್ರಿ.ಶ. ೧೩೩೨ರ ಮಾಲೂರು ಶಾಸನವು ಅರಂಗ ನಾಯಕ್ಕರ್ ಮತ್ತು ಮಾದೆಯ ನಾಯಕ್ಕರ್ ಎಂಬುವವರು ಪಟ್ಟಣದ ಸ್ವಾಮಿಯಾದ ಪೆಟ್ಟಿಯಾರ್ ವರದಪ್ಪನ್ ಎಂಬುವವನಿಗೆ ಭೂದಾನವನ್ನು ನೀಡಿದವರು. ದಾನಗ್ರಾಹಿಯು ಎರುಮರ್ರೈ ನಾಡಿನ ತಿರುಮಲೈ ಎಂಬ ಪ್ರದೇಶದವನೆಂದು ತಿಳಿಸುತ್ತದೆ.[೩೮]

ಕ್ರಿ.ಶ. ೧೩೩೩ರ ಕೋಲಾರ ಶಾಸನವು ದೇವಾಲಯದ ಪೂಜಾರಿಗೆ ಭೂದಾನವನ್ನು ನೀಡಿರುವುದಾಗಿ ಉಲ್ಲೇಖಿಸುತ್ತದೆ. ಸೊಪ್ಪೈ ನಾಯಕ್ಕರ್ ಎನ್ನುವವನು ವೀರಬಲ್ಲಾಳ ದೇವರ(ರಾಜ) ಭುಜಬಲ ಮತ್ತು ಖಡ್ಗದ ವಿಜಯ ಯಾತ್ರೆಗಾಗಿ ಮತ್ತು ನಾಡಿನ ಒಳಿತಿಗಾಗಿ ದಾನವನ್ನು ನೀಡಿರುವನು.[೩೯]

ಅವನಿಯ ಶಾಸನವೊಂದು ದೇವಾಲಯಕ್ಕಾಗಿ ನಗರವನ್ನು ದಾನವಾಗಿ ನೀಡಿರುವಂತಹ ವಿಷಯವನ್ನು ತಿಳಿಸುತ್ತದೆ. ವೀರ ಮಹೇಂದ್ರ ನೊಳಂಬಾಧಿರಾಜನು ಪೊಳರ ಮಂಗಳದಲ್ಲಿ ದೀವಬ್ಬೆ ಸಮುದ್ರವನ್ನು ಕಟ್ಟಿಸಿ ಅದರ ತೀರದಲ್ಲಿ ವಿಷ್ಣು ದೇವಾಲಯವನ್ನು ನಿರ್ಮಿಸಿ ಎಳನಗರವನ್ನು ಸರ್ವಬಾಧಾ ಪರಿಹಾರವಾಗಿ ನೀಡಿರುವನೆಂದು ಶಾಸನವು ಉಲ್ಲೇಖಿಸಿದೆ.[೪೦]

ಇದೇ ಅವನಿಯ ಶತ್ರುಘ್ನ ದೇವಾಲಯದಲ್ಲಿರುವಂತಹ ಒಂದು ಸಣ್ಣ ಶಾಸನವು ದಿಲೀಪಯ್ಯ ರಾಜನು ಮಹಾದೇವರಿಗೆ ಹನ್ನೆರಡು ಕಿರುದೆರೆಯನ್ನು (ಭೂಭಾಗ) ದಾನವಾಗಿ ಬಿಟ್ಟಂತಹ ಮಾಹಿತಿಯಿದೆ.[೪೧]

ಯಲ್ದೂರು ಗ್ರಾಮದಲ್ಲಿರುವ ಒಂದು ವೀರಗಲ್ಲು ತಿರುವೆಂಗಡಯ್ಯ ಎಂಬುವವನು ಹೋರಾಡಿ ಸತ್ತಾಗ ಪೃಥಿವೀ ಗಾವುಂಡ ಸ್ವಾಮಿಯ ಮಗ ಗಂಗ ಗಾವುಂಡಸ್ವಾಮಿಯು ಒಂದು ಖಂಡುಗದಷ್ಟು ಕಳನಿಯನ್ನು (ಭೂಮಿ) ದಾನವಾಗಿ ನೀಡಿರುವನೆಂದು ತಿಳಿಸುತ್ತದೆ.[೪೨]

ವಾಣಿಗನ ಹಳ್ಳಿಯಲ್ಲಿ ದೊರಕಿರುವಂತಹ ಕೆಲವು ಶಾಸನಗಳು ಭೂದಾನವನ್ನು ಉಲ್ಲೇಖಿಸಿದೆ. ಈ ಶಾಸನಗಳೆರಡು ವಾಣಿಗನಹಳ್ಳಿಯಲ್ಲಿ ಗೌತಮ ಗೋತ್ರದ ಮಂಗರಸನು ಕಟ್ಟು ಕೊಡಗೆ ಹತ್ತಕ್ಕೆ ಎರಡು ಸರ್ವಮಾನ್ಯದ ಗದ್ದೆ ಎಂದು ತಿಳಿಸುತ್ತದೆ.[೪೩] ಇದೇ ವಾಣಿಗನ ಹಳ್ಳಿಯಲ್ಲಿ ಈಶ್ವರ ದೇವಾಲಯದಲ್ಲಿ ದೊರಕಿರುವಂತಹ ಶಾಸನವು ಉತ್ತನೂರ ತಮ್ಮಗೌಂಡನು ಕೆಂಪಾಪುರ ಎಂಬ ಗ್ರಾಮವನ್ನು ದಾನವಾಗಿ ನೀಡಿರುವುದಾಗಿ ತಿಳಿಸುತ್ತದೆ. ಇದೇ ವಾಣಿಗನ ಹಳ್ಳಿಯಲ್ಲಿರುವ ಚೌಡೇಶ್ವರಿ ದೇವಿಗೆ ಸನಿಕಟ್ಟೆ ಪೇಟೆಯ ರಾಮಗೌಡಯ್ಯನವರು ಕೆರೆಯನ್ನು ಕಟ್ಟಿಸಿ ಆ ಕೆರೆಯ ತೂಬಿನ ಬಳಿ ಗದ್ದೆಯನ್ನು ದಾನವಾಗಿ ನೀಡಿರುವುದಾಗಿ ಉಲ್ಲೇಖವಿದೆ.[೪೪]

ಮಡಿವಾಳ ಗ್ರಾಮದ ಸೀತಿಬೆಟ್ಟದಲ್ಲಿ ದೊರಕಿರುವಂತಹ ಕ್ರಿ.ಶ.೧೪೬೬ರ ಶಾಸನವು ಕಠಾರಿ ಸಾಳುವ ನರಸಿಂಗರಾಯನು ಸಿಹತ್ತಿಯ ಭೈರವದೇವರಿಗೆ ದಾನವನ್ನು ನೀಡಿದಂತಹ ಸಂದರ್ಭದಲ್ಲಿ ಹಿಂದೆ ಚೋಳದೊರೆ ರಾಜೇಂದ್ರ ಚೋಳನು ಮತ್ತು ಹೊಯ್ಸಳ ದೊರೆ ವೀರಬಲ್ಲಾಳನು ನೀಡಿದಂತಹ ದಾನವನ್ನು ಸೂಚಿಸುತ್ತದೆ. ಹೊಯ್ಸಳ ದೊರೆಯಾದ ವೀರಬಲ್ಲಾಳನು ತನ್ನ ಆಳ್ವಿಕೆಯ ಕಾಲದಲ್ಲಿ ಕಠಾರಿ ಸಾಳುವನು ಹಲವಾರು

ಗ್ರಾಮಗಳನ್ನು ದಾನವಾಗಿ ನೀಡಿದಂತಹ ದೇವಭೋಗವನ್ನು ಪುನಃ ಜೀರ್ಣೋದ್ಧಾರಗೊಳಿಸಿ ದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸಿದೆ.[೪೫]

೩.೫ ಬ್ರಹ್ಮದೇಯ ಅಥವಾ ಬ್ರಾಹ್ಮಣರುಗಳಿಗೆ ನೀಡಿದ ದಾನಗಳು

ವರ್ಣಾಶ್ರಮ ಧರ್ಮಗಳಲ್ಲಿ ಮೊದಲು ಬರುವಂತಹ ಬ್ರಾಹ್ಮಣ ವರ್ಗದವರಿಗೆ ಸಮಾಜದಲ್ಲಿ ವಿಶೇಷವಾದಂತಹ ಸ್ಥಾನವಿತ್ತು. ಯಾವುದೇ ರೀತಿಯಾದಂತಹ ವಾಣಿಜ್ಯ ವ್ಯಾಪಾರಗಳನ್ನು ಮಾಡದೇ ಧಾರ್ಮಿಕ ಕಾರ್ಯಗಳಲ್ಲಿಯೇ ನಿರತರಾಗಿದ್ದಂತಹ ಈ ವರ್ಗದವರು ಯಾವುದೇ ಆರ್ಥಿಕ ಮೂಲವನ್ನೋ ಅಥವಾ ಲಾಭದಾಯಕವಾದಂತಹ ವ್ಯಾಪಾರವನ್ನು ನಡೆಸುವುದು ಅನುಚಿತಕಾರವಾಗಿತ್ತು. ಹಾಗಾಗಿ ಒಂದು ಪ್ರದೇಶದ ರಾಜನು ಕಾಲಕಾಲಕ್ಕೆ ಬ್ರಾಹ್ಮಣ ವರ್ಗದವರಿಗೆ ಭೂಮಿಯ ರೂಪದಲ್ಲೋ ಅಥವಾ ಹಣದ ರೂಪದಲ್ಲೋ ಸಹಾಯವನ್ನು ನೀಡುತ್ತಿದ್ದನು. ಹೆಚ್ಚಾಗಿ ರಾಜನು ಇಂತಹ ದಾನಗಳನ್ನು ಒಬ್ಬ ಬ್ರಾಹ್ಮಣನಿಗೋ ಅಥವಾ ಬ್ರಾಹ್ಮಣ ಸಮೂಹದವರಿಗೋ ಭೂದಾನವನ್ನು ಅಥವಾ ಸಂಪೂರ್ಣ ಗ್ರಾಮವನ್ನು ದಾನವಾಗಿ ನೀಡುತ್ತಿದ್ದನು. ಹೆಚ್ಚಾಗಿ ತಾಮ್ರಶಾಸನಗಳಲ್ಲಿ ಬ್ರಹ್ಮದೇಯದ ವಿಚಾರಗಳು ಕಂಡುಬರುತ್ತದೆ. ರಾಜನು ಒಳ್ಳೆಯ ಗೋತ್ರದ ಬ್ರಾಹ್ಮಣರುಗಳನ್ನು ಆಯ್ಕೆ ಮಾಡಿ ಅವರಿಗೆ ದಾನವನ್ನು ನೀಡುತ್ತಿದ್ದನು. ವಿಜಯನಗರೋತ್ತರ ಶಾಸನಗಳಲ್ಲಿ ದಾನ ಶಾಸನಗಳು ವಿಶೇಷವಾಗಿ ತಾಮ್ರ ಶಾಸನವಾಗಿದ್ದು, ರಾಜನು ಭೂದಾನವನ್ನೋ ಅಥವಾ ಗ್ರಾಮದಾನವನ್ನೋ ನೀಡುತ್ತಿದ್ದಂತಹ ಸಂದರ್ಭದಲ್ಲಿ ದಾನದೊಂದಿಗೆ ತಾಮ್ರಶಾಸನಗಳನ್ನು ನೀಡುತ್ತಿದ್ದನು. ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಬ್ರಹ್ಮದೇಯ ಶಾಸನಗಳು ಶಿಲಾ ಶಾಸನಗಳಾಗಿದ್ದು ವಿಶೇಷವಾದಂತಹ ಶೈಲಿಯನ್ನು ಹೊಂದಿದೆ.

> **"ಶ್ರೀಮತ್ ಶ್ರೀ ಶಿವ . . . .**
> **ಹಾರಾಜ ಪೃಥವೀ ರಾಜ್ಯಂಗೆಯೆ ಪುತ್ತೂರು ದೇಶಿ**
> **ವ ಮಾರಮ್ಮಂದುಂಡಗೆರ್ಗ್ಗಂನಲ್ಲ ತೂರೊಡೆ ಒ**
> **ಗ್ಗಮನೆ ಬಳೆಗ ಮುಂ ಅಯ್ದೂಂಬು ಮೆದಕ**
> **ಳನಿಯು ಎಳ್ತುಂಬು ಬಳೆ ತೊಟ್ಟ ಪಟ್ಟು ಬ್ರ**
> **ಹ್ಮದೇಯಂ . . . ."**

ಮೇದುತುಂಬ ಹಳ್ಳಿಯ ೯ನೆಯ ಶತಮಾನದ ಈ ಬ್ರಹ್ಮದೇಯ ಶಾಸನವು ಪುತ್ತೂರು ಎಂಬ ಪ್ರದೇಶದ ಒಡೆಯನಾದ ಶಿವಮಾರಮ್ಮ ಎಂಬುವವನು ದುಂಡಗೇರ ಮತ್ತು ನಲ್ಲತ್ತೂರು ಒಡೆಯರ್ ಎಂಬುವವರಿಗೆ ಒಂದೊಂದು ಮನೆಯನ್ನು, ಐದು ತೂಬುಗಳಷ್ಟು ಕಳನಿಯನ್ನು, ಏಳು ತೂಂಬುಗಳಷ್ಟು ಬಾಳೆ ತೋಟವನ್ನು ಬ್ರಹ್ಮದೇಯವಾಗಿ ನೀಡಲಾಗಿದೆ ಎಂದು ವಿವರಿಸುತ್ತದೆ. ಈ ದಾನವು ಎಲ್ಲ ವಿಧದ ಬಾಧೆಗಳಿಂದ ಪರಿಹೃತವಾಗಿದೆ. ದಾನ ಸ್ವೀಕರಿಸಿದಂತಹ ವ್ಯಕ್ತಿಗಳು ಯಾವ ಜಾತಿಯವರೆಂದು ತಿಳಿಸದೇ ಒಡೆಯರೆಂದು ಶಾಸನವು ತಿಳಿಸಿದೆ. ಆದರೆ ಶಾಸನವು ಬ್ರಹ್ಮದೇಯವಾದುದರಿಂದ ಊರಿನ ಪ್ರಮುಖ ಬ್ರಾಹ್ಮಣರಾಗಿರಬೇಕು.[೪೬]

ಮುಳಬಾಗಿಲು ತಾಲ್ಲೂಕಿನ ಉತ್ತನೂರಿನ ೬ನೆಯ ಶತಮಾನದ ತಾಮ್ರ ಶಾಸನವು[೪೭] ೪೮ ಜನ ಬ್ರಾಹ್ಮಣರುಗಳಿಗೆ ಬ್ರಹ್ಮದೇಯ ದಾನವನ್ನು ನೀಡಿರುವಂತಹ ವಿಚಾರವಿದೆ. ಆದರೆ ವಿಶೇಷವೆಂದರೆ ಬ್ರಾಹ್ಮಣರುಗಳ ಹೆಸರುಗಳ ಉಲ್ಲೇಖವಿಲ್ಲದೆ ಭಾರದ್ವಾಜ, ವಾತ್ಸ್ಯ, ಕೌಶಿಕ ಗೋತ್ರದವರೂ, ತೈತ್ತಿರೀಯ ಚರಣದವರೂ, ಆಪಸ್ತಂಭ

ಸೂತ್ರದವರೂ ಪ್ರವಚನ ಪಟುಗಳು ಎಂದು ಸೂಚಿಸಿದೆ. ಮೇದು ತುಂಬಿಹಳ್ಳಿಯ ಶಾಸನವು ಸಂಕ್ಷಿಪ್ತವಾದ ಶಾಸನವಾಗಿದ್ದು, ಲಿಪಿಯ ದೃಷ್ಠಿಯಿಂದ ಗಮನಿಸಿದರೆ ಕ್ರಿ.ಶ.೯ನೆಯ ಶತಮಾನವಾಗುವುದು. ಶಾಸನವು ಗಂಗ ದೊರೆ ಶಿವಮಾರ ಕೊಂಗುಣಿ ಮಹಾರಾಜನ ಆಳ್ವಿಕೆಗೆ ಸಂಬಂಧಿಸಿದ್ದು, ಆತನು ಕ್ರಿ.ಶ.೭೮೮ರಿಂದ ಕ್ರಿ.ಶ.೮೧೨ರವರೆಗೆ ಗಂಗ ಸಾಮ್ರಾಜ್ಯವನ್ನು ಆಳಿದ್ದನು.

ದಾನವು ಪುದಲ್ನಾಡು ರಾಷ್ಟ್ರದ ಕೋಳಿತೂಟು ಗ್ರಾಮವಾಗಿದ್ದು, ದಾನದ ತೇದಿಯು ದುರ್ವಿನೀತ ರಾಜನ ಆಡಳಿತದ ೩೦ನೆಯ ವರ್ಷವು ಕಾರ್ತಿಕ ಮಾಸದ, ಶುಕ್ಲಪಕ್ಷದ ಹುಣ್ಣಿಮೆ ಕೃತ್ತಿಕಾ ನಕ್ಷತ್ರವುಳ್ಳ ಅಭಿಜಿನ್ ಮುಹೂರ್ತ (ಮಧ್ಯಾಹ್ನ)ವಾಗಿದೆ. ರೇಡಿಯೂರು ಎಂಬ ಗ್ರಾಮದಲ್ಲಿರುವಂತಹ ಕೆರೆಗಳಿಂದ ಯಾವುದೇ ಅಡೆತಡೆಯಿಲ್ಲದೆ ಅವಿಚ್ಛನ್ನವಾಗಿ ನೀರನ್ನು ಎಲ್ಲಿಯತನಕ ಉಪಯೋಗಿಸಬಹುದೋ ಅಲ್ಲಿಯ ತನಕ ಭೂಮಿಯನ್ನಷ್ಟೆ ದಾನವಾಗಿ ನೀಡಲಾಗಿದೆ. ಗಂಗ ವಂಶದ ಎಲ್ಲ ಸ್ಥಾಯಿಕ ಸದಸ್ಯರೂ ಮತ್ತು ಬ್ರಾಹ್ಮಣರು ಈ ದಾನಕ್ಕೆ ಸಾಕ್ಷಿಗಳೆಂದು ಶಾಸನವು ತಿಳಿಸುತ್ತದೆ.

ಶ್ರೀನಿವಾಸಪುರ ತಾಲ್ಲೂಕಿನ ಗುಮ್ಮರೆಡಿಪುರದ ತಾಮ್ರ ಶಾಸನವು[೪೮] (ಸಂಸ್ಕೃತ) ಬ್ರಹ್ಮದೇಯ ಶಾಸನವಾಗಿದೆ. ಕ್ರಿ.ಶ.೬ನೆಯ ಶತಮಾನದ ಈ ಶಾಸನವು ಗಂಗ ದೊರೆ ದುರ್ವಿನೀತನು ತನ್ನ ಜನ್ಮದಿನದಂದು ಪುದಲ್ನಾಡ ರಾಷ್ಟ್ರದಲ್ಲಿರುವ ಕೊಡುಂಚೆರುವು ಎಂಬ ಗ್ರಾಮವನ್ನು ಐದು ಜನ ಬ್ರಾಹ್ಮಣರುಗಳಿಗೆ ದಾನವಾಗಿ ನೀಡಿರುವನು. ಈ ಬ್ರಾಹ್ಮಣರುಗಳು ಕೋರ್ಗಟ್ಟೂರು ಗ್ರಾಮದ ನಿವಾಸಿಗಳೂ, ಭಾರದ್ವಾಜ ಗೋತ್ರದವರೂ, ಪ್ರವಚನ ಪಟುಗಳೂ ಷಟ್ಕರ್ಮ ನಿರತರೂ, ಯಜ್ಞ ವಿದ್ಯಾಪಾರಂಗತರೂ ಭವರುದ್ರಶರ್ಮನ್, ದ್ರೋಣಶರ್ಮನ್, ಸ್ಕಂದಶರ್ಮನ್, ಭವಶರ್ಮನ್ ಮತ್ತು ಅಗ್ನಿಶರ್ಮನ್ ಎಂಬುವವರೂ ದಾನವನ್ನು ಸ್ವೀಕರಿಸಿದವರು. ದುರ್ವಿನೀತನ ವಿಜಯ ೨೪ನೆಯ ವರ್ಷದ ಮಾಘಮಾಸದ ಕೃಷ್ಣಪಕ್ಷ, ದ್ವಾದಶೀ ಬುಧವಾರ, ತನ್ನ ಜನ್ಮ ನಕ್ಷತ್ರದಂದು ಈ ದಾನವನ್ನು ನೀಡಿರುವನು. ಶಾಸನದ ಕಾಲವು ಕ್ರಿ.ಶ.೪೮೯ಕ್ಕೆ ಸರಿಹೊಂದುತ್ತದೆ.

ಕ್ರಿ.ಶ. ೯೦೪ರ ಬೇತಮಂಗಲದ ಶಾಸನವು ಮಹಾಜನರಿಗೆ ಭೂದಾನವನ್ನು ನೀಡಿರುವ ಉಲ್ಲೇಖವನ್ನು ಮಾಡುತ್ತದೆ. ಕಬ್ಬಂದ ಕುಂದಣ್ಣ ಎಂಬುವವರಿಗೆ ತಿಂಗಳಿಗೆ ಇಂತಿಷ್ಟು ಎಂದು ವಿಭಾಗ ಮಾಡಿ ದಾನವನ್ನು ನೀಡಿರುವುದಾಗಿ ಈ ಶಾಸನ ಉಲ್ಲೇಖಿಸಿದೆ.[೪೯]

ಇದೇ ಸ್ಥಳದಲ್ಲಿ ದೊರಕಿರುವಂತಹ ಕ್ರಿ.ಶ.೭೪೪ರ ಶಾಸನವೊಂದು ವಿಜಯಾದಿತ್ಯನ ಮಂಗಲದ ಮಹಾಜನರಿಗೆ ಒಂದು ಹೊತ್ತಿನ ಭೋಜನಕ್ಕಾಗಿ ದಾನವನ್ನು ನೀಡಿರುವಂತೆ ಉಲ್ಲೇಖಿಸುತ್ತದೆ. ಆದರೆ ಏನನ್ನು ದಾನ ನೀಡಿರುವನೆಂಬ ವಿಷಯವು ಅಸ್ಪಷ್ಟವಾಗಿದೆ.[೫೦] ಈ ಶಾಸನಗಳು ಮಹಾಜನರಿಗೆ ದಾನ ನೀಡಿರುವುದನ್ನು ತಿಳಿಸಿರುವುದರಿಂದ ಬ್ರಹ್ಮದೇಯವೆನ್ನಬಹುದು.

ಉತ್ತನೂರು ಗ್ರಾಮದ ವರದರಾಜ ಸ್ವಾಮಿ ದೇವಾಲಯದಲ್ಲಿರುವ ಕ್ರಿ.ಶ.೯೬೮ರ ಶಾಸನವು[೫೧] ಮಹಾಜನರಿಗೆ ದಾನವನ್ನು ನೀಡಿರುವುದನ್ನು ಉಲ್ಲೇಖಿಸುತ್ತದೆ. ಹಿರಿಯ ಪೂಗಳ್ಮಾಲೆಯ ನಂಬಯನ ಮಗನಾದ ನೊಳಂಬ ಸೆಟ್ಟಿಯು ಉತ್ತನೂರಿನ ೧೨ ಬ್ರಾಹ್ಮಣರುಗಳಿಗೆ ೧೦೦ ಗದ್ಯಾಣದಷ್ಟು ಬಂಗಾರವನ್ನು ಬ್ರಾಹ್ಮಣರ ಪ್ರತಿನಿತ್ಯದ ಖರ್ಚಿಗಾಗಿ (ಭೋಜನ ಇತ್ಯಾದಿ) ದಾನವನ್ನು ನೀಡಲಾಯಿತು. ಅದೇ ರೀತಿಯಾಗಿ ಪರಮೇಶ್ವರ ದೇವರ ದೇವಾಲಯದಲ್ಲಿ ನಂದಾದೀಪಕ್ಕಾಗಿ ೪೦ ಗದ್ಯಾಣವನ್ನು ಕೊಟ್ಟು ಭೂಮಿಯನ್ನು ಖರೀದಿಸಿ ದಾನವಾಗಿ

ನೀಡಿರುವನು. ಅದೇ ರೀತಿಯಾಗಿ ಪ್ರತಿನಿತ್ಯದ ಪೂಜೆಗಾಗಿ ೧೫ ಗದ್ಯಾಣ ಭೂಮಿಯನ್ನು ಖರೀದಿಸಿ ಬ್ರಾಹ್ಮಣರುಗಳಿಗೆ ದಾನ ನೀಡಿರುವಂತಹ ಮಾಹಿತಿ ಇದೆ.

ಕ್ರಿ.ಶ. ೯೨೫ರ ಕ್ಯಾಲನೂರು ಶಾಸನವು[೫೨] ಕೆರನೂರ ಗ್ರಾಮದ ೫೦ ಮಹಾಜನರಿಗೆ ೨೦ ಗದ್ಯಾಣ ಪೊಂಗೊಟ್ಟನ್ನು ಕೊಟ್ಟಿರುವಂತಹ ವಿಷಯವನ್ನು ನೀಡಿದೆ. ಪತ್ಮಂಗೆರೆಯ ಒಡೆಯನೂ, ವತ್ಸ ಗೋತ್ರದವನೂ ಕಣ್ಣಮ್ಮಯ್ಯನ ಪುತ್ರನೂ ಆದ ಇರುಗಮಯ್ಯ ಮತ್ತು ಮದುಗಮಯ್ಯ ಮೊದಲಾದವರು ದಾನ ನೀಡಿದ ವ್ಯಕ್ತಿಗಳಾಗಿದ್ದಾರೆ. ಈ ದಾನವನ್ನು ಇರುಗಮಯ್ಯ ಮತ್ತು ಮದುಗಮಯ್ಯನವರಿಬ್ಬರು ಭಾಗ ಮಾಡಿಕೊಂಡು ದಾನವನ್ನು ನೀಡಿದ್ದಾರೆ.

ಶಿವಾರಪಟ್ಟಣ ಗ್ರಾಮದ ಕ್ರಿ.ಶ.೯ನೆಯ ಶತಮಾನದ ಶಾಸನವು[೫೩] ತೊಂಬುವಯ್ಯನ ಮಕ್ಕಳಾದ ನಾಗಯ್ಯನು ಮತ್ತು ಕೊಂಡಯ್ಯನು ಶ್ರೀಮಂಡಿಮಂಗಲದ ಮಹಾಜನರಿಗೆ ಹದಿನಾರು ಗದ್ಯಾಣ ಪೊಂಗೊಟ್ಟು ನೀಡಿರುವುದನ್ನು ಉಲ್ಲೇಖಿಸಿದೆ.

". . ಶ್ರೀಮೆಂಡಿ ಮಂಗಲದ ಮಹಾಜನಂಗೆ ಪ

ದಿನಾರು ಗದ್ಯಾಣ ಪೊಂಗೊಟ್ಟು ಕೊಂಡ ಧರ್ಮ

ಇರ್ಬ್ಬ ಬ್ರಾಹ್ಮಣ ನಿಕಂತಿ ಉಂಡ ಧರ್ಮ . . . ."

ವಕ್ಕಲೇರಿ ಗ್ರಾಮದ ತಾಮ್ರ ಶಾಸನವು[೫೪] ಚಾಲುಕ್ಯದೊರೆ ಕೀರ್ತಿವರ್ಮ ಸತ್ಯಾಶ್ರಯನು ಶ್ರೀದೋಸಿ ರಾಜನ ಅಣತಿಯ ಮೇರೆಗೆ ಕಾಮಕಾಯನ ಗೋತ್ರದವನೂ, ಋಗ್ವೇದ, ಯಜುರ್ವೇದ ಪಾರಂಗತನೂ, ಶ್ರೀವಿಷ್ಣುಶರ್ಮನ ಪೌತ್ರನೂ, ಕೃಷ್ಣಶರ್ಮನ ಪುತ್ರನೂ ಆದ ಮಾಧವಶರ್ಮನಿಗೆ ಭೂದಾನವನ್ನು ನೀಡಿರುವುದನ್ನು ಉಲ್ಲೇಖಿಸುತ್ತದೆ. ಪಾನುಂಗಲ್ (ಹಾನುಗಲ್) ವಿಷಯದಲ್ಲಿರುವ ಅರದೊರೆ ನದಿಯ ದಕ್ಷಿಣ ತೀರದಲ್ಲಿರುವ ತಾಮರ ಮೂಗೆ, ಪಾನುಂಗಲ್, ಕಿರುವಳ್ಳಿ ಮತ್ತು ಬಾಳವೂರು ಮೊದಲಾದ ಗ್ರಾಮಗಳ ಮಧ್ಯದಲ್ಲಿರುವಂತಹ ನೆಂಗಿಯೂರ್, ನಂದಿವಳ್ಳಿಗಳಿಂದ ಕೂಡಿದ ಸುಳ್ಳಿಯೂರು ಎಂಬ ಗ್ರಾಮವನ್ನು ಧಾರಾಪೂರ್ವಕವಾಗಿ ನೀಡಿರುವನು. ಕೀರ್ತಿವರ್ಮ, ಸತ್ಯಾಶ್ರಯನ ವಿಜಯ ಸಂವತ್ಸರದ ೧೧ನೆಯ ವರ್ಷದಲ್ಲಿ ಶಕವರ್ಷ ೬೭೯ (ಕ್ರಿ.ಶ.೭೫೭)ರ ಭಾದ್ರಪದ ಮಾಸದ ಹುಣ್ಣಿಮೆಯಂದು ಈ ದಾನವನ್ನು ನೀಡಲಾಯಿತು. ಈ ಶಾಸನದಲ್ಲಿನ ವಿವರವು ಕೋಲಾರ ಜಿಲ್ಲೆಗೆ ಸೇರದಿದ್ದರೂ ತಾಮ್ರ ಶಾಸನಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗಿರುವಂತಹ ಹಾಗೂ ಜನರ ಸಂಚಾರದ ಬಗ್ಗೆ ವಿವರಗಳನ್ನು ನೀಡುತ್ತದೆ.

ಮುಳಬಾಗಿಲು ತಾಲ್ಲೂಕು ಮುಡಿಯನೂರಿನಲ್ಲಿ ದೊರಕಿರುವಂತಹ ತಾಮ್ರ ಶಾಸನವು[೫೫] ಭೂದಾನವನ್ನು ತಿಳಿಸುತ್ತದೆ. ಬಾಣರಸ ದೊರೆ ದೇವನಂದಿವರ್ಮನು ೨೫ ಜನ ಬ್ರಾಹ್ಮಣರ ಕಾಲನ್ನು ತೊಳೆದು 'ಹೊದಲಿ' ವಿಷಯದಲ್ಲಿರುವ ಮಡಿಯನೂರು ಎಂಬ ಗ್ರಾಮವನ್ನು ಜಲಧಾರಾ ಪೂರ್ವಕವಾಗಿ ನೀಡಿರುವನೆಂದು ಶಾಸನವು ತಿಳಿಸುತ್ತದೆ. ಈ ಗ್ರಾಮದ ಸೀಮೆಗಳನ್ನು ಸಂಸ್ಕೃತ ಭಾಷೆಯಲ್ಲಿ ನೀಡಿರುವುದು ವಿಶೇಷವಾಗಿದೆ.

ಭಾರದ್ವಾಜ ಗೋತ್ರ ಸಾಮಾನ್ಯಚರಣ ರುದ್ರ ಭಟ್ಟ

ಕೌಶಿಕ ಗೋತ್ರ ತ್ರಿಲೋಚನಭಟ್ಟ

ಕೌಂಡಿಲ್ಯ ಗೋತ್ರ ಸಾಮಾನ್ಯ ಚರಣ ತ್ರಿವಿಕ್ರಮ ಭಟ್ಟ

ಕಾಶ್ಯಪ ಗೋತ್ರದ ಸಾಮಾನ್ಯ ಚರಣದ ನಾರಾಯಣಭಟ್ಟ

ಮೊದಲಾದ ವಿವಿಧ ಗೋತ್ರದ ೨೫ ಬ್ರಾಹ್ಮಣರುಗಳಿಗೆ ದಾನ ನೀಡಲಾಗಿದೆ. ರಾಜನ ಪಟ್ಟಾಭಿಷೇಕದ ೨೩ನೆಯ ವರ್ಷದ ವಿಳಂಬ ಸಂವತ್ಸರದ ಕಾರ್ತಿಕ ಮಾಸದ ಶುಕ್ಲ ಪಕ್ಷದ ತ್ರಯೋದಶಿ ಸೋಮವಾರ ಅಶ್ವಿನೀ ನಕ್ಷತ್ರದಂದು ಈ ದಾನವನ್ನು ನೀಡಲಾಗಿದೆ.

೩.೬ ವೀರರಿಗೆ ಬಿಡುತ್ತಿದ್ದ ದತ್ತಿಗಳು

ಸಮಾಜದಲ್ಲಿ ವೀರರಿಗೂ ವಿಶೇಷವಾದ ಗೌರವವಿತ್ತು. ಅವರ ಪರಾಕ್ರಮಕ್ಕೆ ಪ್ರತಿಯಾಗಿ ರಾಜನು ಗೌರವವನ್ನು ನೀಡುತ್ತಿದ್ದನು. ಇಂತಹ ವಿಚಾರಗಳನ್ನು ತಿಳಿಸುವಂತಹ ಶಾಸನಗಳೂ ಹಲವಾರು ದೊರೆಯುತ್ತವೆ. ಇಂತಹ ಶಾಸನಗಳನ್ನು ಸ್ಮಾರಕ ಶಾಸನಗಳ ವಿಭಾಗದಲ್ಲಿ ಹೆಚ್ಚಾಗಿ ನೋಡಬಹುದಾಗಿದೆ. ವೀರಗಲ್ಲು ಶಾಸನಗಳಲ್ಲಿ ವೀರನ ಸ್ಮರಣಾರ್ಥವಾಗಿ ಕೊಡುವಂತಹ ಗೌರವವನ್ನು ಕೆಲವೊಮ್ಮೆ ದಾನಗಳ ಮೂಲಕವು ವ್ಯಕ್ತಪಡಿಸುತ್ತಿದ್ದರು. ಊರಿನ ಹಿತಕ್ಕಾಗಿಯೇ ದುಷ್ಟಶಿಕ್ಷೆಗಾಗಿಯೇ ಸ್ವಾಮಿ ನಿಷ್ಠೆಯಿಂದಲೇ ಹೋರಾಡಿ ಮಡಿದ ವೀರಪುರುಷರ ಸ್ಮಾರಕಕ್ಕಾಗಿ ರಚಿತವಾದ ಶಾಸನವನ್ನು ವೀರಗಲ್ಲು ಶಾಸನಗಳೆಂದು ಕರೆಯುತ್ತಾರೆ.

ಒಂದು ದೇಶದ ಜನತೆಯ ಹಿತರಕ್ಷಣೆಗಾಗಿ ಒಂದು ಪ್ರದೇಶದ ವೀರಪುರುಷನು ಬೆಂಬಲವಾಗಿ ನಿಂತು ರಕ್ಷಣೆ ಮಾಡಿ ವಿಶೇಷ ಸಂದರ್ಭದಲ್ಲಿ ಯುದ್ಧವನ್ನು ಎದುರಿಸಿ ಹೋರಾಡಿ ಪ್ರಾಣತ್ಯಾಗವನ್ನು ಮಾಡುತ್ತಿದ್ದನು. ಆ ಪ್ರದೇಶದ ರಾಜನು ಈ ವೀರ ಪುರುಷನ ಪರಾಕ್ರಮಕ್ಕೆ ಮೆಚ್ಚಿ ಆತನಿಗೆ ಗೌರವವನ್ನು ಸೂಚಿಸುವ ದೃಷ್ಟಿಯಿಂದ ಶಾಸನಗಳನ್ನು ನಿಲ್ಲಿಸುತ್ತಿದ್ದನು. ಇಂತಹ ಈ ಶಾಸನಗಳಲ್ಲಿ ಆ ವೀರನ ಪರಾಕ್ರಮವನ್ನು ವರ್ಣಿಸುತ್ತಾ ಆತನ ಗೌರವಾರ್ಥವಾಗಿ ಏನಾದರೂ ದಾನವನ್ನು ನೀಡಿರುವಂತಹ ಮಾಹಿತಿಗಳು ದೊರೆಯುತ್ತದೆ. ಇಂತಹ ಶಾಸನಗಳನ್ನು "ವೀರಗಲ್ಲುಗಳು" ಎಂದು ಕರೆಯುತ್ತಾರೆ. ಕನ್ನಡದ ಮೊಟ್ಟ ಮೊದಲ ಶಾಸನ ಹಲ್ಮಿಡಿ ಶಾಸನವು ವೀರಗಲ್ಲು ಶಾಸನವಾಗಿರುವುದು ವಿಶೇಷ. ಕರ್ನಾಟಕದ ಜನರ ಪರಾಕ್ರಮತೆಯನ್ನು ಮತ್ತು ತ್ಯಾಗ ಮನೋಭಾವವನ್ನು ವೀರಗಲ್ಲುಗಳು ಎತ್ತಿ ಹಿಡಿದಂತಿದೆ.

ಸ್ಮಾರಕ ಶಾಸನಗಳಲ್ಲಿ ವೀರಗಲ್ಲು ಶಾಸನಗಳು, ಮಹಾಸತಿ ಕಲ್ಲುಗಳು, ನಿಷಿಧಿಕಲ್ಲು, ಸಿಡಿತಲೆ ಸ್ಮಾರಕ ಶಾಸನಗಳು ತುರುಗೋಳ್ ಶಾಸನಗಳು ಇನ್ನು ಮೊದಲಾದ ಪ್ರಕಾರಗಳಿವೆ. ಆದರೆ ಇಂತಹ ಶಾಸನಗಳಲ್ಲಿ ದಾನಗಳ ವಿಚಾರವಿರುವುದು ಅತಿ ಕಡಿಮೆ. ಹೆಚ್ಚಾಗಿ ವೀರಗಲ್ಲು ಶಾಸನಗಳಲ್ಲಿ ಪರಾಕ್ರಮವನ್ನು, ಆತ್ಮಾರ್ಪಣೆ ಮಾಡಿದಂತಹ ವ್ಯಕ್ತಿಗಳ ಹೆಸರನ್ನಷ್ಟೇ ಉಲ್ಲೇಖಿಸಿದೆ. ವೀರಗಲ್ಲುಗಳು ಯುದ್ಧದ ಚಿತ್ರಣವನ್ನು ಒಳಗೊಂಡಿರುತ್ತದೆ. ಹಾಗೂ ಈ ಚಿತ್ರದಲ್ಲಿ ಒಬ್ಬ ವೀರನು ಕೆಳಗೆ ಬಿದ್ದಿರುವಂತೆಯೂ ಸ್ವರ್ಗದಿಂದ ಅಪ್ಸರೆಯರು ಬಂದು ಅವನನ್ನು ವಿಮಾನದಲ್ಲಿ ಕರೆದುಕೊಂಡು ಹೋಗುತ್ತಿರುವಂತೆಯೂ ಇರುವ ಕೆತ್ತನೆಗಳಿಂದ ಅಲಂಕೃತವಾಗಿರುತ್ತದೆ.

ಬಂಗವಾದಿ ಗ್ರಾಮದಲ್ಲಿ ದೊರಕಿರುವಂತಹ ಬಾಣರಸ ಕಾಲದ ವೀರಗಲ್ಲು ಶಾಸನವು[೫೬] ಕುದುರೆ ಕಾಳಗದಲ್ಲಿ ಹೋರಾಡಿ ಸತ್ತ ಕಲಿಯೂರುವಿನ ಮಗ ವಿಜತ್ತನ್ ಎಂಬುವವನಿಗೆ ಕಂಗವಡಿ ಎಂಬಲ್ಲಿ (ಅಥವಾ ಅದೇ ಗ್ರಾಮವನ್ನು) ಕಲ್ನಾಡು ರೂಪದಲ್ಲಿ ನೀಡಲಾಗಿರುವುದನ್ನು ವರ್ಣಿಸುತ್ತದೆ. ಗೊಲ್ಲಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ವೀರಗಲ್ಲು ಶಾಸನವು ಇದೇ ರೀತಿಯಾಗಿ ಕಳನಿ (ಭೂದಾನ) ನೀಡಿರುವುದನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೯೦೯ನೆಯ ವರ್ಷದ ಈ ಶಾಸನವು[೫೭] ಮಣಿಘಟ್ಟದ ಮುದುಳಗಾವುಂಡರ ಮಗನಾದ ಕಸವಯ್ಯನು ಮುರುವಕ್ಕದ ಮುಳ್ಕಾಡಿನೊಳು ಇಬ್ಬರನ್ನು ಕೊಂದು ಸತ್ತಾಗ ಅವನಿಗೆ ಕಳನಿಯನ್ನು ದಾನವಾಗಿ

ನೀಡಲಾಗಿದೆಯೆಂಬ ವಿಚಾರವನ್ನು ತಿಳಿಸುತ್ತದೆ. ಮಲ್ಲಿನಾಯ್ಕನ ಹಳ್ಳಿಯಲ್ಲಿ ದೊರಕಿರುವಂತಹ ಒಂದು ವೀರಗಲ್ಲು ಶಾಸನವು[೫೮] ವೀರನೊಬ್ಬನಿಗೆ ಕಳನಿಯನ್ನು ಬಿಟ್ಟಿರುವುದನ್ನು ಉಲ್ಲೇಖಿಸಿದೆ. ವೀರನ ಹೆಸರು ಮತ್ತು ದಾನ ನೀಡಿರುವಂತಹ ಸ್ಥಳವು ಅಸ್ಪಷ್ಟವಾಗಿದೆ. ಇದೇ ಸ್ಥಳದಲ್ಲಿ ದೊರೆತಿರುವಂತಹ ಇನ್ನೊಂದು ಶಾಸನವು[೫೯] ಕುಂದತೂರ ತುರುಗೋಳ್ ಕಾಳಗದಲ್ಲಿ ಸತ್ತಂತಹ ತಾಂಪೆಯ ಎಗಳ(?) ಎನ್ನುವವನಿಗೆ ಬಾಣರಸನು ಪುಲಿನಾಡು-೬೦ನ್ನು ಪಡೆದು (ಖರೀದಿಸಿ) ಒಂದು ಖಂಡುಗ ಕಳನಿಯನ್ನು ಕಲ್ನಾಟು ರೂಪದಲ್ಲಿ ನೀಡಿರುವನೆಂದು ಶಾಸನವು ತಿಳಿಸುತ್ತದೆ.

ಮೇದುತುಂಬಿ ಹಳ್ಳಿಯ ನೊಳಂಬರಾಜನ ಶಾಸನವು ತುರುಗೋಳು ವಿಷಯದೊಂದಿಗೆ ಕಳನಿಯನ್ನು ಕೊಟ್ಟ ವಿಷಯವನ್ನು ಪ್ರಸ್ತಾಪಿಸುತ್ತದೆ. ಸೆಟ್ಟಿಯಾರ್ ಮಗನು ಪಟ್ಟಂಗಟ್ಟಿದಾಗ ಅರಸ ಅಯ್ಯುಳ ಕಳನಿಯಂ ಕೊಟ್ಟಿರುವಂತಹ ವಿಷಯವಿದೆ.[೬೦]

ಕರಿತಿಮ್ಮನಹಳ್ಳಿ ಗ್ರಾಮದ ಶಾಸನವು ಮದಲೂರು ಕುಪ್ಪನೆನ್ನುವನು ತುರುಗೋಳ್ ಕಾಳಗದಲ್ಲಿ ಸತ್ತಾಗ ಆತನಿಗೆ ಮೂತುಂಬು (ಮೂರುತುಂಬ) ಕಳನಿಯನ್ನು ಪರಿಹಾರ ರೂಪವಾಗಿ ನೀಡಿರುವನೆಂದು ಶಾಸನವು ತಿಳಿಸುತ್ತದೆ.[೬೧]

"ಸ್ವಸ್ತಿ ಶ್ರೀಮೆನುಗಗ್ಗರೊಕ್ಕಲಾ
ಮದಲೂರ ಕುಪ್ಪನ್ತೊರುಗೊ
ಳೊಳರೆದು ಸತ್ತು ಸಗ್ಗಿ ಅದಂದ
ಅವಕ್ಕೆ ಮೂತುಂಬು ಕಳನಿ ಪರಿಹಾರ ಕೊಟ್ಟರ್"

ಕ್ರಿ.ಶ. ೧೦೦೬ರ ಕಾಲದ ಶಾಸನವು[೬೨] ತುರುಗೋಳ್ ಕಾಳಗವನ್ನು ಚಿತ್ರಿಸುತ್ತಾ ಮಾರಮ್ಮ ಎಂಬುವವನು ತುರುವನ್ನಿಕ್ಕಿ ಸತ್ತಾಗ ಆತನಿಗೆ ಒಂದು ಖಂಡುಗ ಕಳನಿಯನ್ನು ಕಲ್ನಾಟು ರೂಪದಲ್ಲಿ ನೀಡಲಾಯಿತೆಂದು ಶಾಸನವು ವರ್ಣಿಸಿದೆ.

ಅರಳುಕೋಟೆಯ ಶಾಸನವು ಜಯಗೊಂಡನೆಂಬುವವನು ಕೆಲವು ಭೂ ಪ್ರದೇಶಗಳನ್ನು ದಾನವನ್ನು ನೀಡಿರುವನು ಮತ್ತು ಈ ಪ್ರದೇಶವು ಬದಿರ ಕುಳ(ಕೊಳ)ದ ಸಮೀಪದಲ್ಲಿದೆಯೆಂದು ಶಾಸನವು ತಿಳಿಸುತ್ತದೆ.[೬೩]

ಶ್ರೀನಿವಾಸಪುರ ತಾಲ್ಲೂಕಿನಲ್ಲಿರುವ ಕೋಟೆ ಬಾಗಿಲಿನ ಬಳಿ ಇರುವಂತಹ ಶಾಸನವು ತುರುಗೋಳ್ ಯುದ್ಧದಲ್ಲಿ ಹೋರಾಡಿ ಮಡಿದ ವೀರನಿಗೆ ಕಲ್ನಾಟುವನ್ನು ಕೊಟ್ಟಿರುವಂತಹ ಮಾಹಿತಿಯನ್ನು ನೀಡುತ್ತದೆ.[೬೪]

ಶ್ರೀನಿವಾಸಪುರ ತಾಲ್ಲೂಕಿನ ಕಂಬಕುಂಟೆ ಕೆರೆಯ ಕೆಳಗೆ ದೊರಕಿರುವಂತಹ ವೀರಗಲ್ಲು ಶಾಸನವು ಅಸ್ಪಷ್ಟವಾಗಿದ್ದು, 'ದೇವನ್ ಆರ್ಮ' ಎಂಬುವವನು ಯುದ್ಧದಲ್ಲಿ ಸತ್ತಾಗ ಆತನಿಗೆ ಅಯ್ದು ಕೊಳ ಕಳನಿಯನ್ನು ನೀಡಿರುವನೆಂದು ಶಾಸನವು ತಿಳಿಸುತ್ತದೆ.[೬೫]

ತಿನ್ನಿಲಿಗ್ರಾಮದಲ್ಲಿ ನಡೆದಂತಹ ತುರುಗೋಳು ಕಾಳಗದಲ್ಲಿ ಶ್ರೀಕಂಡಿ ಎಂಬುವವನು ಕಳ್ಳರನ್ನು ಅಟ್ಟಿಸಿ ತಾನು ಮರಣ ಹೊಂದಿದನು. ಈತನಿಗೆ ಒಂದು ಖಂಡುಗ ಕಳನಿಯನ್ನು ನೀಡಿರುವಂತಹ ಮಾಹಿತಿಯನ್ನು ಶ್ರೀನಿವಾಸಪುರ ಶಾಸನವು ನೀಡುತ್ತದೆ. ಶಾಸನದ[೬೬] ಕಾಲವು ಕ್ರಿ.ಶ.೮೦೦ಕ್ಕೆ ಸಂಬಂಧಿಸಿದುದಾಗಿದೆ.

ಬೈರಗಾನಪಲ್ಲಿಯಲ್ಲಿ ದೊರಕಿರುವಂತಹ ಕ್ರಿ.ಶ.೯೦೦ರ ಶಾಸನವೊಂದು[೬೭] ರಾಸಮಯ್ಯನೆಂಬುವವನ ಪರಾಕ್ರಮವನ್ನು ಹೊಗಳುತ್ತಾ, ಆತನು ಕೊಗ್ಗಡಿ ಮೊಳಿಗರನ್ನು ಅಟ್ಟಿಸಿ, ಅವರನ್ನು ಸಾಯಿಸಿ ತಾನು ಸತ್ತಾಗ ಪಲ್ಲವ ಮಹಾರಾಜನು ಕಲ್ನಾಟು ರೂಪದಲ್ಲಿ ಗ್ರಾಮವನ್ನು ನೀಡಿರುವುದನ್ನು ಶಾಸನವು ಪ್ರತಿಪಾದಿಸುತ್ತದೆ.

ಈಚಲುಕುಂಟೆಯ ಇನ್ನೊಂದು ಶಾಸನವು ವೀರ ಮಹಾಮೇರು ಪೊಕ್ಕಿರುವೊರದೋಗ ಎನ್ನುವವನು ಯುದ್ಧದಲ್ಲಿ ಹೋರಾಡಿ ಸತ್ತಾಗ ಆತನಿಗೆ ಮದೆಗುಲು ಎಂಬ ಊರನ್ನು ದಾನವಾಗಿ ನೀಡಲಾಯಿತು. ಇದಕ್ಕೆ ಹೊಂದಿಕೊಂಡು ಐದು ಕರ್ಷಾಪಣ ಕೃಷಿಕ್ಷೇತ್ರವನ್ನು ಸರ್ವಬಾಧಾ ಪರಿಹಾರವಾಗಿ ನೀಡಿರುವನು.[೬೮]

ಕೋಲಾರ ತಾಲ್ಲೂಕಿನ ಹೊಳಲಿ ಎಂಬಲ್ಲಿ ದೊರಕಿರುವಂತಹ ಶಾಸನವು[೬೯] ಅಸ್ಪಷ್ಟವಾಗಿದ್ದು ಭೂದಾನವನ್ನು ತಿಳಿಸುತ್ತದೆ. ಶ್ರೀಪುರುಷನು ರಾಜ್ಯವನ್ನಾಳುತ್ತಿರುವಾಗ ಈ ಶಾಸನವು ಹುಟ್ಟಿದ್ದು, ದಾನವನ್ನು ಯಾರಿಗೆ ಯಾವ ಕಾರಣಕ್ಕಾಗಿ ನೀಡಲಾಯಿತೆಂದು ಮಾಹಿತಿ ಇರುವುದಿಲ್ಲವಾದರೂ ಕೆರೆಯ ಕೆಳಗಣ ಒಂದು ಖಂಡುಗದಷ್ಟು ಭತ್ತ ಬೆಳೆಯುವಂತಹ ಭೂಮಿಯನ್ನು ದಾನವಾಗಿ ನೀಡಿರುವನೆಂಬ ಮಾಹಿತಿಯಿದೆ.

ಮುಳಬಾಗಿಲು ತಾಲ್ಲೂಕಿನ ಮೇಲಗಾಣಿ ಶಾಸನವು[೭೦] ಮದುರೆಗಿರಿಯವೆಲ್ಲ ಶರ್ಮನೆಂಬುವವನಿಗೆ ಒಂದು ಖಂಡುಗ ಮತ್ತು ಐದು ಕುಳದಷ್ಟು ಕಳನಿಯನ್ನು ಈ ಎರಡೂ ಪ್ರದೇಶದ ಮೇಲ್ಭಾಗದಲ್ಲಿ ಚನ್ನ ಎಂಬ ಕಳನಿಯನ್ನು ಮತ್ತು ಎಂಟು ಖಂಡುಗದಷ್ಟು ತೋಟ ಕ್ಷೇತ್ರವನ್ನು ದಾನವಾಗಿ ನೀಡಲಾಗಿದೆ. ಈ ಕ್ಷೇತ್ರವನ್ನು 'ಸವುಣ ಪಾಳಿನ್' ಎಂದು ಕರೆಯಲಾಗಿದೆ.

ಅರಳು ಕೋಟೆಯ ಶಾಸನವೊಂದು[೭೧] ವಡ್ಡಿ ಪೆಣೆಮಾನೆ ಎಂಬುವವನು ತನ್ನ ಒಡೆಯನಾದ ದುರ್ಗ್ಗಮಾರನನ್ನು ಬೇಡಿಕೊಂಡು ೧೦ ಖಂಡುಗದಷ್ಟು ಕಳನಿಯನ್ನು ದಾನವಾಗಿ ನೀಡಿರುವನು.

ಕ್ರಿ.ಶ.೮ನೆಯ ಶತಮಾನದ ಡಿಂಬಾಳ ಶಾಸನವು[೭೨] ವಿಶೇಷವಾದ ಭೂದಾನದ ವಿಷಯವನ್ನು ತಿಳಿಸುತ್ತದೆ. ವೆಜ್ಜೆ ಪೆರಸನೆಂಬುವವನು ರೋನೂರನನ್ನು ಆಳುತ್ತಿರಲು ಸಗರ ಮಿಕ್ಕನೆ ಎಂಬುವವನನ್ನು ಮನೆಯ ಒಡೆಯನೆಂದು ಪಟ್ಟವನ್ನು ಕಟ್ಟಿದನು. ಈ ಸಂದರ್ಭದಲ್ಲಿ ಈತನು ಎಲ್ಲಾ ಬಾಧೆಗಳನ್ನು ಪರಿಹರಿಸಿ ಒಂದು ಖಂಡುಗ ಭೂಮಿಯನ್ನು (ಕಳನಿಯನ್ನು) ದಾನವಾಗಿ ನೀಡಿರುವನು. ಬಹುಶಃ ಭೂದಾನವನ್ನು ರೋಣೂರಿನಲ್ಲಿಯೇ ನೀಡಿರಬಹುದು.

ಶ್ರೀನಿವಾಸಪುರ ತಾಲ್ಲೂಕಿನ ಬಿದರೂರು ಶಾಸನವು[೭೩] ಭೂದಾನದ ವಿಷಯವಾಗಿರುವಂತಹ ಶಾಸನವಾಗಿದೆ. ತಾಮ್ರಶಾಸನವಾಗಿರುವಂತಹ ಈ ಶಾಸನವು ಕ್ರಿ.ಶ.೭ನೆಯ ಶತಮಾನಕ್ಕೆ ಸೇರಿದ್ದಾಗಿದ್ದು ಸಾಮಾಜಿಕ ಮಹತ್ವವನ್ನು ಪಡೆದಿದೆ. ಸಾಮಾನ್ಯವಾಗಿ ದಾನವನ್ನು ಬ್ರಾಹ್ಮಣರುಗಳಿಗೆ ನೀಡಿರುವಂತಹ ಉಲ್ಲೇಖವು ಶಾಸನಗಳಲ್ಲಿ ದೊರಕಿದರೆ ಈ ದಾನವನ್ನು ಪ್ರಸಿದ್ಧನಾದ ಒಬ್ಬ ಶೂದ್ರನಿಗೆ ನೀಡಲಾಗಿದೆ. ಗಂಗ ದೊರೆ ಭೂವಿಕ್ರಮನು ಬಾಣ ವಿದ್ಯಾಧರ ಪ್ರಭುಮೇರು ಗಾವುಂಡನ ಪುತ್ರ ಮಾರಗಾವುಂಡನ ಪುತ್ರನಾದ ವಿಕ್ರಮಾದಿತ್ಯ ಗಾವುಂಡನಿಗೆ ಹೊದಲಿ ವಿಷಯದಲ್ಲಿರುವ 'ಬಿದಿರೂರು' ಎಂಬ ಗ್ರಾಮವನ್ನು ಧಾರಾಪೂರ್ವಕವಾಗಿ ನೀಡಿದನು. ಈ ಶಾಸನವನ್ನು ತನ್ನ ವಿಜಯ ವರ್ಷದ ೨೫ನೆಯ ವರ್ಷವಾದ ೫೫೬ನೆಯ ಶಕವರ್ಷ ಚೈತ್ರ ಮಾಸದ ಶುಕ್ಲ ಪಕ್ಷದ ದಶಮಿ ಗುರುವಾರ ಮತ್ತು ಮಖಾ ನಕ್ಷತ್ರದಂದು ನೀಡಲಾಗಿದೆ. ದಾನ ಸ್ವೀಕರಿಸಿದ ವ್ಯಕ್ತಿಯು ವಿದ್ಯಾಧರ ವಂಶವನ್ನು ಕೋಳಾಲ ವಿಷಯದ ಅಧಿಪತಿಯೂ ಮತ್ತು ಒಳ್ಳೆಯ ಶೂದ್ರನೆಂದು ಈ ಶಾಸನವು ತಿಳಿಸುತ್ತದೆ. ಈತನು

ವಿದ್ಯಾಧರನಾಗಿರುವುದು ಬಾಣವಂಶದವನೆಂದು ಮತ್ತು ಗಾವುಂಡನಾಗಿರುವುದು ಊರಿನ ಪ್ರಮುಖನೆಂದು ಊಹಿಸಬಹುದು.

ಬಂಗಾರಪೇಟೆಯ ಎಲ್ವಾರ ಶಾಸನವು[೭೪] ಮಹಾಬಲಿ ಬಾಣರಸನು ಭೂದಾನವನ್ನು ನೀಡಿರುವುದನ್ನು ಉಲ್ಲೇಖಿಸುತ್ತದೆ. ರಾಜನು ಮಣಯತ್ತೂರು ಎಂಬಲ್ಲಿ ನೆಲೆಸಿರುವಾಗ ಆ ಪ್ರದೇಶದ ಒಕ್ಕಲು ನನ್ನೆಯ ಮಗನಾದ ಅಣ್ಣಿ ಗಾವುಂಡನು ನಡೆದಂತಹ ಯುದ್ಧದಲ್ಲಿ ಶತ್ರುವನ್ನು ಇರಿದು ಮಡಿದಾಗ ರಾಜನು ಆತನಿಗೆ ೧೦ (ಖಂಡುಗ) ಕಳನಿಯನ್ನು ದಾನವಾಗಿ ನೀಡಿರುವನು.

ಇದೇ ರೀತಿಯಾಗಿ ತಲ್ಲಪಲ್ಲಿ ಶಾಸನವು[೭೫] ಕೋಗಳಿ ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಎರ್ಮ್ಮೆಯಾರ್ ಎಂಬುವವನ ಪುತ್ರನಾದ ಚೋಳ ಗಂಗ ಗಾವುಂಡನೆಂಬುವವನು ಹೋರಾಡಿ ಮರಣ ಹೊಂದಿರಲು ಮೂವತ್ತು ಕೊಳಗ ಕಳನಿಯನ್ನು ಕಲ್ನಾಡು ರೂಪದಲ್ಲಿ ನೀಡಲಾಗಿದೆ. ಈ ಪ್ರದೇಶವು ಕೊಯತ್ತೂರಿನ ಪಾಲ್ಪೋಡುವಿನಲ್ಲಿ ಪೂರ್ವದಿಕ್ಕಿನಲ್ಲಿರುವ ತಾಮರಕೆರೆಯ ಕೆಳಗೆ ಇದೆಯೆಂದು ಶಾಸನವು ತಿಳಿಸುತ್ತದೆ.

ರಾಮಸಾಗರ (ಬಂಗಾರಪೇಟೆ)ದ ಶಾಸನವು[೭೬] ವೀರನಿಗೆ ಕಲ್ನಾಟು ನೀಡಿರುವುದನ್ನು ಉಲ್ಲೇಖಿಸುತ್ತದೆ. ಕೋಗಳಿಯ ಒಕ್ಕಲು ಶ್ರೀ ಎರ್ಮ್ಮೆಯರ ಮಗ ಬೊಲ್ವ ಗಂಗ ಗಾವುಂಡನು ಮಹಾಬಲಿ ಬಾಣರಸರ ಮೇಲೆ ಯುದ್ಧಕ್ಕೆ ಹೋಗಿ ಇರಿದು ಸತ್ತನು. ಆತನಿಗೆ ಪಾಲ್ಪದುವಿನ ಪಶ್ಚಿಮಕ್ಕಿರುವ ಕೆರೆಯ ಸಮೀಪದಲ್ಲಿ ಮತ್ತು ತಾಮರೆಕಟ್ಟೆ ಕರೆಯ ಸಮೀಪ ಮೂವತ್ತು ಗೂಳಂ (ಪ್ರಮಾಣ) ಕಳನಿ ಕಲ್ನಾಡುವನ್ನು ಕೊಡಲಾಗಿದೆಯೆಂದು ಶಾಸನವು ಪ್ರತಿಪಾದಿಸುತ್ತದೆ.

ಬಂಗಾರುಪೇಟೆಯ ದಾಸರ ಹೊಸಹಳ್ಳಿಯ ವೀರಗಲ್ಲು ಶಾಸನವು[೭೭] ನರಸಿಂಗ ಮಂಗಲದಲ್ಲಿ ನಡೆದ ತುರುಗೋಳು ಕಾಳಗದಲ್ಲಿ ಮಡಿದಂತಹ ಪೊಕುಂದದ ಬೆಳ್ಮಾದ ಶ್ರೀಕಂಚಿಸಾಯಿ ಎನ್ನುವವನಿಗೆ ನಾಲ್ಗೊಳ (ನಾಲ್ಕು ಕೊಳಗ) ಕಳನಿ ಕೊಟ್ಟಿರುವುದನ್ನು ತಿಳಿಸುತ್ತದೆ. ಇದೇ ಸ್ಥಳದಲ್ಲಿ ದೊರಕಿರುವಂತಹ ಇನ್ನೊಂದು ವೀರಗಲ್ಲು[೭೮] ಶಾಸನವು ಪೊಕುಂದದ ತಗಡೂರಿನಲ್ಲಿ ನಡೆದಂತಹ ಕಾಳಗದಲ್ಲಿ ಬಸವಯ್ಯನು ಕಾದು ಸ್ವರ್ಗಸ್ಥನಾದನು. ಅವನಿಗೆ ಆರು ಕೊಳಗ ಕಳನಿಯನ್ನು ನೀಡಲಾಗಿದೆಯೆಂದು ಶಾಸನವು ತಿಳಿಸುತ್ತದೆ. (ಕಳನಿ – ಭತ್ತ)

ಇದೇ ಸ್ಥಳದಲ್ಲಿರುವಂತಹ ಇನ್ನೊಂದು ವೀರಗಲ್ಲು ಶಾಸನವು[೭೯] ಎಮ್ಮೆ ತುರುಗೋಳು ಕಾಳಗದಲ್ಲಿ ಮಾದೇವನೆಂಬುವವನು ಹೋರಾಡಿ ಸತ್ತಾಗ ದೇವಯ ಮಿಲಿಗೆಯರಸನು ನಾಲ್ಕು ಕೊಳಗ ಕಳನಿಯನ್ನು ವೀರನಿಗೆ ನೀಡಿರುವುದನ್ನು ಶಾಸನವು ತಿಳಿಸುತ್ತದೆ.

ಅವನಿಯ ಬಲ್ಲಗ್ರಾಮದಲ್ಲಿರುವ ಈಶ್ವರ ದೇವಾಲಯದಲ್ಲಿ ದೊರಕಿದಂತಹ ಕ್ರಿ.ಶ.೯ನೆಯ ಶತಮಾನದ ವೀರಗಲ್ಲು ಶಾಸನಗಳಲ್ಲಿ[೮೦] ದಿಲೀಪಯ್ಯ ಮಹಾರಾಜನು ವೀರರ ಪರಾಕ್ರಮಗಳನ್ನು ಮೆಚ್ಚಿ ದಾನವನ್ನು ನೀಡಿರುವನೆಂದು ಉಲ್ಲೇಖವಿದೆಯಾದರೂ ಏನನ್ನು ಅಥವಾ ಯಾವ ಗ್ರಾಮಗಳನ್ನು ದಾನವಾಗಿ ನೀಡಿರುವನೆಂಬ ವಿಷಯವು ಅಸ್ಪಷ್ಟವಾಗಿದೆ.

೩.೬.೧ ಬಾಳ್ಗಚ್ಚು

ಬಾಳ್ಗಚ್ಚು ವೀರಗಲ್ಲು ಶಾಸನಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿರುವಂತಹ ಶಬ್ದವಾಗಿದೆ. ಕನ್ನಡ ಮೊದಲ ಶಾಸನವಾದ ಹಲ್ಮಿಡಿಶಾಸನವೂ ಕೂಡ ಬಾಳ್ಗಚ್ಚು ಶಾಸನವಾಗಿದ್ದು, ಪ್ರಾಚೀನ ಕಾಲದಲ್ಲಿ ವೀರರಿಗೆ ನೀಡುತ್ತಿದ್ದಂತಹ ಗೌರವವನ್ನು ಸೂಚಿಸುತ್ತದೆ. ಶಾಸನಗಳಲ್ಲಿ ಬಾಳ್ಗಚ್ಚು, ಬಾಳ್ ಕರ್ಚು, ಬಾಳಂಕಳ್ಚು, ಬಾಳ್‌ಕಳ್ಚು ಮೊದಲಾದ ರೂಪಾಂತರಗಳು ದೊರೆಯುತ್ತದೆ. ಕೋಲಾರ ಜಿಲ್ಲೆಯಲ್ಲೂ ಬಾಳ್ಗಚ್ಚನ್ನು ಪ್ರತಿಪಾದಿಸುವ ವೀರಗಲ್ಲು ಶಾಸನಗಳು ದೊರಕಿವೆ. ಈ ಶಬ್ದಕ್ಕೆ ಎರಡು ರೀತಿಯಾದಂತಹ ಅರ್ಥವನ್ನು ಶಾಸನಕಾರರು ಕಲ್ಪಿಸಿದ್ದಾರೆ.

ಬಾಳ್+ಕಳ್ಚು ಎಂದರೆ ಬಾಳ್ ಎಂದರೆ ಖಡ್ಗ ಕಳ್ಚು ಎಂದರೆ ತೊಳೆಯುವುದು ಎಂದರ್ಥ. ಯುದ್ಧದಲ್ಲಿ ಹೋರಾಡಿ ಗೆದ್ದು ಬಂದಂತಹ ವೀರನ ಖಡ್ಗವನ್ನು ತೊಳೆಯುತ್ತಿದ್ದರು. ಇದಕ್ಕೆ ಅನುಗುಣವಾಗುವಂತಹ ಸಮಾರಂಭವನ್ನು ಆಯೋಜಿಸುತ್ತಿದ್ದರು. ಈ ಸಮಾರಂಭದಲ್ಲಿ ವೀರನಿಗೆ ಅವನ ಪರಾಕ್ರಮಕ್ಕೆ ಗೌರವವನ್ನು ಕೊಡುವಂತಹ ದೃಷ್ಟಿಯಿಂದ ಆತನಿಗೆ ಏನಾದರು ಕೊಡುಗೆಯನ್ನು ಕೊಡುತ್ತಿದ್ದರು. ಇದು ವೀರನು ಜೀವಿತದಲ್ಲಿದ್ದಾಗಲೇ ಕೊಡುತ್ತಿದ್ದಂತಹ ದಾನವಾದರೆ, ವೀರರು ಮರಣ ಹೊಂದಿದ ನಂತರವೂ ಆತನ ಶೌರ್ಯ ಪರಾಕ್ರಮವನ್ನು ಗೌರವಿಸುತ್ತಿದ್ದರು. ಈ ರೀತಿಯಾಗಿ ಅರ್ಥೈಸುವುದಾದರೆ ಬಾಳ್ ಎಂದರೆ ಬಾಳು ಜೀವನ ಎಂದರ್ಥ. ಗಳ್ಚು ಅಂದರೆ ಗಳಿಸುವುದು ಎಂದರ್ಥವಾಗುತ್ತದೆ. ಯುದ್ಧದಲ್ಲಿ ಹೋರಾಡಿ ಸತ್ತ ವೀರನ ಗೌರವಾರ್ಥವಾಗಿ ಆತನ ಅನುಯಾಯಿಗಳಿಗೆ ಜೀವನ ನಿರ್ವಹಣೆಗಾಗಿ ಭೂದಾನ ಇತ್ಯಾದಿಗಳನ್ನು ನೀಡುತ್ತಿದ್ದರು. ಇದನ್ನು ಬಾಳ್ಗಚ್ಚು ಎಂದು ಕರೆಯಬಹುದು.[೮೧]

ಕೋಲಾರದ ಶಾಸನವು "ಅಟ್ಟಿ ಬಾಳಂ ಕಿಳ್ತು ನಡೆದ ಪಲರನಿರಿದು ಸತ್ತೊಡೆ" ಎಂದು ಪ್ರಯೋಗವಿದ್ದು, ಇಲ್ಲಿ ಬಾಳ್ ಶಬ್ದಕ್ಕೆ ಕತ್ತಿ ಎಂಬರ್ಥವಿದೆ.[೮೨] ಮುಳಬಾಗಿಲು ಶಾಸನವು ಯುದ್ಧದಲ್ಲಿ ಮರಣ ಹೊಂದಿದ ವೀರನಿಗೆ ಜಮೀನನ್ನು, ಮನೆಯನ್ನು ಮತ್ತು ಒಂದು ತೂಬನ್ನು ದಾನವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ.

ಕೋಲಾರ ಜಿಲ್ಲೆಯಲ್ಲಿ ಹಲವಾರು ಬಾಳ್ಗಚ್ಚು ಮತ್ತು ನೆತ್ತರ್ಪಡಿ ಶಾಸನಗಳು ದೊರಕಿವೆ. ಇವು ಹೆಚ್ಚಾಗಿ ೮ ಮತ್ತು ೯ನೆಯ ಶತಮಾನಕ್ಕೆ ಸಂಬಂಧಿಸಿದುದಾಗಿದೆ. ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿ ದೊರಕಿರುವಂತಹ ಶಾಸನವು ಬಾಳ್ಗಚ್ಚು ದಾನವನ್ನು ನೀಡಿರುವಂತಹ ಶಾಸನವಾಗಿದೆ. ಶಾಸನವು ಗಂಗದೊರೆ ನೀತಿಮಾರ್ಗ ಪೆರ್ಮಾನಡಿಯ ಆಳ್ವಿಕೆಗೆ ಸಂಬಂಧಿಸಿದುದಾಗಿದ್ದು ಆತನು ಕುವಲಾಲ ನಾಡಿನಲ್ಲಿ ಆಳುತ್ತಿರಲು ನೊಳಂಬಾಧಿರಾಜನ ಆಜ್ಞೆಯ ಮೇರೆಗೆ ಪೊಂಪೆಲ್ಲ ಒಡೆಯನೆಂಬುವವನು ಮುರ್ಗ್ಗೇಪಾಡಿ ಎಂಬಲ್ಲಿ ನಡೆದಂತಹ ಯುದ್ಧದಲ್ಲಿ ಬಾಣರಸರೊಂದಿಗೆ ಹೋರಾಡಿ ಮರಣ ಹೊಂದಿರುವನು. ಈತನ ಪರಾಕ್ರಮವನ್ನು ಮೆಚ್ಚಿದಂತಹ ನೀತಿಮಾರ್ಗ ಪೆರ್ಮಾನಡಿಯ ನೊಳಂಬಾಧಿರಾಜನ ಬಿನ್ನಹದ ಮೇರೆಗೆ ಸೂರೂರು ಎಂಬಂತಹ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಿರುವಂತಹ ಮಾಹಿತಿಯಿದೆ.[೮೩]

"............ನೀತಿ ಮಾರ್ಗ ಪೆ

ರ್ಮ್ಮಾನಡಿಗಳು ನೊಳಂಬಾಧಿರಾಜರು ಸೂಳೂರಂ ಬಾಳ್ಗಚ್ಚು ಕೊಟ್ಟರ್. . ."

ಈ ವೀರನು ನೊಳಂಬಾಧಿರಾಜ ಅಡಿಯಾಳಾಗಿದ್ದಂತೆ ತೋರುತ್ತದೆ. ಅದಲ್ಲದೆಯೇ ಈ ವೀರನು ಅನೇಕ ಗುಣ ಸಂಪನ್ನನೂ ಸತ್ಯ ಶೌಚ ಶೀಲಾಚಾರ ಸಂಪನ್ನನೂ ಮತ್ತು ಬೆಂಗಡದ ಒಡೆಯನೆಂದು ಈ ಶಾಸನವು

ಸ್ತುತಿಸಿದೆ. ಅದಲ್ಲದೆಯೇ ಶಾಪಾಶಯದ ಭಾಗವು ಬಹು ಉತ್ಕೃಷ್ಟವಾಗಿದ್ದು ಇದನ್ನು ಗಂಗ ಮತ್ತು ನೊಳಂಬ ವಂಶದವರಿಬ್ಬರೂ ಕಾಪಾಡಿಕೊಂಡು ಬರಬೇಕು ಮತ್ತು ಈ ಧರ್ಮವನ್ನು ಚಂದ್ರ ನಕ್ಷತ್ರಗಳಿರುವ ತನಕ ಕಾಪಾಡಿಕೊಂಡು ಬರಬೇಕೆಂದು ಈ ದತ್ತಿಯನ್ನು ಪೊಂಪೆಲ್ಲನ ಕುಟುಂಬದವರಿಗೆ ಸಲ್ಲಿಸಿದರು.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿವಾರ ಗ್ರಾಮದಲ್ಲಿ ವರದರಾಜ ಸ್ವಾಮಿ ದೇವಾಲಯದ ಮೂರ್ತಿಯ ಮೇಲ್ಭಾಗದಲ್ಲಿ ಕೆತ್ತಲಾಗಿರುವಂತಹ ಒಂದು ಸಣ್ಣ ಶಾಸನವು ಸಂಕ್ಷಿಪ್ತವಾದಂತಹ ಮಾಹಿತಿಯನ್ನು ಒದಗಿಸಿದೆ.[೮೪] ಗಂಗದೊರೆ ಶ್ರೀಪುರುಷನ ಆಳ್ವಿಕೆಯ ಈ ಶಾಸನವು ವೀರನೊಬ್ಬನಿಗೆ ಬಾಳ್ಗಚ್ಚು ನೀಡಿರುವುದನ್ನು ಉಲ್ಲೇಖಿಸಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರ ಹೋಬಳಿ ಬಿಸ್ಸನಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ಇನ್ನೊಂದು ವೀರಗಲ್ಲು ಶಾಸನವು[೮೫] ಕೂಡಾ ಬಾಳ್ಗಚ್ಚು ವಿಷಯವನ್ನು ಪ್ರತಿಪಾದಿಸಿದೆ. ಈ ಶಾಸನವು ಐತಿಹಾಸಿಕವಾಗಿದ್ದು. ಗಂಗ ದೊರೆ ಶ್ರೀಪುರುಷ ಮತ್ತು ಆತನ ಪುತ್ರನಾದ ದುಗ್ಗಮಾರ ಎರೆಯಪ್ಪನ ಆಳ್ವಿಕೆಯನ್ನು ತಿಳಿಸುತ್ತದೆ. ರಾಜನ ಸೈನ್ಯವು ಒಮ್ಮೆ ಕಂಪಿಲಿಗೆ ದಂಡೆತ್ತಿ ಹೋಗಿರಲು ಆತನ ಸೈನ್ಯದಲ್ಲಿದ್ದಂತಹ ಪಾಂಡಪ್ಪನೆಂಬುವವನು ಹೋರಾಡಿ ವೀರಮರಣವನ್ನು ಹೊಂದಿರುವಂತಹ ವಿಚಾರವಿದೆ. ಈತನು ಕೊಮಾಲರ್ ಎಂಬುವವನ ಪುತ್ರನೆಂದು ಶಾಸನವು ತಿಳಿಸಿದೆ. ದುಗ್ಗಮಾರನು ಈತನ ಪರಾಕ್ರಮವನ್ನು ಮೆಚ್ಚಿ ತನ್ನ ಅನುಯಾಯಿಗಳಿಗೆ (ಕುಟುಂಬದವರಿಗೆ) ಸಾಂತನೂರು ಎಂಬ ಗ್ರಾಮವನ್ನು ಎರೆಡಿಯೂರು ಎಂಬ ಗ್ರಾಮದಲ್ಲಿ ಒಂದು ತೂಂಬು ಕಳನಿಯನ್ನು (ಭತ್ತ ಬೆಳೆಯುವಂತಹ ಭೂಮಿ) ಮತ್ತು ಒಂದು ಮನೆಯನ್ನು 'ವಾಳ್ಗಚ್ಚು, ರೂಪದಲ್ಲಿ ನೀಡಿರುವನು.

". . . . ಸಾಂತನೂರುಂ ಎರೆಡಿಯಾ
ರುಳುಂ ವಂದ ತೂಂಬ ಕಳನಿಯಂ ಅವರ
ಮನೆಯುಂ ವಾಳ್ಗಚ್ಚು ಪ್ರಸಾದಂಗೈಯ್ದಾರ್ . . . . . ."

ಬಾಣರಸ ಕಾಲದ ಬೂದಿಕೋಟೆ ಶಾಸನವು ಬಾಳ್ಗಚ್ಚು ನೀಡಿರುವಂತಹ ಮಾಹಿತಿಯನ್ನೊದಗಿಸಿದೆ. ಗಂಗ ದೊರೆ ರಾಚಮಲ್ಲ ಪೆರ್ಮಾನಡಿ ಮತ್ತು ಬಾಣರಸನ ನಡುವೆ ಕಾಳಗವು ನಡೆದಾಗ ಬಾಣರಸನ ಆಜ್ಞೆಯ ಮೇರೆಗೆ ಅಗ್ಗಳ ಅರಸನೆಂಬುವವನು ಗಂಗ ಅರಸರೊಂದಿಗೆ ಹೋರಾಡಿ ವೀರಮರಣವನ್ನು ಹೊಂದುತ್ತಾನೆ. ಈತನ ಶೌರ್ಯ ಪರಾಕ್ರಮಕ್ಕೆ ಮೆಚ್ಚಿ ರಾಜನು ಈತನಿಗೆ ಲಕ್ಕಂಡ ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಿರುವನು.[೮೬]

ಬಾಣರಸ ಕಾಲದ ಬೂದಿಕೋಟೆ ಶಾಸನವು ಬಾಳ್ಗಚ್ಚನ್ನು ಹೆಸರಿಸಿದೆ. ಶಾಸನದ ಪ್ರಾರಂಭದ ಭಾಗವು ಅಸ್ಪಷ್ಟವಾಗಿದ್ದು, ಅಗ್ಗಳ ಅರಸನೆಂಬುವವನು ಹೋರಾಡಿ ಮರಣ ಹೊಂದಿದನು. ಇದನ್ನು ಮೆಚ್ಚಿದ ರಾಜ (ಬಾಣರಸ)ನು ಇಕುಂದವನ್ನು ಬಾಳ್ಗಚ್ಚಾಗಿ ನೀಡಿರುವನೆಂದು ಶಾಸನವು ಪ್ರತಿಪಾದಿಸುತ್ತಿದೆ.[೮೭]

ನುಕ್ಕನಹಳ್ಳಿಯ ಬಾಣರಸರ ಕಾಲದ ಶಾಸನವು ಕುದುರೆಯ ಕಾಳಗದಲ್ಲಿ ವೀರನು ಇರಿದು ಸತ್ತಾಗ ಬಾಳ್ಗಚ್ಚು ಕೊಟ್ಟಿರುವಂತಹ ವಿಚಾರವಿದೆ. ಗುಟ್ಟರಸರ ತಮ್ಮನು ಕುದುರೆಯನ್ನು ಅಡ್ಡಗಟ್ಟಿ ಬಾಳಂಕಿಳ್ತು (ಬಾಳನ್ನು ಕಿತ್ತು?) ನಡೆದು ಕಾದಾಡಿ ಮರಣವನ್ನು ಹೊಂದಿರುವನೆಂದು ಶಾಸನವು ತಿಳಿಸುತ್ತದೆ.[೮೮]

“ . . . . ಅಟ್ಟ ಬಾಳಂಕಿಳ್ತು
ನಡೆದು ಪಲರನೆ . .
ಳುದು ಸತ್ತೊಡೆ ಬೆ
ಳ್ಗಂಪರ ವಿಮಾ . .
ಬಾಳಗಳ್ಚು . . . . . .”

ಶ್ರೀನಿವಾಸಪುರ ಹೋಬಳಿ ಬಯ್ಯಾಪಳ್ಳಿಯಲ್ಲಿ ದೊರೆತಿರುವಂತಹ ಪ್ರಾಣಿಬೇಟೆಯ ವಿಷಯವನ್ನು ತಿಳಿಸುವಂತಹ ಶಾಸನವು ವಲ್ಲವರಸನೆಂಬುವವನು ಯುದ್ಧದಲ್ಲಿ ಹೋರಾಡಿ ಆನೆಗಳನ್ನು ಸಾಯಿಸಿ ಮರಣ ಹೊಂದಿದಾಗ ಆತನಿಗೆ ಬಾಳ್ಗಚ್ಚನ್ನು ನೀಡಲಾಯಿತು. ಆತನಿಗೆ ಯಾವ ಊರನ್ನು ನೀಡಲಾಯಿತು ಎಂದು ಶಾಸನವು ತಿಳಿಸುತ್ತಿಲ್ಲ.[೮೯]

ಇದೇ ಹೋಬಳಿ ಅರಳುಕೋಟೆಯಲ್ಲಿರುವಂತಹ ಶಾಸನವು ಮನಸೂರಳಿ ಕಯ್ದೆಯ ಮಗನಾದ ಪ್ರಭುಕಯ್ಯನೆಂಬುವವನು ತನ್ನ ಒಡೆಯನಾದ ಪ್ರಭುಮೇರು ಎಂಬುವವನ ಆಜ್ಞೆಯ ಮೇರೆಗೆ ದಾಮರಿಗರ ಮೇಲೆ ಆಕ್ರಮಣ ಮಾಡಿದಾಗ ತನ್ನ ಕುದುರೆಯಿಂದ ಇಳಿದು ಶತ್ರುಗಳೊಂದಿಗೆ ವೀರಾವೇಶದಿಂದ ಹೋರಾಡಿ ಮರಣ ಹೊಂದಿದಾಗ ಆತನಿಗೆ ಕೊಳನಲ್ಲೂರು ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಲಾಗಿರುವಮತಹ ವಿಷಯವನ್ನು ಶಾಸನವು ನೀಡುತ್ತದೆ.[೯೦]

೩.೬.೨ ನೆತ್ತರ್ಪಡಿ

‘ನೆತ್ತರ್ಪಡಿ’ ಎಂಬುವುದು ಬಾಳ್ಗಚ್ಚುವಿನಂತೆ ವೀರಗಲ್ಲು ಶಾಸನಗಳಲ್ಲಿ ಬಳಕೆಯಾಗಿದೆ. ಇದನ್ನು ‘ನೆತ್ತರು ಕೊಡುಗೆ, ನೆತ್ತರ್ಪಟ್ಟ’ ಎಂದೂ ಶಾಸನಗಳಲ್ಲಿ ಉಲ್ಲೇಖವಾಗುತ್ತದೆ. ‘ರುಧಿರ ಮಾನ್ಯ’ ಎಂಬ ಸಂಸ್ಕೃತ ಶಬ್ದದ ರೂಪಾಂತರ ನೆತ್ತರ ಪಟ್ಟ ಅಥವಾ ನೆತ್ತರ್ ಕೊಡುಗೆಯಾಗಿದೆ. ನೆತ್ತರ್ ಎಂದರೆ ನೆತ್ತರು, ರಕ್ತವೆಂದರ್ಥ. ಪಟ್ಟ ಅಥವಾ ಪಡಿ ಎಂದರೆ ಕಾಣಿಕೆ ಅಥವಾ ದಾನವೆಂದರ್ಥ. ನೆತ್ತರ್ ಪಡಿ ಎಂದರೆ ರಕ್ತಮಾನ್ಯ ಅಥವಾ ರುಧಿರ ಮಾನ್ಯ ಎಂದು ಅರ್ಥೈಸಬಹುದಾಗಿದೆ.

ಒಬ್ಬ ವೀರನು ಯುದ್ಧದಲ್ಲಿ ಹೋರಾಡಿ ವೀರಮರಣವನ್ನು ಹೊಂದಿದರೆ, ಆತನು ಅರ್ಪಿಸಿದಂತಹ ನೆತ್ತರಿಗೆ ಕೊಡುಗೆಯಾಗಿ ಭೂಮಿ ಮೊದಲಾದ ದಾನವನ್ನು ನೀಡುತ್ತಿದ್ದರು. “ಯಾವುದೇ ಹೋರಾಟದಲ್ಲಿ ತನ್ನ ರಕ್ತವನ್ನು ಸುರಿಸಿದ ಕಾರಣಕ್ಕಾಗಿ ಅರಸನಿಂದಲೋ ಇತರರಿಂದಲೋ ಪಡೆದ ದತ್ತಿಯನ್ನು ನೆತ್ತರ್ ಪಟ್ಟ ಎಂಬುದಾಗಿ ಕರೆಯಲಾಗಿದೆ.[೯೧]

ಬಾಳ್ಗಚ್ಚು ಮತ್ತು ನೆತ್ತರ್ಪಡಿ ಎಂಬೆರಡು ಶಬ್ದಗಳು ಒಂದೇ ಅರ್ಥವನ್ನು ಕೊಡುವಂತಹ ಶಬ್ದಗಳಾಗಿದ್ದರೂ ರೂಪದಲ್ಲಿ ಸ್ವಲ್ಪ ವ್ಯತ್ಯಾಸವಿದ್ದಂತೆ ತೋರುತ್ತದೆ. ‘ಬಾಳ್ಗಚ್ಚು’ ವೀರನಿಗೆ ಸಂಬಂಧಪಟ್ಟಂತೆ ಸಣ್ಣ ಸಮಾರಂಭವನ್ನು ಆಯೋಜಿಸಿ ಆತನ ಬಾಳ್(ಖಡ್ಗ)ಗೆ ಗೌರವವನ್ನು ಕೊಟ್ಟು, ಖಡ್ಗವನ್ನು ತೊಳೆದು ಅದರ ನೆನಪಿಗಾಗಿ ಗ್ರಾಮವನ್ನು ನೀಡುತ್ತಿದ್ದರು. ನೆತರ್ಪಡಿಯಲ್ಲಾದರೋ ವೀರನ ರಕ್ತಕ್ಕೆ ಗೌರವವನ್ನು ಕೊಟ್ಟು ಆತನ ನೆನಪಿಗಾಗಿ ಗ್ರಾಮದಾನವನ್ನು ನೀಡುತ್ತಿದ್ದರು. ‘ಬಾಳ್ಗಚ್ಚು’ ನೀಡಿರುವಂತಹ ಶಾಸನಗಳಲ್ಲಿ ವೀರನ ಕುಟುಂಬದವರಿಗೆ

ಮುಂದಿನ ಜೀವನದಲ್ಲಿ ಜೀವಿಸಲು ಆಧಾರವಾಗಿ ಗ್ರಾಮವನ್ನು ನೀಡಿರುವಂತಹ ಸೂಕ್ಷ್ಮ ವಿಷಯವು ತಿಳಿದುಬಂದರೆ, ನೆತ್ತರ್ಪಡಿಯಲ್ಲಾದರೆ ವೀರನ ರುಧಿರಕ್ಕೆ ನೇರವಾಗಿ ಗೌರವವನ್ನು ನೀಡಿದಂತೆ ಕಂಡುಬರುತ್ತದೆ.

ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ದೊರಕಿರುವಂತಹ ಸ್ಮಾರಕ ಶಾಸನವು ನೆತ್ತರ್ಪಡಿಯನ್ನು ಉಲ್ಲೇಖಿಸಿದೆ. ಗಂಗ ದೊರೆ ಶ್ರೀವಿಕ್ರಮನು ರಾಜ್ಯವನ್ನಾಳುತ್ತಿರಲು ಪಾರ್ವರ ಎಂಬ ಊರಿನಲ್ಲಿ ಪೆರಾಣ್ಕೋವನ ಎಂಬುವವನು ರಕ್ಕಸನೂರನ್ನು ವಶಪಡಿಸುವಂತಹ ಸಂದರ್ಭದಲ್ಲಿ ಮರಣ ಹೊಂದಿರುವನು. ಈತನ ಪರಾಕ್ರಮಕ್ಕೆ ಮೆಚ್ಚಿ ರಾಜನು ಒಂದು ಖಂಡುಗದಷ್ಟು ಧಾನ್ಯ ಬೆಳೆಯುವಂತಹ ಒಣಭೂಮಿಯನ್ನು ನೆತ್ತರ್ಪಟ್ಟಿಯಾಗಿ ನೀಡಿರುವನು. ಇದನ್ನು ಹಾಳು ಮಾಡಿದವನು ಐದು ಮಹಾಪಾತಕಗಳನ್ನು ಮಾಡಿದ ಪಾಪವನ್ನು ಹೊಂದುತ್ತಾನೆಂದು ಶಾಪಾಶಯ ಭಾಗವಿದೆ. 'ನೆತ್ತರ್ಪಟ್ಟಿ' ಎಂಬ ವಿಶೇಷವಾದ ಪ್ರಯೋಗ ಇಲ್ಲಿದೆ.[೬೨]

ಶ್ರೀನಿವಾಸಪುರ ತಾಲ್ಲೂಕಿನ ಕಲ್ಲೂರು ಗ್ರಾಮದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ನೆತ್ತರ್ಪಡಿಯನ್ನು ವರ್ಣಿಸುತ್ತದೆ. ಈ ಶಾಸನದಲ್ಲಿ ಬರುವಂತಹ ವೀರನ ಹೆಸರು ಪೆರಾಣ್ಕೋವರ್ ಎಂದಾಗಿದೆ. ಗಂಗ ದೊರೆ ಶ್ರೀಪುರುಷನು ರಾಜ್ಯವನ್ನಾಳುತ್ತಿರಲು ಮಂದವೂರು ಎಂಬಲ್ಲಿ ನಡೆದಂತಹ ತುರುಗೋಳ್ ಕಾಳಗದಲ್ಲಿ ಪೆರಾನ್‌ಕೋವರ್ ಎನ್ನುವವನು ವೀರಮರಣ ಹೊಂದಿರುವನು. ಅವನಿಗೆ ಹತ್ತು ತೊಪುಗಳಷ್ಟು (ಒಂದು ಅಳತೆ) ಕಳನಿಯನ್ನು ನೆತ್ತರ್ಪಡಿಯಾಗಿ ನೀಡಲಾಗಿದೆ. ಇಲ್ಲಿ ಹೇಳಿರುವಂತಹ ಪ್ರಮಾಣವು ವಿಶೇಷವಾಗಿದ್ದು, ಕಡಿಮೆ ಬಳಕೆಯಲ್ಲಿರುವಂತಹ ಪ್ರಯೋಗವಾಗಿದೆ.[೬೩]

ಕ್ಯಾಲನೂರು ಗ್ರಾಮದ ಶಾಸನವೊಂದು ನೆತ್ತರ್ಪಟ್ಟ ಕೊಟ್ಟಂತಹ ವಿಷಯವನ್ನು ಪ್ರಸ್ತಾಪಿಸಿದೆ. ಕೊರನೂರಿನಲ್ಲಿ ತುರುಗೋಳ್ ಕಾಳಗವು ನಡೆದಾಗ ಕೊರನೂರಿನಲ್ಲಿರುವ ಮಾಪಲಿ ಎಂಬ ಊರಿನ ಸಿಂದಾವರಿ ಎನ್ನುವವನ ಮಕ್ಕಳು ಕಾಳಗದಲ್ಲಿ ಸತ್ತಾಗ ಅವರಿಗೆ ಪೊಸಕೆರೆಯಲ್ಲಿ ಕಳನಿಯನ್ನು ನೀಡಲಾಗಿದೆ.[೬೪]

ಬಂಗಾರಪೇಟೆ ಕಾರುಬೆಲೆ ಗ್ರಾಮದಲ್ಲಿ ದೊರೆತ್ತಿರುವಂತಹ ಒಂದು ಶಾಸನವು ನೆತ್ತರ ಕೊಡುಗೆಯನ್ನು ತಿಳಿಸುತ್ತದೆ. ಕಾರಿಮಂಗಲದ ತಿಮ್ಮಪ್ಪ ನಾಯಕನು ಕಾರಿಬೆಲೆಯ ನಾಚಪ್ಪ ಗವುಡಂಗೆ ನೆತ್ತರ ಕೊಡಗೆಯನ್ನು ಕೊಟ್ಟಿರುವನು. ತನಗೆ ಸಲ್ಲವ ಮರಗಲ್ಲಕೆರೆಯ ಕೆಳಭಾಗದಲ್ಲಿ ಭೂಮಿಯನ್ನು ದಾನವಾಗಿ ನೀಡಿರುವನು. ನೆತ್ತರ್ಪಡಿಯಾಗಿ ಕೊಟ್ಟಿರುವಂತಹ ಪ್ರದೇಶವು ಅಸ್ಪಷ್ಟವಾಗಿದೆ.[೬೫]

". . . . . . ನಾಚಪ್ಪ ಗವುಡಗೆ ಕೊ

ಟ್ಟ ನೆತ್ತರ ಗೊಡಗೆ ಗದ್ದೆ ಕ್ರಮವೆಂತೆಂದರೆ . . . ."

೩.೭ ವಿಶೇಷ ದಾನಶಾಸನಗಳು

೩.೭.೧ ವೀರನಿಗೆ ಮಹಾಜನರು ನೀಡಿರುವ ದಾನ

ರಾಜ ಮಹಾರಾಜರು ಯುದ್ಧದಲ್ಲಿ ಹೋರಾಡಿ ಮರಣ ಹೊಂದಿದ ವೀರರಿಗೆ ಬಾಳ್ಗಚ್ಚು ಮತ್ತು ನೆತ್ತರ್ಪಡಿ ನೀಡುತ್ತಿದ್ದುದು ಸಾಮಾನ್ಯವಾಗಿತ್ತು. ಕೆಲವೊಂದು ಸಂದರ್ಭಗಳಲ್ಲಿ ರಾಜರುಗಳು ಕೇವಲ ಭೂದಾನವನ್ನಷ್ಟೇ ನೀಡುತ್ತಿದ್ದಂತಹ ಮಾಹಿತಿಗಳು ದೊರೆಯುತ್ತವೆ. ಕ್ರಿ.ಶ.೮೦೦ ಶತಮಾನಕ್ಕೆ ಸಂಬಂಧಿಸಿದಂತಹ ನರಸಾಪುರ ಗ್ರಾಮದ ಶಾಸನವೊಂದು ಇದೇ ರೀತಿಯಾದ ಮಾಹಿತಿಯನ್ನು ನೀಡುತ್ತಿದ್ದು ಮಹಾಜನರು ವೀರನಿಗೆ ಭೂದಾನವನ್ನು ನೀಡಿರುವುದು ವಿಶೇಷವಾಗಿದೆ. ತೊಡುಗೆಯನ್ ಕೇಸರಿ ತೊರುವಳ್ಳ ಎಂಬುವವನ ಪುತ್ರನಾದ ಆಳನೆಂಬುವವನು ತುರುಗೋಳು ಕಾಳಗದಲ್ಲಿ ತುರುಗಳನ್ನು ರಕ್ಷಿಸಿರುವನು. ಇದಕ್ಕೆ ಪ್ರತಿಯಾಗಿ ಮಹಾಜನರೆಲ್ಲರು ಸೇರಿಕೊಂಡು ೫ ಕೊಳಗ ಭೂಮಿಯನ್ನು ನೀಡಿದರೆಂಬ ಉಲ್ಲೇಖವಿದೆ.[೬೬] (೫ ಕೊಳಗದಷ್ಟು ಧಾನ್ಯ ಬೆಳೆಯುವಂತಹ ಭೂಮಿ)

೩.೭.೨ ಬಂಗಾರ ದಾನ

ಕೋಲಾರದ ಶಾಸನವೊಂದು ದಾನಕ್ಕೆ ಸಂಬಂಧಿಸಿರುವಂತಹ ಅಸ್ಪಷ್ಟ ಮಾಹಿತಿಯನ್ನು ನೀಡುತ್ತಿದೆ. ಚೋಳ ದೊರೆ ರಾಜೇಂದ್ರ ಚೋಳನು ಆಳ್ವಿಕೆ ನಡೆಸುತ್ತಿರಲು ಕಲಿಪಿರಾನ್ ಎಂಬಾತನು ಹತ್ತು ಕಲಂಜುಗಳಷ್ಟು (ಒಂದು ಅಳತೆ) ಬಂಗಾರವನ್ನು ದಾನವಾಗಿ ನೀಡಿರುವನೆಂದು ಉಲ್ಲೇಖಿಸಿದೆ. ಬಂಗಾರ ದಾನವನ್ನು ತಿಳಿಸುವಂತಹ ಏಕಮಾತ್ರ ಶಾಸನವು ಈ ಜಿಲ್ಲೆಯಲ್ಲಿ ಇದಾಗಿದೆ. ಆದರೆ ದಾನವನ್ನು ಯಾವ ಕಾರಣಕ್ಕಾಗಿ ಯಾರಿಗೆ ನೀಡಲಾಗಿದೆಯೆಂದು ಮಾಹಿತಿ ದೊರಕುವುದಿಲ್ಲ.[೬೭]

೩.೭.೩ ದೇವಾಲಯದ ಸೇವಕನಿಗೆ ನೀಡಿರುವ ದಾನ

ಕ್ರಿ.ಶ.೧೩೦೨ರ ಹೊಯ್ಸಳರ ಶಾಸನವೊಂದು ದೇವಾಲಯದ ಸೇವಕನಿಗೆ ದಾನ ನೀಡಿರುವುದನ್ನು ಉಲ್ಲೇಖಿಸುತ್ತವೆ. ಉಮಾಯಪ್ಪಿಳ್ಳೈ ಎಂಬಾತನಿಗೆ ಮರೈಪುಕ್ಕಾರಾಮನ್ ಎಂಬಾತನು ಮಾದಪ್ಪುರ ಎಂಬ ಗ್ರಾಮವನ್ನು ಹೊಯ್ಸಳ ದೊರೆ ಬಲ್ಲಾಳನ ಖಡ್ಗ ಮತ್ತು ಭುಜಗಳು ಜಯಶಾಲಿಯಾಗಲೆಂದು ದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ.[೬೮]

೩.೭.೪ ಮಹಿಳೆಯು ನೀಡಿರುವಂತಹ ದಾನ

ಕೋಲಾರ ತಾಲ್ಲೂಕಿನ ವೇಮಗಲ್ ಶಾಸನವು ಸ್ತ್ರೀಯು ದೇವದಾನ ನೀಡಿರುವುದನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೧೩೪೨ರ ಈ ಶಾಸನವು ಚೌಡಿಕೆಯಕ್ಕೆ ಎಂಬುವವಳು ಭೈರವ ದೇವನಿಗೆ ದಾನವನ್ನು ನೀಡಿರುವುದು ವಿಶೇಷವಾಗಿದೆ. ಈ ಚೌಡಿಯಕ್ಕ ಎಂಬುವವಳು ಸೋಮೆಯ ದಣ್ಣಾಯಕನ ಪುತ್ರನಾದ ಬಲಪ್ಪ ದಣ್ಣಾಯಕರ ಪ್ರಧಾನನಾದ ಕಳುವಚಿಕ್ಕ ವಿಠಪ್ಪನವರ ಅಕ್ಕನೆಂದು ಶಾಸನವು ತಿಳಿಸುತ್ತದೆ. ಶಾಸನವು ಈಕೆ ಏನು ದಾನವನ್ನು ನೀಡಿರುವಳೆಂಬ ವಿಷಯವು ಸ್ಪಷ್ಟವಾಗುತ್ತಿಲ್ಲ.[೬೯]

೩.೭.೫ ಅಕ್ಕಿದಾನ

ಕ್ರಿ.ಶ.೧೩೩೦ ಮಾಲೂರು ಶಾಸನವು ವಿಶೇಷವಾದ ಮಾಹಿತಿಯನ್ನು ನೀಡುತ್ತದೆ. ತೆಕ್ಕಲ್ ನಾಡಿನಲ್ಲಿರುವ ದೇವಾಲಯದ ನಿರ್ವಾಹಕನಾದ ಶೊಕ್ಕಪ್ಪೆರುಮಾಳ್ ದಾದರ್ ಎಂಬುವವನು ದೇವಾಲಯದಲ್ಲಿ ನರ್ತನ ಸೇವೆಯನ್ನು ಮಾಡುವ ನರ್ತಕಿಯರಾದ ಮಾಲೈಯಾತ್ತಾಯರ್ ಪೆತ್ತ ಪೆರುಮಾಳ್ ಮಾಣಿಕ್ಕವರ್, ಉಲಗರ್, ಆಂದಾಮ್ ಮತ್ತು ಶಂಬನ್ ಮೊದಲಾದವರಿಗೆ ನಾಲ್ಕು ಮನೆಗಳನ್ನು ಕೆಲವು ಭೂಮಿಯನ್ನು ಪ್ರತಿನಿತ್ಯದ ಖರ್ಚಿಗಾಗಿ ಅಕ್ಕಿಯನ್ನು ದಾನವಾಗಿ ನೀಡಿದನು. ಈ ನರ್ತಕಿಯರು ದೇವಾಲಯದಲ್ಲಿ ಯಾವಾಗಲೂ ಸೇವೆಯನ್ನು ನೀಡುತ್ತಿರಬೇಕೆಂದು ಈ ದಾನವನ್ನು ನೀಡಲಾಗಿದೆ ಎಂದು ಶಾಸನವು ತಿಳಿಸುತ್ತದೆ.[೧೦೦]

೩.೭.೬ ಬಿತ್ತುವಟ್ಟ

ಈ ಶಬ್ದವು ಕೋಲಾರ ಜಿಲ್ಲೆಯ ಹಲವಾರು ಶಾಸನಗಳಲ್ಲಿ ಕಂಡುಬಂದಿದೆ. ಸಾಮಾಜಿಕ ಸಹಕಾರವನ್ನು ರಾಜನು ನೀಡಿದಂತಹ ಸಂದರ್ಭದಲ್ಲಿ ಅದನ್ನು ತಿಳಿಸುವ ಸಲುವಾಗಿ ಈ ಶಾಸನಗಳು ಹುಟ್ಟಿಕೊಂಡಿವೆ. ಬಿಟ್ಟುವಟ್ಟ, ಬಿಟ್ಟುವಾಟ, ಬಿಟ್ಟುವಟ, ಬಿಟ್ಟುವಟ್ಟು ಮತ್ತು ಬಿಟ್ಟುರಳ್ಳಿ ಮೊದಲಾದ ಪ್ರಯೋಗಗಳನ್ನು ಈ ಶಬ್ದಕ್ಕೆ ಪರ್ಯಾಯವಾಗಿ ಬಳಕೆಯಾಗಿದೆ. ಈ ಶಬ್ದದ ಕುರಿತಾಗಿ ಕೆ.ವಿ.ರಮೇಶ್‌ರವರು ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಿಟ್ಟುವಟ್ಟ ಎಂಬಲ್ಲಿ ಎರಡು ಶಬ್ದಗಳಿದ್ದು ಬಿಟ್ಟು ಮತ್ತು ವಟ್ಟ ಎಂದು, ಇವುಗಳು ತಮಿಳು ಮೂಲದ ಶಬ್ದಗಳಾಗಿವೆ. ತಮಿಳು ಭಾಷೆಯಲ್ಲಿ ವಿಟ್ಟು ಶಬ್ದವಿದ್ದು ಅದು ಕನ್ನಡದಲ್ಲಿ ಬಿಟ್ಟು ಎಂದು ರೂಪಾಂತರವಾಗಿದೆ. ಅದೇ ರೀತಿಯಾಗಿ ಪಾಡು ಎಂಬ ತಮಿಳು ಶಬ್ದವು ಕೂಡಾ ಸಂಸ್ಕೃತದ 'ಪಾಥ' ಶಬ್ದದ ರೂಪಾಂತರವಾಗಿದೆ. ಇದರ ಅರ್ಥ ವಿಸ್ತೀರ್ಣವಾಗಿದೆ. ಅದೇ ರೀತಿಯಾಗಿ ಪಥ ಶಬ್ದದ ರೂಪಾಂತರವಾದ ವಟ(ವಾಟ) ಶಬ್ದವು ಆವರಣ ಉಳ್ಳಂತಹ ಸಣ್ಣಭೂಮಿ ಎಂದರ್ಥ. ತಮಿಳು ಭಾಷೆಯಲ್ಲಿ ವಿಟ್ಟು ಎಂಬ ಶಬ್ದಕ್ಕೆ ಊಳುವುದು ಅಥವಾ ಬಿತ್ತುವುದು ಎಂದರ್ಥ. ಹಾಗಾಗಿ 'ಬಿತ್ತಲು ಯೋಗ್ಯವಾದ ಸೀಮಿತ ಸ್ಥಳ'ವೆಂದರ್ಥ. ತಮಿಳು ಶಾಸನಗಳಲ್ಲಿ 'ವಿತ್ತುಪ್ಪಾಡು' ಎಂಬ ಪ್ರಯೋಗವಿದ್ದು ಇದು ಕೃಷಿಗೆ ಅರ್ಹವಾದ ಮತ್ತು ಸೂಕ್ತವಾದ ಬೆಳೆಯನ್ನು ಬೆಳೆಯಲು ಯೋಗ್ಯವಾದ ಭೂಮಿಯೆಂದರ್ಥ. ಇದನ್ನೇ 'ಬೀಜವಾಪ' ಕ್ಷೇತ್ರ ಅಥವಾ 'ಬೀಜಾವರಿ' ಕ್ಷೇತ್ರವೆಂತಲೂ ಪ್ರಯೋಗದಲ್ಲಿದೆ.[೧೦೧]

ಶ್ರೀನಿವಾಸಪುರ ತಾಲ್ಲೂಕಿನ ಮಡಿವಾಳ ಶಾಸನದಲ್ಲಿ ಬಿಟ್ಟುವಟ್ಟೆ ಶಬ್ದದ ಪ್ರಯೋಗವಿದ್ದು, 'ಕಾರಣಕಿ ಬಿತ್ತುವಟ್ಟೆ' ಎಂದು ಪ್ರಯೋಗವಾಗಿದೆ. ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಶಾಸನಗಳಲ್ಲಿ ಈ ಪ್ರಯೋಗ ಅಪರೂಪವಿರುವಂತಿದೆ. ಕನ್ನಡ ಶಾಸನ ಪಿತಾಮಹ ಬಿ.ಎಲ್.ರೈಸ್ ಅವರು ಈ ಶಬ್ದ ಕುರಿತಾಗಿ ಚರ್ಚಿಸಿದ್ದು ಕೆರೆಯ ನಿರ್ವಹಣೆಗಾಗಿ ಬಿಟ್ಟಂತಹ ಭೂಮಿ ಎಂದು ಅರ್ಥೈಸಿದ್ದಾರೆ. ಅದಲ್ಲದೆಯೇ ಬಿಟ್ಟುರಳ್ಳಿ ಎಂಬ ಕೆರೆಯ ನಿರ್ವಹಣೆಗಾಗಿ 'ಕಾರಣಿಕ' ಎಂಬ ಗ್ರಾಮವನ್ನು ದಾನ ಬಿಟ್ಟಿರಬಹುದೆಂದು ಊಹಿಸಿದ್ದಾರೆ. ಗಂಗ ದೊರೆ ರಕ್ಕಸ ಗಂಗ ರಾಚಮಲ್ಲನ ಆಡಳಿತಕ್ಕೆ ಸಂಬಂಧಿಸಿದಂತಹ ಈ ಶಾಸನವು ಕ್ರಿ.ಶ.೧೦ನೆಯ ಶತಮಾನಕ್ಕೆ ಸೇರಿದುದಾಗಿದೆ.[೧೦೨]

ಮುಳಬಾಗಿಲು ತಾಲ್ಲೂಕು ಯೆದರೂರು ಗ್ರಾಮದ ಕ್ರಿ.ಶ.೯೬೧ನೆಯ ಶಾಸನವೊಂದು ಸಂಬಯ್ಯನೆಂಬುವವನು ಬಿದರೂರನ್ನು ಆಳುತ್ತಿರಲು ಕೆರೆಗೆ ಬಿತ್ತುಕಟ್ಟನ್ನು ಬಿಟ್ಟಿರುವುದನ್ನು ಪ್ರತಿಪಾದಿಸುತ್ತದೆ. ದಾನ

ನೀಡಿರುವವರು ಮಹಾಬಲಿಯ ಕುಲದಲ್ಲಿ ಹುಟ್ಟಿರುವವನೂ ಪರುಮಪುರ (ಪರುವಿ) ಒಡೆಯನು ವೃಷಭ ಲಾಂಛನ ಮತ್ತು ಕೃಷ್ಣಧ್ವಜ ಉಳ್ಳವನೂ ಆಗಿರುವನು.[೧೦೩]

"ಸಂಬಯ್ಯಂ ಬಿದಿರೂರ
ನಾಳುತ್ತಿರ್ದು ಕೆರೆಗೆ
ಬಿತ್ತುಕಟ್ಟಂ ಬಿಟ್ಟ . . . ."

ಕುರುಬರಹಳ್ಳಿಯ ಶಾಸನವೊಂದು ಬಿತ್ತುವಟ್ಟೆಯನ್ನು ಸೂಚಿಸುತ್ತದೆ. ದಿಲೀಪಯ್ಯ ರಾಜನು ಆಳ್ವಿಕೆ ನಡೆಸುತ್ತಿರಲು ತಿರುವಯ್ಯನ ಮಗನಾದ ಚಂದ್ರಸೇಕರಯ್ಯನು ಮಂಡಿಗಲ್ಲ ಕೆರೆಗೆ 'ಬಿತ್ತುಕಟ್ಟು' ಬಿಟ್ಟನೆಂದು ಉಲ್ಲೇಖವಿದೆ.[೧೦೪] (ಬಿತ್ತುಕಟ್ಟು ಎನ್ನುವುದು ಬಿಟ್ಟುವಟ್ಟದ ರೂಪಾಂತರವಿರಬಹುದು)

ಬೈರಕೂರಿನ ಹೆಬ್ಬಣಿ ಗ್ರಾಮದಲ್ಲಿರುವಂತಹ ಕಂಭಶಾಸನವು[೧೦೫] ಬಿತ್ತುವಟ್ಟನ್ನು ಸೂಚಿಸುತ್ತದೆ. ಪೆರ್ಬಣಿ ಗ್ರಾಮದಲ್ಲಿರುವ ಪಿರಿಯಕೆರೆಯು ಒಡೆದಾಗ ಮಂಡೆಯ ಗಾವುಂಡನ ಮಗನಾದ ಪೃಥುವೀ ರಾವಶೆಟ್ಟಿಯು ತೂಬನ್ನು ಮತ್ತು ಕೆರೆಯನ್ನು ಪುನಃ ಕಟ್ಟಿಸಿ ಜೀರ್ಣೋದ್ಧಾರ ಮಾಡಿದಾಗ ಈ ಕಾರ್ಯವನ್ನು ಮನಗಂಡು ನೊಳಂಬರಾಜನ ಅಣತಿಯ ಮೇರೆಗೆ ಪೂರ್ವ ಸಿದ್ಧಾಯ ಎನ್ನುವವನು ಹತ್ತು ಗದ್ಯಾಣ ಬಂಗಾರವನ್ನು ಮತ್ತು ಗದ್ದೆಯನ್ನು (ಮೂರು ಖಂಡುಗ) ಬಿತ್ತುಕಟ್ಟು ರೂಪದಲ್ಲಿ ನೀಡಲಾಗಿದೆಯೆಂದು ಶಾಸನವು ತಿಳಿಸುತ್ತದೆ.

ದಳಸನೂರು ಹೋಬಳಿ ಗಾಂಡ್ಲ ಹಳ್ಳಿಯ ಕಂಭದ ಮೇಲಿರುವ ಶಾಸನವು[೧೦೬] ನೊಳಂಬ ದೊರೆ ಶ್ರೀಮತ್ ವಿಕ್ರಮಾದಿತ್ಯ ತಿರುವಯ್ಯನು ಬಂಗವಾಡಿ ಕೆರೆಗೆ 'ಬಿತ್ತುಕಟ್ಟು' ಬಿಟ್ಟಿರುವುದನ್ನು ಶಾಸನವು ತಿಳಿಸುತ್ತದೆ.

ಶ್ರೀನಿವಾಸಪುರ ಹೋಬಳಿಯ ಶಾಸನವು[೧೦೭] ಪುದಿಯಣ್ಣ ಎಂಬುವವನು ಗಂಗೀಶ್ವರ ಎಂಬ ದೇವರಿಗೆ ಮೂರು ಖಂಡುಗ ಭೂಮಿಯನ್ನು ದಾನವಾಗಿ ನೀಡಿರುವನು. ಇದನ್ನು ಕೆರೆಗೆ 'ಬಿತ್ತುಕಟ್ಟು' ರೂಪದಲ್ಲಿ ನೀಡಲಾಯಿತೆಂದು ಶಾಸನವು ತಿಳಿಸುತ್ತದೆ.

ಶ್ರೀನಿವಾಸಪುರ ಹೋಬಳಿ ಕನಪಲ್ಲಿ ಗ್ರಾಮದ ಶಾಸನವು[೧೦೮] ಕೆರೆ ಕೊಡುಗೆಯನ್ನು ತಿಳಿಸುತ್ತದೆ. ಮಾರಯನಾಯ್ಕನೆಂಬುವವನು ಕೆರೆ ಕೊಡುಗೆಯನ್ನು ಕಟ್ಟಿಕೊಡುಗೆಯನ್ನು ಮತ್ತು ಗದ್ದೆ ಮಾನ್ಯವನ್ನು ಬಿಟ್ಟಿರುವನೆಂದು ಶಾಸನವು ತಿಳಿಸುತ್ತದೆ. ಬಂಗಾರಪೇಟೆಯ ಬೇತಮಂಗಲದ ಒಂದು ಶಾಸನವು ಇನ್ನೊಂದು ವಿಶೇಷವಾದಂತಹ ಮತ್ತು ಸಾಮಾಜಿಕ ಕಳಕಳಿಯನ್ನು ಸೂಚಿಸುವಂತಹ ಶಾಸನವಾಗಿದೆ. ಮೈದುಂಬರಾಜ ವಿಕ್ರಮಾದಿತ್ಯನು ವಿಜಯಾದಿತ್ಯ ಮಂಗಲದಲ್ಲಿರುವಂತಹ ಪಿರಿಯಕೆರೆಯು ಭಿನ್ನವಾದಾಗ ಅದನ್ನು ಸ್ವೀಕರಿಸಿ ಆ ಚಂದ್ರಾರ್ಕ ಪರ್ಯಂತ ಕಯ್ಯಾರದ ಐನೂರು ಮಹಾಜನರ ಸಮ್ಮುಖದಲ್ಲಿ ವಿಜಯಾದಿತ್ಯ ಮಂಗಲದಲ್ಲಿರುವಂತಹ ನೂರುಮನೆಯ ಸೀಮೆಯೊಳಗಿರುವ ಮಹಾಜನರಿಗೆ 'ಬಿತ್ತುಕಟ್ಟು'ವನ್ನು ನೀಡಲಾಯಿತೆಂದು ತಿಳಿಸುತ್ತಿದೆ. ಒಡ್ಡುಕಟ್ಟು ಎಂಬುವುದು 'ಬಿತ್ತುವಟ್ಟ'ದ ರೂಪವಾಗಿದೆ.

೩.೮ ದಾನ ಶಾಸನಗಳಲ್ಲಿ ಪ್ರಯೋಗವಾಗಿರುವಂತಹ ವಿಶೇಷ ಪದಗಳು

೩.೮.೧ ಖಂಡುಕ

ಖಂಡುಕ ನೊಣಮಂಗಲದ ಶಾಸನವು "ದ್ವಾದಶ ಖಂಡುಕಾ ವಾಪಕ್ಷೇತ್ರಂ" ಎಂದು ಉಲ್ಲೇಖಿಸುತ್ತದೆ.[೧೦೯] ಖಂಡುಕ ಎಂಬುವುದು ಒಂದು ಪರಿಮಾಣವಾಗಿದೆ. ಪ್ರಾಚೀನ ಕಾಲದಲ್ಲಿ ಧಾನ್ಯಗಳನ್ನು ಅಳತೆ ಮಾಡಲು ಬಳಸುತ್ತಿದ್ದಂತಹ ಮಾನ ಇದಾಗಿತ್ತು. ಒಂದು ಪ್ರದೇಶದಲ್ಲಿ ಧಾನ್ಯಗಳನ್ನು ಬೆಳೆದರೆ ಆ ಧಾನ್ಯಗಳು ಒಟ್ಟು ಸೇರಿ ಒಂದು ಖಂಡುಗದಷ್ಟಾದರೆ ಆ ಪ್ರದೇಶವನ್ನು ಒಂದು ಖಂಡುಗದಷ್ಟು ಧಾನ್ಯಗಳನ್ನು ಕೊಡುವ ಪ್ರದೇಶ ಅಥವಾ ಒಂದು ಖಂಡುಕ ಭೂಮಿ ಎಂದರ್ಥವಾಗುವುದು.

ಈ ಖಂಡುಕ ಶಬ್ದವನ್ನು ಖಂಡುಕ, ಖಂಡುಗ, ಗಂಡುಗ ಮೊದಲಾದ ಶಬ್ದಗಳಿಂದಲೂ ಕರೆಯಲಾಗಿದೆ. ಈ ಶಬ್ದವು ಸಂಸ್ಕೃತದ ಖಂಡ ಶಬ್ದದಿಂದ ಬಂದುದಾಗಿದೆ. ಇದರರ್ಥ ಒಂದು ಭಾಗ ಎಂದರ್ಥ. ಹಾಗಾಗಿ ದ್ವಾದಶ (೧೨) ಖಂಡುಕವಾಪ ಕ್ಷೇತ್ರವೆಂದರೆ ೧೨ ಖಂಡುಕಗಳಷ್ಟು ಧಾನ್ಯವನ್ನು ಕೊಡುವಂತಹ ವಿಸ್ತೀರ್ಣವಾದ ಭೂಮಿ ಎಂದರ್ಥ. ಕೆಲವು ಶಾಸನಗಳಲ್ಲಿ 'ಖಂಡುಕ ಬೀಜಾವಾಪ ಕ್ಷೇತ್ರ'ವೆಂದು ಪ್ರಯೋಗವಿದ್ದು ಇದರ ಸಂಕ್ಷಿಪ್ತ ರೂಪವೇ ಖಂಡುಕ ಕ್ಷೇತ್ರವಾಗಿದೆ.[೧೧೦]

೩.೮.೨ ಕಲ್ನಾಟು

ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿರುವಂತಹ ಇನ್ನೊಂದು ಶಬ್ದ ಕಲ್ನಾಟು. ಕಲ್ಲುನಾಟ್ಟು, ಕಲ್ನಾಟ್ಟು, ಕಲ್ನಾಟು, ಕಲ್ನಾಡು ಇತ್ಯಾದಿ ಪರ್ಯಾಯ ಪದಗಳಿರುವಂತಹ ಈ ಶಬ್ದವು ವೀರಗಲ್ಲು ಶಾಸನಗಳಲ್ಲಿ ಹೆಚ್ಚಾಗಿ ಪ್ರಯೋಗವಾಗಿದೆ. ವಿದ್ವಾಂಸರು ಈ ಶಬ್ದ ನಿಷ್ಪತ್ತಿಯನ್ನು ತಮಿಳು ಭಾಷೆಯ ಶಬ್ದಗಳೊಂದಿಗೆ ಮೇಳೈಸಿದ್ದು, ತಮಿಳು ಭಾಷೆಯ ಸಾಹಿತ್ಯದಲ್ಲೂ ಈ ಶಬ್ದವು 'ನಾಟ್ಟುಕಲ್ಲು' ಎಂಬ ರೂಪಾಂತರದೊಂದಿಗೆ ಕಂಡುಬಂದಿದೆ. ನಾಟ್ಟು ಅಂದರೆ ನೆಡು ಅಥವಾ ನೆಟ್ಟ ಎಂದರ್ಥ. ಕಲ್ ಎಂದರೆ ಕಲ್ಲು, ಶಿಲೆ ಅಥವಾ ವೀರಗಲ್ಲು ಎಂದರ್ಥ. ಹಾಗಾಗಿ ನಾಟುಕಲ್ ಎಂದರೆ ನೆಟ್ಟಂತಹ ಕಲ್ಲು ಎಂದರ್ಥವಾಗುವುದು. ತಮಿಳುನಾಡಿನಲ್ಲಿ ವೀರರ ಸ್ಮಾರಕವಾಗಿ ಕಲ್ಲನ್ನು ನೆಡುತ್ತಿದ್ದಂತಹ ಸಂಪ್ರದಾಯವಿತ್ತು. ಇದನ್ನೇ ಅವರು ನಾಟ್ಟುಕಲ್ ಎಂದು ಕರೆಯುತ್ತಾರೆ. ಇದೇ ಶಬ್ದವು ವ್ಯತ್ಯಾಸವಾಗಿ ಕಲ್ನಾಟು ಅಥವಾ ಕಲ್ನಾಡುವಿನ ರೂಪವನ್ನು ಪಡೆದಿದೆ.[೧೧೧]

ಡಾ.ಎಂ.ಚಿದಾನಂದಮೂರ್ತಿಯವರು ಗಡಿಯ ಕಲ್ಲುಗಳನ್ನು ಗಡಿಕಲ್ಲುಗಳ ಒಳಗಿನ ಭೂಮಿಯನ್ನು ಮತ್ತು ದಾನವನ್ನು ಸೂಚಿಸುತ್ತದೆ. ಹಾಗಾಗಿ ಕಲ್+ನಾಡು ಎಂಬ ರೂಪವು ನಿಷ್ಪನ್ನವಾಗಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.[೧೧೨] ಶಾಸನಗಳಲ್ಲಿ ಭೂಮಿಯನ್ನು ಕಲ್ನಾಟು ರೂಪದಲ್ಲಿ ನೀಡಲಾಗಿಯಿತೆಂದು ಸೂಚಿಸುತ್ತದೆ. ಹಾಗಾಗಿ ಯುದ್ಧದಲ್ಲಿ ವೀರಮರಣವನ್ನು ಹೊಂದಿದ್ದಂತಹ ಸಂದರ್ಭದಲ್ಲಿ ಆತನಿಗೆ ಗೌರವವನ್ನು ನೀಡುವ ಸಲುವಾಗಿ ಕಲ್ಲನ್ನು ನೆಟ್ಟು ಆತನ ಸ್ಮರಣಾರ್ಥ ದಾನವನ್ನು ನೀಡುತ್ತಿದ್ದರು ಎಂದು ತಿಳಿಯಬಹುದು. ಹಾಗಾಗಿ ಕಲ್ನಾಟು ಎಂದರೆ 'ವೀರಗಲ್ಲು' ಎಂಬ ಅರ್ಥದಲ್ಲಿಯೇ ತೆಗೆದುಕೊಳ್ಳಬಹುದಾಗಿದೆ. ಅದಕ್ಕೆ ಅನುಗುಣವಾಗಿಯೇ ಕಲ್ನಾಟು ಶಬ್ದ ಪ್ರಯೋಗವು ವೀರಗಲ್ಲು ಶಾಸನಗಳಲ್ಲಿಯೇ ಲಭ್ಯವಾಗಿವೆ.

ಉಪಸಂಹಾರ

ಕೋಲಾರ ಜಿಲ್ಲೆಯಲ್ಲಿ ದೊರೆಯುವಂತಹ ದಾನ ಶಾಸನಗಳು ಹೆಚ್ಚಾಗಿ ಗಂಗ ಅರಸರಿಗೆ, ನೊಳಂಬರಸರಿಗೆ ಮತ್ತು ಹೊಯ್ಸಳರಸರಿಗೆ ಸಂಬಂಧಿಸಿದುದಾಗಿದೆ. ಗಂಗ ಅರಸರ ಕಾಲದಲ್ಲಿ ಹೆಚ್ಚಾಗಿ ತಾಮ್ರಶಾಸನಗಳು ಕಂಡುಬಂದರೆ, ನೊಳಂಬರಸರಿಗೆ ಸಂಬಂಧಿಸಿದಂತಹ ದಾನ ಶಾಸನಗಳು ಶಿಲೆಯಲ್ಲಿ ಕಂಡರಿಸಲಾಗಿದೆ. ವೀರರಿಗೆ ಪ್ರಧಾನವಾಗಿರಿಕೊಂಡು, ಅವರಿಗೆ ಗೌರವಾರ್ಥವಾಗಿ ನೀಡಿರುವಂತಹ ಶಾಸನಗಳು ಅಧಿಕವಾಗಿ ದೊರೆಯುತ್ತದೆ. ಸಾಮಂತರಾಗಿದ್ದಂತಹ ಇಳವಂಜಿರಾಯರ ಆಳ್ವಿಕೆಯನ್ನು ಸೂಚಿಸುವಂತಹ ಅಪರೂಪದ ದಾನಶಾಸನವು ಮುಳಬಾಗಿಲು ತಾಲ್ಲೂಕಿನಲ್ಲಿ ದೊರಕಿದೆ. ಧಾರ್ಮಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ ಸಮತೋಲನವನ್ನು ರಾಜನು ಕಾಪಾಡಿಕೊಂಡು ಹೋಗುತ್ತಿದ್ದನೆಂದು ಇಲ್ಲಿ ದೊರಕುವಂತಹ ಬ್ರಹ್ಮದೇಯ ಶಾಸನಗಳು ಮತ್ತು ಸ್ಮಾರಕ ಶಾಸನೋಕ್ತವಾದ ದಾನಗಳಿಂದ ಕಾಣಬಹುದಾಗಿದೆ.

"ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತೆನಬೇಡ" ಎನ್ನುವ ಗಾದೆಯು ಪ್ರಸಿದ್ಧವಾಗಿದೆ. ತನ್ನ ಮುಂದಿನ ಜನ್ಮಕ್ಕೆ ಪುಣ್ಯ ಸಂಪಾದನೆಯಾಗಬೇಕೆಂಬ ಧ್ಯೇಯ್ಯೋದ್ದೇಶಗಳು ರಾಜನಿಗಿದ್ದವು.. ದಾನಶಾಸನಗಳಲ್ಲಿ ಬರುವಂತಹ ಶಾಪಾಶಯಗಳ ಭಾಗವು ದಾನದ ಔಚಿತ್ಯದ ಜೊತೆಗೆ, ದಾನದ ವಿಷಯವಾಗಿ ಕಿವಿಮಾತನ್ನು ತಿಳಿಸುತ್ತದೆ. ಯಾರು ಭೂಮಿಯನ್ನು ದಾನ ಮಾಡುತ್ತಾರೋ ಮತ್ತು ಯಾರು ಭೂದಾನವನ್ನು ಸ್ವೀಕರಿಸುತ್ತಾರೋ, ಇವರಿಬ್ಬರು ಪುಣ್ಯವಂತರಾಗಿದ್ದು, ಅವಶ್ಯವಾಗಿ ಸ್ವರ್ಗಲೋಕವನ್ನು ಹೊಂದುತ್ತಾರೆ. ಲೋಕದಲ್ಲಿ ಭೂಮಿದಾನಕ್ಕಿಂತ ಮಿಗಿಲಾದ ದಾನವಿಲ್ಲ. ಅದರಿಂದ ದೊರಕುವಂತಹ ಪುಣ್ಯವು ಹಿಂದೆ ಇರಲಿಲ್ಲ. ಮುಂದೆಯೂ ಬರುವುದಿಲ್ಲ. ಆದರೆ ಅದೇ ಭೂಮಿಯನ್ನು ಅಪಹರಿಸಿದರೆ ಅದರಿಂದ ದೊರಕುವಂತಹ ಪಾಪವು ಹಿಂದೆ ಇರಲಿಲ್ಲ ಮುಂದೆ ದೊರಕುವುದಿಲ್ಲ. ಸಗರ ಮೊದಲಾದಂತಹ ಹಲವಾರು ರಾಜರುಗಳಿಂದ ಈ ಭೂಮಿಯು ಭೋಗಿಸಲ್ಪಟ್ಟಿದೆ ಯಾರಿಗೆ ಯಾವ ರೀತಿಯಾದ ಭೂಮಿಯೋ ಅವರಿಗೆ ಅದೇ ರೀತಿಯಾದ ಫಲವು ಎಂದು ಮೊದಲಾಗಿ ದಾನದ ಮಹತ್ವವನ್ನು ಶಾಸನಗಳು ತಿಳಿಸಿದೆ.

ನ ವಿಷಂ ವಿಷಮಿತ್ಯಾಹು ಬ್ರಹ್ಮಸ್ವಂ ವಿಷಮುಚ್ಯತೇ ।

ವಿಷಮೇತಾಕಿನಂ ಹಂತಿ ಬ್ರಹ್ಮಸ್ವಂ ಪುತ್ರ ಪೌತ್ರಿಕಂ ॥

(ವಿಷವು ನಿಜವಾದ ವಿಷವಲ್ಲ, ಬ್ರಹ್ಮಸ್ವಂ ನಿಜವಾದ ವಿಷವಾಗಿದೆ. ವಿಷವು ಒಬ್ಬರನ್ನೇ ಕೊಂದರೆ, ಬ್ರಹ್ಮಸ್ವವು ಪುತ್ರ ಪೌತ್ರರನ್ನು ಕೊಲ್ಲುವುದು)[೧೧೩]

". . . ಇದನಳಿದೊಂ ಪಂಚ ಮಹಾಪಾತನಕ್ಕುಂ" ಎಂದೂ ಈ ಧರ್ಮವನ್ನು ಹಾಳುಗೆಡೆಹಿದವನು ಐದು ಮಹಾಪಾತಕಗಳನ್ನನುಭವಿಸುತ್ತಾನೆ.[೧೧೪]

ಬ್ರಹ್ಮ ಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।

ಮಹಾಂತಿ ಪಾತಾಕಾನ್ಯಾಹುಃ ಸಂಸರ್ಗಶ್ಚಾಪಿ ತೈಃ ಸಹ ॥

(ಬ್ರಾಹ್ಮಣ ಹತ್ಯೆ, ಸುರಾಪಾನ, ಕಳ್ಳತನವು, ಗುರುಪತ್ನೀ ಸಂಸರ್ಗ ಹಾಗೂ ಇಂಥಹ ಮಹಾಪಾಪವನ್ನು ಮಾಡಿದವರ ಸಂಗವು ಇವು ಐದು ಮಹಾಪಾತಕಗಳೆಂದು ಹೇಳಲ್ಪಟ್ಟಿದೆ.)[೧೧೫]

ಈ ರೀತಿಯಾಗಿ ದಾನ ಶಾಸನಗಳು ದಾನವೆಂಬ ವಿಚಾರವನ್ನು ತಿಳಿಸುವುದರ ಜೊತೆಗೆ ಮಾನವನಿಗೆ ಕರ್ತವ್ಯದ ಬೋಧನೆಯನ್ನು ಮಾಡುತ್ತದೆ. ತಾಮ್ರಶಾಸನಗಳು ಹಲವಾರು ಗ್ರಾಮಗಳ ಭೂವಿಸ್ತೀರ್ಣದ ಮಾಹಿತಿಯನ್ನೊದಗಿಸುತ್ತದೆ. ಇತರ ಶಾಸನಗಳಂತೆ ದಾನ ಶಾಸನಗಳು ಪ್ರಮುಖವಾಗಿವೆ.

ಅಡಿ ಟಿಪ್ಪಣಿಗಳು

೧. ಸುಭಾಷಿತ ರತ್ನ ಭಾಂಡಾಗಾರ
೨. ಮನುಸ್ಮೃತಿ, ಅಧ್ಯಾಯ – ೪, ಶ್ಲೋಕ–೨೪೦
೩. ಅದೇ, ಶ್ಲೋಕ–೨೨೭
೪. ಯಾಜ್ಞವಲ್ಕ್ಯ ಸ್ಮೃತಿ, ದಾನ ಪ್ರಕರಣ, ಶ್ಲೋಕ – ೨೦೧
೫. ಭಗವದ್ಗೀತಾ, ೧೭ನೆಯ ಅಧ್ಯಾಯ, ೨೦ನೇಯ ಶ್ಲೋಕ
೬. ಅದೇ, ೨೧ನೇ ಶ್ಲೋಕ
೭. ಅದೇ, ೨೨ನೇ ಶ್ಲೋಕ
೮. ಪರಾಶರ ಸ್ಮೃತಿ, ೧ನೆಯ ಅಧ್ಯಾಯ, ೭೩ನೆಯ ಶ್ಲೋಕ
೯. ಸುಭಾಷಿತ ರತ್ನ ಭಂಡಾಗಾರ
೧೦. ಶಾಸನ ಪರಿಚಯ, ಆರ್.ಶೇಷಶಾಸ್ತ್ರಿ, ಪು.ಸಂ.೫
೧೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೪೯
೧೨. ಶಾಸನ ಪರಿಚಯ, ಆರ್.ಶೇಷಶಾಸ್ತ್ರಿ, ಪು.ಸಂ.೬
೧೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೩೭
೧೪. M.A.R. 1925, PP-85-89
೧೫. E.C.X ಕೋಲಾರ – ೯೦
೧೬. E.C.X ಮಾಲೂರು – ೭೩
೧೭. E.C.X ಮಾಲೂರು – ೭೨
೧೮. E.C.X ಕೋಲಾರ – ೧೧
೧೯. E.C.X Supp ಶ್ರೀನಿವಾಸಪುರ – ೧೧೭
೨೦. E.C.X Supp ಶ್ರೀನಿವಾಸಪುರ – ೫೭
೨೧. E.C.X Supp ಬಂಗಾರಪೇಟೆ – ೧೦೦, ೧೦೧, ೧೦೨
೨೨. E.C.X Supp ಕೋಲಾರ – ೨೬೨, ೨೬೬
೨೩. E.C.X Supp ಮಾಲೂರು – ೧೦೩
೨೪. E.C.X Supp ಕೋಲಾರ – ೩೪೫
೨೫. E.C.X Supp ಮಾಲೂರು – ೧೪೫
೨೬. E.C.X Supp ಮಾಲೂರು – ೧೪೩
೨೭. E.C.X Supp ಮಾಲೂರು – ೧೫೧
೨೮. E.C.X Supp ಕೋಲಾರ – ೩೨೮
೨೯. E.C.X Supp ಕೋಲಾರ – ೩೩೭
೩೦. E.C.X Supp ಮಾಲೂರು – ೪೯
೩೧. E.C.X Supp ಕೋಲಾರ – ೩೩೯
೩೨. E.C.X Supp ಕೋಲಾರ – ೩೨
೩೩. E.C.X Supp ಮುಳಬಾಗಿಲು – ೧೧೪
೩೪. E.C.X ಮುಳಬಾಗಿಲು – ೧೮
೩೫. E.C.X Supp ಬಂಗಾರಪೇಟೆ – ೮೮
೩೬. E.C.X ಕೋಲಾರ - ೪೪
೩೭. E.C.X ಕೋಲಾರ – ೮೩

೩೮. E.C.X ಮಾಲೂರು – ೧೭೭
೩೯. E.C.X ಕೋಲಾರ – ೩೩೪
೪೦. E.C.X ಮುಳಬಾಗಿಲು – ೩೮
೪೧. E.C.X ಮುಳಬಾಗಿಲು – ೫೧
೪೨. E.C.X ಮುಳಬಾಗಿಲು – ೧೦೮
೪೩. E.C.X ಮುಳಬಾಗಿಲು – ೧೩೩, ೧೩೪
೪೪. E.C.X ಮುಳಬಾಗಿಲು – ೧೩೫, ೧೩೬
೪೫. E.C.X ಕೋಲಾರ – ೩೩
೪೬. E.C.X ಕೋಲಾರ – ೨೩೧
೪೭. M.A.R 1916, PP 35-37
೪೮. M.A.R 1916, PP 31-32
೪೯. E.C.X ಬಂಗಾರಪೇಟೆ – ೧
೫೦. E.C.X ಬಂಗಾರಪೇಟೆ –೦೨
೫೧. E.C.X ಬಂಗಾರಪೇಟೆ – ೧೨೨
೫೨. E.C.X ಕೋಲಾರ – ೫೭
೫೩. E.C.X ಕೋಲಾರ – ೦೯
೫೪. E.C.X ಕೋಲಾರ – ೬೩
೫೫. E.C.X ಮುಳಬಾಗಿಲು – ೧೫೭
೫೬. E.C.X ಮುಳಬಾಗಿಲು – ೨೨೮
೫೭. E.C.X ಮುಳಬಾಗಿಲು – ೨೨೯
೫೮. E.C.X ಮುಳಬಾಗಿಲು – ೨೪೩
೫೯. E.C.X ಮುಳಬಾಗಿಲು – ೨೪೪
೬೦. E.C.X ಕೋಲಾರ – ೩೪೪
೬೧. E.C.X ಕೋಲಾರ – ೧೮೨
೬೨. E.C.X ಮುಳಬಾಗಿಲು – ೨೦೩
೬೩. E.C.X ಶ್ರೀನಿವಾಸಪುರ –೦೭
೬೪. E.C.X ಶ್ರೀನಿವಾಸಪುರ – ೧೪೯
೬೫. E.C.X ಶ್ರೀನಿವಾಸಪುರ – ೪೧
೬೬. E.C.X ಶ್ರೀನಿವಾಸಪುರ – ೫೦
೬೭. E.C.X ಶ್ರೀನಿವಾಸಪುರ – ೮೦
೬೮. E.C.X ಶ್ರೀನಿವಾಸಪುರ – ೦೬
೬೯. M.A.R 1926-27, PP 84
೭೦. E.C.X ಮುಳಬಾಗಿಲು – ೮೦
೭೧. M.A.R 1923-24, PP 82, No.85
೭೨. E.C.X ಶ್ರೀನಿವಾಸಪುರ – ೬೫
೭೩. M.A.R 1925, PP 82, No.85-89

೭೪. M.A.R 1924-25, PP 66, No.73
೭೫. E.C.X ಬಂಗಾರಪೇಟೆ – ೧೩
೭೬. E.C.X ಬಂಗಾರಪೇಟೆ – ೧೩
೭೭. E.C.X ಬಂಗಾರಪೇಟೆ – ೪೨
೭೮. E.C.X ಬಂಗಾರಪೇಟೆ – ೪೪
೭೯. E.C.X ಬಂಗಾರಪೇಟೆ – ೪೮
೮೦. E.C.X ಮುಳಬಾಗಿಲು – ೯೨, ೯೩
೮೧. ಕರ್ನಾಟಕದ ವೀರಗಲ್ಲುಗಳು, ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೨೮೩
೮೨. E.C.X ಕೋಲಾರ – ೨೦೦
೮೩. E.C.X ಕೋಲಾರ – ೭೯
೮೪. E.C.X ಮಾಲೂರು – ೬೯
೮೫. E.C.X ಮುಳಬಾಗಿಲು – ೨೫೫
೮೬. E.C.X Supp ಬಂಗಾರಪೇಟೆ –೮೫
೮೭. E.C.X ಬಂಗಾರಪೇಟೆ – ೮೬
೮೮. E.C.X ಕೋಲಾರ – ೨೦೦
೮೯. E.C.X ಶ್ರೀನಿವಾಸಪುರ – ೩೦
೯೦. E.C.X ಶ್ರೀನಿವಾಸಪುರ – ೦೫
೯೧. ಕರ್ನಾಟಕದ ವೀರಗಲ್ಲುಗಳು, ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೨೭೯
೯೨. E.C.X ಶ್ರೀನಿವಾಸಪುರ – ೧೧೬
೯೩. E.C.X ಶ್ರೀನಿವಾಸಪುರ – ೨೦
೯೪. E.C.X ಶ್ರೀನಿವಾಸಪುರ – ೬೧
೯೫. E.C.X ಬಂಗಾರಪೇಟೆ – ೬೬
೯೬. E.C.X ಮಾಲೂರು – ೧೫೬
೯೭. E.C.X ಕೋಲಾರ – ೨೬೧
೯೮. E.C.X ಕೋಲಾರ – ೩೫೨
೯೯. E.C.X ಕೋಲಾರ – ೩೨
೧೦೦. E.C.X Supp ಮಾಲೂರು – ೧೮
೧೦೧. Inscription of Western Gangas – K.V.Ramesh, P.No-456
೧೦೨. E.C.X ಶ್ರೀನಿವಾಸಪುರ – ೫೯
೧೦೩. E.C.X ಮುಳಬಾಗಿಲು – ೧೨೯
೧೦೪. E.C.X ಮುಳಬಾಗಿಲು – ೧೯೮
೧೦೫. E.C.X ಮುಳಬಾಗಿಲು ೨೦೮
೧೦೬. E.C.X ಮುಳಬಾಗಿಲು – ೧೯೮
೧೦೭. E.C.X ಶ್ರೀನಿವಾಸಪುರ – ೧೭
೧೦೮. E.C.X ಶ್ರೀನಿವಾಸಪುರ – ೧೨
೧೦೯. E.C.X ಮಾಲೂರು – ೭೩

೧೧೦. Inscription's of Western Gangas, K.V.Ramesh, P-36
೧೧೧. ಕರ್ನಾಟಕದ ವೀರಗಲ್ಲುಗಳು, ಡಾ.ಆರ್.ಶೇಷಶಾಸ್ತ್ರಿ, ಪು.-೧೪೦
೧೧೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.ಸಂ.೨೯೨
೧೧೩. E.C.X ಮುಳಬಾಗಿಲು – ೧೫೭
೧೧೪. E.C.X ಬಂಗಾರಪೇಟೆ – ೭೩
೧೧೫. ಮನುಸ್ಮೃತಿ – ೨ನೇ ಅಧ್ಯಾಯ, ೫೪ನೇ ಶ್ಲೋಕ

ಅಧ್ಯಾಯ – ೪

ಸ್ಮಾರಕ ಶಾಸನಗಳು

೪. ೧ ಪೀಠಿಕೆ

೪.೨ ಸ್ಮಾರಕ ಶಾಸನಗಳು

೪.೩ ವೀರಗಲ್ಲು ಶಾಸನಗಳು

೪.೪ ಮಾಸ್ತಿಗಲ್ಲು

೪.೫ ತುರುಗೋಳು

೪.೬ ಪೆಣ್ಬುಯಿಲ್

೪.೭ ಊರಳಿವು

೪.೮ ಬೇಟೆಯಲ್ಲಿ ಮಡಿದ ವೀರನ ನೆನಪಿಗಾಗಿ ನೆಟ್ಟಿರುವ ಶಾಸನಗಳು

೪.೯ ವಿಕ್ರಮಾದಿತ್ಯನ್

ಅಧ್ಯಾಯ – ೪

ಸ್ಮಾರಕ ಶಾಸನಗಳು

೪.೧ ಪೀಠಿಕೆ

ದೈವಾದೀನರಾದ ವ್ಯಕ್ತಿಯ ಸ್ಮರಣೆಗಾಗಿ ನಿಗದಿಯಾದ ಸ್ಥಳದಲ್ಲಿ ನಿರ್ಮಿಸಿದ ಸಂಕೇತ ಅಥವಾ ಗುರುತಿನ ಸಾಧನಗಳನ್ನು "ಸ್ಮಾರಕ"ಗಳೆಂದು ಕರೆಯಲಾಗಿದೆ. ಇದು ರಾಜರಿಂದ ಜನಸಾಮಾನ್ಯರವರೆಗೂ ಪ್ರೀತಿ, ರೋಚಕತೆಗೆ ಕಾರಣವಾಗಿದೆ. ಈ ಸ್ಮಾರಕಗಳು ಶಿಲೆಗಳ ಮೇಲೆ ರಚನೆಗೊಂಡಿದ್ದು, ಮನುಷ್ಯ ನಡೆದು ಬಂದ ಹಾದಿಯನ್ನು ತಿಳಿಸುವುದರ ಜೊತೆಗೆ ಜೀವನಶೈಲಿ ಹಾಗೂ ಸಂಸ್ಕೃತಿಯನ್ನು ತಿಳಿಸುತ್ತದೆ. ಈ ಸ್ಮಾರಕಗಳು ಪ್ರಾಗೈತಿಹಾಸಿಕ ಕಾಲದಿಂದಲೂ ಚಪ್ಪಡಿಕಲ್ಲುಗಳಿಂದ ಗುಡಿಗಳನ್ನು ನಿರ್ಮಿಸುವುದರ ಮುಖಾಂತರ ಸಾಮಾಜಿಕ, ಧಾರ್ಮಿಕ, ನಂಬಿಕೆ ವ್ಯವಸ್ಥೆಗೂ ಪಸರಿಸಿದೆ. ದೆವ್ವ/ಭೂತಗಳ ಮೇಲಿರುವ ನಂಬಿಕೆಯಿಂದ ದೇಹ ನಶಿಸಿದರೂ ಮುಂದಿನ ಪೀಳಿಗೆಯ ನೆನಪಿಗಾಗಿಯೂ ಕೂಡ ಸ್ಮಾರಕಗಳನ್ನು ನಿರ್ಮಿಸಿದ್ದಾರೆ.

೪.೨ ಸ್ಮಾರಕ ಶಾಸನಗಳು

ಸ್ಮಾರಕಗಳು ಕೇವಲ ಮಾನವನಿಗೆ ಮಾತ್ರ ಸೀಮಿತವಾಗದೆ ಪ್ರಕೃತಿಗೆ ಕೂಡ ಅನ್ವಯಿಸುತ್ತದೆ. ಗಿಡ, ಮರ, ಪ್ರಾಣಿಗಳಿಗೂ ಕೆಲವು ಶಾಸನಗಳು ಸಾಕ್ಷಿಯಾಗಿದೆ. ಮನುಷ್ಯ ಯಾವ ಪ್ರಾಣಿಗಳ ಮೇಲೆ ಹೆಚ್ಚು ಅವಲಂಭಿತನಾಗಿದ್ದಾನೋ ಅದರೊಂದಿಗೆ ಪ್ರೀತಿ ಪಡೆದಿದ್ದನೆಂಬುದಕ್ಕೆ ನಾಯಿಗಳ ಸ್ಮಾರಕ, ಕುದುರೆ ಸ್ಮಾರಕಗಳಿಂದ ತಿಳಿಯುತ್ತದೆ. ಸತ್ತ ಪ್ರಾಣಿಗಳ ನೆನಪಿಗಾಗಿ ಸ್ಮಾರಕಗಳನ್ನು ನಿರ್ಮಿಸಲು ಮುಂದಾದ.

ಬಸವ ಧಾರ್ಮಿಕವಾಗಿ ಪೂಜೆಗೆ ಅರ್ಹವಾಗಿರುವ ಪ್ರಾಣಿ. ಈ ಬಸವನನ್ನು 'ದೇವರಗೂಳಿ' ಎಂದು ಕರೆಯುತ್ತಾರೆ. ಇಂತಹ ಗೂಳಿಯನ್ನು ಹಳ್ಳಿಗರು ದೇವರೆಂಬ ಭಾವನೆಯಿಂದ ಪೂಜಿಸುತ್ತಾರೆ. ಹಾಗೂ ಸತ್ತ ನಂತರ ಸ್ಮಾರಕ ನಿರ್ಮಿಸಿ ಅದನ್ನು ಪೂಜಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಕೂರವಳ್ಳಿ ಗ್ರಾಮದಲ್ಲಿ ಕೈಕೇಶ್ವರ ದೇವಸ್ಥಾನಕ್ಕೆ ಸೇರಿದ ಒಂದು ಹೋರಿ ಇತ್ತು. ಅದು ವಾಮನಯ್ಯ ಎಂಬುವವನ ಹೊಲಕ್ಕೆ ನುಗ್ಗಿ ಮೇಯುತ್ತಿರುವಾಗ ವಾಮನ ಭಟ್ಟನು ಕೋಲಿನಿಂದ ಹೊಡೆಯಲು ಅದು 'ಶಿವನೇ ರಕ್ಷಿಸು' ಎಂದು ಕೂಗಿ ಪ್ರಾಣಬಿಟ್ಟಿತು. ಅದನ್ನು ಕಂಡು ವಾಮನಭಟ್ಟನು ಊರಿನ ಜನಗಳನ್ನೆಲ್ಲ ಸೇರಿಸಿ ತನ್ನ ತಪ್ಪನ್ನು ಒಪ್ಪಿಕೊಂಡು 'ಸ್ವಯಂಭೂ' ದೇವರಿಗೆ ಭೂಮಿಯನ್ನು ದಾನವಾಗಿ ಕೊಟ್ಟನೆಂದು "ಕನ್ನಡ ಜಾನಪದ ವಿಶ್ವಕೋಶ"ದಲ್ಲಿ ತಿಳಿಸಿದೆ. ಇದು ಶಾಸನವೊಂದರ ಮಾಹಿತಿಯಾಗಿದೆ. ಸಂಪ್ರದಾಯದ ಪ್ರಕಾರ ಗೂಳಿಯು ಎಲ್ಲಿ ಬೇಕಾದರೂ ಮೇಯಬಹುದು ಹಾಗೂ ಅದು ಊರಿನ ಆಸ್ತಿ ಎಂಬ ನಂಬಿಕೆ. ಇದಲ್ಲದೆ ಈ ಗೂಳಿಗಳನ್ನು ಹಸುಗಳಿಗೆ ಗರ್ಭಕಟ್ಟಿಸಲು ಬಳಸಿಕೊಳ್ಳುತ್ತಿದ್ದರು ಎಂದು ತಿಳಿದುಬರುತ್ತದೆ.

ಇನ್ನು ವೀರಗಲ್ಲುಗಳನ್ನು ಗಮನಿಸಿದಾಗ ಅರಸರ ಪರವಾಗಿ, ಸಾಮ್ರಾಜ್ಯದ ರಕ್ಷಣೆಗಾಗಿ, ಊರಿನ ಹಿತರಕ್ಷಣೆ, ವೈರಿಗಳ ವಿರುದ್ಧ ಹೋರಾಟ ಮಾಡಿ ಮಡಿದ ವೀರನ ಸ್ಮರಣೆಗಾಗಿ ನೆಟ್ಟ ಶಿಲಾಫಲಕಗಳಾಗಿವೆ. ಇಂತಹ ವೀರಗಲ್ಲುಗಳನ್ನು ಪೂಜಿಸುವ ಪದ್ಧತಿಯು ರೂಢಿಯಲ್ಲಿತ್ತು. ಧೂಪ, ದೀಪ, ಹೂ ಅರ್ಪಿಸಿ ಗೌರವವನ್ನು ಸಲ್ಲಿಸುವುದು ರೂಢಿಯಲ್ಲಿದೆ. ಇಂತಹ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಇಲ್ಲಿ ಶಾಸನ ರಹಿತ,

ಶಾಸನ ಸಹಿತ ಅನೇಕ ವೀರಸ್ಮಾರಕ ಶಿಲೆಗಳು ದೊರೆಯುತ್ತವೆ. ಇಲ್ಲಿ ಮಹಾಸತಿ ಕಲ್ಲುಗಳು ಹೊರತು ಪಡಿಸಿ ಮಿಕ್ಕ ಶಾಸನಗಳು ಹೆಚ್ಚಾಗಿದೆ.

ಆಧುನಿಕ ಕಾಲದಲ್ಲೂ ಸ್ಮಾರಕವನ್ನು ನಿರ್ಮಿಸಿದ್ದಾರೆ ಎನ್ನುವುದಕ್ಕೆ ಬಾದಾಮಿ ತಾಲ್ಲೂಕಿನ ಚೋಳಚಗುಡ್ಡದಲ್ಲಿ ನೆಟ್ಟಿರುವ ವೀರಗಲ್ಲು ಸಾಕ್ಷಿಯಾಗಿದೆ. ಇದು ಕಾರ್ಗಿಲ್ ಯುದ್ಧದಲ್ಲಿ ಮಡಿದ ಸೈನಿಕನ ನೆನಪಿಗಾಗಿ ನಿರ್ಮಿಸಿರುವುದಾಗಿರುತ್ತದೆ.

ಭಾರತದ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಾಶ್ರಮ ಧರ್ಮಗಳಿದ್ದವು. ಆಯಾಯಾ ವರ್ಣಾಶ್ರಮದವರಿಗೆ ಅವರದೇ ಆದಂತಹ ಕುಲಕಸುಬುಗಳು, ಅವರದೇ ಆದಂತಹ ಗುಣಧರ್ಮಗಳಿದ್ದವು. ರಾಜರು ಯುದ್ಧ, ಸಾಹಸ, ಪರಾಕ್ರಮ, ಶೌರ್ಯ, ಎದೆಗಾರಿಕೆ ಮೊದಲಾದವುಗಳಿಗೆ ಹೆಸರುವಾಸಿಯಾಗಿದ್ದರು. ಭಾರತೀಯ ನಾಟ್ಯಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವಂತಹ ನವರಸಗಳಲ್ಲಿ ವೀರರಸವೂ ಪ್ರಧಾನವಾಗಿದೆ. ರಾಜರುಗಳು ತಮ್ಮ ರಾಜ್ಯವಿಸ್ತಾರವನ್ನು ಮಾಡುವಂತಹ ಸಂದರ್ಭದಲ್ಲಿ ದೊಡ್ಡ ದೊಡ್ಡ ಯುದ್ಧಗಳನ್ನು ಎದುರಿಸುತ್ತಿದ್ದರು. ಇಂತಹ ಯುದ್ಧಗಳು ರಾಜನ ರಾಜಕೀಯ ಜೀವನದಲ್ಲಿ ಪ್ರಮುಖವಾದುದಾಗಿದ್ದು, ಆತನ ರಾಜಕೀಯ ಹೆಜ್ಜೆಗಳನ್ನು ಸ್ಪಷ್ಟವಾಗಿ ನಮಗೆ ತಿಳಿಸಲು ಶಕ್ತವಾಗಿದೆ.

ರಾಜನು ಪ್ರಸಿದ್ಧವಾದಂತಹ ದೊಡ್ಡ ದೊಡ್ಡ ಯುದ್ಧಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿದ್ದರೆ, ರಾಜ್ಯದೊಳಗೆ ಪ್ರತಿಷ್ಠಿತ ವ್ಯಕ್ತಿಗಳು ದೇಶರಕ್ಷಣೆಯ ಪಣವನ್ನು ತೊಡುತ್ತಿದ್ದರು. ರಾಜನು ರಾಜ್ಯ ವಿಸ್ತಾರವನ್ನು ಮಾಡುವಂತಹ ಉದ್ದೇಶದಿಂದ ಬೇರೆ ದೇಶಗಳಿಗೆ ಹೋಗಿರಲು ದೇಶದೊಳಗೆ ಏನಾದರೂ ಯುದ್ಧ ಭೀತಿಯ ಪರಿಸ್ಥಿತಿ ಉಂಟಾದರೆ ಅಂತಹ ಸಂದರ್ಭದಲ್ಲಿ ದೇಶದೊಳಗಿನ ವೀರರು ಎದ್ದು ನಿಂತು ಸಮರ್ಥವಾಗಿ ಅದನ್ನು ಎದುರಿಸುತ್ತಿದ್ದರು. ಕೆಲವೊಮ್ಮೆ ಪ್ರಧಾನ ಯುದ್ಧಗಳಲ್ಲೂ ರಾಜನಿಗೆ ವೀರರು ಸಹಾಯಕರಾಗಿರುತ್ತಿದ್ದರು. ಇಂತಹ ವೀರರು ಶತ್ರುಗಳೊಡನೆ ಹೋರಾಡಿ ಜಯವನ್ನು ಸಂಪಾದಿಸುತ್ತಿದ್ದರು. ಕೆಲವೊಮ್ಮೆ ವೀರ ಮರಣವನ್ನು ಹೊಂದುತ್ತಿದ್ದರು. ಇಂತಹ ವೀರರು ಒಂದು ವೇಳೆ ಯುದ್ಧದಲ್ಲಿ ಮರಣವನ್ನು ಹೊಂದಿದರೆ ಅವರ ಸ್ಮರಣಾರ್ಥ ಸ್ಮಾರಕ ಶಾಸನಗಳನ್ನು ಇಡುತ್ತಿದ್ದರು. ಇಂತಹ ಸ್ಮಾರಕ ಶಾಸನಗಳನ್ನು 'ವೀರಗಲ್ಲು' ಎಂದು ಕರೆಯುತ್ತಾರೆ. ಆಂಗ್ಲ ಭಾಷೆಯಲ್ಲಿ 'Hero Stone' ಎಂದು ಕರೆಯಲ್ಪಡುವಂತಹ ಈ ವೀರಗಲ್ಲುಗಳು ಸಮಾಜದ ಸ್ವರೂಪವನ್ನು ತಿಳಿಸುತ್ತದೆ.

ತನ್ನ ಆತ್ಮಾರ್ಪಣೆ ಮಾಡಿಕೊಂಡಂತಹ ವೀರನಿಗೆ ಸಮಾಜದಲ್ಲಿ ವಿಶೇಷವಾದಂತಹ ಗೌರವವು ದೊರಕುತ್ತಿತ್ತು. ಆ ವೀರನ ಆತ್ಮದಾನದ ವಿಷಯವು ಶಾಶ್ವತವಾಗಿ ಉಳಿಯುವಂತಹ ದೃಷ್ಟಿಯಲ್ಲಿ ವೀರನ ಪರಾಕ್ರಮವನ್ನು ವರ್ಣಿಸುತ್ತಾ ಆತನ ನೆನಪಿಗಾಗಿ ವೀರಗಲ್ಲನ್ನು ಸಮಾಜದಲ್ಲಿ ಸ್ಥಾಪಿಸುತ್ತಿದ್ದರು. ರಾಜನು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ವೀರನಿಗೆ ಬಾಳ್ಗಚ್ಚು ಕೊಡುವುದರ ಮೂಲಕ ಗೌರವವನ್ನು ನೀಡುತ್ತಿದ್ದನು.

ಡಾ.ಆರ್.ಶೇಷಶಾಸ್ತ್ರಿಗಳು ವೀರರ ಆತ್ಮಬಲಿಯನ್ನು[1] ವರ್ಣಿಸುತ್ತಾ ವೀರರನ್ನು ಧಾರ್ಮಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು, ಸಾಮಾಜಿಕ ಕಾರಣಗಳಿಗಾಗಿ ಆತ್ಮ ಬಲಿ ಮಾಡಿಕೊಂಡವರೆಂದು ವಿಂಗಡಿಸುತ್ತಾ ವೀರರು ಅರಸನ ಪರವಾಗಿ ಹೋರಾಡಿ ಸಮಾಜದ ಹಿತದೃಷ್ಟಿಯಿಂದ ಪ್ರಾಣತ್ಯಾಗ ಮಾಡಿದವರೆಂದೂ ಮತ್ತು ಸ್ವಯಂ ಪ್ರೇರಣೆಯಿಂದ ಊರಿನ ಹಿತದೃಷ್ಟಿಯಿಂದ ಪ್ರಾಣತ್ಯಾಗ ಮಾಡಿದವರೆಂದು ವಿಂಗಡಿಸುತ್ತಾರೆ. ಸಂಸ್ಕೃತ ಭಾಷೆಯಲ್ಲಿ ಪ್ರಸಿದ್ಧವಾದ ಸುಭಾಷಿತವಿದೆ.[2]

ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ ।

ಪರಿವ್ರಾಡ್ಯೋಗ ಯುಕ್ತಾಶ್ಚರಣೇ ಚಾಭಿಮುಖೇ ಹತಃ ॥

(ಈ ಲೋಕದಲ್ಲಿ ಸೂರ್ಯ ಮಂಡಲವನ್ನು ಭೇದಿಸುವವರು ಇಬ್ಬರು. ಒಬ್ಬನು ಯೋಗದಲ್ಲಿ ನಿರತನಾದ ಪರಿವ್ರಾಜಕನು (ಯೋಗಿಯು) ಇನ್ನೊಬ್ಬನು ಯುದ್ಧದಲ್ಲಿ ಹೋರಾಡಿ ಮಡಿದವನು)

ಗೀತಾಚಾರ್ಯನಾದ ಶ್ರೀಕೃಷ್ಣನೂ ಭಗವದ್ಗೀತೆಯಲ್ಲಿ ಅರ್ಜುನನ್ನು ನೆಪವಾಗಿಟ್ಟುಕೊಂಡು ಸಮಾಜಕ್ಕೆ ವೀರತ್ವವನ್ನು ತಿಳಿಯಪಡಿಸುವ ಮೂಲಕ ಧೈರ್ಯವನ್ನು ತುಂಬಿದ್ದಾನೆ. ಕೌರವರ ವಿಶಾಲವಾದಂತಹ ಸೈನ್ಯವನ್ನು ಕಂಡು ಧೈರ್ಯಗುಂದಿದ ಅರ್ಜುನನ್ನು ಬಡಿದೆಬ್ಬಿಸಿ ಮಹಾಭಾರತ ಯುದ್ಧಕ್ಕೆ ಅಣಿಯಾಗುವಂತೆ ಹುರಿದುಂಬಿಸುತ್ತಾನೆ. ವೀರಗಲ್ಲುಗಳಿಗೆ ಪೂರಕವಾಗಿರುವಂತಹ ಶ್ರೀಕೃಷ್ಣನ ಮುಂದಿನ ಮಾತು ಈ ರೀತಿಯಾಗಿದೆ.[3]

ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾವಾಭೋಕ್ಷ್ಯಸೇ ಮಹೀಮ್ ।

ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತ ನಿಶ್ಚಯಃ ॥

(ಹೇ ಅರ್ಜುನ ನೀನು ಯುದ್ಧದಲ್ಲಿ ವೀರ ಮರಣವನ್ನು ಹೊಂದಿದರೆ ಸ್ವರ್ಗವನ್ನು ಹೊಂದುತ್ತಿಯ, ಯುದ್ಧದಲ್ಲಿ ಗೆದ್ದರೆ ಸಕಲ ಭೂಮಂಡಲವನ್ನು ಆಳುತ್ತಿಯ. ಹಾಗಾಗಿ ಎರಡರಿಂದಲೂ ಒಂದೇ ರೀತಿಯಾದಂತಹ ಫಲವು ದೊರಕುತ್ತಿರಲು ಎಚ್ಚೆತ್ತು ಯುದ್ಧಕ್ಕೆ ಸನ್ನದ್ಧನಾಗು)

ಇದೇ ಧ್ಯೇಯವನ್ನು ಕರ್ನಾಟಕದ ವೀರರು ಹೊಂದಿದ್ದರು. ಯಾವುದೇ ರೀತಿಯಾದಂತಹ ಹೇಡಿತನವಿಲ್ಲದೆಯೇ ವೀರರು ಯುದ್ಧಗಳಲ್ಲಿ ಹೋರಾಡುತ್ತಿದ್ದರು. ಕೋಲಾರ ಜಿಲ್ಲೆಯಲ್ಲಿ ವೀರ ಇತಿಹಾಸವು ಬಹಳ ಪರಾಕ್ರಮದಿಂದ ಕೂಡಿದೆ. ಇಲ್ಲಿ ದೊರಕಿರುವಂತಹ ವೀರರು ರಾಜರ ಪ್ರಸಿದ್ಧ ಯುದ್ಧಗಳಲ್ಲಿ ಸಹಾಯಕರಾಗಿಯೂ, ಸ್ವಯಂ ಪ್ರೇರಣೆಯಿಂದಲೂ ಆತ್ಮಾರ್ಪಣೆಯನ್ನು ಮಾಡುತ್ತಿದ್ದರು.

ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ವೀರಗಲ್ಲುಗಳು ಎಂಟನೆಯ ಶತಮಾನದ ಆಸುಪಾಸಿನಲ್ಲಿ ದೊರೆಯುತ್ತದೆ. ಒಂಭತ್ತು ಮತ್ತು ಹತ್ತನೆಯ ಶತಮಾನದ ಹೆಚ್ಚು ಪ್ರಮಾಣದ ವೀರಗಲ್ಲು ಶಾಸನಗಳು ದೊರೆಯುತ್ತದೆ. ವೀರರಿಗೆ ಸಂಬಂಧಿಸಿದಂತಹ ವಿಶೇಷ ವಿಷಯವೆಂದರೆ 'ವೀರರ ಗುಡಿ'ಗಳು. ಮುಳಬಾಗಿಲು ತಾಲ್ಲೂಕಿನಲ್ಲಿ ವಿಶೇಷವಾಗಿ ಇಂತಹ ವೀರರ ಗುಡಿಗಳು ಕಾಣಸಿಗುತ್ತವೆ. ಈ ಗುಡಿಗಳು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದಂತಹ ಶಿಲಾಗೋರಿಗಳೆಂದು ಇತಿಹಾಸಕಾರ ಅಭಿಪ್ರಾಯವಿದೆ.[೪]

ಕೋಲಾರ ನಗರದ ಹೃದಯ ಭಾಗದಲ್ಲಿರುವಂತಹ ಕೋಲಾರಮ್ಮನ ಗುಡಿಯಲ್ಲಿರುವ ವೀರಗಲ್ಲು ಶಾಸನವು ಎಲ್ಲರನ್ನು ಗಮನ ಸೆಳೆಯುತ್ತದೆ. ಶಾಸನ ಶಿಲ್ಪಕ್ಕೆ ಕೈಗನ್ನಡಿಯಂತಿರುವಂತಹ ಈ ಶಾಸನವು ಒಬ್ಬ ವೀರನ ಸಾಹಸಗಾಥೆಯನ್ನು ವರ್ಣಿಸುತ್ತದೆ. ಈ ವೀರನ ಸುತ್ತಲೂ ವೈವಿಧ್ಯಮಯ ಚಿತ್ರಣವನ್ನು ವಿಸ್ತಾರವಾಗಿ ಕೆತ್ತಲಾಗಿದೆ. ಈ ವೀರಗಲ್ಲು ಶಾಸನವನ್ನು ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸೂಕ್ಷ್ಮವಾಗಿ ಗಮನಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಬ್ಬ ವೀರನು ದೊಡ್ಡ ಖಡ್ಗವನ್ನು ಕೈಯಲ್ಲಿ ಎತ್ತಿಕೊಂಡು ಶತ್ರುಗಳನ್ನು ಎದುರಿಸುತ್ತಿರುವಂತೆ ಕಾಣುತ್ತದೆ. ಶಾಸನದ ಮೇಲ್ಭಾಗದಲ್ಲಿ ಕುದುರೆ, ಛತ್ರ, ಚಾಮರಗಳನ್ನು ಮತ್ತು ಒಂದು ಮರವನ್ನು ಕೆತ್ತಲಾಗಿದೆ. ವೀರನ ಬಲ ಪಾರ್ಶ್ವದಲ್ಲಿ ಆನೆಯನ್ನು, ಎಡಪಾರ್ಶ್ವದಲ್ಲಿ ಕುದುರೆಯನ್ನು ಕೆತ್ತಲಾಗಿದೆ. ಕೆಳಭಾಗದಲ್ಲಿ ಯುದ್ಧದ ಭೀಕರತೆಯನ್ನು ಸಾರುವಂತಹ ಚಿತ್ರಣವನ್ನು ಗಮನಿಸಬಹುದಾಗಿದೆ. ಮೇಲ್ಭಾಗದ ಒಂದು ಪಾರ್ಶ್ವದಲ್ಲಿ ಅಪ್ಸರೆಯರು ವೀರರನ್ನು ಎತ್ತಿಕೊಂಡು ಹೋಗುತ್ತಿರುವಂತೆಯೂ ಮೂವರು ಗಂಧರ್ವರು ಅವನನ್ನು

ಸ್ವಾಗತಿಸುತ್ತಿರುವಂತೆಯೂ ಕಂಡುಬರುತ್ತದೆ. ವೀರಗಲ್ಲು ಶಾಸನದಲ್ಲಿರುವ ಯುದ್ಧದ ಗಂಭೀರತೆಯನ್ನು ಗಮನಿಸಿದರೆ ಬಹಳ ಘೋರವಾದ ಯುದ್ಧವು ನಡೆದಿರಬಹುದು ಎಂದು ಊಹಿಸಬಹುದು. ವೀರನು ಪರಾಕ್ರಮಿಯಾಗಿದ್ದು ಒಂದು ಪ್ರದೇಶದ ಪ್ರಸಿದ್ಧ ವ್ಯಕ್ತಿಯಾಗಿರಬೇಕು.

೪.೩ ವೀರಗಲ್ಲು ಶಾಸನಗಳು

ಕೋಲಾರ ಜಿಲ್ಲೆಯಲ್ಲಿ ಬಾಣರಸರಿಗೂ ಮತ್ತು ಗಂಗ ಅರಸರಿಗೂ ಸಂಬಂಧಿಸಿದಂತಹ ಶಾಸನಗಳು ಹೆಚ್ಚಾಗಿ ದೊರೆಯುತ್ತದೆ. ಹೆಚ್ಚಾಗಿ ಬಾಣರಿಗೂ ಗಂಗರಿಗೂ ಯುದ್ಧಗಳು ನಡೆದಂತಹ ಸನ್ನಿವೇಶದಲ್ಲಿ ಉದ್ಭವಿಸಿರುವಂತಹ ಶಾಸನಗಳು ಇವರಿಬ್ಬರ ರಾಜ್ಯಾಡಳಿತದಲ್ಲಿ ಇದ್ದಂತಹ ರಾಜಕೀಯ ದ್ವೇಷವನ್ನು ಚಿತ್ರಿಸುತ್ತವೆ. ಕೋಲಾರ ಜಿಲ್ಲೆಯ ಎಲ್ಲಾ ಜಿಲ್ಲೆಗಳಲ್ಲೂ ವೀರಗಲ್ಲು ಸ್ಮಾರಕ ಶಾಸನಗಳು ದೊರಕುತ್ತವೆ.

ಮುಳಬಾಗಿಲು ತಾಲ್ಲೂಕು ಬೈರಕೂರು ಹೋಬಳಿ ಮಣಿಗಟ್ಟು ಗೊಲ್ಲಹಳ್ಳಿಯಲ್ಲಿರುವಂತಹ ಶಾಸನವು[೫] ಮರುವಕ್ಕದ ಮೂರ್ಕ್ಕಾಡಿನೊಳು ಕಾಳಗವು ನಡೆದಾಗ ಮಣಿಘಟ್ಟದ ಮಾಣಿಕಾಮೆಂಡಿ ಮುದುಳ ಗಾವುಂಡರ ಮಗನಾದ ಕಸವಯ್ಯನೆಂಬುವವನು ಹೋರಾಡಿ ವೀರಮರಣವನ್ನು ಹೊಂದಿರುವಂತೆ ಶಾಸನವು ತಿಳಿಸುತ್ತದೆ. ಕ್ರಿ.ಶ.೯೦೯ರ ಬಾಣರಸರ ಆಳ್ವಿಕೆಯ ಈ ಶಾಸನವು ವೀರನು ಕಾಳಗದಲ್ಲಿ ಇಬ್ಬರನ್ನು ಕೊಂದು ಸ್ವರ್ಗಸ್ಥನಾದನು. ಈತನ ಪರಾಕ್ರಮವನ್ನು ಮೆಚ್ಚಿ ರಾಜನು ಒಂದು ಕಳನಿಯಷ್ಟು ಭೂಮಿಯನ್ನು ದಾನವಾಗಿ ನೀಡಿರುವನು. ಬಾಣ ದೊರೆ ದಿಲೀಪಯ್ಯ ಆಳ್ವಿಕೆಯ ಕಾಲದ ವೀರಗಲ್ಲು ಶಾಸನವು[೬] ತಗಡೂರಿನಲ್ಲಿ ನಡೆದಂತಹ ಕಾಳಗವನ್ನು ಪ್ರಸ್ತಾಪಿಸುತ್ತಾ ಪೊಕ್ಕುಂದ ಬಾರಾಂದರವಯ್ಯ ಎಂಬುವವನು ಬಸವಯ್ಯನ ಮುಂದೆ ಹೋರಾಡಿ ಸ್ವರ್ಗಸ್ಥನಾದನೆಂದು ತಿಳಿಸುತ್ತದೆ. ಬಂಗಾರಪೇಟೆ ತಾಲ್ಲೂಕಿನ ಹುಲಿಕುಂದ ಗ್ರಾಮದಲ್ಲಿರುವಂತಹ ವೀರಗಲ್ಲು ಶಾಸನವು ಕ್ರಿ.ಶ.೧೦ನೆಯ ಶತಮಾನಕ್ಕೆ ಸೇರಿದುದಾಗಿದೆ. ವೀರನ ಪರಾಕ್ರಮಕ್ಕೆ ಮೆಚ್ಚಿದಂತಹ ರಾಜನು ಒಂದು ಕಳನಿಯಷ್ಟು ಭೂಮಿಯನ್ನು ಕೊಡುಂಗೆ (ಕೊಡುಗೆ)ಯಾಗಿ ನೀಡಿರುವನೆಂದು ತಿಳಿಸುತ್ತದೆ. ಈ ಶಾಸನದ ಎಡಗಡೆ, ಬಲಗಡೆ ಮತ್ತು ಮೇಲ್ಭಾಗದಲ್ಲಿ ಬರಹಗಳಿದ್ದು ಮಧ್ಯಭಾಗದಲ್ಲಿ ವೀರಗಲ್ಲಿನ ಶಿಲ್ಪವನ್ನು ಕೆತ್ತಲಾಗಿದೆ.

ಬಾಣರಸರ ಕಾಲದ ಬೂದಿಕೋಟೆ ಹೋಬಳಿ ಕಸಬೆಯಲ್ಲಿ ದೊರೆತಿರುವಂತಹ ವೀರಗಲ್ಲು ಶಾಸನವು[೭] ಬಾಣರಸರ ಮತ್ತು ಗಂಗ ದೊರೆಗಳ ನಡುವೆ ನಡೆದಂತಹ ಯುದ್ಧವನ್ನು ಚಿತ್ರಿಸುತ್ತದೆ. ಕ್ರಿ.ಶ.೯ನೆಯ ಶತಮಾನದ ಈ ಶಾಸನವು ಬಾಣ ದೊರೆಗಳು ಗಂಗ ಅರಸರ ಮೇಲೆ ಯುದ್ಧಕ್ಕೆ ಬಂದಂತೆ ಚಿತ್ರಿಸಲಾಗಿದೆ. ಕಾಳಗವು ನಡೆಯುತ್ತಿರಲು ಬಾಣರಸನು ಅಗ್ಗಳ ಅರಸನಿಗೆ ಬೆಸೆಯಲು (ಬಿನ್ನಹ) ರಾಜನ ಬಿನ್ನಹಕ್ಕೆ ತಲೆಬಾಗಿ ತನ್ನ ಪರಾಕ್ರಮವನ್ನು ತೋರಿಸಿ ಹೋರಾಡಿ ಸೈನಿಕರನ್ನು ಸಾಯಿಸಿ ತಾನೂ ಮರಣವನ್ನು ಹೊಂದಿದನು. ಈತನ ಈ ಶೌರ್ಯ ಪರಾಕ್ರಮಕ್ಕೆ ಮೆಚ್ಚಿದಂತಹ ಬಾಣರಸನು 'ಲಕುಂದ' ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಿದನೆಂದು ಶಾಸನವು ಉಲ್ಲೇಖಿಸುತ್ತದೆ.

. . . . . . ಅಬಲ ಮಾನ್ತಾದಿ ಎರದು ಬಿರ್ದರ್ ಬಿರ್ದೊಡೆ ಮೆಚ್ಚಿ ಇತುನ್ದ

ಬಾಳ್ಗಚ್ಚು ಕೊಟ್ಟ . . . .

ಈ ಶಾಸನವನ್ನು ಹಾಕಿಸಿದವನು ಶ್ರೀಪುರುಷನ ಕಂದನೆಂದು ಶಾಸನವು ತಿಳಿಸುತ್ತದೆ. ಈ ಶಾಸನವು ಐತಿಹಾಸಿಕವಾಗಿ ಪ್ರಮುಖವಾದಂತಹ ಶಾಸನವಾಗಿದ್ದು ಗಂಗ ಬಾಣರ ಸಂಬಂಧಗಳನ್ನು ಪರಸ್ಪರ ವೈಷಮ್ಯಗಳನ್ನು ಚಿತ್ರಿಸುತ್ತದೆ.

ಬಿಸ್ಸನಹಳ್ಳಿಯ ವೀರಗಲ್ಲು ಶಾಸನವು ಐತಿಹಾಸಿಕವಗಿ ಪ್ರಸಿದ್ಧವಾಗಿದೆ

. . . . **ಕಂಪಿಲಗೆ**

ಪಡೆವೋದಲ್ಲಿ ಕೊಮಾಲರಾಮಗ

ನ್ಪಂಡಪ್ಪ ಕಾಳೆಗದುಳ್ಸತ್ತಲ್ಲಿ

ಅವನ್ಗೆ ದುಗ್ಗ ಮಾರರಾಕೆಯ್ದ ಪ್ರಸಾ

ದಮಪ್ಪದು ಸಾಂತನೂರು ಎರಡಿಯೂ

ರುಳುಂ ವನ್ದತೂಮ್ಬು ಕಳನಿಯುಂ ಅವರ

ಮನೆಯುಂ ಬಾಳ್ಗಚ್ಚು ಪ್ರಸಾದಂಗೆಯ್ದಾರ್ . . . . [೮]

ಗಂಗ ದೊರೆ ಶ್ರೀಪುರುಷನ ಮಗನಾದ ದುಗ್ಗಮಾರನು ಕುವಳಾಲನಾಡನ್ನು ಆಳುತ್ತಿರಲು ಆತನ ಸೈನ್ಯವು ಕಂಪಿಲಿಗೆ ಯುದ್ಧಕ್ಕೆ ಹೋದಂತಹ ಮಾಹಿತಿಯನ್ನು ನೀಡುತ್ತದೆ. ಬಹುಶಃ ಕಂಪಿಲಿಯ ಸಾಮಂತ ರಾಜನೊಡನೆ ಕಂಪಿಲಿ ಪ್ರದೇಶದಲ್ಲಿ ಯುದ್ಧವು ನಡೆದಿರಬಹುದು. ಈ ಯುದ್ಧದಲ್ಲಿ ಕೊಮಾಲರ ಮಗನಾದ ಪಾಂಡಪ್ಪನೆಂಬುವವನು ಕಾಳಗದಲ್ಲಿ ವೀರಮರಣವನ್ನು ಹೊಂದಿರುವನು. ಈತನ ಪರಾಕ್ರಮವನ್ನು ಮೆಚ್ಚಿ ದುಗ್ಗಮಾರನು ಪ್ರಸಾದ ರೂಪದಲ್ಲಿ ಬಾಳ್ಗಚ್ಚನ್ನು ನೀಡಿರುವನು. ಸಾಂತನೂರು ಮತ್ತು ಎರೆಡಿಯೂರಿನಲ್ಲಿ ಒಂದು ತೂಂಬು ಕಳನಿಯನ್ನು ಮತ್ತು ಒಂದು ಮನೆಯನ್ನು ವಾಳ್ಗಚ್ಚು (ಬಾಳ್ಗಚ್ಚು) ರೂಪದಲ್ಲಿ ನೀಡಿರುವನು. ಬಾಳ್ಗಚ್ಚನ್ನು ಪ್ರಸಾದ ರೂಪದಲ್ಲಿ ನೀಡಿರುವುದು ವಿಶೇಷವಾಗಿದೆ.

ಕೊಂಗಣಿ ಮುತ್ತರಸನ ಆಳ್ವಿಕೆಯ ೨೭ನೆಯ ವರ್ಷದ ವೀರಗಲ್ಲು ಶಾಸನವು[೯] ಆಪ್ತದವಾಕ್ಕಿಲ್ ಎಂಬ ಸ್ಥಳದಲ್ಲಿ ನಡೆದಂತಹ ಕಾಳಗವನ್ನು ಚಿತ್ರಿಸಿದೆ. ಈ ಸ್ಥಳದ ಪರಿಚಯವು ಕಷ್ಟವಾದುದಾಗಿದ್ದು ತಮಿಳುನಾಡಿನ ಪ್ರದೇಶವಾಗಿರಬಹುದು. ಪುಲಿಕಲಧಿ ಎಂಬುವವನು ಸೆಗುಣ್ಣ ಎಂಬವನೊಡನೆ ಹೋರಾಡಿ ವೀರಮರಣವನ್ನು ಹೊಂದಿದನೆಂದು ಶಾಸನವು ತಿಳಿಸುತ್ತದೆ. ಶಾಸನದ ಕಾಲವು ಕ್ರಿ.ಶ.೭೫೨ ಆಗಿದೆ. ಏಳನೆಯ ಶತಮಾನಕ್ಕೆ ಸೇರುವಂತಹ ಗಂಗ ದೊರೆ ಶ್ರೀವಿಕ್ರಮನ ಕಾಲದ ಕಲ್ಲೂರು ಗ್ರಾಮದ ಶಾಸನವು[೧೦] ಪಾರ್‌ವರ್ ಎಂಬಲ್ಲಿ ನಡೆದಂತಹ ಯುದ್ಧವನ್ನು ಚಿತ್ರಿಸುತ್ತಿದೆ. ಮಹಾರಾಜನು ರಾಜ್ಯವನ್ನಾಳುತ್ತಿರಲು ಪಬ್ಬು ಎನ್ನುವವನು ರಾಜನಿಗೆ ಸಂಬಂಧಿಸಿದಂತಹ ರಕ್ಕಸನೂರು ಎಂಬ ಪ್ರದೇಶವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಪೆರಾನ್ ಕೋವನ್ ಎಂಬಾತನು ಹೋರಾಡಿ ಮಡಿದನೆಂದು ಶಾಸನವು ತಿಳಿಸುತ್ತದೆ. ರಾಜನು ಈತನ ವೀರಮರಣಕ್ಕೆ ಗೌರವವನ್ನು ಸೂಚಿಸುತ್ತಾ ನೆತ್ತರ್ಪಟ್ಟಿಯ (ನೆತ್ತ ಕೊಡುಗೆಯ) ರೂಪದಲ್ಲಿ ಒಂದು ಖಂಡುಗ ಭೂಮಿಯನ್ನು ದಾನ ನೀಡಿರುವನೆಂದು ಶಾಸನವು ತಿಳಿಸುತ್ತದೆ.

"ಸ್ವಸ್ತ್ಯನೇಕ ಗುಣೋ

ಸತ್ಯಶೌಚ ಶೀಲಾಚಾರ ಸಂಪನ್ನ ಬೆಂಗದನಾಥ ಶ್ರೀಮತ್

ಪೊಂಪಲ್ಲಂಜಾಡೆಯ ಮುರ್ಗ್ಗೆಪಾಡಿಯೊಳ್ ಒಡ್ಡಿ ಬಾಣರಸ

ರುಳ್ಳಾದಿ ಪಲರನಿರುದು ಬೀಳ್ದು ಬೀರ ಲೋಕ ಮುಯ್ದಿ . . .

ಈ ಉಲ್ಲೇಖವು ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿ ಮಡಿವಾಳ ಗ್ರಾಮದ ಮೂಲೇಶ್ವರ ದೇವಾಲಯದಲ್ಲಿರುವ ವೀರಗಲ್ಲು ಶಾಸನವು[೧೧] ನೀಡುತ್ತದೆ. ಗಂಗ ದೊರೆ ನೀತಿಮಾರ್ಗ ಕೊಂಗಣಿವರ್ಮನ ಆಳ್ವಿಕೆಯನ್ನು ಸೂಚಿಸುತ್ತಿರುವಂತಹ ಈ ಶಾಸನವು ಬಾಣರಸರೊಂದಿಗೆ ನಡೆದಂತಹ ಯುದ್ಧವನ್ನು ತಿಳಿಸುತ್ತದೆ. ಗಂಗ ಅರಸರು ನೊಳಂಬಾಧಿರಾಜರ ಸಹಾಯವನ್ನು ಪಡೆದು ಯುದ್ಧವನ್ನು ಮಾಡಿರುವಂತೆ ಕಂಡುಬರುತ್ತದೆ. ಮುರ್ಗೆಪಾಡಿ ಎಂಬ ಸ್ಥಳದಲ್ಲಿ ನಡೆದಂತಹ ಈ ಯುದ್ಧದಲ್ಲಿ ಬಂಗದನಾಥ (ವೆಂಕಟನಾಥ) ನೆಂಬುವವನು ಬಾಣರೊಂದಿಗೆ ಹೋರಾಡಿ ವೀರಸ್ವರ್ಗವನ್ನು ಹೊಂದಿದನೆಂದು ತಿಳಿಸುತ್ತದೆ. ವೀರನು ಅನೇಕ ಗುಣ ಸಂಪನ್ನನೂ, ಸತ್ಯ, ಶೌಚ, ಶೀಲ ಮತ್ತು ಆಚಾರ ಸಂಪನ್ನನೂ ಎಂದು ಹೊಗಳಿದೆ. ನೊಳಂಬದೊರೆಯು ಈತನ ಪರಾಕ್ರಮವನ್ನು ಗಂಗ ದೊರೆಗೆ ಬಿನ್ನಹ ಮಾಡಲು ಗಂಗ ದೊರೆಯು ಆತನ ಪರಾಕ್ರಮಕ್ಕೆ ಮೆಚ್ಚಿ ಸೂಳೂರನ್ನು ಬಾಳ್ಗಚ್ಚಾಗಿ ನೀಡಿರುವನೆಂದು ತಿಳಿಸುತ್ತದೆ. ವೀರನು ಪೊಂಪಲ್ಲ ಎಂಬ ಪ್ರದೇಶದವನೆಂದು ಈ ದತ್ತಿಯನ್ನು ಮುಂದೆ ಬರುವಂತಹ ಗಂಗ ಮತ್ತು ನೊಳಂಬರಸರು ಚಂದ್ರಸೂರ್ಯರಿರುವ ತನಕ ಕಾಪಾಡಿಕೊಂಡು ಹೋಗಬೇಕೆಂಬ ಕಿವಿಮಾತನ್ನು ತಿಳಿಸುತ್ತದೆ.

ದಾಸರ ಹೊಸಹಳ್ಳಿಯಲ್ಲಿಯ ಹುಲಿಕುಂದ ಗ್ರಾಮದಲ್ಲಿರುವಂತಹ ಶಾಸನವು[೧೨] ನೊಳಂಬಾಧಿ ಅರಸರ ಆಳ್ವಿಕೆಯನ್ನು ತಿಳಿಸುತ್ತದೆ. ಶಾಸನವು ಪ್ರತಿಪಾದಿಸುತ್ತಿರುವಂತಹ ವಿಚಾರವು ವಿಶೇಷವಾಗಿದೆ. ಬೆಣ್ಣೆಗೂರಿನ ಕವ್ವೋಲೆ ಪಾಣಸ್ವಾಮಿಯ ಮಗನಾದ ಪುರೆಕಾಮನನು ನೂರು ಮಾನಸದಲ್ಲಿ ಹೋಗುತ್ತಿರಲು ಆಳಿದಯಾಳ್ ಸತ್ತನ್ ಎಂದು ವಿಚಾರವನ್ನು ತಿಳಿಸುತ್ತದೆ. ಮೋತಗ ಪಲ್ಲಿಯ ವೀರಗಲ್ಲು ಶಾಸನವು[೧೩] ಗಂಗ–ನೊಳಂಬ ಮೈತ್ರಿಯು ಪಾಂಡ್ಯರ ಮೇಲೆ ಯುದ್ಧಕ್ಕೆ ಹೋಗಿರುವುದನ್ನು ವರ್ಣಿಸುತ್ತಾ ವೀರನು ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ಸತ್ತನೆಂದು ತಿಳಿಸುತ್ತದೆ. ವೀರನ ಹೆಸರು ಅಸ್ಪಷ್ಟವಾಗಿದ್ದು ಆತನ ಶತ್ರುಗಳನ್ನು ಇರಿದು ಅವರೆಲ್ಲರನ್ನು ತುಂಡು ತುಂಡು ಮಾಡಿ ಸತ್ತನೆಂದು ತಿಳಿಸುತ್ತದೆ.

". .. .. ನಿರಿದು ಕಂಡ ಕಂಡ ಮಾಗಿ ಸತ್ತಾನ್ . . .."

ಈ ವೀರನಿಗೆ ತಾಯಲೂರಿನಲ್ಲಿರುವ ಕೆರೆಯ ಕೆಳಭಾಗದಲ್ಲಿ ಕಲ್ನಾಟು ರೂಪದಲ್ಲಿ ಭೂದಾನವನ್ನು ನೀಡಲಾಗಿದೆಯೆಂದು ಶಾಸನವು ತಿಳಿಸುತ್ತದೆ.

ಮುಳಬಾಗಿಲು ತಾಲ್ಲೂಕು ಅವನಿ ಹೋಬಳಿಯ ಅವನಿ ಗ್ರಾಮದ ನಾಗರಕುಂಟೆಯ ಪಶ್ಚಿಮಕ್ಕಿರುವಂತಹ ಹೊಲದಲ್ಲಿರುವ ವೀರಗಲ್ಲು ಶಾಸನವು[೧೪] ಒಬ್ಬ ವೀರನ ಸಾಹಸ ಗಾಥೆಯನ್ನು ವರ್ಣಿಸುತ್ತದೆ. ನೊಳಂಬಾಧಿರಾಜನು ರಾಜ್ಯವನ್ನಾಳುತ್ತಿರಲು ಮತ್ತು ತ್ರಿಭುವನ ಕರ್ತಾರದೇವನು ಶಾಂತಿಯಿಂದ ಆವನಿ ಪ್ರಾಂತ್ಯವನ್ನು ಆಳುತ್ತಿರಲು ಬಳಂಜಮಲ್ಲ ಮತ್ತು ಅನುಪವನ ಸೆಟ್ಟಿ (ಪವನಸೆಟ್ಟಿ)ಯರ ನಡುವೆ ನಡೆದಂತಹ ಕಾಳಗವನ್ನು ಚಿತ್ರಿಸುತ್ತದೆ. ಈ ಕಾಳಗದಲ್ಲಿ 'ಆಯ್ದ ಬಾಮ್ಮೊಶರಾಜ' ನೆಂಬುವವನು ಹೋರಾಡಿ ವೀರಮರಣವನ್ನು ಹೊಂದಿದನೆಂದು ತಿಳಿಸುತ್ತದೆ. ಬಳಂಜ ಮಲ್ಲನು ಗಂಗವಾಡಿ ತೊಂಬತ್ತಾರು ಸಾಸಿರ ಮತ್ತು ಬಾಣರಸವಾಡಿ ಪನ್ನಿರ್ಚ್ಛಾಸಿರವನ್ನು ಆಳುತ್ತಿದ್ದಂತಹ ವಿಚಾರವನ್ನು ತಿಳಿಸುತ್ತದೆ. ಶಾಸನದ ಕಾಲವು ಕ್ರಿ.ಶ.೯೫೦ ಆಗಿದೆ. ಬಳಂಜ ಮಲ್ಲನು ಈ ಭಾಗದ ಪ್ರಾಂತ್ಯಾಧಿಕಾರಿಯಾಗಿರಬೇಕು. ಕಾಳಗವು ಯಾವ ಕಾರಣಕ್ಕಾಗಿ ಎಲ್ಲಿ ನಡೆಯಿತೆಂದು ವಿಚಾರವು ಅಸ್ಪಷ್ಟವಾಗಿದೆ.

ನಂಬಿಹಳ್ಳಿಯ ವೀರಗಲ್ಲು ಶಾಸನವು ವಿಶೇಷವಾಗಿದ್ದು, ತನ್ನ ಶಿಲ್ಪದಿಂದ ಪ್ರಸಿದ್ಧವಾಗಿದೆ. ಈ ಶಾಸನವನ್ನು ಸಮರಶಿಲ್ಪವೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ.[೧೪a]

ಕರ್ನಾಟಕದ ಪ್ರಮುಖ ದೊರೆಗಳಾದ ರಾಷ್ಟ್ರಕೂಟರ ಉಲ್ಲೇಖ ಉಳ್ಳಂತಹ ಏಕಮಾತ್ರ ವೀರಗಲ್ಲು ಶಾಸನವು ಮಾಲೂರು ತಾಲ್ಲೂಕಿನ ಲಕ್ಕೂರು ಹೋಬಳಿ ಅರಸನಹಳ್ಳಿ ದೊರಕಿದೆ. ಈ ವೀರಗಲ್ಲು ಶಾಸನವು[೧೫] ಮಳಗಣ ಎಂಬಲ್ಲಿ ನಡೆದಂತಹ ಯುದ್ಧವನ್ನು ತಿಳಿಸುತ್ತದೆ. ರಾಷ್ಟ್ರಕೂಟ ದೊರೆ ಕಣ್ಣರ ಬಲ್ಲಹನು (ಕ್ರಿ.ಶ.೯೫೦) ದಳಿಗೆವಳಿಗೆ ನಾಡನ್ನು ಆಳುತ್ತಿರಲು ಮರಗಲ್ಲ ಗಾವುಂಡನ ಮಗನಾದ ಪಮೋದಳಿ (ದಾಮೋದರ) ಎಂಬುವವನು ಕಾಳಗದಲ್ಲಿ ಹೋರಾಡಿ ವೀರಮರಣವನ್ನು ಹೊಂದಿದನೆಂದು ಶಾಸನವು ತಿಳಿಸುತ್ತದೆ.

೧. "ಸ್ವಸ್ತಿ ಶ್ರೀ	೯. ಮೋದೆಳು
೨. ಕನ್ನರ ಬ	೧೦. ಮಣ್ಣುಲೋ
೩. ಲ್ಲಹ ದಳಿ	೧೧. ರಮೀಕೆಗಾ
೪. ಗವಳಿ	೧೨. ಳೊಳ್ಕಾದಿ
೫. ಗೆಯನಾಳೆ	೧೩. ಮಳಗ
೬. ಮರಗಲ್ಲ	೧೪. ಣ್ಣೊಳು
೭. ಗಾಮುಂಡ	೧೫. ಸತ್ತು
೮. ನಮಗದ	೧೬. ಸಗ್ಗಿಯಾದಂ"

ರಾಜರಿಗೆ ಸಂಬಂಧಿಸಿದಂತಹ ಕಾಳಗದಲ್ಲಿ ಅವರ ರಕ್ಷಣೆ ಮಾಡುವ ಸಲುವಾಗಿ ಊರಿನ ಪ್ರಮುಖರಾದ ಗಾವುಂಡರೂ (ಗೌಡರು) ಸಕ್ರಿಯವಾಗಿ ಭಾಗವಹಿಸಿ ರಾಜನ ಮೆಚ್ಚುಗೆಯನ್ನು ಪಡೆಯುತ್ತಿದ್ದರೆಂದು ತಿಳಿಯಬಹುದು. ಈ ಮರಗಲ್ಲ ಗಾವುಂಡನ ಉಲ್ಲೇಖವು ನೊಳಂಬ ಮಯಿಂದಮರಸನ ಕಾಲದ ಶಾಸನಗಳಲ್ಲೂ ದೊರಕುತ್ತದೆ. ಈತನ ಕುಟುಂಬದವರೂ ಯುದ್ಧದಲ್ಲಿ ಹೋರಾಡಿ ಆತ್ಮಾರ್ಪಣೆ ಮಾಡಿರುವುದನ್ನು ಬಂಗಾರಪೇಟೆಯಲ್ಲಿ ದೊರಕುವಂತಹ ಶಾಸನಗಳು ತಿಳಿಸುತ್ತದೆ.[೧೬]

(ಇದರ ಉಲ್ಲೇಖವು ಊರಳಿವು ಶಾಸನಗಳಲ್ಲಿ ನೀಡಲಾಗಿದೆ.)

೪. ೩.೧ ವೀರಗಲ್ಲು ಶಾಸನಗಳ ಶಾಪಾಶಯ

'ಇದನಳಿವೊವಾರನಸಿಯ ಕವಿಲೆಯನಳಿದಂ' ವೀರಗಲ್ಲುಗಳಲ್ಲಿ ಹೆಚ್ಚಾಗಿ ಕಂಡುಬರುವಂತಹ ಶಾಪಾಶಯ ಭಾಗವಾಗಿದೆ. ಹೆಚ್ಚಾಗಿ ಯುದ್ಧದಲ್ಲಿ ವೀರಮರಣವನ್ನು ಹೊಂದಿದ್ದಂತಹ ವೀರನಿಗೆ ಬಾಳ್ಗಚ್ಚು ರೂಪದಲ್ಲಿ ಯಾವುದಾದರೂ ಗ್ರಾಮವನ್ನು ನೀಡಿದ್ದರೆ ಈ ಶಾಪಾಶಯವು ಕಂಡುಬರುತ್ತದೆ. ವೀರನಿಗೆ ನೀಡಿದಂತಹ ಈ ದತ್ತಿಯನ್ನು ಯಾರಾದರೂ (ಅಳಿದರೆ) ನಾಶಪಡಿಸಿದರೆ ವಾರಣಾಸಿಯಲ್ಲಿ ಸಾವಿರ ಗೋವುಗಳನ್ನು ಕೊಂದಂತಹ ಪಾಪವನ್ನು ಹೊಂದುತ್ತಾರೆ ಎಂದು ಎಚ್ಚರಿಕೆಯನ್ನು ನೀಡುತ್ತದೆ.

ವೀರಗಲ್ಲು ಶಾಸನಗಳು ಅದರ ಕರ್ತವ್ಯವನ್ನು ಸಂಪೂರ್ಣವಾಗಿ ನಿರ್ವಹಿಸದಂತೆ ಕಂಡುಬರುತ್ತದೆ. ಕೋಲಾರ ಜಿಲ್ಲೆಯು 'ವೀರರ ನಾಡು' ಮತ್ತು ಅನೇಕ ಯುದ್ಧಗಳಿಗೆ ಯುದ್ಧ ಭೂಮಿಯಾಗಿತ್ತು ಎಂದು ತಿಳಿಯಬಹುದು. ವೀರಗಲ್ಲುಗಳ ಪ್ರಧಾನ ಉದ್ದೇಶವಾದಂತಹ

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ ।
ಕ್ಷಣ ವಿಧ್ವಂಸನೀ ಕಾಯೇ ಕಾ ಚಿಂತಾ ಮರಣೇ ರಣೇ ॥

ಎಂಬ ಮಾತು ನಿಜವಾದಂತೆ ಗಮನಕ್ಕೆ ಬರುತ್ತದೆ.

೪.೩.೨ ಶಾಸನೋಕ್ತ ಯುದ್ಧಗಳು

ನೊಳಂಬರ ಕಾಲದ ಶಾಸನಗಳು ನೊಳಂಬ ರಾಜಕೀಯ ಪರಿಸ್ಥಿತಿಯನ್ನು ಸ್ಪಷ್ಟಪಡಿಸುತ್ತದೆ. ನೊಳಂಬರು ಗಂಗ ಮನೆತನದವರೊಂದಿಗೆ ಮೈತ್ರಿ ಮಾಡಿಕೊಂಡು ಬಾಣರೊಂದಿಗೆ ಯುದ್ಧಗಳನ್ನು ಮಾಡಿರುವಂತೆ ತಿಳಿದುಬರುತ್ತದೆ. ನೊಳಂಬರು ಗಂಗರ ಸಾಮಂತರಾಗಿದ್ದರು. ಆದರೆ ಬಾಣರು ತಮ್ಮ ರಾಜ್ಯ ವಿಸ್ತಾರ ಮಾಡುವ ಹಂಬಲದಿಂದ ಗಂಗರ ಮತ್ತು ನೊಳಂಬರ ವಿರೋಧ ಕಟ್ಟಿಕೊಳ್ಳಬೇಕಾಯಿತು. ನೊಳಂಬರು ಕೇವಲ ಬಾಣರ ಯುದ್ಧಗಳನ್ನಷ್ಟೇ ಅಲ್ಲದೆಯೇ ಕಾಲ ಕಾಲಕ್ಕೆ ಇತರ ರಾಜರುಗಳೊಂದಿಗೂ ಯುದ್ಧವನ್ನು ಎದುರಿಸಿದ್ದರು. ಇಂತಹ ಯುದ್ಧಗಳು ಪರಸ್ಪರ ವೈರತ್ವವನ್ನು ಹೆಚ್ಚಿಸಿದ್ದವು. ಕೆಲವೊಮ್ಮೆ ಒಪ್ಪಂದವೇರ್ಪಟ್ಟು ಮಿತ್ರತ್ವವು ಉಂಟಾಗಿರುತ್ತದೆ.

ಕ್ರಿ.ಶ.೮೭೦ರ ಮಡಿವಾಳ ಶಾಸನವು [೧೭] ನೊಳಂಬ ಗಂಗರ ಮೈತ್ರಿಯು ಬಾಣರೊಂದಿಗೆ ನಡೆಸಿದಂತಹ ಯುದ್ಧವನ್ನು ಚಿತ್ರಿಸುತ್ತದೆ. 'ಮುರ್ಗೆಪಾಡಿ' ಎಂಬ ಪ್ರದೇಶದಲ್ಲಿ ಈ ಯುದ್ಧವು ನಡೆದಂತೆ ಶಾಸನವು ತಿಳಿಸುತ್ತದೆ. ಬಹುಶಃ ಈ ಯುದ್ಧದಲ್ಲಿ ಬಾಣರಿಗೆ ಸೋಲುಂಟಾಗಿರಬೇಕು. ಏಕೆಂದರೆ ಇವರಿಬ್ಬರ ಮೈತ್ರಿಯು ಮುಂದೆ ಪಲ್ಲವರನ್ನು ಯುದ್ಧದಲ್ಲಿ ಎದುರಿಸಿತ್ತು. ಮುಳಬಾಗಿಲಿನ ಮೋತಗಪಲ್ಲಿಯ ಶಾಸನವು[೧೮] ಗಂಗ ಮತ್ತು ನೊಳಂಬರು ಪಾಂಡ್ಯನ ಮೇಲೆ ಯುದ್ಧಕ್ಕೆ ಬಂದು ಅವರನ್ನು ಸೋಲಿಸಿದಂತೆ ತಿಳಿಸುತ್ತದೆ. ಮುಂದೆ ನೊಳಂಬ ದೊರೆಗಳು ಗಂಗರೊಂದಿಗೆ ಯುದ್ಧವನ್ನು ನಡೆಸಿದಂತೆ ತೋರುತ್ತದೆ. ನೊಳಂಬಾಧಿರಾಜ ಮಹೇಂದ್ರನು "ಬಾಣ ಕುಲಾಂತಕ"ನೆಂಬ ಬಿರುದನ್ನು ಹೊಂದಿದ್ದನು. ಹಿಂದೆ ಗಂಗ ನೊಳಂಬರ ಮೈತ್ರಿಯಿಂದ ತೀವ್ರ ಘಾಸಿಗೊಳಗಾಗಿದ್ದ ಪಲ್ಲವರು ವೈದುಂಬರರು ಮತ್ತು ಬಾಣರನ್ನು ಸೇರಿಸಿಕೊಂಡು ನೊಳಂಬರ ವಿರುದ್ಧ ಯುದ್ಧಕ್ಕೆ ಬಂದಿದ್ದರು. ಆದರೆ ಈ ಸಮಯದಲ್ಲಿ ಭಯಂಕರವಾದಂತಹ ಯುದ್ಧ ನಡೆದಿದ್ದು ನೊಳಂಬರು ಬಾಣರನ್ನು ಸಂಪೂರ್ಣವಾಗಿ ಸೋಲಿಸಿದ್ದರು. ಸೋರೆಮಡುವು ಮತ್ತು ಮುದಿ ಮಡುವು ಎಂಬಲ್ಲಿ ನಡೆದಂತಹ ಯುದ್ಧವು ಯುದ್ಧ ಭೀಕರತೆಯನ್ನು ತಿಳಿಸುತ್ತದೆ.

ನೊಳಂಬ ದೊರೆ ಅಯ್ಯಪನ ಕಾಲದಲ್ಲಿ ಗಂಗರೊಂದಿಗೆ ಮತ್ತು ಬಾಣರೊಡನೆ ಮಲ್ಯೆಕುಂದೂರು ಮತ್ತು ನವಿಲೂರು ಮೊದಲಾದ ಸ್ಥಳಗಳಲ್ಲಿ ಯುದ್ಧಗಳು ನಡೆದಂತೆ ಶಾಸನಗಳು [೧೯] ತಿಳಿಸುತ್ತವೆ. ಮುಂದೆ ನೊಳಂಬ ಮತ್ತು ಗಂಗರ ಮೈತ್ರಿಯು ಹಳಸಿದಂತೆ ನೊಳಂಬ ಮತ್ತು ಗಂಗರಿಗೆ ರಾಜ್ಯವಿಸ್ತಾರದ ವಿಷಯವಾಗಿ ಪದೇ ಪದೇ ಯುದ್ಧಗಳು ನಡೆಯುತ್ತಲೇ ಇದ್ದವು. ನೊಳಂಬರು ಗಂಗರಸರೊಂದಿಗೆ ಮಾತ್ರವಲ್ಲದೇ ಹೊಯ್ಸಳರ, ಕದಂಬರೊಡನೆಯೂ ಯುದ್ಧವನ್ನು ಮಾಡಿರುವರು. ಮುಂದೆ ಪ್ರಬಲ ನೊಳಂಬ ದೊರೆ ದಿಲೀಪಯ್ಯನು ರಾಜ್ಯವಿಸ್ತಾರ ಮಾಡುವಂತಹ ಸಂದರ್ಭದಲ್ಲಿ ತನ್ನ ಸುತ್ತಮುತ್ತಲಿನ ರಾಜರುಗಳೊಂದಿಗೆ ಸತತ ಯುದ್ಧವನ್ನು ಎದುರಿಸುತ್ತಿದ್ದನು. ಕ್ರಿ.ಶ.೯೫೦ರ ಸುಮಾರಿನ ಶಾಸನವು ನೊಳಂಬರಸ ದಿಲೀಪಯ್ಯನು ಯುದ್ಧವನ್ನು ಮಾಡಿದಂತೆ ತಿಳಿಸುತ್ತದೆ. ಆದರೆ ಯುದ್ಧವು ಯಾರ ಜೊತೆ ಎಲ್ಲಿ ನಡೆದಿತ್ತೆಂದು ಶಾಸನವು ತಿಳಿಸುತ್ತಿಲ್ಲ.

ನೊಳಂಬರ ಆಡಳಿತಾವಧಿಯಲ್ಲಿ ಕೋಲಾರದ ಪ್ರದೇಶದಲ್ಲಿ ಯುದ್ಧಗಳು ನಡೆದಂತಹ ಸಂಖ್ಯೆಗಿಂತ ಹೊರ ಪ್ರದೇಶದಲ್ಲಿ ನಡೆದಂತಹ ಯುದ್ಧಗಳ ಸಂಖ್ಯೆ ಅಧಿಕವಿದೆ. ಗಂಗ ಅರಸರ ಕಾಲದಲ್ಲಿ ಯುದ್ಧಗಳು ನಡೆದಿರುವುದು ಶಾಸನಗಳಿಂದ ವಿಧಿತವಾಗುತ್ತದೆ. ಗಂಗರ ಅವನೀತನವರೆಗೆ ವಂಶಾವಳಿಯನ್ನು ತಿಳಿಸುವಂತಹ ಶಾಸನಗಳಲ್ಲಿ ನಾಲ್ಕು ಪ್ರದೇಶಗಳಲ್ಲಿ ಪ್ರಮುಖ ಯುದ್ಧಗಳು ನಡೆದಂತೆ ತಿಳಿಸುತ್ತದೆ. ಅಂದರಿ, ಅಲೆತ್ತೂರು, ಪೊರುಳ, ಪೆರ್ನಗರ ಮೊದಲಾದ ಯುದ್ಧಗಳಲ್ಲಿ ಕೊಂಗುಣಿ ಮಹಾರಾಜ ಅವಿನೀತನು ಜಯಗಳಿಸಿದಂತೆ ಶಾಸನಗಳು ತಿಳಿಸುತ್ತದೆ. ಅದಲ್ಲದೆಯೇ ಗಂಗ ದೊರೆ ಶಿವಮಾರನು ರಾಷ್ಟ್ರಕೂಟ, ಚಾಳುಕ್ಯ, ಹೈಹಯ ಮೊದಲಾದ ಪ್ರಮುಖ ರಾಜರುಗಳೊಂದಿಗೆ ಮತ್ತು ವಲ್ಲಭ ಸೈನ್ಯರೊಂದಿಗೆ ಮುದುಗುಂದೂರು ಎಂಬಲ್ಲಿ ಯುದ್ಧವನ್ನು ಎದುರಿಸಿದಂತೆ ತಿಳಿಸುತ್ತದೆ.[೨೦]

ಗಂಗ ದೊರೆ ಶ್ರೀಪುರುಷನ ಮಗನಾದ ದುಗ್ಗಮಾರನು ಕಂಪಿಲಯ ಮೇಲೆ ಯುದ್ಧಕ್ಕೆ ಹೋದಂತೆ ಶಾಸನವು[೨೧] ತಿಳಿಸುತ್ತದೆ. ದುಗ್ಗಮಾರನು (ಕ್ರಿ.ಶ.೭೮೮–೮೧೨) ಕುವಳಾಲ ಪ್ರಾಂತ್ಯದ ಅಧಿಕಾರಿಯಾಗಿದ್ದು ಕಂಪಿಲಗೆ ತನ್ನ ಸೈನ್ಯದೊಡನೆ ಯುದ್ಧಕ್ಕೆ ಹೋದಂತೆ ಕಂಡುಬರುತ್ತದೆ. ಗಂಗ – ನೊಳಂಬರ ಮೈತ್ರಿಯು ಪಾಂಡ್ಯರ ಮೇಲೆ ಯುದ್ಧಕ್ಕೆ ಹೋದಂತೆ ಮುಳಬಾಗಿಲಿನ ಒಂದು ಶಾಸನವು ತಿಳಿಸುತ್ತದೆ. ಮೋತಗಪಲ್ಲಿಯ ಸಮೀಪ ಈ ಯುದ್ಧವು ನಡೆದಿರಬಹುದು.

ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಪುಳಗಣ ಎಂಬಲ್ಲಿ ನಡೆದಂತಹ ಯುದ್ಧವನ್ನು ಶಾಸನವು[೨೨]. ವರ್ಣಿಸುತ್ತದೆ. ಕ್ರಿ.ಶ.೯೫೦ರ ಸುಮಾರಿಗೆ ಈ ಯುದ್ಧವು ನಡೆದಿರಬಹುದು.

ಸುಮಾರು ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ೧೬ನೆಯ ಶತಮಾನದವರೆಗೆ ವಿವಿಧ ಕಾಲಘಟ್ಟಗಳಲ್ಲಿ, ವಿವಿಧ ಭಾಗಗಳಲ್ಲಿ ಆಯಾ ಕಾಲದ ರಾಜಕೀಯ ವಿದ್ಯಮಾನಗಳಿಗನುಗುಣವಾಗಿ ವಿವಿಧ ರಾಜಮನೆತನಗಳಿಗೆ ಸಾಮಂತರಾಗಿ ಆಳಿದಂತಹ ಬಾಣರ ಆಡಳಿತಾವಧಿಯಲ್ಲಿ ಯುದ್ಧಗಳ ಸಂಖ್ಯೆಯು ಕಡಿಮೆಯಾದಂತೆ ಅನಿಸುತ್ತದೆ. ಬೇರೆ ರಾಜಮನೆತನಗಳು ಬಯಸಿದಂತೆ ಪ್ರಬಲರಾಗಬೇಕೆಂಬ ಮಹದಾಸೆಯನ್ನು ಹೊಂದಿರಲ್ಲವೆಂದು ಕಂಡುಬರುತ್ತದೆ. ಆದರೆ ಗಂಗ ಅರಸರೊಂದಿಗೆ ಆತಂಕದ ವಾತಾವರಣವನ್ನು ಬಾಣರು ಎದುರಿಸಿದ್ದರು. ಗಂಗ ದೊರೆ ಇಮ್ಮಡಿ ಶಿವಮಾರನ (ಕ್ರಿ.ಶ.೭೮೮–೮೧೨) ಆಳ್ವಿಕೆಯ ಅವಧಿಯಲ್ಲಿ ಯುವರಾಜನಾದ ಶ್ರೀಪುರುಷ ಮತ್ತು ಆತನ ಸೇನೆಯು ಬಾಣರನ್ನು ಎದುರಿಸಿತ್ತೆಂದು ಶಾಸನವು ತಿಳಿಸುತ್ತದೆ. ಪ್ರಬಲವಾದಂತಹ ಶ್ರೀಪುರುಷನ ಸೈನ್ಯವು ಕೊಯತ್ತೂರು ಎಂಬ ಪ್ರದೇಶದಲ್ಲಿ ಬಾಣರನ್ನು ಎದುರಿಸಿ ಅವರಿಗೆ ಸೋಲಿನ ರುಚಿಯನ್ನು ತೋರಿಸಿದಂತೆ ತಿಳಿದುಬರುತ್ತದೆ. ಬಂಗಾರಪೇಟೆ ತಾಲ್ಲೂಕಿನ ರಾಮಸಾಗರ ಹೋಬಳಿಯ ತಲ್ಲಪ್ಪಲ್ಲಿಯಲ್ಲಿ ದೊರಕಿದಂತಹ ಈ ಶಾಸನವು[೨೩] ಬಾಣರು ನಂತರ ಗಂಗರ ಸಾಮಂತರಾಗಿ ಮುಂದುವರೆದಿರೆಂದು ತಿಳಿಸುತ್ತದೆ.

ಇದೇ ರೀತಿಯಾಗಿ ಗಂಗ ಬಾಣರ ವೈರತ್ವವು ಮುಂದುವರೆದಿರುವಂತಹ ವಿಚಾರವು ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಗ್ರಾಮದ ಶಾಸನವು ತಿಳಿಸುತ್ತದೆ.[೨೪] ಗಂಗ ದೊರೆ ರಾಚಮಲ್ಲ ಪೆರ್ಮಾನಡಿ ರಾಜ್ಯಭಾರ ಮಾಡುತ್ತಿರಲು ಬಾಣರಸನ ಅಪ್ಪಣೆಯ ಮೇರೆಗೆ ಅಗ್ಗಳರಸನೆಂಬುವವನು ಗಂಗರಸರ ಮೇಲೆ ಯುದ್ಧಕ್ಕೆ ಬಂದಂತೆ ತಿಳಿಸುತ್ತದೆ. ಈ ಯುದ್ಧದಲ್ಲಿ ಯಾರಿಗೆ ಜಯವಾಯಿತೆಂದು ವಿಚಾರವು ಅಸ್ಪಷ್ಟವಾಗಿದೆ. ಮುಳಬಾಗಿಲು ತಾಲ್ಲೂಕಿನ ಬೈರಕೂರು ಹೋಬಳಿಯ ಮಣೆಗಟ್ಟು ಗೊಲ್ಲಹಳ್ಳಿಯ ವೀರಗಲ್ಲು ಶಾಸನವು[೨೫] ಮುಲ್ಕಾಡುವಿನಲ್ಲಿ ನಡೆದಂತಹ

ಯುದ್ಧವನ್ನು ಚಿತ್ರಿಸುತ್ತದೆ. ಇಮ್ಮಡಿ ವಿಜಯಾದಿತ್ಯ ಪ್ರಭುಮೇರು (ಕ್ರಿ.ಶ.೮೯೫-೯೧೬)ವಿನ ಆಡಳಿತಾವಧಿಯ ಈ ಶಾಸನವು ಯಾರ ಜೊತೆ ಯುದ್ಧವನ್ನು ರಾಜನು ನಡೆಸಿದ್ದನೆಂದು ಸ್ಪಷ್ಟಪಡಿಸುತ್ತಿಲ್ಲ. ಈತನು ರಾಷ್ಟ್ರಕೂಟರ ಸಾಮಂತನಾಗಿ ಚೋಳರ ಮೇಲೆ ಅನೇಕ ಯುದ್ಧಗಳನ್ನು ಎದುರಿಸಿದ್ದನು. ಹಾಗಾಗಿ ಈ ಯುದ್ಧವು ಚೋಳರೊಂದಿಗೆ ನಡೆದಿರಬಹುದು.

ಶ್ರೀನಿವಾಸಪುರ ಹೋಬಳಿ ಮುತ್ತಕಪಲ್ಲಿಯಲ್ಲಿ ದೊರಕಿರುವಂತಹ ಸಣ್ಣ ಶಾಸನವು[೨೬] ಬಾಣರಸ ಬಿಜಯಿತ್ತಯ (ವಿಜಯಾದಿತ್ಯ)ನು ಆಳುತ್ತಿರಲು ಮುದೆಕಲ್ಲು ಎಂಬಲ್ಲಿ ನಡೆದಂತಹ ಯುದ್ಧವನ್ನು ತಿಳಿಸಿದೆ. ಯುದ್ಧದ ವಿಷಯವಾಗಿ ಹೆಚ್ಚಿನ ವಿಷಯಗಳನ್ನು ಶಾಸನವು ದಾಖಲಿಸುತ್ತಿಲ್ಲ. ಬೈರಕೂರು ಹೋಬಳಿ ಬಂಗವಾಡಿ ಗ್ರಾಮದ ಸೋಮೇಶ್ವರ ದೇವಾಲಯದಲ್ಲಿರುವ ವೀರಗಲ್ಲು ಶಾಸನವು[೨೭] ಮಾನ್ದಾವಿದ (ಮಯಿಂದವೂರು) ಎಂಬಲ್ಲಿ ನಡೆದ ಕಾಳಗವನ್ನು ತಿಳಿಸುತ್ತದೆ. ಮಹಾಬಲಿ ಬಾಣರಸರಿಗೂ, ನೊಳಂಬ ಮತ್ತು ಗಂಗರ ಮೈತ್ರಿಯ ನಡುವೆ ನಡೆದಂತಹ ಕಾಳಗವನ್ನು ತಿಳಿಸುತ್ತದೆ. ಬಾಣ, ಗಂಗ ಮತ್ತು ನೊಳಂಬರ ನಡುವೆ ನಡೆದಂತಹ ಈ ಯುದ್ಧ ಭೀಕರವಾಗಿದ್ದಿರಬಹುದು.

ಬಂಗಾರಪೇಟೆ ದಾಸರ ಹೊಸಹಳ್ಳಿ ಹೋಬಳಿ ಹುಲಿಕುಂದ ಗ್ರಾಮದಲ್ಲಿರುವಂತಹ ವೀರಗಲ್ಲು ಶಾಸನವು[೨೮] ತಗಡೂರಿನಲ್ಲಿ ನಡೆದಂತಹ ಯುದ್ಧವನ್ನು ತಿಳಿಸುತ್ತದೆ. ಬಾಣ ದೊರೆ ದಿಲೀಪಯ್ಯನು ರಾಜ್ಯವನ್ನಾಳುತ್ತಿರಲು ನಡೆದಿರುವಂತಹ ಯುದ್ಧದ ವರ್ಣನೆಯಿದೆ. ಯುದ್ಧವು ಯಾರ ಜೊತೆ .ನಡೆದಿತ್ತು ಎಂಬ ಮಾಹಿತಿಯು ಅಸ್ಪಷ್ಟವಾಗಿದೆ.

ಕರ್ನಾಟಕದ ಪ್ರಸಿದ್ಧ ರಾಜಮನೆತನಗಳನ್ನು ಬಿಟ್ಟು ಹತ್ತಿರದ ರಾಜ್ಯದ ರಾಜಮನೆತನದವರು ಕರ್ನಾಟಕದ ಗಡಿಭಾಗದ ಪ್ರದೇಶವನ್ನು ಆಳಲು ಪ್ರಯತ್ನಿಸಿದ್ದರು. ಅಂತಹ ಪ್ರಯತ್ನ ನಡೆಸಿದವರಲ್ಲಿ ಚೋಳರು ಪ್ರಮುಖರಾಗಿದ್ದರು. ಇತರ ರಾಜ್ಯದವರು ಕರ್ನಾಟಕ ರಾಜ್ಯವನ್ನು ಪ್ರವೇಶಿಸುವಂತಹ ಸಂದರ್ಭದಲ್ಲಿ ಸಹಜವಾಗಿಯೇ ತಾಯಿನಾಡಿನ ರಾಜರು ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಇಂತಹ ಪರಿಸ್ಥಿತಿಯು ಚೋಳರಿಗೂ ಎದುರಾಗಿತ್ತು. ಚೋಳರು ಕರ್ನಾಟಕದ ಗಡಿಪ್ರದೇಶವನ್ನು ಪ್ರವೇಶಿಸುವಾಗ ಅವರಿಗೆ ಪ್ರಬಲರಾಗಿ ಎದುರಾದವರೆಂದರೆ ತಲಕಾಡಿನ ಗಂಗರು. ಇವರನ್ನು ತಲಕಾಡಿನಲ್ಲಿ ನಡೆದಂತಹ ಯುದ್ಧದಲ್ಲಿ ಚೋಳರು ಪರಾಭವಗೊಳಿಸಿ ಕರ್ನಾಟಕವನ್ನು ಮೊದಲ ಬಾರಿಗೆ ಪ್ರವೇಶಿಸಿದರು. ಇಲ್ಲಿಂದ ಪ್ರಾರಂಭವಾದ ಚೋಳ ವಿಜಯಯಾತ್ರೆಯು ಕೊಡಗಿನವರೆಗೆ ಮುಂದುವರೆದಿತ್ತು. ಅಲ್ಲಿಂದ ಪುನಃ ಕೋಲಾರದ ಪ್ರದೇಶಕ್ಕೆ ಪ್ರವೇಶಸಿದ ಇವರ ವಿಜಯಯಾತ್ರೆಯು ಹಲವಾರು ಯುದ್ಧಗಳಿಗೆ ಸಾಕ್ಷಿಗಳಾಗಿದ್ದವು. ಕೋಲಾರ ಜಿಲ್ಲೆಯಲ್ಲಿ ದೊರಕುವಂತಹ ಚೋಳರಿಗೆ ಸಂಬಂಧಿಸಿದ ಶಾಸನಗಳು ಯುದ್ಧದ ವಿಚಾರವಾಗಿ ಅಷ್ಟೇನು ಪ್ರಸ್ತಾಪಿಸುತ್ತಿಲ್ಲವಾದರೂ ಅವರು ರಾಜಕೀಯವಾಗಿ ಬೆಳೆಯಲು ಪ್ರಯತ್ನಿಸುತ್ತಿದ್ದುದರ ಸಣ್ಣ ಛಾಯೆಯನ್ನು ಶಾಸನಗಳು ತಿಳಿಸುತ್ತವೆ.

ಗಂಗ ಅರಸರಿಗೂ ಚೋಳರಿಗೂ ಪರಸ್ಪರ ವೈರತ್ವವಿದ್ದರೂ ಗಂಗ ದೊರೆ ಪೃಥ್ವಿಪತಿಗೆ ಪಲ್ಲವ ರಾಜ ಅಪರಾಜಿತನೊಡನೆ ಹೋರಾಡಲು ಚೋಳ ದೊರೆ ಮೊದಲನೆಯ ಆದಿತ್ಯನ ನೆರವನ್ನು ಪಡೆದಿದ್ದನು. 'ತೊಂಡೈಮಂಡಲಂ' ಎಂಬಲ್ಲಿ ಗಂಗ ಮತ್ತು ಚೋಳರ ಮೈತ್ರಿಯು ಪಲ್ಲವರನ್ನು ಎದುರಿಸಿತ್ತು. ಇದರ ಮೂಲಕ ಪಲ್ಲವರ ಪ್ರಭಾವವನ್ನು ಕರ್ನಾಟಕದ ಮೇಲೆ ಬೀರದಂತೆ ಪ್ರಯತ್ನಿಸಿದ್ದರು.

ಚೋಳರು ಗಂಗರಸರ ಮೈತ್ರಿಯೊಂದಿಗೆ ಮುಂದುವರಿದು ಚೋಳ ಪರಾಂತಕನ ಆಡಳಿತದಲ್ಲಿ ಉತ್ತರದ ರಾಷ್ಟ್ರಕೂಟರನ್ನು ಭೇದಿಸಿಬೇಕೆಂಬ ಪ್ರಯತ್ನ ಮಾಡಿದ್ದರು. ಆದರೆ ರಾಷ್ಟ್ರಕೂಟ ದೊರೆ ತೃತೀಯ ಕೃಷ್ಣನ ಆಡಳಿತಾವಧಿಯಲ್ಲಿ ಚೋಳ ದೊರೆ ಪರಾಂತಕನು ಪರಾಜಿತನಾಗಿದ್ದನು. ತಕ್ಕೋಲಂ ಎಂಬ ಪ್ರದೇಶದಲ್ಲಿ ಇವರಿಬ್ಬರ ನಡುವೆ ನಡೆದಂತಹ ಯುದ್ಧದಲ್ಲಿ ಚೋಳರಿಗೆ ಹಿನ್ನಡೆಯಾದಂತೆ ಕಂಡುಬರುತ್ತದೆ.

ಮುಂದೆ ರಾಜೇಂದ್ರಚೋಳನ ಆಡಳಿತಾವಧಿಯಲ್ಲಿ ಚೋಳರು ಚಾಳುಕ್ಯರೊಂದಿಗೆ ಯುದ್ಧವನ್ನು ಎದುರಿಸಿದಂತೆ ಕಂಡುಬರುತ್ತದೆ. ರಾಜೇಂದ್ರಚೋಳನು ಮುಸಂಗಿ ಎಂಬ ಪ್ರದೇಶದಲ್ಲಿ ನಡೆದಂತಹ ಯುದ್ಧದಲ್ಲಿ ಚಾಳುಕ್ಯ ಅರಸನನ್ನು ಸೋಲಿಸಿದಂತೆ ಕಂಡುಬರುತ್ತದೆ. ಇದೇ ರಾಜೇಂದ್ರ ಚೋಳನ ಆಡಳಿತಾವಧಿಯಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ಶ್ರೀನಿವಾಸಪುರ ತಾಲ್ಲೂಕಿನ ಶಾಸನವು ತಿಳಿಸುತ್ತದೆ.[೨೯] ಉಳಿದಂತೆ ಚೋಳರಿಗೆ ಸಂಬಂಧಿಸಿದಂತಹ ಕೋಲಾರದ ಶಾಸನಗಳು ದಾನದ ವಿಚಾರವನ್ನೇ ಹೆಚ್ಚಾಗಿ ತಿಳಿಸುತ್ತದೆ.

೪.೩.೩ ವೀರರ ಗುಡಿಗಳು

ಗುಡಿ ಶಬ್ದವನ್ನು ದೇವಾಲಯವೆಂಬರ್ಥದಲ್ಲಿ ಬಳಸುತ್ತೇವೆ. ಎಲ್ಲಿ ದೇವರ ಮೂರ್ತಿಯನ್ನು ಇಟ್ಟು ಪೂಜಿಸುತ್ತಾರೋ ಅದು ಗುಡಿ ಅಥವಾ ದೇವಾಲಯವಾಗಿದೆ. ಗುಡಿ ಶಬ್ದವನ್ನು ಗ್ರಾಮ್ಯ ಭಾಷೆಯಲ್ಲಿ ಪ್ರಯೋಗಿಸಲ್ಪಡುವುದು ಹೆಚ್ಚಾಗಿ ಕಂಡುಬರುತ್ತಿದೆ. ಕರ್ನಾಟಕದಲ್ಲಿ ಇಂತಹ ಗುಡಿಗಳಲ್ಲಿ ದೇವರಿಗಲ್ಲದೆಯೇ ವೀರರಿಗೂ ಇಂತಹ ಸ್ಥಾನವನ್ನು ನೀಡಿರುವುದು ವಿಶೇಷವಾಗಿದೆ. ಇಂತಹ ಗುಡಿಗಳನ್ನು ವೀರರ ಗುಡಿಗಳು ಎಂದು ಕರೆಯುತ್ತಾರೆ. ದೇವರ ಗುಡಿಗಳಿಗಿರುವಂತಹ ರೂಪಗಳನ್ನು ಈ ದೇವಾಲಯಗಳು ಪಡೆಯದಿದ್ದರೂ ಸಣ್ಣ ಸ್ಥಳದಲ್ಲಿ ಚಪ್ಪಡಿಗಳಿಂದ ಇಂತಹ ವೀರರ ಗುಡಿಗಳನ್ನು ನಿರ್ಮಿಸುತ್ತಿದ್ದರು. ವಿಶೇಷವಾಗಿ ವೀರಗಲ್ಲುಗಳನ್ನು ರಕ್ಷಿಸುವುದಕ್ಕಾಗಿ ಇಂತಹ ಗುಡಿಗಳನ್ನು ನಿರ್ಮಿಸುತಿದ್ದರು. "ಮೂರು ಚಪ್ಪಡಿಗಳಿಂದ ನಿರ್ಮಿಸಿದ, ಅಂತಹುದೇ ಮತ್ತೊಂದು ಚಪ್ಪಡಿಯ ಮೇಲೆ ವೀರನ ಶಿಲ್ಪವನ್ನು ಬಿಡಿಸಿರುವ ಒಂದು ಸಣ್ಣ ಹಾಗೂ ಸರಳವಾದ ಕಟ್ಟಡ"[೨೯a]

ವೀರರ ಗುಡಿಗಳನ್ನು ವಿಶೇಷವಾಗಿ ಪೂಜಿಸುವಂತಹ ಕ್ರಮವೂ ಪ್ರಾಚೀನ ಕಾಲದಲ್ಲಿ ಪ್ರಚಲಿತದಲ್ಲಿತ್ತು. ಕುರುಬ, ನಾಯಕ, ಬೇಡ ಮೊದಲಾದ ಪಂಗಡದವರು ಇಂತಹ ಗುಡಿಗಳಲ್ಲಿ ಪೂಜೆಯನ್ನು ಸಲ್ಲಿಸುತ್ತಿದ್ದರು. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ದೊರಕುವಂತಹ ಇಂತಹ ವೀರರ ಗುಡಿಗಳು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಯಲ್ದೂರು ಗ್ರಾಮದಲ್ಲೂ[೨೯b] ದೊರಕಿದೆ.

ಬಯಲು ಪ್ರದೇಶದಲ್ಲಿ ಮೂರು ಚಪ್ಪಡಿ ಕಲ್ಲುಗಳಿಂದ ಆವೃತವಾಗಿ ಮಧ್ಯದಲ್ಲಿ ವೀರಗಲ್ಲನ್ನು ಇರಿಸಲಾಗಿದೆ. ಒಂದೇ ಸ್ಥಳದಲ್ಲಿ ಇಂತಹ ವೀರರ ಗುಡಿಗಳು ಮೂರು ನಾಲ್ಕು ದೊರೆಯುತ್ತವೆ. ಯಲ್ದೂರಿನ ವೀರರ ಗುಡಿಯಲ್ಲಿ ತುರುಕಾಳಗದಲ್ಲಿ ಮಡಿದ ವೀರನ ನೆನಪಿಗಾಗಿ ವೀರಗಲ್ಲನ್ನು ಇಡಲಾಗಿದೆ. ಶಾಸನದ ಕಾಲವು ಕ್ರಿ.ಶ.೯೫೦ ಆಗಿದೆ.

ಇದೇ ರೀತಿಯಾದಂತಹ ವೀರರ ಗುಡಿಗಳ ಸಮೂಹವು ಮುಳಬಾಗಿಲು ತಾಲ್ಲೂಕಿನ ಆವನಿಯಲ್ಲಿ[೨೯c] ಸುಮನಹಳ್ಳಿಯಲ್ಲಿ ದೊರಕಿದೆ. ವೀರರ ವಿಶೇಷವಾದಂತಹ ಗುಡಿಗಳನ್ನು ಈ ಪ್ರದೇಶದಲ್ಲಿ ಒಂದೇ ಕಡೆ ಕಾಣಬಹುದಾಗಿದೆ. ಇಂತಹ ವೀರಗಲ್ಲುಗಳ ಗುಡಿಗಳನ್ನು 'ವೀರಗಾರರ ನೆತ್ತು' ಎಂಬುವುದಾಗಿ ಕರೆಯುತ್ತಾರೆ.

ಪ್ರಾಚೀನ ಕಾಲದಲ್ಲಿ ವೀರರಿಗೆ ಸಮಾಜದಲ್ಲಿ ಉತ್ತಮ ಗೌರವವು ದೊರೆಯುತ್ತಿತ್ತು ಎಂದು ಇದರಿಂದ ತಿಳಿಯಬಹುದಾಗಿದೆ.

೪.೪ ಮಾಸ್ತಿಗಲ್ಲು

ಮಾಲೂರು ತಾಲ್ಲೂಕಿನಲ್ಲಿ ಮಾಸ್ತಿ ಎಂಬ ಊರಿದ್ದು, ಇದು ಮಹಾಸತಿ ಎಂಬ ಶಬ್ದದ ಸಂಕ್ಷಿಪ್ತ ರೂಪವಾಗಿದೆ. ಮಹಾಸತಿ ಎಂಬುವುದು ಜನರ ಆಡುಮಾತಿನಲ್ಲಿ ಮಾಸ್ತಿ ಎಂದಾಗಿದೆ. ೧೬ನೆಯ ಶತಮಾನದಲ್ಲಿ ನಡೆದಂತಹ 'ಮಹಾಸತಿ'ಯಿಂದಾಗಿ ಈ ಪ್ರದೇಶಕ್ಕೆ ಮಾಸ್ತಿ ಎಂದು ಪ್ರಸಿದ್ಧವಾದ ಹೆಸರು ಬಂದಿದೆ. [೩೦]

ಪ್ರಾಚೀನ ಕಾಲದಲ್ಲಿ ಗಂಡ ಹೆಂಡಿರ ಸಂಬಂಧವು ಅನ್ಯೋನ್ಯವಾಗಿತ್ತು. ಆದರೆ ಗಂಡಸು ಸತ್ತಾಗ ಆತನೊಂದಿಗೆ ಹೆಂಡತಿಯೂ ಚಿತೆಗೆ ಹಾರಿ ತನ್ನ ಆತ್ಮಾರ್ಪಣೆಯನ್ನು ಮಾಡಬೇಕಾಗಿತ್ತು. ಇದು ಗಂಡಹೆಂಡಿತಿಯರು ಮರಣದ ನಂತರವೂ ಅನ್ಯೋನ್ಯವಾಗಿ ಇರಬೇಕೆಂಬ ಸೂಕ್ಷ್ಮವಿಚಾರವನ್ನು ತಿಳಿಸುತ್ತದೆ. ಮಹಿಳೆಯು ಜೀವಂತವಾಗಿ ಬೆಂಕಿಗೆ ಹಾರಿ ಆತ್ಮಾರ್ಪಣೆ ಮಾಡಬೇಕೆಂಬ ಅನಾಗರೀಕ ಕೃತ್ಯವು ಎದ್ದು ಕಾಣುತ್ತದೆ. ಆದರೆ ಗಂಡಸು ಸಹಜವಾಗಿ ಮರಣ ಹೊಂದಿದಾಗ ಹೆಂಡತಿಯು ಆತ್ಮಾರ್ಪಣೆಯನ್ನು ಮಾಡುತ್ತಿದ್ದಕ್ಕಿಂತಲೂ ಹೆಚ್ಚಾಗಿ ಗಂಡನು ಒಂದು ವೇಳೆ ಯುದ್ಧದಲ್ಲಿ ಹೋರಾಡಿ ವೀರಮರಣವನ್ನು ಹೊಂದಿದ್ದರೆ ಅಂತಹ ವೀರನ ಹೆಂಡತಿಯೂ ಚಿತೆಗೆ ಹಾರಿ ವೀರಸ್ವರ್ಗವನ್ನು ಹೊಂದುತ್ತಿದ್ದಂತಹ ವಿಚಾರವು ಅಧಿಕವಾಗಿ ದೊರಕುತ್ತಿದೆ. ಸತಿಸಹಗಮನ ಪದ್ಧತಿಯೆಂದು ಪ್ರಸಿದ್ಧವಾಗಿದ್ದಂತಹ ಈ ಪದ್ಧತಿಯು ಆಧುನಿಕ ಕಾಲದವರೆಗೂ (ಬ್ರಿಟಿಷರು ನಿರ್ಬಂಧಿಸುವವರೆಗೂ) ಭಾರತದ ಸಮಾಜದಲ್ಲಿ ವಾಡಿಕೆಯಲ್ಲಿತ್ತು.

ಸತಿ ಸಹಗಮನ ಪದ್ಧತಿಯಲ್ಲಿ ಮರಣ ಹೊಂದಿದಂತಹ ಮಹಿಳೆಗೆ ಸಮಾಜದಲ್ಲಿ ಗೌರವವನ್ನು ನೀಡಲಾಗುತ್ತಿತ್ತು. ಅಂತಹ ಮಹಿಳೆಯನ್ನು 'ಮಹಾಸತಿ' ಎಂದು ಕರೆಯಲಾಗುತ್ತಿತ್ತು. ಸಹಜ ಮರಣವನ್ನೋ ಅಥವಾ ವೀರಮರಣವನ್ನೋ ಹೊಂದಿದ್ದಂತಹ ವೀರನ ಹೆಂಡತಿಯೂ ಸಹಗಮನವನ್ನು ಅನುಸರಿಸಿದರೆ ಅವಳ ಸ್ಮರಣಾರ್ಥವಾಗಿ ಸ್ಮಾರಕ ಶಿಲೆಗಳನ್ನೋ ಅಥವಾ ಶಾಸನಗಳನ್ನೋ ಸಮಾಜದ ಜನರು ನಿರ್ಮಿಸುತ್ತಿದ್ದರು. ಇಂತಹ ಶಾಸನಗಳನ್ನು ಮಹಾಸತಿ ಕಲ್ಲುಗಳು ಅಥವಾ ಮಾಸ್ತಿಗಲ್ಲುಗಳು ಎಂದು ಕರೆಯುತ್ತಿದ್ದರು. ವೀರಗಲ್ಲುಗಳು ವೀರನ ಪರಾಕ್ರಮವನ್ನು ಚಿತ್ರಿಸುವಲ್ಲಿ ಪ್ರಧಾನವಾಗಿದ್ದರೆ, ಮಾಸ್ತಿಗಲ್ಲುಗಳು ವೀರರ ಮಹಿಳೆಯರನ್ನು ಮತ್ತು ಅವರ ಬಲಿದಾನಗಳನ್ನು ಸಮಾಜಕ್ಕೆ ತೋರಿಸುವಲ್ಲಿ ಸಫಲವಾಗುತ್ತಿದ್ದವು.

ಮಾಸ್ತಿಗಲ್ಲುಗಳು ವೀರಗಲ್ಲು ಶಾಸನಗಳಂತೆ ಶಿಲ್ಪಗಳಿಗೆ ಪ್ರಧಾನತೆಯನ್ನು ನೀಡಿದ್ದವು. ಮಾಸ್ತಿಗಲ್ಲುಗಳಲ್ಲಿ ಸಾಮಾನ್ಯವಾಗಿ ಒಬ್ಬ ವೀರನ ಶಿಲ್ಪವಿದ್ದು, ಆತನ ಪಕ್ಕದಲ್ಲಿ ನಿಂತಿರುವ ಶೈಲಿಯಲ್ಲಿ ಒಬ್ಬಳು ಸ್ತ್ರೀಯ ಶಿಲ್ಪವಿದ್ದು, ಅವಳು ತನ್ನ ಬಲಗೈಯನ್ನು ಎತ್ತಿ ಹಿಡಿದಿರುವಂತಹ ಶಿಲ್ಪವು ಸಾಮಾನ್ಯವಾಗಿರುತ್ತಿದ್ದವು. ಕರ್ನಾಟಕದಲ್ಲಿ ಮಾಸ್ತಿಗಲ್ಲುಗಳ ಪರಂಪರೆಯು ಅಧಿಕವಾಗಿದೆ. ಆದರೆ ಕೋಲಾರ ಜಿಲ್ಲೆಯಲ್ಲಿ ಮಾಸ್ತಿಗಲ್ಲು ಸ್ಮಾರಕ ಶಾಸನವು ಬಂಗಾರಪೇಟೆಯಲ್ಲಿ ದೊರಕುತ್ತದೆ. ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಗಂಗರಸರ ಮತ್ತು ನೊಳಂಬರಸರ ಕಾಲದಲ್ಲಿ ಹೆಚ್ಚಾಗಿ ಕಂಡುಬರದಂತಹ ಮಾಸ್ತಿಗಲ್ಲುಗಳು ಹೊಯ್ಸಳರ ಮತ್ತು ಚೋಳರಸರ ಆಳ್ವಿಕೆಯಲ್ಲಿ ದೊರಕುತ್ತದೆ.

ಚೋಳ ದೊರೆ ರಾಜೇಂದ್ರಚೋಳನ ಆಳ್ವಿಕೆಗ ಸಂಬಂಧಿಸಿದಂತಹ ಒಂದು ಶಾಸನವು[31] ಮೂಕ್ಕಾಯನ್ ಎಂಬುವವನ ಮಡದಿಯು ಸತಿಯಾದುದನ್ನು ತಿಳಿಸುತ್ತದೆ. ಬಂಗಾರಪೇಟೆಯ ಕಸಬಾ ಹೋಬಳಿಯ ಯಲಬುರಿಗೆ ಗ್ರಾಮದ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿರುವಂತಹ ಏಕಮಾತ್ರ ಸ್ಮಾರಕ ಶಾಸನವಾಗಿದೆ. ನೊಳಂಬ ಪಾಡಿಯಲ್ಲಿರುವ ಕೊಳತ್ತೂರ ಗಾವುಂಡನಾದ ಮೂಕ್ಕಾಯನ್ ಎನ್ನುವವನ ಹೆಂಡತಿಯು ಮಹಾಸತಿಯಾಗಿರುವಳೆಂದು ಶಾಸನವು ತಿಳಿಸುತ್ತದೆ.

೪.೫ ತುರುಗೋಳು ಶಾಸನಗಳು

ಸ್ಮಾರಕ ಶಾಸನಗಳಲ್ಲಿ ತುರುಗೋಳ್ ಶಾಸನಗಳು ಪ್ರಮುಖವಾಗಿದೆ. ಕರ್ನಾಟಕದಲ್ಲಿ ವಿಫುಲವಾಗಿ ತುರುಗೋಳ್ ಶಾಸನಗಳು ದೊರಕುತ್ತವೆ. ಆ ಪಟ್ಟಿಗೆ ಕೋಲಾರ ಜಿಲ್ಲೆಯನ್ನು ಸೇರಿಸಬಹುದಾಗಿದೆ. ಕೋಲಾರ ಜಿಲ್ಲೆಯ ಕೋಲಾರ, ಬಂಗಾರಪೇಟೆ, ಮುಳಬಾಗಿಲು ತಾಲ್ಲೂಕಿನಲ್ಲಿ ತುರುಗೋಳು ಶಾಸನಗಳು ವಿಪುಲವಾಗಿ ದೊರಕುತ್ತವೆ. ತುರುಗೋಳು ಶಾಸನಗಳು ಸಾಮಾಜಿಕ ಸ್ಮಾರಕ ಶಾಸನವಾಗಿದೆ.

ತುರು ಎಂದರೆ ಜಾನುವಾರು ಎಂದರ್ಥ[32] ಸ್ಮಾರಕ ಶಾಸನಗಳಲ್ಲಿ ತುರುವೆಂದರೆ ಹಸು, ಎಮ್ಮೆ, ಬಸವ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಗೋಳ್ ಎಂದರೆ ಗೋಳಾಡು, ರೋಧಿಸು ಎಂದರ್ಥ. ತುರುಗೋಳ್ ಎಂದರೆ ತುರುಗಳಿಗಾಗಿ ರೋಧಿಸುವುದು, ಪರಿತಪಿಸುವುದು ಎಂದರ್ಥ. ಸ್ಮಾರಕ ಶಾಸನಗಳಲ್ಲಿ ತುರುಗೋಳ್ ಎಂದರೆ ಜಾನುವಾರುಗಳನ್ನು ರಕ್ಷಿಸುವುದಕ್ಕಾಗಿ ಪರಿತಪಿಸುವುದು ಎಂದರ್ಥವಾಗುತ್ತದೆ.

'ಗಾವೋ ವಿಶ್ವಸ್ಯ ಮಾತರಃ' ಅಂದರೆ ಗೋವುಗಳು ಲೋಕಕ್ಕೆ ತಾಯಿಯಂತೆ. ಗೋವುಗಳು ಅತ್ಯಂತ ಉಪಕಾರಿ ಪ್ರಾಣಿಯಾಗಿದೆ. ಭಾರತೀಯರು ಪೂಜ್ಯಭಾವನೆಯಿಂದ ಗೋವುಗಳನ್ನು ಪೂಜಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಗೋವುಗಳು ಅಮೂಲ್ಯ ಸಂಪತ್ತೆನಿಸಿದ್ದವು. ಮನುಷ್ಯನ ದೈನಂದಿನ ಜೀವನದಲ್ಲಿ ಗೋವುಗಳು ಪ್ರಧಾನವಾಗಿದ್ದವು. ಗೋವುಗಳು ನೀಡುತ್ತಿದ್ದಂತಹ ಉತ್ಪನ್ನಗಳು ಮನುಷ್ಯನ ದೈನಂದಿನ ಜೀವನಕ್ಕಷ್ಟೇ ಅಲ್ಲದೆಯೇ ಆತನ ಧಾರ್ಮಿಕ ಕಾರ್ಯಗಳಿಗೂ ಪ್ರಮುಖವಾಗಿದ್ದವು. ಹಾಗಾಗಿ ಹಿಂದೂ ಸಂಸ್ಕೃತಿಯಲ್ಲಿ ಗೋವುಗಳನ್ನು 'ಕಾಮಧೇನು' ಎಂದು ಕರೆಯುತ್ತಾರೆ. ಗ್ರಾಮೀಣ ಜನರು ತಮ್ಮ ಜೀವನದಲ್ಲಿ ರಾಸುಗಳಿಗೆ ವಿಶೇಷ ಗೌರವವನ್ನು ಕೊಟ್ಟು ಅವುಗಳ ರಕ್ಷಣೆಯನ್ನು ಮಾಡುತ್ತಿದ್ದರು.

ಆದರೆ ಸಮಾಜದಲ್ಲಿ ಗೋವುಗಳಿಗೆ ರಕ್ಷಣೆಯಿದ್ದರೂ ಅವುಗಳ ಅಪಹರಣ ಮಾಡುವುದು, ಕಳ್ಳತನ ಮಾಡಿ ಬೇರೆ ಊರಿಗೆ ಕದ್ದುಕೊಂಡು ಹೋಗುವುದು ಸಾಮಾನ್ಯವಾಗಿತ್ತು. ಸಮಾಜದಲ್ಲಿದ್ದಂತಹ ದುಷ್ಟವ್ಯಕ್ತಿಗಳು ಯಜಮಾನನಿಗೆ ತಿಳಿಯದಂತೆಯೇ ಗೋವುಗಳನ್ನು ಅಪಹರಿಸುತ್ತಿದ್ದರು. ಇದನ್ನು 'ಗೋಗ್ರಹಣ' ಅಥವಾ 'ತುರುಗೋಳ್' ಎಂದು ಕರೆಯುತ್ತಿದ್ದರು. ಸಮಾಜದಲ್ಲಿ ಗೋಗ್ರಹಣವು ಸಂಭವಿಸಿದಾಗ ಗೋವುಗಳನ್ನು ರಕ್ಷಿಸಲು ಆ ಪ್ರದೇಶದ ಪ್ರತಿಷ್ಠಿತ ವ್ಯಕ್ತಿಯು ಶ್ರಮಿಸುತ್ತಿದ್ದನು.

ಸಮಾಜದಲ್ಲಿ ಸಣ್ಣ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದಂತಹ ಇಂತಹ ಘಟನೆಗಳು ರಾಜನಿಗೆ ನೇರವಾಗಿ ಸಂಬಂಧವನ್ನು ಹೊಂದದೆ ಆ ಊರಿನ ಜನರಿಗೇ ಸಂಬಂಧಪಟ್ಟಂತಹ ವಿಚಾರವಾಗಿತ್ತು. ಹಾಗಾಗಿ ಆ ಪ್ರದೇಶದ ಒಬ್ಬ ವ್ಯಕ್ತಿಯು ತುರುಗಳನ್ನು ಅಪಹರಿಸಿದಂತಹ ವ್ಯಕ್ತಿಗಳೊಂದಿಗೆ ಹೋರಾಡಿ ತುರುಗಳನ್ನು ಹಿಂದಿರುಗಿಸುತ್ತಿದ್ದನು. ಕೆಲವೊಮ್ಮೆ ಕಾಳಗವು ಭೀಕರವಾಗಿದ್ದರೆ ವೀರರು ವೀರಮರಣವನ್ನು ಹೊಂದುತ್ತಿದ್ದರು. ಇಂತಹ ಕಾಳಗಗಳಿಗೆ

'ತುರುಗೋಳ್ ಕಾಳಗ'ವೆಂದು ಕರೆಯುತ್ತಿದ್ದರು. ಪಂಪನು ತನ್ನ ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ ತುರುಗೋಳ್ ಯುದ್ಧದ ಪ್ರಸ್ತಾವನೆಯನ್ನು ಮಾಡಿದ್ದಾನೆ.[೩೩]

'ತುರುಗೊಂಡೊಡೆ ಪಾಂಡವರಿರ್ಪ ಗಂಡರೆ'

ತುರುಗೋಳ್ ಯುದ್ಧದಲ್ಲಿ ವೀರನು ಮರಣವನ್ನು ಹೊಂದಿದರೆ ಆತನಿಗೆ ಸಮಾಜದಲ್ಲಿ ಗೌರವವನ್ನು ನೀಡುತ್ತಿದ್ದರು. ವೀರನ ಪರಾಕ್ರಮ ಒಂದು ವೇಳೆ ಪ್ರದೇಶದ ರಾಜನಿಗೆ ತಿಳಿದರೆ ಆತನಿಗೆ ಸೂಕ್ತವಾದಂತಹ ಗೌರವವನ್ನು ಸಲ್ಲಿಸಿ, ಆತನ ಹೆಸರಿನಲ್ಲಿ ದಾನವನ್ನು ನೀಡಿ, ಆತನ ನೆನಪಿಗಾಗಿ ಸ್ಮಾರಕಗಳನ್ನು ನಿರ್ಮಿಸುತ್ತಿದ್ದರು. ಇಂತಹ ಶಾಸನಗಳಿಗೆ 'ತುರುಗೋಳ್ ಶಾಸನ'ವೆಂದು ಕರೆಯುತ್ತಿದ್ದರು. 'ತುರುಗಾಳಗವು ಯಾವುದೇ ಮುನ್ಸೂಚನೆ ಇಲ್ಲದೆ ಆಕಸ್ಮಿಕವಾಗಿ ನಡೆಯುತ್ತಿದ್ದ ಒಂದು ರೀತಿಯ ಗ್ರಹಣವೇ ಸರಿ. ಇದನ್ನು ಎದುರಿಸಲು ಸಲುವಾಗಿ ಯಾವುದೇ ನಿಶ್ಚಿತವಾದ ಪಡೆಯು ಕರ್ನಾಟಕದಲ್ಲಿ ಇರಲಿಲ್ಲ. ಹಾಗಾಗಿ ಆಯಾ ಪ್ರದೇಶದ ವೀರರು ಸ್ವಯಂಪ್ರೇರಿತವಾಗಿ ಹೋರಾಟ ಮಾಡಿ ವೀರಮರಣ ಹೊಂದುತ್ತಿದ್ದರು.[೩೪]

ವೀರಗಲ್ಲು ಶಾಸನಗಳಂತೆ ತುರುಗೋಳ್ ಶಾಸನಗಳಲ್ಲಿ ಕಾಲದ ನಿರ್ದೇಶನವಿರುವುದಿಲ್ಲ. ತುರುಗೋಳ್ ಶಾಸನದಲ್ಲಿ ಶಿಲ್ಪಕಲೆಯೇ ಪ್ರಧಾನವಾಗಿರುತ್ತದೆ. ಸಾಮಾನ್ಯವಾಗಿ ತುರುಗೋಳ್ ಶಾಸನಗಳಲ್ಲಿ ಕಾಮಧೇನುಗಳ ಚಿತ್ರವಿದ್ದು, ಒಬ್ಬ ವೀರನು ಕಳ್ಳರೊಂದಿಗೆ ಹೋರಾಡುತ್ತಿರುವ ಚಿತ್ರವಿರುತ್ತದೆ. ರಾಜಕೀಯ ಉದ್ದೇಶದಿಂದ ತುರುಕಾಳಗಗಳು ಕೆಲವೊಮ್ಮೆ ನಡೆದಿದ್ದರೆ, ಕೆಲವೊಮ್ಮೆ ವೀರರೇ ಸ್ವತಃ (ಸ್ವಯಂ ಪ್ರೇರಣೆ) ವೀರಸ್ವರ್ಗವನ್ನು ಹೊಂದುತ್ತಿದ್ದರು. ಕಾಲದ ಉಲ್ಲೇಖವಿರದಿದ್ದರೂ ರಾಜನ ಆಳ್ವಿಕೆಯ ನಿರ್ಧಾರದ ಮೇಲೆ ಶಾಸನಗಳ ಕಾಲವನ್ನು ನಿರ್ಧರಿಸಬಹುದಾಗಿದೆ. ಕೋಲಾರ ಜಿಲ್ಲೆಯಲ್ಲೂ ತುರುಕಾಳಗಕ್ಕೆ ಹಲವಾರು ಪ್ರದೇಶಗಳು ಸಾಕ್ಷಿಯಾಗಿವೆ. ಕೋಲಾರ ಜಿಲ್ಲೆಯು ಪಶುಸಂಗೋಪನೆಗೆ ಪ್ರಮುಖ ಸ್ಥಾನವನ್ನು ನೀಡಿತ್ತೆಂದು ತಿಳಿಯಬಹುದಾಗಿದೆ. ಹೆಚ್ಚಾಗಿ ನೊಳಂಬರ ಅವಧಿಗೆ ಸಂಬಂಧ ಪಟ್ಟ ಶಾಸನಗಳು ಅಧಿಕವಾಗಿ ದೊರಕಿದ್ದರೆ, ಕೆಲವು ಬಾಣರಸ ಆಳ್ವಿಕೆಗೆ ಸಂಬಂಧಪಟ್ಟವು ಇದೆ. ಕೋಲಾರ ತಾಲ್ಲೂಕಿನ ತುರುಗೋಳ್ ಶಾಸನಗಳು ವಿಶೇಷವಾಗಿದ್ದು ಸಾಮಾಜಿಕ ಚಿತ್ರಣವನ್ನು ಪ್ರದರ್ಶಿಸುತ್ತವೆ.

ಮುಳಬಾಗಿಲು ತಾಲ್ಲೂಕು ಕಸಬಾ ಹೋಬಳಿ ತಾತಿಕಲ್ಲು ಗ್ರಾಮದಲ್ಲಿರುವಂತಹ ಶಾಸನವು[೩೫] ಚಾವಿಂಡ ನೆಂಬುವವನು ತುರುಗೋಳ್ ಕಾಳಗದಲ್ಲಿ ವೀರಮರಣವನ್ನು ಹೊಂದಿರುವನೆಂದು ತಿಳಿಸುತ್ತದೆ. ಈ ಶಾಸನವು ಬಾಣರಸನ ಆಳ್ವಿಕೆಗೆ ಸಂಬಂಧಿಸಿದ್ದಾಗಿದ್ದು, ಮಹಾಬಲಿ ಬಾಣರಸನ ಉಲ್ಲೇಖವಿದೆ. ವೀರನು ತುರುವುಗಳನ್ನು ರಕ್ಷಿಸಿ ವೀರಮರಣವನ್ನು ಹೊಂದಿರುವನು. ಅದೇ ಸ್ಥಳದಲ್ಲಿರುವಂತಹ ಇನ್ನೊಂದು ಶಾಸನವು[೩೬] ತಾಂದಿಕಲ್ಲು ಎಂಬಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ತಿಳಿಸುತ್ತಿದ್ದು, ವೀರನು (ಹೆಸರು ಉಲ್ಲೇಖವಿಲ್ಲ) ಸತ್ತನೆಂದು ತಿಳಿಸುತ್ತದೆ. ತಾಂದಿಕಲ್ಲು ಎಂಬುವುದು ಇಂದಿನ ತಾತಿಕಲ್ಲು ಎಂದು ರೂಪಾಂತರವಾಗಿದೆ. ಮಲ್ಲನಾಯ್ಕನ ಹಳ್ಳಿಯ ರಾಮಚಂದ್ರಾಪುರದಲ್ಲಿರುವ ಶಾಸನವು[೩೭] ತುರುಗೋಳಿನಂಶವನ್ನು ತಿಳಿಸುತ್ತದೆ.

ಕುನ್ದ ತೂರ ತುರುಗೊಳೊಳಾನ್ತಿರಿದು ಸತ್ತೊತಾಂಪೆಯ

ವಿಗಳಂ ಬಿಜಯಿತ್ತ . . . .

ಬಾಣರಸನು ಆಳುತ್ತಿರಲು ಕುಂದತೂರು ಎಂಬ ಪ್ರದೇಶದಲ್ಲಿ ತುರುಗೋಳ್ ಕಾಳಗವು ನಡೆದಿದ್ದು, ಅದರಲ್ಲಿ 'ತಾಂಪೆಯ ವಿಗಳಂ' ಎನ್ನುವವನು ವೀರಮರಣವನ್ನು ಹೊಂದಿದ್ದು ಈತನ ಪರಾಕ್ರಮಕ್ಕೆ ಮೆಚ್ಚಿ ಬಾಣರಸನು

ಅರುವತ್ತು ಖಂಡುಗದಷ್ಟು ಭೂಮಿಯನ್ನು ಪಡೆದು ಒಂದು ಖಂಡುಗದಷ್ಟು ಕಳನಿಯನ್ನು ಕಲ್ನಾಟುವಿನ ರೂಪದಲ್ಲಿ ನೀಡಿರುವನು. ಅದಲ್ಲದೆಯೇ ವೀರನ ನೆನಪಿಗಾಗಿ ಈ ಕಲ್ಲನ್ನು ನಿರ್ಮಿಸಿದನೆಂದು ಶಾಸನವು ತಿಳಿಸುತ್ತದೆ.

ಇದೇ ಮಹಾಬಲಿ ಬಾಣರಸನ ಆಳ್ವಿಕೆಗೆ ಸಂಬಂಧಿಸಿದಂತಹ ಊರಳಿವಿನ ವಿಚಾರ ಉಳ್ಳಂತಹ ತುರುಗೋಳ್ ಶಾಸನವು[೩೮] ವಿಶೇಷವಾದಂತಹ ಮಾಹಿತಿಯನ್ನೊದಗಿಸುತ್ತದೆ. ಮುಳಬಾಗಿಲು ತಾಲ್ಲೂಕು ಆವನಿಯ ಬಲ್ಲ ಗ್ರಾಮದ ಈಶ್ವರ ದೇವಾಲಯದಲ್ಲಿರುವಂತಹ ವೀರಗಲ್ಲು ಶಾಸನವು

"ಊರಾತೊರುವಳ್ಳ ಉವರನ್ ತುರುವಳ್ದು ಇದಿರೆನಡದಿರುದು . . . ."

ಎಂದು ಪ್ರಯುಕ್ತವಾಗಿದ್ದು 'ಊರಾತೊರುವಳ್ಳ' ಎಂದು ವಿಶೇಷವಾದ ಶಬ್ದವನ್ನು ಪ್ರಯೋಗಿಸಿದೆ. ಊರನ್ನು ದರೋಡೆಕೋರರಿಂದ ರಕ್ಷಿಸುವಂತಹ ಸಂದರ್ಭದಲ್ಲಿ ತುರುಗಳನ್ನು ರಕ್ಷಿಸಿರಬಹುದಾಗಿದೆ. (ಈ ಶಾಸನದ ವಿಚಾರವಾಗಿ ಊರಳಿವು ಶಾಸನದ ಭಾಗದಲ್ಲಿ ಚರ್ಚಿಸಲಾಗಿದೆ.)

ಬಂಗಾರಪೇಟೆ ತಾಲ್ಲೂಕಿನ ದಾಸರಹೊಸಹಳ್ಳಿ ಹೋಬಳಿಯ ಹುಲಿಕುಂದ ಗ್ರಾಮದ ದಿಂಮಾಲೆ ದಿನ್ನೆಯಲ್ಲಿರುವಂತಹ ಶಾಸನವು[೩೯] ಮಹಾಬಲಿ ಬಾಣರಸನು ಗಂಗ-೬೦೦೦ವನ್ನಾಳುತ್ತಿರಲು ಪೊಕುಂದ-ಹನ್ನೆರಡು ಎಂಬ ಗ್ರಾಮದಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ತಿಳಿಯಪಡಿಸುತ್ತದೆ.

ನಾಗದೇವರು ಮತ್ತು ಮಾದೇವರು ಎನ್ನುವವರಿಬ್ಬರು ಈ ತುರುಗೋಳ್ ಕಾಳಗದಲ್ಲಿ ಹೋರಾಡಿದ್ದು ಇವರಿಬ್ಬರ ಪರಾಕ್ರಮವನ್ನು ಮೆಚ್ಚಿ ನಾಲ್ಕು ಕೊಳಗದಷ್ಟು ಕಳನಿಯನ್ನು ನೀಡಿರುವಂತಹ ಮಾಹಿತಿಯಿದೆ. ಪೊಕ್ಕುಂದ ಎನ್ನುವುದು ಈಗಿನ ಹುಲಿಕುಂದ ಗ್ರಾಮವಾಗಿದೆ. ಈ ಶಾಸನಗಳಲ್ಲಿ ಕಾಲದ ಉಲ್ಲೇಖವಿರುವುದಿಲ್ಲ. ಆದರೆ ಮಹಾಬಲಿ ಬಾಣರಸನೆಂದು ಉಲ್ಲೇಖವಾಗಿದ್ದು, ಬಾಣವಂಶದ ಹೆಚ್ಚಿನ ರಾಜರುಗಳು ಮಹಾಬಲಿ ಬಾಣರಸವೆಂಬ ಉಪನಾಮವನ್ನು ಹೊಂದಿದ್ದರು. ಲಿಪಿಯ ದೃಷ್ಟಿಯಿಂದ ಈ ಶಾಸನಗಳನ್ನು ೯-೧೦ನೆಯ ಶತಮಾನದ ಶಾಸನಗಳೆಂದು ಹೇಳಬಹುದು.

ನೊಳಂಬ ದೊರೆ ದಿಲೀಪಯ್ಯನ ಆಳ್ವಿಕೆಗೆ ಸಂಬಂಧಿಸಿದಂತಹ ಹಲವಾರು ತುರುಗೋಳ್ ಶಾಸನಗಳು ಬಂಗಾರಪೇಟೆ ಮತ್ತು ಮುಳಬಾಗಿಲು ತಾಲ್ಲೂಕಿನಲ್ಲಿ ದೊರಕಿವೆ. ನೊಳಂಬ ದಿಲೀಪಯ್ಯನು ಕ್ರಿ.ಶ.ಸುಮಾರು ೯೪೧-೯೬೭ರ ಅವಧಿಯಲ್ಲಿ ನೊಳಂಬವಾಡಿಯನ್ನು ಕೇಂದ್ರವಾಗಿಟ್ಟುಕೊಂಡು ರಾಜ್ಯಭಾರ ಮಾಡುತ್ತಿದ್ದನು. ಬಂಗಾರಪೇಟೆ ತಾಲ್ಲೂಕಿನ ದಾಸರ ಹೊಸಹಳ್ಳಿ ಹೋಬಳಿಯ ಹುಲಿಕುಂದ ಗ್ರಾಮದಲ್ಲಿ ಹಲವಾರು ಸ್ಮಾರಕ ಶಾಸನಗಳು ದೊರಕಿದ್ದು ಹೆಚ್ಚಿನವು ನೊಳಂಬರ ಆಡಳಿತಕ್ಕೆ ಸಂಬಂಧಿಸಿದವುಗಳಾಗಿವೆ. ದಿಲೀಪಯ್ಯರಸನು ಆಳ್ವಿಕೆ ನಡೆಸುತ್ತಿರಲು ಪೊಕ್ಕುಂದ (ಹುಲಿಕುಂದ) ಗ್ರಾಮದಲ್ಲಿ ತುರುಗೋಳ್ ಕಾಳಗವು ನಡೆದಿದ್ದು, ಅದರಲ್ಲಿ ಕೊಂಗಮಂಗಲದ ಮೇದಯ್ಯ ಎಂಬುವವನು ಹೋರಾಡಿ ಸ್ವರ್ಗಸ್ಥನಾದನೆಂಬ ಮಾಹಿತಿಯು ದೊರಕುತ್ತದೆ.[೪೦] ಇದೇ ಸ್ಥಳದಲ್ಲಿ ನೆಟ್ಟಿರುವಂತಹ ಇನ್ನೊಂದು ಶಾಸನವು[೪೧] ಮಾಚಿರಯ್ಯನೆಂಬುವವನು ತುರುಕಾಳಗದಲ್ಲಿ ಸತ್ತನೆಂದು ತಿಳಿಸುತ್ತದೆ. ಇದೇ ರಾಜನ ಆಳ್ವಿಕೆಯನ್ನು ಸೂಚಿಸುತ್ತಿರುವಂತಹ ಇನ್ನೊಂದು ಶಾಸನವು ಪೊಕ್ಕುಂದದಲ್ಲಿ ನಡೆದಂತಹ ಇನ್ನೊಂದು ತುರುಗೋಳ್ ಕಾಳಗದಲ್ಲಿ ಬೇಲೂರಿನ ಮಾದಯ್ಯ ಎಂಬುವವನು ಕಾಳಗದಲ್ಲಿ ಹೋರಾಡಿ ಸತ್ತನೆಂದು ತಿಳಿಸುತ್ತದೆ.[೪೨] ಇದೇ ಸ್ಥಳದಲ್ಲಿ ದೊರಕಿರುವಂತಹ ೫ನೆಯ ವೀರಗಲ್ಲು ಶಾಸನವು[೪೩] ಬಾರಂದವಯ್ಯನೆಂಬುವವನು ತಗಡೂರಿನಲ್ಲಿ ನಡೆದಂತಹ ತುರುಕಾಳಗದಲ್ಲಿ ಬಸವಯ್ಯನ ಮುಂದೆ ಹೋರಾಡಿ

ಸತ್ತನೆಂದು ತಿಳಿಸುತ್ತದೆ. ಆತನಿಗೆ ರಾಜನು ಒಂದು ಕೊಳಗ ಕಳನಿಯನ್ನು ನೀಡಿರುವನೆಂದು ತಿಳಿಸುತ್ತದೆ. ಹುಲಿಕುಂದವು ಹಲವಾರು ತುರುಗೋಳ್ ಕಾಳಗಕ್ಕೆ ಸಾಕ್ಷಿಯಾಗಿದೆ.

ಮುಳಬಾಗಿಲು ತಾಲ್ಲೂಕು ಆವನಿ ಹೋಬಳಿ ಬಲ್ಲಗ್ರಾಮದಲ್ಲಿರುವಂತಹ ಈಶ್ವರ ದೇವಾಲಯದಲ್ಲಿರುವ ವೀರಗಲ್ಲು ಶಾಸನವು[೪೪] ತುರುಕಾಳಗವನ್ನು ಚಿತ್ರಿಸಿದೆ. ಪಲಬಲ್ಲಿ ಎಂಬಲ್ಲಿ ನಡೆದಂತಹ ತುರುಗೋಳ್ ಕಾಳಗದಲ್ಲಿ ಬನೂಚ್ಚಾವರಿಯ ಮಗನು (ಹೆಸರಿನ ಉಲ್ಲೇಖವಿಲ್ಲ) ಯುದ್ಧದಲ್ಲಿ ಹೋರಾಡಿ ತುರುಗಳನ್ನು ರಕ್ಷಿಸಿ ಸ್ವರ್ಗಸ್ಥನಾದನೆಂದು ತಿಳಿಸುತ್ತದೆ. ಇದೇ ಸ್ಥಳದಲ್ಲಿರುವಂತಹ ೩ನೆಯ ವೀರಗಲ್ಲು ಶಾಸನವು[೪೫] ವಿಶೇಷವಾಗಿ ಎಮ್ಮೆ ತುರುಗೋಳಿನ ಮಾಹಿತಿಯನ್ನೊದಗಿಸುತ್ತದೆ. ವಿಶೇಷವಾಗಿ ದಿಲೀಪಯ್ಯನ ಧರ್ಮಾಧಿಕಾರಿಯಾದಂತಹ ತ್ರಿಭುವನ ಕರ್ತರದೇವನು ಈ ಸ್ಥಾನ (ಆವನಿ)ವನ್ನಾಳುತ್ತಿರಲು ಬಲ್ಲ ಗ್ರಾಮದಲ್ಲಿ ನಡೆದಂತಹ ಎಮ್ಮೆಯ ತುರುಗೋಳ್ ಕಾಳಗದಲ್ಲಿ ಬಸಲೈಯ ಎಂಬುವವನ ಮಗನು ಹೋರಾಡಿ ಸ್ವರ್ಗಸ್ಥನಾಗಿದ್ದು. ಆತನ ಪರಾಕ್ರಮಕ್ಕೆ ಮೆಚ್ಚಿ ಕೊಡುಗೆಯನ್ನು ನೀಡಿರುವಂತಹ ಅಪೂರ್ವ ವಿಷಯವಿದೆ.

ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರ ಹೋಬಳಿಯ ತಾವರೆಕೆರೆ ಗ್ರಾಮದಲ್ಲಿರುವಂತಹ ಎರಡು ವೀರಗಲ್ಲು ಶಾಸನಗಳು[೪೬] ಸಾಮಾನ್ಯವಾದಂತಹ ವಿಚಾರಗಳನ್ನು ತಿಳಿಸುತ್ತದೆ. ಎರಡು ಶಾಸನಗಳಲ್ಲೂ ಮಳ್ಮ ಅಥವಾ ಅಳ್ಮ ಎಂಬ ವೀರನು ಸ್ವರ್ಗಸ್ಥನಾದನೆಂದು ತಿಳಿಸುತ್ತದೆ. ಈ ವೀರನನ್ನು ನೆಲ್ಮಲ್ಲಿಯೂರಿನ ಭಾಮಯ್ಯನ ಪತಿಹಿತನೆಂದು ತಿಳಿಸುತ್ತದೆ. ಎರಡೂ ಶಾಸನಗಳಲ್ಲೂ **'ಪಣ್ಣೆ ಪೆಂಡಿರ ನುಡೆಯುಲ್ಬಲು'** ಎಂದು ಪ್ರಯೋಗವಿದೆ, ಬಹುಶಃ ಸ್ತ್ರೀಯರ ಮಾತನ್ನು ಕೇಳಿ ಹೋರಾಟಕ್ಕೆ ಇಳಿದಿರಬಹುದು. ಈತನ ಪರಾಕ್ರಮಿಯೂ, ಬಹುಗುಣನೂ, ತೇಜಸ್ಸಂಪನ್ನನೂ ಎಂದು ತಿಳಿಯಪಡಿಸಿದೆ.

ಕೋಲಾರ ತಾಲ್ಲೂಕಿನ ಹುತ್ತೂರು ಹೋಬಳಿಯ ಮೇದುತುಂಬಿಹಳ್ಳಿಯ ಒಂದು ಶಾಸನವು[೪೭] ಪುತ್ತೂರು ಎಂಬ ಪ್ರದೇಶದಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ತಿಳಿಸುತ್ತದೆ. ನೊಳಂಬಾಧಿರಾಜನ ಉಲ್ಲೇಖ ಇರುವಂತಹ ಈ ಶಾಸನವು ಸೆಟ್ಟಿಯ ಮಗನು ಕಾಳಗದಲ್ಲಿ ಮರಣ ಹೊಂದಲು ಕಳನಿಯನ್ನು ನೀಡಲಾಯಿತೆಂದು ತಿಳಿಸುತ್ತದೆ. ಇಲ್ಲಿ ಪ್ರಸ್ತಾಪಿಸಿರುವಂತಹ ನೊಳಂಬಾಧಿರಾಜನು ಯಾರೆಂದು ಸ್ಪಷ್ಟವಾಗಿ ತಿಳಿಯುತ್ತಿಲ್ಲ. ನೊಳಂಬಾಧಿರಾಜ ಅಯ್ಯಪ್ಪ ದೇವರಾಯನು ರಾಜ್ಯವನ್ನಾಳುತ್ತಿರಲು ನರಸಿಂಹಮಂಗಲ ಎಂಬಲ್ಲಿ ತುರುಗೋಳ್ ಕಾಳಗವು ನಡೆದಂತೆ ಹುಲಿಕುಂದ ಗ್ರಾಮದ ಶಾಸನವು[೪೮] ತಿಳಿಸುತ್ತದೆ. ಶಾಸನದಲ್ಲಿ ಯಾರು ಹೋರಾಡಿ ಮರಣ ಹೊಂದಿದರೆಂದು ಸ್ಪಷ್ಟವಾಗುತ್ತಿಲ್ಲವಾದರು ಮೂವರಿಗೆ ನಾಲ್ಕು ಕೊಳಗ ಕಳನಿಯನ್ನು ನೀಡಿರುವಂತೆ ಶಾಸನವು ದಾಖಲಿಸುತ್ತದೆ. ಶಾಸನದ ಕಾಲವು ೯ ಅಥವಾ ೧೦ನೆಯ ಶತಮಾನವಾಗಿದೆ.

ಬಂಗಾರಪೇಟೆ ತಾಲ್ಲೂಕು ಕಾರುಬೆಲೆ ಗ್ರಾಮದಲ್ಲಿರುವ ಶಾಸನವು ಪೃಥ್ವೀವಲ್ಲಭ ಮಹೇಂದ್ರಾಧಿರಾಜನ ಆಡಳಿತದ ಸಂದರ್ಭದಲ್ಲಿ ಮರಂಗಲ್ಲಿನ ಒಡೆಯ ಕಂಡಮಯ್ಯನ ಮಗ ದಿಲಗಂಡಯ್ಯನು ತುರುಗೋಳ್ ಕಾಳಗದಲ್ಲಿ ಸತ್ತಂತೆ ತಿಳಿಯಪಡಿಸುತ್ತದೆ.

" . . . . . ಮರಂಗಲ್ಲೊಡೆಯ ಕಣ್ಣಮ್ಮಯ್ಯನಾಮಗ ನ್ದಿಲಗಣ್ಡ

ಯ್ಯನ್ಮ ಮಾತ್ರ ಪಲಗತೊರುಗೊಳೊಳ್ ಸತ್ತು . . ."[೪೯]

ಮುಳಬಾಗಿಲು ತಾಲ್ಲೂಕು ಎಲ್ಲೂರು ಹೋಬಳಿ ಎಲ್ಲೂರು ಗ್ರಾಮದ ತುರುಗೋಳ್ ಶಾಸನವು ಎರೆಡಿಯೂರು ಪ್ರದೇಶದಲ್ಲಿ ನಡೆದಂತಹ ತುರುಗೋಳ್ ಕಾಳಗವನ್ನು ಚಿತ್ರಿಸಿದೆ. ನೊಳಂಬ ದೊರೆ ಶ್ರೀ ಇರುವ

ನೊಳಂಬ ರಾಜನು ರಾಜ್ಯವನ್ನಾಳುತ್ತಿರಲು ಶ್ರೀಮತ್ ಮಂಗಲಸಿಂಹನ ಮಗನಾದ ವೆಂಗಡಯ್ಯನು ಕಾಳಗದಲ್ಲಿ ಹೋರಾಡಿ ವೀರಸ್ವರ್ಗವನ್ನು ಹೊಂದಿದನೆಂದು ಶಾಸನವು ತಿಳಿಸಿದೆ. ಈ ಶಾಸನದಲ್ಲಿ ತುರುಗೋಳಿಗೆ ಸಂಬಂಧಿಸಿದ ವಿಷಯದ ನಂತರ ಗಾವುಂಡ ಸ್ವಾಮಿಯು ನೀಡಿದ ದಾನದ ಭಾಗವಿದೆ.[೫೦] ಮುಳಬಾಗಿಲು ತಾಲ್ಲೂಕಿನ ಉತ್ತನೂರು ಗ್ರಾಮದಲ್ಲಿರುವ ಚಿಕ್ಕಕೆರೆಯ ಒಂದು ಸಣ್ಣ ಶಾಸನವು 'ತುರುಗೋ' ಎಂಬ ಶಬ್ದವನ್ನು ಪ್ರಯೋಗಿಸಿದೆ. ತುರುಗೋಳಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ನೀಡುತ್ತಿದೆಯಾದರೂ ಯಾವ ರಾಜನಿಗೆ ಮತ್ತು ಯಾವ ವೀರನಿಗೆ ಸಂಬಂಧ ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತಿಲ್ಲ. (ಅಂತಿಮ ಭಾಗವು ನಶಿಸಿ ಹೋಗಿದೆ)

ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿಯಲ್ಲಿರುವ ಕ್ಯಾಲನೂರು ಗ್ರಾಮದ ಹೊಲದಲ್ಲಿರುವ ಶಾಸನವು[೫೧] ತುರುಗೋಳ್ ಕಾಳಗದ ಮಾಹಿತಿಯನ್ನು ನೀಡುತ್ತದೆ. ಈ ಕಾಳಗವು 'ಕೊರನೂರ' ಎಂಬ ಪ್ರದೇಶದಲ್ಲಿ ನಡೆದಿದ್ದು, ಕೊರನೂರಿನ ಮಾಪಲಿಯ ಸಿಂದಾವರಿಯ ಮಕ್ಕಳು ತುರುಗೋಳಿನ ಕಾಳಗದಲ್ಲಿ ಹೋರಾಡಿ ಸತ್ತ ವಿಷಯವಿದೆ. ಶಾಸನದಲ್ಲಿ ಕಾಲದ ಉಲ್ಲೇಖವಾಗಲಿ, ರಾಜನ ಉಲ್ಲೇಖವಾಗಲಿ ದೊರಕುತ್ತಿಲ್ಲ. ಕೊರನೂರು ಇಂದಿನ ಕ್ಯಾಲನೂರು ಆಗಿರಬಹುದು. ಇದೇ ತಾಲ್ಲೂಕಿನ ಕುರುಬೂರು ಹೋಬಳಿಯಲ್ಲಿರುವ 'ವೇಲ್ಗಳಬುರೆ' ಎಂಬ ಗ್ರಾಮದಲ್ಲಿರುವಂತಹ ಒಂದು ಶಾಸನದಲ್ಲಿ[೫೨] ಗಗ್ಗರ ಒಕ್ಕಲಿನ ಮದಲೂರಿನ ಕುಪ್ಪನೆಂಬುವವನು ತುರುಗೋಳ್ ಕಾಳಗದಲ್ಲಿ ಸತ್ತು ಸ್ವರ್ಗಸ್ಥನಾದನೆಂಬ ವಿಚಾರವಿದೆ. ವೀರನಿಗೆ ಮೂರು ತುಂಬು ಕಳನಿಯನ್ನೂ ನೀಡಲಾಗಿದೆ. ಇದೇ ಕೋಲಾರ ತಾಲ್ಲೂಕಿನ ಹುತ್ತೂರು ಹೋಬಳಿ ಮೇದು ತುಂಬಿ ಹಳ್ಳಿ ಗ್ರಾಮದಲ್ಲಿರುವ[೫೩] ತುರುಗೋಳ್ ಶಾಸನವು ಇಂದಪ್ಪರಸನೆಂಬುವವನು ಆಳ್ವಿಕೆ ನಡೆಸುತ್ತಿರಲು ಪುತ್ತೂರಿನ ತೊಭುವನ (ತ್ರಿಭುವನ) ಸಿಂಗಿಯ ಮಗನಾದ ಸೋಮಣ್ಣನೆಂಬುವವನು ಯುದ್ಧದಲ್ಲಿ ಪಲ್ಲಿಪಲರನ್ನು ಓಡಿಸಿ ಅವರಲ್ಲಿ ಇಪ್ಪತ್ತನಾಲ್ಕು ಸೈನಿಕರನ್ನು ವೀರಾವೇಶದಿಂದ ಕೊಂದು ಶೂರಗತಿಯನ್ನು ಹೊಂದಿದನು. ಈತನ ಪರಾಕ್ರಮವನ್ನು ಮೆಚ್ಚಿದಂತಹ ಅರಸನು ಒಂದು ಮನೆಯನ್ನು ಮತ್ತು ಕೊಳವನ್ನು ಪರಿಹಾರಾರ್ಥವಾಗಿ ನೀಡಿರುವನು.

ಚೋಳ ದೊರೆ ಶ್ರೀರಾಜೇಂದ್ರ ಚೋಳನ ಆಳ್ವಿಕೆಗೆ ಸಂಬಂಧಿಸಿದಂತಹ ಶಾಸನವೊಂದು[೫೪] ಕೋಲಾರ ತಾಲ್ಲೂಕು ವೇಮಗಲ್ಲು ಹೋಬಳಿಯ ಪುರಹಳ್ಳಿ ಗ್ರಾಮದಲ್ಲಿ ದೊರಕಿದ್ದು ವೊಲ್ಲೆಯೂರಿನಲ್ಲಿ ಒಬ್ಬ ತುರುವ ಕಳ್ಳನು ತುರುವುಗಳನ್ನು ಕದ್ದುಕೊಂಡು ಹೋಗಿರಲು ಆ ಊರಿನ ಮಂಡಿಯಾಚಾರಿಯು ಪಾಲಿಸಿ ಪೋಷಿಸಿದಂತಹ ಚೋಳಾಚಾರಿಯು ಆ ಕಳ್ಳನನ್ನು ಹಿಡಿದು ಸಾಯಿಸಿ ತುರುವುಗಳನ್ನು ರಕ್ಷಿಸಿ ಸ್ವರ್ಗಸ್ಥನಾದನೆಂಬ ವಿಚಾರವು ದೊರಕುತ್ತದೆ.

ಮೊಕುಂದ ಗ್ರಾಮವು ಹಲವಾರು ತುರುಗೋಳ್ ಕಾಳಗಕ್ಕೆ ಸಾಕ್ಷಿಯಾಗಿದೆ. ವಿಶೇಷವೆಂದರೆ ಈ ಸ್ಥಳದಲ್ಲಿ ತುರುಗೋಳ್ ಶಾಸನದೊಂದಿಗೆ ಎಮ್ಮೆ ತುರುಗೋಳ್ ಕಾಳಗಕ್ಕೆ ಸಂಬಂಧಿಸಿದಂತಹ ಶಾಸನವೊಂದು ದೊರಕುತ್ತದೆ. ಬಂಗಾರಪೇಟೆ ತಾಲ್ಲೂಕಿನ ದಾಸರಹೊಸಹಳ್ಳಿ ಹೋಬಳಿಯಲ್ಲಿ ಹಿಂದೆ ತಿಳಿಸಿರುವಂತಹ ಹಲವಾರು ಶಾಸನಗಳಲ್ಲಿ ಈ ಶಾಸನವು ಸೇರಿದೆ. ಮಾರಸಿಂಹದೇವನು ರಾಜ್ಯಭಾರವನ್ನು ನಡೆಸುತ್ತಿರಲು ಮೊಕುಂದಲ್ಲಿ ನಡೆದ ಎಮ್ಮೆ ತುರುಗೋಳ್ ಕಾಳಗದಲ್ಲಿ ಕುಪ್ಪಣನೆಂಬುವವನು ಹೋರಾಡಿ ಸ್ವರ್ಗಸ್ಥನಾದನೆಂಬ ವಿಚಾರವಿದೆ. ಎಮ್ಮೆ ತುರುಗೋಳ್ ಕಾಳಗದ ವಿಚಾರವನ್ನು ತಿಳಿಸುತ್ತಿರುವಂತಹ ಅಪೂರ್ವ ಶಾಸನವಿದಾಗಿದೆ.

ಕೋಲಾರದ ತುರುಗೋಳ್ ಶಾಸನಗಳು ಸಾಮಾಜಿಕ ವಿಚಾರವನ್ನಷ್ಟೆ ಅಲ್ಲದೆಯೇ ಶಿಲ್ಪಕಲಾ ಚಾತುರ್ಯವನ್ನು ಹೊಂದಿದೆ. ಮಾಲೂರು ತಾಲ್ಲೂಕಿನಲ್ಲಿರುವ ದೊರಕುವಂತಹ ಹೆಚ್ಚಿನ ತುರುಗೋಳ್ ಶಾಸನಗಳಲ್ಲಿ ಕಾಳಗಕ್ಕೆ ಸಂಬಂಧಿಸಿದಂತಹ ಕೆತ್ತನೆಗಳು ಕಂಡುಬರುತ್ತದೆ.

೪.೬ ಪೆಣ್ಬುಯಿಲ್

ಸ್ಮಾರಕ ಶಾಸನಗಳಲ್ಲಿ ಪೆಣ್ಬುಯಿಲ್ ಶಾಸನಗಳು ಪ್ರಮುಖವಾಗಿದೆ. ಸ್ತ್ರೀ ಸಮಾಜದ ಮೇಲೆ ನಡೆಯುತ್ತಿದ್ದಂತಹ ದೌರ್ಜನ್ಯವನ್ನು ಎತ್ತಿಹಿಡಿಯುವಂತಹ ಈ ಶಾಸನವು ಸಾಮಾಜಿಕ ಕಳಕಳಿಯನ್ನು ತೋರಿಸುವಂತಹ ಸ್ಮಾರಕ ಶಾಸನವಾಗಿದೆ. ಒಂದು ಗ್ರಾಮದ ಮೇಲೆ ದರೋಡಕೋರರು ಅಥವಾ ಕಳ್ಳರು ಆಕ್ರಮಣ ಮಾಡುವಂತಹ ಸಂದರ್ಭದಲ್ಲಿ ಆ ಊರಿನ ಅಸಹಾಯಕ ಸ್ತ್ರೀಯರ ಮೇಲೆ ಅವಮಾನ ಮಾಡುವಂತಹ ರೀತಿಯಲ್ಲಿ ಆಕ್ರಮಣವನ್ನು ಮಾಡುತ್ತಿದ್ದರು. ಒಂದು ಊರಿನ ತುರುಗಳ ಮೇಲೆ ಆಕ್ರಮಣ ಮಾಡಿದ ನಂತರ ಆ ಊರಿನ ಹೆಣ್ಣುಗಳ ಮೇಲೆ ಆಕ್ರಮಣ ಮಾಡಿದಾಗ ಸ್ತ್ರೀಯರು ಹುಯ್ಯಲಿಡುತ್ತಿದ್ದರು. ಇದನ್ನೇ ಪೆಣ್ + ಪುಯ್ಯಲ್ = ಪೆಣ್ಬುಯ್ಯಲ್ ಎಂದು ಕರೆಯುತ್ತಾರೆ. ಇಂತಹ ವಿಚಾರವನ್ನು ತಿಳಿಸುವಂತಹ ಶಾಸನಗಳೇ ಪೆಣ್ಬುಯಿಲ್ ಶಾಸನಗಳೆಂದು ಕರೆಯುತ್ತಾರೆ.[೫೫]

ಜನ್ನನು ತನ್ನ ಅನಂತನಾಥಪುರಾಣದಲ್ಲಿ ಮತ್ತು ರನ್ನನು ತನ್ನ ಗದಾಯುದ್ಧ ಪುಸ್ತಕದಲ್ಲಿ ಪೆಣ್ಬುಯಿಲ್ ಶಬ್ದವನ್ನು ಪ್ರಯೋಗಿಸಿದ್ದಾರೆ. ಕಳ್ಳರು ತುರುಗಳನ್ನು ಕದಿಯಲು ಬಂದಾಗ ಕದಿಯುವುದರ ಜೊತೆಗೆ ಆ ಊರಿನ ಸ್ತ್ರೀಯರನ್ನು ಅವಮಾನಗೊಳಿಸುತ್ತಿದ್ದರು. ಆಗ ಸ್ತ್ರೀಯರು ತಮ್ಮ ರಕ್ಷಣೆಗಾಗಿ ಪುಯ್ಯಲಿಡುತ್ತಿದ್ದರು ಅಥವಾ ಹುಯ್ಯಲಿಡುತ್ತಿದ್ದು (ಕೂಗಿಕೊಳ್ಳುತ್ತಿದ್ದರು). ಈ ಸಂದರ್ಭದಲ್ಲಿ ವೀರಗಲ್ಲು ಮತ್ತು ತುರುಗೋಳು ಶಾಸನಗಳಲ್ಲಿ ಪ್ರತಿಪಾದಿತವಾಗಿರುವಂತೆ ಊರಿನ ವೀರನೊಬ್ಬನು ಕಳ್ಳರೊಡನೆ ಹೋರಾಡಿ ಸ್ತ್ರೀಯರನ್ನು ರಕ್ಷಿಸುತ್ತಿದ್ದನು. ಕೆಲವೊಮ್ಮೆ ಆತ್ಮಾರ್ಪಣೆ ಮಾಡುತ್ತಿದ್ದನು. ಇಂತಹ ವಿಚಾರವನ್ನು ತಿಳಿಸುವಂತಹ ಶಾಸನಗಳಿಗೆ 'ಪೆಣ್ಬುಯಿಲ್ ಶಾಸನ'ಗಳೆಂದು ಕರೆಯುತ್ತಾರೆ.

ದಾಳಿಕೋರರು ಈ ರೀತಿಯಾಗಿ ಮಾಡುತ್ತಿದ್ದಂತಹ ಧಾಳಿಯು ಬೇರೆ ಸಂದರ್ಭಕ್ಕನುಗುಣವಾಗಿ ಹೆಚ್ಚಾಗಿ ಕಂಡುಬಂದಿದೆ. ಅಂದರೆ ಕೇವಲ ಸ್ತ್ರೀಯರನ್ನು ಅವಮಾನ ಮಾಡಬೇಕೆಂಬ ಉದ್ದೇಶದಿಂದಲೇ ಇಂತಹ ಆಕ್ರಮಣಗಳು ನಡೆಯದಿರದೇ ತುರುಗೋಳ್ ಕಾಳಗದ ಸಂದರ್ಭದಲ್ಲೋ ಅಥವಾ ಇತರ ಸಂದರ್ಭದಲ್ಲಿಯೂ ನಡೆದಿರಬಹುದು. ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಎರಡು ಶಾಸನಗಳು ತುರುಗೋಳ್ ಕಾಳಗವನ್ನು ತಿಳಿಸುತ್ತಾ ಅದೇ ಸಂದರ್ಭದಲ್ಲಿ ನಡೆದಂತಹ ಪೆಣ್ಬುಯಿಲ್‌ನ್ನು ವರ್ಣಿಸಿದೆ. ಮುಳಬಾಗಿಲು ತಾಲ್ಲೂಕಿನ[೫೬] ದುಗ್ಗಸಂದ್ರ ಹೋಬಳಿಯ ತಾವರೆಕೆರೆ ಗ್ರಾಮದ ವೀರಗಲ್ಲು ಶಾಸನವು ಪೆಣ್ಬುಯಿಲ್ ವಿಷಯವನ್ನು ತಿಳಿಸುತ್ತದೆ.

> **ಸ್ವಸ್ತಿ ಶ್ರೀ ದಿಲೀಪ ನೊಳಂಬ ಪೃಥವೀ ರಾಜ್ಯಂಗೆಯ್ಯುತಿರೆ ಮಾ**
> **ಗರಯ್ಯ ಪೆಣ್ಣಿಪೆಂಡಿರನುಡೆಯರ್ಚಲು ಮೆಳ್ತುನತುರುಗೊಳ**
> **ಲು ಮಳ್ಕುಸತ್ತನ್ ಬೆಸಗೆಯ್ದೊಂ ಕೊಯತೂರ ವಿಕ್ರಮಾದಿತ್ಯನ್**
> **ಬಹುಗುಣ ತೇಜನ್"**

ದಿಲೀಪ ನೊಳಂಬನು ರಾಜ್ಯವನ್ನಾಳುತ್ತಿರಲು (ಕ್ರಿ.ಶ.೧೦ನೆಯ ಶತಮಾನ) ತುರುಗೋಳ್ ಕಾಳಗವು ನಡೆದಿರಲು ದಾಳಿಕೋರರು ಸ್ತ್ರೀಯರ ಬಟ್ಟೆಗಳನ್ನು ಅಪಹರಿಸಿ ಅವಮಾನ ಮಾಡಲು ಮಳ್ಮ (ಅಳ್ಮ) ಎಂಬುವವನು ಹೋರಾಡಿ ಸತ್ತನು.

ಅದೇ ಸ್ಥಳದಲ್ಲಿ ದೊರಕುವಂತಹ ಇನ್ನೊಂದು ವೀರಗಲ್ಲು ಶಾಸನವು[೫೭] ಇದೇ ರೀತಿಯಾದಂತಹ ಮಾಹಿತಿಯನ್ನೊದಗಿಸುತ್ತಿದ್ದು ಮಲ್ಮಿಯೂರಭಾಮಯ್ಯನೆಂಬುವವನು ಮಹಿಳೆಯರ ಮಾನವನ್ನು ಕಾಪಾಡಿ ಹೋರಾಡಿ ಸತ್ತನೆಂದು ಉಲ್ಲೇಖಿಸುತ್ತದೆ. **'ಪಣ್ಣೆ ಪೆಂಡಿರನುಡೆಯಳ್ಟಲುಂ'** ಎಂಬ ಪ್ರಯೋಗವಿದ್ದು ಸ್ತ್ರೀಯರ ಉಡುಗೆಯನ್ನಪಹರಿಸಲು ವೀರನು ಹೋರಾಡಿ ಸತ್ತನೆಂದು ಉಲ್ಲೇಖಿಸುತ್ತದೆ.

ಶ್ರೀನಿವಾಸಪುರ ಹೋಬಳಿ ನಂಬಿಹಳ್ಳಿಯ ಸೋಮೇಶ್ವರ ದೇವಾಲಯದಲ್ಲಿರುವ ಶಾಸನವು ಶತ್ರುಗಳು ಬೆಳಗತ್ತೂರ ಗ್ರಾಮವನ್ನು ಸೂರೆ ಮಾಡಿ ದನಗಳನ್ನು ಅಪಹರಿಸಿ ಹೆಣ್ಣುಮಕ್ಕಳ ಮಾನಭಂಗ ಮಾಡುವಂತಹ ಸಂದರ್ಭದಲ್ಲಿ ಎರಯಗಾವುಂಡನು ಹೋರಾಡಿ ಸಾಯುತ್ತಾನೆ ಎಂದು ಶಾಸನವು ಉಲ್ಲೇಖಿಸುತ್ತದೆ. ಚೋಳರ ಕಾಲದ ಈ ಶಾಸನವು ಕ್ರಿ.ಶ.೧೧ನೆಯ ಶತಮಾನಕ್ಕೆ ಸೇರಿದುದಾಗಿದೆ.[೫೮]

ಈ ರೀತಿಯಾದಂತಹ ಸ್ಮಾರಕ ಶಾಸನಗಳಲ್ಲಿ ಎರಡು ವಿಧವಾದಂತಹ ಶಾಸನಗಳಿರುತ್ತದೆ. ಕೆಲವು ಕೇವಲ ಪೆಣ್ಬುಯಿಲ್ ಶಾಸನ ಶಿಲ್ಪಗಳನ್ನು ಹೊಂದಿದ್ದರೆ, ಕೆಲವು ಕೇವಲ ಶಾಸನ ಪಾಠವನ್ನಷ್ಟೇ ಹೊಂದಿರುತ್ತದೆ. ಎರಡೂ ಸೇರಿರುವಂತಹ ಶಾಸನಗಳು ದೊರಕುವುದು ಬಹಳ ಅಪರೂಪವಾಗಿದೆ. ಕೋಲಾರದಲ್ಲಿ ದೊರಕುವಂತಹ ಶಾಸನಗಳು ಶಾಸನ ಪಾಠವನ್ನು ಹೊಂದಿರುವಂತಹ ಶಾಸನಗಳಾಗಿವೆ. ಪೆಣ್ಬುಯಿಲ್ ಶಾಸನಗಳಲ್ಲಿ ವೀರರು ಶತ್ರುಗಳೊಂದಿಗೆ ಹೋರಾಡಿ ದನ ಕರುಗಳನ್ನು ಮತ್ತು ಸ್ತ್ರೀಯರನ್ನು ರಕ್ಷಿಸುತ್ತಿರುವಂತಹ ಶಿಲ್ಪಗಳಿವೆ.

೪.೭ ಊರಳಿವು

ಊರ+ಅಳಿವು ಎಂದರೆ ಊರಿನ (ಒಂದು ಪ್ರದೇಶದ) ಅಳಿವು ನಾಶವೆಂದರ್ಥ. ಒಂದು ಪ್ರದೇಶದ ಮೇಲೆ ಸಮೀಪದಲ್ಲಿರುವಂತಹ ರಾಜ್ಯದ ರಾಜರು ಮುನ್ಸೂಚನೆಯಿಲ್ಲದೆಯೇ ಧಾಳಿ ಮಾಡುತ್ತಿದ್ದರು ಅಥವಾ ಕಳ್ಳರ ಸಮೂಹ ಅಥವಾ ದರೋಡೆಕೋರರ ಗುಂಪು ಒಂದು ಹಳ್ಳಿಯ ಮೇಲೆ ಆಕ್ರಮಣ ಮಾಡಿ ಹಳ್ಳಿಯನ್ನು ಲೂಟಿ ಮಾಡುತ್ತಿತ್ತು. ಇದನ್ನು ಊರಳಿವು ಎಂದು ಕರೆಯುತ್ತಾರೆ. ರನ್ನನು ಮೂರು ರೀತಿಯ ಸಾಮಾಜಿಕ ಯುದ್ಧಗಳಲ್ಲಿ ಊರಳಿವನ್ನು ಪ್ರಸ್ತಾಪಿಸಿದ್ದಾನೆ.[೫೯] ತುರುಗೋಳ್, ಪೆಣ್ಬುಯಿಲ್ ಮತ್ತು ಊರಳಿವು ಈ ಮೂರರಲ್ಲಿ ಹೋರಾಡದಂತಹ ವ್ಯಕ್ತಿಯು ಷಂಡನೆಂದು ರನ್ನನೇ ತಿಳಿಯಪಡಿಸಿದ್ದಾನೆ.

ಪೆಣ್ಬುಯಿಲ್‌ನಂತೆ ಊರಳಿವು ಕೂಡ ಬೇರೆ ಬೇರೆ ಸಂದರ್ಭಗಳಲ್ಲಿ ನಡೆದಿರಬಹುದಾದ ಘಟನೆಯಾಗಿದೆ. ಒಂದು ಊರಿನ ಸಂಪತ್ತನ್ನು ಕೊಳ್ಳೆ ಹೊಡೆಯಬೇಕೆಂದು ನಿರ್ಧರಿಸಿ ಕಳ್ಳರು ಆ ಊರಿನ ಹೆಣ್ಣುಮಕ್ಕಳ ಮಾನಭಂಗವನ್ನು ಮಾಡಿ ಊರನ್ನೂ ನಾಶ ಮಾಡುತ್ತಿದ್ದರು. ಈ ಸಂದರ್ಭದಲ್ಲೂ ಹಲವಾರು ಕಾಳಗಗಳು, ಯುದ್ಧಗಳು ನಡೆಯುತ್ತಿದ್ದವು. ಇವುಗಳನ್ನು ಊರಳಿವು ಕಾಳಗವೆಂದು ಕರೆಯುತ್ತಾರೆ. ಗ್ರಾಮದ ಪ್ರಧಾನ ವ್ಯಕ್ತಿಯು ಈ ಕಾಳಗವನ್ನು ಸಮರ್ಥವಾಗಿ ಎದುರಿಸಿ ಕೆಲವೊಮ್ಮೆ ವೀರಸ್ವರ್ಗವನ್ನು ಹೊಂದುತ್ತಿದ್ದನು.

ಎರಡು ರಾಜ್ಯಗಳ ನಡುವೆ ಯುದ್ಧವೇರ್ಪಟ್ಟಾಗ ಸೋತ ಪಕ್ಷದವರು ಗೆದ್ದ ಪಕ್ಷದವರ ಮೇಲೆ ಆಕ್ರಮಣವನ್ನು ಮಾಡುತ್ತಿದ್ದರು. ತಮ್ಮ ಶತ್ರುಗಳನ್ನು ಸದೆಬಡಿದು ಅವರ ಮೇಲೆ ಮತ್ತೂ ಸೇಡು ತೀರಿಸಿಕೊಳ್ಳುವ

ಉದ್ದೇಶದಿಂದ ಗೆಲುವಿನತ್ತ ಹೊರಟವರು ಸೋತವರ ಮೇಲೆ ಬೀಳುತ್ತಿದ್ದರು. ಇದನ್ನೇ ಪೆಣ್ಬುಯಿಲ್ ಎಂದು ಡಾ.ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯವಾಗಿದೆ.[೬೦]

ಕೋಲಾರ ಜಿಲ್ಲೆಯಲ್ಲಿ ಬಾಣರಸರ ಆಳ್ವಿಕೆಗೆ ಸಂಬಂಧ ಪಟ್ಟಂತೆ ಕೆಲವು ಊರಳಿವು ಶಾಸನಗಳು ದೊರಕುತ್ತವೆ. ಮಹಾಬಲಿ ಬಾಣರಸರು (ಜಗದೇಕ ಮಲ್ಲದೇವ-ಕ್ರಿ.ಶ.೮೩೫-೮೬೦) ರಾಜ್ಯವನ್ನಾಳುತ್ತಿರಲು, ಗಂಗ ದೊರೆ ಪೆರ್ಮಾನಡಿಗಳ್ ಮತ್ತು ನೊಳಂಬರಾಜ (ನನ್ನಿನೊಳಂಬ)ರು ಸೇರಿಕೊಂಡು ಬಾಣರಸನ ಮೇಲೆ ಯುದ್ಧಕ್ಕೆ ಬಂದಿರುವಂತಹ ಸಂದರ್ಭದಲ್ಲಿ ಊರಕಾಳಗವು ನಡೆದಿರುವಂತಹ ಮಾಹಿತಿಯು ತಿಳಿದುಬರುತ್ತದೆ. ಈ ಊರಳಿವು ಕಾಳಗದಲ್ಲಿ ಹಗೆಕಲಿಯರ ಮಗ ವಿಜತ್ತನ್ ಎಂಬುವವನು ವೀರಸ್ವರ್ಗವನ್ನು ಹೊಂದಿರುವಂತಹ ಮಾಹಿತಿಯು ಈ ಶಾಸನವು ನೀಡುತ್ತದೆ. ಕೋಲಾರ ತಾಲ್ಲೂಕಿನ ಬಂಗವಾಡಿ ಗ್ರಾಮದ ಸೋಮೇಶ್ವರ ದೇವಾಲಯದಲ್ಲಿ ಈ ವೀರಗಲ್ಲು[೬೧] ದೊರಕಿದೆ.

ಮುಳಬಾಗಿಲು ತಾಲ್ಲೂಕು ದುಗ್ಗಸಂದ್ರ ಹೋಬಳಿ ಬಿಸನಹಳ್ಳಿ ಗ್ರಾಮದಲ್ಲಿ ದೊರಕುವಂತಹ ಶಾಸನವು[೬೨] ಊರಳಿವಿನ ಮಾಹಿತಿಯನ್ನು ನೀಡಿದೆ. ಚೋಳ ದೊರೆ ಶ್ರೀರಾಜರಾಜ ಮುಮ್ಮಡಿ ಚೋಳ ದೇವನ (ಕ್ರಿ.ಶ.೧೨೧೬-೧೨೫೭) ಆಳ್ವಿಕೆಗೆ ಸಂಬಂಧಿಸಿದಂತಹ ಈ ಶಾಸನವು ಮಂಡಿಕಲ್ಲು ಎಂಬಲ್ಲಿ ನಡೆದಂತಹ ಊರಳಿವು ಕಾಳಗವನ್ನು ತಿಳಿಸುತ್ತದೆ. ಈ ಕಾಳಗದಲ್ಲಿ ಕದವಬೂರ(ಕದಂಬೂರು) ಮೆಯಗಾವುಂಡನ ಮಗ (ಹೆಸರು ಅಪೂರ್ಣವಾಗಿದೆ)ನು ಕಾದಾಡಿ ಸತ್ತನೆಂದು ತಿಳಿಸುತ್ತದೆ.

"ಮಯಗಾವುಂಡ
ರಮಗ . . . .
ತ್ತಯ . . ಗಿಯ
. . . . . ಮಂಡಿ
ಕಲ್ಲ ಊರಳಿವಿ
ನೊಳ್ ಕಾದಿ ಸ . ."

ಇದೇ ತಾಲ್ಲೂಕಿನ ಅವನ್ಯ ಹೋಬಳಿ ಬಲ್ಲಗ್ರಾಮದ ಈಶ್ವರ ದೇವಾಲಯದಲ್ಲಿರುವಂತಹ ಶಾಸನವು[೬೩] ಬಲ್ಲ ಎಂಬ ಊರಿನಲ್ಲಿ ನಡೆದಂತಹ ಊರಳಿವು ಕಾಳಗದ ಮಾಹಿತಿಯನ್ನೊದಗಿಸುತ್ತದೆ. ಕ್ರಿ.ಶ.೧೦೦೭ರ ಈ ಶಾಸನವು ನೊಳಂಬ ರಾಜನ ಧರ್ಮಾಧಿಕಾರಿಯಾದ ತ್ರಿಭುವನ ಕರ್ತರದೇವನ ಆಳ್ವಿಕೆಗೆ ಸಂಬಂಧಿಸಿದ್ದು, ಮಸೆಕಲ . . ಪ್ಪದೇವನ ಮಗನಾದ ನೊಳಂಬ ಗಾವುಂಡನು ಕಾಳಗದಲ್ಲಿ ಕಾದಾಡಿ ಸತ್ತನೆಂದು ತಿಳಿಸುತ್ತದೆ. ಈ ವೀರನು ಗ್ರಾಮದ ಪ್ರತಿಷ್ಠಿತ ವ್ಯಕ್ತಿಯಾಗಿದ್ದು ಊರಿನ ಗೌಡನಾಗಿದ್ದನು. ಇದೇ ಸ್ಥಳದಲ್ಲಿರುವಂತಹ ಇನ್ನೊಂದು ವೀರಗಲ್ಲು ಶಾಸನವು[೬೪] ಬಾಣರಸನ ಆಳ್ವಿಕೆಯ ಎರಡನೆಯ ವರ್ಷಕ್ಕೆ ಸಂಬಂಧಿಸಿದುದಾಗಿದೆ. ರಣಮುಖ ದುಟ್ಟ (ದುಷ್ಟ)ನ ಮಗನಾದ ಕರಪುರನೆಂಬುವವನು ಬಲ್ಲ ಎಂಬ ಗ್ರಾಮದಲ್ಲಿ ನಡೆದಂತಹ 'ಊರಾ ತೊರುವಳ್ಳಿ' ಕಾಳಗದಲ್ಲಿ ಶತ್ರುಗಳನ್ನು ಇರಿದು ಸತ್ತನೆಂದು ಮಾಹಿತಿಯು ದೊರಕುತ್ತದೆ. ಊರ ತುರುಗೋಳ್ ಎಂಬ ಶಬ್ದ ಪ್ರಯೋಗವು ವಿಶೇಷವಾಗಿದೆ. ಶತ್ರುಗಳು ತುರುಗಳನ್ನು ಅಪಹರಿಸಲು ಬಂದವರು ಊರನ್ನು ನಾಶಪಡಿಸಿದಂತೆ ಮಾಹಿತಿ ದೊರಕುತ್ತದೆ.

ಮುಳಬಾಗಿಲು ತಾಲ್ಲೂಕಿನ ಕಾವತ್ತನಹಳ್ಳಿ ಗ್ರಾಮದ[೬೫] ವೀರಗಲ್ಲು ಶಾಸನದಲ್ಲಿ ಇರುವ ನೊಳಂಬನು ರಾಜ್ಯವನ್ನಾಳುತ್ತಿರಲು ಎರದಯೂರಲ್ಲಿ ನಡೆದಂತಹ ಊರಳಿವು ಕಾಳಗದ ವಿಚಾರವಿದೆ. ಈ ಕಾಳಗದಲ್ಲಿ ಬಾರದವಯ್ಯ ಎಂಬುವವನು ಇರಿದು ಸತ್ತನೆಂದು ತಿಳಿಸುತ್ತದೆ. ಕ್ರಿ.ಶ.೧೧ನೆಯ ಶತಮಾನಕ್ಕೆ ಸಂಬಂಧಿಸುವಂತಹ ಈ ಶಾಸನವು ಎರದಯೂರನ್ನು ಕಾಳಗದ ಕೇಂದ್ರ ಸ್ಥಾನವೆಂದು ಗುರುತಿಸುತ್ತದೆ. ಎರದಯೂರು ಇಂದಿನ 'ಎಲ್ದೂರು' ಎಂದಾಗಿದೆ.

ಬಂಗಾರಪೇಟೆಯ ಯಲಬುರಿಗೆ ಗ್ರಾಮದಲ್ಲಿರುವಂತಹ ಒಂದು ಶಾಸನವು[೬೬] ಮರಗಲ್ಲ ಚೆಟ್ಟಯ್ಯ ಗಾವುಂಡನ ಮೈದುನನಾದ ಪೊನ್ನ ವೆಂಡಿಯ ತಮ್ಮನಾದ 'ಚವನ' ಎಂಬುವವನು ಊರಳಿವಿನಲ್ಲಿ ಕಾದಾಡಿ ಸತ್ತನೆಂದು ಶಾಸನವು ತಿಳಿಸುತ್ತದೆ. ಇಲ್ಲಿಯೇ ದೊರಕುವಂತಹ ಇನ್ನೊಂದು ವೀರಗಲ್ಲು ಶಾಸನವು ಗೊವೆಂಡಿ ಎನ್ನುವವನು ಕಳ್ಳರೊಂದಿಗೆ ಹೋರಾಡಿ ಊರನ್ನು ರಕ್ಷಿಸಿದನೆಂದು ತಿಳಿಸುತ್ತದೆ. ಆತನಿಗೆ ಮರಗಲ್ಲಿನಲ್ಲಿ ಹದಿನೈದು ಕೊಳಗದಷ್ಟು ಭೂಮಿಯನ್ನು ನೀಡಿರುವಂತಹ ಮಾಹಿತಿಯನ್ನು ಶಾಸನವು ನೀಡುತ್ತದೆ. ಇದೇ ಸ್ಥಳದಲ್ಲಿರುವಂತಹ ನಾಲ್ಕು ವೀರಗಲ್ಲು ಶಾಸನಗಳು ಮರಗಲ್ಲ ಎಂಬಲ್ಲಿ ನಡೆದಂತಹ ಆಕ್ರಮಣವನ್ನು ತಿಳಿಸುತ್ತಾ ಮರಗಲ್ಲ ಗಾವುಂಡನ ಸಂಬಂಧಿಕರು ಯುದ್ಧದಲ್ಲಿ ಮಡಿದಿರುವಂತೆ ಶಾಸನಗಳು ತಿಳಿಸುತ್ತದೆ. ಮರಗಲ್ಲ ಗಾವುಂಡನ ಹೆಂಡತಿಯ ಸಹೋದರರು ಕಾಳಗದಲ್ಲಿ ಮಡಿದಿರುವಂತೆ ಚಿತ್ರಿಸುತ್ತದೆ. ಎರಡನೆಯ ಶಾಸನದಲ್ಲಿ ಮರಗಲ ದೇವಲವೆದೆ ಚಾಮಯ್ಯ ಗಾವುಂಡನು ಹೋರಾಡಿ ಸತ್ತಿರುವಂತೆ ಶಾಸನವು ತಿಳಿಸುತ್ತದೆ. ಈ ಶಾಸನಗಳು ಕ್ರಿ.ಶ.೮೮೦ಕ್ಕೆ ಸಂಬಂಧಿಸಿದುದಾಗಿದ್ದು ನೊಳಂಬ ಮಯಿಂದಮರಸನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ.

೪.೮ ಬೇಟೆಯಲ್ಲಿ ಮಡಿದ ವೀರರ ನೆನಪಿಗಾಗಿ ನೆಟ್ಟಿರುವ ಶಾಸನಗಳು

ಸ್ಮಾರಕ ಶಾಸನಗಳಲ್ಲಿ ವೀರಗಲ್ಲು ಶಾಸನಗಳು ಪ್ರಮುಖವಾಗಿದೆ. ಡಾ.ಆರ್.ಶೇಷಶಾಸ್ತ್ರಿಗಳು ವೀರರನ್ನು ಎಂಟು ಗುಂಪುಗಳಾಗಿ ವಿಂಗಡಿಸಿದ್ದಾರೆ.[೬೭] ಇದರಲ್ಲಿ "ಬೇಟೆಯಲ್ಲಿ ಸತ್ತವೀರರು" ಎಂದು ಪ್ರತ್ಯೇಕವಾದಂತಹ ವೀರರ ವಿಭಾಗವಿದ್ದು ಪ್ರಾಣಿಗಳ ಬೇಟೆಯಲ್ಲಿ ವೀರಮರಣವನ್ನು ಹೊಂದಿದಂತಹ ವೀರರ ಮಾಹಿತಿಯನ್ನು ಒದಗಿಸಿದ್ದಾರೆ. ರಾಜಮನೆತನದವರ ಕಾಲದಲ್ಲಿ ರಾಜರು ಬೇಟೆಯಾಡಲು ಹೋಗುವುದು ಸಾಮಾನ್ಯವಾದಂತಹ ವಿಚಾರವಾಗಿತ್ತು. ರಾಜರು ಬೇಟೆಯಾಡಲು ಹೋದಂತಹ ಸಂದರ್ಭದಲ್ಲಿ ರಾಜನ ಬೇಟೆಗಾಗಿ ಸೈನಿಕರು ಅಥವಾ ವೀರರು ತಮ್ಮ ಪ್ರಾಣಗಳನ್ನು ಅರ್ಪಿಸುತ್ತಿದ್ದರು. ಕೆಲವೊಮ್ಮೆ ರಾಜನ ಅಥವಾ ಇತರರ ನಿಷ್ಠಾವಂತ ಪ್ರಾಣಿಗಳು ಪ್ರಾಣವನ್ನು ತ್ಯಜಿಸುತ್ತಿದ್ದವು. ಈ ಸಂದರ್ಭದಲ್ಲಿ ರಾಜನು ವೀರರ ನೆನಪಿಗಾಗಿ ಅಥವಾ ಪ್ರಾಣಿಗಳ ನೆನಪಿಗಾಗಿ ಸ್ಮಾರಕಗಳನ್ನು ನಿಲ್ಲಿಸುತ್ತಿದ್ದನು. ಬೇಟೆಯಲ್ಲಿ ಮಡಿದ ಪ್ರಾಣಿಗಳನ್ನು ಸ್ಮರಿಸುತ್ತಾ ಅಂತಹ ಪ್ರಾಣಿಗಳ ಚಿತ್ರ ಉಳ್ಳಂತಹ ವೀರಗಲ್ಲುಗಳನ್ನು ನೆಡುತ್ತಿದ್ದರು. ಕರ್ನಾಟಕದಲ್ಲಿ ಹಂದಿಬೇಟೆಯ ವೀರಗಲ್ಲುಗಳು, ಹುಲಿಯ ಬೇಟೆಯ ವೀರಗಲ್ಲುಗಳು, ಆನೆ ಬೇಟೆಯ ವೀರಗಲ್ಲುಗಳು ಹೆಚ್ಚಾಗಿ ದೊರೆಯುತ್ತವೆ.

೪.೮.೧ ಹಂದಿ ಬೇಟೆಯ ವೀರಗಲ್ಲುಗಳು

ಕರ್ನಾಟಕದ ಅರಸರು ಬೇಟೆಗೆ ಪ್ರಸಿದ್ಧರಾಗಿದ್ದರು. ಕಾಡು ಪ್ರಾಣಿಗಳ ಬೇಟೆಯಾಡುವುದರಲ್ಲಿ ನಿಷ್ಣಾತರಾಗಿದ್ದಂತಹ ರಾಜರು ಬೇಟೆಯಾಡುವುದನ್ನು ತಮ್ಮ ಹವ್ಯಾಸವನ್ನಾಗಿರಿಸಿಕೊಂಡಿದ್ದರು. ಕರ್ನಾಟಕದ

ಶಾಸನಗಳನ್ನು ಗಮನಿಸಿದರೆ ರಾಜರುಗಳು ಬೇಟೆಯಾಡಲು ಹೋಗುವಾಗ ತಮ್ಮ ಜೊತೆ ನಾಯಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ವಿಶೇಷವಾಗಿ ಹಂದಿಬೇಟೆಯ ಸಂದರ್ಭದಲ್ಲಿ ನಾಯಿಗಳನ್ನು ಬಳಸುತ್ತಿದ್ದರು. ಹಂದಿಗಳನ್ನು ಬೇಟೆಯಾಡುವಂತಹ ಸಂದರ್ಭದಲ್ಲಿ ತಮ್ಮಲ್ಲಿರುವಂತಹ ಬಲಿಷ್ಠ ನಾಯಿಗಳನ್ನು ಹಂದಿಗಳ ಮೇಲೆ ಅಥವಾ ಬೇಟೆಯಾಡಲಿರುವ ಪ್ರಾಣಿಗಳ ಮೇಲೆ ಬಿದ್ದು ಹೋರಾಡುವಂತೆ ಮಾಡಿ, ತಾನು ದೂರದಲ್ಲಿ ನಿಂತಿಕೊಂಡು ತನ್ನ ನಾಯಿಗಳಿಗೆ ಯಾವುದೇ ರೀತಿಯಾದಂತಹ ಪೆಟ್ಟಾಗದಂತೆ ಎಚ್ಚರ ವಹಿಸಿ ಪ್ರಾಣಿಯನ್ನೇ ಗುರಿಯಿಟ್ಟು ಶಸ್ತ್ರಪ್ರಯೋಗ ಮಾಡಿ ಪ್ರಾಣಿಗಳನ್ನು ಹಿಡಿಯುವುದು ಬೇಟೆಯ ಮಾರ್ಗವಾಗಿತ್ತು. 'ಶ್ವಗಣಿತಾಮಾರ್ಗ'[೬೮]ವೆಂದು ಕರೆಯಲ್ಪಡುತ್ತಿದ್ದಂತಹ ಈ ಮಾರ್ಗವನ್ನು ಕೋಲಾರ ಜಿಲ್ಲೆಯ ಶಾಸನಗಳಲ್ಲೂ ಗುರುತಿಸಬಹುದಾಗಿದೆ. ಆತಕೂರು ಶಾಸನವು ಹಂದಿಬೇಟೆಯಲ್ಲಿ ಮಡಿದ ನಾಯಿಗೆ ಗೌರವಾರ್ಥವಾಗಿ ನಿಲ್ಲಿಸಿರುವಂತಹ ಶಾಸನವಾಗಿದೆ. ಮುಳಬಾಗಿಲು ತಾಲ್ಲೂಕು ಅವನಿ ಹೋಬಳಿ ಮೇಲಾಗಾಣಿ ಗ್ರಾಮದಲ್ಲಿರುವ ವೀರಗಲ್ಲು ಶಾಸನವು[೬೯] ಹಂದಿಬೇಟೆಯ ಸಂದರ್ಭದಲ್ಲಿ ನಾಯಿಗಳನ್ನು ಬಳಸಿರುವುದನ್ನು ತಿಳಿಸುತ್ತದೆ.

ಸ್ವಸ್ತಿ ಶ್ರೀ ಅಣುವರಮರ . . . . .ಯಲೋಕನೆಂಬುದು ಎಳ್ಪತ್ತೈದು ಪಂದಿಯಂ ಕೊಂದತ್ತು ಇದುವರೆಸಿ

ಇನಾಯುಧಳಗನೆಂಬುದು ಪಿರಿಸಂದಿ ಮಗ ಇಪ್ಪತ್ತಾರು ಪಂದಿಯಂ ಕೊಂದನ್

ಕ್ರಿ.ಶ.೯೭೫ರ ಈ ಶಾಸನವು ಲೋಕ(ಗ) ಮತ್ತು ಧಳಗ ಎಂಬೆರೆಡು ನಾಯಿಗಳು ಹಂದಿಬೇಟೆಯಲ್ಲಿ ಸಹಾಯ ಮಾಡಿರುವಂತೆ ಶಾಸನವು ತಿಳಿಸುತ್ತದೆ. ಪಿರಿಸಂದಿ ಎನ್ನುವವನ ಮಗನು (ಹೆಸರನ್ನು ಪ್ರಸ್ತಾಪಿಸಿಲ್ಲ) ಈ ಎರಡೂ ನಾಯಿಗಳ ಸಹಾಯದಿಂದ ಹಂದಿಯಬೇಟೆಯನ್ನು ಮಾಡಿರುವನು. ಈ ಬೇಟೆಯಲ್ಲಿ ಲೋಕನೆಂಬ ನಾಯಿಯು ಎಪ್ಪತ್ತೈದು ಹಂದಿಗಳನ್ನು, ಧಳಗ ಎಂಬುವ ನಾಯಿಯು ಇಪ್ಪತ್ತಾರು ಹಂದಿಯನ್ನು ಕೊಂದಿದೆ. ಈ ಹಂದಿಕಾಳಗದಲ್ಲಿ ಕೊನೆಗೆ ನಾಯಿಗಳು ದೇಹತ್ಯಾಗವನ್ನು ಮಾಡಿದವು. ರಾಜನು ಇವುಗಳ ನೆನಪಿಗಾಗಿ ವೀರಗಲ್ಲನ್ನು ನಿರ್ಮಿಸಿರುವನು.

ಈ ಶಾಸನವು ಸಾಮಾಜಿಕ ವಿಚಾರವನ್ನಲ್ಲದೆಯೇ ಶಿಲ್ಪದಲ್ಲಿ ವಿವರಗಳನ್ನು ಹೊಂದಿರುವುದು ವಿಶೇಷವಾಗಿದೆ. ಶಾಸನದಲ್ಲಿ ಎರಡು ಭಾಗಗಳಲ್ಲಿದ್ದು ಮೇಲಿನ ಭಾಗದಲ್ಲಿ ಲೋಕನೆಂಬ ನಾಯಿಯ ವಿಚಾರವಿದ್ದರೆ, ಕೆಳಗಿನ ಭಾಗದಲ್ಲಿ ಧಳಗನೆಂಬ ನಾಯಿಯ ಉಲ್ಲೇಖವಿದೆ. ನಾಯಿಗಳು ಹಂದಿಯನ್ನು ಬೇಟೆಯಾಡುತ್ತಿರುವಂತಹ ಶಿಲ್ಪಗಳನ್ನು ಶಾಸನದಲ್ಲಿ ಕೆತ್ತಲಾಗಿದೆ. ನಾಯಿಗಳು ಹಂದಿಯನ್ನು ಬೇಟೆಯಾಡುತ್ತಿರುವಂತಹ ಶಾಸನಗಳಲ್ಲಿ ಅಪರೂಪವಾಗಿ ಈ ಶಾಸನಗಳು ದೊರಕುತ್ತವೆ.

೪.೮.೨ : ಹುಲಿಬೇಟೆಯ ವೀರಗಲ್ಲು ಶಾಸನ

ಸ್ಮಾರಕ ಶಾಸನಗಳಲ್ಲಿ ಅಪರೂಪವೆನಿಸುವಂತಹ ಹುಲಿಯಬೇಟೆಯ ಶಾಸನಗಳಿಗೆ ವಿಶೇಷವಾದಂತಹ ಸ್ಥಾನವಿದೆ. ರಾಜಮಹಾರಾಜರುಗಳು ಹುಲಿಬೇಟೆಗೆ ಪ್ರಸಿದ್ಧರಾಗಿದ್ದರು. ಹಂದಿಬೇಟೆಯಂತೆಯೇ ಹುಲಿಯ ಬೇಟೆಯ ಸಂದರ್ಭದಲ್ಲೂ ಕೆಲವೊಮ್ಮೆ ವೀರರನ್ನು ಬಳಸಿರುವುದು ಕಂಡುಬರುತ್ತದೆ. ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರದ ಹೋಬಳಿ ತಾವರೆಕೆರೆ ಗ್ರಾಮದಲ್ಲಿರುವಂತಹ ವೀರಗಲ್ಲು ಶಾಸನವು ವಿಶೇಷವಾದುದಾಗಿದೆ.[೭೦]

"ಮಂಡಿಕಲ್ಲ ಕಂಬಳದಾನ ವೆರ್ಮ್ಮೆಕಡಸಪೆರ್ಭುಲಿ ಕೊ

ಂಡೊಡೆ ಆ ಪುಲಿಯ ಕೊಲ್ವೆನೆಂದು ಪ್ರತಿಜ್ಞೆಕಡಿದು

ಜಾವದಿನೊಳಗೆ ಕೊನ್ದಂಪು

ಲಿಯುನಾಯು ಮೊಡಸತ್ತ . . . . . ."

ಕ್ರಿ.ಶ.೯೫೦ರ ಈ ಶಾಸನವು ಮಂಡಿಕಲ್ಲ ಎಂಬ ಸ್ಥಳ ಕಂಬಳದಾನ ಎನ್ನುವವನ ಪರಾಕ್ರಮವನ್ನು ಸ್ತುತಿಸುತ್ತಿದೆ. ಆ ಊರಿನಲ್ಲಿ ಎಮ್ಮೆಯ ಕಡಸನ್ನು (ಎಮ್ಮೆಯ ಕರು) ಹೆಬ್ಬುಲಿಯು ಕೊಂಡುಹೋಗಲು ಆ ಹುಲಿಯನ್ನು ಕೊಲ್ಲುತ್ತೇನೆಂದು ಪ್ರತಿಜ್ಞೆ ಮಾಡಿ ಒಂದು ಜಾಮ (ರಾತ್ರಿ)ದೊಳಗೆ ಆ ಹುಲಿಯನ್ನು ಕೊಂದನೆಂದು ಶಾಸನವು ತಿಳಿಸುತ್ತದೆ. ಈ ಬೇಟೆಯಲ್ಲಿ ವೀರನು ನಾಯಿಯ ಸಹಾಯವನ್ನು ಪಡೆದಂತೆ ತೋರುತ್ತದೆ. ನಾಯುಮೊಡ ಸತ್ತನೆಂದು ಹೇಳಿರುವುದರಿಂದ ಹುಲಿಯೊಂದಿಗೆ ನಾಯಿಯೂ ಮಡಿದಿರಬೇಕು. ಈ ಶಾಸನದಲ್ಲಿ ಹೆಬ್ಬುಲಿಯೊಂದಿಗೆ ಹೋರಾಡುತ್ತಿರುವ ನಾಯಿಯ ಚಿತ್ರವನ್ನು ಬಿಡಿಸಲಾಗಿದೆ. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ವೀರನ ಚಿತ್ರವಿರುತ್ತದೆ. ಆದರೆ ಈ ಶಾಸನದಲ್ಲಿ ವೀರನ ಚಿತ್ರವಿಲ್ಲದಿದ್ದರೂ ವೀರನು ಹೋರಾಡಿ ಮಡಿದು ವೀರಸ್ವರ್ಗವನ್ನು ಹೊಂದಿರುವನೆಂದು ಡಾ.ಆರ್.ಶೇಷಶಾಸ್ತ್ರಿಯವರ ಅಭಿಪ್ರಾಯವಾಗಿದೆ.[೭೧]

ಮುಳಬಾಗಿಲು ತಾಲ್ಲೂಕು ಆವನಿ ಬೆಟ್ಟದ ಏಕಾಂತ ರಾಮೇಶ್ವರದ ಪರಿಸರದಲ್ಲಿರುವ ತಮಿಳುಶಾಸನವು ವ್ಯಕ್ತಿಯೊಬ್ಬನು ಹುಲಿಯನ್ನು ಇರಿದು ತಾನೂ ವೀರಮರಣವನ್ನು ಹೊಂದಿದನೆಂದು ತಿಳಿಸುತ್ತದೆ. ಶಾಸನದಲ್ಲಿ ಹೆಚ್ಚಿನ ವಿವರಗಳು ದೊರೆಯುತ್ತಿಲ್ಲ.[೭೨] ತಮ್ಮ ಗಾವುಂಡನೆಂಬುವವನು ಹುಲಿಯ ಬೇಟೆಯಲ್ಲಿ ಹೋರಾಡಿ ಸತ್ತನೆಂಬ ಮಾಹಿತಿಯು ಇನ್ನೊಂದು ಶಾಸನದಲ್ಲಿ ದೊರಕುತ್ತದೆ. ಈತನು ಕಾಳಗದಲ್ಲಿ ಹುಲಿಯೊಂದಿಗೆ ಹೋರಾಡಿ ವೀರಮರಣವನ್ನು ಹೊಂದಿದನು. ಗಂಗ ದೊರೆ ಪೆರ್ಮಾನಡಿಗಳು ಈತನ ಪರಾಕ್ರಮವನ್ನು ಮೆಚ್ಚಿ ಈತನಿಗೆ ಐದು ಕಳನಿಯಷ್ಟು ಭೂಮಿಯನ್ನು ದತ್ತಿಯಾಗಿ ನೀಡಿರುವನೆಂದು ಶಾಸನವು ತಿಳಿಸುತ್ತದೆ.

ಕೋಲಾರ ತಾಲ್ಲೂಕು ವೇಮಗಲ್ಲು ಹೋಬಳಿ ಹೋಲೇರಹಳ್ಳಿ ಗ್ರಾಮದಲ್ಲಿರುವ ನಂಜೇಗೌಡರಿಗೆ ಸಂಬಂಧಿಸಿರುವಂತಹ ಹೊಲದಲ್ಲಿ ದೊರಕಿರುವಂತಹ ವೀರಗಲ್ಲು ಶಾಸನವು ವೀರನೊಬ್ಬನು ಹುಲಿಯನ್ನು ನೋಡಿ ಅದರೊಂದಿಗೆ ಹೋರಾಡಿ ಸತ್ತನೆಂದು ಶಾಸನವು[೭೩] ತಿಳಿಸುತ್ತದೆ. ಗಂಗದೊರೆ ಕೊಂಗಣಿ ಮುತ್ತರಸನ ಆಳ್ವಿಕೆಯ ೨೬ನೆಯ ವರ್ಷದ ಈ ಶಾಸನವು ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡುತ್ತದೆ.

೪.೮.೪ ಆನೆ ಕಾಳಗದಲ್ಲಿ ಮಡಿದ ವೀರರ ಶಾಸನ :-

ಶ್ರೀನಿವಾಸಪುರ ತಾಲ್ಲೂಕಿನ ಬಯ್ಯಪಳ್ಳಿಗೆಯ ಶಾಸನವು ಆನೆ ಕಾಳಗದಲ್ಲಿ ಸತ್ತ ವೀರನ ಮಾಹಿತಿಯನ್ನು ಒದಗಿಸುತ್ತದೆ. ನೊಳಂಬಾಧಿರಾಜನು, ಚೋಳ ಪೆರ್ಮಾನಡಿಗಳು ಮತ್ತು ಮಯಿಂದಮರಸ ಈ ಮೂವರು ಕಿರುದೊರೆಯಲ್ಲಿದ್ದು ರಾಜ್ಯಭಾರವನ್ನು ಮಾಡುತ್ತಿರಲು ಕಾಡುವಟ್ಟಿಯಲ್ಲಿ ಕಲೆಗೆಯ್ದನೆಂದು ಮುನಿದು ಮೂಡಲ ಗೋವನಾದ 'ಬರುಮ'ನು ಪಾಂಡ್ಯ ದೊರೆಯಾದ ವಲ್ಲಯರಸನ ಮೇಲೆ ಯುದ್ಧಕ್ಕೆ ನಿಂತು ಪರೆಯರೂರಿನ ತನಕ ಅಟ್ಟಿಸಿಕೊಂಡು ಹೋಗಿ, ನಂತರ ರಾಜನು ಹೊರಟು ಹೋದ ಮೇಲೆ ಆನೆಯೂರ ಮೇಲೆ ಆಕ್ರಮಣವನ್ನು ಮಾಡಿ ಬಾಣಪ್ರಯೋಗಗಳನ್ನು ಮಾಡಿ ಆನೆಗಳೊಡನೆ ಹೋರಾಡಿ ವೀರ ಮರಣವನ್ನು ಹೊಂದಿದನು. ಈತನಿಗೆ ರಾಜನು ಬಾಳ್ಗಚ್ಚನ್ನು ಕೂಡಾ ನೀಡಿರುವನು. ಬರುಮನೆಂಬುವವನು ರಾಜರಿಗೆ

ಸಂಬಂಧಿಸಿದಂತಹ ಉದ್ಯಾನವನವನ್ನು ನೋಡಿಕೊಳ್ಳುವಂತಹ ವ್ಯಕ್ತಿಯಾಗಿದ್ದು ಆತನು ರಕ್ಷಿಸುತ್ತಿದ್ದಂತಹ ಉಪವನವನ್ನು ಪಾಂಡ್ಯರಾಜನು ಹಾಳುಗೆಡವಿದಾಗ ವೀರನು ಈ ರೀತಿಯಾಗಿ ಯುದ್ಧಕ್ಕೆ ನಿಂತಿರಬಹುದೆಂದು ತಿಳಿಯಬಹುದು.

". . . . ತನ್ನ ಆಳ್ದೋಪಲ್ಲಿ ವಿಸಸ ಆನೆಯೂರ್
ತಾಗಿ ಎದ್ದೆ ವಿಳುದೂ ಆನೆಯಾ ಎರುದಟ್ಟ ಕಾದು
ಸತ್ತ . . . ."

ಆನೆಕಾಳಗವನ್ನು ತಿಳಿಸುವಂತಹ ಶಾಸನವು ಕೋಲಾರ ಜಿಲ್ಲೆಯಲ್ಲಿ ಇದೊಂದೇ ಆಗಿದೆ.[೨೪]

೪.೮.೪ ಕುದುರೆ ಕಾಳಗದಲ್ಲಿ ಸತ್ತ ವೀರರ ವೀರಗಲ್ಲು

ಕುದುರೆ ಕಾಳಗದಲ್ಲಿ ವೀರಮರಣವನ್ನು ಹೊಂದಿರುವಂತಹ ಒಬ್ಬ ವೀರನ ಮಾಹಿತಿಯು ಮುಳಬಾಗಿಲು ತಾಲ್ಲೂಕಿನಲ್ಲಿ ದೊರಕಿದೆ.[೨೫]

". . . . . . ಪಗೆ ಕಲಿಯೂರು ಮಗನ್ವಿಜತ್ತನ್ ಗಂಡ
ಪುಕರನ್ ಕಬಿಸಿದ ಕಾಳಗ ಅಣಿಯುಳ್ ಕುದುರೆಯುಳ್ ತಾಗಿಪಲರ
ನಿರುದು ಸತ್ತೊಡೆ ಮೆಚ್ಚಿ ಕಂಗವಾಡಿಯಾನ್ ಕಲ್ನಾಟು ಕೊಟ್ಟರು"

ಮಹಾಬಲಿ ಬಾಣರಸನ ಕಾಲದ ಈ ಶಾಸನವು ಗಂಗ ನೊಳಂಬರು ಬಾಣರೊಡನೆ ಯುದ್ಧಕ್ಕೆ ಬರಲು ಹೆಗೆಕಲಿಯಾರು ಎಂಬುವವನ ಮಗನಾದ ವಿಜತ್ತನ್ ಎಂಬುವವನು ಯುದ್ಧದಲ್ಲಿ ಹೋರಾಡುತ್ತಿರುವಾಗ ಕುದುರೆಯು ಅವನ ಮೇಲೆ ಎರಗಿ ಬಂದಾಗ ಕುದುರೆಯು ತಾಗಿ ವೀರಮರಣವನ್ನು ಹೊಂದಿದನೆಂದು ಶಾಸನವು ತಿಳಿಸುತ್ತದೆ. ಈತನ ಈ ಸಾಹಸವನ್ನು ಮೆಚ್ಚಿ ರಾಜನು ಕಂಗವಾಡಿಯನ್ನು ಕಲ್ನಾಟು ರೂಪದಲ್ಲಿ ನೀಡಿರುವನೆಂದು ತಿಳಿಸುತ್ತದೆ.

೪.೯ : ವಿಕ್ರಮಾದಿತ್ಯನ್ :-

ಮುಳಬಾಗಿಲು ತಾಲ್ಲೂಕಿನ ದುಗ್ಗಸಂದ್ರ ಹೋಬಳಿಯಲ್ಲಿ ದೊರಕಿರುವಂತಹ ಮೂರು ವೀರಗಲ್ಲು ಶಾಸನಗಳಲ್ಲಿ ವಿಕ್ರಮಾದಿತ್ಯ ಎಂಬುವವನ ಉಲ್ಲೇಖವು ಕಂಡುಬರುತ್ತದೆ. ವೀರಗಲ್ಲುಗಳಲ್ಲಿ ಉಕ್ತವಾಗಿರುವಂತಹ ವೀರರು ಯುದ್ಧದಲ್ಲಿ ಹೋರಾಡಿ ಸತ್ತರೆ ಅದನ್ನು ಬೆಸಗೆಯ್ದವನು ಈತನೆಂದು ಉಲ್ಲೇಖಿಸಿದೆ. ಬೆಸಗೈಯ್ಯುವುದು ಎಂದರೆ ಕೆತ್ತಿದವನೆಂದರ್ಥ[೨೬]

"ಕೊಯತೂರ ಕಾಸಿಗಂ ವಿಕ್ರಮಾದಿತ್ಯಂ ಬಹುಗುಣ ತೇಜನ್" ಎಂದು ಶಾಸನಗಳು[೨೭] ಈತನನ್ನು ಹೊಗಳಿದೆ. ವಿಕ್ರಮಾದಿತ್ಯನೆನ್ನುವವನು ಕೊಯತೂರಿನ ನಿವಾಸಿಯೂ, ಬಹುಗುಣ ಮತ್ತು ತೇಜಸಂಪನ್ನನೂ ಎಂದು ಹೊಗಳಿದೆ. 'ಕಾಸಿಗಂ' ಎಂದು ಹೇಳಿರುವುದರಿಂದ ಈತನ ನಿಜನಾಮವಾಗಿತ್ತು. ಈತನು ವಿಜಯಿತಾಚಾರಿಯ ಮಗನೆಂದು ಯಲ್ದೂರಿನ ಶಾಸನವು ತಿಳಿಸುತ್ತದೆ. ಈತನು ನೊಳಂಬ ದೊರೆಗಳ ಕಾಲದಲ್ಲಿ ಪ್ರಸಿದ್ಧನಾದಂತಹ ವೀರಗಲ್ಲು ಶಿಲ್ಪಿಯಾಗಿರಬೇಕು. ಈತನು ಕರ್ನಾಟಕದ ವೀರಗಲ್ಲುಗಳಲ್ಲಿ ಮಾತ್ರವಲ್ಲದೆಯೇ ನೆರೆರಾಜ್ಯವಾದ

ಆಂಧ್ರಪ್ರದೇಶದ ತೆಲುಗು ಶಾಸನಗಳಲ್ಲೂ[೭೮] ಕಂಡುಬರುತ್ತಿದ್ದಾನೆ. ಈತನು ಕೆತ್ತಿಸಿದಂತಹ ಶಾಸನಗಳೆಲ್ಲ ಪೂರ್ಣಕುಂಭದ ಶಿಲ್ಪಗಳ ವಿವರವು ಹೆಚ್ಚಾಗಿ ಕಂಡುಬರುತ್ತದೆ. ವೀರಗಲ್ಲು ಶಾಸನಗಳಲ್ಲಿ ಆ ಶಾಸನವನ್ನು ಖಂಡರಿಸಿದವನ ಅಥವಾ ನಿಲ್ಲಿಸಿರುವವನ ಹೆಸರು ಕಂಡುಬರುವುದು ವಿಶೇಷವಾಗಿದೆ.

ಉಪಸಂಹಾರ

ಕೋಲಾರ ಜಿಲ್ಲೆಯ ಸ್ಮಾರಕ ಶಾಸನಗಳು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದೆ. ಸ್ಮಾರಕಗಳ ಪ್ರಮುಖ ಪ್ರಕಾರಗಳಾದ ವೀರಗಲ್ಲು, ತುರುಗೋಳ್ ಮೊದಲಾದ ಶಾಸನಗಳಿಂದ ಕೋಲಾರ ಜಿಲ್ಲೆಯಲ್ಲಿದ್ದಂತಹ ಸಾಮಾಜಿಕ ವಾತಾವರಣವನ್ನು ನೋಡಬಹುದಾಗಿದೆ. ಸ್ಮಾರಕ ಶಾಸನಗಳ ಸಂಖ್ಯೆಯನ್ನು ಗಮನಿಸಿದರೆ ಶಾಸನಗಳು ಸಂಪದ್ಭರಿತವಾಗಿದೆ. ಕರ್ನಾಟಕದಲ್ಲಿ ಅತಿ ಹೆಚ್ಚು ವೀರಗಲ್ಲು ದೊರಕುವಂತಹ ಜಿಲ್ಲೆಗಳಲ್ಲಿ ಕೋಲಾರವೂ ಒಂದಾಗಿದೆ.

ಅಡಿಟಿಪ್ಪಣಿಗಳು

೧. ಕರ್ನಾಟಕದ ವೀರಗಲ್ಲುಗಳು, ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೫೪
೨. ಸುಭಾಷಿತ ರತ್ನ ಭಾಂಡಾಗಾರ
೩. ಭಗವದ್ಗೀತೆ ೨ನೇ ಅಧ್ಯಾಯ ೩ನೇ ಶ್ಲೋಕ
೪. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸ್ಮಾರಕ ಶಿಲ್ಪಗಳು, ಡಾ.ರು.ಮ.ಷಡಕ್ಷರಯ್ಯ
೫. E.C. X ಮುಳಬಾಗಿಲು –೨೨೯
೬. E.C. X ಬಂಗಾರುಪೇಟೆ – ೪೪
೭. E.C. X Supp ಬಂಗಾರುಪೇಟೆ – ೮೬
೮. E.C. X ಮುಳಬಾಗಿಲು – ೨೫೫
೯. E.C. XSupp ಕೋಲಾರ – ೭೮
೧೦. E.C. X ಶ್ರೀನಿವಾಸಪುರ – ೧೧೬
೧೧. E.C. X ಕೋಲಾರ – ೭೯
೧೨. E.C. X ಬಂಗಾರುಪೇಟೆ – ೪೫
೧೩. E.C. X ಮುಳಬಾಗಿಲು – ೨೪೮
೧೪. E.C. X Supp ಮುಳಬಾಗಿಲು – ೩೦೬
೧೪a. ನಂಬಿಹಳ್ಳಿಯ ಸಮರಶಿಲ್ಪ, ಇತಿಹಾಸ ದರ್ಶನ, ಸಂಖ್ಯೆ.೧೮
೧೫. E.C. X Supp ಮಾಲೂರು – ೧೮೭
೧೬. E.C. X Supp ಬಂಗಾರುಪೇಟೆ – ೯೩, ೯೪, ೯೫, ೯೬
೧೭. E.C. X ಕೋಲಾರ – ೭೯
೧೮. E.C. X ಮುಳಬಾಗಿಲು – ೨೪೮
೧೯. E.C. X Supp ಶ್ರೀನಿವಾಸಪುರ – ೧೧೬
೨೦. E.C. X ಕೋಲಾರ – ೯೦
೨೧. E.C. X ಮುಳಬಾಗಿಲು – ೨೫೫
೨೨. E.C. X Supp ಮಾಲೂರು – ೧೮೭
೨೩. E.C. X ಬಂಗಾರುಪೇಟೆ – ೧೩
೨೪. E.C. X ಬಂಗಾರುಪೇಟೆ – ೮೬
೨೫. E.C. X ಮುಳಬಾಗಿಲು – ೨೨೯
೨೬. E.C. X ಶ್ರೀನಿವಾಸಪುರ – ೪೦
೨೭. E.C. X ಮುಳಬಾಗಿಲು – ೨೨೮
೨೮. E.C. X ಬಂಗಾರುಪೇಟೆ – ೪೪
೨೯. E.C. X ಶ್ರೀನಿವಾಸಪುರ – ೧೭
೨೯a. ಕರ್ನಾಟಕದ ವೀರಗಲ್ಲುಗಳು, ಪು.ಸಂ.೮೨
೨೯b. E.C. X ಮುಳಬಾಗಿಲು – ೧೦೮
೨೯c. M.A.R. -1927
೩೦. ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಡಾ.ಚಿತ್ತರಂಜನ್, ಪು.ಸಂ.೮೯೬
೩೧. E.C. X ಮುಳಬಾಗಿಲು – ೯೭
೩೨. ಹಳಗನ್ನಡ ಶಬ್ದಾರ್ಥಕೋಶ, ಎನ್.ಬಸವಾರಾಧ್ಯ

೩೩. ವಿಕ್ರಮಾರ್ಜುನ ವಿಜಯಂ – ಪಂಪಸಂಪುಟ– ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ,
೩೪. ಕರ್ನಾಟಕದ ವೀರಗಲ್ಲುಗಳು – ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೧೮೭
೩೫. E.C. X ಮುಳಬಾಗಿಲು – ೨೬೧
೩೬. E.C. X ಮುಳಬಾಗಿಲು – ೨೬೨
೩೭. E.C. X ಮುಳಬಾಗಿಲು – ೨೪೪
೩೮. E.C. X ಮುಳಬಾಗಿಲು – ೯೨
೩೯. E.C. X ಬಂಗಾರುಪೇಟೆ – ೪೮
೪೦. E.C. X ಬಂಗಾರುಪೇಟೆ – ೪೦
೪೧. E.C. X ಬಂಗಾರುಪೇಟೆ – ೪೧
೪೨. E.C. X ಬಂಗಾರುಪೇಟೆ – ೪೩
೪೩. E.C. X ಬಂಗಾರುಪೇಟೆ – ೪೪
೪೪. E.C. X ಮುಳಬಾಗಿಲು – ೯೪
೪೫. E.C. X ಮುಳಬಾಗಿಲು – ೯೩
೪೬. E.C. X ಮುಳಬಾಗಿಲು – ೧೬೧, ೧೬೩
೪೭. E.C. X ಕೋಲಾರ –೨೩೩
೪೮. E.C. X ಬಂಗಾರುಪೇಟೆ – ೪೨
೪೯. E.C. X ಬಂಗಾರುಪೇಟೆ – ೬೪
೫೦. E.C. X ಮುಳಬಾಗಿಲು – ೧೦೮
೫೧. E.C. X ಕೋಲಾರ – ೬೧
೫೨. E.C. X ಕೋಲಾರ – ೧೮೨
೫೩. E.C. X ಕೋಲಾರ – ೨೩೨
೫೪. E.C. X ಕೋಲಾರ – ೧೪
೫೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ.ಎಂ.ಚಿದಾನಂದಮೂರ್ತಿ, ಪು.ಸಂ.೩೧೫
೫೬. E.C. X ಮುಳಬಾಗಿಲು – ೧೬೧
೫೭. E.C. X ಮುಳಬಾಗಿಲು – ೧೬೩
೫೮. E.C. X ಶ್ರೀನಿವಾಸಪುರ – ೧೪
೫೯. ಗದಾಯುದ್ಧ – ರನ್ನ – ೨– ೨೪
೬೦. ಬಾಣರಸರ ಶಾಸನಗಳು ಒಂದು ಅಧ್ಯಯನ – ಡಾ.ಪಿ.ವಿ.ಕೃಷ್ಣಮೂರ್ತಿ, ಪು.ಸಂ.೧೫೨
೬೧. E.C. X ಮುಳಬಾಗಿಲು – ೨೨೮
೬೨. E.C. X ಮುಳಬಾಗಿಲು – ೨೫೬
೬೩. E.C. X ಮುಳಬಾಗಿಲು – ೯೧
೬೪. E.C. X ಮುಳಬಾಗಿಲು – ೯೨
೬೫. E.C. X ಮುಳಬಾಗಿಲು – ೩೧
೬೬. E.C. X ಬಂಗಾರುಪೇಟೆ – ೯೪
೬೭. ಕರ್ನಾಟಕದ ವೀರಗಲ್ಲುಗಳು – ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೧೪೯
೬೮. E.C. X ಅದೇ, ಪು.ಸಂ.೧೭೨

೧೯. E.C. X ಮುಳಬಾಗಿಲು – ೮೫
೨೦. E.C. X ಮುಳಬಾಗಿಲು – ೧೬೨
೨೧. ಕರ್ನಾಟಕದ ವೀರಗಲ್ಲುಗಳು – ಡಾ.ಆರ್.ಶೇಷಶಾಸ್ತ್ರಿ, ಪು.ಸಂ.೧೨೮
೨೨. E.C. X ಮುಳಬಾಗಿಲು – ೨೮
೨೩. E.C. X ಕೋಲಾರ – ೨೮
೨೪. E.C. X ಶ್ರೀನಿವಾಸಪುರ – ೩೦
೨೫. E.C. X ಮುಳಬಾಗಿಲು – ೨೨೮
೨೬. ಹಳಗನ್ನಡ ಶಬ್ದಾರ್ಥಕೋಶ – ಎನ್.ಬಸವಾರಾಧ್ಯ, ಪು.ಸಂ.೧೨೬
೨೭. E.C. X ಮುಳಬಾಗಿಲು – ೧೬೧, ೧೬೨, ೧೬೩,
೨೮. E.C. X ಮುಳಬಾಗಿಲು – ೧೦೮

ಅಧ್ಯಾಯ –೫

ಸ್ಥಳನಾಮಗಳು

೫.೧ ಪೀಠಿಕೆ

೫.೨ ಕೋಲಾರ ತಾಲ್ಲೂಕಿನ ಸ್ಥಳನಾಮಗಳು

೫.೩ ಮಾಲೂರು ತಾಲ್ಲೂಕಿನ ಸ್ಥಳನಾಮಗಳು

೫.೪ ಬಂಗಾರಪೇಟೆ ತಾಲ್ಲೂಕಿನ ಸ್ಥಳನಾಮಗಳು

೫.೫ ಮುಳಬಾಗಿಲು ತಾಲ್ಲೂಕಿನ ಸ್ಥಳನಾಮಗಳು

೫.೬ ಶ್ರೀನಿವಾಸಪುರ ತಾಲ್ಲೂಕಿನ ಸ್ಥಳನಾಮಗಳು

೫.೭ ಅಗ್ರಹಾರಗಳು, ಮಂಗಲಗಳು

ಅಧ್ಯಾಯ – ೫

ಸ್ಥಳನಾಮಗಳು

೫.೧ ಪೀಠಿಕೆ

ಕೋಲಾರ ಜಿಲ್ಲೆಯಲ್ಲಿ ಸ್ಥಳನಾಮಗಳಿಗೆ ಸಂಬಂಧಿಸಿದಂತಹ ವಿಚಾರಗಳು ಪುಂಖಾನುಪುಂಖವಾಗಿ ದೊರೆಯುತ್ತವೆ. ಈ ಸ್ಥಳಗಳ ನಿಷ್ಪತ್ತಿಗೆ ಸಂಬಂಧಿಸಿದಂತೆ ಪೌರಾಣಿಕ ಹಿನ್ನೆಲೆಗಳೂ, ಐತಿಹಾಸಿಕ ದಾಖಲೆಗಳೂ ಮತ್ತು ಸಾಮಾಜಿಕ ಕಾರಣಗಳು ದೊರೆಯುತ್ತವೆ. ಹಾಗಾಗಿ ಸ್ಥಳನಾಮಗಳ ಅಧ್ಯಯನವನ್ನು ನೈಸರ್ಗಿಕ, ಸಾಮಾಜಿಕ, ವರ್ಣನಾತ್ಮಕ, ಐತಿಹಾಸಿಕ, ಅಂಶಗಳನ್ನು ಪುರಾಣಗಳ ಮತ್ತು ಜನಪದ ಕತೆಗಳ ಐತಿಹ್ಯಗಳನ್ನು ಆಧಾರವಾಗಿಟ್ಟುಕೊಂಡು ಮಾಡಲಾಗಿದೆ. ಅದೇ ರೀತಿಯಾಗಿ ಜಿಲ್ಲೆಗಳನ್ನು ತಾಲ್ಲೂಕುಗಳಾಗಿ ವಿಂಗಡಿಸಿ ಸ್ಥಳನಾಮಗಳ ಚರಿತ್ರೆಯನ್ನು ನೀಡಲಾಗಿದೆ. ಕೋಲಾರ ಜಿಲ್ಲೆಯು ಈಗ ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಶ್ರೀನಿವಾಸಪುರ ಮತ್ತು ಕೋಲಾರ ತಾಲ್ಲೂಕುಗಳನ್ನು ಒಳಗೊಂಡಿದೆ. ಚಿಕ್ಕಬಳ್ಳಾಪುರವೆಂಬ ನೂತನ ಜಿಲ್ಲೆಯ ಉದಯವಾದ ನಂತರ ಕೋಲಾರ ಜಿಲ್ಲೆಯ ವಿಸ್ತಾರವು ಕುಗ್ಗಿದೆ. ೧೧ ತಾಲ್ಲೂಕುಗಳನ್ನೊಳಗೊಂಡಿದಂತಹ ಈ ಜಿಲ್ಲೆಯು ೫ ಜಿಲ್ಲೆಗಳಾಗಿ ಪರಿವರ್ತಿತವಾಗಿದೆ. ಕರ್ನಾಟಕ ರಾಜ್ಯದ ಪೂರ್ವ ದಿಕ್ಕಿನಲ್ಲಿರುವಂತಹ ಈ ಜಿಲ್ಲೆಯು ಕರ್ನಾಟಕದ ಹೆಬ್ಬಾಗಿಲಿನಂತೆ ಕಂಗೊಳಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಹಲವಾರು ಸ್ಥಳಗಳನ್ನು ಐತಿಹ್ಯ, ಇತಿಹಾಸ, ಶಾಸನಾಧಾರಗಳೆಂದು ವಿಂಗಡಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೫.೨ ಕೋಲಾರ ತಾಲ್ಲೂಕಿನ ಸ್ಥಳನಾಮಗಳು

೫.೨.೧ ಕೋಲಾರ

ಕೋಲಾರವು ಜಿಲ್ಲಾ ಕೇಂದ್ರ ಮತ್ತು ತಾಲ್ಲೂಕು ಕೇಂದ್ರವಾಗಿದೆ. ರಾಜಧಾನಿ ಬೆಂಗಳೂರಿನಿಂದ ೭೨.ಕಿ.ಮೀ. ಪೂರ್ವಕ್ಕೆ ಇರುವಂತಹ ಈ ಜಿಲ್ಲಾ ಕೇಂದ್ರವು ಹಲವಾರು ಐತಿಹಾಸಿಕ ಅಂಶಗಳನ್ನು ತನ್ನ ಗರ್ಭದಲ್ಲಿ ಧರಿಸಿಕೊಂಡಿದೆ. ಕೋಲಾರ ತಾಲ್ಲೂಕು ನರಸಾಪುರ, ವಕ್ಕಲೇರಿ, ಸುಗಟೂರು, ಮಾದಮಂಗಲ ಮೊದಲಾದ ಸ್ಥಳಗಳನ್ನು ಹೊಂದಿದ್ದು ಇವುಗಳು ಐತಿಹಾಸಿಕವಾಗಿ ಮಹತ್ವವನ್ನು ಹೊಂದಿದೆ. ಕೋಲಾರ ಶಬ್ದದ ನಿಷ್ಪತ್ತಿಗೆ ಹಲವಾರು ಆಧಾರಗಳು ದೊರಕುತ್ತವೆ. ಇವುಗಳನ್ನು ಐತಿಹ್ಯ, ಇತಿಹಾಸ ಮತ್ತು ಶಾಸನಾಧಾರಗಳೆಂದು ವಿಂಗಡಿಸಬಹುದಾಗಿದೆ.

೫.೨.೨ ಐತಿಹ್ಯ

ಕೋಲಾರ ಜಿಲ್ಲೆಯಲ್ಲಿ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಘಟನೆಗಳು ನಡೆದಂತೆ ಕಂಡುಬರುತ್ತದೆ. ಅದರಲ್ಲೂ ಮಹಾಭಾರತವು ಪ್ರಧಾನ ಭೂಮಿಕೆಯನ್ನು ಹೊಂದಿದೆ. ಮಹಾಭಾರತದಲ್ಲಿ ಪ್ರಸಿದ್ಧವಾಗಿರುವಂತಹ ಪಂಚ ಪಾಂಡವರಲ್ಲಿ ಪ್ರಮುಖನಾದ ಅರ್ಜುನನ ಪುತ್ರನಾದ ಕಾರ್ತವೀರ್ಯರ್ಜುನನು, ಬಲಿಷ್ಠನಾಗಿದ್ದು ಕೋಲಾರ ಪ್ರದೇಶವನ್ನು ಏಕಚಕ್ರಾಧಿಪತಿಯಾಗಿ ಆಳುತ್ತಿದ್ದನು. ಈತನು ದತ್ತಾತ್ರೇಯ ಮುನಿಯನ್ನು

ಕುರಿತು ತಪಸ್ಸು ಮಾಡಿ ಸಾವಿರಾರು ತೋಳುಗಳಷ್ಟು ಬಲವನ್ನು ಪಡೆದಿದ್ದನು. ಈ ಶಕ್ತಿಯಿಂದಲೇ ಆತನು ಲೋಕಕಂಟಕನಾಗಿದ್ದನು.[೧]

ಇದೇ ಸಂದರ್ಭದಲ್ಲಿ ವಿಶ್ವಾಮಿತ್ರ ಋಷಿಯ ಮಿತ್ರನಾಗಿದ್ದಂತಹ ಜಮದಗ್ನಿ ಋಷಿಯು ಕೋಲಾರ ಪ್ರದೇಶದಲ್ಲಿ ವಾಸವಾಗಿದ್ದನು. ಆತನು ಕೋಲಾರ ಪ್ರದೇಶದಲ್ಲಿ ಆಶ್ರಯವನ್ನು ಕಟ್ಟಿಕೊಂಡು ಪ್ರಸೇನಜಿತನ ಮಗಳಾದ ರೇಣುಕಾದೇವಿಯನ್ನು ಮದುವೆಯಾಗಿ ಐದು ಜನ ಮಕ್ಕಳನ್ನು ಪಡೆದಿದ್ದನು. ಇವರಲ್ಲಿ ಕೊನೆಯವನು ಪ್ರಸಿದ್ಧನಾಗಿದ್ದಂತಹ ಪರಶುರಾಮನು. ಜಮದಗ್ನಿಯ ಬಳಿ ದೇವೇಂದ್ರನ ಬಳಿಯಿದ್ದ 'ಸುರಭಿ' ಎಂಬ ಕಾಮಧೇನುವಿತ್ತು. ಹೆಸರೇ ಹೇಳುವಂತೆ ಇದು ಕೇಳಿದ್ದನ್ನು ಕೊಡುವಂತಹ ಕಾಮಧೇನುವಾಗಿತ್ತು.

ಒಂದು ಬಾರಿ ಕಾರ್ತವೀರ್ಯಾರ್ಜುನನು ಬೇಟೆಯಾಡಿ ಬಳಲಿದಾಗ ಜಮದಗ್ನಿ ಆಶ್ರಮವನ್ನು ಪ್ರವೇಶಿಸಿದನು. ಜಮದಗ್ನಿಯು ಆಶ್ರಮಕ್ಕೆ ಬಂದ ರಾಜನಿಗೆ ಬೇಕಾದಂತಹ ಅತಿಥಿ ಸತ್ಕಾರವನ್ನು ಮಾಡಿದನು. ಆದರೆ ಆಶ್ರಮದಲ್ಲಿ ಇಷ್ಟೆಲ್ಲಾ ಸೌಲಭ್ಯಗಳನ್ನು ಮತ್ತು ಜಮದಗ್ನಿ ಮಹರ್ಷಿಯ ಬಳಿಯಿರುವ ಕಾಮಧೇನುವನ್ನು ಗಮನಿಸಿ ಅದನ್ನು ಪಡೆಯಲು ಪ್ರಯತ್ನಿಸಿದನು. ಕೊನೆಗೆ ಬಲವಂತವಾಗಿ ಕಾಮಧೇನುವನ್ನು ಅಪಹರಿಸಿಕೊಂಡು ಹೋಗಲು ಪ್ರಯತ್ನಿಸಿದನು. ಈ ಸಂದರ್ಭದಲ್ಲಿ ಅಲ್ಲಿಗೆ ಬಂದಂತಹ ಪರಶುರಾಮನು ಕಾರ್ತವೀರ್ಯಾರ್ಜುನನ ಸಾವಿರ ಕೈಗಳನ್ನು ಕತ್ತರಿಸಿ ಆತನನ್ನು ಸಾಯಿಸಿದನು. ಈ ಘಟನೆಯನ್ನು ತಿಳಿದಂತಹ ಕಾರ್ತವೀರ್ಯನ ಮಕ್ಕಳು ಆಶ್ರಮದಲ್ಲಿ ಪರಶುರಾಮನು ಇಲ್ಲದಂತಹ ಸಂದರ್ಭದಲ್ಲಿ ಬಂದು ಜಮದಗ್ನಿಯನ್ನು ಕೊಲ್ಲುತ್ತಾರೆ. ಅನ್ಯಾಯವಾಗಿ ಮರಣ ಹೊಂದಿದ ತನ್ನ ಗಂಡನನ್ನು ನೋಡಿ ಪತ್ನಿ ರೇಣುಕಾದೇವಿಯು ಮನನೊಂದು ತನ್ನ ಪತಿಯ ಚಿತೆಯೊಂದಿಗೆ ಸಹಗಮನ ಮಾಡುತ್ತಾಳೆ.

ಪರಶುರಾಮನು ಆಶ್ರಮಕ್ಕೆ ಮರಳಿ ಬಂದು ಕೋಪದಿಂದ ಪ್ರಳಯಾಂತಕಾರಿಯಂತೆ ವರ್ತಿಸಿ ಕಾರ್ತವೀರ್ಯಾರ್ಜುನನ ಅಷ್ಟೂ ಪರಿವಾರದ ಜೊತೆಗೆ ಕ್ಷತ್ರಿಯ ಕುಲವನ್ನು ಸಂಹಾರ ಮಾಡುತ್ತೇನೆಂದು ನಿರ್ಧರಿಸಿ ಶಪಥವನ್ನು ಮಾಡುತ್ತಾನೆ. ಪರಶುರಾಮನ ಈ ಶಪಥದಿಂದ ಆ ಪರಿಸರದಲ್ಲೆಲ್ಲಾ ಕೋಲಾಹಲವೇ ಉಂಟಾಯಿತು. ಪರಶುರಾಮನ ಈ ಶಪಥದಿಂದ ಉಂಟಾದ 'ಕೋಲಾಹಲ'ವು ಘಟಿಸಿದಂತಹ ಈ ಸ್ಥಳವು 'ಕೋಲಾಹಲ'ವೆಂದಾಯಿತು. ಈ ಕೋಲಾಹಲ ಶಬ್ದವೇ ಮುಂದೆ ಕೋಲಾರವೆಂದಾಯಿತು ಎಂದು ಐತಿಹ್ಯವಿದೆ.

ಇನ್ನೊಂದು ಐತಿಹ್ಯವು ಈ ರೀತಿಯಾಗಿದೆ. ದೇವಿಯು ಮಹಿಷಾಸುರನನ್ನು ಸಂಹಾರ ಮಾಡುವಂತಹ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಘೋರ ಯುದ್ಧವು ನಡೆಯಿತು. ಈ ಸಂದರ್ಭದಲ್ಲಿ ಬಹಳ ಕೋಲಾಹಲವು ಉಂಟಾಯಿತು. ಆದುದರಿಂದ ಈ ಸ್ಥಳಕ್ಕೆ ಕೋಲಾಹಲವೆಂಬ ಹೆಸರು ಬಂದಿತೆಂದು ಜನರ ಅಭಿಪ್ರಾಯವಾಗಿದೆ. ಈ ದೇವಿಯ ಅಂಶವೇ ರೇಣುಕಾದೇವಿಯಾಗಿ ನೆಲೆಸಿದ್ದಾಳೆಂದು ಪ್ರತೀತಿ ಇದೆ.[೨]

ಐತಿಹ್ಯ ಮತ್ತು ಇತಿಹಾಸವು ಬೆರೆತುಕೊಂಡಿರುವಂತಹ ವಿಚಾರವು ಕೋಲಾರ ಸ್ಥಳಕ್ಕೆ ಸಂಬಂಧಿಸಿದಂತೆ ಇದೆ. ಒಂದು ಕಾಲದಲ್ಲಿ ಚೋಳರು ಕರ್ನಾಟಕದ ಪೂರ್ವಭಾಗವನ್ನು ಅಂದರೆ ಈಗಿನ ಕೋಲಾರ ಜಿಲ್ಲೆಯನ್ನು ಆಳುತ್ತಿದ್ದರು. ಚೋಳ ದೊರೆ ಉತ್ತಮ ಚೋಳನು (ಕ್ರಿ.ಶ.೯೬೯ರಿಂದ ೯೮೫) ಆಳ್ವಿಕೆ ನಡೆಸುತ್ತಿರಲು ಈಗಿನ ಕೋಲಾರ ಎಂಬ ಪ್ರದೇಶದಲ್ಲಿ ಕೋಲನೆಂಬ ಗೊಲ್ಲನಿಗೆ ಗದ್ದೆಯನ್ನು ಉಳುತ್ತಿರುವಂತಹ ಸಂದರ್ಭದಲ್ಲಿ ಆತನ (ಹಲ) ನೇಗಿಲಿಗೆ ನಿಧಿಯೊಂದು ದೊರೆಯಿತು. ಈ ನಿಧಿಯು ದೊರಕಿದಂತಹ ವಿಷಯವು ರಾಜನಿಗೆ ತಲುಪಿದಾಗ ಆ ನಿಧಿಯನ್ನು ಹಿಡಿದುಕೊಂಡು ಕಂಚಿಗೆ ಬರಲು ಆಜ್ಞಾಪಿಸಿದನು. ಆದರೆ ಅದೇ ದಿನ ರಾತ್ರಿಯಲ್ಲಿ

ರೇಣುಕಾದೇವಿಯು ಕೋಲಾರಮ್ಮನ ದೇವಿಯ ರೂಪದಲ್ಲಿ ಬಂದು ನಿಧಿಯ ವಿಚಾರವಾಗಿ ಎಚ್ಚರಿಸುತ್ತಾಳೆ. ಇದಕ್ಕೆ ಹೆದರಿದಂತಹ ಉತ್ತಮಚೋಳನು ಆ ನಿಧಿಯನ್ನು ತರಬಾರದೆಂದು ಆಜ್ಞಾಪಿಸಿ, ಅದನ್ನು ಅಲ್ಲಿಯೇ ವಿನಿಯೋಗಿಸುವಂತೆ ತಿಳಿಸಿದನು. ದೇವಿಯ ಆಜ್ಞೆಯ ಮೇರೆಗೆ ಆ ನಿಧಿಯನ್ನು ಕೋಲಾರಮ್ಮ ದೇವಿಯ ಗುಡಿಯನ್ನು ನಿರ್ಮಿಸಲು ಬಳಸಲಾಯಿತೆಂದು ಪ್ರತೀತಿಯಿದೆ. ಹಲ ವೆಂದರೆ ನೇಗಿಲು ಎಂದರ್ಥ. ಹಾಗಾಗಿ ಕೋಲನೆಂಬ ಗೊಲ್ಲನ ನೇಗಿಲಿಗೆ ದೊರಕಿದಂತಹ ನಿಧಿಯಿಂದ ನಿರ್ಮಿಸಲ್ಪಟ್ಟಂತಹ ಪ್ರದೇಶಕ್ಕೆ ಕೋಲಾಹಲವೆಂದು ಹೆಸರಾಯಿತು. ಅದಲ್ಲದೆಯೇ ರಾಜನು ನಿಧಿಯನ್ನು ಕಂಡು ಹಿಡಿದಂತಹ ಕೋಲನನ್ನು ಕರೆಯಿಸಿ ಆತನಿಗೆ ಮುಳಬಾಗಿಲು, ಮರಗಂಡೆ ಮತ್ತು ಬೇತಮಂಗಲದ ಅಧಿಕಾರವನ್ನು ವಹಿಸಿಕೊಟ್ಟನು ಎಂದು ಪ್ರತೀತಿಯಿದೆ. ಆದರೆ ಉತ್ತಮಚೋಳನಿಗೆ ಸಂಬಂಧಿಸಿದಂತಹ ಯಾವುದೇ ಶಾಸನಗಳು ದೊರೆಯದೇ ಇರುವುದರಿಂದ ಈ ಇತಿಹಾಸಕ್ಕೆ ಯಾವುದೇ ಆಧಾರಗಳು ದೊರೆಯುವುದಿಲ್ಲ.[೩]

ಸ್ಥಳನಾಮಗಳ ಅಧ್ಯಯನವನ್ನು ಮಾಡುವಂತಹ ಸಂದರ್ಭದಲ್ಲಿ ಕೋಲಾರ ಶಬ್ದವನ್ನು ಜಲವಾಚಿ ಶಬ್ದದೊಂದಿಗೂ ಹೊಂದಿಸುತ್ತಾರೆ. ಕೊಳ+ಹಳ್ಳ ಎಂಬುವುದು ಕೋಲಾರವೆಂಬ ಸಂಕ್ಷಿಪ್ತರೂಪವನ್ನು ಪಡೆದಿರಬಹುದು. ಅದಲ್ಲದೆಯೇ ಜಲ ಸೂಚಕ ಶಬ್ದಗಳುಳ್ಳ (ಸಮುದ್ರ, ಸಂದ್ರ, ಸಾಗರ, ಕೆರೆ, ಚೆರವು, ಮಡಗು ಮೊದಲಾದವು) ಪ್ರದೇಶಗಳು ಕೋಲಾರ ಜಿಲ್ಲೆಯಲ್ಲಿ ಕಂಡುಬಂದಿವೆ. ಜಲಸಂಧಿಯಾಗಿ ಗಮನಿಸಿದಾಗ ಡಾ.ಪಿ.ವಿ.ಕೃಷ್ಣಮೂರ್ತಿಯವರ ಅಭಿಪ್ರಾಯವನ್ನು ಕೋಲಾರ ಶಬ್ದಕ್ಕೆ ಹೊಂದಿಸಬಹುದಾಗಿದೆ. ಅವರು ತಿಳಿಸಿರುವಂತೆ ಕುವಳಾಲ ಎಂಬ ಶಬ್ದವನ್ನು ಕುವ್+ಆಳ ಎಂದು ವಿಭಾಗಿಸಿದರೆ ಕುವಲ್ ಶಬ್ದಕ್ಕೆ ಕೈನೈದಿಲೆ ಎಂದೂ ಆಲ ಶಬ್ದಕ್ಕೆ ಜಲವೆಂದು ಅರ್ಥವಿದೆ. ಹಾಗಾಗಿ ಹೆಚ್ಚಾಗಿ ನೀರಿನಲ್ಲಿ (ಕೊಳಗಳಲ್ಲಿ) ಕನ್ನೈದಿಲೆಗಳು ಬೆಳೆಯುವಂತಹ ಸ್ಥಳವು ಕುವಳಾಲವೆಂದು ಹೆಸರು ವಾಸಿಯಾಗಿರಬಹುದು. ಆಲದ ಮರಗಳು ಹೆಚ್ಚಾಗಿ ಬೆಳೆಯುವುದರಿಂದಲೂ ಈ ಸ್ಥಳಕ್ಕೆ ಕುವಳಾಲ ಎಂದೂ ಅಭಿಪ್ರಾಯವಿದೆ. ಡಾ.ಬಿ.ರಾಜಶೇಖರಪ್ಪನವರು 'ಕೋಲಾರ ಸ್ಥಳನಾಮ ಒಂದು ಅಧ್ಯಾಯ' ಎಂಬ ಲೇಖನದಲ್ಲಿ ಕೋಲಾರ ಶಬ್ದದ ನಿಷ್ಪತ್ತಿಯ ಕುರಿತಾಗಿ ಮಾಹಿತಿಯನ್ನು ನೀಡಿದ್ದಾರೆ.[೪]

೫.೨.೩ ಕೋಲಾರಮ್ಮನ ದೇವಾಲಯ

ಕೋಲಾರಮ್ಮನ ಕುರಿತಾಗಿಯೂ ಹಲವಾರು ಐತಿಹ್ಯಗಳು, ಇತಿಹಾಸಗಳು ಪ್ರಚಲಿತದಲ್ಲಿವೆ. ಒಮ್ಮೆ ದಕ್ಷಪ್ರಜಾಪತಿಯು ಯಜ್ಞ ಮಾಡುತ್ತಿದ್ದ ಸಂದರ್ಭದಲ್ಲಿ ಆತನ ಮಗಳು, ಸತಿಯು ಅಲ್ಲಿಗೆ ಬರುವಳು. ತನಗೂ ಮತ್ತು ತನ್ನ ಪತಿಯಾದ ಶಿವನಿಗೆ ಆಹ್ವಾನ ನೀಡದಿರುವುದರಿಂದ ಸಿಟ್ಟುಗೊಂಡು ಅದೇ ಯಜ್ಞ ಕುಂಡದಲ್ಲಿ ಹಾರಿ ಪ್ರಾಣಬಿಟ್ಟಳು. ಈ ವಾರ್ತೆಯನ್ನು ಕೇಳಿದ ಶಿವನು ತನ್ನ ಜಟೆಯನ್ನು ನೆಲಕ್ಕೆ ಅಪ್ಪಳಿಸಿದ ಸಂದರ್ಭದಲ್ಲಿ ವೀರಭದ್ರನು ಜನಿಸಿದನು. ಈ ವೀರಭದ್ರನು ದಕ್ಷ ಪ್ರಜಾಪತಿಯ ಯಜ್ಞವನ್ನು ನಾಶ ಮಾಡಿದನು. ಶಿವನಾದರೋ ತನ್ನ ಪತ್ನಿಯ ಮರಣದಿಂದ ದುಃಖಿತನಾಗಿ ಅವಳ ಕಳೆಬರವನ್ನು ತನ್ನ ಹೆಗಲ ಮೇಲೆ ಹಿಡಿದುಕೊಂಡು ಅಲೆದಾಡಿದನು. ಶಿವನ ಈ ಅವಸ್ಥೆಯನ್ನು ಕಂಡು ವಿಷ್ಣುವು ಅವನನ್ನು ತಡೆಯುವ ಸಲುವಾಗಿ ಉಪಾಯದಿಂದ ಕಳೆಬರದ ಒಂದೊಂದು ಭಾಗವನ್ನು ಕಡಿದು ಹಾಕಿದನು. ಅವು ಕೆಳಗೆ ಬಿದ್ದಂತಹ ಸ್ಥಳಗಳು ದೇವಿಯ ಶಕ್ತಿಪೀಠಗಳಾಗಿ ಪ್ರಸಿದ್ಧವಾದವು. ಅಂತಹ ಒಂದು ಶಕ್ತಿಪೀಠದಲ್ಲಿ ಕೋಲಾರಮ್ಮನು ಒಬ್ಬಳು ಎಂದು ಪ್ರತೀತಿಯಿದೆ. ಕೋಲಾರಮ್ಮನ ಕುರಿತಾಗಿರುವಂತಹ ಉಲ್ಲೇಖಗಳು ವಿಜಯನಗರೋತ್ತರ ಶಾಸನಗಳಲ್ಲಿ ಲಭಿಸುತ್ತದೆ.

ಕೋಲಾರ ಶಬ್ದದ ಉಲ್ಲೇಖ ಇರುವಂತಹ ಶಾಸನಗಳು ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ವಿಜಯನಗರದ ರಾಜರುಗಳಿಗೆ ಸಂಬಂಧಿಸಿದುದಾಗಿದೆ. ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಶಾಸನಗಳು ವಿಜಯನಗರೋತ್ತರ ಕಾಲವನ್ನು ಉಲ್ಲೇಖಿಸುತ್ತದೆ. ಹಿಂದೆ ತಿಳಿಸಿದಂತೆ ಕೋಲಾರ ಜಿಲ್ಲೆಯಲ್ಲಿ ೩೦ಕ್ಕೂ ಅಧಿಕ ಶಾಸನಗಳಲ್ಲಿ ಕೋಲಾರ ಶಬ್ದವು ಪ್ರಯೋಗವಾಗಿದ್ದು ಕೋಲಾರ ಶಬ್ದದ ವಿಕಾಸದ ವಿವಿಧ ಹಂತಗಳನ್ನು ಗಮನಿಸಬಹುದಾಗಿದೆ. 'ಕುವಳಾಲ' ಶಬ್ದವು ಹೆಚ್ಚಾಗಿ ಗಂಗರ ಶಾಸನಗಳಲ್ಲಿ ಕಂಡುಬಂದಿದೆ. ಕೋಲಾಹಲವೆಂಬ ರೂಪವು 'ಕುವಳಾಲ'ವೆಂಬ ರೂಪಾಂತರವನ್ನು ಪಡೆದಿದೆ.

ಕೋಲಾರ ತಾಲ್ಲೂಕಿನ ಮಡಿವಾಳ ಗ್ರಾಮದ ಶಾಸನವು ನೀತಿಮಾರ್ಗ ಕೊಂಗುಣಿವರ್ಮ ಧರ್ಮ ಮಹಾರಾಜನು ಕೊವಳಾಲಪುರವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸಿದೆ.[೫] ಈ ಶಾಸನವು ಗಂಗರನ್ನು ನಂದಿಗಿರಿನಾಥರೆಂದು ಉಲ್ಲೇಖಿಸಿದೆ. ಈ ಸಂದರ್ಭದಲ್ಲಿ ಗಂಗ ಅರಸರು ನಂದಿಗಿರಿಯನ್ನು ಪ್ರಧಾನವಾಗಿಟ್ಟುಕೊಂಡು ಕೋಲಾರ ಪ್ರದೇಶವನ್ನು ಆಳುತ್ತಿದ್ದರೆಂದು ತೀರ್ಮಾನಿಸಬಹುದಾಗಿದೆ. ಶ್ರೀಪುರುಷನ ೪೨ನೆಯ ವರ್ಷದ ಆಳ್ವಿಕೆಯನ್ನು ತಿಳಿಸುವಂತಹ ಮುಳಬಾಗಿಲು ತಾಲ್ಲೂಕು ಮೇಲಗಾಣಿಯ ಶಾಸನವು ಕೋಲಾರವನ್ನು 'ಕುವಳಾಲನಾಡು'-೩೦೦ ಎಂದು ಉಲ್ಲೇಖಿಸಿದೆ. ಈ ಪ್ರದೇಶವನ್ನು ಶ್ರೀಪುರಷನ ಮಗನಾದ ದುಗ್ಗಮಾರನು ಆಳುತ್ತಿದ್ದನು. ಕುವಳಾಲ ನಾಡು-೩೦೦, ಗಂಗ-೬೦೦೦ ನಾಡಿನ ಒಂದು ಭಾಗವಾಗಿತ್ತೆಂದು ಶಾಸನವು ತಿಳಿಸುತ್ತದೆ.[೬]

ಮುಳಬಾಗಿಲು ತಾಲ್ಲೂಕು ಬಿಸ್ಸನಹಳ್ಳಿಯ ಗ್ರಾಮದ ಶಾಸನವು[೭]. 'ಕುವಳಾಲ-ನಾಡು-೩೦೦'ನ್ನು ಉಲ್ಲೇಖಿಸಿದೆ. ದುಗ್ಗಮಾರ ಎರೆಯಪ್ಪನು ಕುವಳಾಲ-೩೦೦ನ್ನು ಆಳುತ್ತಿದ್ದನು ಎಂದು ಉಲ್ಲೇಖಿಸಿದೆ. ದುಗ್ಗಮಾರ ಎರೆಯಪ್ಪನ ಕಾಲವನ್ನು ನಿರ್ಧರಿಸಿದ್ದಾರೆ. ಶ್ರೀಪುರುಷನ ಆಳ್ವಿಕೆಯ ಕಾಲದಲ್ಲಿ ಕುವಳಾಲ-೩೦೦ ಎಂಬ ಉಪವಿಭಾಗವು ಪ್ರಸಿದ್ಧವಾಗಿದ್ದು ೩೦೦ಗ್ರಾಮಗಳನ್ನು ಹೊಂದಿದ್ದಂತಹ ಆಡಳಿತ ವಿಭಾಗವಾಗಿತ್ತೆಂದು ಊಹಿಸಬಹುದಾಗಿದೆ.

ಕೋಲಾರ ಜಿಲ್ಲೆಯು ಪ್ರಾದೇಶಿಕವಾಗಿ ಕಾಲಕಾಲಕ್ಕೆ ವ್ಯತ್ಯಾಸವನ್ನು ಬದಲಾವಣೆಗಳನ್ನು ಮತ್ತು ಅಭಿವೃದ್ಧಿಯನ್ನು ಹೊಂದಿರುವಂತೆಯೇ 'ಕೋಲಾರ' ಎಂಬ ಹೆಸರೂ ಕೂಡ ಹಂತ ಹಂತವಾಗಿ ಬದಲಾಗುತ್ತಾ ಬಂದಿದೆ. ಇದಕ್ಕೆ ಸಾಕ್ಷಿಯಾಗಿ ಈ ಪ್ರದೇಶದಲ್ಲಿ ದೊರಕುವಂತಹ ಶಾಸನಗಳು ಪ್ರಮುಖವಾಗಿವೆ. ಅಂತಹ ಕೆಲವು ಶಾಸನಗಳನ್ನು ಇಲ್ಲಿ ಪ್ರಮುಖವಾಗಿ ಗಮನಿಸಬಹುದಾಗಿದೆ.

ಕೋಲಾರ ತಾಲ್ಲೂಕಿನ ವಕ್ಕಲೇರಿ ಹೋಬಳಿ ಮಡಿವಾಳ ಗ್ರಾಮದ ಮೂಲೇಶ್ವರ ದೇವಸ್ಥಾನದಲ್ಲಿರುವ ವೀರಗಲ್ಲಿನಲ್ಲಿ 'ಕೋಲಾರ' ಶಬ್ದದ ಪ್ರಯೋಗವು ದೊರೆಯುತ್ತದೆ. ಶಾಸನವು 'ಕೊವಳಾಲ ಪುರ'ವೆಂದು ಸ್ಥಳವನ್ನು ಪ್ರತಿಪಾದಿಸುತ್ತದೆ. ಗಂಗ ಅರಸ ನೀತಿಮಾರ್ಗ ಕೊಂಗುಣಿ ವರ್ಮ ಧರ್ಮ ಮಹಾರಾಜಾಧಿರಾಜ ಪರಮೇಶ್ವರನು ಈ ಸ್ಥಳದ ಅಧೀಶ್ವರನೆಂದು ಹೇಳುತ್ತಿದೆ. ಈ ಪ್ರದೇಶವು ಗಂಗ-ಸಾಸಿರ (ಸಾವಿರ) ನಾಡಿನೊಳಗೆ ಸೇರಿತ್ತು ಎಂದು ಈ ಶಾಸನವು ತಿಳಿಸುತ್ತದೆ.[೮]

ಕೋಲಾರ ತಾಲ್ಲೂಕಿನ ಕೋಲಾರ ಹೋಬಳಿಯಲ್ಲಿರುವ ಕೋಡಿಹಳ್ಳಿ ಗ್ರಾಮದಲ್ಲಿರುವ ಒಂದು ಬಂಡೆಗಲ್ಲು ಶಾಸನವು 'ಕೋಲಾಲ'ವೆಂದು ಗ್ರಾಮ ನಾಮವನ್ನು ಹೇಳುತ್ತಿದೆ. ಈ ಪ್ರದೇಶದ ಅಧಿಪತಿ 'ತಿರುಮಲ'ನೆಂದು ಆತನಿಗೆ ಸಂಬಂಧಿಸಿದ ಹೊಲದ ಮಾಹಿತಿಯನ್ನು ಶಾಸನವು ಹೇಳುತ್ತಿದೆ.[೯]

ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ಜೋಡಿ ಯಾರಂಗಟ್ಟಿ ಗ್ರಾಮದಲ್ಲಿರುವ ಒಂದು ಅಸ್ಪಷ್ಟ ಶಾಸನದಲ್ಲಿ ಕೋಳಾಲ ಗ್ರಾಮದ ಉಲ್ಲೇಖವಿದೆ. ಶಾಸನವು ಕೋಲಾರ ಎಂಬ ಸ್ಥಳನಾಮವನ್ನು ಕೋಳಾಲವೆಂದು ಹೇಳಿದ್ದು ಇಲ್ಲಿ ಒಂದು ಕೋಟೆಯೂ ಇತ್ತೆಂದು ಪ್ರತಿಪಾದಿಸಿದೆ. ಅದಲ್ಲದೆ ಕೋಳಾಲಕೋಟೆಯನ್ನು ಶಾಂಬಯನಾಯಕನು ಆಳುತ್ತಿದ್ದನೆಂದು ಶಾಸನವು ಸೂಚಿಸಿದೆ.[೧೦]

ಮಾಲೂರು ತಾಲ್ಲೂಕು ಮಾಲೂರು ಹೋಬಳಿಯ ಗೋಪಾಲಸ್ವಾಮಿ ದೇವಸ್ಥಾನದಲ್ಲಿರುವ ಒಂದು ಶಾಸನವು 'ಕೊಲಗಾರ' ಎಂಬ ಶಬ್ದವನ್ನು ಪ್ರಯೋಗಿಸಿದೆ. ಇದು ಕೋಲಾರ ಶಬ್ದದ ಪರಿವರ್ತಿತ ರೂಪವೋ ಅಥವಾ ಬೇರೆಯ ಗ್ರಾಮದ ಹೆಸರನ್ನು ಸೂಚಿಸುತ್ತಿದೆಯೋ ಎಂದು ಅನುಮಾನವನ್ನುಂಟು ಮಾಡಿದರೂ, ಕೋಲಾರ ಶಬ್ದವು ಕಾಲಕಾಲಕ್ಕೆ ರೂಪಾಂತರಗೊಂಡುದುದರಿಂದ 'ಕೊಲಗಾರ'ವೆಂಬ ಶಬ್ದವೇ ಕೋಲಾರವಾಗಿರಬಹುದು.[೧೧]

ಕೋಲಾರ ತಾಲ್ಲೂಕು ವೇಮಗಲ್ಲು ಹೋಬಳಿ ಶೀತಿಗ್ರಾಮದ ಶ್ರೀಪತೀಶ್ವರ ದೇವಾಲಯದಲ್ಲಿರುವ ಒಂದು ಅಸ್ಪಷ್ಟ ಶಾಸನವು 'ಕೋಳಾಳ' ಶಬ್ದವನ್ನು ಪ್ರಯೋಗಿಸಿದೆ. ಶ್ರೀಮತ್ ತಿಪರಸ ಅಧಿಕಾರಿಯ ಅವಧಿಯ ಈ ಶಾಸನವು ದಾನ ಶಾಸನವಾಗಿದ್ದು, 'ಕೋಳಾಳ' ಪ್ರದೇಶದಲ್ಲಿ ಒಬ್ಬರಾಜನು ಆಳ್ವಿಕೆಯನ್ನು ನಡೆಸುತ್ತಿದ್ದನೆಂದು ಸೂಚಿಸಿದೆ. ಪ್ರಾಚೀನ ಕೋಲಾರ ಪ್ರದೇಶದಲ್ಲಿ ಶ್ರೀಪತೀಶ್ವರ ದೇವಾಲಯವು ಪ್ರಸಿದ್ಧವಾಗಿತ್ತೆಂದು ತೋರುತ್ತದೆ.[೧೨]

೫.೨.೪ ಬೆಳ್ಳೂರು

ಕೋಲಾರ ತಾಲ್ಲೂಕಿನ ಪ್ರಸಿದ್ಧ ಪ್ರದೇಶಗಳಲ್ಲಿ ಬೆಳ್ಳೂರು ಒಂದಾಗಿದೆ. ಕೋಲಾರದಿಂದ ೧೪ ಕಿ.ಮೀ. ದೂರದಲ್ಲಿರುವಂತ ಈ ಪ್ರದೇಶವು ಕೋಲಾರದ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿದೆ. ಬೆಳ್ಳೂರು ಕ್ಷೇತ್ರಕ್ಕೆ 'ವೆಲ್ಲಿಯೂರು' ಎಂಬ ನಾಮಾಂತರವಿತ್ತು. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶಕ್ಕೆ ವಿಷ್ಣುವರ್ಧನ ಚತುರ್ವೇದಿ ಮಂಗಲವೆಂದು ಪ್ರಸಿದ್ಧವಾದ ಹೆಸರಿತ್ತು. ಕನ್ನಡ ಶಾಸನಗಳಲ್ಲಿ ಅದರಲ್ಲೂ ಪ್ರಧಾನವಾಗಿ ೧೩ನೆಯ ಶತಮಾನದ ನಂತರ ಶಾಸನಗಳಲ್ಲಿ ವೆಲ್ಲಿಯೂರು ವಿಷ್ಣುವರ್ಧನ ಚತುರ್ವೇದಿ ಮಂಗಲವೆಂದೇ ಉಲ್ಲೇಖಗೊಂಡಿದೆ. ವೆಲ್ಲಿಯೂರು ಅಥವಾ ಬೆಳ್ಳೂರು ಶಬ್ದಕ್ಕೆ ಯಾವುದೇ ಅರ್ಥ ನಿಷ್ಪತ್ತಿಯು ದೊರೆಯುವುದಿಲ್ಲ.

ದ್ವಾರಸಮುದ್ರದ ಹೊಯ್ಸಳರು ಆಳ್ವಿಕೆಯನ್ನು ನಡೆಸುತಿದ್ದಂತಹ ಸಂದರ್ಭದಲ್ಲಿ ಕೋಲಾರವು ಅವರ ಸುಪರ್ದಿಗೆ ಸೇರಿತ್ತು. ಗಂಗ ಅರಸರ ನಂತರ ಕರ್ನಾಟಕದಲ್ಲಿ ಪ್ರಬಲರಾಗಿ ಆಳ್ವಿಕೆ ನಡೆಸಿದವರಲ್ಲಿ ಹೊಯ್ಸಳರು ಪ್ರಧಾನರು. ಈ ಎರಡು ರಾಜಮನೆತನಗಳ ಆಳ್ವಿಕೆಯ ಮಧ್ಯಂತರದಲ್ಲಿ ಚೋಳರು ಕರ್ನಾಟಕದ ಪೂರ್ವಭಾಗವಾದ ಕೋಲಾರ ಜಿಲ್ಲೆಯ ಮೇಲೆ ಆಕ್ರಮಣವನ್ನು ಮಾಡಿ ಆಳ್ವಿಕೆ ನಡೆಸಲು ಪ್ರಯತ್ನಿಸಿದರು. ಚೋಳರ ಆಕ್ರಮಣವನ್ನು ಪ್ರಮುಖವಾಗಿ ಎದುರಿಸಿ ಗಂಗವಾಡಿಯನ್ನು ಸ್ವತಂತ್ರವಾಗಿ ಮಾಡಲು ಪ್ರಯತ್ನ ನಡೆಸಿದವರಲ್ಲಿ ಹೊಯ್ಸಳ ವಿಷ್ಣುವರ್ಧನನು ಪ್ರಮುಖನು (ಕ್ರಿ.ಶ.೧೧೦೮-೧೧೫೨). ಈ ರೀತಿಯಾಗಿ ಗಂಗವಾಡಿಯನ್ನು ಕೈವಶ ಪಡಿಸಿ ಕೊಂಡಂತಹ ಸಂದರ್ಭದಲ್ಲಿ ಕೋಲಾರದ ಪ್ರದೇಶಗಳು ವಿಷ್ಣುವರ್ಧನನ ಆಳ್ವಿಕೆಗೆ ಒಳಪಟ್ಟಿತ್ತು. ಬಹುಶಃ ಈ ಸಂದರ್ಭದಲ್ಲಿ ವೆಲ್ಲಿಯೂರು ಅಥವಾ ಬೆಳ್ಳೂರನ್ನು ಪ್ರಧಾನವಾಗಿಟ್ಟುಕೊಂಡು ಕೋಲಾರದ ಭಾಗಗಳನ್ನು ಆಳ್ವಿಕೆ ನಡೆಸುತ್ತಿದ್ದಿರಬಹುದು. ವಿಷ್ಣುವರ್ಧನನು ಬೆಳ್ಳೂರಿನಲ್ಲಿ ಅಗ್ರಹಾರವನ್ನು ನಿರ್ಮಿಸಿ ಅಲ್ಲಿ ಚತುರ್ವೇದಗಳನ್ನು

ಕಲಿತಂತಹ ಬ್ರಾಹ್ಮಣರನ್ನು ನಿಯೋಜಿಸಿ ತನ್ನ ಹೆಸರನ್ನು ಆ ಅಗ್ರಹಾರಕ್ಕೆ ನೀಡಿರಬಹುದು. ಕಾಲಾಂತರದಲ್ಲಿ ಈ ಪ್ರದೇಶಕ್ಕೆ ವಿಷ್ಣುವರ್ಧನ ಚತುರ್ವೇದಿ ಮಂಗಲವೆಂದು ಹೆಸರು ಬಂದಿರಬಹುದು.

ವಿಷ್ಣುವರ್ಧನನ ನಂತರ ಆಡಳಿತಕ್ಕೆ ಬಂದಂತಹ ಒಂದನೆಯ ನರಸಿಂಹನ ಕಾಲಕ್ಕೆ ಈ ಪ್ರದೇಶವು ಇದೇ ಹೆಸರನ್ನು ಪಡೆದಿತ್ತು. ಕೋಲಾರ ತಾಲ್ಲೂಕಿನ ಎರಡು ಶಾಸನಗಳು ಒಂದನೆಯ ನರಸಿಂಹನ ಆಳ್ವಿಕೆಯನ್ನು ಸೂಚಿಸುತ್ತಾ ಬೆಳ್ಳೂರು ಒಂದು ಅಗ್ರಹಾರವಾಗಿತ್ತು ಎಂಬ ಮಾಹಿತಿಯನ್ನು ನೀಡುತ್ತದೆ.[೧೩] ಚೋಳರ ಆಳ್ವಿಕೆಯ ಕಾಲದ ಒಂದನೆಯ ಕುಲೋತ್ತುಂಗ ರಾಜೇಂದ್ರ ಚೋಳನ ಆಳ್ವಿಕೆಯ ಸಂದರ್ಭದಲ್ಲಿ ಈ ಪ್ರದೇಶಕ್ಕೆ ಜನಾರ್ಧನ ಚತುರ್ವೇದಿ ಮಂಗಲವೆಂಬ ಹೆಸರಿದ್ದು ಇದು ಕೈವಾರ ನಾಡಿಗೆ ಸೇರಿತ್ತೆಂದು ತಿಳಿಸುತ್ತದೆ.[೧೪]

ಕ್ರಿ.ಶ. ೧೨೮೬ರ ಹೊಯ್ಸಳ ರಾಮನಾಥ ಆಳ್ವಿಕೆಯ ಕಾಲದ ಶಾಸನವು ಗಂಗ ಪೆರುಮಾಳ್ ತುತ್ತರಾದಿತ್ಯನು ವೆಲ್ಲಿಯೂರು ಅಥವಾ ವಿಷ್ಣುವರ್ಧನ ಚತುರ್ವೇದಿ ಮಂಗಲದ ಶ್ರೀಕೈಲಾಸಂ ಉಡೈಯನಾರ್ ಮತ್ತು ಮೂಲಸ್ಥಾನ ಉಡ್ಯೆಯೂರ್ ದೇವರುಗಳಿಗೆ ದತ್ತಿಯನ್ನು ಬಿಟ್ಟಂತಹ ವಿಚಾರವನ್ನು ತಿಳಿಸುತ್ತದೆ.[೧೫] ಈ ಪರಿಸರದಲ್ಲಿ ಕಣ್ಣೇಶ್ವರ, ಮುನೇಶ್ವರ, ಆಂಜನೇಯ, ಪಟ್ಟಾಲಂಬಿಕ, ಮಾರಿಕಾಂಬಾ ಮೊದಲಾದ ದೇವಾಲಯಗಳಿವೆ. ಇವುಗಳಲ್ಲಿ ಕಣ್ಣೇಶ್ವರ ದೇವಾಲಯ ಬಹು ಪ್ರಸಿದ್ಧವಾದುದಾಗಿದೆ.

೫.೨.೫ ವಕ್ಕಲೇರಿ

ಕೋಲಾರದಿಂದ ೧೨ ಕಿ.ಮೀ. ಪಶ್ಚಿಮಕ್ಕೆ ಇರುವಂತಹ ವಕ್ಕಲೇರಿ ಗ್ರಾಮವು ಪ್ರಸಿದ್ಧವಾಗಿದ್ದರೂ, ಯಾವುದೇ ಐತಿಹ್ಯವನ್ನಾಗಲಿ, ಇತಿಹಾಸವನ್ನಾಗಲಿ, ಶಾಸನಗಳಿಂದ ಗುರುತಿಸಲಾಗುತ್ತಿಲ್ಲ. ಈ ಸ್ಥಳದಲ್ಲಿ ಇತಿಹಾಸವನ್ನು ಸಾರುವಂತಹ ಯಾವುದೇ ಶಾಸನಗಳು ದೊರೆತಿರುವುದಿಲ್ಲ. ಆದರೆ ಈ ಸ್ಥಳಕ್ಕೆ ಸಂಬಂಧಿಸದೇ ಇರುವಂತಹ ಕೋಲಾರ ಜಿಲ್ಲೆಯ ಯಾವುದೇ ಸ್ಥಳವನ್ನು ಉಲ್ಲೇಖಿಸದೇ ಇರುವಂತಹ ಒಂದು ತಾಮ್ರಶಾಸನವು ವಕ್ಕಲೇರಿಯಲ್ಲಿ ದೊರಕಿದೆ. ಈ ಶಾಸನವು ಬಾದಾಮಿ ಚಾಲುಕ್ಯ ದೊರೆ ಕೀರ್ತಿವರ್ಮನ ಕಾಲಕ್ಕೆ ಸೇರಿದುದಾಗಿದೆ. ಈ ಸ್ಥಳದಲ್ಲಿ ಯಾವುದೇ ಐತಿಹ್ಯಗಳು ದೊರೆಯದಿದ್ದರೂ ಮಹಾಭಾರತ ಕಾಲಕ್ಕೆ ಸಂಬಂಧಿಸಿರುವಂತಹ ಕುರುಹುಗಳು ದೊರಕುತ್ತಿವೆ. ಈ ಪ್ರದೇಶದಲ್ಲಿ ಕರ್ಣ-ದುರ್ಯೋಧನರ ಕಾಷ್ಠ ಶಿಲ್ಪಗಳನ್ನು ಬಳಸಿಕೊಂಡು ಆರಾಧಿಸುವಂತಹ ಸಂಪ್ರದಾಯವಿದೆ. ಆದರೆ ವಿಶೇಷವೆಂದರೆ ಮಹಾಭಾರತದಲ್ಲಿ ಯಾರು ದುಷ್ಟ ವ್ಯಕ್ತಿಗಳೆಂದು ಗುರುತಿಸಲ್ಪಟ್ಟಿದ್ದಾರೋ ಅವರನ್ನು ಆರಾಧಿಸುವಂತಹ ಪದ್ಧತಿಯಿದೆ. ಈ ಸ್ಥಳದಲ್ಲಿ ಮಾರ್ಕಂಡೇಶ್ವರ ದೇವಾಲಯವಿದ್ದು ಹೆಚ್ಚಿನ ವಿಚಾರಗಳು ವಿಜಯನಗರ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ವಕ್ಕಲೇರಿ ಶಾಸನವು ಗ್ರಾಮದಲ್ಲಿ ದೊರಕಿರುವುದು ಎಂದಷ್ಟೇ ವಿನಹ ಐತಿಹಾಸಿಕವಾಗಿ ಕೋಲಾರ ಜಿಲ್ಲೆಯ ಯಾವುದೇ ಮಾಹಿತಿಯನ್ನು ನೀಡುತ್ತಿಲ್ಲ. ಇದು ಕಾಲಾನಂತರದಲ್ಲಿ ಈ ಊರಿಗೆ ವಲಸೆ ಬಂದಂತಹ ವ್ಯಕ್ತಿಗಳೊಂದಿಗೆ ವಕ್ಕಲೇರಿಗೆ ಬಂದಿರಬಹುದಾಗಿದೆ.[೧೬]

೫.೨.೬ ಸೀತಿಬೆಟ್ಟ

ಕೋಲಾರ ಜಿಲ್ಲಾ ಕೇಂದ್ರದಿಂದ ವಾಯುವ್ಯಕ್ಕೆ ೨೦ಕಿ.ಮೀ. ದೂರದಲ್ಲಿರುವಂತಹ ಈ ಪ್ರದೇಶವು ಬೆಟ್ಟದಿಂದಾಗಿ ಪ್ರಸಿದ್ಧವಾಗಿದೆ. ಇದು ಕೋಲಾರ ಜಿಲ್ಲೆಯಲ್ಲಿರುವಂತಹ ಅತಿ ಪ್ರಾಚೀನ ಸ್ಥಳವಾಗಿದ್ದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಸ್ಥಳವು ದೇವಾಲಯದಿಂದ ತನ್ನ ಹೆಸರನ್ನು ಪಡೆದುಕೊಂಡಿದೆ. ಈ ಸ್ಥಳಕ್ಕೆ ಸಂಬಂಧಿಸಿದಂತೆ ಐತಿಹ್ಯವು ಪ್ರಸಿದ್ಧವಾಗಿದೆ.

ಪುರಾಣ ಪ್ರಸಿದ್ಧ ಭಸ್ಮಾಸುರನು ಶಿವನಿಂದ ವರವನ್ನು ಪಡೆದು ಆ ವರವನ್ನು ಅವನ ಮೇಲೆಯೇ ಪ್ರಯೋಗಿಸಲು ಪ್ರಯತ್ನಿಸಿದನು. ಶಿವನು ಭಸ್ಮಾಸುರನಿಗೆ ಹೆದರಿ ಈ ಪ್ರದೇಶದಲ್ಲಿದ್ದ ಗೌತಮಮುನಿಯ ಮೊರೆಹೊಕ್ಕು ಸಹಾಯವನ್ನು ಬೇಡಿದನು, ಅವನ ಸಲಹೆಯಂತೆ ಶಿವನು ಸಮೀಪದಲ್ಲಿದ್ದಂತಹ ಗುಹೆಯಲ್ಲಿ ಅಡಗಿ ಕುಳಿತುಕೊಂಡನು. ಶಿವನನ್ನು ಹುಡುಕಿಕೊಂಡು ಬಂದಂತಹ ಭಸ್ಮಾಸುರನು ಒಬ್ಬ ರೈತನಿಂದ ಶಿವನಿರುವ ಪ್ರದೇಶವನ್ನು ತಿಳಿದು ಆ ಕಡೆಗೆ ಧಾವಿಸಿದನು. ಏತನ್ಮಧ್ಯೆ ವಿಷ್ಣುವು ಮೋಹಿನಿ ರೂಪದಲ್ಲಿ ಬಂದು ಭಸ್ಮಾಸುರನನ್ನು ವಂಚಿಸಿ ಪಕ್ಕದಲ್ಲಿರುವ ಇನ್ನೊಂದು ಬೆಟ್ಟದಲ್ಲಿ ಸಾಯಿಸುತ್ತಾಳೆ. ಶಿವನು ವಿಷ್ಣುವಿನ ಬಳಿಗೆ ಬಂದು ನಿಜವನ್ನರಿತು ಮೋಹಿನಿರೂಪವನ್ನು ತೋರಿಸುವಂತೆ ಕೇಳಿ ಕೊಂಡನು. ಶಿವನು ಮೋಹಿನಿಯ ರೂಪವನ್ನು ನೋಡಿ ಮೋಹಗೊಂಡನು. ಶಿವ ಮತ್ತು ಮೋಹಿನಿಯರಿಗೆ ಹುಟ್ಟಿದ ಮಗು ಕಾಲಭೈರವೇಶ್ವರನಾದನು. ಈ ಘಟನೆ ನಡೆದಿರುವಂತಹ ಗುಹೆ ಮತ್ತು ದೇವಾಲಯವು ಶ್ರೀಪತಿಯಿಂದ ವಿಷ್ಣು ನಿರ್ಮಿತವಾದುದೆಂದು ಪ್ರತೀತಿಯಿದೆ. ದೇವಾಲಯವು ಶ್ರೀಪತಿಯಿಂದ ನಿರ್ಮಿತವಾದುದರಿಂದ ಈ ದೇವಾಲಯಕ್ಕೆ ಶ್ರೀಪತೀಶ್ವರವೆಂದು ಮತ್ತು ಈ ಗ್ರಾಮಕ್ಕೆ 'ಶ್ರೀಪತಿ' ಎಂದು ಹೆಸರು ಆಯಿತೆಂದು ಪ್ರತೀತಿಯಿದೆ. ಶ್ರೀಪತಿ>ಶ್ರೀಹಟ್ಟಿ>ಸೀಪತಿ>ಸೀತಿ ಎಂದು ರೂಪಾಂತರವಾಗಿದೆ.[೧೭]

೫.೨.೭ ಸೀತಿಯ ಭೈರವ ದೇವಾಲಯ

ಶಾಸನಗಳಲ್ಲಿ ಸೀಹತ್ತಿಯ ಭೈರವದೇವರ ಉಲ್ಲೇಖವು ಹೆಚ್ಚಾಗಿ ಕಂಡುಬರುತ್ತದೆ. ಕ್ರಿ.ಶ.೧೪ನೆಯ ಶತಮಾನದ ನಂತರದ ಶಾಸನಗಳಲ್ಲಿ ಸಿಹತ್ತಿ ಶಬ್ದದ ಪ್ರಯೋಗವಿದ್ದು ವಿಶೇಷವಾಗಿದೆ. ಕೋಲಾರ ತಾಲ್ಲೂಕಿನ ವೇಮಗಲ್ಲು ಹೋಬಳಿಯಲ್ಲಿರುವ ಹೊಲೇರ ಹಳ್ಳಿಯಲ್ಲಿ ದೊರೆತಿರುವಂತಹ ಕ್ರಿ.ಶ.೧೩೪೨ರ ವೀರಬಲ್ಲಾಳನ ಶಾಸನವೊಂದು ಚವಡಿಯಕ್ಕನೆಂಬುವವಳು ಭೈರವದೇವರಿಗೆ ದಾನವನ್ನು ನೀಡಿರುವಂತಹ ಉಲ್ಲೇಖವಿದೆ. ಸೀತಿಬೆಟ್ಟದಲ್ಲಿ ದೊರಕಿರುವಂತಹ ಕಠಾರಿ ಸಾಳುವ ನರಸಿಂಗರಾಯ ಕಾಲದ ಶಾಸನವು ಹೊಯ್ಸಳ ದೊರೆ ವೀರಬಲ್ಲಾಳನು ಸಿಹತ್ತಿಯ ಭೈರವದೇವರಿಗೆ ಹಲವಾರು ಗ್ರಾಮಗಳನ್ನು ದಾನ ನೀಡಿರುವಂತಹ ವಿಚಾರವನ್ನು ತಿಳಿಸುತ್ತದೆ.[೧೮] ಕ್ರಿ.ಶ. ೧೪ನೆಯ ಶತಮಾನದ ನಂತರ ಕೆಲವು ಶಾಸನಗಳು ಸೀಹತ್ತಿಯ ಭೈರವದೇವರಿಗೆ ವಿವಿಧ ನಾಯಕರು ದಾನವನ್ನು ನೀಡಿರುವ ಉಲ್ಲೇಖವಿದೆ.[೧೯] ವೇಮಗಲ್ಲು ಹೋಬಳಿಯ ಸೀತಿಗ್ರಾಮದ ಕೆಲವು ಸಣ್ಣ ಸಣ್ಣ ಶಾಸನಗಳು ಸಿಹತ್ತಿಯ ಉಲ್ಲೇಖವನ್ನು ತಿಳಿಸುತ್ತದೆ.[೨೦]

ಸೀತಿಬೆಟ್ಟದಲ್ಲಿರುವ ಶ್ರೀಪತೇಶ್ವರ ಮತ್ತು ಭೈರವೇಶ್ವರ ದೇವಾಲಯಗಳು ಪ್ರಸಿದ್ಧವಾಗಿವೆ. ಶ್ರೀಪತೀಶ್ವರ ದೇವಾಲಯದಲ್ಲಿ ಶಿವಲಿಂಗವೊಂದಿದ್ದು ಇದು ಕ್ರಿ.ಶ.೭ ಅಥವಾ ೮ನೆಯ ಶತಮಾನಕ್ಕೆ ಸಂಬಂಧಿಸಿದುದಾಗಿದೆ.

ಭೈರವ ದೇವಾಲಯವು ಗಂಗರ ಶೈಲಿಯನ್ನು ಹೊಂದಿದೆ. ಈ ದೇವಾಲಯದಲ್ಲಿ ಗಂಗ, ಹೊಯ್ಸಳ, ಚೋಳ ಮತ್ತು ವಿಜಯನಗರದರಸರಿಗೆ ಸಂಬಂಧಿಸಿದಂತಹ ಹಲವಾರು ಶಾಸನಗಳು ದೊರೆತಿದ್ದು, ದೇವಾಲಯದ ಪ್ರಾಚೀನತೆಯನ್ನು ಸಾರುತ್ತಿದೆ. ಈ ಭೈರವೇಶ್ವರ ದೇವರು ಮೊರಸು ಒಕ್ಕಲರಿಗೆ, ರೆಡ್ಡಿ ಜನಾಂಗದವರಿಗೆ ಆರಾಧ್ಯ ದೇವನಾಗಿದ್ದಾನೆ. ಒಂದು ಕಾಲದಲ್ಲಿ ಸೀತಿಬೆಟ್ಟವು ಕೈವಾರ ನಾಡಿಗೆ ಸೇರಿತ್ತೆಂದು ತಿಳಿಯಬಹುದು.

೫.೩ ಮಾಲೂರು ತಾಲ್ಲೂಕಿನ ಸ್ಥಳನಾಮಗಳು

ಕರ್ನಾಟಕ ರಾಜ್ಯದ ರಾಜಧಾನಿಗೆ ತಾಗಿಕೊಂಡಿರುವಂತಹ ತಾಲ್ಲೂಕು ಮಾಲೂರು ಆಗಿದೆ. ಮಡಿವಾಳ, ಟೇಕಲ್, ಮಾಸ್ತಿ, ಮಾಲೂರು ಮೊದಲಾದ ಐತಿಹಾಸಿಕ ಸ್ಥಳಗಳನ್ನು ಹೊಂದಿರುವಂತಹ ಈ ತಾಲ್ಲೂಕು ಕೋಲಾರ ಜಿಲ್ಲಾ ಕೇಂದ್ರದಿಂದ ನೈರುತ್ಯ ದಿಕ್ಕಿಗೆ ೨೮ ಕಿ.ಮೀ. ದೂರದಲ್ಲಿದೆ. ಮಾಲೂರು ತಾಲ್ಲೂಕಿರುವಂತಹ ಸ್ಥಳಗಳ ಪರಿಚಯವನ್ನು ಗಮನಿಸೋಣ.

೫.೩.೧ ಮಾಲೂರು

ಮಾಲೂರು ತಾಲ್ಲೂಕು ಕೇಂದ್ರವಾಗಿದೆ. ಮಾಲೂರು ಶಬ್ದವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಶಾಸನಗಳ ಆಧಾರದಲ್ಲಿ ಗಮನಿಸಿದರೆ ಮಾಲೂರು ಕರ್ನಾಟಕ ಪ್ರಸಿದ್ಧ ರಾಜರುಗಳ ಆಳ್ವಿಕೆಗೆ ಒಳಪಟ್ಟಿತ್ತು. ಜನರು ಹೇಳುವಂತೆ ಮಾಲೂರು ಎಂಬ ಪ್ರದೇಶದ ಪ್ರಾಚೀನ ಹೆಸರು ಮಲ್ಲಿಕಾಪುರ ಅಥವಾ ಮಲ್ಲಿಗೆಪುರ. ಸುತ್ತಮುತ್ತಲಿನ ಪ್ರದೇಶದಲ್ಲಿ ಮಲ್ಲಿಗೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಮಲ್ಲಿಕಾಪುರವೆಂಬ ಹೆಸರು ಬಂದಿತ್ತು. ಮಲ್ಲಿಗೆಯ ಮಾಲೆಗಳನ್ನು ಮಾರುತಿದ್ದುದರಿಂದ ಮಾಲೆಗಳ ಊರು ಮಾಲೂರು ಎಂದು ಹೆಸರುವಾಸಿಯಾಯಿತು ಎಂಬ ಪ್ರತೀತಿಯಿದೆ. ಅದಲ್ಲದೆಯೇ ಮಾಲರು ಎಂಬ ಹೊಲೆಯರ ಜಾತಿಯವರು ಹೆಚ್ಚಾಗಿ ವಾಸಿಸುತ್ತಿದ್ದರು. ಹಾಗಾಗಿ ಮಾಲರ ಊರು ಮಾಲೂರು ಆಯಿತೆಂದು ಕೆಲವರ ಅಭಿಪ್ರಾಯವಾಗಿದೆ.[೨೧] ಈ ಪ್ರದೇಶದ ಇತಿಹಾಸವು ೧೬ನೆಯ ಶತಮಾನದ ನಂತರ ದೊರೆಯುತ್ತದೆ. ಹೊಸಕೋಟೆಯ ಪಾಳೆಯಗಾರನಾದ ತಿಮ್ಮೇಗೌಡನು ಮಾಲೂರಿನಲ್ಲಿ ಒಂದು ಕೋಟೆಯನ್ನು ಕಟ್ಟಿಸಿದನು. ಮುಂದೆ ಮರಾಠ ನಾಯಕನಾದ ಹೃದರಾಮಸಿಂಗನು ಈ ಕೋಟೆಯನ್ನು ಆಕ್ರಮಿಸಿದಂತಹ ಸಂದರ್ಭದಲ್ಲಿ ಆತನಿಗೆ ದೊರಕಿದಂತಹ ಅಪಾರ ಸಂಪತ್ತಿನಿಂದಾಗಿ (ಮಾಲು) ಈ ಸ್ಥಳಕ್ಕೆ ಮಾಲ್ ಊರು 'ಮಾಲೂರು' ಎಂದಾಗಿರಬಹುದು. ಕೋಲಾರದಲ್ಲಿ ದೊರಕುವಂತಹ ಶಾಸನಗಳಲ್ಲಿ 'ಮಾಲೂರು' ಶಬ್ದವು ಕಂಡುಬರದಿದ್ದರೂ ಗಂಗವಾಡಿ ೬,೦೦೦ ವಿಭಾಗದಲ್ಲಿ ಸೇರಿದ್ದಿರಬಹುದು.

೫.೩.೨ ತೇಕಲ್ಲು

ಮಾಲೂರು ತಾಲ್ಲೂಕು ಕೇಂದ್ರದಿಂದ ಪೂರ್ವಕ್ಕೆ ಇರುವಂತಹ ತೇಕಲ್ಲು ಪ್ರದೇಶವು ಶಾಸನಗಳಲ್ಲಿ ಬಹಳ ಸ್ತುತ್ಯವಾಗಿದೆ. ಶಾಸನಗಳ ಆಧಾರದಿಂದ ಗಮನಿಸಿದರೆ ಐತಿಹಾಸಿಕವಾಗಿ ಸಂಪದ್ಭರಿತವಾಗಿದ್ದಂತಹ ಈ ಸ್ಥಳವು ಈಗ ಪಟ್ಟಣವಾಗಿದೆ. ಶಾಸನಗಳಲ್ಲಿ ಉಲ್ಲೇಖಗೊಂಡಿರುವಂತೆ ತೇಕಲ್ಲು ಅಥವಾ ಟೇಕಲ್ಲು ಎಂಬ ಶಬ್ದವು ಯಾವುದೇ ರೂಪಾಂತರಗೊಳ್ಳದೆಯೇ ಅದೇ ರೀತಿಯಾಗಿ ಮುಂದುವರೆದಿದೆ.

ಪುರಾಣಗಳ ಆಧಾರದಂತೆ ಮಹಾಭಾರತದ ಪಾಂಡವರು ಏಕಚಕ್ರ ನಗರದಲ್ಲಿ ವಾಸವಾಗಿದ್ದಂತಹ ಸಂದರ್ಭದಲ್ಲಿ ಭೀಮನು ತನ್ನ ಪ್ರತಿನಿತ್ಯ ವ್ಯಾಯಾಮಕ್ಕೆ ಇಲ್ಲಿರುವಂತಹ ಬಂಡೆಕಲ್ಲುಗಳನ್ನು ಉಪಯೋಗಿಸುತ್ತಿದ್ದನು. ಹಾಗಾಗಿ ಈ ಪ್ರದೇಶಕ್ಕೆ 'ಭೀಮನ ಗರಡಿ' ಎಂದು ಹೆಸರೂ ಇದೆ. ಸ್ಥಳನಾಮಗಳ ಆಧಾರವನ್ನು ನೋಡುವುದಾದರೆ ಈ ಪ್ರದೇಶದ ಪ್ರಾದೇಶಿಕತೆಯನ್ನು ಅವಲಂಬಿಸಿಕೊಂಡು ಹೇಳಬೇಕಾಗುತ್ತದೆ. ಇಲ್ಲಿಯ ಜನರ ಆಡುಮಾತಿನಲ್ಲಿ ಈ ಸ್ಥಳದ ಅರ್ಥ ನಿಷ್ಪತ್ತಿಯ ವಿಚಾರವಾಗಿ ಹಲವಾರು ಭಿನ್ನಾಭಿಪ್ರಾಯಗಳಿವೆ.

ಸ್ಥಳನಾಮ ಶಾಸ್ತ್ರಜ್ಞರಾದ ವಿ.ಗೋಪಾಲಕೃಷ್ಣರು ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜಲ ಸೂಚಕ ಅಂಶಗಳನ್ನು ಹೇಳುವಂತಹ ಸಂದರ್ಭದಲ್ಲಿ ಈ ಸ್ಥಳವು ತೇಮದಿಂದ ಕೂಡಿರುವಂತಹ ಸ್ಥಳ. ತೇಮ+ಕಲ್ಲು (ತೇಮ-ತೆಲುಗುಭಾಷೆಯಲ್ಲಿ ಒದ್ದೆಯಾಗಿರುವಂತಹ ಪ್ರದೇಶ) ಎಂಬುವುದು ತೇಕಲ್ಲು ಎಂದು ರೂಪಾಂತರ ಗೊಂಡಿದೆಯೆಂದು ಅಭಿಪ್ರಾಯಪಡುತ್ತಾರೆ.[೨೨] ಇದೇ ರೀತಿಯಾಗಿ ಇನ್ನೂ ಹಲವಾರು ಪದ ನಿಷ್ಪತ್ತಿಯನ್ನು ತೇಕಲ್ ಶಬ್ದಕ್ಕೆ ನೀಡಲಾಗಿದೆ.

೧. ಕೆಲವು ಸ್ಥಳಪುರಾಣಗಳ ಪ್ರಕಾರ ತೇಕಲ್ಲು ಶಬ್ದವು ಹಿಂದೆ ತೇಕಂಚಿ ಎಂದಾಗಿತ್ತು. (ಇದರರ್ಥ ತೆಂಕಣದ ಕಂಚಿ ಎಂದಾಗುತ್ತದೆ.) ತಮಿಳುನಾಡಿನ ಕಂಚಿಯ ದೇವಾಲಯಕ್ಕಿಂತ ಇಲ್ಲಿರುವಂತಹ ವರದರಾಜಸ್ವಾಮಿಯ ಮಹಿಮೆಯು ಹೆಚ್ಚಾಗಿದ್ದು, ಹಾಗಾಗಿ ಇದನ್ನು ತೆಂಕಣದ ಕಂಚಿ ಎಂದು ಕರೆಯುತ್ತಿದ್ದು, ಆಡು ಮಾತಿನಲ್ಲಿ ತೇಕಲ್ ಎಂದು ಪರಿವರ್ತನೆಯಾಗಿರಬೇಕು.

೨. ಈ ಪ್ರದೇಶಗಳಲ್ಲಿ ತೇಯುವ ಕಲ್ಲು ಹೆಚ್ಚಾಗಿ ದೊರಕುವುದರಿಂದ ಈ ಪ್ರದೇಶವು ತೇಯ್+ಕಲ್ಲು> ತೇಯ್ಕಲ್> ನಂತರ ತೇಕಲ್ಲು ಆಗಿರಬೇಕೆಂದು ಅಭಿಪ್ರಾಯವಿದೆ.

೩. ಕರ್ನಾಟಕವೆಂಬ ಪ್ರದೇಶಕ್ಕೆ ಮುಳಬಾಗಿಲು ಮೂಡುದಿಕ್ಕಿನ ಬಾಗಿಲಾಗಿದ್ದರೆ ತೇಕಲ್ಲು ತೆಂಕಣ ದಿಕ್ಕಿನ ಬಾಗಿಲು ಎಂದು ಅಭಿಪ್ರಾಯವಿದೆ. ತೆಂಕಣದ ಬಾಗಿಲು ತೇಕಲ್ಲು ಆಗಿರಬೇಕೆಂದು ಊಹಿಸುತ್ತಾರೆ.

೪. ತೇನ್+ಕಲ್ಲು = ತೇಕಲ್ಲು ಎಂದಾಗಿರಬಹುದೆಂದು ಅಭಿಪ್ರಾಯವಿದೆ. ತೇನ್ ಎಂದರೆ ಜೇನು ಎಂದರ್ಥ. ಇಲ್ಲಿನ ಬಂಡೆಕಲ್ಲುಗಳಲ್ಲಿ ಜೇನು ಹೆಚ್ಚಾಗಿ ದೊರೆಯುವುದರಿಂದಾಗಿ ಈ ಪ್ರದೇಶಕ್ಕೆ ತೇನ್+ಕಲ್ಲು= ತೇಕಲ್ಲು ಎಂದು ಹೆಸರು ಬಂದಿರಬಹುದು"[೨೩]

೫. ಇಂದಿನ ಸಣ್ಣಗ್ರಾಮ ತೇಕಲು ಒಂದು ಕಾಲದಲ್ಲಿ ತೇಕಲ್ ನಾಡಿನ ರಾಜಧಾನಿಯಾಗಿತ್ತು. ಶಾಸನಗಳ ಆಧಾರದಂತೆ ತೇಕಲ್ ನಾಡು ಎಂಬುವುದು ಪೂರ್ವದಲ್ಲಿ ಇಳವಂಜಿನಾಡು, ದಕ್ಷಿಣಕ್ಕೆ ಮಾಸಂದಿನಾಡು, ಪಶ್ಚಿಮಕ್ಕೆ ಕೈವಾರನಾಡು, ಉತ್ತರಕ್ಕೆ ಕುವಳಾಲನಾಡುಗಳನ್ನು ಒಳಗೊಂಡಿತ್ತು.

ಮಾಲೂರು ತಾಲ್ಲೂಕಿನಲ್ಲಿ ದೊರೆಯುವಂತಹ ವಿಜಯನಗರದ ಶಾಸನಗಳು ತೇಕಲ ಸೀಮೆ, ತೇಕಲಪಟ್ಟಣ, ತೇಕಲನಾಡು, ತೇಕಲ ಮತ್ತು ಹದಿನೆಂಟು ನಾಡುಳಗಣ ತೇಕಲನಾಡು ಎಂದು ಉಲ್ಲೇಖಿಸಿದೆ. ಬಂಗಾರಪೇಟೆಯ ಬೂದಿಕೋಟೆ ಹೋಬಳಿಯಲ್ಲಿ ದೊರಕಿರುವ ಬಾಣರಸರ ಕಾಲದ ಶಾಸನವು ತೇಕಲ್ಲನಾಡನ್ನು ಬಾಣರಸನು ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿಸುತ್ತದೆ. ಬೂದಿಕೋಟೆಯ ಕಾರಮಾನಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ಬೊಮ್ಮಣ ವೊಡೆಯರು ತೇಕಲನಾಡನ್ನು ಆಳ್ವಿಕೆ ಮಾಡುತ್ತಿದ್ದನೆಂದು ತಿಳಿಸುತ್ತದೆ"[೨೪] ಇಳವಂಜಿರಾಯನ ಆಡಳಿತ ಕಾಲದಲ್ಲಿ ತೇಕಲ್ಲು ಗ್ರಾಮವು ಮುಳುವಾಯಿ ವಿಭಾಗಕ್ಕೆ ಒಳಪಟ್ಟಂತೆ ಕಂಡುಬರುತ್ತದೆ. ಇಳವಂಜಿರಾಯನು ತೇಕಲ್ಲು ಸೀಮೆಯೊಳಗೆ ಇರುವಂತಹ ಕಂಪ್ಪಸಮುದ್ರ ಗ್ರಾಮವನ್ನು ಪ್ರಸನ್ನ

ಸೋಮೇಶ್ವರ ದೇವಾಲಯಕ್ಕೆ ದಾನ ನೀಡಿರುವಂತೆ ಕಂಡುಬರುತ್ತದೆ.[೨೫] ಬೂದಿಕೋಟೆ ಹೋಬಳಿ ಮಿಟ್ಟಹಳ್ಳಿ ಗ್ರಾಮದ ಶಾಸನವು ತೇಕಲ ರಾಜ್ಯವನ್ನು ಲಕ್ಕಣ ವೊಡೆಯನು ಆಳ್ವಿಕೆ ನಡೆಸುತ್ತಿದ್ದನೆಂದು ಉಲ್ಲೇಖಿಸಿದೆ. ತೇಕಲ ರಾಜ್ಯವೆಂದು ಉಲ್ಲೇಖಿಸಿರುವುದು ವಿಶೇಷವಾಗಿದೆ.

ತಮಿಳುನಾಡಿನ ಕೃಷ್ಣಗಿರಿ ತಾಲ್ಲೂಕು ರಾಯಕೋಟೆಯಲ್ಲಿ ದೊರೆತಿರುವ ಕನ್ನಡ ಶಾಸನವೊಂದು **'ತೇಕಲ್ನಾಡೆಳ್ಪೆತ್ತನಾಳುವ ಕೀರ್ತಲಮ್ಮರಸ'**ನೆಂದು ಉಲ್ಲೇಖಿಸಿದೆ. ಇಲ್ಲಿ ಉಲ್ಲೇಖಿತವಾಗಿರುವ 'ತೇಕಲ್ನಾಡೆಳ್ಪತ್ತು' ಕ್ರಿ.ಶ.೮ನೆಯ ಶತಮಾನದಲ್ಲಿ ಬಾಣರಸರ ಆಡಳಿತಕ್ಕೊಳಪಟ್ಟಿತ್ತು. ೭೦ ಗ್ರಾಮಗಳಿಗೆ ಪ್ರಧಾನ ಕೇಂದ್ರವಾಗಿ ಬಾಣರಸರ ಕಾಲದಲ್ಲಿ ಅಸ್ತಿತ್ವದಲ್ಲಿದ್ದು ಸಣ್ಣ ಪ್ರಾಂತ್ಯವಾಗಿ ಪ್ರಸಿದ್ಧವಾಗಿತ್ತು. ಮುಂದೆ ಹೆಚ್ಚಿನ ಶಾಸನಗಳಲ್ಲಿ ತೇಕಲ್‌ನಾಡಿನ ಉಲ್ಲೇಖವಿರದಿದ್ದರೂ 'ಕುವಳಾಲನಾಡು' ಎಂಬ ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಗಂಗರಸರ ಶಾಸನಗಳಲ್ಲಿ ಪ್ರತ್ಯೇಕವಾಗಿ ತೇಕಲ್ ನಾಡಿನ ಉಲ್ಲೇಖವಿರದಿರುವುದರಿಂದ ಗಂಗ ಪ್ರಾಂತ್ಯದ ಒಂದು ಭಾಗವಾಗಿ ಗಂಗ ರಾಜ್ಯದಲ್ಲಿಯೇ ಸೇರಿಹೋಗಿತ್ತು. ಮುಂದೆ ೧೪ನೆಯ ಶತಮಾನದ ನಂತರದ ವಿಜಯನಗರ ಅರಸರ ಶಾಸನಗಳಲ್ಲಿ **'ತೇಕಲ್‌ನಾಡು'** ತೇಕಲ್ ಪಟ್ಟಣ ಎಂಬುವುದಾಗಿ ಉಲ್ಲೇಖವಾಗಿದೆ.

ತೇಕಲ್‌ನಲ್ಲಿರುವಂತಹ ವರದರಾಜಸ್ವಾಮಿ ದೇವಾಲಯವು ಬಹಳ ಪ್ರಸಿದ್ಧವಾದಂತಹ ದೇವಾಲಯವಾಗಿದೆ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯವು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಉನ್ನತಿಯನ್ನು ಹೊಂದಿತ್ತು. ಈ ದೇವಾಲಯದಲ್ಲಿ ಹೆಚ್ಚಾಗಿ ತಮಿಳು ಶಾಸನಗಳು ದೊರೆಯುತ್ತಿದ್ದು ಕ್ರಿ.ಶ.೧೪ನೆಯ ಶತಮಾನದ ಕಾಲವನ್ನು ಸೂಚಿಸುತ್ತದೆ. ತೇಕಲ್ಲು ಹೋಬಳಿಯಲ್ಲಿ ಕಮಠೇಶ್ವರ ದೇವಾಲಯವು ಮತ್ತು ಉಳ್ಳೇರಹಳ್ಳಿ ಗ್ರಾಮದಲ್ಲಿ ವರದರಾಜಸ್ವಾಮಿ ದೇವಾಲಯವು ಪ್ರಸಿದ್ಧವಾಗಿದೆ.

೫.೩.೩ ಶಿವಾರಪಟ್ಟಣ

ಮಾಲೂರು ತಾಲ್ಲೂಕಿನ ಐತಿಹಾಸಿಕ ಪಟ್ಟಣಗಳಲ್ಲಿ ಶಿವಾರಪಟ್ಟಣವು ಒಂದಾಗಿದೆ. ಮಾಲೂರು ತಾಲ್ಲೂಕು ಕೇಂದ್ರದಿಂದ ಈಶಾನ್ಯಕ್ಕೆ ೨೦ಕಿ.ಮೀ. ದೂರದಲ್ಲಿರುವಂತಹ ಈ ಪಟ್ಟಣವು ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧನಾದ ಒಬ್ಬ ರಾಜನ ಹೆಸರಿನಿಂದಲೇ ಈಗಲೂ ಪ್ರಚಲಿತದಲ್ಲಿರುವುದು ವಿಶೇಷವಾಗಿದೆ. ಈ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ಐತಿಹ್ಯ ದೊರೆಯದಿದ್ದರೂ 'ಕದಂಬೂರು' ಎಂಬಂತಹ ಇನ್ನೊಂದು ಹೆಸರನ್ನು ಪಡೆದಿರುವಂತೆ ಕಂಡುಬರುತ್ತದೆ.

ಗಂಗ ದೊರೆ ಶ್ರೀಪುರುಷನಿಗೆ ಐದು ಜನ ಪುತ್ರರಿದ್ದರು. ಅವರಲ್ಲಿ ಒಬ್ಬನಾದ ಶಿವಮಾರನು ಪರಾಕ್ರಮಿಯು ಮತ್ತು ಸೈಗೊಟ್ಟ ಎಂಬ ಇನ್ನೊಂದು ಹೆಸರನ್ನು ಹೊಂದಿರುವವನಾಗಿದ್ದನು. ಈತನು ಕ್ರಿ.ಶ.೭೮೮ರಿಂದ ೮೧೨ರವರೆಗೆ ಆಳ್ವಿಕೆ ನಡೆಸಿದ್ದನು. ಈತನು ಹರಿದು ಹಂಚಿ ಹೋಗಿದ್ದ ಗಂಗ ರಾಜ್ಯವನ್ನು ಒಗ್ಗೂಡಿಸಿ ಸಮರ್ಥವಾದ ರಾಜನಾಗಿ ಉತ್ತಮ ರಾಜ್ಯವನ್ನು ಕಟ್ಟಿದ್ದನು. ಈತನು ಮಾಲೂರು ಪ್ರದೇಶದಲ್ಲಿ ಬಲಿಷ್ಠವಾದ ಕೋಟೆಯನ್ನು ಮತ್ತು ಹೊಸದಾಗಿ ಪಟ್ಟಣವನ್ನು ಕಟ್ಟಿಸಿರುವನೆಂದು ಪ್ರತೀತಿಯಿದೆ.[೨೬]

ಹೊಸದಾಗಿ ಕಟ್ಟಿರುವಂತಹ ಈ ಪಟ್ಟಣಕ್ಕೆ 'ಶಿವಮಾರಪಟ್ಟಣ'ವೆಂದು ಹೆಸರಾಯಿತೆಂದು ಅಭಿಪ್ರಾಯವಾಗಿದೆ. 'ಶಿವಮಾರ ಪಟ್ಟಣ' ಎಂಬ ಶಬ್ದವು ಕಾಲಾನುಸಾರವಾಗಿ ಪರಿವರ್ತಿತವಾಗುತ್ತಾ ಶಿವಾರ ಪಟ್ಟಣವಾಗಿರಬೇಕು. ಆದರೆ ಇದನ್ನು ಪ್ರತಿಪಾದಿಸುವಂತಹ ಯಾವುದೇ ಶಾಸನಾಧಾರಗಳು ದೊರೆಯುವುದಿಲ್ಲ.

ಆದರೆ ಈ ಮಾತನ್ನು ಡಾ.ದೇವರಕೊಂಡಾರೆಡ್ಡಿಯವರು ಶಿವಾರಪಟ್ಟಣಕ್ಕೂ ಶಿವಮಾರನಿಗೂ ಯಾವುದೇ ಸಂಬಂಧವಿಲ್ಲವೆಂದೂ ಶಿವಪುರ ಎಂಬುವುದರ ರೂಪಾಂತರವೆಂದು ಪ್ರತಿಪಾದಿಸುತ್ತಾರೆ[೨೭]

ಆದರೆ ಗಂಗ ದೊರೆ ಶ್ರೀಪುರುಷನ ಆಳ್ವಿಕೆಯ ಕಾಲದ ಮೂರು ಶಾಸನಗಳು ಕದಂಬೂರು ಶಬ್ದವನ್ನು ಪ್ರಯೋಗಿಸಿದೆ. ವಕ್ಕಲೇರಿ ಹೋಬಳಿ ಶಿವಾರಪಟ್ಟಣ ಗ್ರಾಮದ ಈಶ್ವರ ದೇವಾಲಯದಲ್ಲಿರುವ ಶಾಸನಗಳು ಶಿವಮಾರನು ಕದಂಬೂರನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[೨೮] ಕದಂಬೂರು ಅಗ್ರಹಾರವಾಗಿಯೂ ಪ್ರಸಿದ್ಧವಾಗಿದ್ದಿರಬಹುದು. ರಾಮೇನಹಳ್ಳಿಯ ಹುಲಿಬೇಟೆಯ ಶಾಸನದಲ್ಲಿ ಹುಲಿಯನ್ನು ಕೊಂದು ಮಡಿದ ವೀರನಿಗೆ ಭೂದಾನವನ್ನು ನೀಡಲಾಗಿದೆ. ಈ ದಾನಕ್ಕೆ ಸಾಕ್ಷಿಗಳು ಕದಂಬೂರ ಮಹಾಜನರೆಂದು ಶಾಸನವು ಉಲ್ಲೇಖಿಸಿದೆ.[೨೯]

ಕೋಲಾರ ತಾಲ್ಲೂಕು ಕುರುಬೂರು ಗ್ರಾಮದ ಒಂದು ಶಾಸನವು 'ಶಿವಾರ' ಶಬ್ದದ ಉಲ್ಲೇಖವನ್ನು ನೀಡಿದೆ.[೩೦] ಕೋಲಾರ ತಾಲ್ಲೂಕಿನ ನರಸಾಪುರ ಹೋಬಳಿಯ ಈಶ್ವರ ದೇವಾಲಯದಲ್ಲಿ ದೊರಕಿರುವಂತಹ ಹಳೆಗನ್ನಡಕ್ಷರದ ಶಾಸನವು ಶಿವಮಾರನು ಕದಂಬೂರನ್ನು ಆಳುತ್ತಿದ್ದನೆಂದು ತಿಳಿಸುತ್ತದೆ. ಕೊಂಗುಣಿ ಮಹಾರಾಜ ಶ್ರೀಪುರುಷನು ಗಂಗ ರಾಜ್ಯವನ್ನು ಆಳುತ್ತಿರಲು ತನ್ನ ಮಗನಾದ ಇಮ್ಮಡಿ ಶಿವಮಾರನಿಗೆ ಕದಂಬೂರಿನ ಸುಪರ್ದಿಯನ್ನು ನೀಡಿದ್ದನು ಎಂದು ಶಾಸನವು ತಿಳಿಸುತ್ತದೆ. ಶ್ರೀಪುರುಷನು ಆಳ್ವಿಕೆ ನಡೆಸುತ್ತಿರಲು ಗಂಗ ರಾಜ್ಯವನ್ನು 'ಶ್ರೀರಾಜ್ಯ'ವೆಂದು ಕರೆಯುತ್ತಿದ್ದರು. ಈ ಸ್ಥಳವನ್ನು ಶಿಲ್ಪಕಲಾ ಸಂಗ್ರಹಾಲಯ, ಶಿಲ್ಪಗಳ ತವರು ಮನೆ ಎಂದೂ ಕರೆಯುತ್ತಾರೆ. ನೊಳಂಬ, ಗಂಗ, ಚೋಳ ಮತ್ತು ಹೊಯ್ಸಳರ ಕಾಲದ ಹಲವಾರು ಕಲಾಶಿಲ್ಪ ಶೈಲಿಗಳಿಗೆ ಶಿವಾರಪಟ್ಟಣವು ನಿದರ್ಶನವಾಗಿದೆ.

ಚೋಳರ ಕಾಲದ ಸೋಮೇಶ್ವರ ದೇವಾಲಯವು ಸುಂದರವಾಗಿದೆ. ಚೋಳರ ಕಾಲದಲ್ಲಿ ಪ್ರಸಿದ್ಧಿಗೆ ಬಂದಿದ್ದರೂ ಗಂಗ ಆಳ್ವಿಕೆಯಲ್ಲೇ ದೇವಾಲಯದ ನಿರ್ಮಾಣವಾಗಿರಬಹುದು. ಕ್ರಿ.ಶ.೭೫೩ರ ಶ್ರೀಪುರುಷನ ಶಾಸನವು ಇದರ ಪ್ರಾಚೀನತೆಗೆ ನಿದರ್ಶನವಾಗಿದೆ. ನಗರದ ಬಳಿಯಿರುವ ಚೌಡೇಶ್ವರಿ ದೇವಾಲಯವು ಗಂಗ ಅರಸನ ಆಳ್ವಿಕೆಗೆ ಒಳಪಟ್ಟಿತ್ತು.

೫.೩.೪ ಬನಹಳ್ಳಿ

ಮಾಲೂರು ತಾಲ್ಲೂಕಿನ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಪ್ರಸಿದ್ಧವಾದಂತಹ ಸ್ಥಳವು ಬನಹಳ್ಳಿಯಾಗಿದೆ. ತೇಕಲ್ ಪಟ್ಟಣದಿಂದ ೩ಕಿ.ಮೀ. ದೂರದಲ್ಲಿರುವಂತಹ ಬನಹಳ್ಳಿಯು ದಕ್ಷಿಣ ಭಾರತದಲ್ಲಿ ಅತಿಹೆಚ್ಚು ಸ್ಮಾರಕಗಳನ್ನು ಹೊಂದಿದ್ದು, ಪುರಾತತ್ವ ವಿದ್ವಾಂಸರು ಈ ಸ್ಥಳದಲ್ಲಿ ಮೊದಲಿನಿಂದಲೂ ಮನುಷ್ಯನ ವಾಸ್ತವ್ಯ ಇತ್ತೆಂದು ಸಂಶೋಧಿಸಿದ್ದಾರೆ. ನೂತನ ಶಿಲಾಯುಗಕ್ಕೆ (Neolithic) ಸಂಬಂಧಿಸಿದಂತಹ ಹಲವಾರು ಕುರುಹುಗಳು, ಪಳೆಯುಳಿಕೆಗಳು ಈ ಸ್ಥಳದಲ್ಲಿ ದೊರಕಿವೆ. ಈ ಸ್ಥಳದಲ್ಲಿರುವಂತಹ ಬೆಳ್ಳಿಬೆಟ್ಟವು ಪ್ರಸಿದ್ಧವಾಗಿದ್ದು ಸುಂದರವಾದಂತಹ ನೋಟವನ್ನು ಒದಗಿಸುತ್ತದೆ.

ನೂತನ ಶಿಲಾಯುಗಕ್ಕೆ ಸಂಬಂಧಪಟ್ಟಂತಹ ಆಯುಧಗಳು, ಉಪಕರಣಗಳು, ಕಲ್ಗೋರಿಗಳು, ಶವಕುಣಿಗಳು ಪತ್ತೆಯಾಗಿವೆ. ಶಾಸನದ ದೃಷ್ಟಿಯಿಂದ ಗಮನಿಸಿದರೆ ಈ ಸ್ಥಳದ ವಿಷಯವಾಗಿ ಮೌನವಾಗಿದೆ. ಈ ಪ್ರದೇಶವು ತೇಕಲ್ ನಾಡಿಗೂ ಗಂಗ ಅರಸರ ಕಾಲದಲ್ಲಿ ಕುವಳಾಲನಾಡಿಗೂ ಸೇರಿತ್ತು.

೫.೪ ಬಂಗಾರಪೇಟೆ ತಾಲ್ಲೂಕಿನ ಸ್ಥಳನಾಮಗಳು

ತಮಿಳುನಾಡು ಮತ್ತು ಆಂಧ್ರಪ್ರದೇಶದ ಗಡಿ ಪ್ರದೇಶಗಳನ್ನು ಹೊಂದಿರುವಂತಹ ಬಂಗಾರಪೇಟೆ ತಾಲ್ಲೂಕು ಕೋಲಾರ ಜಿಲ್ಲಾ ಕೇಂದ್ರದಿಂದ ದಕ್ಷಿಣಕ್ಕಿದೆ. ಕೋಲಾರದಿಂದ ೧೮ ಕಿ.ಮೀ. ದೂರದಲ್ಲಿರುವಂತಹ ಈ ತಾಲ್ಲೂಕು ಮಾದಮಂಗಲ, ಬೇತಮಂಗಲ, ಕಾಮಸಂದ್ರ, ಬೂದಿಕೋಟೆ ಮೊದಲಾದಂತಹ ಐತಿಹಾಸಿಕ ಸ್ಥಳಗಳನ್ನು ಹೊಂದಿದೆ. ಹೆಸರೇ ಹೇಳುವಂತೆ ಬಂಗಾರದ ನಾಡಾಗಿರುವಂತಹ ಈ ತಾಲ್ಲೂಕು ಕರ್ನಾಟಕದ ಭೂಪಟದಲ್ಲಿ ಪ್ರಧಾನ ಸ್ಥಾನವನ್ನು ಹೊಂದಿದೆ.

೫.೪.೧ ಬಂಗಾರಪೇಟೆ

ಬಂಗಾರಪೇಟೆ ತಾಲ್ಲೂಕು ಕೇಂದ್ರವಾಗಿದ್ದು, ಆಧುನಿಕ ಹೆಸರನ್ನು ಹೊಂದಿದೆ. ಪ್ರಾಚೀನ ಮೈಸೂರು ಪ್ರಾಂತ್ಯದ ಚೀಫ್ ಕಮೀಷನರ್ ಆಗಿದ್ದಂತಹ ಬೌರಿಂಗ್ ಅವರ ಹೆಸರಿನಿಂದ ಈ ಸ್ಥಳವು ಪ್ರಸಿದ್ಧವಾಗಿತ್ತು. ಅವರು ಈ ಸ್ಥಳಗಳಲ್ಲಿ ಮಾಡಿದಂತಹ ಅಭಿವೃದ್ಧಿ ಕಾರ್ಯಗಳ ನೆನಪಿಗಾಗಿ 'ಬೌರಿಂಗ್ ಪೇಟೆ' ಎಂದು ನಾಮಕರಣ ಮಾಡಲಾಗಿತ್ತು. ಈ ಭೂಮಿಯು ಬಂಗಾರ ದೊರಕುವಂತಹ ಭೂಮಿಯಾದ್ದರಿಂದ ಕ್ರಿ.ಶ.೧೯೪೮ರಲ್ಲಿ ಈ ತಾಲ್ಲೂಕನ್ನು ಬಂಗಾರಪೇಟೆ ಎಂದು ನಾಮಕರಣ ಮಾಡಲಾಯಿತು.[೩೧] ಜನರ ಆಡುಮಾತಿನಂತೆ ಈ ಪ್ರದೇಶಕ್ಕೆ ಮರಮಟ್ಲು ಅಥವಾ ಮರಮಾಟ್ಲು ಎಂಬ ಹೆಸರಿತ್ತು. ಸ್ಥಳನಾಮಗಳಲ್ಲಿ .ವಿಶೇಷವಾದಂತಹ ವಿಚಾರವಾಗಿರುವ ಆದರೆ ಕಾರಣಾಂತರಗಳಿಂದ ಎರಡು ಮೂರು ಬಾರಿ ಪುನರ್ನಾಮಕರಣವಾಗಿರುವಂತಹ ಸ್ಥಳಗಳಲ್ಲಿ ಬಂಗಾರುಪೇಟೆ ಒಂದಾಗಿದೆ.

ಮರಮುಟ್ಲು ಮತ್ತು ಬಂಗಾರಪೇಟೆ ಬೇರೆಯಾಗಿರದೆ ಒಂದೇ ಶಬ್ದವಾಗಿದ್ದು ರೂಪಾಂತರವಾಗಿದೆ. ಮರಮುಟ್ಲು ಶಬ್ದಕ್ಕೆ ಶಾಸನಾಧಾರಗಳು ದೊರೆಯುವುದಿಲ್ಲ. ಅದಲ್ಲದೆಯೇ ಪ್ರಾಚೀನ ಐತಿಹ್ಯಗಳನ್ನು ತಿಳಿಸುವಂತಹ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುವುದಿಲ್ಲ. ಇಲ್ಲಿಯ ಸ್ಥಳಪುರಾಣದ ಪ್ರಕಾರ ಪುರಾಣಗಳಲ್ಲಿ ಪ್ರಸಿದ್ಧರಾಗಿರುವಂತಹ ಭೃಗುಮಹರ್ಷಿಗಳು ಈ ಭೂಮಿಯಲ್ಲಿ ತಪಸ್ಸನ್ನು ನಡೆಸಿದ್ದರು. ಆ ಕಾಲದಲ್ಲಿಯೇ ಈ ಪ್ರದೇಶಕ್ಕೆ 'ಬಂಗಾರಗಿರಿ' ಎಂದು ಹೆಸರು ಪ್ರಸಿದ್ಧಿಯಾಗಿತ್ತು. ಈ ಪ್ರದೇಶವು ಬಂಗಾರುಪೇಟೆಯ ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ.ದೂರದಲ್ಲಿದೆ. ಬಂಗಾರು ತಿರುಪತಿ ಎಂದು ಕರೆಯಲ್ಪಡುವಂತಹ ಪ್ರದೇಶದಲ್ಲಿ ಒಂದು ಬೆಟ್ಟದಲ್ಲಿ ತಿರುಪತಿ ವೆಂಕಟರಮಣ ಸ್ವಾಮಿಯ ದೇವಾಲಯವಿದೆ. ಈ ದೇವಾಲಯವನ್ನು 'ಬಂಗಾರು ತಿರುಪತಿ', 'ಚಿನ್ನತಿರುಪತಿ' ಎಂದು ಕರೆಯುತ್ತಿದ್ದರು. ಅದಲ್ಲದೆಯೇ ಪ್ರಾಗೈತಿಹಾಸಿಕ ಕಾಲದಿಂದಲೂ ಈ ಪ್ರದೇಶದಲ್ಲಿ ಚಿನ್ನದ ಗಣಿಗಾರಿಕೆಯನ್ನು ಮಾಡಿ ಚಿನ್ನವನ್ನು ಉತ್ಪಾದಿಸುತ್ತಿದ್ದರು. ಇಲ್ಲಿ ಉತ್ಪಾದಿಸುತ್ತಿದ್ದಂತಹ ಚಿನ್ನವು ಹರಪ್ಪ ನಾಗರೀಕತೆ ಉಳ್ಳಂತಹ ಸ್ಥಳಗಳಿಗೂ ರಫ್ತಾಗುತ್ತಿದ್ದವು. ಹಾಗಾಗಿ ಪ್ರಾಚೀನ ಕಾಲದಿಂದಲೂ ಬಂಗಾರಕ್ಕೆ ಪ್ರಸಿದ್ಧವಾಗಿದ್ದಂತಹ ಈ ಪ್ರದೇಶಕ್ಕೆ 'ಬಂಗಾರಪೇಟೆ' ಎಂದು ಹೆಸರು ಬಂದಿರಬಹುದು. ಒಂದು ಸ್ಥಳದ ಹೆಸರು ರೂಪಾಂತರಗೊಂಡು ಮತ್ತೆ ಪುನಃ ಅದೇ ಹೆಸರನ್ನು ಪಡೆದಿರುವುದು ವಿಶೇಷವಾಗಿದೆ.[೩೨] ಬಂಗಾರು ಪೇಟೆ ಪ್ರದೇಶವು ನೊಳಂಬರ ಆಡಳಿತದಲ್ಲಿ ನೊಳಂಬವಾಡಿ ವಿಭಾಗಕ್ಕೂ, ಇಳವಂಜಿರಾಯನ ಆಡಳಿತದಲ್ಲಿ ಇಳವಂಜಿನಾಡಿನ ವ್ಯಾಪ್ತಿಗೂ ಒಳಪಟ್ಟಿತ್ತು.

೫.೪.೨ ಬೇತಮಂಗಲ

ಬೇತಮಂಗಲವು ಬಂಗಾರಪೇಟೆಯ ಪ್ರಮುಖ ಪ್ರದೇಶವಾಗಿದ್ದು ಬಂಗಾರಪೇಟೆಯಿಂದ ೧೫ ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ಪ್ರಸಿದ್ಧವಾಗಿದ್ದು, ಈ ಸ್ಥಳದ ಹೆಸರು ನೊಳಂಬರ ಆಡಳಿತ ಕಾಲದಿಂದಲೂ (ಕ್ರಿ.ಶ.೮ನೆಯ ಶತಮಾನದಿಂದಲೂ) ಪ್ರಸಿದ್ಧವಾಗಿದೆ. ಈ ಸ್ಥಳನಾಮದ ನಿಷ್ಪತ್ತಿಯನ್ನು ಶಾಸನಗಳಲ್ಲಿ ಗಮನಿಸಬಹುದಾಗಿದೆ. ಬೇತಮಂಗಲ ಗ್ರಾಮದಲ್ಲಿ ದೊರಕಿರುವಂತಹ ನೊಳಂಬರ ಕಾಲದ ಶಾಸನಗಳು ವಿಜಯಾದಿತ್ಯಮಂಗಲವೆಂದೇ ಉಲ್ಲೇಖಿಸಿವೆ. ಕ್ರಿ.ಶ.೯೪೪ರ ಸುಮಾರಿನ ಎರಡು ಶಾಸನಗಳು ವಿಜಯಾದಿತ್ಯಮಂಗಲ ಶಬ್ದವನ್ನು ಪ್ರಯೋಗಿಸಿವೆ.[೩೩]

ವಿಜಯಾದಿತ್ಯ ಶಬ್ದವು ಪ್ರಯೋಗವು ವಿಶೇಷವಾಗಿದೆ. ಬೇತಮಂಗಲ ಗ್ರಾಮದಲ್ಲಿ ನೊಳಂಬ ರಾಜರಿಗೆ ಸಂಬಂಧಿಸಿದಂತಹ ಶಾಸನಗಳು ದೊರಕಿವೆ. ಆದರೆ ಆ ವಂಶದಲ್ಲಿ ವಿಜಯಾದಿತ್ಯ ಎಂಬ ಹೆಸರುಳ್ಳ ರಾಜರುಗಳು ಕಂಡುಬರುವುದಿಲ್ಲ. ಆದರೆ ನೊಳಂಬರಿಗಿಂತ ಮೊದಲು ಆಳ್ವಿಕೆಯನ್ನು ನಡೆಸಿದ್ದಂತಹ ಬಾಣರ ಮನೆತನದಲ್ಲಿ ವಿಜಯಾದಿತ್ಯನೆಂಬ ಹೆಸರುಳ್ಳ ರಾಜನು ಇದ್ದನು. ಶಾತವಾಹನ ಸಾಮಂತರಾಗಿದ್ದಂತಹ ಬಾಣರು ಕೋಲಾರ ಮತ್ತು ತಮಿಳುನಾಡಿನ ಧರ್ಮಪುರಿಯ ಮೇಲೆ ಅಧಿಕಾರವನ್ನು ಹೊಂದಿದ್ದರು ಕೋಲಾರ ಜಿಲ್ಲೆಯ ಮೇಲೂ ಇವರಿಗೆ ಸಂಪೂರ್ಣವಾದಂತಹ ಹಿಡಿತವಿತ್ತು. ಈ ವಂಶದಲ್ಲಿ ಒಂದನೆಯ ವಿಜಯಾದಿತ್ಯ (ಕ್ರಿ.ಶ.೭೯೫–೮೩೫) ಮತ್ತು ಇಮ್ಮಡಿ ವಿಜಯಾದಿತ್ಯ ಪ್ರಭುಮೇರು (ಕ್ರಿ.ಶ.೮೯೫–೯೧೬) ಎಂಬ ಇಬ್ಬರು ರಾಜರು ಆಳ್ವಿಕೆಯನ್ನು ನಡೆಸಿದ್ದರು. ಇವರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದಲ್ಲಿ ಅಗ್ರಹಾರವನ್ನು ನಿರ್ಮಿಸಿ ತಮ್ಮ ಹೆಸರನ್ನು ಈ ಸ್ಥಳಕ್ಕೆ ನೀಡಿರಬಹುದು. ಹಾಗಾಗಿ ವಿಜಯಾದಿತ್ಯ ಮಂಗಲವೆಂದು ಪ್ರಸಿದ್ಧಿಗೆ ಬಂದಿದೆ. ಮುಳಬಾಗಿಲು ತಾಲ್ಲೂಕು ಬೈರಕೂರು ಹೋಬಳಿ ಮಣಿಗಟ್ಟು, ಗೊಲ್ಲಹಳ್ಳಿ ಗ್ರಾಮದಲ್ಲಿ ದೊರಕಿರುವಂತಹ ಕ್ರಿ.ಶ.೯೦೯ರ ಶಾಸನವು[೩೪] 'ಬಿಜೆಯಿತ್ತ ಬಾಣರಸ' ಎಂದು ಬಾಣರಸನನ್ನು ಹೆಸರಿಸಿದೆ. ಇದು ಇಮ್ಮಡಿ ವಿಜಯಾದಿತ್ಯನಾಗಿದ್ದು, ಆತನನ್ನು ಬಿಜೆಯಿತ್ತ ಎಂದು ಕರೆದಿದೆ. ಈ ಬಿಜೆಯಿತ್ತ ಎಂಬ ರೂಪವೇ 'ಬೇತಮಂಗಲ' ಎಂದು ರೂಪಾಂತರವಾಗಿರಬಹುದೆಂದು ವಿ.ಗೋಪಾಲಕೃಷ್ಣರು ಅಭಿಪ್ರಾಯ ಪಡುತ್ತಾರೆ. ಸಮಸ್ಯಾತ್ಮಕವಾದ ಕೆಲವು ಸ್ಥಳನಾಮಗಳನ್ನು ಉದಾಹರಿಸುತ್ತಾ ಭಾಷೆಗಳಲ್ಲಿ ಆಯಾ ಕಾಲ ಘಟ್ಟದಲ್ಲಿ ನಡೆದಿರುವಂತಹ ಧ್ವನಿ ಬದಲಾವಣೆಯ ಸ್ವರೂಪವನ್ನು ಹೇಳುತ್ತಾ ಬೇತಮಂಗಲದ ಸ್ವರೂಪವನ್ನು ಈ ರೀತಿಯಾಗಿ ಹೇಳಿದ್ದಾರೆ.

ವಿಜಯಾದಿತ್ಯ ಮಂಗಲ> ಬಿಜಯಾದಿತ್ಯ ಮಂಗಲಂ> ಬಿಜೈತ ಮಂಗಲಂ> ಬೇತಮಂಗಲಂ ಈ ರೀತಿಯಾಗಿ ಬೇತಮಂಗಲ ಶಬ್ದವು ವಿಜಯಿತ್ತ ಅಥವಾ ವಿಜಯಾದಿತ್ಯ ಶಬ್ದದಿಂದ ಉಂಟಾಗಿರಬಹುದೆಂದು ಅಭಿಪ್ರಾಯವಿದೆ[೩೫] ಬೇತಮಂಗಲ ಗ್ರಾಮದಲ್ಲಿ ಬೃಹದಾಕಾರದ ಕೆರೆಯು ಪ್ರಸಿದ್ಧವಾಗಿದೆ. ಇದನ್ನು ದೇವಲಬ್ಬೆ ಸಮುದ್ರವೆಂದು ಕರೆಯುತ್ತಿದ್ದರು. ಈ ಕೆರೆಯ ತೀರದಲ್ಲಿ ಪೊಳರಮಂಗಲವೆಂಬ ಅಗ್ರಹಾರವಿತ್ತೆಂದು ಅಭಿಪ್ರಾಯವಿದೆ. ನೊಳಂಬರಸನಾದ ಪಲ್ಲವೆಂದ್ರ ಇರಿವ ಮಹೇಂದ್ರ ರಾಜನ ತಾಯಿಯಾದ ದೇವಲಬ್ಬೆಯು ತನ್ನ ಹೆಸರಿನಲ್ಲಿ ಈ ಕೆರೆಯನ್ನು ನಿರ್ಮಿಸಿದಳೆಂದು ಪ್ರತೀತಿಯಿದೆ. ಇಲ್ಲಿ ಹೇಳಿರುವಂತಹ 'ಪೊಳರಮಂಗಲ'ವೇ ಬೇತಮಂಗಲವಾಗಿರಬೇಕೆಂದು ಅಭಿಪ್ರಾಯವಿದೆ.

ಆದರೆ ದೇವಬ್ಬರಸಿಯ ಶಾಸನದಲ್ಲಿ ಉಲ್ಲೇಖವಾಗಿರುವಂತಹ ಪೊರಲಮಂಗಲವು ಬೇತಮಂಗಲ ಅಲ್ಲವೆಂದು ಡಾ.ದೇವರಕೊಂಡಾರೆಡ್ಡಿಯವರು ದೃಢಪಡಿಸುತ್ತಾರೆ. ದೇವಬ್ಬರಸಿಯ ಕಾಲಕ್ಕಾಗಲೇ ಬೇತಮಂಗಲವು

ಬಿಜಯಿತಮಂಗಲವೆಂದು ಪ್ರಸಿದ್ಧವಾಗಿತ್ತೆಂದು ಪೊರಮಂಗಲವಾಗಿರಲು ಸಾಧ್ಯವಿಲ್ಲವೆನ್ನುತ್ತಾರೆ.[೩೬] ಬೇತಮಂಗಲದಲ್ಲಿ ಬಾಣರಸರ ಕಾಲಕ್ಕೆ ಸಂಬಂಧಿಸಿದಂತಹ ವಿಜಯೇಂದ್ರ ಮತ್ತು ಅರ್ಕೇಶ್ವರ ದೇವಾಲಯಗಳು ಪ್ರಸಿದ್ಧವಾಗಿದೆ.

೫.೪.೩ ಮಡಿವಾಳ

ಶಾಸನಗಳಲ್ಲಿ ಮಡಿವಾಳ ಅಥವಾ ಮಡವಾಳ ಎಂದು ಗುರುತಿಸಲ್ಪಡುವಂತಹ ಮಡಿವಾಳವು ಐತಿಹಾಸಿಕವಾಗಿ ಪ್ರಸಿದ್ಧವಾಗಿದೆ. ಈ ಕ್ಷೇತ್ರಕ್ಕೆ ಯಾವುದೇ ಸ್ಥಳಪುರಾಣವು ಗುರುತಿಸಿಕೊಳ್ಳದಿದ್ದರೂ ತಮಿಳುಭಾಷೆಯೊಂದಿಗೆ ಈ ಹೆಸರನ್ನು ಗುರುತಿಸಿಕೊಳ್ಳಲಾಗಿದೆ. ಮಡಿವಾಳ ಕ್ಷೇತ್ರವನ್ನು 'ಮಲ್ಪೆಯಾರ್ ಮಡ್ಡೈವಿಗಳಮಾ (ಮಾಲೂರು ಮಡಿವಾಳ) 'ಕೆಂದಟ್ಟು ಮಡ್ಡೈವಿಳಗವತ್ (ಕೆಂದಟ್ಟಿ ಮಡಿವಾಳ), ಕೇಶವನಾಪಳ್ಳಮಾ ಮಡ್ಡೈವಿಳಗಮಾ (ಕ್ಯಾಸಂಬಳ್ಳಿ ಮಡಿವಾಳ) ಎಂದು ಮೂರು ರೂಪಗಳಲ್ಲಿ ಗುರುತಿಸಲಾಗಿದೆ. ತಮಿಳುಭಾಷೆಯಲ್ಲಿರುವಂತಹ ಈ ಶಬ್ದಗಳ ಅರ್ಥವನ್ನು ಹುಡುಕುವಲ್ಲಿ ವಿದ್ವಾಂಸರು ಶ್ರಮಪಟ್ಟಿದ್ದಾರೆ. 'ಮಡ್ಡೈವಿಳಗಮ್' ಎಂಬ ಶಬ್ದವು ತಮಿಳುಭಾಷೆಯಲ್ಲಿ ದೇವಾಲಯ ಪರಿಸರ ಮತ್ತು ಸುತ್ತಲೂ ಇರುವ ದಾರಿ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಹಾಗೆಯೇ ಈ ಪ್ರದೇಶದಲ್ಲಿ ಅಧಿಕವಾಗಿ ದೇವಾಲಯಗಳು ಇವೆ[೩೭]

ಕ್ರಿ.ಶ.೧೪೧೭ರ ಮಡಿವಾಳ ಗ್ರಾಮದ ಮಲೇಶ್ವರ ದೇವಾಲಯದಲ್ಲಿ ದೊರಕಿರುವಂತಹ ಶಾಸನವು ಮಡಿವಾಳವನ್ನು 'ಅಭಿನವ ಕೈಲಾಸವೆಂದು ಹೊಗಳಿದೆ'[೩೮] ಮುಳಬಾಗಿಲು ತಾಲ್ಲೂಕಿನ ಉತ್ತನೂರು ಗ್ರಾಮದಲ್ಲಿ ದೊರಕಿರುವಂತಹ ಶಾಸನದಲ್ಲಿ ಮಡಿವಾಳವು ಹೊದೆನಾಡಿನ ಉತ್ತನೂರಿನಲ್ಲಿರುವುದಾಗಿ ಉಲ್ಲೇಖವಾಗಿದೆ[೩೯] ವಿಜಯನಗರೋತ್ತರ ಕಾಲದ ಹೆಚ್ಚಿನ ಶಾಸನಗಳಲ್ಲಿ ಮಡಿವಾಳ ಅಥವಾ ಮಡವಾಳ ಪ್ರದೇಶವು ಮುಳುವಾಯಿ ರಾಜ್ಯಕ್ಕೆ ಒಳಪಟ್ಟಿತ್ತೆಂದೇ ಉಲ್ಲೇಖವಾಗಿದೆ.

ಕ್ಯಾಸಂಬಳ್ಳಿ ಹೋಬಳಿಯಲ್ಲಿರುವ ಮಡಿವಾಳ ಗ್ರಾಮದಲ್ಲಿ ಸ್ವಯಂಭವೇಶ್ವರ ದೇವಾಲಯವು ಪ್ರಸಿದ್ಧವಾಗಿದೆ. ಈ ದೇವಾಲಯದ ಶೈಲಿಯನ್ನು ಗಮನಿಸಿದರೆ ೧೩ನೆಯ ಶತಮಾನದ ನಿರ್ಮಿತಿಯಾಗಿದೆ. ದೇವಾಲಯದ ಆವರಣದಲ್ಲಿ ಹಲವಾರು ತಮಿಳು ಶಾಸನಗಳು ದೊರಕಿದ್ದು ಇಳವಂಜಿರಾಯರ ಆಡಳಿತಕ್ಕೆ ಸೇರಿದ ಪ್ರದೇಶವಾಗಿತ್ತು. ಹೊಯ್ಸಳ ದೊರೆ ರಾಮನಾಥನು ತಮಿಳುನಾಡಿನ ಕಣ್ಣಾನೂರಿನಿಂದ ಆಳ್ವಿಕೆ ನಡೆಸಲು ಪ್ರಾರಂಭಿಸಿದ ನಂತರ ಇವರ ಸಾಮಂತರಾದ ಇಳವಂಜಿರಾಯರು ಬಂಗಾರಪೇಟೆಯ ಪ್ರದೇಶವನ್ನು ಆಳ್ವಿಕೆ ಮಾಡಲು ಪ್ರಾರಂಭಿಸಿದಾಗ ಈ ದೇವಾಲಯವು ನಿರ್ಮಾಣವಾಗಿರಬಹುದು.

೫.೪.೪ ಹುನಕುಂದ

ಬಂಗಾರಪೇಟೆಯ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕ್ಷೇತ್ರಗಳಲ್ಲಿ ಹುನಕುಂದ ಕ್ಷೇತ್ರವು ಒಂದು. ಹುನಕುಂದವು ಬಂಗಾರಪೇಟೆಯ ತಾಲ್ಲೂಕು ಕೇಂದ್ರದಿಂದ ೧೧ಕಿ.ಮೀ. ದೂರದಲ್ಲಿದೆ. ಈ ಸ್ಥಳಕ್ಕೆ ಸಂಬಂಧಿಸಿದಂತಹ ಯಾವುದೇ ಐತಿಹ್ಯಗಳು ದೊರೆಯುವುದಿಲ್ಲ. ಪ್ರಕೃತಿ ವಾಚಕವಾದ ಕಲ್ಲು ಶಬ್ದವನ್ನು ಬಳಸಿಕೊಂಡು ಹುನಕುಂದ ಶಬ್ದದ ವ್ಯುತ್ಪತ್ತಿಯನ್ನು ಮಾಡಿದ್ದಾರೆ. ಕುಂದ ಶಬ್ದಕ್ಕೆ ಹೂವು, ಬಂಡೆ ಇತ್ಯಾದಿ ಅರ್ಥಗಳು ಇವೆ. ಹಾಗಾಗಿ ಹೊನ್ನಿನಂತಹ ಬಂಡೆಗಳನ್ನು ಅಥವಾ ದುಂಡಗಾಗಿರುವಂತಹ ಬಂಡೆಗಳನ್ನು

ಹೊಂದಿರುವಂತಹ ಈ ಸ್ಥಳಕ್ಕೆ ಹುನುಕುಂದ ಅಥವಾ ಹುನಕುಂದ ಎಂದು ರೂಪಾಂತರ ಗೊಂಡಿರಬಹುದು. ಹೆಸರಿಗನುಗುಣವಾಗಿ ಈ ಪ್ರದೇಶದಲ್ಲಿ ಬಂಡೆಗಳನ್ನು ಹೊಂದಿರುವಂತಹ ಬೆಟ್ಟಗಳು ಹೆಚ್ಚಾಗಿ ಕಂಡುಬರುತ್ತದೆ.

ಹುನುಕುಂದ ಶಬ್ದದ ರೂಪಾಂತರವು ಹಲವಾರು ಮಜಲುಗಳನ್ನು ದಾಟಿ ಬಂದಿರುವಂತೆ ಕಂಡುಬರುತ್ತದೆ. ಶಾಸನಗಳಲ್ಲಿ ಆಧಾರದಲ್ಲಿ ನೋಡುವುದಾದರೆ ಹುನಕುಂದ ಶಬ್ದದ ರೂಪಾಂತರವನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ. ಪೊಂಕುನ್ನು>ಪೊಕ್ಕುಂದ> ಪೊಕುಂದ> ಪೊನ್ಕುಂದ>ಪುನುಕುಂದು> ಹುನುಕುಂದ.

ರಾಮಸಾಗರ ಹೋಬಳಿ ಕಸಬೆಯಲ್ಲಿ ದೊರಕಿರುವಂತಹ ಮಾಧವ ವರ್ಮನ ಕಾಲದ ಶಾಸನವು 'ಪೊಂಕುನ್ನುಪನ್ನೆರಡು' ಎಂದು ಸ್ಥಳವನ್ನು ನಿರ್ದೇಶಿಸಿದೆ. ಮಾಧವ ವರ್ಮನು ಎಳೆನಗರ್ನಾಡು-೭೦, ಅವನ್ಯನಾಡು-೩೦, ಪೊಂಕುನ್ನು-೧೨ ಪ್ರದೇಶಗಳನ್ನು ಸಂಯುಕ್ತವಾಗಿ ಆಳುತ್ತಿದ್ದನು ಎಂದು ತಿಳಿಸುತ್ತದೆ. ದಾಸರ ಹೊಸಹಳ್ಳಿ ಹೋಬಳಿಯಲ್ಲಿ ದೊರಕಿರುವಂತಹ ಮಹಾಬಲಿ ಬಾಣರಸರ ಕಾಲದ ಶಾಸನವು ಪೊಂಕುಂದು-೧೨ ಎಂದು ತಿಳಿಸಿದೆ. ಈ ಸಮಯದಲ್ಲಿ ಹುನಕುಂದವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತೆಂದು ಊಹಿಸಬಹುದಾಗಿದೆ.[೪೦]

ತಮಿಳುಶಾಸನಗಳಲ್ಲಿ ಪ್ರಯೋಗವಾಗಿರುವಂತಹ ಪೊನ್ಕುಂಡ್ರಂ ಎನ್ನುವುದರ ರೂಪಾಂತರವೇ ಪೊಂಕುಂದವಾಗಿದೆಯೆಂದು ಡಾ.ದೇವರಕೊಂಡಾರೆಡ್ಡಿಯವರ ಅಭಿಪ್ರಾಯವಾಗಿದೆ[೪೧]

ದಾಸರ ಹೊಸಹಳ್ಳಿಯ ಹುಲಿಕುಂದ ಗ್ರಾಮದ ದಿಮ್ಮಾಲೆದಿನ್ನೆಯಲ್ಲಿ ದೊರಕಿರುವಂತಹ ವೀರಗಲ್ಲು ಶಾಸನಗಳು ಪೊಕುಂದ ಹೆಸರನ್ನು ಉಲ್ಲೇಖಿಸಿವೆ. ವಿಶೇಷವೆಂದರೆ ಈ ಎಲ್ಲಾ ಶಾಸನಗಳು ತುರುಗೋಳ್ ಸ್ಮಾರಕ ಶಾಸನಗಳಾಗಿದ್ದು ಈ ಸ್ಥಳಗಳಲ್ಲಿ ನಡೆದಿರುವಂತಹ ತುರುಗೋಳ್ ಕಾಳಗವನ್ನು ಉಲ್ಲೇಖಿಸುತ್ತದೆ. ಈ ಶಾಸನಗಳು ನೊಳಂಬ ರಾಜರುಗಳ ಆಳ್ವಿಕೆಯನ್ನು ತಿಳಿಸುತ್ತಿದ್ದು ವಿವಿಧ ಸಂದರ್ಭಗಳಲ್ಲಿ ನಡೆದಂತಹ ತುರುಗೋಳ್ ಕಾಳಗಗಳನ್ನು ತಿಳಿಸುತ್ತದೆ. ಹುನುಕುಂದವು ವೀರರ ಭೂಮಿಯಾಗಿತ್ತೆಂದು ಊಹಿಸಬಹುದಾಗಿದೆ[೪೨] ಈ ಶಾಸನಗಳಲ್ಲಿ ಕೊಂಗಮಂಗಲ, ನರಸಿಂಗಮಂಗಲ, ಬೇಲೂರು ಮೊದಲಾದ ಸ್ಥಳಗಳ ಉಲ್ಲೇಖಗಳು ದೊರೆಯುತ್ತವೆ. ಮೊದಲು ಬಾಣರಸರ, ನಂತರ ಗಂಗರಸರ ಆಳ್ವಿಕೆಗೆ ಒಳಪಟ್ಟಿದ್ದಂತಹ ಈ ಸ್ಥಳವು ದಿಲೀಪಯ್ಯರಸನ ಆಳ್ವಿಕೆಯ ಸಂದರ್ಭದಲ್ಲಿ ನೊಳಂಬರಿಗೆ ಸೇರಿಹೋಗಿತ್ತು. ಗಂಗ ಅರಸರ ಆಳ್ವಿಕೆಗೆ ಸೇರಿರುವಂತಹ ವಿಚಾರವು ಕಸಬೆಯಲ್ಲಿ ದೊರಕಿರುವಂತಹ ಸ್ಮಾರಕ ಶಾಸನವು ತಿಳಿಸುತ್ತದೆ.[೪೩]

ಸ್ವಸ್ತ್ಯ ಶೇಷ ಭುವನ ವಿದಿತ ಗಂಗಾನ್ವಯ ಸ್ತೂಯಮಾನಮಾನೋದಯ

ಶ್ರೀಮಾಧವಮ್ಮತ್ತರಸರೆಳೆನಗರ್ನ್ನಾಡೆರ್ಪ್ಪತ್ತು

ಮಾವನ್ನ ನಾಡುಂ ಮೂವತ್ತು ಪೊಂಕುಂದ ಪನ್ನೆರಡು . . ."

ಗಂಗ ಅರಸರ ಆಳ್ವಿಕೆಯಲ್ಲಿ ಪೊಕುಂದವು ೧೨ ಗ್ರಾಮಗಳನ್ನು ಹೊಂದಿದ್ದಂತಹ ಸಣ್ಣ ಪ್ರದೇಶವಾಗಿತ್ತು. ದಿಮಾಲೆ ದಿನ್ನೆಯಲ್ಲಿರುವ ವೀರಗಲ್ಲು ಶಾಸನಗಳು ನೊಳಂಬರಾಜ ದಿಲೀಪಯ್ಯನಿಗೆ ಸಂಬಂಧಿಸಿದುದಾಗಿದೆ. ಅವನ್ಯ ನಾಡುವಿನ ಪಕ್ಕದಲ್ಲಿಯೇ ಪೊಕ್ಕುಂದ ನಾಡು ನೆಲೆಸಿದ್ದು ನೊಳಂಬವಾಡಿಯ ಅವಿಭಾಜ್ಯ ಅಂಗವಾಗಿದ್ದಂತೆ ತಿಳಿದುಬರುತ್ತದೆ. ಗಂಗರ ಕಾಲಕ್ಕೆ ಸಂಬಂಧಿಸಿರುವಂತಹ ಸೋಮೇಶ್ವರ ದೇವಾಲಯ ಮತ್ತು ಚೌಡೇಶ್ವರಿ ದೇವಾಲಯವು ಬಹಳ ಪ್ರಸಿದ್ಧವಾಗಿದೆ.

ಬಂಗಾರಪೇಟೆ ತಾಲ್ಲೂಕಿನಲ್ಲಿ ಹೊಸಕೋಟೆ, ಕಾರುಬೆಲೆ, ಬೆಂಗನೂರ, ಕೀಳುಕೊಪ್ಪ, ಮರಗಲ್ಲು, ಮಗುಳಬೆಲೆ, ಮಾದಿಮಂಗಲ, ಸೂಲುಕುಂಟೆ, ಕಾಮಸಮುದ್ರ, ಉಕ್ಕುಂದ ಮೊದಲಾದ ಗ್ರಾಮಗಳಲ್ಲಿಯೂ ಶಾಸನಗಳು ದೊರಕಿದ್ದು ವಿಜಯನಗರೋತ್ತರದ ಕಾಲವನ್ನು ತಿಳಿಸುತ್ತದೆ.

೫.೫ ಮುಳಬಾಗಿಲು ತಾಲ್ಲೂಕಿನ ಶಾಸನಗಳು

೫.೫.೧ ಮುಳಬಾಗಿಲು

ತಾಲ್ಲೂಕು ಕೇಂದ್ರವಾದ ಮುಳಬಾಗಿಲು ಕೋಲಾರದಿಂದ ೩೦ಕಿ.ಮೀ. ಪೂರ್ವ ದಿಕ್ಕಿನಲ್ಲಿದೆ. ಕೋಲಾರ ಜಿಲ್ಲೆಯಲ್ಲಿ ಮುಳಬಾಗಿಲು ತಾಲ್ಲೂಕು ಪ್ರಧಾನವಾಗಿದೆ. ರಾಮಾಯಣ ಕಾಲದಿಂದ ಆರಂಭಿಸಿ ಆಧುನಿಕ ಕಾಲದವರೆಗಿನ ಅನೇಕ ಐತಿಹ್ಯಗಳು ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ಅವುಗಳು ಕೆಲವು ಐತಿಹ್ಯಗಳು ಈ ರೀತಿಯಾಗಿವೆ.

೧. ರಾಮಾಯಣದ ಕಥಾಧಾರಿತವಾಗಿ ಹೇಳುವುದಾದರೆ ಹನುಮಂತನು ಸಂಜೀವಿನಿ ಪರ್ವತವನ್ನು ಎತ್ತಿಕೊಂಡು ಹೋಗುವಂತಹ ಸಂದರ್ಭದಲ್ಲಿ ಬೆಟ್ಟದಿಂದ ಒಂದು ಕಲ್ಲು ಈ ಪ್ರದೇಶದಲ್ಲಿ ಬಿದ್ದು ಬೆಟ್ಟವೊಂದು ನಿರ್ಮಾಣವಾಯಿತು. ಅದನ್ನು ಜನರು 'ಅಂಜನಾದ್ರಿ' ಬೆಟ್ಟವೆಂದು ಕರೆದರು. ಅದಲ್ಲದೆಯೇ ಇದೇ ಬೆಟ್ಟದಲ್ಲಿಯೇ ಹನುಮಂತನ ತಾಯಿ ಅಂಜನಾದೇವಿಯು ತಪಸ್ಸನ್ನು ಮಾಡಿದಳು ಎಂದೂ ಪ್ರತೀತಿಯಿದೆ.

೨. ಮಹಾಭಾರತದ ಕಥೆಯು ಆಧಾರವಾಗಿಟ್ಟು ಕೊಂಡು ಈ ಪ್ರದೇಶವನ್ನು ಅರ್ಜುನ ಕ್ಷೇತ್ರವೆಂದು ಜನರು ಹೇಳುತ್ತಾರೆ. ಮಹಾಭಾರತ ಯುದ್ಧ ಮುಗಿದ ನಂತರ ಅರ್ಜುನನು ತನ್ನ ರಥದ ಪತಾಕೆಯಲ್ಲಿ ನೆಲೆಸಿದ್ದ ತನಗೆ ಜಯವನ್ನು ತಂದುಕೊಟ್ಟಂತಹ ಹನುಮಂತನ ನೆನಪಿಗಾಗಿ ಇಲ್ಲಿಗೆ ಬಂದು ಹನುಮಂತ ದೇವರ ಪ್ರತಿಷ್ಠೆಯನ್ನು ಮಾಡಿರುವನೆಂದು ಪ್ರತೀತಿಯಿದೆ. ಅರ್ಜುನನು ಈ ಕಾರ್ಯವನ್ನು ಮಾಡಿರುವುದರಿಂದ ಈ ಕ್ಷೇತ್ರಕ್ಕೆ ಅರ್ಜುನಕ್ಷೇತ್ರವೆಂದು ಪ್ರಸಿದ್ಧಿಯಿದೆ.[೪೪]

೩. ಈ ಕ್ಷೇತ್ರದ ನಿಷ್ಪತ್ತಿಯು ಅಚ್ಚಗನ್ನಡದಲ್ಲಿ ಇರುವುದು ವಿಶೇಷವಾಗಿದೆ. ಕರ್ನಾಟಕದ ಪೂರ್ವಕ್ಕೆ ತಿರುಪತಿ ಕ್ಷೇತ್ರವು ವಿರಾಜಮಾನವಾಗಿದೆ. ಕರ್ನಾಟಕದ ಹೆಚ್ಚಿನ ಮನೆಯದೇವರು ತಿರುಪತಿ ತಿಮ್ಮಪ್ಪನಾಗಿದ್ದು ತಮ್ಮ ಜೀವನದಲ್ಲಿ ತಿಮ್ಮಪ್ಪನ ದರ್ಶನವನ್ನು ಮಾಡುವುದು ವಾಡಿಕೆಯಾಗಿದ್ದು, ಈ ತೀರ್ಥಯಾತ್ರೆಯನ್ನು ಹೆಚ್ಚಾಗಿ ಕಾಲುನಡಿಗೆಯಲ್ಲೋ, ಎತ್ತಿನಬಂಡಿಯಲ್ಲಿ ಕುಳಿತುಕೊಂಡೋ ಹೋಗುತ್ತಿದ್ದರು. ಕರ್ನಾಟಕದ ಅದರಲ್ಲೂ ದಕ್ಷಿಣದ ಭಾಗದವರಿಗೆ ತಿರುಪತಿಗೆ ಹೋಗಬೇಕಾದರೆ ಮುಳಬಾಗಿಲು ಕ್ಷೇತ್ರವೇ ರಹದಾರಿಯಾಗಿತ್ತು. ಹಾಗಾಗಿ ತಿರುಪತಿಗೆ ಹೋಗಬೇಕಾದರೆ ಬಾಗಿಲಿನಂತಿರುವಂತಹ ಈ ಪ್ರದೇಶವೇ ಪ್ರವೇಶ ದ್ವಾರವಾಗಿತ್ತು. ಈ ದ್ವಾರವು ಮೂಡು ದಿಕ್ಕಿನಲ್ಲಿರುವುದರಿಂದ 'ಮೂಡಲಬಾಗಿಲು' ಎಂದು ಪ್ರಸಿದ್ಧಿಗೆ ಬಂದಿತೆಂದು ಜನರ ನಂಬಿಕೆಯಿದೆ. ಅದಲ್ಲದೆಯೇ ತಮಿಳುನಾಡು ಪ್ರದೇಶದವರು ಕಂಚೀಪುರದಿಂದ ಕರ್ನಾಟಕದ ಪ್ರದೇಶಕ್ಕೆ ಬರಬೇಕಾದರೆ ಇದೇ ಪ್ರದೇಶದಿಂದ ಬರುತ್ತಿದ್ದುದರಿಂದ ಸಹಜವಾಗಿ ಮೂಡಲಬಾಗಿಲು ಎಂದು ಪ್ರಸಿದ್ಧಿಯಾಯಿತೆಂದೂ ಪ್ರತೀತಿಯಿದೆ.

ವಿಶೇಷವೆಂದರೆ ಶಾಸನಗಳಲ್ಲಿ 'ಮೂಡಲಬಾಗಿಲು' ಎಂಬ ಶಬ್ದವು ಉಲ್ಲೇಖವಾಗದೇ ಇರುವುದು. ಮೂಡಲಬಾಗಿಲು ಎಂಬ ಶಬ್ದವು ಜನರ ಬಾಯಿಯಲ್ಲಿ ಮೂಡಲಶಬ್ದವು 'ಮುಳ' ಎಂದು ರೂಪಾಂತರವಾಗಿದೆ. ಸ್ಥಳನಾಮ ಶಾಸ್ತ್ರಜ್ಞರಾದ ವಿ.ಗೋಪಾಲಕೃಷ್ಣರವರು ತಪ್ಪುಗ್ರಹಿಕೆಯಿಂದಾಗುವಂತಹ ಭಾಷಾಂತರವನ್ನು ಉಲ್ಲೇಖಿಸುತ್ತಾ ಸಂಸ್ಕೃತ ಭಾಷೆಯಿಂದ ಬಂದಿರುವಂತಹ ಭಾಷಾಂತರವನ್ನು ಈ ಸ್ಥಳಕ್ಕೆ ನೀಡಿದ್ದಾರೆ. ಮೂಡಲ ಶಬ್ದವು ಭಾಷಾಂತರಗೊಂಡಂತಹ ಸಂದರ್ಭದಲ್ಲಿ 'ಮುಳು' ಶಬ್ದವನ್ನು ಮುಳ್ಳು ಎಂದು ತಪ್ಪಾಗಿ ಅರ್ಥಗ್ರಹಿಸಿ ಮುಳ್ಳುದ್ವಾರ ಅಥವಾ ಮುಳ್ಳು ತುಂಬಿರುವಂತಹ ದ್ವಾರ ಅಥವಾ ಬಾಗಿಲು 'ಮುಳ್ಳುಬಾಗಿಲು' ಎಂಬುವುದು. 'ಮುಳುಬಾಗಿಲು' ಎಂದು ಆಗಿರಬಹುದು ಎಂದು ಅಭಿಪ್ರಾಯವಿದೆ.[೪೫]

ಹಾಗಾಗಿ ಕಂಟಕದ್ವಾರ ಎಂಬುವುದು ಕನ್ನಡೀಕರಿಸಿದಾಗ ಮುಳ್ಳು (ಮುಳು)ಬಾಗಿಲು ಆಗಿರಬಹುದು. ಆದರೆ ಇದು ತಪ್ಪುಗ್ರಹಿಕೆಯಿಂದಾಗಿರುವಂತಹ ರೂಪವಾಗಿದ್ದು ಸಂಸ್ಕೃತ ಭಾಷಾವಿದ್ವಾಂಸರು ಪೂರ್ವ ಕವಾಟಪುರವೆಂದು ಸಂಸ್ಕೃತಭಾಷೆಗೆ ರೂಪಾಂತರಗೊಳಿಸಿದ್ದಾರೆ. ಈ ಶಬ್ದವನ್ನು ಕನ್ನಡ ಭಾಷೆಗೆ ಬದಲಾಯಿಸಿದಾಗ ಪೂರ್ವ – ಮೂಡಲು, ಕವಾಟ–ಬಾಗಿಲು ಎಂದು ಆಗುವುದು.

ಶಾಸನಗಳ ಆಧಾರದಲ್ಲಿ ವಿವರಣೆಯನ್ನು ಗಮನಿಸಿದರೆ ಮುಳುಬಾಗಿಲು ಶಬ್ದದ ರೂಪವನ್ನು ಮೂರು ವಿಧವಾಗಿ ಗಮನಿಸಬಹುದಾಗಿದೆ. ಮುಳುವಾಗಿಲು, ಮುಳುವಾಯಿ ಮತ್ತು ಮುಳುಬಾಗಿಲು ಇವು ಮುಳಬಾಗಿಲು ಶಬ್ದದ ರೂಪ ನಿಷ್ಪತ್ತಿಯನ್ನು ನೋಡಬಹುದಾಗಿದೆ. ಮುಳುವಾಯಿ ಶಬ್ದವು ಕೋಲಾರ ಜಿಲ್ಲೆಯ ಕೆಲವು ಶಾಸನಗಳಲ್ಲಿ ದೊರೆಯುತ್ತವೆ. ಕ್ರಿ.ಶ.೧೨೬೧ರ ಇಳವಂಜಿರಾಯನ ಉಲ್ಲೇಖವಿರುವಂತಹ ತಾಮ್ರಶಾಸನವು[೪೬] ಪ್ರಸನ್ನ ಸೋಮೇಶ್ವರ ಸ್ವಾಮಿಯವರ ಅಂಗರಂಗ ವೈಭೋಗಕ್ಕೆಂದು ಮುಳುವಾಯಿ ಗ್ರಾಮಕ್ಕೆ ಸಲುವಂತಹ ಕೆಲವು ಗ್ರಾಮಗಳನ್ನು ಧಾರಾಪೂರ್ವಕವಾಗಿ ನೀಡಿರುವಂತಹ ವಿಷಯವು ಉಕ್ತವಾಗಿದೆ. ಇಂಡ್ಲಹಳ್ಳಿಗ್ರಾಮ, ಗುರ್ವಕಲ್ಲು ಗ್ರಾಮ, ಮಾರಂಡಹಳ್ಳಿ, ಕೊಂಡೇನಹಳ್ಳಿ, ಗಡಿಪಲ್ಲಿ ಬಳಿಯ ನೆಲ್ಲಿಕುಂಟೆಗ್ರಾಮ, ಕಗ್ಗನಹಳ್ಳಿ, ತಿರುಮಲಹಳ್ಳಿ, ಪಾರೇನಹಳ್ಳಿ, ತೊಲಡಿಗ್ರಾಮ, ಮೇಲುತಾಯಲೂರು, ತ್ಯಾಕಲ್ಲು ಸೀಮೆಯೊಳಗಿನ ಕಂಪ್ಪಸಮುದ್ರ ಗ್ರಾಮ, ಕಸಬೆಯೊಳಗೆ ಸೋಮೇಶ್ವರ ಕೆರೆ ಮೊದಲಾದ ಗ್ರಾಮಗಳು ಮುಳುವಾಯಿ ಸೀಮೆಯೊಳಗೆ ಸೇರಿತ್ತೆಂದು ಉಲ್ಲೇಖವಿದೆ.

ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿ ಮುಳುವಾಯಿ ರಾಜ್ಯವಾಗಿತ್ತೆಂದು ಶಾಸನಗಳು ಉಲ್ಲೇಖಿಸಿವೆ. ಈ ಹಿಂದೆ ತಿಳಿಸಿರುವಂತೆ ಇಳವಂಜಿರಾಯನ ಆಳ್ವಿಕೆಯ ನಂತರ ಮುಳುವಾಯಿ ಪ್ರದೇಶದ ಕೆಲವು ಸ್ಥಳಗಳು ಇಳವಂಜಿನಾಡು ಎಂದು ಪ್ರಸಿದ್ಧವಾಗಿತ್ತು. ಈ ಇಳವಂಜಿನಾಡು ಮುಳುವಾಯಿ ರಾಜ್ಯದೊಳಗೆ ಸೇರ್ಪಟ್ಟಿತ್ತು.[೪೭] ಮುಳಬಾಗಿಲು ತಾಲ್ಲೂಕಿನಲ್ಲಿ ದೊರೆಯುತ್ತಿರುವಂತಹ ಶಾಸನಗಳಲ್ಲಿ 'ಮುಳುವಾಯ' ಶಬ್ದವನ್ನು ಪ್ರಯೋಗಿಸಲಾಗಿದೆ. ಆದರೆ ವಿಜಯನಗರದ ಶಾಸನಗಳಲ್ಲಿ ಈ ಸ್ಥಳವು ರಾಜ್ಯವಾಗಿ ಮಾರ್ಪಾಡಾಗಿತ್ತು. ಮುಳುಬಾಗಿಲಿನಲ್ಲಿ ಸೋಮೇಶ್ವರ ದೇವಾಲಯವು ಪ್ರಸಿದ್ಧವಾಗಿದ್ದು, ವಿಜಯನಗರದ ಅರಸರ ಕಾಲದಲ್ಲಿ ಪ್ರಸಿದ್ಧವಾಗಿರುವಂತಹ ದೇವಾಲಯವಾಗಿದೆ.

೫.೫. ೨ ಆವನಿ

ಮುಳಬಾಗಿಲು ತಾಲ್ಲೂಕಿನಿಂದ ನೈರುತ್ಯ ದಿಕ್ಕಿಗೆ ೧೨ಕಿ.ಮೀ. ದೂರದಲ್ಲಿರುವಂತಹ ಆವನಿ ಎಂಬ ಸ್ಥಳವು ಜಿಲ್ಲೆಯ ಧಾರ್ಮಿಕ ಪುಣ್ಯಕ್ಷೇತ್ರಗಳಲ್ಲೊಂದಾಗಿದ್ದು, ರಾಮಾಯಣ ಮಹಾಕಾವ್ಯದಲ್ಲಿ ಬರುವಂತಹ ರಾಮನ ವನವಾಸಕ್ಕೆ ಸಂಬಂಧಿಸಿದಂತಹ ಹಲವಾರು ಮಾಹಿತಿಗಳನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಈ ಸ್ಥಳದ ಐತಿಹ್ಯವನ್ನು ಗಮನಿಸಿದರೆ ರಾಮಾಯಣ ಕಾಲದಲ್ಲಿ ಇದ್ದಂತಹ ಹೆಸರನ್ನೇ ಪ್ರಧಾನವಾಗಿಟ್ಟುಕೊಂಡು ಅರ್ಥ ನಿಷ್ಪತ್ತಿಯನ್ನು ಗಮನಿಸಬೇಕಾಗುತ್ತದೆ. ಹಿಂದಿನ ಕಾಲದಿಂದಲೂ ಧಾರ್ಮಿಕ ಕ್ಷೇತ್ರವಾಗಿರುವಂತಹ ಈ ಪ್ರದೇಶವು ಆವಂತಿಕಾ ಕ್ಷೇತ್ರವೆಂದು ಜನರ ಬಾಯಿಯಲ್ಲಿ ಪ್ರಸಿದ್ಧವಾಗಿದೆ. ಆವಂತಿಕಾ ಎಂಬ ಸ್ಥಳವೇ ಸಂಕುಚಿತವಾಗಿ ಈಗ 'ಆವನಿ' ಎಂದಾಗಿದೆ.

ಆವನಿ ಕ್ಷೇತ್ರದಲ್ಲಿರುವಂತಹ ಹಲವಾರು ದೇವಾಲಯಗಳ ಪೈಕಿ ಏಕಾಂತ ರಾಮೇಶ್ವರ, ಸೀತಾಪಾರ್ವತಿ ದೇವಾಲಯ, ರಾಮೇಶ್ವರ ದೇವಾಲಯಗಳ ಸಮೂಹದಲ್ಲಿ ಕಂಡುಬರುವಂತಹ ರಾಮೇಶ್ವರ, ಲಕ್ಷ್ಮಣೇಶ್ವರ, ಭರತೇಶ್ವರ, ಶತೃಘ್ನೇಶ್ವರ, ಆಂಜನೇಶ್ವರ, ಸುಗ್ರೀವೇಶ್ವರ, ಅಂಗದೇಶ್ವರ ಮೊದಲಾದ ದೇವಾಲಯಗಳು ಈ ಕ್ಷೇತ್ರದ ಪಾವಿತ್ರ್ಯತೆಯನ್ನು ಮತ್ತೆ ಧಾರ್ಮಿಕ ಮಹತ್ವವನ್ನು ಹೆಚ್ಚಿಸಿವೆ. ಈ ದೇವಾಲಯಗಳು "ತ್ರಿಭುವನ ಕರ್ತಾರದೇವ"ನ ಕಾಲದಲ್ಲಿ ರಚನೆಯಾಗಿದ್ದು, ಈತನು ತನ್ನ ಜೀವಿತಾವಧಿಯಲ್ಲಿ ಅನೇಕ ಸಣ್ಣ ಸಣ್ಣ ದೇವಾಲಯಗಳನ್ನು ರಚಿಸಿದ್ದನೆಂದು ತೋರುತ್ತದೆ[೪೮]

ರಾಮಾಯಣದ ಕರ್ತೃವಾದ ವಾಲ್ಮೀಕಿ ಮಹರ್ಷಿಯ ಆಶ್ರಮವು ಇದೇ ಸ್ಥಳದಲ್ಲಿದ್ದು, ರಾಮನು ಲಂಕೆಯಲ್ಲಿ ರಾವಣನನ್ನು ಸೋಲಿಸಿ ಅಯೋಧ್ಯೆಗೆ ಹಿಂತಿರುಗುವಾಗ ವಾಲ್ಮೀಕಿಯ ಆಶ್ರಯವಿದ್ದಂತಹ ಈ ಸ್ಥಳಕ್ಕೆ ಬಂದಿದ್ದನೆಂದು ಐತಿಹ್ಯವಿದೆ. ರಾಮಾಯಣದ ಉತ್ತರಕಾಂಡದಲ್ಲಿ ಬರುವಂತಹ ಕಥೆಗೂ ಈ ಸ್ಥಳವು ಆಧಾರವಾಗಿದೆ. ರಾಮನಿಂದ ಪರಿತ್ಯಕ್ತಳಾದ ಸೀತಾದೇವಿಯು ಲವಕುಶರಿಗೆ ಇದೇ ಸ್ಥಳದಲ್ಲಿ ಜನ್ಮ ನೀಡಿದಳು ಎಂದು ಐತಿಹ್ಯವಿದೆ.[೪೯]

ಕ್ರಿ.ಶ.೧೩೬೯ರ ಶಿಲಾಶಾಸನವು 'ಆವನಿ' ಶಬ್ದವನ್ನು ಪ್ರಯೋಗಿಸಿದೆ. ಶತ್ರುಘ್ನ ದೇವಾಲಯ ಶಾಸನವು 'ಆವನ್ಯ' ಶಬ್ದವನ್ನು, ಕ್ರಿ.ಶ.೧೩೨೮ರ ಶಾಸನವು 'ಆವನಿ' ಶಬ್ದವನ್ನು, ನೊಳಂಬಕಾಲದ ಶಾಸನವು 'ಆವನ್ಯ' ಶಬ್ದವನ್ನು, ಬಲ್ಲಗ್ರಾಮದ ಈಶ್ವರ ದೇವಾಲಯದ ಶಾಸನವು 'ಅವನ್ಯ' ಎಂದು ಉಲ್ಲೇಖಿಸಿದೆ.[೫೦]

ಆವನಿಗೆ ಸಂಬಂಧಿಸಿದಂತೆ ಮತ್ತು ಆವನಿಯ ಬೆಟ್ಟದ ಕುರಿತಾಗಿ ಇನ್ನೂ ಹಲವಾರು ಐತಿಹ್ಯಗಳು ದೊರಕಿದ್ದು ರಾಮಾಯಣದಲ್ಲಿ ಬರುವ ಸೀತೆಯ ಜೀವನದ ಘಟನೆಗಳು ಆವನಿಯ ಬೆಟ್ಟದ ಮೇಲೆ ಜರುಗಿವೆ ಎಂಬ ಗಾಢವಾದ ನಂಬಿಕೆಯಿದೆ. ರಾಮಾಯಣದ ಉತ್ತರಕಾಂಡ ಬರುವಂತಹ ಕಥೆಯಂತೆ ರಾಮನು ಸೀತೆಯನ್ನು ತ್ಯಜಿಸಿದಾಗ ವಾಲ್ಮೀಕಿ ಆಶ್ರಮಕ್ಕೆ ಬಂದು ಲವ-ಕುಶರಿಗೆ ಜನ್ಮ ನೀಡಿದ ನಂತರ ರಾಮನು ಅಶ್ವಮೇಧಯಾಗದ ಅಶ್ವವನ್ನು ಲವಕುಶರು ಕಟ್ಟಿಹಾಕಿದ್ದು ಅದನ್ನು ಬಿಡಿಸಿಕೊಳ್ಳಲು ಬಂದಂತಹ ಲಕ್ಷ್ಮಣ ಇತ್ಯಾದಿಗಳು ಓಡಾಡಿದಂತಹ, ಯುದ್ಧ ಮಾಡಿದಂತಹ ಸ್ಥಳಗಳು ಮತ್ತು ಎತ್ತರವಾದ ಬಂಡೆಗಳ ಮೇಲೆ ಸೀತಾದೇವಿಯು ನಿಂತು ಕೆಳಗೆ ಲವ ಮತ್ತು ಕುಶರು ಯುದ್ಧ ಮಾಡಿದಂತಹ ದೃಶ್ಯವನ್ನು ನೋಡಿರುವಂತಹ ಸ್ಥಳವು ಇಲ್ಲಿದೆ[೫೧] ರಾಮಾಯಣಕ್ಕೆ ಸಂಬಂಧಿಸಿದಂತಹ ಇಷ್ಟೆಲ್ಲಾ ಕಥೆಗಳನ್ನು ಗಮನಿಸಿ ಈ ಕ್ಷೇತ್ರವನ್ನು ಮತ್ತೊಂದು ರಾಮೇಶ್ವರ ಎಂದೂ ಕರೆಯುತ್ತಾರೆ.

ಆವನಿ ಕ್ಷೇತ್ರವು ಶಾಸನಗಳಲ್ಲಿ ಬಹುವಾಗಿ ವರ್ಣಿತವಾಗಿದೆ. ಹೆಚ್ಚಾಗಿ ವಿಜಯನಗರೋತ್ತರ ಕಾಲದಲ್ಲಿ 'ಆವನಿಕ್ಷೇತ್ರದ' ಉಲ್ಲೇಖವು ದೊರೆಯುತ್ತಿದ್ದು, 'ಆವನಿನಾಡು' ಎಂದು ಕಂಡುಬರುತ್ತದೆ. ಆವನಿಯ ರಾಮೇಶ್ವರ ದೇವಾಲಯದ ಉಲ್ಲೇಖವು ಮುಳಬಾಗಿಲು ಪ್ರದೇಶದಲ್ಲಿ ದೊರಕಿರುವ ಶಾಸನಗಳು ನೀಡುತ್ತಿವೆ.[೫೨]

ಮುಳಬಾಗಿಲು ತಾಲ್ಲೂಕಿನ ಆವನಿ ಹೋಬಳಿಯಲ್ಲಿರುವ ಶತೃಘ್ನ ದೇವಸ್ಥಾನದ ದಾನಶಾಸನವು ದಿಲೀಪಯ್ಯ ರಾಜನು ಅವನ್ಯ ಸ್ಥಾನದಲ್ಲಿ ದಾನವನ್ನು ಬಿಟ್ಟಂತೆ ಉಲ್ಲೇಖಿಸಿದೆ.[೫೩]

"ಶ್ರೀಮದಿಲೀಪಯ್ಯ" ಪ್ರಿಥುವೀ ರಾಜ್ಯಗೆಯುತ್ತಿರೆ

ಅವನ್ಯ ಸ್ಥಾನದ . . ."

ಅವನಿ ಗ್ರಾಮದಲ್ಲಿರುವಂತಹ ನೊಳಂಬರ ಕಾಲದ ಶಾಸನವು ತ್ರಿಭುವನಕರ್ತಾರದೇವನು ಅವನ್ಯ ಸ್ಥಾನವನ್ನು ನಲ್ವತ್ತು (೪೦) ವರ್ಷಗಳ ಕಾಲ ಆಳಿದ್ದು, ಈ ಸ್ಥಳದಲ್ಲಿ ದೇವಾಲಯವನ್ನು, ಕೆರೆಯನ್ನು ಕಟ್ಟಿಸಿರುವನೆಂದು ಉಲ್ಲೇಖಿಸಿದೆ. ಶಕವರ್ಷ ೮೫೩ರ ಕಾಲವನ್ನು ಉಲ್ಲೇಖಿಸುತ್ತಿದ್ದು ತ್ರಿಭುವನ ಕರ್ತರ ದೇವನು ಅವನ್ಯಸ್ಥಾನದ ಅಧಿಪತಿಯಾಗಿದ್ದನೆಂದು ಊಹಿಸಬಹುದಾಗಿದೆ. ಬಲ್ಲಗ್ರಾಮದಲ್ಲಿ ದೊರಕಿರುವಂತಹ ಇನ್ನೊಂದು ಶಾಸನವು ತ್ರಿಭುವನ ಕರ್ತರ ದೇವನು ಅವನ್ಯ ಸ್ಥಾನವನ್ನು ಆಳುತ್ತಿದ್ದನೆಂದು ಉಲ್ಲೇಖಿಸಿದೆ[೫೪]

"ಸ್ವಸ್ತಿ ಶ್ರೀಮತ್ ಅವನ್ಯದ ಸ್ಥಾನ ಮಂ . .. . ."

ಮುಡಿಯನೂರಿನ ತಾಮ್ರಶಾಸನವು ಮಹಾಬಲಿ ವಂಶದ ನಂದಿವರ್ಮನು ಆವನ್ಯಪುರದಲ್ಲಿ ನೆಲೆಸಿದ್ದು ಆಡಳಿತ ನಡೆಸುತ್ತಿದ್ದಂತಹ ಸಂದರ್ಭದಲ್ಲಿ ಹೊದಲಿ ವಿಷಯದಲ್ಲಿರುವ ಮುಡಿಯನೂರು ಗ್ರಾಮವನ್ನು ದಾನ ನೀಡಿದನೆಂದು ಉಲ್ಲೇಖಿಸಿದೆ[೫೫]

ಮಲ್ಲನಾಯ್ಕನಹಳ್ಳಿಯ ಚೌಡೇಶ್ವರಿ ದೇವಾಲಯದಲ್ಲಿರುವಂತಹ ಶಾಸನವು ನೊಳಂಬ ರಾಜ ನೊಳಂಭಾದಿರಾಜನು ಆವನಿಯ-೩೦ ಭಾಗವನ್ನು ಆಳುತ್ತಿದ್ದನೆಂದು ಉಲ್ಲೇಖಿಸಿದೆ.[೫೬]

ರಾಮಸಾಗರದ ಹೋಬಳಿಯ ಚನ್ನಕೇಶ್ವರ ದೇವಾಲಯದಲ್ಲಿರುವಂತಹ ಒಂದೇ ಶಾಸನವು[೫೭] ಪ್ರಮುಖವಾಗಿದೆ. ಗಂಗ ದೊರೆ ಮಾಧವ ವರ್ಮನು ಆವನ್ಯನಾಡು-೩೦ನ್ನು ಆಳುತ್ತಿದ್ದನು ಎಂದು ಉಲ್ಲೇಖಿಸಿದೆ. ಗಂಗರ ಆಡಳಿತದ ಸಮಯದಲ್ಲಿ ಆವನಿ ಸ್ಥಳವು ಪ್ರಮುಖ ಆಡಳಿತ ವಿಭಾಗವಾಗಿದ್ದು ಗಂಗ ರಾಜರುಗಳಿಗೆ ಈ ಕ್ಷೇತ್ರವು ಪ್ರಮುಖ ಸ್ಥಳವಾಗಿರುವಂತೆ ತೋರುತ್ತದೆ.

೫.೫.೩ ಉತ್ತನೂರು

ಮುಳಬಾಗಿಲು ತಾಲ್ಲೂಕಿನಿಂದ ೧೮ಕಿ.ಮೀ. ದೂರದಲ್ಲಿರುವಂತಹ ಉತ್ತನೂರು ಗ್ರಾಮವು ಧಾರ್ಮಿಕವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಉತ್ತನೂರು ಗ್ರಾಮದಲ್ಲಿರುವಂತಹ ಹಲವಾರು ಶಾಸನಗಳು ಇದನ್ನು ದೃಢಪಡಿಸುತ್ತದೆ. ಪ್ರಸ್ತುತ ಈ ಗ್ರಾಮವನ್ನು 'ಉತ್ತನೂರು' ಎಂದು ಕರೆಯಲಾಗುತ್ತಿದ್ದು, ಶಾಸನಗಳಲ್ಲೂ ಇದೇ ಹೆಸರು ವಿಧಿತವಾಗಿದೆ. ಉತ್ತನೂರು ಗ್ರಾಮದ ಕ್ರಿ.ಶ.೧೩೧೨ರ ಶಾಸನವು ಈ ಗ್ರಾಮವು ಹೊದೆನಾಡಿಗೆ ಸೇರಿತ್ತೆಂದು ಹೇಳಿದರೆ, ಇದೇ ಗ್ರಾಮದ ವರದರಾಜ ಸ್ವಾಮಿಯ ದೇವಸ್ಥಾನದಲ್ಲಿ ದೊರಕಿರುವ ಅಪೂರ್ಣ ಶಾಸನವು ಮತ್ತು ಅದೇ ದೇವಾಲಯದಲ್ಲಿ ದೊರಕಿರುವಂತಹ ಕ್ರಿ.ಶ.೯೬೮ರ ಶಾಸನವು ಉತ್ತನೂರನ್ನು ಅಗ್ರಹಾರವೆಂದು ತಿಳಿಸುತ್ತದೆ. ಉತ್ತನೂರ ಮಹಾಜನರು ಎಂದು ಹೇಳಿರುವುದು ಇದಕ್ಕೆ ಸಾಕ್ಷಿಯಂತಿದೆ. ಅದೇ ರೀತಿಯಾಗಿ ಮುಡಿಯನೂರಿನಲ್ಲಿ

ದೊರಕಿರುವಂತಹ ತಾಮ್ರಶಾಸನವು ದಾನವನ್ನು ನೀಡುವಾಗ ಗ್ರಾಮದ ಸೀಮೆಗಳನ್ನು ತಿಳಿಸುವಂತಹ ಸಂದರ್ಭದಲ್ಲಿ 'ಉತ್ತ' ಎಂಬ ಗ್ರಾಮವನ್ನು ಉಲ್ಲೇಖಿಸಿದೆ. ಮಹಾಬಲಿ ಬಾಣರಸರ ಕಾಲಕ್ಕೆ ಸಂಬಂಧಿಸಿದಂತಹ ಈ ಶಾಸನದಲ್ಲಿ ಹೋದಲಿ ವಿಷಯದಲ್ಲಿರುವಂತಹ ಮುಡಿಯೂರು ಗ್ರಾಮದ 'ವರದರಾಜಸ್ವಾಮಿ ದೇವಾಲಯದ ಸಮೀಪದಲ್ಲಿ ದೊರಕಿರುವಂತಹ ಶಾಸನದಲ್ಲಿ ಹೇಳಿರುವಂತಹ ವಿಷಯವನ್ನು ಪುಷ್ಟೀಕರಿಸುತ್ತದೆ.[೫೮]

ಅದೇ ರೀತಿಯಾಗಿ ಉತ್ತನೂರನ್ನು ಮಡಿವಾಳ ಗ್ರಾಮದೊಂದಿಗೆ ಸೇರಿಸಿರುವುದು. ೧೪ನೆಯ ಶತಮಾನದ ನಂತರದ ಶಾಸನಗಳು ತಿಳಿಸುತ್ತದೆ. ಮಾಲೂರು ತಾಲ್ಲೂಕಿನಲ್ಲಿ ದೊರಕಿರುವಂತಹ ಕ್ರಿ.ಶ.೧೩೦೮ರ ಶಾಸನವು ಉತ್ತನೂರು ಗ್ರಾಮವನ್ನು ಉಲ್ಲೇಖಿಸಿದೆ.[೫೯]

ಉತ್ತನೂರನ್ನು 'ಉತ್ತಮಕಂಚಿ' ಎಂದು ಕರೆದಿದ್ದು ಕಂಚಿಗೆ ಸಮಾನವಾದ ಸ್ಥಾನವನ್ನು ಇದು ಪಡೆದಿದೆ. ಅದೇ ರೀತಿಯಾಗಿ ಚೋಳರ ಆಳ್ವಿಕೆಯ ಕಾಲದಲ್ಲಿ ರಾಜೇಂದ್ರಚೋಳ ಚತುರ್ವೇದಿ ಮಂಗಲವೆಂಬ ನಾಮಾಂತರವನ್ನು ಹೊಂದಿತ್ತೆಂದು ಗಮನಿಸಬಹುದಾಗಿದೆ.[೬೦]

೫.೫.೪ ಕುರುಡುಮಲೆ

ಮುಳಬಾಗಿಲು ತಾಲ್ಲೂಕಿನಲ್ಲಿ ಐತಿಹ್ಯ ಉಳ್ಳಂತಹ ಇನ್ನೊಂದು ಸ್ಥಳವೆಂದರೆ ಕುರುಡುಮಲೆ ಹೆಸರೇ ಸೂಚಿಸುವಂತೆ ಮಲೆ ಅಥವಾ ಬೆಟ್ಟದ ಪ್ರದೇಶದಲ್ಲಿರುವಂತಹ ಈ ಪ್ರದೇಶವು ಮುಳುಬಾಗಿಲು ಪಟ್ಟಣದಿಂದ ೮ ಕಿ.ಮೀ. ದೂರದಲ್ಲಿದೆ. ಕ್ಷೇತ್ರದ ಐತಿಹ್ಯಗಳು ಕ್ಷೇತ್ರ ಮಹಾತ್ಮೆಯನ್ನು ಈ ರೀತಿಯಾಗಿ ತಿಳಿಸುತ್ತದೆ.

೧. ದೇವಾನುದೇವತೆಗಳು ಸೇರಿಕೊಂಡು ಗಣಪತಿಯನ್ನು ಈ ಸ್ಥಳದಲ್ಲಿ ಸ್ತುತಿಸುತ್ತಿದ್ದರೆಂದು, ಆದುದರಿಂದ ದೇವತೆಗಳೂ ಕೂಡಿದುದರಿಂದ ಕೂಡುಮಲೈ ಎಂದು ಪ್ರತೀತಿಯಿದೆ.

೨. ಇನ್ನೊಂದು ಪ್ರತೀತಿಯಂತೆ ತ್ರಿಪುರಾಸುರನನ್ನು ಸಂಹರಿಸಲು ಎಲ್ಲಾ ದೇವತೆಗಳು ಈ ಸ್ಥಳದಲ್ಲಿ ಕೂಡಿದುದರಿಂದ ಈ ಬೆಟ್ಟಕ್ಕೆ ಕೂಡುಮಲೈ ಎಂಬ ಹೆಸರಾಯಿತೆಂದು ಪ್ರತೀತಿಯಿದೆ. ಈ ತ್ರಿಪುರಾಸುರನ ಸಂಹಾರಕ್ಕಾಗಿ ಕೃತಯುಗದಲ್ಲಿ ಈಶ್ವರನು ವಿನಾಯಕನ ವಿಗ್ರಹವನ್ನು ಈ ಸ್ಥಳದಲ್ಲಿ ಪ್ರತಿಷ್ಠಾಪಿಸಿರುವನೆಂಬ ನಂಬಿಕೆಯಿದೆ. ಕೂಡುಮಲೈ ಎಂಬ ಶಬ್ದವೇ ಕಾಲಾನುಕ್ರಮದಲ್ಲಿ ಕುರುಡುಮಲೈ ಎಂದು ರೂಪಾಂತರ ಕೊಂಡಿರಬಹುದು.

೩. ಈ ಕ್ಷೇತ್ರದಲ್ಲಿ ಕೌಂಡಿನ್ಯ ಋಷಿಯು ತಪಸ್ಸನ್ನು ಮಾಡಿರುವನೆಂಬ ಪ್ರತೀತಿಯಿದೆ. ಹಾಗಾಗಿ ಈ ಬೆಟ್ಟಕ್ಕೆ ಕೌಂಡಿನ್ಯಗಿರಿ ಎಂಬ ಹೆಸರಿದೆ. ಇನ್ನೊಂದು ಐತಿಹ್ಯದ ಪ್ರಕಾರ ಕೌಂಡಿನ್ಯ ನದಿಯು ಇದೇ ಬೆಟ್ಟದಲ್ಲಿ ಉಗಮವಾಗುತ್ತದೆ. ಹಾಗಾಗಿ ಈ ಕ್ಷೇತ್ರಕ್ಕೆ ಕೌಂಡಿನ್ಯಕ್ಷೇತ್ರವೆಂದು ಪ್ರತೀತಿಯಿದೆ. ಕೌಂಡಿನ್ಯ ಎಂಬ ಶಬ್ದವು ರೂಪಾಂತರಗೊಂಡು ಕುರುಡುಮಲೈ ಎಂದಾಗಿರಬಹುದು.[೬೧]

೪. ಕ್ರಿ.ಶ.೧೩ನೆಯ ಶತಮಾನದ ನಂತರ ಮುಳಬಾಗಿಲು ನಾಯಕರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶಕ್ಕೆ 'ಗರುಡಮಲೆ' ಎಂಬ ಹೆಸರೂ ಇತ್ತೆಂದು ಸಂಶೋಧಕರ ಅಭಿಪ್ರಾಯವಿದೆ.[೬೨]

ಮಾಲೂರು ತಾಲ್ಲೂಕಿನ ಕ್ರಿ.ಶ.೧೩೦೮ರ ಕಾಲದ ತಮಿಳುಶಾಸನವು 'ಕುರುಡಮಲೈ' ಎಂದು ಈ ಸ್ಥಳವನ್ನು ಹೆಸರಿಸಿದೆ. ಅದೇ ರೀತಿಯಾಗಿ ಕ್ರಿ.ಶ.೧೪೪೨ರ ಶಾಸನವೊಂದು ಕುರುಡಿಮಲೆ ಎಂದು ಹೆಸರಿಸಿದೆ. ವಿ.ಗೋಪಾಲಕೃಷ್ಣ ಅವರು ತಪ್ಪು ಉಚ್ಚಾರಣೆಯಿಂದ ಅಥವಾ ತಪ್ಪು ಸಾಹಚರ್ಯದಿಂದ ಸ್ಥಳನಾಮಗಳ ಅರ್ಥವು

ಬದಲಾಗಿರುವುದನ್ನು ತಿಳಿಸುತ್ತಾ ಕುಡುಮಲ್ಯೆ, ಕುರುಡುಮಲ್ಯೆ, ಕೂಡುಮಲ್ಯೆ ಎಂಬ ರೂಪಾಂತರಗಳನ್ನು ಹೊಂದಿದೆ ಎಂದು ಪ್ರತಿಪಾದಿಸಿದ್ದಾರೆ. ಅದಲ್ಲದೆಯೇ ಕುರುಡು ಎಂಬುದು ಕುದ ಅಥವಾ ಕುದುರು ಶಬ್ದದಿಂದಾಗಿದೆ ಎಂದು ಸಂಶೋಧಿಸಿದ್ದಾರೆ. ಕುದ ಅಥವಾ ಕುದುರು ಶಬ್ದದ ಅರ್ಥ ಚಿಕ್ಕದು ಎಂದಾಗಿದೆ. ಕುದುರು>ಕುರುಡು>ಕುರುಡು ಎಂದು ಆಗಿರಬಹುದು ಎಂದು ಊಹಿಸಿದ್ದಾರೆ.[೬೨a]

ಮುಳಬಾಗಿಲಿನಲ್ಲಿ ದೊರೆತಿರುವಂತಹ ಎರಡು ತಮಿಳು ಶಾಸನಗಳು ಈ ಸ್ಥಳದ ಉಲ್ಲೇಖವನ್ನು ಮಾಡಿದೆ. ಕ್ರಿ.ಶ.೧೩೮೮ರ ತಮಿಳುಶಾಸನವು ಕೊತ್ತಾಂಡುದೇವ ಚತುರ್ವೇದಿ ಮಂಗಲವೆಂದು ಈ ಸ್ಥಳವನ್ನು ಉಲ್ಲೇಖಿಸಿದೆ.[೬೨b]

೫. ೬ ಶ್ರೀನಿವಾಸಪುರ ತಾಲ್ಲೂಕಿನ ಸ್ಥಳನಾಮಗಳು

೫.೬.೧ ಶ್ರೀನಿವಾಸಪುರ

ಕೋಲಾರ ಜಿಲ್ಲೆಯ ಪ್ರಮುಖ ಜಿಲ್ಲೆಗಳಲ್ಲಿ ಶ್ರೀನಿವಾಸಪುರ ತಾಲ್ಲೂಕು ಒಂದಾಗಿದೆ. ಕೋಲಾರ ಜಿಲ್ಲಾ ಕೇಂದ್ರದಿಂದ ಈಶಾನ್ಯ ದಿಕ್ಕಿಗೆ ಸುಮಾರು ೭೮ಕಿ.ಮೀ. ದೂರದಲ್ಲಿರುವಂತಹ ಈ ತಾಲ್ಲೂಕು ಆಧುನಿಕ ಹೆಸರನ್ನು ಹೊಂದಿದೆ. ಈ ಸ್ಥಳವು ಪ್ರಾಚೀನ ಐತಿಹ್ಯವನ್ನು ಹೊಂದಿರುವಂತಹ ಸ್ಥಳಗಳನ್ನು ಹೊಂದಿದ್ದು, ಆಧುನಿಕ ಆಂಧ್ರಪ್ರದೇಶದ ಗಡಿಪ್ರದೇಶಗಳನ್ನು ಪೂರ್ವದ ಭಾಗದಲ್ಲಿ ಹೊಂದಿದೆ. ಹಾಗಾಗಿಯೇ ತೆಲುಗು ಭಾಷೆಯ ಪ್ರಭಾವವನ್ನು ಹೊಂದಿರುವಂತಹ ಹಲವಾರು ಗ್ರಾಮಗಳು ಈ ತಾಲ್ಲೂಕಿನಲ್ಲಿ ಇವೆ. (ಉದಾ: ಗುಡಿಪಲ್ಲಿ, ದಿಗುವ ಚಿಂತಪಲ್ಲಿ, ಕಸೆಟ್ಟಿಪಲ್ಲಿ, ಪೂರ್ಣಪಲ್ಲಿ ಇತ್ಯಾದಿಗಳು) ಇವುಗಳಲ್ಲಿ ಕೆಲವು ಪ್ರದೇಶಗಳು ಮಾತ್ರ ಶಾಸನಗಳಲ್ಲಿ ಉಲ್ಲೇಖವಾಗಿವೆ.

ವಿಭಜಿತ ಕೋಲಾರ ಜಿಲ್ಲೆಯಲ್ಲಿ ಐತಿಹ್ಯಗಳನ್ನು ತೊರೆದು ಆಧುನಿಕ ಹೆಸರನ್ನು ಹೊಂದಿರುವಂತಹ ಏಕಮೇವ ಸ್ಥಳ ಶ್ರೀನಿವಾಸಪುರವೆನ್ನಬಹುದು. ಜನರ ಆಡುಮಾತಿನಲ್ಲಿ ಬರುವಂತೆ ಈ ಪ್ರದೇಶಕ್ಕೆ ಪ್ರಾಚೀನವಾಗಿ 'ಪಾಪನಪಲ್ಲಿ' ಎಂಬಂತಹ ಹೆಸರಿತ್ತು. ಶ್ರೀನಿವಾಸಪುರದಲ್ಲಿ ಹೆಬ್ಬಟ ಪ್ರದೇಶದಲ್ಲಿ ಯಂತ್ರ ಶಿಲೆಗಳು ಭಕ್ತ ಜನರ ಪಾಪವನ್ನು ದೂರ ಮಾಡುತ್ತಿದ್ದು ಅದರಿಂದಾಗಿ ಈ ಪ್ರದೇಶಕ್ಕೆ ಪಾಪನಪಲ್ಲಿ ಎಂಬ ಹೆಸರು ಬಂದಿರಬಹುದು. ಆದರೆ ಈ ಹೆಸರಿಗೆ ಯಾವುದೇ ಶಾಸನಗಳ ಆಧಾರ ದೊರೆಯುವುದಿಲ್ಲ.

ವಿ.ಗೋಪಾಲಕೃಷ್ಣರು ಈ ಸ್ಥಳನಾಮ ಅಧ್ಯಯನ ಪುಸ್ತಕದಲ್ಲಿ ಸ್ಥಳನಾಮಗಳ ವರ್ಗೀಕರಣವನ್ನು ಮಾಡುವಂತಹ ಸಂದರ್ಭದಲ್ಲಿ ಸ್ಥಳಗಳನ್ನು ಸಾಮಾಜಿಕ ಅಂಶಗಳ ಆಧಾರದಲ್ಲಿ ವಿಭಾಗ ಮಾಡುತ್ತಾ ಸ್ಥಳಗಳ ಹೆಸರುಗಳು ವ್ಯಕ್ತಿಗಳ ಹೆಸರಿನಿಂದಾಗಿ ವ್ಯುತ್ಪತ್ತಿಯಾಗಿರುವುದನ್ನು ವಿಶ್ಲೇಷಿಸುತ್ತಾ, ಶ್ರೀನಿವಾಸಪುರ ಎಂಬ ಸ್ಥಳವು ವ್ಯಕ್ತಿಯ ನಾಮದಿಂದಾಗಿ ಬಂದಿರುವುದನ್ನು ಉಲ್ಲೇಖಿಸಿದ್ದಾರೆ.

ಮೈಸೂರು ಒಡೆಯರ ಆಳ್ವಿಕೆಯಲ್ಲಿ ಪ್ರಧಾನ ರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರರ ಮಂತ್ರಿಯಾಗಿದ್ದಂತಹ ದಿವಾನ್ ಪೂರ್ಣಯ್ಯನವರು ಒಂದು ಬಾರಿ ತಿರುಪತಿ ಯಾತ್ರೆಗೆ ಹೋಗಿದ್ದರು. ಅವರು ತಿರುಪತಿಯಾತ್ರೆಯನ್ನು ಮುಗಿಸಿ ಹಿಂತಿರುಗಿದಂತಹ ಸಂದರ್ಭದಲ್ಲಿ ಪಾಪನಪಲ್ಲಿ ಪ್ರದೇಶದಲ್ಲಿ ತಂಗಿದ್ದರು. ಆ ಸಂದರ್ಭದಲ್ಲಿ ಈ ಪ್ರದೇಶದಲ್ಲಿ ಪ್ರಕೃತಿ ಸೌಂದರ್ಯವನ್ನು ನೋಡಿ ಆಗಲೇ ಮರಣ ಹೊಂದಿದ್ದಂತಹ ತಮ್ಮ ಪುತ್ರ 'ಶ್ರೀನಿವಾಸಮೂರ್ತಿ'ಯ ನೆನಪಾಗಿದ್ದರಿಂದ ದಿವಾನ್ ಪೂರ್ಣಯ್ಯನವರು ಈ ಪ್ರದೇಶಕ್ಕೆ ಶ್ರೀನಿವಾಸಪುರವೆಂದು

ನಾಮಕರಣ ಮಾಡಿದರೆಂಬ ಪ್ರತೀತಿಯಿದೆ.[೬೩] ಇನ್ನೊಂದು ಐತಿಹ್ಯದ ಪ್ರಕಾರ ಈ ಪ್ರದೇಶದಲ್ಲಿ ಹರಳಕೋಟೆ ಎಂಬಂತಹ ಪಟ್ಟಣವಿದ್ದು, ಕ್ರಮೇಣ ಅದು ನಾಶವಾಯಿತೆಂದು ತಿಳಿದುಬಂದಿದೆ.

೫.೬.೨ ಹೆಬ್ಬಟ

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಐತಿಹಾಸಿಕವಾಗಿ ಗುರುತಿಸಿಕೊಂಡಿರುವಂತಹ ಹೆಬ್ಬಟ ಅಥವಾ ಹೆಬ್ಬಟ್ಟ ಎನ್ನುವುದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ.ದೂರದಲ್ಲಿದ್ದು ಪ್ರಾಕೃತಿಕವಾಗಿ ಸುಂದರವಾದ ಪ್ರದೇಶವಾಗಿದೆ. ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ಐತಿಹ್ಯಗಳು ದೊರೆಯುವುದಿಲ್ಲ. ಆದರೆ ಗಂಗ ಮತ್ತು ನೊಳಂಬ ಅರಸರ ಕಾಲದಲ್ಲಿ ಹೆಚ್ಚು ಉಲ್ಲೇಖವಾಗಿರುವಂತಹ ಈ ಸ್ಥಳವು ಅವರಿಂದಾಗಿಯೇ ಹೆಚ್ಚು ಪ್ರಸಿದ್ಧಿಗೆ ಬಂದಿರುವಂತೆ ಕಂಡುಬರುತ್ತದೆ. ಹೆಬ್ಬೆಟ್ಟ ಶಬ್ದವನ್ನು ಪದ ವಿಭಾಗ ಮಾಡಿದಾಗ ಪೇರ್ ಬೆಟ್ಟ ಅಥವಾ ಸಮಾಸ ಪದವಾಗಿ ವಿಭಾಗಿಸಿದರೆ ಹಿರಿದಾದ ಬೆಟ್ಟ ಹೆಬ್ಬೆಟ್ಟವೆಂದಾಗುತ್ತದೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಹಿರಿದಾದ ಬೆಟ್ಟಗಳು ಇರುವುದರಿಂದ ಈ ಹೆಸರು ಬಂದಿರಬಹುದು. ಸ್ಥಳನಾಮಶಾಸ್ತ್ರಜ್ಞರಾದ ವಿ.ಗೋಪಾಲಕೃಷ್ಣರು ಧ್ವನಿ ಬದಲಾವಣೆಯ ವಿವಿಧ ಹಂತಗಳನ್ನು ಗುರುತಿಸಿ ಈ ರೀತಿಯಾಗಿ ಹೆಸರಿನ ಪರಿವರ್ತನೆಯನ್ನು ಗುರುತಿಸಿದ್ದಾರೆ.

ಸ್ವಸ್ತಿ ಶ್ರೀ ಸನ್ದಿವೆಮ್ಮನ್ ಪೆರ್ಬಟ್ಟಮಾಳೆ ಎಳ್ತುನ
ಪೊಯ್ಸಲುಳ ಅವಿಯಪೊಯರ್ ಉಮಣೆಳು ಪುಣ್ಯ
ಪವಿತ್ರನ್ ಎಳುದು ವಿಳ್ದನ್"

ಈ ಶಾಸನವು[೬೪] ಪೆಬ್ಬಟ್ಟ ಎಂಬಲ್ಲಿ ನಡೆದಂತಹ ಕಾಳಗವನ್ನು ವರ್ಣಿಸಿದೆ. 'ಪೆರ್ಬ್ಬಟ್ಟ' ಎನ್ನುವುದು ಹೆಬ್ಬಟ ಎನ್ನುವುದರ ರೂಪಾಂತರವಾಗಿದೆ. ಇದೇ ಸ್ಥಳದಲ್ಲಿ ದೊರೆಯುವಂತಹ ಇನ್ನೊಂದು ವೀರಗಲ್ಲು ಶಾಸನವು[೬೫] 'ಪೆರ್ಬ್ಬಟ್ಟ' ಶಬ್ದವನ್ನು ಉಲ್ಲೇಖಿಸಿದೆ. ಈ ಶಾಸನವು ನೊಳಂಬಾಧಿರಾಜನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಕ್ರಿ.ಶ.೯೦೦ನೆಯ ಶತಮಾನದ ತುರುಗೋಳ್ ಶಾಸನವು 'ಪೆರ್ಬ್ಬಟ' ಶಬ್ದವನ್ನು ಪ್ರಯೋಗಿಸಿದೆ.

"ಸ್ವಸ್ತಿ ಶ್ರೀ ಅಯ್ಯಪದೇವ ರಾಜ್ಯಗೆಯ್ಯ ಭಾವ ಶಿವ
ತಪರಾಜ್ಯಗೆಯಪೆರ್ಭಟ ತುರುಗೋಳ್ ಸತ್ತ ಅಗ್ಗ"

ನೊಳಂಬ ದೊರೆ ಅಯ್ಯಪದೇವನು ರಾಜ್ಯವನ್ನಾಳುತ್ತಿರಲು ಪೆರ್ಬ್ಬಟ್ಟದಲ್ಲಿ ತುರುಗೋಳ್ ಕಾಳಗವು ನಡೆದಿರುವಂತೆ ಶಾಸನವು ತಿಳಿಸಿದೆ. ದುರ್ವಿನೀತನ ಕಾಲದ ಕೊಡುಂಜೆರುವು ಶಾಸನವು 'ಕೊಡಂಜೆರುವು' ಎಂಬ ಶಬ್ದವನ್ನು ಉಲ್ಲೇಖಿಸಿದೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಉಲ್ಲೇಖವಾಗಿರುವಂತಹ ಅತಿ ಪ್ರಾಚೀನ ಸ್ಥಳನಾಮ ಇದಾಗಿದೆ. ಕೊಡುಂಜೆರುವು ಇಂದಿನ ಕೋಡಿಚೆರುವು ಗ್ರಾಮವಾಗಿದೆ.

ಈ ಪ್ರದೇಶದಲ್ಲಿ ಹಲವಾರು ಯಂತ್ರಕಲ್ಲುಗಳು ದೊರೆತಿವೆ. ಇವುಗಳಲ್ಲಿ ಸರ್ವತೋಭದ್ರ ಶ್ಲೋಕವನ್ನು ಕೆತ್ತಿರುವಂತಹ ಒಂದು ಯಂತ್ರಶಿಲೆಯು ಪ್ರಸಿದ್ಧವಾಗಿದೆ. ಈ ಶಿಲೆಯು ಮಂತ್ರಶಕ್ತಿಯನ್ನು ಹೊಂದಿದ್ದು, ಈ ಯಂತ್ರ ಶಿಲೆಗೆ ಭಕ್ತರು ಅಭಿಷೇಕವನ್ನು ಮಾಡಿ ತೀರ್ಥವನ್ನು ಸ್ವೀಕರಿಸುತ್ತಿದ್ದರು. ಅದಲ್ಲದೆಯೇ ಈ ಯಂತ್ರಶಿಲೆಯನ್ನು ತೊಳೆದಂತಹ ನೀರನ್ನು ಪಶುಗಳಿಗೆ ಔಷಧವಾಗಿ ಬಳಸಿ ರೋಗಗಳನ್ನು ಗುಣಪಡಿಸುತ್ತಿದ್ದರು. ಸಹಜವಾಗಿ ನಮ್ಮಲ್ಲಿರುವಂತಹ ಪಾಪಗಳನ್ನು ತೊಳೆಯುವಂತಹ ಪ್ರದೇಶವೆಂದು ಪ್ರಸಿದ್ಧಿಗೆ ಬಂದು ಪಾಪನಪಲ್ಲಿ ಎಂದು ಹೆಸರುವಾಸಿಯಾಗಿದ್ದಿರಬಹುದು.[೬೬]

೫.೬.೩ ರೋಣೂರು

> **"....ದುಗ್ಗಮಾರೆ ಅಪ್ಪಕೂವಳಾಲ .**
>
> **ನಾಡಳೆವೆಜ್ಪ ಪೆ.ರಸರ್ ರೋಣೂರುರಾಳೆರಸ ..."**

ಕ್ರಿ.ಶ. ೭೬೫ರ ಶಾಸನವು[೬೭] ಗಂಗ ದೊರೆ ದುಗ್ಗಮಾರ ಎರೆಯಪ್ಪನು "ರೋಣೂರು" ಎಂಬ ಸ್ಥಳವನ್ನು ಆಳುತ್ತಿದ್ದನು ಎಂದು ಉಲ್ಲೇಖಿಸಿದೆ. ರೋಣೂರು ಶ್ರೀನಿವಾಸಪುರದಲ್ಲಿರುವಂತಹ ಪ್ರಸಿದ್ಧ ಕ್ಷೇತ್ರವಾಗಿದೆ. ಈಶಾನ್ಯದ ಭಾಗದಲ್ಲಿ ಗಂಗ ದೊರೆಗಳ ರಾಜ್ಯ ವಿಸ್ತಾರವನ್ನು ತಿಳಿಯಲು ಈ ಶಾಸನವು ಅನುಕೂಲಕರವಾಗಿದೆ. ಈ ಗ್ರಾಮದಲ್ಲಿ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಾಲಯವಿದ್ದು ಇದನ್ನು ಜನಮೇಜಯ ರಾಯನು ಜೀರ್ಣೋದ್ಧಾರಗೊಳಿಸಿದನೆಂದು ಪ್ರತೀತಿಯಿದೆ. ಇಲ್ಲಿರುವಂತಹ ಮೂಲ ವಿಗ್ರಹವನ್ನು ಅರ್ಜುನನೇ ಪ್ರತಿಷ್ಠಾಪಿಸಿದನೆಂಬ ಪ್ರತೀತಿಯಿದ್ದರೂ ಐತಿಹಾಸಿಕವಾಗಿ ಈ ದೇವಾಲಯವು ವಿಜಯನಗರ ಆಳ್ವಿಕೆಯ ಕಾಲಕ್ಕೆ ಸೇರಿದುದಾಗಿದೆ.[೬೮]

ಶ್ರೀನಿವಾಸಪುರವು ವೀರರ ನಾಡಾಗಿತ್ತು. ನೊಳಂಬ ರಾಜರಿಗೆ ಸಂಬಂಧಪಟ್ಟಂತಹ ಶಾಸನಗಳು ಶ್ರೀನಿವಾಸಪುರದಲ್ಲಿ ದೊರಕಿದ್ದು ಹೆಚ್ಚಿನವು ಸ್ಮಾರಕ ಶಾಸನಗಳಾಗಿವೆ. ಶ್ರೀನಿವಾಸಪುರ ತಾಲ್ಲೂಕಿನ ಕಸಬೆಯ ತುರುಗೋಳ್ ಶಾಸನವು[೬೯] ಕೊಳನಲ್ಲೂರು ಎಂಬ ಗ್ರಾಮವನ್ನು ಬಾಳ್ಗಚ್ಚು ರೂಪದಲ್ಲಿ ನೀಡಿರುವುದನ್ನು ತಿಳಿಸುತ್ತದೆ.

ಕಲ್ಲೂರ ಗ್ರಾಮದಲ್ಲಿ ದೊರಕಿರುವಂತಹ ನೆತ್ತರ್ಪಡಿ ಶಾಸನವು 'ಮಂದಾವೂರು' ಎಂಬಲ್ಲಿ ತುರುಕಾಳಗವು ನಡೆದಂತೆ ತಿಳಿಸುತ್ತದೆ.[೭೦] ಬಯ್ಯಪ್ಪಳ್ಳಿಯಲ್ಲಿ ದೊರಕಿರುವಂತಹ ಆನೆಕಾಳಗವನ್ನು ವರ್ಣಿಸಿರುವಂತಹ ವಿಶೇಷ ಶಾಸನವು 'ಆನೆಯೂರನ್ನು' ಉಲ್ಲೇಖಿಸಿದೆ.[೭೧]

ಮುತ್ತಕಪಲ್ಲಿಗೆ ಗ್ರಾಮದ ವೀರಗಲ್ಲು ಶಾಸನವು ಮುದೆಕಲ್ಲು ಎಂಬಲ್ಲಿ ನಡೆದಂತಹ ಕಾಳಗವನ್ನು ಪ್ರಸ್ತಾಪಿಸುತ್ತದೆ. 'ಮುದೆಕಲ್ಲು' ಎಂಬುವುದು 'ಮುತ್ತಕಪಲ್ಲಿ' ಎಂದು ರೂಪಾಂತರವಾಗಿದೆ.[೭೨]

೫.೭ ಅಗ್ರಹಾರಗಳು

ಬ್ರಹ್ಮಚರ್ಯ, ಗೃಹಸ್ಥಾಶ್ರಮ, ವಾನಪ್ರಸ್ಥ, ಮತ್ತು ಸನ್ಯಾಸಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಬ್ರಾಹ್ಮಣರು ಬ್ರಹ್ಮಚರ್ಯ ದಶೆಯನ್ನು ಮುಗಿಸಿಕೊಂಡು ಗೃಹಸ್ಥಾಶ್ರಮದ ಕಡೆಗೆ ತಿರುಗಿದಾಗ ಆತನಿಗೆ ನೆಲೆನಿಲ್ಲಲು ಆಶ್ರಯವಾಗಿ ಸಹಾಯಕವಾದುದೇ ಅಗ್ರಹಾರಗಳು. ಪ್ರಾಚೀನ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಉತ್ತಮ ಸ್ಥಾನವಿತ್ತು. ಅಂತಹ ಬ್ರಾಹ್ಮಣರುಗಳು ನೆಲೆಸುತ್ತಿದ್ದಂತಹ ಸ್ಥಳಗಳೇ ಅಗ್ರಹಾರಗಳೆಂದು ಪ್ರಸಿದ್ಧಿಯಾದವು.

ಭಾರತೀಯ ಇತಿಹಾಸವನ್ನು ಗಮನಿಸಿದರೆ ರಾಜಮಹಾರಾಜರು ಹಲವಾರು ವಿದ್ವಾಂಸರಿಗೆ, ಕವಿಗಳಿಗೆ, ಸಾಹಿತಿಗಳಿಗೆ ಆಶ್ರಯವನ್ನು ಕೊಟ್ಟು ರಾಜಮರ್ಯಾದೆಯನ್ನು ನೀಡಿ ಸಕಲ ಗೌರವಗಳನ್ನು ನೀಡುತ್ತಿದ್ದರು. ಇಂತಹ ವಿದ್ವಾಂಸರು, ಕವಿಗಳು ರಾಜನ ಆಡಳಿತದಲ್ಲೂ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. ಹೆಚ್ಚಾಗಿ ಬ್ರಾಹ್ಮಣ ವರ್ಗದವರೇ ವಿದ್ವಾಂಸರಾಗಿದ್ದುದರಿಂದ ರಾಜಮಹಾರಾಜರು ಇವರಿಗೆ ಕಾಲ ಕಾಲಕ್ಕೆ ರಾಜಾಶ್ರಯವನ್ನು ನೀಡುತ್ತಿದ್ದರು. ಇಂತಹ ವಿದ್ವಾಂಸರುಗಳ, ಕವಿಗಳ ದೈನಂದಿನ ಜೀವನೋಪಾಯಕ್ಕಾಗಿ ರಾಜರು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ರಾಜನು ತನ್ನ ವ್ಯಾಪ್ತಿಗೆ ಬರುವಂತಹ ಪ್ರದೇಶಗಳಲ್ಲಿ ಸಣ್ಣ ಸಣ್ಣ ಗ್ರಾಮಗಳನ್ನು

ರಚನೆ ಮಾಡಿ ಅದರಲ್ಲಿ ವಿದ್ವಾಂಸರುಗಳಿಗೆ ಆಶ್ರಯವನ್ನು ನೀಡುತ್ತಿದ್ದನು. ಕೆಲವೊಮ್ಮೆ ರಾಜನು ಕ್ರಯಕ್ಕೆ ಭೂಮಿಯನ್ನು ಖರೀದಿಸಿ ಬ್ರಾಹ್ಮಣರುಗಳಿಗೆ ದಾನ ಮಾಡುತ್ತಿದ್ದನು. ಕರ್ನಾಟಕದಲ್ಲಿ ಹಲವಾರು ಅರಸರು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ·ಬ್ರಾಹ್ಮಣರುಗಳಿಗೆ ದಾನವಾಗಿ ಬಿಟ್ಟಂತಹ ಹಲವಾರು ಉದಾಹರಣೆಗಳು ದೊರಕುತ್ತವೆ. ವಿದ್ವಾಂಸರಾದ ಜಿ.ಎಸ್.ದೀಕ್ಷಿತರ ಅಭಿಪ್ರಾಯವು ಈ ರೀತಿಯಾಗಿದೆ.[೭೩]

"The Agraharas was a grant from the king to an individual, who became house holders in the Agrahara"

ಕರ್ನಾಟಕವು ಹಲವಾರು ಅಗ್ರಹಾರಗಳ ಆಶ್ರಯ ತಾಣವಾಗಿದೆ. ಅಗ್ರಹಾರಗಳಲ್ಲಿ ವಾಸಿಸುವವರನ್ನು ಮಹಾಜನರೆಂದು ಕರೆಯುತ್ತಿದ್ದರು. ಇಂತಹ ಮಹಾಜನರ ಉಲ್ಲೇಖವು ಮೊದಲು ದೊರಕುವುದು. ಗಂಗ ದೊರೆ ದುರ್ವಿನೀತ ಕಾಲದ ಶಾಸನದಲ್ಲಿ[೭೪] ಅಗ್ರಹಾರಗಳು ಶೈಕ್ಷಣಿಕ ಕೇಂದ್ರಗಳ ರೀತಿಯಲ್ಲೂ ಕಾರ್ಯ ನಿರ್ವಹಿಸುತ್ತಿದ್ದವು. ಅಗ್ರಹಾರಗಳಿಗೆ ಪರ್ಯಾಯವಾಗಿ ಬ್ರಹ್ಮಪುರಿಗಳ ಬಳಕೆಯೂ ದೊರೆಯುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬ್ರಾಹ್ಮಣರುಗಳಿಗೆ ನೀಡಲಾಗುತ್ತಿದ್ದಂತಹ ಬೀದಿಯನ್ನು ಬ್ರಹ್ಮಪುರಿಗಳೆಂದು ಕರೆಯಲಾಗಿದೆ.

ಭಾರತೀಯ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬುವುದಾಗಿ ನಾಲ್ಕು ಪ್ರಧಾನ ಪಂಗಡಗಳು ಪ್ರಸಿದ್ಧವಾಗಿದೆ. ಕ್ಷತ್ರಿಯರು ರಾಜ್ಯವನ್ನು ರಕ್ಷಿಸುವಂತಹ, ಯುದ್ಧ ಎದುರಾದಾಗ ಹೋರಾಡಿ ಶತ್ರುಗಳಿಂದ ರಾಜ್ಯವನ್ನು ರಕ್ಷಿಸುವಂತಹ ಮಹತ್ತರವಾದ ಕಾರ್ಯವನ್ನು ವಹಿಸಿಕೊಳ್ಳುತ್ತಿದ್ದರು. ಆಂತರಿಕ ಮತ್ತು ಬಾಹ್ಯ ಎಂಬುವುದಾಗಿ ಎರಡು ವಿಧವಾದಂತಹ ರಕ್ಷಣೆಯನ್ನು ಕ್ಷತ್ರಿಯ ಸಮಾಜದವರು ಕೈಗೊಳ್ಳುತ್ತಿದ್ದರು. ಹೆಚ್ಚಾಗಿ ಕ್ಷತ್ರಿಯ ಸಮಾಜದವರಿಗೆ ರಾಜಾಶ್ರಯವು ದೊರೆಯುತ್ತಿತ್ತು. ವೈಶ್ಯ ಸಮಾಜದವರಿಗೆ ವ್ಯಾಪಾರ ವೃತ್ತಿಯೇ ಪ್ರಧಾನವಾಗಿದ್ದು ಅವರು ಉತ್ತಮ ಮಟ್ಟದ ಜೀವನವನ್ನು ನಡೆಸುತ್ತಿದ್ದರು. ಶೂದ್ರರು ಕೆಳಮಟ್ಟದ ಜೀವನವನ್ನು ಮತ್ತು ಇತರರನ್ನು ಅವಲಂಬಿಸಿ ಕೊಂಡೋ ಅಥವಾ ಆಶ್ರಯಿಸಿಕೊಂಡೋ ಇರುತ್ತಿದ್ದರು.

ಬ್ರಾಹ್ಮಣ ವರ್ಗದವರು ಉನ್ನತ ಮಟ್ಟದ ಮತ್ತು ಮಡಿವಂತಿಕೆಯ ಜೀವನವನ್ನು ನಡೆಸುತ್ತಿದ್ದರು. ಈ ವರ್ಗದವರು ಇತರರನ್ನು ಆಶ್ರಯಿಸದವರಾಗಿ, ಸ್ವತಂತ್ರ ಜೀವನವನ್ನು ನಡೆಸುತ್ತಿದ್ದರು. ವ್ಯಾಪಾರೀ ಜೀವನ ಅಥವಾ ಲಾಭವನ್ನು ಕೊಡುವಂತಹ ಯಾವುದೇ ವೃತ್ತಿಯನ್ನು ಬ್ರಾಹ್ಮಣವರ್ಗದವರು ಮಾಡುವಂತಿರಲಿಲ್ಲ. ಕೊಡುಕೊಳ್ಳುವಂತಹ ಯಾವುದೇ ವ್ಯಾಪಾರೀ ಜೀವನವು ಅಪರಾಧಕ್ಕೆ ಸಮಾನವಾಗಿತ್ತು. ಹಾಗಾಗಿ ಒಂದು ದೇಶದ ರಾಜನು ಆದೇಶದ ಬ್ರಾಹ್ಮಣ ವರ್ಗದವರಿಗೆ ಬೇರೆಯ ನೆಲೆಯನ್ನು ಕೊಟ್ಟು ಪೋಷಿಸುತ್ತಿದ್ದನು.

ಕನ್ನಡ ಸಂಕ್ಷಿಪ್ತ ನಿಘಂಟುವಿನಲ್ಲಿ ಅಗ್ರಹಾರ ಶಬ್ದಕ್ಕೆ "ರಾಜರು ಮೊದಲಾದವರು ಬ್ರಾಹ್ಮಣರ ಪೋಷಣೆಗಾಗಿ ದಾನ ಕೊಟ್ಟ ಪ್ರದೇಶ, ಬ್ರಾಹ್ಮಣರು ವಾಸ ಮಾಡುತ್ತಿದ್ದ ಕೇರೀ" ಎಂದು ತಿಳಿಸಿದ್ದಾರೆ. (ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ) ಕನ್ನಡ ಸಾಹಿತ್ಯ ಪರಿಷತ್ತು)[೭೫] ಅಗ್ರಹಾರ ಶಬ್ದವು ಅಗ್ರ ಮತ್ತು ಆಹಾರ ಎಂಬೆರೆಡು ಶಬ್ದಗಳ ಸಂಯುಕ್ತ ರೂಪವಾಗಿದೆ. ಅಗ್ರವೆಂದರೆ ಶ್ರೇಷ್ಠ, ಆಹಾರ ಎಂದರೆ ಆಗರ, ವಾಸಸ್ಥಾನ, ತಿನ್ನಲು ಬಳಸುವ ಪದಾರ್ಥ, ಶ್ರೇಷ್ಠವಾಸಸ್ಥಾನವೆಂಬ ಅರ್ಥಗಳಿವೆ. ಹಾಗಾಗಿ ಸಮಾಜದ ಉನ್ನತವರ್ಗ ವಾಸಿಸುತ್ತಿದ್ದಂತಹ ವಾಸಸ್ಥಾನವೇ ಅಗ್ರಹಾರವಾಗಿದೆ. ಅಗ್ರಹಾರಗಳಲ್ಲಿ ಹೆಚ್ಚಾಗಿ ಬ್ರಾಹ್ಮಣರೇ ವಾಸಿಸುತ್ತಿದ್ದರು. ಬ್ರಾಹ್ಮಣರಿಗೆ ಅಶನ ವಸನಾದಿಗಳ ಚಿಂತೆ ಇರಬಾರದೆಂಬ ಉದ್ದೇಶದಿಂದ ಬ್ರಾಹ್ಮಣರಿಗೆ ದಾನದತ್ತಿಗಳನ್ನು ಯಥೇಚ್ಛವಾಗಿ ನೀಡಿ ಅವರು ಸುಖವಾಗಿ ನೆಲೆಸುವಂತೆ ನೋಡಿಕೊಳ್ಳುತ್ತಿದ್ದರು. ಅಗ್ರಹಾರಗಳು ವಿದ್ಯಾ ಕೇಂದ್ರಗಳಾಗಿಯೂ,ಕೆಲವೊಮ್ಮೆ ಪ್ರಮುಖ

ಪಾತ್ರ ವಹಿಸುತ್ತಿದ್ದವು. ಅಗ್ರಹಾರದಲ್ಲಿ ನೆಲೆಸುತ್ತಿದ್ದ ಜನರನ್ನು ಮಹಾಜನರೆಂತಲೂ ಅವರಿಗೆ ನೀಡುತ್ತಿದ್ದಂತಹ ದಾನಗಳನ್ನು ಬ್ರಹ್ಮದೇಯವೆಂತಲೂ ಕರೆಯುತ್ತಿದ್ದರು. ಅಗ್ರಹಾರವೆಂದರೆ ಕೇವಲ ಬ್ರಾಹ್ಮಣರೇ ವಾಸಿಸಬೇಕೆಂಬ ನಿಯಮವಿಲ್ಲ. ಇತರೆ ಜಾತಿಯವರು ನೆಲೆಸುತ್ತಿದ್ದರು.[೭೬]

ಕೋಲಾರ ಜಿಲ್ಲೆಯ ಶಾಸನಗಳನ್ನು ಗಮನಿಸಿದರೆ ಈ ಜಿಲ್ಲೆಯಲ್ಲಿ ಅಗ್ರಹಾರಗಳ ಉಲ್ಲೇಖಗಳು ಗಂಗರಸರಿಂದ ಆರಂಭಿಸಿ ಚೋಳರಸರ ಶಾಸನಗಳವರೆಗೆ ದೊರೆಯುತ್ತದೆ. ರಾಜ ಮಹಾರಾಜರು ನೀಡುತ್ತಿದ್ದಂತಹ ಮಹಾದಾನಗಳಿಗೆ ಮಹಾಜನರು ಸಾಕ್ಷಿಗಳಾಗಿದ್ದಂತೆಯೂ ಶಾಸನಗಳಿಂದ ತಿಳಿದುಬರುತ್ತದೆ. ಶಿವಾರಪಟ್ಟಣ ಗ್ರಾಮದಲ್ಲಿ ದೊರಕಿರುವಂತಹ ಗಂಗ ದೊರೆ ಶ್ರೀಪುರುಷನ ಆಳ್ವಿಕೆಯ ಕಾಲದ ಶಾಸನವು ಬೆಳತೂರು ಮತ್ತು ಕಡತೂರು ಎಂಬ ಅಗ್ರಹಾರಗಳ ಪರಿಚಯವನ್ನು ತಿಳಿಸುತ್ತದೆ.[೭೭] ರಾಜನು ದೇವಭೋಗ ರೂಪದಲ್ಲಿ

"ಇದಕ್ಕೆ ಸಾಕ್ಷಿ ಬೆಳತೂರ ಮಹಾಜನಮಂ

ಕಡತೂರ ಮಹಾಜನಮಂ, ಕದಂಬೂರಾ

ನಾಲ್ವದಿನ್ವರುಂ. . . . .

ಭೂದಾನವನ್ನು ನೀಡಿರುವನು. ರಾಜನು ನೀಡಿರುವಂತಹ ದೇವಭೋಗಕ್ಕೆ ಬೆಳತೂರು ಮಹಾಜನರು ಮತ್ತು ಕಡತೂರು ಮಹಾಜನರು ಸಾಕ್ಷಿಗಳಾಗಿದ್ದಾರೆ. ಬಹುಶಃ ಈ ಸಮಯದಲ್ಲಿ ಬೆಳತೂರು ಮತ್ತು ಕಡತೂರು ಅಗ್ರಹಾರವಾಗಿ ಪ್ರಸಿದ್ಧವಾಗಿದ್ದಿರಬಹುದು. ಬೆಳತೂರು ಎಂಬುವುದು ಕೋಲಾರ ತಾಲ್ಲೂಕಿನ ಬೆಳೂರು ಆಗಿರಬಹುದು. (ಗೌರಿಬಿದನೂರು ತಾಲ್ಲೂಕಿನಲ್ಲಿ ಬೆಳತೂರು ಎಂಬ ಗ್ರಾಮವಿದೆ) ಕಡತೂರು ಎಂಬುವುದು ಕಡಗತ್ತೂರಿನ ರೂಪಾಂತರವಾಗಿದೆ. ಕಡಗತ್ತೂರು ಕೋಲಾರ ತಾಲ್ಲೂಕಿನ ಒಂದು ಹಳ್ಳಿಯಾಗಿದೆ.

ವೇಮಗಲ್ಲು ಪ್ರದೇಶದ ಕ್ಯಾಲನೂರು ಗ್ರಾಮದ ಶಾಸನವು[೭೮] ಕೆರನೂರಿನ ಮಹಾಜನರಿಗೆ ಮತ್ತು ಇತರರಿಗೆ ೫ ಗದ್ಯಾಣ ಪೊಂಗೊಟ್ಟು ಕೊಟ್ಟಿರುವುದನ್ನು ತಿಳಿಸುತ್ತದೆ. ಕೆರನೂರು ಅಗ್ರಹಾರವಾಗಿದ್ದು ಪ್ರಸ್ತುತ ಕೋಲಾರ ತಾಲ್ಲೂಕಿನ ಕ್ಯಾಲನೂರು ಗ್ರಾಮವಾಗಿದೆ. ಮುಳಬಾಗಿಲು ತಾಲ್ಲೂಕಿನ ಉತ್ತನೂರು ಅಗ್ರಹಾರವಾಗಿದ್ದಿರಬಹುದು. ಏಕೆಂದರೆ ಉತ್ತನೂರಿನಲ್ಲಿ ದೊರಕಿರುವಂತಹ ಎರಡು ಶಾಸನಗಳು ಉತ್ತನೂರಿನ ಮಹಾಜನರ ಉಲ್ಲೇಖವನ್ನು ಮಾಡಿದೆ.[೭೯] ನೊಳಂಬ ದೊರೆ ನನ್ನಿನೊಳಂಬನು ರಾಜ್ಯವನ್ನಾಳುತ್ತಿರಲು ನೊಳಂಬ ಸೆಟ್ಟಿ ಎಂಬುವವನು ಉತ್ತನೂರ ಮಹಾಜನರಿಗೆ ಪೊಂಗಟ್ಟನ್ನು ನೀಡಿರುವಂತಹ ಉಲ್ಲೇಖವಿದೆ. ಈ ಶಾಸನದಲ್ಲಿ ಪ್ರಯುಕ್ತವಾಗಿರುವ ಉತ್ತನೂರು ಗ್ರಾಮವು ಮುಳಬಾಗಿಲು ತಾಲ್ಲೂಕಿನಲ್ಲಿದೆ. ಕೋಲಾರ ತಾಲ್ಲೂಕಿನ ವೆಲ್ಲಿಯೂರು ಅಥವಾ ಬೆಳ್ಳೂರು ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ 'ವಿಷ್ಣುವರ್ಧನ ಚರ್ತುವೇದಿ ಮಂಗಲ' ವೆಂದು ಪ್ರಸಿದ್ಧವಾಗಿತ್ತು. ಚತುರ್ವೇದಿ ಮಂಗಲವೆಂದರೆ ಚತುರ್ವೇದ ಪಾರಂಗತರಾದ ಬ್ರಾಹ್ಮಣರು ನೆಲೆಸಿದ್ದಂತಹ ಅಗ್ರಹಾರವು ಚತುರ್ವೇದಿಮಂಗಲವೆಂದು ಪ್ರಸಿದ್ಧವಾಗಿತ್ತು. ಹೊಯ್ಸಳ ದೊರೆ ವಿಷ್ಣುವರ್ಧನನು ಕೋಲಾರ ಪ್ರದೇಶವನ್ನು ಆಕ್ರಮಣ ಮಾಡಿದ ನಂತರ ಬೆಳ್ಳೂರನ್ನು ಅಗ್ರಹಾರವನ್ನಾಗಿ ಮಾರ್ಪಾಟು ಮಾಡಿ ಚತುರ್ವೇದ ಪಾರಂಗತರಾದಂತಹ ಬ್ರಾಹ್ಮಣರುಗಳಿಗೆ ದಾನ ಮಾಡಿ ತನ್ನ ಹೆಸರನ್ನೇ ಆ ಅಗ್ರಹಾರಕ್ಕೆ ನೀಡಿರುವನು.[೮೦]

ಕರ್ನಾಟಕದ ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿದ್ದರೂ, ಕೋಲಾರ ಜಿಲ್ಲೆಯಲ್ಲಿ ದೊರೆಯುವಂತಹ ಅಗ್ರಹಾರಗಳು ವಿದ್ಯಾಭ್ಯಾಸದ ವಿಷಯದಲ್ಲಿ ಮೌನವಹಿಸಿದೆ. ಅದೇ ರೀತಿಯಾಗಿ ಪ್ರಾಚೀನ ಕರ್ನಾಟಕದಲ್ಲಿದ್ದಂತಹ ಅಗ್ರಹಾರಗಳು ವಿದ್ಯಾಭ್ಯಾಸದ ವಿಷಯದಲ್ಲಿ ಮೌನವಹಿಸಿದೆ. ಪ್ರಮುಖ ನಾಲ್ಕು ವಿದ್ಯಾಕೇಂದ್ರಗಳಾದ ದೇವಸ್ಥಾನ-ಮಠ, ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನಗಳಲ್ಲಿ

ದೇವಸ್ಥಾನ ಮತ್ತು ಅಗ್ರಹಾರಗಳ ವಿಷಯವಾಗಿ ಮಾಹಿತಿಯು ದೊರೆತರೂ ಬ್ರಹ್ಮಪುರಿ ಮತ್ತು ಘಟಿಕಾ ಸ್ಥಾನಗಳ ವಿಷಯವಾಗಿ ಹೆಚ್ಚಿನ ಮಾಹಿತಿಯು ದೊರೆಯುತ್ತಿಲ್ಲ. ಕೋಲಾರ ಜಿಲ್ಲೆಯು ಕಾಲಕಾಲಕ್ಕೆ ಅನೇಕ ರಾಜಮಹಾರಾಜರುಗಳ, ಸಾಮಂತರಾಜರುಗಳ ಆಡಳಿತವನ್ನು ಎದುರಿಸಿತ್ತು. ಹಾಗಾಗಿ ವಿದ್ಯಾಕೇಂದ್ರಗಳ ವಿಷಯವಾಗಿ ಅನೇಕ ಅಡೆತಡೆಗಳು ಎದುರಾಗಿರಬಹುದು. ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನ ಅಗ್ರಹಾರಗಳನ್ನು ರಾಜಮಹಾರಾಜರುಗಳು ದಾನವಾಗಿ ನೀಡಿರುವುದು ಕಂಡುಬರುತ್ತದೆ. ಆದರೆ ಅಗ್ರಹಾರಗಳಲ್ಲಿ ವಿದ್ಯಾಕೇಂದ್ರಗಳ ವಿಷಯವಾಗಿ ಮಾಹಿತಿಯು ದೊರಕುವುದಿಲ್ಲ.

ಮಂಗಲ

ಮಂಗಲವೆಂಬುವುದು ಅಗ್ರಹಾರಕ್ಕೆ ಪರ್ಯಾಯವಾಗಿ ಬಳಸಿರುವಂತಹ ಪದವಾಗಿದೆ. ಪಲ್ಲವರಸರ ಕಾಲದಿಂದಲೂ ಪ್ರಯೋಗದಲ್ಲಿರುವಂತಹ ಈ ಪದವೂ ಆಧುನಿಕ ಕಾಲದಲ್ಲೂ ಅನೇಕ ಸ್ಥಳಗಳ ಹೆಸರಲ್ಲಿ ಕಂಡುಬರುತ್ತದೆ. ಉದಾ: ನಾಗಮಂಗಲ, ನೊಣಮಂಗಲ, ಸತ್ಯಮಂಗಲ, ನೆಲಮಂಗಲ. ಇತ್ಯಾದಿ ಮಂಗಲವೆಂದರೆ ಶುಭವೆಂದರ್ಥ. ಪಲ್ಲವರ ಪ್ರಭಾವದಿಂದ ಬಳಕೆಗೆ ಬಂದಂತಹ ಈ ಪದವು ಕರ್ನಾಟಕದಲ್ಲಿ ಹಲವಾರು ಗ್ರಾಮಗಳ ಹೆಸರುಗಳಲ್ಲಿ ಕಾಣಬಹುದಾಗಿದೆ. ಇವು ಅಗ್ರಹಾರಗಳಂತೆ ಬ್ರಾಹ್ಮಣರುಗಳಿಗೆ ನೀಡಿರುವಂತಹ ಗ್ರಾಮಗಳಾಗಿದ್ದು ವಿಸ್ತೀರ್ಣದಲ್ಲಿ ದೊಡ್ಡದಾಗಿರುತ್ತಿದ್ದವು. ಹಾಗಾಗಿ ಅಗ್ರಹಾರಕ್ಕಿಂತ ದೊಡ್ಡದಾದ ಬಡಾವಣೆಗಳೆಂದರೆ ಮಂಗಲಗಳು.[೮೧] ಅಗ್ರಹಾರಗಳಂತೆ ಮಂಗಲಗಳಲ್ಲಿಯೂ ಯಾವಾಗಲೂ ಬ್ರಾಹ್ಮಣರೇ ನೆಲೆಸಿದ್ದು ಹೆಚ್ಚಾಗಿ ಮಂಗಲಕರವಾದ (ಯಜ್ಞ ಯಾಗಾದಿಗಳು) ಕೆಲಸಗಳು ನಡೆಯುತ್ತಿದ್ದುದರಿಂದ ಈ ಹೆಸರು ಪ್ರಸಿದ್ಧವಾಗಿರಬಹುದು.

ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಮಂಗಲ ಶಬ್ದವು ಪ್ರಯೋಗವಾಗಿರುವುದನ್ನು ಗಮನಿಸಬಹುದಾಗಿದೆ. ವಿಶೇಷವೆಂದರೆ ಆಧುನಿಕ ಕಾಲದಲ್ಲೂ ಮಂಗಲ ಶಬ್ದದ ಪ್ರಯೋಗವನ್ನು ಸ್ಥಳನಾಮಗಳಲ್ಲಿ ಗಮನಿಸಬಹುದಾಗಿದೆ. ಉದಾ: ನೊಣಮಂಗಲ, ಬೇತಮಂಗಲ ಇತ್ಯಾದಿ.

ಕೆಲವು ಸ್ಥಳಗಳ ಹೆಸರು ಅಲ್ಪಸ್ವಲ್ಪ ವ್ಯತ್ಯಾಸವನ್ನು ಪಡೆದುಕೊಂಡಿವೆ. ಮಂಗಲ ಶಬ್ದದ ಪ್ರಯೋಗವು ನೊಳಂಬರ ಆಳ್ವಿಕೆಯ ಕಾಲದಿಂದಲೇ ಇತ್ತೆಂಬುವುದಕ್ಕೆ ಕೋಲಾರ ತಾಲ್ಲೂಕಿನ ನರಸಾಪುರ ಹೋಬಳಿಯ ಶಿವಾರಪಟ್ಟಣದ ಶಾಸನದಿಂದ ದೊರಕುತ್ತದೆ. ನೊಳಂಬ ದೊರೆ ವೀರ ನೊಳಂಬನು ರಾಜ್ಯವನ್ನಾಳುತ್ತಿರಲು ತೊಂಬಯ್ಯನ ಮಕ್ಕಳಾದ ನಾಗಯ್ಯ ಮತ್ತು ಕೊಂಡಯ್ಯರೆಂಬುವವರು 'ಮೆಂಡಿಮಂಗಲ'ದ ಮಹಾಜನರಿಗೆ ಹದಿನಾರು ಗದ್ಯಾಣ ಬಂಗಾರವನ್ನು ದಾನವಾಗಿ ನೀಡಿದರೆಂಬ ಮಾಹಿತಿಯನ್ನು ನೀಡುತ್ತದೆ.[೮೨]

> **". . . ಶ್ರೀ ಮೆಂಡಿಮಂಗಲದ ಮಹಾಜನಂಗೆ**
> **ಪದಿನಾರು ಗದ್ಯಾಣ ಪೊಂಗೊಟ್ಟು. . ."**

ಮಹಾಜನ ಶಬ್ದದ ಪ್ರಯೋಗವಿರುವುದರಿಂದ ಮೆಂಡಿಮಂಗಲವೆಂಬುವುದು ಅಗ್ರಹಾರವಾಗಿತ್ತೆಂದು ತಿಳಿಯಬಹುದಾಗಿದೆ. ಮೆಂಡಿಮಂಗಲವೆನ್ನುವುದು ಈಗಿನ ಮಾದಮಂಗಲವಾಗಿ ರೂಪಾಂತರಗೊಂಡಿದೆ.

ಬಂಗಾರಪೇಟೆಯ ಕಾರಿಬೆಲೆ ಗ್ರಾಮದಲ್ಲಿ ದೊರಕಿರುವಂತಹ ಶಾಸನವು 'ಕಾರಿಮಂಗಲ'ವೆಂಬ ಗ್ರಾಮದ ಉಲ್ಲೇಖವನ್ನು ಮಾಡುತ್ತದೆ. ಕಾರಿಮಂಗಲವು ಬಹುಶಃ ಅಗ್ರಹಾರವಾಗಿತ್ತೆಂದು ಊಹಿಸಬಹುದಾಗಿದೆ. ಈ ಗ್ರಾಮದ

ಒಡೆಯ ತಿಮ್ಮಪ್ಪನಾಯಕನಾಗಿದ್ದು ಅಪೂರ್ಣವಾದ ಮಾಹಿತಿಯನ್ನು ಒದಗಿಸುತ್ತದೆ. ಕಾರಿಮಂಗಲವೆನ್ನುವುದು **'ಕಾರಿಬೆಲೆ'ಯಾಗಿ ರೂಪಾಂತರವಾಗಿದೆ.**[೮೩]

ಕಣ್ಣಮಂಗಲವೆಂಬ ಗ್ರಾಮದ ·ಉಲ್ಲೇಖವು ಕೋಲಾರ ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿ ದೊರಕಿರುವಂತಹ ಶಾಸನವು ನೀಡುತ್ತದೆ.[೮೪] ಕಣ್ಣಮಂಗಲವು ಜೈನರ ಕೇಂದ್ರವಾಗಿದ್ದಿರಬಹುದು. ಈ ಸ್ಥಳದಲ್ಲಿ ಬಸದಿಗಳ ನಿರ್ಮಾಣ ಮಾಡಿ ಭೂದಾನವನ್ನು ನೀಡಿರುವಂತಹ ಮಾಹಿತಿಯನ್ನು ಈ ಶಾಸನವು ನೀಡುತ್ತಿದೆ. ಕಣ್ಣಮಂಗಲವು ಇಂದು ಕನ್ನಮಂಗಲವಾಗಿ ರೂಪಾಂತರವಾಗಿದೆ.

ಬೇತಮಂಗಲವು ಇನ್ನೊಂದು ಪ್ರಸಿದ್ಧವಾದಂತಹ ಅಗ್ರಹಾರವಾಗಿತ್ತು. ನೊಳಂಬರ ಆಡಳಿತಾವಧಿಯಲ್ಲಿ ವಿಜಯಾದಿತ್ಯಮಂಗಲವೆಂದು ಪ್ರಸಿದ್ಧಿ ಪಡೆದಿದ್ದ ಈ ಪ್ರದೇಶವು ಬೇತಮಂಗಲವಾಗಿ ರೂಪಾಂತರವಾಗಿದೆ. ಬಂಗಾರಪೇಟೆ ತಾಲ್ಲೂಕು ಕೇಂದ್ರದಿಂದ ೧೫ಕಿ.ಮೀ. ದೂರದಲ್ಲಿರುವಂತಹ ಬೇತಮಂಗಲವು ಇಂದು ಪ್ರಮುಖ ಗ್ರಾಮವಾಗಿದೆ. ಬಾಣ ದೊರೆ ವಿಜಯಾದಿತ್ಯನು, ಈ ಅಗ್ರಹಾರವನ್ನು ನಿರ್ಮಿಸಿದ್ದು ತನ್ನ ಹೆಸರನ್ನೇ ಅಗ್ರಹಾರಕ್ಕೆ ನೀಡಿರುವನು.[೮೫]

ಉಪಸಂಹಾರ

ಸ್ಥಳ ಐತಿಹ್ಯಗಳು ಒಂದು ಸ್ಥಳದ ಐತಿಹಾಸಿಕ ಸ್ವರೂಪವನ್ನು ಒದಗಿಸುತ್ತದೆ. ಪುರಾಣ, ರಾಮಾಯಣ, ಮಹಾಭಾರತಾದಿಗಳಲ್ಲಿ ಪ್ರತಿಪಾದಿತವಾಗಿರುವಂತಹ ಐತಿಹ್ಯಗಳು ಒಂದು ಸ್ಥಳದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಧಾನ ಭೂಮಿಕೆಯನ್ನು ವಹಿಸುತ್ತದೆ. ಅಂತಹ ಐತಿಹ್ಯಗಳನ್ನು ಕೋಲಾರ ಜಿಲ್ಲೆಯ ಹೆಚ್ಚಿನ ಸ್ಥಳಗಳು ಹೊಂದಿವೆ. ಶಾಸನಗಳಲ್ಲೂ ಸ್ಥಳಗಳ ಉಲ್ಲೇಖಗಳು ಕಂಡು ಬರುತ್ತಿದ್ದು ಕೆಲವು ಆಧುನಿಕ ಯುಗದಲ್ಲಿ ಪ್ರಚಲಿತದಲ್ಲಿದೆ. ಕೆಲವು ಕೇವಲ ಶಾಸನಗಳಿಗೆ ಮಾತ್ರ ಸೀಮಿತವಾಗಿದ್ದು ಪ್ರಚಲಿತದಲ್ಲಿ ಕಂಡುಬರುವುದಿಲ್ಲ.

ಅಡಿ ಟಿಪ್ಪಣಿಗಳು

೧. ಪುರಾಣನಾಮ ಚೂಡಾಮಣಿ : ಪು-೯೮
೨. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಡಾ.ಲಕ್ಷ್ಮೀದೇವಿ ಎನ್. ಪು.೯೪
೩. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ : ಡಾ.ಆರ್.ಗೋಪಾಲ್, ಪು.ಸಂ.೩೫
೪. ಅದೇ, ಪು.ಸಂ.೧೦೫
೫. E.C.X ಕೋಲಾರ – ೭೯
೬. E.C.X ಮುಳಬಾಗಿಲು-೮೦
೭. E.C.X ಮುಳಬಾಗಿಲು-೨೫೫
೮. E.C.X ಕೋಲಾರ-೭೯
೯. E.C.X ಕೋಲಾರ-೧೬೦
೧೦. E.C.X ಕೋಲಾರ-೨೩೭
೧೧. E.C.X ಮಾಲೂರು -೮೪
೧೨. E.C.X Supp ಕೋಲಾರ – ೩೪೯
೧೩. E.C.X ಕೋಲಾರ – ೧೪೧, ೧೪೨
೧೪. ಕೋಲಾರ ಜಿಲ್ಲಾ ಗ್ಯಾಸೆಟಿಯರ್ – ಪು.ಸಂ.೮೭
೧೫. E.C.X ಕೋಲಾರ -೧೪೫
೧೬. E.C.X ಕೋಲಾರ – ೬೩
೧೭. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಡಾ.ಲಕ್ಷ್ಮಿದೇವಿ ಎನ್.ಪು.ಸಂ.೧೦೨
೧೮. E.C.X ಕೋಲಾರ ೩೨, ೩೩
೧೯. E.C.X ಕೋಲಾರ ೩೫, ೩೬, ೩೭
೨೦. E.C.X Supp ಕೋಲಾರ ೩೧೧, ೩೧೩, ೩೧೬, ೩೪೮, ೩೪೯
೨೧. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಪು.ಸಂ.೧೦೫
೨೨. ಸ್ಥಳನಾಮ ಅಧ್ಯಯನ : ವಿ.ಗೋಪಾಲಕೃಷ್ಣ : ಪು.ಸಂ.೩೬
೨೩. ಇತಿಹಾಸ ದರ್ಶನ : ಸಂ. ಸು.ಕಂ.ಗೋವರ್ಧನ, ಪು.ಸಂ.೧೮೮
೨೪. E.C.X Supp ಬಂಗಾರಪೇಟೆ ೮೬, ೧೧೩
೨೫. E.C.X ಮುಳಬಾಗಿಲು – ೧೮
೨೬. ಕೋಲಾರ ಜಿಲ್ಲಾ ಗ್ಯಾಸೆಟಿಯರ್ : ಡಾ.ಚಿತ್ತರಂಜನ್, ಪು.ಸಂ.೯೧೭
೨೭. ತಲಕಾಡಿನ ಗಂಗರ ದೇವಾಲಯಗಳು : ಪು.ಸಂ.೨೦೪
೨೮. E.C.X ಕೋಲಾರ – ೬, ೭ ಮತ್ತು ೧೧
೨೯. E.C.X ಕೋಲಾರ – ೧೧
೩೦. E.C.X ಕೋಲಾರ – ೧೮೧
೩೧. ಕೋಲಾರ ಜಿಲ್ಲಾ ಗ್ಯಾಸೆಟಿಯರ್ : ಪು.ಸಂ.೮೮೩
೩೨. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಡಾ.ಲಕ್ಷ್ಮೀದೇವಿ.ಎಲ್. ಪು.ಸಂ.೯
೩೩. E.C.X ಬಂಗಾರಪೇಟೆ – ೨ ಮತ್ತು ೪
೩೪. E.C.X ಮುಳಬಾಗಿಲು – ೨೨೯
೩೫. ಸ್ಥಳನಾಮ ಅಧ್ಯಯನ : ವಿ.ಗೋಪಾಲಕೃಷ್ಣ : ಪು.ಸಂ.೨
೩೬. ತಲಕಾಡಿನ ಗಂಗರ ದೇವಾಲಯಗಳು : ಪು.ಸಂ.೧೭೫
೩೭. ಕೋಲಾರ ಜಿಲ್ಲಾ ಗ್ಯಾಸೆಟಿಯರ್ : ಪ್ರೇಕ್ಷಣೀಯ ಸ್ಥಳಗಳು : ಪು.ಸಂ.೮೯೨

೩೮. E.C.X ಕೋಲಾರ –೮೩
೩೯. E.C.X ಮುಳಬಾಗಿಲು – ೧೧೫
೪೦. E.C.X ಬಂಗಾರಪೇಟೆ – ೧೩ ಮತ್ತು ೪೮
೪೧. ತಲಕಾಡಿನ ಗಂಗ ದೇವಾಲಯಗಳು : ಪು.ಸಂ.೨೦೪
೪೨. E.C.X ಬಂಗಾರಪೇಟೆ ೪೦ ಮತ್ತು ೪೮
೪೩. E.C.X ಬಂಗಾರಪೇಟೆ –೧೩
೪೪. ಕೋಲಾರ ಜಿಲ್ಲಾ ಗ್ಯಾಸೆಟಿಯರ್ – ಪು.ಸಂ.೮೯
೪೫. ಸ್ಥಳನಾಮಗಳು : ವಿ.ಗೋಪಾಲಕೃಷ್ಣ : ೬೮
೪೬. E.C.X ಮುಳಬಾಗಿಲು – ೧೮
೪೭. E.C.X Supp ಮುಳಬಾಗಿಲು – ೧೯
೪೮. ತಲಕಾಡಿನ ಗಂಗ ದೇವಾಲಯಗಳು : ಪು.ಸಂ.೧೩೦
೪೯. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಪು.ಸಂ.೯೦
೫೦. E.C.X ಮುಳಬಾಗಿಲು – ೩೯, ೫೧, ೫೮, ೬೫, ೯೧
೫೧. ಕೋಲಾರ ಜಿಲ್ಲಾ ಗ್ಯಾಸೆಟಿಯರ್ : ಪು.ಸಂ.೮೪೫
೫೨. E.C.X ಮುಳಬಾಗಿಲು – ೩೯
೫೩. E.C.X ಮುಳಬಾಗಿಲು – ೫೧
೫೪. E.C.X ಮುಳಬಾಗಿಲು – ೬೫ ಮತ್ತು ೯೧
೫೫. E.C.X ಮುಳಬಾಗಿಲು – ೧೫೭
೫೬. E.C.X ಮುಳಬಾಗಿಲು – ೨೫೩
೫೭. E.C.X ಬಂಗಾರಪೇಟೆ – ೧೩
೫೮. E.C.X ಮುಳಬಾಗಿಲು – ೧೧೫, ೧೧೮, ೧೨೨, ೧೩೫, ೧೫೭
೫೯. E.C.X ಮಾಲೂರು – ೨೧೦
೬೦. ಶ್ರೀವೆಂಕಟೇಶ್ವರ ಸ್ವಾಮಿ ಮತ್ತು ಇತರ ವಿಷ್ಣುದೇವಾಲಯಗಳು : ಪು.ಸಂ.೭೩
೬೧. ಕೋಲಾರ ಜಿಲ್ಲಾ ಗ್ಯಾಸೆಟಿಯರ್ : ಪು.ಸಂ.೮೫೩
೬೨. ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು : ಡಾ.ಲಕ್ಷ್ಮೀದೇವಿ.ಎಲ್. ಪು.ಸಂ.೧೦೦
೬೨ a. ಸ್ಥಳನಾಮಗಳ ಅಧ್ಯಯನ, ಪುಟಸಂಖ್ಯೆ – ೧೬
೬೨ b. E.C.X ಮುಳಬಾಗಿಲು – ೧೨೩ ಮತ್ತು ೧೬೦
೬೩. ಅದೇ ಪುಟ – ೧೧೪
೬೪. E.C.X ಶ್ರೀನಿವಾಸಪುರ – ೨೬
೬೫. E.C.X ಶ್ರೀನಿವಾಸಪುರ – ೨೯
೬೬. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಐತಿಹ್ಯಗಳು : ಪು.ಸಂ.೩೯
೬೭. E.C.X ಮುಳಬಾಗಿಲು – ೬೫
೬೮. ಶ್ರೀವೆಂಕಟೇಶ್ವರ ಸ್ವಾಮಿ ಮತ್ತು ಇತರ ವಿಷ್ಣು ದೇವಾಲಯಗಳು : ಪು.ಸಂ.೫೨
೬೯. E.C.X ಶ್ರೀನಿವಾಸಪುರ –೫
೭೦. E.C.X ಶ್ರೀನಿವಾಸಪುರ –೨೦
೭೧. E.C.X ಶ್ರೀನಿವಾಸಪುರ –೩೦
೭೨. E.C.X ಶ್ರೀನಿವಾಸಪುರ –೪೦
೭೩. Local Self Government in Midiaeval Karnataka – G.S.Dikshit, Page No-40

೭೪. E.C.X M.A.R. 1924 – No.79

೭೫. ಸಂಕ್ಷಿಪ್ತ ಕನ್ನಡ ನಿಘಂಟು – ಕನ್ನಡ ಸಾಹಿತ್ಯ ಪರಿಷತ್ತು

೭೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟಸಂಖ್ಯೆ – ೨೩೦

೭೭. E.C.X ಕೋಲಾರ – ೧೧

೭೮. E.C.X ಕೋಲಾರ – ೫೭

೭೯. E.C.X ಕೋಲಾರ – ೧೧೮ ಮತ್ತು ೧೨೨

೮೦. E.C.X ಕೋಲಾರ – ೧೪

೮೧. ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ – ಪ್ರಾಚೀನ ವಿದ್ಯಾಭ್ಯಾಸ ಪದ್ಧತಿ

೮೨. E.C.X ಕೋಲಾರ – ೯

೮೩. E.C.X ಬಂಗಾರಪೇಟೆ – ೭೯

೮೪. E.C.X ಕೋಲಾರ – ೯೦

೮೫. E.C.X ಬಂಗಾರಪೇಟೆ – ೩

ಅಧ್ಯಾಯ – ೬

ಸಮಾರೋಪ

ಅಧ್ಯಾಯ – ೬

ಸಮಾರೋಪ

ಆಧುನಿಕ ಸಂಶೋಧನಾ ಯುಗದಲ್ಲಿ ಇತಿಹಾಸವನ್ನು ಪ್ರಧಾನವಾಗಿರಿಸಿಕೊಂಡು ನಡೆಯುವಂತಹ ಅಧ್ಯಯನಗಳ ಸಂಖ್ಯೆಯು ಕಡಿಮೆಯಾಗುತ್ತಿವೆ. ಇತಿಹಾಸದ ಬಗ್ಗೆ ಚಿಂತನೆಗಳು ವಿಸ್ತಾರವಾಗುತ್ತಾ ಹೋದಂತೆ ಇತಿಹಾಸದ ವಿಷಯಗಳ ಕುರಿತಾದ ಸಂಶೋಧನೆಗಳು ವಿಸ್ತಾರವಾಗುತ್ತಿವೆ. ರಾಜ ಮಹಾರಾಜರುಗಳ ಕುರಿತಾದ ಮತ್ತು ಅವರ ಸಾಮ್ರಾಜ್ಯದ ಕುರಿತಾದ ಸಂಶೋಧನೆಗಳು ವಿಪುಲವಾಗಿ ನಡೆದಿವೆ. ಇಂತಹ ಇತಿಹಾಸಗಳ ರಚನೆಗಳಲ್ಲಿ ಪ್ರಮುಖ ಸಹಕಾರಿಯಾಗಿದ್ದಂತಹ ಪುರಾತತ್ವ ನೆಲೆಗಳು, ಕುರುಹುಗಳು, ಶಾಸನಗಳು, ತಾಳೆಗರಿ ಇತ್ಯಾದಿಗಳ ಅಧ್ಯಯನವು ವಿಸ್ತಾರವಾಗಿ ಬೆಳೆಯಿತು. ಕಾಲಾನುಕ್ರಮದಲ್ಲಿ ಒಂದು ಪ್ರದೇಶದಲ್ಲಿ ದೊರಕುವಂತಹ ಇಂತಹ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನಗಳು ಮುಂದುವರೆದವು. ಅಂತಹ ಒಂದು ಪ್ರಯತ್ನವು ನಮ್ಮ ಈ ಅಧ್ಯಯನದಲ್ಲಿ ನಡೆದಿದೆ.

ಆ ಉದ್ದೇಶದಿಂದಲೇ ಕರ್ನಾಟಕದ ಚಿನ್ನದಗಣಿ, (ವಿಭಜಿತ) ಕೋಲಾರ ಜಿಲ್ಲೆಯನ್ನು ಸಂಶೋಧನಾ ಕೇಂದ್ರವಾಗಿರಿಸಿಕೊಂಡು ಪ್ರಾರಂಭಿಸಿರುವಂತಹ ಈ ಅಧ್ಯಯನವು ಈ ಪ್ರದೇಶದಲ್ಲಿ ದೊರಕುವಂತಹ ಶಾಸನಾಧಾರವನ್ನು ಆಶ್ರಯಿಸಿದೆ. ಕೋಲಾರ ಜಿಲ್ಲೆಯಲ್ಲಿ ದೊರೆಯುವಂತಹ ಪ್ರಾಚೀನ ಶಾಸನಗಳೊಂದಿಗೆ ಪ್ರಾರಂಭಿಸಿ ಸುಮಾರು ಕ್ರಿ.ಶ.೧೩ನೆಯ ಶತಮಾನಗಳವರೆಗೆ ದೊರಕುವಂತಹ ಶಾಸನಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಲಾಗಿದೆ. ಜಿಲ್ಲೆಯ ಎಲ್ಲಾ ೫ ತಾಲ್ಲೂಕುಗಳಲ್ಲಿ ದೊರೆಯುವಂತಹ ಶಾಸನಗಳನ್ನು ಅದರಲ್ಲೂ ದಾನಶಾಸನಗಳು, ಸ್ಮಾರಕ ಶಾಸನಗಳು ಎಂದು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಿಷಯ ಪ್ರತಿಪಾದನೆ ಮಾಡಲು ಪ್ರಯತ್ನಿಸಲಾಗಿದೆ. ೧೩ನೆಯ ಶತಮಾನವನ್ನು ಪರಿಧಿಯಾಗಿರಿಸಿ ಕೊಂಡಿರುವುದರಿಂದ ಪ್ರಮುಖವಾಗಿ ಗಂಗರಸರ, ಬಾಣರಸರ, ನೊಳಂಬರಸರ, ಹೊಯ್ಸಳರ ಮತ್ತು ಚೋಳರ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಕೋಲಾರ ಜಿಲ್ಲೆಯ ರಾಜಕೀಯ ಮತ್ತು ಸಾಮಾಜಿಕ ಚಿತ್ರಣವನ್ನು ತೋರಿಸಲಾಗಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನುಸಾರವಾಗಿ ಅಧ್ಯಾಯಗಳನ್ನು ನಿರ್ಧರಿಸಿ ಮಿತಿಗೊಳಿಸಲಾಗಿದೆ. ಈ ಸಂಬಂಧವಾಗಿ ನಮ್ಮ ಮಾರ್ಗದರ್ಶಕರೊಂದಿಗೆ ಚರ್ಚೆಯನ್ನು ನಡೆಸಿದ್ದೇವೆ. ನಾವು ಅಧ್ಯಯನಕ್ಕಾಗಿ ತೆಗೆದುಕೊಂಡಿರುವಂತಹ ವಿಷಯಕ್ಕನುಗುಣವಾಗಿ ಆರು ಅಧ್ಯಾಯಗಳನ್ನು ಮಾಡಿಕೊಂಡಿರುವೆವು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನದ ಆಕರಗಳ, ವಿಷಯವಾಗಿ ತಿಳಿಸಲಾಗಿದೆ. ಅಧ್ಯಯನಕ್ಕೆ ಮುನ್ನುಡಿಯಂತಿರುವ ಈ ಅಧ್ಯಾಯದಲ್ಲಿ ನಮ್ಮ ಅಧ್ಯಯನದ ವಿಷಯದ ಕುರಿತಾಗಿ ಇಲ್ಲಿಯವರೆಗೆ ನಡೆದಿರುವಂತಹ ಅಧ್ಯಯನಗಳನ್ನು ಗಮನಿಸಲಾಗಿದೆ. ನಮ್ಮ ಅಧ್ಯಯನವು ಅದಕ್ಕಿಂತ ಹೇಗೆ ಭಿನ್ನ ಎಂಬುದನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಉದ್ದೇಶದಂತೆ ರಾಜಕೀಯ ಚಿತ್ರಣವನ್ನು ನೀಡಲು ಪ್ರಯತ್ನಿಸಲಾಗಿದೆ. ಶಾಸನಗಳ ದೃಷ್ಠಿಯಿಂದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿ ಕೋಲಾರ ಜಿಲ್ಲೆಯು ಯಾವ ಯಾವ

ರಾಜಮನೆತನದವರ ಆಡಳಿತಕ್ಕೊಳಪಟ್ಟಿತ್ತೆಂಬ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕರ್ನಾಟಕದ ಇತಿಹಾಸದ ಪ್ರಾರಂಭದಿಂದ ೧೩ನೆಯ ಶತಮಾನದ ಅಂತ್ಯದವರೆಗಿನ ಕೋಲಾರ ಜಿಲ್ಲೆಯ ಇತಿಹಾಸವನ್ನು ಇಲ್ಲಿ ನೀಡಲಾಗಿದೆ. ಅಧ್ಯಾಯದ ಪ್ರಾರಂಭದಲ್ಲಿ ಕೋಲಾರ ಜಿಲ್ಲೆಯಲ್ಲಿ ದೊರಕಿರುವಂತಹ ಪುರಾತತ್ವ ನೆಲೆಗಳನ್ನು, ಪ್ರಾಗೈತಿಹಾಸಿಕ ವಿಶೇಷತೆಗಳನ್ನು ಹೇಳಲಾಗಿದೆ. ಕರ್ನಾಟಕದ ಮೊದಲ ದೊರೆಗಳಾದ ಕದಂಬರ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ ಬೀಳದಿರಲು ಕಾರಣವೇನೆಂದು ಚಿತ್ರಿಸಲಾಗಿದೆ.

ರಾಜಕೀಯ ಇತಿಹಾಸಕ್ಕೆ ಸಂಬಂಧಪಟ್ಟಂತೆ ಮೊದಲು ಬಾಣರಸರ ಆಳ್ವಿಕೆಯನ್ನು ಸೂಚಿಸುವಂತಹ ಶಾಸನಗಳು ದೊರೆಯುತ್ತವೆ. ಬಾಣವಂಶದ ಇತಿಹಾಸದೊಂದಿಗೆ ಅವರ ವೈಶಿಷ್ಟ್ಯ ಮತ್ತು ಕೋಲಾರ ಜಿಲ್ಲೆಯ ಮೇಲೆ ಅವರ ಪ್ರಭಾವವನ್ನು ಗುರುತಿಸಲಾಗಿದೆ. ಬಾಣರ ರಾಜ್ಯವು ಕೋಲಾರ ಜಿಲ್ಲೆಯ ಪ್ರದೇಶಗಳನ್ನೊಳಗೊಂಡಿತ್ತು. ಬಾಣರು ಪ್ರಧಾನ ರಾಜಮನೆತನದವರಾಗಿ ಮೆರೆಯಲು ಪ್ರಯತ್ನ ಪಟ್ಟರೂ ಗಂಗ ಮತ್ತು ನೊಳಂಬರ ಸಾಮಂತರಾಗಿಯೇ ಮುಂದುವರೆಯ ಬೇಕಾಯಿತು. ಇದಕ್ಕೆ ಇತಿಹಾಸದಲ್ಲಿ ದೊರಕುವಂತಹ ಪ್ರಧಾನ ಕಾರಣವನ್ನು ಚರ್ಚಿಸಲಾಗಿದೆ.

ನಂತರ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧರಾದಂತಹ ಗಂಗರ ಇತಿಹಾಸವನ್ನು ಚರ್ಚಿಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ದೊರಕುವ ತಾಮ್ರಶಾಸನಗಳ ಆಧಾರದಲ್ಲಿ ಗಂಗರ ವಂಶಾವಳಿಯನ್ನು ನೀಡಲಾಗಿದೆ. ಗಂಗ ದೊರೆಗಳಿಗೆ ಸಂಬಂಧಿಸಿರುವಂತಹ ಶಾಸನಗಳು ಅಧಿಕವಾಗಿ ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ಇವುಗಳ ಆಧಾರದಿಂದ ಗಂಗರ ಇತಿಹಾಸವನ್ನು ರೂಪಿಸಲು ಪ್ರಯತ್ನಿಸಲಾಗಿದೆ. ರಾಷ್ಟ್ರಕೂಟರಸರ ಮತ್ತು ಬಾದಾಮಿ ಚಾಲುಕ್ಯರ ಇತಿಹಾಸದೊಂದಿಗೆ ಈ ವಂಶದ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ ಬೀರಿತ್ತೆ ಇಲ್ಲವೇ ಎಂದು ಸಕಾರಣವಾಗಿ ವಿವರಿಸಲಾಗಿದೆ. ಇದರೊಂದಿಗೆ ಕರ್ನಾಟಕದ ಇತಿಹಾಸದಲ್ಲಿ ತಲೆಮರೆ ಕಾಯಿಯಂತಿರುವ ನೊಳಂಬರಸರ ಮತ್ತು ಬಾಣರಸರ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಸಾಮಂತರಸರಂತೆ ಕಂಡುಬರುವ ಇಳವಂಜಿರಾಯರ ಮತ್ತು ಬ್ರಹ್ಮಾದಿಯರ ಮಾಹಿತಿಯನ್ನು ನೀಡಿರುವುದು ವಿಶೇಷವಾಗಿದ್ದು, ಅವರ ರಾಜ್ಯ ವಿಸ್ತಾರವನ್ನು ಮತ್ತು ಕೋಲಾರ ಜಿಲ್ಲೆಯ ಮೇಲೆ ಅವರ ಪ್ರಭಾವದ ಕುರಿತು ಚರ್ಚಿಸಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಕದಂಬರನ್ನು ಹೊರತುಪಡಿಸಿ ಉಳಿದ ಅರಸು ಮನೆತನದವರ ಆಡಳಿತವು ಕಂಡುಬರುತ್ತದೆ. ಹಾಗಾಗಿ ಉಳಿದ ಪ್ರಮುಖ ಸಾಮ್ರಾಜ್ಯದವರ ಆಡಳಿತ ವಿಭಾಗವು ಕೋಲಾರ ಜಿಲ್ಲೆಯಲ್ಲಿ ಕಂಡುಬರುತ್ತವೆ. ಅಂತಹ ಆಡಳಿತ ವಿಭಾಗಗಳ ವಿಸ್ತಾರವನ್ನು ಕೋಲಾರ ಜಿಲ್ಲೆಗೆ ಅನುಗುಣವಾಗಿ ನೀಡಲಾಗಿದೆ. ರಾಜಮಹಾರಾಜರುಗಳಿಗೆ ಆಡಳಿತ ವಿಭಾಗದಲ್ಲಿ ಆಡಳಿತವನ್ನು ನಡೆಸಲು ಪಟ್ಟದರಾಣಿಯರು ಸಹಾಯವನ್ನು ಮಾಡುತ್ತಿದ್ದಂತಹ ವಿಚಾರಗಳು ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ದೊರಕುವಂತಹ ಶಾಸನಗಳಲ್ಲಿ ದೊರಕಿವೆ. ಶಾಸನಗಳಲ್ಲಿ ಸ್ತ್ರೀಸಮಾಜವೆಂಬ ಶೀರ್ಷಿಕೆಯಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ.

ಮೂರನೆಯ ಅಧ್ಯಾಯವು ಸ್ಮಾರಕ ಶಾಸನಗಳನ್ನು ಕೇಂದ್ರೀಕರಿಸಿಕೊಂಡಿರುವಂತಹ ಅಧ್ಯಾಯವಾಗಿದೆ. ಸಮಾಜದಲ್ಲಿ ಪ್ರಸಿದ್ಧಿಯನ್ನು ಗಳಿಸಿ ಗಣ್ಯವ್ಯಕ್ತಿ ಎಂದು ಹೆಸರು ಗಳಿಸಿದ ವೀರನು ಮರಣ ಹೊಂದಿದ ನಂತರ ಆತನ ನೆನಪು ಶಾಶ್ವತವಾಗಿ ಉಳಿಯಲಿ ಎಂದು ಆತನ ನೆನಪಿಗಾಗಿ ಸ್ಮಾರಕಗಳನ್ನು ನಿರ್ಮಿಸುತ್ತಿದ್ದರು. ಹಿಂದೆ ಆಳಿದ ರಾಜವಂಶಗಳ ಕಾಲದಲ್ಲಿ ಹಾಕುತ್ತಿದ್ದಂತಹ ಸ್ಮಾರಕಗಳು ಶಾಸನದ ರೂಪವನ್ನು ಪಡೆದಿದ್ದವು. ಅವುಗಳು

ಕೇವಲ ಕಲ್ಲಿನ ರೂಪದ ಸ್ಮಾರಕವಾಗಿರದೆಯೇ ಸಾಮಾಜಿಕ ವಾತಾವರಣವನ್ನು ಸೂಚಿಸುವಂತಹ ಶಾಸನಗಳಾಗಿ ಪ್ರಸಿದ್ಧಿಯಾಗಿದೆ.

ಕೋಲಾರ ಜಿಲ್ಲೆಯಲ್ಲಿ ಸ್ಮಾರಕ ಶಾಸನಗಳು ಮತ್ತು ಅವುಗಳ ಪ್ರಕಾರಗಳು ವಿಫುಲವಾಗಿ ದೊರಕಿವೆ. ಇಲ್ಲಿ ದೊರಕುವಂತಹ ವೀರಗಲ್ಲು ಶಾಸನಗಳು ವೀರತ್ವದ ಮೌಲ್ಯವನ್ನು ವೃದ್ಧಿಸಿವೆ. ಪ್ರಮುಖ ರಾಜವಂಶದ ರಾಜರು ರಾಜ್ಯವಿಸ್ತಾರವನ್ನು ಮಾಡುವ ಸಂದರ್ಭದಲ್ಲಿ ನಡೆದಂತಹ ಪ್ರಮುಖ ಯುದ್ಧಗಳಲ್ಲಿ ಬೆನ್ನೆಲುಬಾಗಿ ನಿಂತಂತಹ ವೀರರು, ಯುದ್ಧಗಳಲ್ಲಿ ವೀರಮರಣವನ್ನು ಹೊಂದಿ ತಮ್ಮ ಆಶ್ರಯದಾತರಿಗೂ, ತನ್ನ ನಾಡಿಗೂ ಗೌರವವನ್ನು ತಂದು ಕೊಟ್ಟಿದ್ದಾರೆ. ಇಂತಹ ವೀರರ ವೀರತನವನ್ನು ಪ್ರದರ್ಶಿಸಿದಂತಹ ಹಲವಾರು ವೀರಗಲ್ಲು ಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರಕಿವೆ. ವೀರಗಲ್ಲು ಶಾಸನಗಳ ಅಧ್ಯಯನದಿಂದಲೂ ಮತ್ತು ವಿವಿಧ ರಾಜಮನೆತನಗಳ ಆಳ್ವಿಕೆಯ ಸಂದರ್ಭದಲ್ಲಿ ನಡೆದಂತಹ ಯುದ್ಧಗಳ (ಕಾಳಗಗಳ) ಮಾಹಿತಿಯನ್ನು ನೀಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಮಾಸ್ತಿಗಲ್ಲು ಶಾಸನಕ್ಕೆ ಸಂಬಂಧಪಟ್ಟಂತೆ ಕಡಿಮೆ ಶಾಸನಗಳು ದೊರಕಿದ್ದು (ಒಂದೇ ಶಾಸನ) ಈ ಪ್ರದೇಶದಲ್ಲಿ ಮಹಾಸತಿಯಾಗುವಂತಹ ಪದ್ಧತಿಯು ಪ್ರಸಿದ್ಧವಾಗಿರಲಿಲ್ಲ ಎಂದು ತಿಳಿಯಬಹುದು. ಸ್ಮಾರಕ ಶಾಸನಗಳಲ್ಲಿ ಪ್ರಸಿದ್ಧಿಯಾಗಿರುವಂತಹ ತುರುಗೋಳ್, ಊರಳಿವು ಮತ್ತು ಪೆಣ್ಬುಯಲ್ ಶಾಸನಗಳ ಕುರಿತಾಗಿ ವಿಸ್ತಾರವಾಗಿ ಚರ್ಚೆಯನ್ನು ಮಂಡಿಸಲಾಗಿದ್ದು, ಕೋಲಾರ ಜಿಲ್ಲೆಯಲ್ಲಿ ದೊರಕುವಂತಹ ಇಂತಹ ಶಾಸನಗಳ ವೈಶಿಷ್ಟ್ಯತೆಯನ್ನು ಗುರುತಿಸಲಾಗಿದೆ. ತುರುಗೋಳ್, ಊರಳಿವು ಮತ್ತು ಪೆಣ್ಬುಯಲ್ ಶಬ್ದಗಳ ನಿಷ್ಪತ್ತಿಯೊಂದಿಗೆ ಇಂತಹ ಶಾಸನಗಳ ಮಹತ್ವವನ್ನು ರಾಜರು ಮಡಿದ ವೀರರಿಗೆ ನೀಡುತ್ತಿದ್ದಂತಹ ಗೌರವವನ್ನು ಸಾಂದರ್ಭಿಕವಾಗಿ ಚರ್ಚಿಸಲಾಗಿದೆ.

ಬೇಟೆಯಲ್ಲಿ ಮಡಿದ ವೀರರಿಗೆ ಸಂಬಂಧಿಸಿದಂತಹ ಶಾಸನಗಳು ಅಪರೂಪವಾಗಿ ಈ ಜಿಲ್ಲೆಯಲ್ಲಿ ದೊರಕುತ್ತಿದ್ದು ಇತಿಹಾಸಜ್ಞರ ಗಮನವನ್ನು ಇತ್ತ ಕಡೆ ಸೆಳೆದಿವೆ. ಹಂದಿಬೇಟೆಯಲ್ಲಿ ಮಡಿದ ವೀರನ ನೆನಪಿಗಾಗಿ, ಆನೆಯ ಕಾಳಗದಲ್ಲಿ ಮಡಿದ ವೀರರ ಸ್ಮರಣಾರ್ಥವಾಗಿ, ಹುಲಿಬೇಟೆಯಲ್ಲಿ ಮಡಿದ ವೀರರಿಗಾಗಿ ಮತ್ತು ಕುದುರೆ ಕಾಳಗದಲ್ಲಿ ಮಡಿದಂತಹ ವೀರರಿಗಾಗಿ ಸ್ಮಾರಕ ಶಾಸನಗಳನ್ನು ನಿಲ್ಲಿಸಿರುವುದು ಕೋಲಾರ ಜಿಲ್ಲೆಯಲ್ಲಿ ವಿಶೇಷವಾಗಿ ದೊರೆಯುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂತಹ ಸ್ಮಾರಕ ಶಾಸನಗಳ ಪ್ರತ್ಯಕ್ಷ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಾಂದರ್ಭಿಕವಾಗಿ ಶಾಸನಗಳ ಶಿಲ್ಪವನ್ನು ಉದಾಹರಿಸಲಾಗಿದೆ.

ದಾನ ಶಾಸನಗಳನ್ನು ಪ್ರಧಾನವಾಗಿಟ್ಟುಕೊಂಡು ನಾಲ್ಕನೆಯ ಅಧ್ಯಾಯವು ಮುಂದುವರೆದಿದೆ. ಶಾಸನಶಾಸ್ತ್ರದಲ್ಲಿ ದಾನ ಶಾಸನಗಳಿಗೆ ವಿಶೇಷ ಸ್ಥಾನವನ್ನು ನೀಡಿದ್ದಾರೆ. ದಾನಶಾಸನಗಳಲ್ಲಿ ವಿಷಯಗಳ ಅಧಿಕತೆ ಇದೆ. ಶಾಸನಗಳ ವಿಷಯಾನು ಪೂರ್ವಿಯನ್ನು ಗುರುತಿಸಿರುವಂತಹ ಶಾಸನ ಶಾಸ್ತ್ರಜ್ಞರು ದಾನ ಶಾಸನಗಳಲ್ಲಿ ಹಲವಾರುವಿಭಾಗಗಳನ್ನು ನಿರ್ದೇಶಿಸಿದ್ದಾರೆ. (ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ.ಎಂ.ಚಿದಾನಂದಮೂರ್ತಿ) ಭಾರತೀಯ ರಾಜಮನೆತನಗಳು ರಾಜಮಹಾರಾಜರು ದಾನಗಳಿಗೆ ಪ್ರಾಶಸ್ತ್ಯವನ್ನು ನೀಡಿದ್ದಾರೆ. ರಾಜರು ಭೂದಾನವನ್ನು, ಗ್ರಾಮದಾನವನ್ನು ಹೆಚ್ಚಾಗಿ ನೀಡಿರುವುದು ಕಂಡುಬರುತ್ತದೆ. ಭೂದಾನವನ್ನು ಬ್ರಾಹ್ಮಣರಿಗೂ, ಗ್ರಾಮದಾನವನ್ನು ದೇವಾಲಯಗಳಿಗೂ ರಾಜನು ಹೆಚ್ಚಾಗಿ ನೀಡಿರುವನು.

ಕೋಲಾರದಲ್ಲಿ ದೊರಕಿರುವಂತಹ ದಾನ ಶಾಸನಗಳು ವಿವಿಧತೆಯನ್ನು ಹೊಂದಿದೆ. ದಾನ ಶಾಸನಗಳಿಗೆ ಸಂಬಂಧಿಸಿದಂತಹ ಎಲ್ಲಾ ಪ್ರಕಾರಗಳ ಶಾಸನಗಳು ದೊರಕಿವೆ. ಹೊಯ್ಸಳರ ಮತ್ತು ಚೋಳರ

ಆಡಳಿತಾವಧಿಯಲ್ಲಿ ದೇವಾಲಯಗಳಿಗೆ ಹೆಚ್ಚಾಗಿ ದಾನ ನೀಡಿರುವುದನ್ನು ಗಮನಿಸಬಹುದಾಗಿದೆ. ಜೈನಧರ್ಮವು ಕೋಲಾರ ಜಿಲ್ಲೆಯಲ್ಲಿ ತಳವೂರಿ ನಿಂತಂತೆ ಕಂಡು ಬರದಿದ್ದರೂ ಬಸದಿಗಳಿಗೆ ನೀಡಿದ ದಾನವನ್ನು ತಾಮ್ರ ಶಾಸನಗಳು ತಿಳಿಸಿವೆ. ಈ ಅಧ್ಯಾಯದಲ್ಲಿ ಜೈನಧರ್ಮವು ಕೋಲಾರ ಜಿಲ್ಲೆಯಲ್ಲಿ ಯಾವ ಸ್ವರೂಪವನ್ನು ಪಡೆದಿತ್ತು ಎಂದು ಸಂದರ್ಭೋಚಿತವಾಗಿ ತಿಳಿಸಲು ಪ್ರಯತ್ನಿಸಲಾಗಿದೆ.

ಕೋಲಾರ ಜಿಲ್ಲೆಯ ಪ್ರಸಿದ್ಧ ದೇವಾಲಯಗಳಲ್ಲಿರುವ ಆರಾಧ್ಯ ದೇವನಿಗೆ ಪ್ರಮುಖ ರಾಜಮನೆತನದ ಅರಸುಗಳು ಕಾಲಕಾಲಕ್ಕೆ ಭೂದಾನಾದಿ ದಾನಗಳನ್ನು ನೀಡುತ್ತಾ ಬಂದಿದ್ದಾರೆ. ಅಂತಹ ದಾನಗಳ ವಿಚಾರವನ್ನು ದೇವಭೋಗವೆಂಬ ವಿಷಯದಲ್ಲಿ ಪ್ರಸ್ತಾಪಿಸಲಾಗಿದೆ. ದೇವಭೋಗದಂತೆ ಬ್ರಹ್ಮದೇಯ ಶಾಸನಗಳು ಪ್ರಮುಖವಾಗಿ ಈ ಜಿಲ್ಲೆಯಲ್ಲಿ ಕಂಡುಬಂದಿವೆ. ವಿಶೇಷವಾಗಿ ತಾಮ್ರಶಾಸನಗಳು ಬ್ರಹ್ಮದೇಯದ ವಿಚಾರವನ್ನು ತಿಳಿಸುತ್ತವೆ.

ವೀರರಿಗಾಗಿ ಬಿಡುತ್ತಿದ್ದಂತಹ ದತ್ತಿಗಳು ಎಂದು ಉಪಶೀರ್ಷಿಕೆಯನ್ನು ನೀಡಿ ವೀರರು ತಮ್ಮ ಆತ್ಮಾರ್ಪಣೆಯನ್ನು ಮಾಡಿದ್ದಂತಹ ಸಂದರ್ಭದಲ್ಲಿ ನೀಡುತ್ತಿದ್ದ ವಿವಿಧ ರೀತಿಯ ದಾನಗಳನ್ನು ಅರ್ಥ ಸಹಿತವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಬಾಳ್ಗಚ್ಚು, ನೆತ್ತರ್ಪಡಿ ಮತ್ತು ಬಿತ್ತುವಟ್ಟ ಮೊದಲಾದ ಶಬ್ದಗಳ ಅರ್ಥನಿಷ್ಪತ್ತಿಯೊಂದಿಗೆ ಈ ಶಾಸನಗಳನ್ನು ಸಾಂದರ್ಭಿಕವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ. 'ಬಾಳ್ಗಚ್ಚು' ಮತ್ತು 'ನೆತ್ತರ್ಪಡಿ'ಯು ವೀರರಿಗೆ ನೀಡುತ್ತಿದ್ದಂತಹ ಕೊಡುಗೆಯಾಗಿದ್ದು ರಾಜರು ಆತ್ಮಾರ್ಪಣೆ ಮಾಡಿಕೊಂಡ ವೀರರಿಗೆ ಗೌರವವನ್ನು ನೀಡುತ್ತಿದ್ದರು. ಇವೆರಡಕ್ಕೂ ವ್ಯತ್ಯಾಸವನ್ನು ತಿಳಿಸಿ ಯಾವ ರೀತಿಯಾಗಿ ಶಾಸನಗಳಲ್ಲಿ ಇವೆರಡನ್ನು ಹೇಗೆ ಪ್ರಯೋಗಿಸಲಾಗಿದೆ ಎಂದು ಚರ್ಚಿಸಲಾಗಿದೆ. 'ಬಿತ್ತುವಟ್ಟ' ಎನ್ನುವುದು ಕೆರೆಯನ್ನು ಜೀರ್ಣೋದ್ಧಾರ ಮಾಡಿದಾಗ ಅಥವಾ ಕಟ್ಟಿದಾಗ ರಾಜನು ಬಿಡುತ್ತಿದ್ದಂತಹ ದಾನವಾಗಿದೆ. ರಾಜರು ನೀರಾವರಿಗೆ ಯಾವ ರೀತಿಯಾಗಿ ಪ್ರಾಶಸ್ತ್ಯವನ್ನು ನೀಡುತ್ತಿದ್ದರೆಂದು ವಿಮರ್ಶಿಸಲಾಗಿದೆ.

ಕೋಲಾರ ಜಿಲ್ಲೆಯ ಕೆಲವು ದೇವಾಲಯಗಳಲ್ಲಿ ವಿಶೇಷವಾದ ಸಂದರ್ಭದಲ್ಲಿ ದಾನದತ್ತಿಯನ್ನು ಬಿಟ್ಟಿರುವುದು ಗಮನಕ್ಕೆ ಬಂದ ಸಂದರ್ಭದಲ್ಲಿ ಅವುಗಳ ವಿಮರ್ಶೆಯನ್ನು ನೀಡಲಾಗಿದೆ. ದಾನ ಶಾಸನಗಳ ವಿಮರ್ಶಾತ್ಮಕ ಅಧ್ಯಯನವನ್ನು ನಡೆಸಿದಾಗ ಕೋಲಾರ ಜಿಲ್ಲೆಯ ಸಾಮಾಜಿಕ ವಾತಾವರಣವನ್ನು ಅರುಹಲು ಸುಲಭ ಮಾರ್ಗವನ್ನು ನೀಡುತ್ತಿರುವಂತೆ ಕಂಡುಬರುತ್ತದೆ.

ಅಧ್ಯಾಯ ಐದರಲ್ಲಿ ಸ್ಥಳನಾಮಗಳ ವಿಚಾರವನ್ನು ತಿಳಿಯಪಡಿಸಲು ಪ್ರಯತ್ನಿಸಲಾಗಿದೆ. ಶಾಸನಗಳ ಮೂಲಕ ಕೋಲಾರ ಜಿಲ್ಲೆಯ ವಿವಿಧ ತಾಲ್ಲೂಕುಗಳ ಸ್ಥಳನಾಮಗಳನ್ನು ವಿಮರ್ಶೆಗೆ ಒಳಪಡಿಸಲಾಗಿದ್ದು, ಸ್ಥಳಪುರಾಣಗಳನ್ನು ಮತ್ತು ಐತಿಹ್ಯಗಳನ್ನು ಚರ್ಚಿಸಲಾಗಿದೆ. ರಾಮಾಯಣ ಮತ್ತು ಮಹಾಭಾರತ ಕಾಲಕ್ಕೆ ಸಂಬಂಧಪಟ್ಟಂತಹ ಸ್ಥಳಪುರಾಣಗಳನ್ನು ಮೊದಲು ವಿಮರ್ಶಿಸಲಾಗಿದ್ದು, ನಂತರ ಇತಿಹಾಸದಲ್ಲಿ ಉಕ್ತವಾಗಿರುವಂತೆ ಸ್ಥಳಗಳನ್ನು ಗುರುತಿಸಲಾಗಿದೆ. ತಾಲ್ಲೂಕುವಾರು ವಿಂಗಡನೆ ಮಾಡಿಕೊಂಡು ಶಾಸನೋಕ್ತ ಸ್ಥಳಗಳನ್ನು ಚರ್ಚಿಸಲಾಗಿದೆ. ಸ್ಥಳಗಳಲ್ಲಿ ದೊರಕುವಂತಹ ಪ್ರಾಚೀನ ಶಾಸನಗಳನ್ನು, ದೇವಾಲಯಗಳನ್ನು ವಿಮರ್ಶಿಸಲಾಗಿದೆ. ದೇವಾಲಯಗಳ ಮಹತ್ವವನ್ನು ದೇವಾಲಯಗಳ ರಚನೆಯ ಕಾಲವನ್ನು ರಾಜ ಮಹಾರಾಜರು ದೇವಾಲಯಗಳಿಗೆ ನೀಡುತ್ತಿದ್ದಂತಹ ದಾನ ದತ್ತಿಗಳನ್ನು ವಿಮರ್ಶಿಸಲಾಗಿದೆ. ಕೆಲವು ಸ್ಥಳನಾಮಗಳು ಆಧುನಿಕ ಹೆಸರನ್ನು ಪಡೆದಿದ್ದು ನಮ್ಮ ಅಧ್ಯಯನಕ್ಕೆ ಉಚಿತವಾಗಿರದಿದ್ದರೂ ಜಿಲ್ಲೆಯ ಪ್ರಧಾನ ಸ್ಥಳವಾದುದರಿಂದ ಅಗತ್ಯಕ್ಕೆ ತಕ್ಕಂತೆ ಮಾಹಿತಿಯನ್ನು ನೀಡಲಾಗಿದೆ.

ನಮ್ಮ ಈ ಅಧ್ಯಯನದಲ್ಲಿ ಕಂಡುಕೊಂಡಂತಹ ಪ್ರಮುಖ ವಿಷಯವೆಂದರೆ ಕೋಲಾರ ಜಿಲ್ಲೆಯು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಬಹಳ ಔನ್ನತ್ಯವನ್ನು ಹೊಂದಿತ್ತು ಮತ್ತು ಇವೆಲ್ಲವುಗಳು ಶಾಸನಗಳಲ್ಲಿ ವಿಸ್ತಾರವಾಗಿ ಹುದುಗಿ ಹೋಗಿದ್ದವು. ಅಂತಹ ವಿಚಾರಗಳನ್ನು ಬೆಳಕಿಗೆ ತಂದಿರುವುದು ನಮ್ಮ ಅಧ್ಯಯನ ವಿಶೇಷವಾಗಿದೆ. ಭಾಷಿಕವಾಗಿಯೂ, ಧಾರ್ಮಿಕವಾಗಿಯೂ ಶಾಸನಗಳನ್ನು ಬಹು ವಿಸ್ತಾರವಾಗಿ ಅಧ್ಯಯನ ನಡೆಸಬಹುದಾಗಿದ್ದರೂ, ರಾಜಕೀಯ ಚರಿತ್ರೆಯೇ ವಿಸ್ತಾರವಾದುದರಿಂದ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಅಸಾಧ್ಯವಾಯಿತು. ಕೋಲಾರ ಜಿಲ್ಲೆಯ ಚರಿತ್ರೆಯನ್ನು ಮೊದಲು ಗಮನಿಸಿದರೆ ಇದು ಗಂಗ ಅರಸರ ಮೊದಲ ರಾಜಧಾನಿಯಾಗಿತ್ತೆಂದು ಅಷ್ಟೇ ತಿಳಿದುಬರುತ್ತದೆ. ಆದರೆ ಶಾಸನಗಳನ್ನು ವಿವರವಾಗಿ ಗಮನಿಸಿದರೆ ಕದಂಬರಸರನ್ನು ಹೊರತುಪಡಿಸಿ ಉಳಿದೆಲ್ಲ ರಾಜಮನೆತನದವರ ನೇರ ಆಡಳಿತಕ್ಕೆ ಕೋಲಾರ ಜಿಲ್ಲೆಯು ಒಳಪಟ್ಟಿತ್ತು.

ಕೋಲಾರವೆಂದರೆ ಗಂಗರ ರಾಜಧಾನಿ ಎಂಬಷ್ಟರ ಮಟ್ಟಿಗೆ ಅರಿವು ನಮ್ಮಲ್ಲಿ ಮೂಡುವುದು ಸಹಜ. ಆದರೆ ಕೋಲಾರವೆಂದರೆ ಕೇವಲ ಗಂಗರ ನಾಡಾಗಿರಲಿಲ್ಲ. ಕಾಲಕಾಲಕ್ಕೆ ಎಲ್ಲಾ ರಾಜಮನೆತನದವರ ಪ್ರಭಾವಕ್ಕೆ ಒಳಪಟ್ಟಿತ್ತು. ಬಾಣರಸರ ರಾಜಧಾನಿ ನಂದಿಗಿರಿಯು ಕೋಲಾರಕ್ಕೆ ಸಮೀಪವಿದ್ದು (ಈಗ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ.) ಇವರ ಮಾಹಿತಿಯು ಕೋಲಾರ ಜಿಲ್ಲೆಯಲ್ಲಿಯೇ ಕಂಡುಬರುತ್ತದೆ. ಕರ್ನಾಟಕದ ಇತಿಹಾಸದಲ್ಲಿ ಎಲೆಮರೆಯ ಕಾಯಿಯಂತಿರುವ ಬಾಣರಸರ ಮತ್ತು ನೊಳಂಬರ ಇತಿಹಾಸವನ್ನು ಈ ಅಧ್ಯಯನದಲ್ಲಿ ವಿಸ್ತಾರವಾಗಿ ಪ್ರಸ್ತುತ ಪಡಿಸಿರುವುದು ವಿಶೇಷವಾಗಿದೆ. ನೊಳಂಬರು ಮೊದಲು ಕೋಲಾರ ಜಿಲ್ಲೆಯ ಮೇಲೆ ಪ್ರಭಾವವನ್ನು ಬೀರದಿದ್ದರೂ ನಂತರ ಅವರ ಆಡಳಿತಕ್ಕೂ ಈ ಜಿಲ್ಲೆಯು ಒಳಪಟ್ಟಿತ್ತು. ಕರ್ನಾಟಕದ ಇತಿಹಾಸದಲ್ಲಿ ಅಷ್ಟೊಂದು ಪ್ರಮುಖವಾಗಿ ಕಂಡುಬರದೇ ಇರುವಂತಹ ಇಳವಂಜಿರಾಯ ಮತ್ತೆ ಬ್ರಹ್ಮಾದಿರಾಯರ ಇತಿಹಾಸ ಮತ್ತು ವೈಶಿಷ್ಟ್ಯವನ್ನು ನಮ್ಮ ಅಧ್ಯಯನದಲ್ಲಿ ಗಮನಿಸಲಾಗಿದೆ.

ನಮ್ಮ ಅಧ್ಯಯನವು ಇನ್ನೂ ವಿಸ್ತಾರವಾದಂತಹ ವ್ಯಾಪ್ತಿಯನ್ನು ಹೊಂದಬಹುದಾಗಿದ್ದರೂ ಸಮಯದ ಅಭಾವದಿಂದಲೂ ಮತ್ತು ವಿಷಯ ವಿಸ್ತಾರವಾಗುವಂತಹ ಭಯದಿಂದಲೂ ಸೀಮಿತಗೊಳಿಸಲಾಗಿದೆ. ೧೩ನೆಯ ಶತಮಾನದ ನಂತರವೂ ಕೋಲಾರ ಜಿಲ್ಲೆಯ ಭವ್ಯ ಇತಿಹಾಸವು ದೊರೆಯುತ್ತದೆ. ವಿಜಯನಗರದ ಅರಸರ ಶಾಸನಗಳು ವಿಫುಲವಾಗಿ ದೊರೆಯುತ್ತಿದ್ದು, ಆಧುನಿಕ ಕಾಲದಲ್ಲೂ ಕೋಲಾರ ಜಿಲ್ಲೆಯು ಅನೇಕ ಏಳುಬೀಳುಗಳನ್ನು ಹೊಂದಿದ್ದು, ವಿಜಯನಗರದರಸರ ಜೊತೆಗೆ ಅನೇಕ ದಂಡನಾಯಕರ, ಪಾಳೆಯಗಾರರ ಇತಿಹಾಸವು ದೊರೆಯುತ್ತದೆ. ಆ ದೃಷ್ಟಿಯಿಂದ ನಮ್ಮ ಅಧ್ಯಯನವು ಮುಂದುವರಿಸಬಹುದಾಗಿದೆ.

ಕನ್ನಡ ಶಾಸನಗಳನ್ನು ಮಾತ್ರವಲ್ಲದೇ ಅನೇಕ ಸಂಸ್ಕೃತ ಶಾಸನಗಳೂ, ತೆಲುಗು ಶಾಸನಗಳು ಮತ್ತು ತಮಿಳುಶಾಸನಗಳು ಕೋಲಾರ ಜಿಲ್ಲೆಯಲ್ಲಿ ದೊರೆಯುತ್ತಿದ್ದು ಇವುಗಳ ವಿಸ್ತೃತ ಅಧ್ಯಯನವನ್ನು ನಡೆಸಬಹುದಾಗಿದೆ. ಕೋಲಾರ ಜಿಲ್ಲೆಯು ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಗಡಿಭಾಗದಲ್ಲಿದೆ. ಹಾಗಾಗಿ ತೆಲುಗುಭಾಷೆ ಮತ್ತು ತಮಿಳುಭಾಷೆಯ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಈ ದೃಷ್ಟಿಯಿಂದ ಕೋಲಾರ ಜಿಲ್ಲೆಯ ತೆಲುಗು ಮತ್ತು ತಮಿಳುಶಾಸನಗಳ ಅಧ್ಯಯನವನ್ನು ಮಾಡಬಹುದಾಗಿದೆ. ಚೋಳರ ಆಡಳಿತಕ್ಕೊಳಪಟ್ಟಿದ್ದರಿಂದಾಗಿ ತಮಿಳುಭಾಷಿಕರ ಪ್ರಭಾವವು ಅಧಿಕವಾಗಿದೆ. ಇತ್ತಿಚೆಗೆ ಇಸ್ಲಾಂಧರ್ಮದ ಪ್ರಭಾವವು ಕೋಲಾರ ಜಿಲ್ಲೆಯ ಮೇಲೆ

ಹೆಚ್ಚು ಪ್ರಭಾವ ಬೀರುತ್ತಿದೆ. ಟಿಪ್ಪುಸುಲ್ತಾನನ ತಂದೆ ಹೈದರಾಲಿಯ ಜನ್ಮಸ್ಥಳವು ಅವಿಭಜಿತ ಕೋಲಾರ ಜಿಲ್ಲೆಯಲ್ಲಿದೆ. ಹಾಗಾಗಿ ಧಾರ್ಮಿಕವಾಗಿಯೂ ಕೋಲಾರ ಜಿಲ್ಲೆಯನ್ನು ಗುರಿಪಡಿಸಬಹುದಾಗಿದೆ.

ಧಾರ್ಮಿಕವಾಗಿ ಶೈವ, ವೈಷ್ಣವ, ಶಾಕ್ತ ಮೊದಲಾಗಿ ವಿಭಾಗಿಸಿ ದೇವಾಲಯಗಳನ್ನು ದೇವಾಲಯಗಳ ಶೈಲಿಯ ಆಧಾರದಲ್ಲಿ ಚಿತ್ರಿಸಬಹುದಾಗಿದೆ. ಭಾಷಿಕವಾಗಿಯೂ ಸಾಹಿತ್ಯಕವಾಗಿಯೂ ಶಾಸನಗಳನ್ನು ಅಧ್ಯಯನ ಮಾಡಲು ವಿಪುಲವಾದ ಅವಕಾಶವು ಇದೆ.

ಶಾಸನಾಧಾರಗಳಿಂದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಚಿತ್ರಿಸಬೇಕೆಂಬ ಉದ್ದೇಶದಿಂದ ಕೈಗೊಂಡ ಈ ಸಂಶೋಧನೆಯು ಹೊಸ ವಿಚಾರಗಳನ್ನು ಬೆಳಕಿಗೆ ತರುವ ಮೂಲಕ ಸಫಲವಾಗಿದೆ ಎಂದು ನಾವು ಭಾವಿಸುತ್ತೇವೆ. ವಿಚಾರಗಳು ಅನಂತವಾಗಿದ್ದು ಕ್ರಮಿಸಬೇಕಾದಂತಹ ದಾರಿಯೂ ಅನಂತವಾಗಿದೆ. ಕೋಲಾರ ಪ್ರದೇಶದತ್ತ ಮುಂದೆ ಬರುವಂತಹ ಸಂಶೋಧಕರ ಗಮನವನ್ನು ಸೆಳೆದು ಮತ್ತಷ್ಟು ಸಂಶೋಧನೆಗಳು ಭವಿಷ್ಯತ್ತಿನಲ್ಲಿ ನಮ್ಮ ಈ ಅಧ್ಯಯನದ ಸಹಾಯದಿಂದ ಬಂದರೆ ನಮ್ಮ ಈ ಶ್ರಮವನ್ನು ಸಾರ್ಥಕವೆಂದು ಭಾವಿಸುತ್ತೇನೆ.

ಅನುಬಂಧಗಳು

ಸಂಕೇತಾಕ್ಷರಗಳು

ಪರಾಮರ್ಶನ ಗ್ರಂಥಗಳು

ಇಂಗ್ಲೀಷ್ ಪುಸ್ತಕಗಳು

ಶಾಸನ ಸಂಪುಟಗಳು

ನಿಯತ ಕಾಲಿಕೆಗಳು

ನಕ್ಷೆಗಳು

ಛಾಯಾ ಚಿತ್ರಗಳು

ಅನುಬಂಧ-೧

ಸಂಕೇತಾಕ್ಷರಗಳು

1. ಕ.ವಿ.ಶಾ ಸಂ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು
2. E.C. : Epigraphia Carnatica
3. E. I. : Epigraphia Indica
4. S.I.I : South Indian Inscriptions
5. M.A.R : Mysore Archaeological Report's
6. I.A : Indian Antiquary
7. I.W.G : Inscriptions of Western Ganga's

ಅನುಬಂಧ –೨

ಪರಾಮರ್ಶನ ಗ್ರಂಥಗಳು

೧. ಅಣ್ಣಿಗೇರಿ ಎ.ಎಂ. ಮೇವುಂಡಿ ಮಲ್ಲಾರಿ, ಶಾಸನ ಪರಿಚಯ, ಕನ್ನಡ ಸಂಶೋಧನಾ ಸಂಸ್ಥೆ,ಧಾರವಾಡ

೨. ಅನಂತರಾಮಯ್ಯ ಎಸ್,ಪಂಪಭಾರತ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩. ಅಪರ್ಣ.ಕೂ.ಸ,ದೇವಾಲಯ ವಾಸ್ತುಶಿಲ್ಪ ಪರಿಚಯ,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೪. ಎಚ್ಚೆಸ್ಕೆ (ಸಂ),ಅವಲೋಕನ – ಕರ್ನಾಟಕ ಪರಂಪರೆ ಸಮೀಕ್ಷೆ,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,ಬೆಂಗಳೂರು, ೧೯೮೩

೫. ಡಾ.ಕಲಬುರ್ಗಿ ಎಂ.ಎಂ.,ಕನ್ನಡ ಸಂಶೋಧನಾ ಶಾಸ್ತ್ರ,ಸೌಜನ್ಯ ಪ್ರಕಾಶನ,ಧಾರವಾಡ, ೧೯೯೨

೬. ಡಾ.ಕಲಬುರ್ಗಿ ಎಂ.ಎಂ.,ವೀರ ಮರಣ ಸ್ಮಾರಕಗಳು,ಐ.ಬಿ.ಎಚ್. ಪ್ರಕಾಶನ,ಬೆಂಗಳೂರು – ೧೯೮೦

೭. ಡಾ.ಕೃಷ್ಣಮೂರ್ತಿ. ಪಿ.ವಿ, ಬಾಣರಸರ ಶಾಸನಗಳು – ಒಂದು ಅಧ್ಯಯನ,ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು, ೨೦೦೯

೮. ಡಾ.ಕೃಷ್ಣಮೂರ್ತಿ .ಪಿ.ವಿ.,ತಮಿಳು ನಾಡಿನ ಕನ್ನಡ ಶಾಸನಗಳು,ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪

೯. ಡಾ.ಗಣೇಶ್.ಕೆ.ಆರ್.,ಆಂಧ್ರಪ್ರದೇಶದ ಕನ್ನಡ ಶಾಸನಗಳು,ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೬

೧೦. ಡಾ.ಗುರುಮೂರ್ತಿ.ಕೆ.ಜಿ.,ಸ್ಥಳನಾಮಗಳ ಅಧ್ಯಯನ ಮತ್ತಿತ್ತರ,ಪ್ರಬಂಧಗಳು,ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೭

೧೧. ಗೋಪಾಲಕೃಷ್ಣ ವಿ, ಸ್ಥಳನಾಮ ಅಧ್ಯಯನಗಳು,ವಿದ್ಯಾಗಿರಿ ಪ್ರಕಾಶನ,ಡಿ.ಪಾಳ್ಯ, ೧೯೮೭

೧೨. ಡಾ.ಗೋಪಾಲ್ .ಆರ್,(ಸಂ) ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,೨೦೦೪

೧೩. ಗೋಪಾಲ್ .ಬಾ.ರಾ.,ಬನವಾಸಿ ಕದಂಬರು,ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ ಶಿರಸಿ, ೧೯೮೩

೧೪. ಡಾ.ಗೋಪಾಲರಾವ್. ಎಚ್.ಎಸ್, ಚಂಗಾಳ್ವರು,ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಚಿತ್ತರಂಜನ್ ಹೆಚ್.(ಸಂ) ಕೋಲಾರ ಜಿಲ್ಲಾ ಗ್ಯಾಸೆಟಿಯರ್,ಕರ್ನಾಟಕ ಸರ್ಕಾರ, ೨೦೦೫

೧೬. ಚಿದಾನಂದಮೂರ್ತಿ.ಎಂ.ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೬

೧೭. ಚಿದಾನಂದಮೂರ್ತಿ.ಎಂ.,ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು,ಬೆಂಗಳೂರು, ೧೯೭೫

೧೮. ಚಿದಾನಂದಮೂರ್ತಿ.ಎಂ.ಸಂಶೋಧನೆ ತರಂಗ ಸಂ–೨, ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು

೧೯. ಡಾ.ಚಿತ್ತಯ್ಯ ಪೂಜಾರ್.ಡಿ.ಕೆ.,ಕನ್ನಡ ಶಾಸನಾಧ್ಯಯನದ ಬಹುಮುಖಿ, ಆಯಾಮಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಡಾ.ಚೆನ್ನಕ್ಕಪಾವಟೆ ,ಶಾಸನ ಸಂಜೀವಿನಿ, ಚೆನ್ನಗಂಗಾ ಪ್ರಕಾಶನ, ಧಾರವಾಡ

೨೧. ಡಾ.ಜಯಮ್ಮ ಕರಿಯಣ್ಣ,ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ,ಕರ್ನಾಟಕ ಇತಿಹಾಸ
ಸಂಶೋಧನಾ ಮಂಡಲ,ಧಾರವಾಡ, ೨೦೦೮

೨೨. ಡಾ.ಜಯಮ್ಮ ಕರಿಯಣ್ಣ,ಶಾಸನಗಳಲ್ಲಿ ದಾನದತ್ತಿಗಳು,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦

೨೩. ತಿಪ್ಪೇರುದ್ರಸ್ವಾಮಿ.ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ,ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೭೪

೨೪. ತಮಿಳ್ ಸೆಲ್ವಿ,ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೨೫. ಡಾ.ದೇವರಕೊಂಡಾರೆಡ್ಡಿ, ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು, ೧೯೯೬

೨೬. ನಾಯಕ. ಹಾ.ಮಾ , ಕನ್ನಡ ವಿಷಯ ವಿಶ್ವಕೋಶ,ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೭. ನಂಜುಂಡಸ್ವಾಮಿ.ಎ.ಎಸ್, ಕದಂಬ, ಗಂಗರ, ಹೊಯ್ಸಳರ ಇತಿಹಾಸ,ಸಮಾಜ ಪುಸ್ತಕಾಲಯ
ಶಿವಾಜಿಬೀದಿ, ಧಾರವಾಡ – ೧

೨೮. ನರಸಿಂಹನ್.ಕೆ.ಆರ್. ,ಕೋಲಾರ ಜಿಲ್ಲೆಯ ಶ್ರೀವೆಂಕಟೇಶ್ವರ ಸ್ವಾಮಿ,
ಹಾಗೂ ಇತರೆ ವಿಷ್ಣು ದೇವಾಲಯಗಳು

೨೯. ನರಸಿಂಹನ್.ಕೆ.ಆರ್.,ಕುವಳಾಲ,೧೧ನೇ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ,
ಸಮ್ಮೇಳನ, ೨೦೧೦

೩೦. ನರಸಿಂಹಾಚಾರ್ಯ.ಆರ್.ಕರ್ನಾಟಕ ಕವಿ ಚರಿತೆ,ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು.

೩೧. ನೆಲಮಂಗಲ ಲಕ್ಷ್ಮೀನಾರಾಯಣ ರಾಯರು, ವಿದ್ಯಾರತ್ನ.ಶ್ರೀ.ರಾ.ಸ್ವಾ.ಪಂಚಮುಖಿ
ಕರ್ನಾಟಕದ ಅರಸು ಮನೆತನಗಳು ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ೨೦೦೮

೩೨. ಡಾ.ಪರಮಶಿವಮೂರ್ತಿ.ಡಿ.ವಿ, ಕನ್ನಡ ಶಾಸನಶಿಲ್ಪ ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,೧೯೯೯

೩೩. ಡಾ.ಪರಮಶಿವಮೂರ್ತಿ.ಡಿ.ವಿ, ಶಾಸನ ಸಂಶೋಧನೆ, ಗುಣ ನಿಧಿ ಪ್ರಕಾಶನ
ಬೆಂಗಳೂರು, ೧೯೯೪

೩೪. ಡಾ.ಪರಮಶಿವಮೂರ್ತಿ.ಡಿ.ವಿ, ಪೆಣ್ಬುಯ್ಯಲ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೫. ಪಂಚಮುಖಿ.ರಾ.ಸ ., ಕರ್ನಾಟಕದ ಇತಿಹಾಸ, ೧೯೬೬

೩೬. ಪ್ರಹ್ಲಾದ್ ರಾವ್.ಕೆ.ಆರ್, ನರಸಿಂಹನ್.ಕೆ.ಆರ್, ಗೋಪಾಲಗೌಡ, ಕೆ,
ಕೋಲಾರಿನ ಸುತ್ತಲಿನ ದೇವಾಲಯಗಳು,ಕೋಲಾರ ಪತ್ರಿಕೆ ಪ್ರಕಾಶನ,ಕೋಲಾರ–೧೯೮೨

೩೭. ಬಸವರಾಜ ಕಲ್ಗುಡಿ., ಮಹಾಸತಿ ಆಚರಣೆ ಒಂದು ಅಧ್ಯಯನ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು, ೧೯೮೫

೩೮. ಬಸವಾರಾಧ್ಯ.ಎನ್., ಹಳಗನ್ನಡ ಶಬ್ದಾರ್ಥಕೋಶ,ಡಿ.ವಿ.ಕೆಮೂರ್ತಿ, ಪ್ರಕಾಶಕರು ಮೈಸೂರು, ೨೦೦೫

೩೯. ಬೆನಗಲ್ ರಾಮರಾವ್., ಪಾನ್ಯಂ ಸುಂದರಶಾಸ್ತ್ರಿ, ಪುರಾಣನಾಮ ಚೂಡಾಮಣಿ ಪ್ರಸಾರಾಂಗ,ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭

೪೦. ಭಟ್ಸೂರಿ.ಕೆ.ಜಿ.(ಸಂ) ಶಾಸನ ಅಧ್ಯಯನ,ಕನ್ನಡ ವಿಶ್ವವಿದ್ಯಾಲಯ,ಹಂಪಿ, ೨೦೦೬

೪೧. ರಮೇಶ್.ಕೆ.ವಿ. ಕರ್ನಾಟಕ ಶಾಸನ ಸಮೀಕ್ಷೆ,ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು

೪೨. ಡಾ.ಲಕ್ಷ್ಮಿದೇವಿ.ಎಲ್.ಅವಿಭಜಿತ ಕೋಲಾರ ಜಿಲ್ಲೆಯ ಐತಿಹ್ಯಗಳು,ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ೨೦೧೧

೪೩. ಪ್ರೊ.ವೆಂಕಟಾಚಲಶಾಸ್ತ್ರಿ. ಟಿ.ವಿ. ಪಂಪ ಸಂಪುಟ, ವಿಕ್ರಮಾರ್ಜುನ ವಿಜಯಂ,ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೪೪. ಶೇಷನವರತ್ನ, ಮನುಸ್ಮೃತಿ (ಅನು)ಸಮಾಜ ಪುಸ್ತಕಾಲಯ, ಶಿವಾಜಿಬೀದಿ, ಧಾರವಾಡ, ೧೯೯೮

೪೫. ಡಾ.ಶೇಷಶಾಸ್ತ್ರಿ.ಆರ್., ಕರ್ನಾಟಕದ ವೀರಗಲ್ಲುಗಳು,ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೮೨

೪೬. ಶಿವಾನಂದ ರಾವ್. ಬಿ.ಪಿ.,ಭಾರತದ ಪ್ರಾಚೀನ ವಿದ್ಯಾಪೀಠಗಳು, ಕನ್ನಡ ಸಾಹಿತ್ಯ ಪರಿಷತ್ತು, ೨೦೦೫

೪೭. ಡಾ.ಶೇಷಶಾಸ್ತ್ರಿ.ಆರ್, ಶಾಸನ ಪರಿಚಯ ಬೆಂಗಳೂರು ವಿಶ್ವವಿದ್ಯಾಲಯ,ಬೆಂಗಳೂರು

೪೮. ಷೇಕ್ ಆಲಿ.ಬಿ., ಕರ್ನಾಟಕ ಚರಿತ್ರೆ(ಸಂ) ಕರ್ನಾಟಕ ಉದಯ ಆದಿ ಕದಂಬ ಗಂಗ ರಾಜ್ಯಗಳು

೪೯. ಸುಂದರರಾವ್.ಬ.ನ, ಕೋಲಾರ ಜಿಲ್ಲೆಯ ದರ್ಶನ, ಬೆಂಗಳೂರು

೫೦. ಡಾ.ಸಾಲೆತ್ತೂರ್.ಬಿ.ಎ. ಕನ್ನಡ ನಾಡಿನ ಚರಿತ್ರೆಯ ಭಾಗ-೧ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ, ಬೆಂಗಳೂರು

೫೧. ಡಾ.ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಕರ್ನಾಟಕ ಮಿಥಿಕ್ ಸೊಸೈಟಿ ಬೆಂಗಳೂರು

೫೨. ಡಾ.ಹಿರೇಮಠ.ಎಸ್.ಎಂ.,ಶಾಸನ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ,ಗದಗ

ಅನುಬಂಧ – ೩

ಇಂಗ್ಲಿಷ್ ಪುಸ್ತಕಗಳು

1. Dikshit.G.S. — **Local Self Government in Mediaeval Karnataka** Karnataka University Dharwad, 2001
2. Krishnappa.K.G (ed) Dr.J.Sundaram — **Uttankita Sanskrit Vidyaranya Epigraphs** Uttankita Vidyaranya Trust, Mysore, 2006
3. Ramesh.K.V. — **Inscriptions of the Western** Gangas,ICHR,Agam Prakshan Delhi, 1984

ಶಾಸನ ಸಂಪುಟಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೪, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ತಮಿಳುನಾಡಿನ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ಎಪಿಗ್ರಾಪೀಯಾ ಕರ್ನಾಟಿಕಾ, ಸಂಪುಟ–೧೦, ಬಿ.ಎಲ್.ರೈಸ್

೪. ಎಫಿಗ್ರಾಫಿಯಾ ಕರ್ನಾಟಿಕಾ, ಸಂಪುಟ–೧೦ರ ಪರಿಷ್ಕೃತ

೫. ಎಫಿಗ್ರಾಫಿಯಾ ಇಂಡಿಕಾ

೬. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್

೭. ಮೈಸೂರು ಆರ್ಕಿಯಾಲೋಜಿಕಲ್ ರಿಪೋರ್ಟ್ಸ್

ಅಭಿನಂದನಾ ಗ್ರಂಥಗಳು

೧. ಗುಣಮಧುರ : (ಡಾ.ದೇವರಕೊಂಡಾರೆಡ್ಡಿ ಅಭಿನಂದನಾ ಗ್ರಂಥ) ಪ್ರಸಂ. – ಡಾ.ಕೆ.ಆರ್.ಗಣೇಶ್, ೨೦೧೦

ನಿಘಂಟುಗಳು

೧. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೫

೨. ಕನ್ನಡ ನಿಘಂಟು, ಸಂ–೧ರಿಂದ೪,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೧

ನಿಯತಕಾಲಿಕೆಗಳು (ಲೇಖನಗಳು)

೧. ಮಾನವಿಕ ಕರ್ನಾಟಕ : ಸಂಪುಟ–೪, ಸಂಚಿಕೆ–೨, ಶಾಸನಗಳ ಮೊರಸುನಾಡು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

ಇತಿಹಾಸ ದರ್ಶನ – ಸಂಪುಟಗಳು

೧. ದೇವರಕೊಂಡಾರೆಡ್ಡಿ : ದೊಡ್ಡ ಬೇಗೂರಿನ ನಾಗರತ್ತನ ಶಾಸನ, ಸಂ–೩, ಪು.ಸಂ.೧೫೮,೧೫೯, (೧೯೮೮)

೨. ವೆಂಕಟೇಶಮೂರ್ತಿ ಆರ್. : ಶಾಸನಗಳ ಹಿನ್ನೆಲೆಯಲ್ಲಿ ಕೋಲಾರದ ಪಿಡಾರಿಯರ ದೇವಾಲಯಗಳು, ಸಂ–೬, ಪು.ಸಂ.೩೯–೪೨ (೧೯೯೧)

೩. ಕೃಷ್ಣಮೂರ್ತಿ.ಪಿ.ವಿ. : ಸೀತಿ ಬೆಟ್ಟದ ಭೂಸ್ಥಿತಿ ಮತ್ತು ಶಾಸನಗಳ ಹಿನ್ನೆಲೆಯಲ್ಲಿ ಒಂದು ಅಧ್ಯಯನ, ಸಂ೦೮, ಪು.ಸಂ.೧೩೫–೧೩೮ (೧೯೯೩)

೪. ಡಾ.ಕೃಷ್ಣಮೂರ್ತಿ ಪಿ.ವಿ. : ಕೋಳಾಲನಾಡು ಒಂದು ಚಾರಿತ್ರಿಕ ಪರಿಶೀಲನೆ, ಸಂ–೧೦, ಪು.ಸಂ.೧೫೦–೧೫೬, (೧೯೯೫)

೫. ಡಾ.ಕೃಷ್ಣಮೂರ್ತಿ.ಪಿ.ವಿ. : ಕೈವಾರನಾಡು – ಶಾಸನಗಳ ಹಿನ್ನೆಲೆಯಲ್ಲಿ ಒಂದು ಅಧ್ಯಯನ, ಸಂ–೧೧ ಪು.ಸಂ.೨೦೭–೨೧೨, (೧೯೯೬)

೬. ಡಾ.ಕೃಷ್ಣಮೂರ್ತಿ. ಪಿ.ವಿ. : ಪುಲಿನಾಡು ಶಾಸನಗಳ ಹಿನ್ನೆಲೆಯಲ್ಲಿ ಅಧ್ಯಯನ, ಸಂ–೧೪, ಪು.ಸಂ.೨೧೩–೨೧೭ (೧೯೯೯)

೭. ಡಾ.ಕೃಷ್ಣಮೂರ್ತಿ.ಪಿ.ವಿ. : ಮುಮ್ಮಡಿ ವೀರಬಲ್ಲಾಳನ ಕುಂದಾಣಿ ರಾಜ್ಯದ ನಾಡುಗಳು, ಸಂ–೧೫, ಪು.ಸಂ.೧೯೨–೧೯೬, (೨೦೦೦)

೮. ಡಾ.ಕೃಷ್ಣಮೂರ್ತಿ.ಪಿ.ವಿ. : ಹೊಯ್ಸಳರ ಮಹಾಮಂಡಳೇಶ್ವರ ಪೂರ್ವಾದಿರಾಯರು, ಸಂ.೧೬, ಪು.ಸಂ.೨೩೮–೨೪೨, (೨೦೦೧)

೯. ನರಸಿಂಹನ್ ಕೆ.ಆರ್. : ನಂಬಿಹಳ್ಳಿಯ ವೀರ ಸಮರಶಿಲ್ಪ, ಸಂ-೧೮, ಪು.ಸಂ.೫೫-೫೭, (೨೦೦೩)

೧೦.ನರಸಿಂಹನ್ ಕೆ.ಆರ್ : ದುಗ್ಗಸಂದ್ರದ ಅಪ್ರಕಟಿತ ಶಾಸನಗಳು, ಸಂ-೧೯, ಪು.ಸಂ.೫೪-೫೬, (೨೦೦೪)

೧೧.ಸುಂ.ಕಂ.ಗೋವರ್ಧನ : ತೇಕಲ್ -ವರದರಾಜ ಸ್ವಾಮಿ ದೇವಾಲಯದ ಶಾಸನಗಳು, ಸಂ-೨೧, ಪು.ಸಂ.೧೩೦-೧೩೬ (೨೦೦೬)

೧೨ ಸುಂ.ಕಂ.ಗೋವರ್ಧನ : ತೇಕಲ್ ನಾಡು - ಸಂ-೨೨, ಪು.ಸಂ.೧೮೮-೧೯೪ (೨೦೦೭)

೧೩.ಕೃಷ್ಣಮೂರ್ತಿ.ಪಿ.ವಿ. : ಇಳವಂಜಿನಾಡು ಮತ್ತು ಇಳವಂಜಿರಾಯರು, ಸಂ-೨೨, ಪು.ಸಂ.೧೮೨-೧೮೭, (೨೦೦೭)

೧೪.ವೇಮಗಲ್ ಮೂರ್ತಿ : ಸೀತಿಬೆಟ್ಟದ ಭೈರವ ದೇವರಿಗೆ ಸಂದ ಶಾಸನೋಕ್ತ ಗ್ರಾಮದಾನದ ಊರುಗಳು - ಒಂದು ಪರಿಶೀಲನೆ, ಸಂ-೨೪, ಪು.ಸಂ.೮೧-೮೫ (೨೦೦೯)

ಪಿಹೆಚ್.ಡಿ. ಮಹಾಪ್ರಬಂಧಗಳು

೧. ಭಾರತೀ ಬಿ.ಆರ್. : ರಾಷ್ಟ್ರಕೂಟರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨. ಲಲಿತಾಂಬ : ಅರಸೀಕೆರೆ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩. ಎಂ.ಎಸ್.ನರೇಗಲ್ಲ : ಉತ್ತರ ಗದಗ ಜಿಲ್ಲೆಯ ಶಾಸನಗಳು - ಒಂದು ಅಧ್ಯಯನ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಆಧುನಿಕ ಕೋಲಾರ ಜಿಲ್ಲೆಯ ನಕ್ಷೆ

ಮತ್ತು

ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು


ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಶಾಸನಗಳು

ದೊರಕಿರುವಂತಹ ಸ್ಥಳಗಳು


ಕೋಲಾರ ಜಿಲ್ಲೆ




ಕೋಲಾರ ತಾಲ್ಲೂಕು


ಕ್ಯಾಲನೂರು
ಸೀತಿ ಬೆಟ್ಟ
ಕರಿತಿಮ್ಮನಹಳ್ಳಿ
ಪುರಹಳ್ಳಿ
ವೇಮಗಲ್ಲು
ಹೋಳೂರು
ಸುಕ್ಕನಹಳ್ಳಿ
ವಿಭೂತಿಪುರ
ನರಸಾಪುರ
ಕೆಂದಟ್ಟಿ ಬೆಟ್ಟ
ಕೋಲಾರ
ಬೆಳ್ಳೂರು
ಮಡಿವಾಳ
ಕಲ್ಲಂದೂರು
ಹರಳುಕುಂಟೆ
ವಕ್ಕಲೇರಿ

ಮಾಲೂರು ತಾಲ್ಲೂಕು



ಶಿವಾರ
ಮಡಿವಾಳ
ಮಾಲೂರು
ಅರಸನಹಳ್ಳಿ
ಉಳ್ಳೇರಹಳ್ಳಿ
ಮೂಕರಹಳ್ಳಿ
ತೇಕಲ್
ಬನಹಳ್ಳಿ
ಕೊಂಡರಾಜನಹಳ್ಳಿ
ಲಕ್ಕೂರು
ಹುಳದೇನಹಳ್ಳಿ
ರಾಜೇನಹಳ್ಳಿ
ಮಾಸ್ತಿ

ಬಂಗಾರಪೇಟೆ ತಾಲ್ಲೂಕು




ಮುಗಾಳಬೆಲೆ
ಕಾರುಬೆಲೆ
ಮರಗಲ್ಲು
ಮಾದಿಗರಹಳ್ಳಿ
ತಲ್ಲಪಲ್ಲಿ
ಮಡಿವಾಳ
ಕಾರುಹಳ್ಳಿ
ಬೇತಮಂಗಲ
ಯಲ್ಲಬುರುಗೆ
ಬಂಗಾರಪೇಟೆ
ಕ್ಯಾಸಂಬಳ್ಳಿ
ಬಳುವನಹಳ್ಳಿ
ಕಸಬೆ
ಬೂದಿಕೋಟೆ
ಕೆ.ಜಿ.ಎಫ್.
ಹುಲಿಕುಂದ

ಮುಳಬಾಗಿಲು ತಾಲ್ಲೂಕು



ಗೊಲ್ಲಿಹಳ್ಳಿ
ನಾಗರ ಕುಂಟೆ
ಹೆಬ್ಬಣಿ
ಬೈರಕೂರ
ತಾವರೆಕೆರೆ
ಮುಡಿಯನೂರು
ಕುತ್ತಾನ್‌ಡಹಳ್ಳಿ
ಕುರುಡುಮಲೆ
ಉತ್ತನೂರು
ನಂಗಲಿ
ರಾಜಗುಂಡ್ಲ ಹಳ್ಳಿ
ವಾಣಿಗನಹಳ್ಳಿ
ತಾತಕಲ್ಲು
ಅಳ್ಳಾಲ ಸಂದ್ರ
ಮುಳುಬಾಗಿಲು
ಕುರುಬರಹಳ್ಳಿ
ಮೇಲಗಾಣಿ
ರಾಮಚಂದ್ರಾಪುರ
ಕಾವತ್ತನ ಹಳ್ಳಿ
ಮೈಲಾಪುರ
ತಾತಿಕಲ್ಲು ಗ್ರಾಮ
ಆವನಿ
ಕೀಳಾಗಾಣಿ
ಬಲ್ಲ
ತಾಯಲೂರು
ಮೋತಕಪಲ್ಲಿ


ಶ್ರೀನಿವಾಸಪುರ ತಾಲ್ಲೂಕು



ಛಾಯಾಚಿತ್ರಗಳು



ಇಳವಂಜಿರಾಯ



ಗಂಗ ಶ್ರೀಪುರುಷನ ಶಾಸನ ಶಿವಾರಪಟ್ಟಣ
ಕೋಲಾರ ತಾಲ್ಲೂಕು, ಕ್ರಿ.ಶ. ೭೦೦








ರಾಜೇಂದ್ರ ಚೋಳ



ತ್ರಿಭುವನ ಕರ್ತಾರ



ವೀರಗಲ್ಲು ಸೀತಿ ಬೆಟ್ಟ



ಕೋಲಾರಮ್ಮ ದೇವಾಲಯದಲ್ಲಿರುವ ಶಾಸನ



ಕೋಲಾರಮ್ಮ ದೇವಾಲಯದಲ್ಲಿರುವ ವೀರಗಲ್ಲು



ಕೋಲಾರಮ್ಮ ದೇವಾಲಯದ ಭಾವಣಿಯಲ್ಲಿರುವ ಶಾಸನ



ಜಿನಶಿಲ್ಪ-ವೀರಗಲ್ಲು, ಅರಾಬಿಕೊತ್ತನೂರು



ಉತ್ಖನನ-ಶಿಲಾಯುಧಗಳು, ಬನಹಳ್ಳಿ
ಕೃಪೆ – ಕುವಳಾಲ – ಕೆ.ಆರ್. ನರಸಿಂಹನ್




ಆವನಿ ಬೆಟ್ಟ



ಆವನಿಯ ಕಂಭ ಶಾಸನ



ನಂಬಿಹಳ್ಳಿಯ 'ವೀರ ಸಮರ ಶಿಲ್ಪ'



ಸಾವಿನಿರ್ಮಿಡಿ, ಕಾರುಬೆಲೆ

ಕೃಪೆ – ಕುವಳಾಲ – ಕೆ.ಆರ್. ನರಸಿಂಹನ್